# ಲೋಹಗಡ

## ಜಗತ್ತಿನ ಅತ್ಯಂತ ದೊಡ್ಡ ಕೋಟೆ

(ಸಿಖ್ ಸಾಮ್ರಾಜ್ಯದ ರಾಜಧಾನಿ)



ಹರ್ಜಿಂದರ್ ಸಿಂಗ್ ದಿಲ್ಗೀರ್

ಗಗನದೀಪ್ ಸಿಂಗ್

ಗುರುವಿಂದರ್ ಸಿಂಗ್

ಅನುವಾದ:

ಡಾ. ಕೆ. ಪುಟ್ಟಸ್ವಾಮಿ

# ಲೋಹಗಡ

## ಜಗತ್ತಿನ ಅತ್ಯಂತ ದೊಡ್ಡ ಕೋಟೆ

(ಸಿಖ್ ಸಾಮ್ರಾಜ್ಯದ ರಾಜಧಾನಿ)

ಇಂಗ್ಲಿಷ್ ಮೂಲ
**ಹರ್ಜಿಂದರ್ ಸಿಂಗ್ ದಿಲ್ಗೀರ್**
**ಗಗನದೀಪ್ ಸಿಂಗ್**
**ಗುರುವಿಂದರ್ ಸಿಂಗ್**

ಕನ್ನಡ ಅನುವಾದ
**ಡಾ. ಕೆ. ಪುಟ್ಟಸ್ವಾಮಿ**

ಪ್ರಕಟಣೆ

**ಅಂತರರಾಷ್ಟ್ರೀಯ ಬಂಜಾರ ರೋಮಾ ಸಂಸ್ಥೆ(ರಿ)**
# 200, 14ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ,
6ನೇ ಸೆಕ್ಟರ್, ಎಚ್.ಎಸ್.ಆರ್. ಬಡಾವಣೆ,
ಬೆಂಗಳೂರು–560 102

***LOHAGARH-Jagattina Atyanta Dodakote***-Kannada translation of ***LOHAGARH-The world's largest Fort,*** authored by Harjinder Singh Dilgeer, Gagandeep Singh and Gurvinder Singh.
Translated into Kannada Language by Dr. K. Puttaswamy.

(C) Haryana Academy of History and Culture, Kurukshetra, Haryana

Year of Publication : 2018

Size : 1/8 Demi
Paper Used: For Inside Text Pages
for Photo gallery

Pages : 241 (xiv+193+34)

Price : Rs. 450/-

**Publisher:**
International Roma Banjara Organisation (R)
# 200, 14th Cross, 5th Main, 6th Sector,
H.S.R. Layout, Bangalore-560 102.
e-mail : banjararomaorg@gmail.com
website : www.banjararoma.com

**Printed at :**
Abhimani

Typeset by Druv S. Narayan

## <u>ಅರ್ಪಣೆ</u>

ತನ್ನ ಔದಾರ್ಯ ಮತ್ತು ತ್ಯಾಗಗಳ ಮೂಲಕ ನಿರಂಕುಶ ಪ್ರಭುತ್ವದ ವಿರುದ್ಧದ ಹೋರಾಟಕ್ಕೆ
ಅಮೂಲ್ಯ ಕಾಣಿಕೆ ಸಲ್ಲಿಸಿದ ಬಂಜಾರ ಸಮುದಾಯದ ಕ್ರಾಂತಿಕಾರಿ ನಾಯಕ,
**ಭಾಯ್ ಲಖಿ ರಾಯ್ ವಂಜಾರ**
ಇವರಿಗೆ

# ಮುನ್ನುಡಿ ಮತ್ತು ಕೃತಜ್ಞತೆಗಳು

(ಮೂಲ ಕೃತಿಗೆ ಬರೆದದ್ದು)

ಬಂದಾ ಸಿಂಗ್ ಬಹದ್ದೂರ್ ಅವರು ಹುತಾತ್ಮರಾಗುವ ಮೂಲಕ ಭಾರತದ ಚರಿತ್ರೆಯನ್ನು ಬದಲಿಸಿದರು. ಸಿಖ್ ಜನಾಂಗದ ಮೊದಲ ಪ್ರಭುತ್ವದ ಸ್ಥಾಪನೆಗೆ ಅವರು ಕಾರಣಕರ್ತರು. ಅಲ್ಲದೆ ಮುಘಲರ ಆಡಳಿತಕ್ಕೆ ಅಂತ್ಯ ಹೇಳಿದ ಗೌರವವೂ ಅವರಿಗೆ ಅರ್ಹವಾಗಿ ಸಲ್ಲುತ್ತದೆ.

ಬಂದಾ ಸಿಂಗ್ ಮಾತ್ರವಲ್ಲ, ಅತ್ಯಂತ ದೊಡ್ಡ ಕೋಟೆಯೆನಿಸಿದ ಲೋಹಗಡವೂ ಸಹ ಇತಿಹಾಸಕಾರರ ಅವಜ್ಞೆಗೆ ಒಳಗಾಗಿದೆ. ಈ ಕೋಟೆಯನ್ನು ಒಂದು ಸಣ್ಣ ರಚನೆಯೆಂದು, ಬಂದಾ ಸಿಂಗ್ ಅದನ್ನು 'ಆಕ್ರಮಿಸಿ'ಕೊಳ್ಳುವ ಪೂರ್ವದಲ್ಲಿಯೂ ಅಸ್ತಿತ್ವದಲ್ಲಿತ್ತೆಂದು ಅವರು ವಿವರಿಸಿದ್ದಾರೆ. ವಾಸ್ತವಾಂಶ ಏನೆಂದರೆ, ಅದು ಸಿಖ್ ಸಮುದಾಯಕ್ಕೆ ಸೇರಿದ್ದು, ಬಂದಾ ಸಿಂಗ್ ಅದನ್ನು ವಶಪಡಿಸಿಕೊಳ್ಳಲಿಲ್ಲ. ಹಾಗೆ ನೋಡಿದರೆ ಈ ಸಿಖ್ ಕೋಟೆಯನ್ನು ತನ್ನ ರಾಜಧಾನಿಯನ್ನಾಗಿ ಆಯ್ಕೆ ಮಾಡಿಕೊಂಡ.

ಮುಘಲರ ಸೇನೆಯು ಒಂದೇ ದಿನದಲ್ಲಿ ಲೋಹಗಡವನ್ನು ವಶಪಡಿಸಿಕೊಂಡಿತೆಂದು ಹೇಳುವ ಮೂಲಕ ಕೆಲವು ಇತಿಹಾಸಕಾರರು 1710ರ ನವೆಂಬರ್–ಡಿಸೆಂಬರ್‌ನಲ್ಲಿ ನಡೆದ ಘಟನೆಗಳನ್ನು ತಪ್ಪಾಗಿ ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆ. ಈ ಕೋಟೆಯನ್ನು 5–6 ವರ್ಷಗಳ ಅವಧಿಯಲ್ಲಿ ಯಾರೊಬ್ಬರೂ ವಶಪಡಿಸಿಕೊಳ್ಳಲು ಸಾಧ್ಯವಾಗದಿರುವ ಸಂಗತಿಯನ್ನು ಈ ಕೃತಿ ರುಜುವಾತುಪಡಿಸುತ್ತದೆ. ಕುತೂಹಲಕಾರಿಯಾದ ಸಂಗತಿಯೆಂದರೆ ಇದು ಗೆಲ್ಲಲು ಅಸಾಧ್ಯವಾದ ಕೋಟೆಯೆಂಬ ಸಂಗತಿಯನ್ನು ಮಹಮ್ಮದ್ ಕಾಸಿಂ ಔರಂಗಾಬಾದಿ ಅಂಗೀಕರಿಸಿದ್ದ.

ಇತಿಹಾಸದ ಒಂದು ಹೆಮ್ಮೆಯ ಸಂಗತಿಯಾಗಬೇಕಿದ್ದ ಲೋಹಗಡ ಕೋಟೆಯು ಇತಿಹಾಸಕಾರರು ಎಸಗಿದ ಅವಜ್ಞೆಯಿಂದಾಗಿ ದಾಖಲಾಗದೆ ಮುಚ್ಚಿಹೋಯಿತು. ಪ್ರಾಯಶಃ ಮುಘಲರ ಸೇನೆಯ ಮಹಾನ್‌ಶಕ್ತಿಯನ್ನು ಅಲ್ಲಗಳೆದಂತಾಗುತ್ತದೆಂಬ ಕಾರಣದಿಂದ ಕೆಲವು ಇತಿಹಾಸಕಾರರು ಈ ಕೋಟೆಯ ಇಂದಿನ ವೈಭವವನ್ನು ನಿರೂಪಿಸದಿರುವುದಕ್ಕೆ ಕಾರಣವಿರಬಹುದು.

ಬಂದಾ ಸಿಂಗ್ ಬಹದ್ದೂರ್ ಅವರ 300ನೇ ಹುತಾತ್ಮ ದಿನವನ್ನು ಆಚರಿಸಲು ಕಳೆದ ವರ್ಷ ಹರಿಯಾಣ ಸರ್ಕಾರವು ರಾಜ್ಯ ಮಟ್ಟದ ಸಮಾರಂಭವನ್ನು ನಡೆಸಿದಾಗ ಲೋಹಗಡ ಕೋಟೆ ಬೆಳಕಿಗೆ ಬಂತು. ಯಮುನಾ ನಗರದ ಡಿಡಿಪಿಒ ಗಗನದೀಪ್ ಸಿಂಗ್ ಅವರು ಲೋಹಗಡ ಕೋಟೆಗೆ ಸಂಬಂಧಿಸಿದ ಸೂಕ್ತ ಸಾಕ್ಷ್ಯಗಳನ್ನು ಕಲೆ ಹಾಕಿದರು. ಆ ಸಾಕ್ಷ್ಯವು ಲೋಹಗಡ

ಕೋಟೆಯು ಹರಿಯಾಣ ಮತ್ತು ಹಿಮಾಚಲ ಪ್ರದೇಶದ ಗಡಿಯಲ್ಲಿರುವ ಒಂದು ಸಣ್ಣ ಪರ್ವತದಲ್ಲಿ ಇರುವ ಬಗ್ಗೆ ಸೂಚನೆ ನೀಡಿತು. ಸಿಖ್ ಜನಾಂಗದ ಬಂಡಾಯವನ್ನು ಹತ್ತಿಕ್ಕಲು ಮುಘಲರ ಸೇನೆಯು ಹದಿನೆಂಟನೇ ಶತಮಾನದ ಆರಂಭದಲ್ಲಿ ಈ ಕೋಟೆಯ ಮೇಲೆ ದಾಳಿ ನಡೆಸಿತು. ಇಲ್ಲಿ ಮೂರು ವರ್ಷಗಳಿಗೂ ಹೆಚ್ಚು ಕಾಲ ಯುದ್ಧ ನಡೆಯಿತು. ಅತ್ಯಂತ ಬಲಶಾಲಿಯೆನಿಸಿದ ಮುಘಲರ ಸೇನೆಯನ್ನು ಒಂದು ಸಣ್ಣ ಕೋಟೆ ಅಷ್ಟು ದೀರ್ಘಕಾಲ ತಡೆ ಹಿಡಿದು ಸಹಿಸಲು ಹೇಗೆ ಸಾಧ್ಯವಾಯಿತೆಂಬ ಬಗ್ಗೆ ಪ್ರಶ್ನೆ ಮೂಡಬಹುದು. ಈ ಬಗ್ಗೆ ವಾಸ್ತವಾಂಶಗಳನ್ನು ತಿಳಿಯಲು, ಈಗ ಲಭ್ಯವಿರುವ ಸಾಹಿತ್ಯದಲ್ಲಿ ದೊರೆಯುವ ಮಾಹಿತಿಗಿಂತಲೂ ಕೋಟೆಯ ವಿಸ್ತಾರ ದೊಡ್ಡದಿರಬಹುದೆಂಬ ದೃಷ್ಟಿಯಿಂದ ಆ ಪ್ರದೇಶದ ಅರಣ್ಯವನ್ನು ತೀವ್ರವಾಗಿ ಸಮೀಕ್ಷೆ ಮಾಡಲಾಯಿತು. ಯಮುನಾ ನಗರದ ಜಿಲ್ಲಾಧಿಕಾರಿಗಳು ಮಾಡಿದ ಮನವಿಯನ್ನು ಅಂಗೀಕರಿಸಿದ ಹಿಮಾಚಲ ಪ್ರದೇಶದ ಉನ್ನತ ಆಡಳಿತ ವಿಭಾಗವು ಲೋಹಗಡ ಕೋಟೆಯ ಸುತ್ತಲಿನ ಅರಣ್ಯವನ್ನು ಅನ್ವೇಷಿಸಲು ಒಬ್ಬ ಅರಣ್ಯಾಧಿಕಾರಿಯನ್ನು ನೇಮಿಸಿ ನೆರವು ನೀಡಿತು. ಆರಂಭದಲ್ಲಿ ಈ ಕೋಟೆಯು 500–600 ಎಕರೆ ಪ್ರದೇಶದಲ್ಲಿ ಹರಡಿರಬಹುದೆಂದು ಭಾವಿಸಿದ್ದೆವು. ಆದರೆ ಅಚ್ಚರಿಯ ವಿಷಯವೆಂದರೆ, ಈ ಕೋಟೆಯ ಅವಶೇಷಗಳು ಅನೇಕ ಬೆಟ್ಟಗಳಲ್ಲಿ 7000 ಎಕರೆ ಪ್ರದೇಶದಲ್ಲಿ ದೊರೆತವು. ಈ ಕೃತಿಯ ಸಹಲೇಖಕರಲ್ಲೊಬ್ಬರಾದ ಎಸ್. ಗುರುವಿಂದರ್ ಸಿಂಗ್ ಕರ್ನಲ್ ಅವರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಸ್ಥಳೀಯ ಸಿಖ್ ಸಂಗಟ್ ಮುದುವಟ್ಟಿನ ಗಮನಕ್ಕೆ ಈ ಅಂಶಗಳನ್ನು ತರಲಾಯಿತು. ಎಸ್. ಜರ್ನೈಯಿಲ್ ಸಿಂಗ್ ಹೆಸರಿನ ಕ್ರಿಯಾಶೀಲ ಸಿಖ್ ಕಾರ್ಯಕರ್ತರೊಬ್ಬರು ಕೋಟೆಯ ಪ್ರದೇಶದಲ್ಲಿ ನಡೆಯುತ್ತಿದ್ದ ಎಲ್ಲ ಸಂಶೋಧನಾ ಚಟುವಟಿಕೆಗಳಲ್ಲಿ ಎಸ್. ಗಗನ್‌ದೀಪ್ ಸಿಂಗ್ ಅವರ ಜೊತೆ ತೀವ್ರವಾಗಿ ತೊಡಗಿಸಿಕೊಂಡು, ಕೋಟೆಯ ಅನೇಕ ಸಾಕ್ಷ್ಯಗಳನ್ನು ಸಂಗ್ರಹಿಸಿದರು. ಕೋಟೆಯ ಅವಶೇಷಗಳು ವ್ಯಾಪಕ ಪ್ರದೇಶದಲ್ಲಿ ಹರಡಿರುವ ಸಂಗತಿಗಳ ಬಗ್ಗೆ ಒಮ್ಮತ ವ್ಯಕ್ತಪಡಿಸಿದ ವೃತ್ತಿಪರ ಐತಿಹಾಸಿಕ ಸಂಶೋಧನ ಸಂಸ್ಥೆಗಳೊಡನೆ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಈ ಟ್ರಸ್ಟ್ ಪರಂಪರೆಯ ಪುನಶ್ಚೇತನ ಕಾರ್ಯದಲ್ಲಿ ತೊಡಗಿರುವ ದೆಹಲಿಯ ದಿ ಇಂಡಿಯನ್ ಟ್ರಸ್ಟ್ ಫಾರ್ ರೂರಲ್ ಹೆರಿಟೇಜ್ ಅಂಡ್ ಡೆವಲಪ್‌ಮೆಂಟ್ (ITRHD) ಸಂಸ್ಥೆಯ ಜೊತೆ ಕೈಜೋಡಿಸಿತು.

ದೆಹಲಿಯ ಪರಂಪರೆಯ ಪುನಶ್ಚೇತನ ಸಂಸ್ಥೆಯು (ಐಟಿಆರ್‌ಎಚ್‌ಡಿ) ಕೈಗೊಂಡ ಸಂಶೋಧನೆಯು ಲೋಹಗಡ ಕೋಟೆಯಲ್ಲಿ ಕೋಟೆಯ ಗೋಡೆಗಳು, ಬುರುಜುಗಳು, ಕೊಠಡಿಗಳು, ಸಿಪಾಯಿಗಳ ಬ್ಯಾರಕ್ಕುಗಳು, ಕಾವಲು ಗೋಪುರಗಳು, ಧಾನ್ಯಗಳನ್ನು ಸಂಗ್ರಹಿಸಿಡಲು ಮಣ್ಣಿನ ವಾಡೆಗಳನ್ನು ತಯಾರಿಸಲು ಅಗತ್ಯವಾದ ಅರೆಯುವ ಕಲ್ಲುಗಳು ಇರುವುದನ್ನು ನಿರೂಪಿಸಿತು. ಅನೇಕ ಶಾಸನಗಳು ಸಹ ದೊರೆತವು. "ಕೋಟೆಯ ಗೋಡೆಗಳನ್ನು ಕೆತ್ತಿದ ಕಲ್ಲು ಮತ್ತು ಸುಣ್ಣಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ಕಲ್ಲುಗಳನ್ನು ಬೆಸೆಯಲು ಇಟ್ಟಿಗೆ ಪುಡಿಯ ಜೊತೆ ಬೆರೆಸಿದ ಗಾರೆಗಚ್ಚನ್ನು ಬಳಸಲಾಗಿದೆ. ಕೋಟೆಯ ಒಳಗಿನ ಇಟ್ಟಿಗೆ ಗೋಡೆಗಳನ್ನು ಐದು ವಿವಿಧ ಗಾತ್ರದಲ್ಲಿ ನಿರ್ಮಿಸಿದೆ" ಎಂದು ಐಟಿಎಚ್‌ಆರ್‌ಡಿ ಅಧ್ಯಕ್ಷ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಎಸ್.ಕೆ. ಮಿಶ್ರ ಅಭಿಪ್ರಾಯ ಪಟ್ಟಿದ್ದಾರೆ. 1710ರಲ್ಲಿ ಬಾಬಾ ಬಂದಾ ಸಿಂಗ್ ಬಹದ್ದೂರ್ ಲೋಹಗಡವನ್ನು ಖಲ್ಸಾ ರಾಜಧಾನಿಯೆಂದು ಘೋಷಿಸಿದ್ದರು. ಅದು ತನ್ನ ಕೇಂದ್ರ ಭಾಗದಿಂದ ಸುತ್ತಲೂ 7000 ಎಕರೆಗೆ ವ್ಯಾಪಿಸಿದ್ದು ಜಗತ್ತಿನ ಅತ್ಯಂತ ದೊಡ್ಡ ಕೋಟೆಗಳ ಪಟ್ಟಿಗೆ ಸೇರಿವೆ.

ಲೋಹಗಡದ ಹಿನ್ನೆಲೆಯಲ್ಲಿ ಮುಚ್ಚಿಟ್ಟಿರುವ ಸತ್ಯಗಳನ್ನು ಬಿಚ್ಚಿಡಲು ನಾವು (ಗುರುವಿಂದರ್

ಸಿಂಗ್, ಗಗನ್‌ದೀಪ್ ಸಿಂಗ್ ಮತ್ತು ನಾನು) ಹಂಬಲ ವ್ಯಕ್ತಪಡಿಸಿದಾಗ ನಮಗೆ ಬೆಂಬಲ ನೀಡಲು ತಕ್ಷಣವೇ ಡಾ. ಹರ್ಜಿಂದರ್ ಸಿಂಗ್ ದಿಲ್ಗೀರ್ ಅವರು ಮುಂದೆ ಬಂದರು. ತಮ್ಮಲ್ಲಿದ್ದ ಎಲ್ಲ ವಸ್ತುಗಳನ್ನು ನೀಡಿ ಈ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸೂಚಿಸಿದರು. ಸತ್ಯವನ್ನು ಬೆಳಕಿಗೆ ತರುವ ಕಾರ್ಯದಲ್ಲಿ ನಮ್ಮ ಕರ್ತವ್ಯವನ್ನು ನೆರವೇರಿಸುವುದಕ್ಕೆ ನಮಗೆ ಸಂತಸವಾಗಿದೆ.

ಸೈನ್ಯದ ನಿವೃತ್ತ ಅಧಿಕಾರಿ ಎಸ್. ಜರ್ನೈಯಿಲ್ ಸಿಂಗ್ ಅವರು ನೂರಾರು ಬೆಟ್ಟಗಳಿಗೆ ಭೇಟಿ ನೀಡುವ ಮೂಲಕ ಲೋಹಗಡದ ಕೋಟೆಯ ವಲಯದಲ್ಲಿ ಹಲವಾರು ತಿಂಗಳ ಕಾಲ ಸಂಶೋಧನೆ ನಡೆಸಿದ್ದಾರೆ. ಲೋಹಗಡ ಕೋಟೆಯ ರಚನೆ ಮತ್ತು ಭೌಗೋಳಿಕ ಪ್ರದೇಶಕ್ಕೆ ಸಂಬಂಧಿಸಿದ ಎಲ್ಲ ಸಂಶೋಧನೆಯನ್ನು ಗಗನದೀಪ್‌ರವರು ಮಾಡಿದ್ದಾರೆ. ಅದೇ ರೀತಿ ಗಗನ್‌ದೀಪ್ ಅವರು ಲೋಹಗಡದ ಯುದ್ಧಗಳಿಗೆ ಸಂಬಂಧಿಸಿದ ಬಹುತೇಕ ಸಾಕ್ಷ್ಯವನ್ನು ಹಾಗೂ ವನ್‌ಜಾರ (ಬಂಜಾರರು)ರ, ಸಿಕ್ಲಿಗಾರರ, ಸಾಧುರ ಅವರ ಹಿನ್ನೆಲೆ, ಪೀರ್ ಬುದ್ದು ಷಾ ಅವರ ಜೀವನ ಇತ್ಯಾದಿಗಳ ಬಗ್ಗೆ ಬರೆದಿದ್ದಾರೆ. ಈ ಕೃತಿಯಲ್ಲಿ ಮುದ್ರಿಸಿರುವ ಎಲ್ಲ ಚಿತ್ರಗಳನ್ನು ಗಗನದೀಪ್ ಸಿಂಗ್, ಗುರುವಿಂದರ್ ಸಿಂಗ್ ಮತ್ತು ಎಸ್. ಜರ್ನೈಯಿಲ್ ಸಿಂಗ್ ತೆಗೆದಿದ್ದಾರೆ.

ಲೋಹಗಡ–ಖಲ್ಸಾ ರಾಜಧಾನಿಗೆ ಸಂಬಂಧಿಸಿದ ವಾಸ್ತವಾಂಶಗಳನ್ನು ಬೆಳಕಿಗೆ ತರಲು ಅಮೂಲ್ಯ ನೆರವು / ಕಾಣಿಕೆ ನೀಡಿದ ಬಾಬಾ ಸುಖ ಸಿಂಗ್, ದಿಲ್ಜೀತ್ ಸಿಂಗ್, ಪ್ರೀತಿ ಪಾಲ್ ಸಿಂಗ್, ಹರ್ಜಿಂದರ್ ಸಿಂಗ್, ಗುರುಪ್ರೀತ್ ಸಿಂಗ್, ಹರ್ಜಿತ್ ಸಿಂಗ್, ನರಿಂದರ್ ಸಿಂಗ್, ಶಿವಶಂಕರ್ ಪಹ್ವಾ, ಹರದೇವ್ ಸಿಂಗ್, ಚರಣ್‌ಸಿಂಗ್, ಅರ್ವಿಂದರ್ ಪಾಲ್ ಸಿಂಗ್, ಜೆ.ಎಸ್. ಮೀರಾಪುರ್, ರಿಶಿಪಾಲ್ ಸಿಂಗ್, ಸುಖವಿಂದರ್ ಸಿಂಗ್, ಗೋವಿಂದ್ ಸಿಂಗ್, ಜೋಗಿಂದರ್ ಸಿಂಗ್, ಸತೀಂದರ್ ಸಿಂಗ್ ಇವರಿಗೆ ವಿಶೇಷ ನೆನಕೆಗಳು ಸಲ್ಲುತ್ತವೆ. ಇವರೆಲ್ಲರೂ ಯಮುನಾ ನಗರದ ಲೋಹಗಡ ಟ್ರಸ್ಟ್‌ನ ಸಹವರ್ತಿಗಳು. ಹರಿಯಾಣ ಸರ್ಕಾರದ ಪೊಲೀಸ್ ಅಧಿಕಾರಿ ಆದರ್ಶ ದೀಪ್ ಸಿಂಗ್ ಅವರು ಲೋಹಗಡ ಕೋಟೆಯ ಸಮೀಕ್ಷೆಯಲ್ಲಿ ಅಗತ್ಯ ನೆರವು ನೀಡಿದ್ದಾರೆ. ಲೋಹಗಡಕ್ಕೆ ಸಂಬಂಧಿಸಿದ ಮುಖ್ಯ ಮಾಹಿತಿಗಳನ್ನು ಕ್ರೋಢೀಕರಿಸಲು ಕೋಟೆಗೆ ಸಂಬಂಧಿಸಿದ ಯಮುನಾ ನಗರ ಆಡಳಿತಕ್ಕೆ ಸೇರಿದ ಎಲ್ಲ ಸರಪಂಚರು, ಗ್ರಾಮ ಸಚಿವರು, ಪಟ್ವಾರಿಗಳು ಮತ್ತು ಡಿಡಿಪಿಓ ಕಚೇರಿಯ ಸಿಬ್ಬಂದಿಗೆ ಕೃತಜ್ಞರಾಗಿದ್ದೇವೆ. ಈ ಅಧ್ಯಯನವನ್ನು ಪ್ರಕಟಿಸಿದ ಹರಿಯಾಣ ಅಕಾಡೆಮಿ ಆಫ್ ಹಿಸ್ಟರಿ ಅಂಡ್ ಕಲ್ಚರ್, ಕುರುಕ್ಷೇತ್ರ ಈ ಸಂಸ್ಥೆಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಸಂಶೋಧನೆಯ ಕೃತಿಗೆ ಹಾರೈಕೆ ಮಾತುಗಳನ್ನು ಬರೆದ ಗೌರವಾನ್ವಿತ ಹರಿಯಾಣ ರಾಜ್ಯದ ಮುಖ್ಯಮಂತ್ರಿ ಶ್ರೀ ಮನೋಹರ್ ಲಾಲ್ ಜಿ ಅವರಿಗೆ ವಿಶ್ವಾಸದ ನೆನಕೆಗಳು.

**ಹರ್ಜಿಂದರ್ ಸಿಂಗ್ ದಿಲ್ಗೀರ್**
**ಗುರುವಿಂದರ್ ಸಿಂಗ್** (ಅಧ್ಯಕ್ಷರು, ಲೋಹಗಡ ಟ್ರಸ್ಟ್)

# ಮುನ್ನುಡಿ

(ಮೂಲ ಕೃತಿಯಿಂದ)

ಈಗಿನ ಹರಿಯಾಣ ರಾಜ್ಯದ ಯಮುನಾ ನಗರ ಜಿಲ್ಲೆಯಲ್ಲಿರುವ ಲೋಹಗಡ–ಖಲ್ಸಾ ರಾಜಧಾನಿಯು ಸಿಖ್ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಸ್ಥಳಗಳಲ್ಲೊಂದಾಗಿದೆ. ಸಿಖ್ ಸಾರ್ವಭೌಮತ್ವಕ್ಕಾಗಿ ಇಲ್ಲಿಂದಲೇ 1710ರಲ್ಲಿ ಸಿಖ್ ಸೈನ್ಯಾಧಿಕಾರಿ ಬಾಬಾ ಬಂದ ಸಿಂಗ್ ಬಹದ್ದೂರ್ ಹೋರಾಟ ಆರಂಭಿಸಿದ್ದು. ಇತಿಹಾಸ ಸಂಶೋಧನೆಯಲ್ಲಿ ಬಳಸಿಕೊಳ್ಳಲಾದ ಹೊಸ ವಿಧಾನಗಳು ತೆರೆದಿಟ್ಟ ಸಾಕ್ಷ್ಯಗಳು, ಪುರಾವೆಗಳು, ಅಂಶಗಳು ಮತ್ತು ಅವುಗಳ ವ್ಯಾಖ್ಯಾನಗಳು ಖಲ್ಸಾ ರಾಜಧಾನಿಯಾದ ಲೋಹಗಡ ಕೋಟೆ ಮತ್ತು ಸಿಕ್ಖರ ಧರ್ಮದ ನವ ಇತಿಹಾಸವೊಂದನ್ನು ಸೃಷ್ಟಿಸಿವೆ. ಇವೆಲ್ಲವೂ ಸಿಕ್ಖರ ಇತಿಹಾಸ ಮಾತ್ರವೇ ಅಲ್ಲ ಜಗತ್ತಿನ ಚರಿತ್ರೆಯ ಬಗ್ಗೆ ಬಲವಾದ ಹೊಸ ಆಕರಗಳನ್ನು ಒದಗಿಸುತ್ತವೆ. ಸಿಕ್ಖರ ಇತಿಹಾಸವನ್ನು ಪರಿಶೀಲನೆ ಮಾಡಿದ ನಂತರ, ವಿವಿಧ ಕಾಲಘಟ್ಟಗಳಲ್ಲಿ ಸಿಖ್ ಗುರುಗಳು ಕಟ್ಟಿಸಿದ ಮೂರು ಲೋಹಗಡ ಕೋಟೆಗಳು ಕಾಣಸಿಗುತ್ತವೆ. ಲೋಹಗಡದಲ್ಲಿ ಅಂಥದೊಂದು ಬೃಹತ್ ಕೋಟೆ ನಿರ್ಮಾಣ ಮಾಡಲು ಸಿಖ್ ಗುರುಗಳ ನೇತೃತ್ವದಲ್ಲಿ ಸುಮಾರು 70–80 ವರ್ಷಗಳು ಹಿಡಿದಿವೆ. ಲೋಹಗಡದ ತನ್ನ ಕೇಂದ್ರದಿಂದ 7000 ಎಕರೆಯಷ್ಟು ವಿಸ್ತರಿಸಿದೆ. ಅಲ್ಲದೆ ಇಂದಿನ ಯಮುನಾನಗರ, ಅಂಬಾಲ ಮತ್ತು ಪಂಚಕುಲ ಜಿಲ್ಲೆಗಳಲ್ಲಿ ಹರಡಿರುವ ಶಿವಾಲಿಕ್ ಪರ್ವತ ಶ್ರೇಣಿಗಳಲ್ಲಿ ಹತ್ತಾರು ಕಿರುಕೋಟೆಗಳನ್ನು ಚೌಕಿಗಳನ್ನು ನಿರ್ಮಿಸಲಾಗಿದೆ. ಮುಘಲರ ಬೃಹತ್ ಸೇನೆಯನ್ನು ಎದುರಿಸಲು ಇಂದ್ರಿ, ಲಡ್ವಾ, ಬಬೈನ್, ಶಹಾಬಾದ್, ಬರಾರ, ಅಂಬಾಲ, ಶಹಜಾದಪುರ, ಜಾಗಧ್ರಿ, ಸಾಧೂರ, ಮುಸ್ತಾಫಾಬಾದ್, ರಾಯ್‌ಪುರ ರಾಣಿ ಮತ್ತು ಪಿಂಜೋರ್‌ನಲ್ಲಿ ಕೋಟೆಗಳನ್ನು ನಿರ್ಮಿಸಲಾಯಿತು. ಇವೆಲ್ಲವನ್ನು ಮಾಡುವ ಉದ್ದೇಶದ ಹಿನ್ನೆಲೆಯು ಸ್ಥಳೀಯರ ಮೇಲೆ ದೌರ್ಜನ್ಯ ಎಸಗಿದ ಮುಘಲ್ ಸಾಮ್ರಾಜ್ಯವನ್ನು ಭಾರತದಿಂದ ಕಿತ್ತೊಗೆಯುವುದಾಗಿತ್ತು.

ಇಂಥ ಬೃಹತ್ ಕೋಟೆಯ ನಿರ್ಮಾಣಕ್ಕೆ ಅಪಾರವಾದ ಹಣಕಾಸು ಅಗತ್ಯವಿತ್ತು. ಲೋಹಗಡ ಕೋಟೆಯನ್ನು ನಿರ್ಮಿಸಲು ನಿಧಿಯನ್ನು ಕ್ರೋಢೀಕರಿಸಲು ವಂಜಾರ (ಬಂಜಾರ) ಮತ್ತು ಲಬಾಣ ಸಮುದಾಯಗಳು ಒಗ್ಗೂಡಿದ ಸ್ವತಂತ್ರ ಸಂಸ್ಥೆಯೊಂದನ್ನು ಸ್ಥಾಪಿಸಲಾಯಿತು. ಭಾರತದಾದ್ಯಂತ ಹರಡಿದ್ದ ತಾಂಡಾಗಳು (ತಾಂಡಾಗಳು ಮೊದಲು ವ್ಯಾಪಾರಕ್ಕಾಗಿ ಊರೂರು ಸುತ್ತುವ ಬಂಜಾರರು ತಂಗುವ ತಾಣಗಳಾಗಿದ್ದು, ಕ್ರಮೇಣ ಅವೇ ಹಳ್ಳಿಗಳಾದವು) ವಿದೇಶಿ ದಾಸ್ಯದಿಂದ ಬಿಡುಗಡೆ ಪಡೆಯುವ ಪ್ರಯತ್ನಕ್ಕೆ ವಿಶೇಷ ಪ್ರಯತ್ನ ಮಾಡಿದವು. ಹದಿನೆಂಟನೇ ಶತಮಾನದ ಪ್ರಾರಂಭದ ದಶಕಗಳಲ್ಲಿ ಮುಘಲರ ಆರ್ಥಿಕತೆಯ ಪ್ರಮಾಣವು ಒಟ್ಟು ವಿಶ್ವ ಆರ್ಥಿಕತೆಯ ಶೇ. 24.4ರಷ್ಟಿತ್ತು. ಬಂಜಾರ ಸಿಕ್ಖರು ಈ ಆರ್ಥಿಕತೆಯ ಪ್ರಮುಖ ಪಾತ್ರಧಾರಿಗಳಾಗಿದ್ದರು. ಬಂಜಾರರು ಶ್ರೀಮಂತ ವರ್ತಕರಾಗಿದ್ದರು. ಮುಘಲರು ತಮ್ಮ ಸಾಮ್ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಅವರಿಗೆ 'ಮನ್ಸಾಬ್'

ಪಟ್ಟವನ್ನು ಕೊಟ್ಟಿದ್ದರು. ಬಂಜಾರರು ದೇಶದ ಶ್ರೀಮಂತ ಸಮುದಾಯವಾಗಿದ್ದು, ರಾಜಕೀಯ ಅಧಿಕಾರವನ್ನು ಹೊಂದಿದವರಾಗಿದ್ದರು. ಅವರ ರಾಷ್ಟ್ರೀಯತೆ ಅಥವಾ ರಾಷ್ಟ್ರಭಕ್ತಿ ಅನುಪಮವಾಗಿತ್ತು. ಲೋಹಗಡ ಕೋಟೆಯನ್ನು ಕಟ್ಟುವ ಕಾರ್ಯದಲ್ಲಿ ಅವರು ಅನೇಕ ದಶಕಗಳ ಕಾಲ ವಿವೇಕದಿಂದ ಹಾಗೂ ರಹಸ್ಯವಾಗಿ ಕಾರ್ಯನಿರ್ವಹಿಸಿದರು. ಈ ಘನೋದ್ದೇಶಕ್ಕೆ ಭಾಯಿ ಲಕಿ ರಾಯ್ ಬಂಜಾರ ಅವರು ಪ್ರಧಾನ ನಾಯಕರಾಗಿದ್ದರು. ಅವರ ದಾರಿಯನ್ನು ಅನೇಕ 'ನಾಯಕ'ರು ಹಿಂಬಾಲಿಸಿದರು.

ತಮ್ಮ ಜೊತೆಯಲ್ಲಿ ಹೆಚ್ಚಿನ ಸಂಖ್ಯೆಯ ಅನುಯಾಯಿಗಳೊಟ್ಟಿಗೆ ಬಂದ ಸಿಂಗ್ ಅವರು ಪಂಜಾಬಿಗೆ ಬಂದರು. ಮುಘಲರ ವಿರುದ್ಧ ಯುದ್ಧ ಘೋಷಣೆಯಾಗಿದ್ದು, ಸಿಕ್ಖರು ಬಾಬಾ ಬಂದ ಸಿಂಗ್ ಬಹದ್ದೂರ್ ಅವರನ್ನು ಸೇರಬೇಕೆಂದು ಗುರುಸಾಹಿಬ್‌ರವರು ಹುಕುಂ ನಾಮಾ (ಆದೇಶ)ವನ್ನು ಬಂಜಾರ ಸಿಕ್ಖರಿದ್ದ ತಾಂಡಾಗಳಲ್ಲಿ ಬಿತ್ತರಿಸಲಾಯಿತು. ಇದು ಒಬ್ಬ ಸಣ್ಣ ದೊರೆಯ ವಿರುದ್ಧದ ಬಂಡಾಯವಾಗಿರಲಿಲ್ಲ. ವಿಶ್ವದ ಅತ್ಯಂತ ಬಲಿಷ್ಠ ಸೇನೆಯ ವಿರುದ್ಧ ಸಾರಿದ ಸಮರವಾಗಿತ್ತು. ಲೋಹಗಡದ ಯುದ್ಧದಲ್ಲಿ ಮುಖ್ಯವಾಗಿ ಬಂಜಾರರು, ಲಬಾಣರು ಮತ್ತು ಸಿಕ್ಖಲಿಗರು ಹೋರಾಡಿದರು. ಲೋಹಗಡದ ಯುದ್ಧದ (1710–1716) ತರುವಾಯ ಮುಘಲರ ಸಾಮ್ರಾಜ್ಯ ಕ್ರಮೇಣ ಕುಸಿಯಲಾರಂಭಿಸಿತು. ಬಾಬಾ ಬಂದ ಸಿಂಗ್ ಬಹದ್ದೂರ್ ಅವರು ಸೆರೆಯಾದ ನಂತರದಲ್ಲಿ ಮುಘಲರ ವಿರುದ್ಧ ಯುದ್ಧವನ್ನು ಮುಂದುವರೆಸಲು ಬಂಜಾರರು ಪ್ರಯತ್ನಿಸಿದರು. ಆದರೆ ಉತ್ತಮ ನಾಯಕನ ಕೊರತೆಯಿಂದಾಗಿ ಹೆಚ್ಚು ಕಾಲ ಹೋರಾಟ ಉಳಿಯಲಿಲ್ಲ. ಲೋಹಗಡಕ್ಕೆ ಹತ್ತಿರವಿದ್ದ ರಣಗರ್ ಜನಾಂಗ (ಮುಸ್ಲಿಮರಾಗಿ ಮತಾಂತರವಾದ ರಜಪೂತರು)ವು ಇದ್ದ 85 ಹಳ್ಳಿಗಳಲ್ಲಿ ಮುಘಲರ ಸಾಮ್ರಾಜ್ಯ ಬೀಡುಬಿಟ್ಟಿತು. ಇದರಿಂದಾಗಿ ಬಂಜಾರರು ದೊಡ್ಡ ಹಾನಿಯನ್ನು ಅನುಭವಿಸಬೇಕಾಯಿತು. ಇದು ಉತ್ತರ ಭಾರತದಲ್ಲಿ ಜನಾಂಗ ಹತ್ಯೆಗೆ ನಾಂದಿಯಾಯಿತು. ನಾನಾಕ್ ಪ್ರಸ್ತ್ (ಸಿಕ್ಖರು) ಎಲ್ಲೆ ಕಂಡರೂ, ಅಲ್ಲಿಯೇ ಸಾಯಿಸಲು ರಾಜಾಜ್ಞೆಯನ್ನು (ಫರ್ಮಾನು) ಹೊರಡಿಸಲಾಯಿತು. ಅಂತ ಸಿಕ್ಖರನ್ನು ಕೊಂದವರಿಗೆ ತಲೆಗೆ ಹತ್ತು ರೂಪಾಯಿ ಬಹುಮಾನ ನೀಡಲಾಗುವುದೆಂದು ಆಜ್ಞೆಯಾಗಿತ್ತು. ಆ ಕಾಲಕ್ಕೆ ಹತ್ತು ರೂಪಾಯಿ ದೊಡ್ಡ ಮೊತ್ತ. ಇದು ಮುಂದಿನ 30–40 ವರ್ಷಗಳವರೆಗೆ, ಅಂದರೆ, 1750ರಲ್ಲಿ ಸಿಖ್ ಬಂಡಾಯಗಾರರು ಈ ಪ್ರದೇಶವನ್ನು ವಶಪಡಿಸಿಕೊಂಡು ಆಡಳಿತವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವವರೆಗೆ ಮುಂದುವರೆಯಿತು. ಹಿಂದಿನ ಅಂಬಾಲ ಜಿಲ್ಲೆಯ ಗಡಿಯಲ್ಲಿದ್ದ ಬೆಟ್ಟಗಳಲ್ಲಿ ಸಂಕಷ್ಟದ ಬದುಕನ್ನು ದೂಡುತ್ತಿದ್ದ ತಮ್ಮ ಬಂಜಾರ ಸೋದರರ ಬಗ್ಗೆ ಸಿಖ್ ಶ್ರೀಮಂತರು ಎಂದೂ ತಲೆಕೆಡಿಸಿಕೊಳ್ಳಲಿಲ್ಲ.

ಲೋಹಗಡದ ಯುದ್ಧಗಳ ತರುವಾಯ ಜಿಲ್ಲೆಯಲ್ಲಿ ಸಿಖ್ ಜನರಾರೂ ಉಳಿಯಲಿಲ್ಲ. ಈಗಿನ ಯಮುನಾನಗರ, ಪಂಚಕುಲ ಮತ್ತು ಅಂಬಾಲ ಜಿಲ್ಲೆಯಲ್ಲಿ ವಾಸಿಸುತ್ತಿರುವ ಜನ ಸಮುದಾಯವು 250 ವರ್ಷಗಳ ಇತ್ತೀಚನದು ಎಂಬುದು ಉಲ್ಲೇಖನೀಯ. ಈ ಪ್ರದೇಶಗಳಲ್ಲಿ ಜನರು ಮತ್ತೆ ವಾಸಿಸುವಂತೆ ಮಾಡಲು, ಬ್ರಿಟಿಷ್ ಸರ್ಕಾರವು 1852ರಲ್ಲಿ ಕಾಳೆರಾಯ್ (ರಂಣರ್) ಎಂಬಾತನನ್ನು ಮೊದಲ ಅಧಿಕಾರಿಯಾಗಿ ನೇಮಿಸಿದರು.

ಕೆಲವು ಇತಿಹಾಸಕಾರರು, ಲೋಹಗಡ ಕೋಟೆ ಎನ್ನುವುದು ಈಗಾಗಲೇ ಅಸ್ತಿತ್ವದಲ್ಲಿದ್ದ ಮುಕ್ಲಿಶ್‌ಗಡ–ಕೋಟೆಗೆ ನೀಡಿರುವ ಹೊಸ ಹೆಸರು ಎಂದು ತಪ್ಪಾಗಿ ಹೇಳಿದ್ದಾರೆ. (ಹಾಗೆ ನೋಡಿದರೆ ಮುಕ್ಲಿಕ್‌ಗಡ ನಿಜವಾದ ಕೋಟೆಯಲ್ಲ. ಮುಘಲ್ ದೊರೆಗಳು ಮತ್ತು ಸೈನ್ಯಾಧಿಕಾರಿಗಳು ತಮ್ಮ ಮನೋಲ್ಲಾಸಕ್ಕಾಗಿ ನಿರ್ಮಿಸಿಕೊಂಡಿದ್ದ 'ರಂಗಮಹಲ್') ವಿದೇಶಿ ಮೂಲದ ಮುಘಲರ ದಮನವನ್ನು

ಕಿತ್ತೊಗೆಯಲು ಸ್ಥಳೀಯರು, ನಿರ್ಮಿಸಿದ ಲೋಹಗಡ ಕೋಟೆಯ ವೈಭವಯುತ ಚರಿತ್ರೆಯನ್ನು ಮುಸುಕುಗೊಳಿಸಲು ಈ ಬೃಹತ್ ಕೋಟೆಯನ್ನು ಮುಕ್ಲಿಕ್‌ಗಡ ಎಂದು ಕಲ್ಪಿತ ಚರಿತ್ರೆಯನ್ನು ತೇಲಿಬಿಡಲಾಗಿದೆ. ಮುಕ್ಲಿಕ್‌ಗಡವು ಲೋಹಗಡದಿಂದ ಸುಮಾರು 35 ಕಿ.ಮೀ. ದೂರದಲ್ಲಿರುವ ಹಾತ್ನಿಕುಂಡ್ ಅಣೆಕಟ್ಟಿನ ಬಳಿ ಇದೆ. ಸಮಕಾಲೀನ ಮುಘಲ್ ಚರಿತ್ರೆಕಾರರಾದ ಖಾಫಿ ಖಾನ್, ಮಹಮ್ಮದ್ ಖಾಸಿಂ ಔರಂಗಾಬಾದಿ ಮತ್ತು ಇತರರು ಉದ್ದೇಶಪೂರ್ವಕವಾಗಿಯೇ ಲೋಹಗಡವನ್ನು ಮುಕ್ಲಿಕ್‌ಗಡ ಎಂಬ ತಪ್ಪು ಚಿತ್ರವನ್ನು ನೀಡಿದ್ದಾರೆ. ಅದಾದ ನಂತರ, ಬೆಂಗಾಲ್ ಇಂಜೀನಿಯರ್ ಗ್ರೂಪ್ ಸಂಸ್ಥೆಯಲ್ಲಿ ಇಂಜಿನೀಯರಾಗಿದ್ದ ಬ್ರಿಟಿಷ್ ಸೇನೆಯ ಅಧಿಕಾರಿ ಅಲೆಕ್ಸಾಂಡರ್ ಕನಿಂಗ್‌ಹ್ಯಾಂ ಅವರು ಭಾರತದ ಚರಿತ್ರೆ ಮತ್ತು ಪುರಾತತ್ವ ಶಾಸ್ತ್ರಗಳ ಬಗ್ಗೆ ಆಸಕ್ತಿ ತಳೆದರು. ಹೊಸದಾಗಿ ಸ್ಥಾಪಿತವಾದ ಭಾರತ ಸರ್ಕಾರದ ಆರ್ಕಿಯಾಲಾಜಿಕಲ್ ಸರ್ವೇಯರ್ ಹುದ್ದೆಗೆ ಅವರನ್ನು 1861ರಲ್ಲಿ ನೇಮಿಸಲಾಯಿತು. ಅವರು ಪುರಾತತ್ವ ಶೋಧನಾ ಕಾರ್ಯವನ್ನು ಕೈಗೊಂಡು ಮುಂದೆ ಅದಕ್ಕಾಗಿ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಅದೇ ಇಂದಿನ ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಂಸ್ಥೆ (ASI) ಅವರೂ ಸಹ ಈ ಪ್ರದೇಶದ ಸಮೀಕ್ಷೆಯನ್ನು ಕೈಗೊಂಡರೂ, ಉದ್ದೇಶಪೂರ್ವಕವಾಗಿಯೇ ಲೋಹಗಡದ ಬಗ್ಗೆ ಯಾವುದೇ ವರದಿಯನ್ನು ನೀಡಲಿಲ್ಲ. ಅವರು ಸಿಖ್ ಚರಿತ್ರೆಯ ಬಗ್ಗೆ ಟಿಪ್ಪಣಿಯೊಂದನ್ನು ಬರೆದರು. ಆದರೆ ಲೋಹಗಡ ಕೋಟೆಯ ಬಗ್ಗೆ ಉಲ್ಲೇಖವನ್ನು ಸಹ ಮಾಡಲಿಲ್ಲ. ಅವರ ನಂತರದಲ್ಲಿ ಮೇಲೆ ಉಲ್ಲೇಖಿಸಿದ ಇತಿಹಾಸಕಾರರೆಲ್ಲರೂ ಕನಿಂಗ್‌ಹ್ಯಾಂರವರ ಟಿಪ್ಪಣಿಯನ್ನೇ ಸಿಕ್ಖರ ಚರಿತ್ರೆಗೆ ಆಧಾರವಾಗಿಟ್ಟುಕೊಂಡ ಕಾರಣ, ಬಂದ ಸಿಂಗ್ ಬಹದ್ದೂರ್, ಲೋಹಗಡದ ಯುದ್ಧಗಳು ಮತ್ತು ಬಂಜಾರರು ಹಾಗೂ ಸಿಕ್ಲಿಗಾರರ ಚರಿತ್ರೆ ಅಪವ್ಯಾಖ್ಯಾನಕ್ಕೊಳಗಾಯಿತು.

ಹಳೆಯ ಅಂಬಾಲ ಪ್ರಾಂತ್ಯದ ಬಗ್ಗೆ 1893ರಲ್ಲಿ ಪ್ರಕಟವಾದ ಬ್ರಿಟಿಷ್ ಗೆಜೆಟೀಯರ್‌ನಲ್ಲಿ ಮುಘಲರ ಮನರಂಜನಾ ತಾಣವಾದ ಮುಕ್ಲಿಕ್‌ಗಡದ ಬಗ್ಗೆ ಉಲ್ಲೇಖವಿದ್ದರೂ, ಲೋಹಗಡದ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಬ್ರಿಟಿಷರು ಈ ಪ್ರದೇಶವನ್ನು ಆಕ್ರಮಿಸಿಕೊಂಡರು. ಕನಿಂಗ್ ಹ್ಯಾಂ, ಇರ್ವಿನ್, ಡಬ್ಲ್ಯು. ಕೋಕ್‌ರವರಂಥ ಬ್ರಿಟಿಷ್ ಸರ್ವೇಯರ್‌ಗಳನ್ನು ಬಂಜಾರರ ಮೇಲೆ ಸಂಶೋಧನೆ ಮಾಡಲು ನೇಮಿಸಿದರು. ಈ ಸರ್ವೇಯರ್‌ಗಳು ಮುಘಲರ ಸಾಮ್ರಾಜ್ಯವನ್ನು ಕಿತ್ತೊಗೆದ ಬಂಜಾರರ ವಿರುದ್ಧ ವ್ಯತಿರಿಕ್ತ ವರದಿಯನ್ನು ಸಲ್ಲಿಸಿದಂತೆ ಕಾಣುತ್ತದೆ. ಈ ಸಮುದಾಯವನ್ನು ನಿಯಂತ್ರಣದಲ್ಲಿಡಲು ಬ್ರಿಟಿಷ್ ಸರ್ಕಾರ ಅಪರಾಧಿ ಬುಡಕಟ್ಟು ಕಾಯ್ದೆ, 1871 ಅನ್ನು ಜಾರಿಗೆ ತಂದಿತು. ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಜಗತ್ತಿನ ಮುಂದುವರೆದ ಸಮುದಾಯವೊಂದನ್ನು ಸರಿಸುಮಾರು 75 ವರ್ಷಗಳ ಕಾಲ ಗೃಹಬಂಧನದಲ್ಲಿರಿಸಲಾಯಿತು. ಭಾರತ ಸ್ವತಂತ್ರವಾದ ನಂತರ 1952ರಲ್ಲಿ ಈ ಸಮುದಾಯವನ್ನು ಕ್ರಿಮಿನಲ್ ಟ್ರೈಬಲ್ ಕಾಯ್ದೆಯಿಂದ ಬಿಡುಗಡೆಗೊಳಿಸಲಾಯಿತು. ಈಗ ಬಂಜಾರ ಸಿಕ್ಖರು ದಾರಿದ್ರ್ಯದಲ್ಲಿ ಬದುಕುತ್ತಿದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮತ್ತು ಮಾನವೀಯತೆಗಾಗಿ ತುಡಿದ ಸಮುದಾಯವೊಂದು ದೇಶದ ಅತ್ಯಂತ ಉಪೇಕ್ಷೆಗೊಳಗಾದ ಸಮುದಾಯವಾಗಿದೆ. ಖಲ್ಸಾ ರಾಜಧಾನಿ ಲೋಹಗಡವನ್ನು ಸಹ ಸಿಖ್ ಸಂಘ / ಸಂಸ್ಥೆಗಳು ದೂರ ಮಾಡಿದವು. ಈಗ ಈ ಪ್ರದೇಶವನ್ನು ಅಭಿವೃದ್ಧಿಪಡಿಸಲು ಲೋಹಗಡ ಟ್ರಸ್ಟ್ ಮತ್ತು ಹರಿಯಾಣ ಸರ್ಕಾರ ಪ್ರಯತ್ನಶೀಲವಾಗಿವೆ.

**ಗಗನದೀಪ್ ಸಿಂಗ್**

ಡಿಡಿಪಿಓ–ಯಮುನಾನಗರ, ಹರಿಯಾಣ ಸರ್ಕಾರ

# ಪ್ರಕಾಶಕರ ನುಡಿ

ಭಾರತದ ಅಲಕ್ಷಿತ ಸಮುದಾಯಗಳ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ವ್ಯಾಪಕವಾದ ಅಧ್ಯಯನಗಳಾಗುತ್ತಿದ್ದರೂ, ಈ ಸಮುದಾಯಗಳ ಬದುಕಿನ ಎಲ್ಲ ಆಯಾಮಗಳೂ ಇನ್ನೂ ಪ್ರತಿನಿಧಿತವಾಗಿಲ್ಲ. ಜನಸಾಮಾನ್ಯರಿಗೆ ಈ ಸಮುದಾಯಗಳ ವಿಶಿಷ್ಟ ಇತಿಹಾಸ, ಸಾಂಸ್ಕೃತಿಕ ಚಹರೆಗಳು ಇನ್ನೂ ಅಪರಿಚಿತವಾಗಿ ಹಲವೊಮ್ಮೆ ಅಸ್ಪಷ್ಟವಾಗಿ ಉಳಿದಿವೆ.

ಇದಕ್ಕೆ ಕಾರಣಗಳನ್ನು ಸ್ಥೂಲವಾಗಿ ಈ ರೀತಿ ತರ್ಕಿಸಬಹುದು. ಒಂದು ಸಮುದಾಯಗಳ ಆಕರಗಳು ಮೌಖಿಕವಾಗಿ ಉಳಿದಿರುವುದು. ಎರಡನೆಯದು ಸಮುದಾಯದ ಜನರೇ ತಮ್ಮ ಸಂಸ್ಕೃತಿ, ಇತಿಹಾಸವನ್ನು ಕಟ್ಟಿಕೊಡಲು, ಸಂರಕ್ಷಿಸಲು ಮುಂದಾಗದಿರುವುದು.

ತಮ್ಮ ಚರಿತ್ರೆ, ಸಂಸ್ಕೃತಿ, ಭಾಷೆ ಮತ್ತು ಜೀವನ ಕ್ರಮದಿಂದ ಬಂಜಾರ ಸಮುದಾಯ ಒಂದು ವಿಶಿಷ್ಟವಾದ ಜನಾಂಗ. ಒಂದು ಕಾಲದಲ್ಲಿ ಸಮಾಜದ ಮುಖ್ಯ ವಾಹಿನಿಯಲ್ಲಿ ಬೆರೆತು. ಸಾಮಾಜಿಕ ಬದುಕು, ವ್ಯವಹಾರಗಳಲ್ಲಿ ಜತೆಗೂಡಿದ್ದ ಸಮುದಾಯವು ಚರಿತ್ರೆಯ ಒತ್ತಡಗಳಿಂದ, ಪ್ರಭುತ್ವದ ಕ್ರೂರ ಕಾನೂನುಗಳಿಂದ ಅಂಚಿಗೆ ಸರಿಸಲ್ಪಟ್ಟಿತು. ತಮ್ಮ ನೆಲದಿಂದ ದೂರವಾಗಿ ನಾನಾ ಕಡೆ ಚದುರಿಹೋದರೂ, ತಮ್ಮ ವಿಶಿಷ್ಟ ಭಾಷೆ, ಸಂಸ್ಕೃತಿ ಮತ್ತು ಬದುಕಿನ ಚಹರೆಗಳನ್ನು ನಾಗರಿಕತೆಯ ದಾಳಿಯ ವಿರುದ್ಧವೂ ಉಳಿಸಿಕೊಂಡು ಬಂದ ವಿಶಿಷ್ಟ ಛಲವಂತಿಕೆಯ ಸಮುದಾಯವಿದು. ದಲಿತ ಮತ್ತು ಆದಿವಾಸಿಗಳಿಗೆ ಸಂಬಂಧಿಸಿದ ಸಾಹಿತ್ಯಗಳಲ್ಲಿ ಇವರ ಬಗ್ಗೆ ಉಲ್ಲೇಖವಿದ್ದರೂ, ಅವರ ನಿಜ ಚರಿತ್ರೆ, ಸಂಸ್ಕೃತಿಯು ಇನ್ನೂ ಅಪರಿಚಿತವಾಗಿಯೇ ಉಳಿದಿದೆ.

ಕಾಲ ಬದಲಾಗುತ್ತಿದೆ. ಬಂಜಾರರು ಶಿಕ್ಷಣ ಪಡೆಯುತ್ತಿದ್ದಾರೆ. ಜಾಗೃತರಾಗುತ್ತಿದ್ದಾರೆ. ಸಂಸ್ಕೃತಿ ಬಗ್ಗೆ ಕವಿದಿದ್ದ ವಿಸ್ಮೃತಿಯನ್ನು ಕೊಡಹುವ ಪ್ರಜ್ಞಾಪೂರ್ವ ಪ್ರಯತ್ನಗಳು ಈಗ ನಡೆಯುತ್ತಿವೆ. ಬಂಜಾರ ಸಮುದಾಯದ ಶ್ರೀಮಂತ ಸಂಸ್ಕೃತಿಯ ಬಗ್ಗೆ ತಿಳಿಯುವ ಆಸಕ್ತಿ ಹೆಚ್ಚುತ್ತಿದೆ. ತಮ್ಮ ಮೂಲ ಮತ್ತು ಭಾರತದಿಂದ ಯೂರೋಪ್‌ವರೆಗೆ ಹರಡಿಹೋಗಿರುವ ಈ ಸಮುದಾಯದ ಪಥವನ್ನು ಅರಿಯುವಂತಹ ಕಾರ್ಯಗಳೂ ಸಹ ಈಗ ಆರಂಭವಾಗಿವೆ.

ಇತ್ತೀಚಿನ ದಶಕಗಳಲ್ಲಿ ಬಂಜಾರ ಸಮುದಾಯದಿಂದ ಬಂದ, ಶಿಕ್ಷಿತರು ತಮ್ಮ ಸಮುದಾಯದ ಇತಿಹಾಸ, ಭಾಷೆ, ಸಂಸ್ಕೃತಿಯನ್ನು ಸಾಹಿತ್ಯದ ಮೂಲಕ ಕಟ್ಟಿಕೊಡುತ್ತಿದ್ದಾರೆ. ಆದರೂ ಇದು ಆರಂಭ ಮಾತ್ರ. ಬಂಜಾರರ ಶ್ರೀಮಂತ ಸಾಂಸ್ಕೃತಿಕ ಬದುಕನ್ನು ಅವಲೋಕಿಸಿದರೆ, ಅಭಿವ್ಯಕ್ತಿಸುವ

ನಿಟ್ಟಿನಲ್ಲಿ ಕ್ರಮಿಸಬೇಕಾದ ಹಾದಿ ದೀರ್ಘವಾಗಿದೆ. ಆದರೆ ಆರಂಭವಂತೂ ಆಗಿದೆ. ಪ್ರತಿಯೊಂದು ದೀರ್ಘಯಾತ್ರೆಯೂ ಆರಂಭವಾಗುವುದು ಮೊದಲ ಹೆಜ್ಜೆಯಿಂದಲೇ ತಾನೆ!

ಬಂಜಾರ ಸಮುದಾಯದ ವಿಶಿಷ್ಟತೆಯೆಂದರೆ, ದೇಶದ ಯಾವುದೇ ಮೂಲೆಯಲ್ಲಿ ವಾಸಿಸುತ್ತಿದ್ದರೂ, ತಮ್ಮ ಭಾಷೆ, ಸಂಪ್ರದಾಯ, ಉಡುಗೆ–ತೊಡುಗೆ, ಆಚರಣೆಗಳಲ್ಲಿ ಹೆಚ್ಚಿನ ಭಿನ್ನತೆ ಕಂಡುಬರದಿರುವುದು. ಆದರೂ ಭಿನ್ನ ಭಿನ್ನ ರಾಜ್ಯಗಳಲ್ಲಿ ನೆಲೆಯಾಗಿರುವ ಈ ಸಮುದಾಯ ಒಂದೇ ಸೂರಿನಡಿ ಕಲೆತು ವಿಚಾರ ವಿನಿಮಯ ಮಾಡಿಕೊಂಡ ವಿದ್ಯಮಾನಗಳು ಇತ್ತೀಚಿನ ದಿನಗಳವರೆಗೂ ಸಂಭವಿಸಿರಲಿಲ್ಲ. ಅದಕ್ಕೆಂದೇ ದೇಶದ ವಿವಿಧ ರಾಜ್ಯಗಳಲ್ಲಿ ಅಧ್ಯಾಪಕ ವೃತ್ತಿಯಲ್ಲಿ ತೊಡಗಿಸಿಕೊಂಡ ಬಂಜಾರ ಸಮುದಾಯದ ಬುದ್ಧಿ ಜೀವಿಗಳನ್ನು ರಾಷ್ಟ್ರೀಯ ಬಂಜಾರ ಪ್ರಾಧ್ಯಾಪಕರ ಸಂಘ ಎಂಬ ವೇದಿಕೆಯನ್ನು ಸ್ಥಾಪಿಸಿದ್ದರಿಂದ, ಇಂಥದೊಂದು ಮಿಲನ ಸಾಧ್ಯವಾಯಿತು.

ಬಂಜಾರ ಪ್ರಾಧ್ಯಾಪಕ ಸಮ್ಮೇಳನದಲ್ಲಿ ಕಂಡು ಬಂದ ವಿಚಾರವೆಂದರೆ, ಈ ಅಧ್ಯಾಪಕರು/ಸಾಹಿತಿಗಳು ಆಯಾ ಸ್ಥಳೀಯ ಭಾಷೆಯಲ್ಲಿ ತಮ್ಮ ಕೃತಿಗಳನ್ನು ರಚಿಸುವುದರಿಂದ ಉಳಿದ ಇತರ ಭಾಷೆಯ ಓದುಗರಿಗೆ ಅಪರಿಚಿತವಾಗಿಯೇ ಉಳಿಯುತ್ತಿರುವ ಸಂಗತಿ. ಅಲ್ಲದೆ ಬೇರೆ ಬೇರೆ ಭಾಷೆಗಳಲ್ಲಿ ಬಂಜಾರರಲ್ಲದವರು, ಈ ಸಮುದಾಯದ ಬಗ್ಗೆ ಮಾಡಿರುವ ಸಂಶೋಧನೆಗಳು, ರಚಿಸಿರುವ ಕೃತಿಗಳು ಸಹ ಇನ್ನೊಂದು ಭಾಗದವರಿಗೆ ತಲುಪದಂಥ ಸ್ಥಿತಿಯೂ ಇರುವುದು ವೇದ್ಯವಾಯಿತು. ಬಂಜಾರ ಸಮುದಾಯಕ್ಕೆ ಸಂಬಂಧಿಸಿದ ಎಲ್ಲ ಭಾಷೆಯ ಮುಖ್ಯ ಕೃತಿಗಳನ್ನು ಬೇರೆ ಬೇರೆ ಭಾಷೆಗೆ ಅನುವಾದಿಸಬೇಕಾದ ಅಗತ್ಯವಿರುವುದು ಇದರಿಂದ ಮನದಟ್ಟಾಯಿತು. ಈ ನಿಟ್ಟಿನಲ್ಲಿ ಅಂತಾರಾಷ್ಟ್ರೀಯ ಬಂಜಾರ ರೋಮ ಸಂಸ್ಥೆ ಕೈಗೊಂಡಿರುವ ಪುಟ್ಟ ಪ್ರಯತ್ನವೇ ಈ ಕೃತಿ–ಲೋಹಗಡ.

ಅಂತಾರಾಷ್ಟ್ರೀಯ ಬಂಜಾರ ರೋಮ ಸಂಸ್ಥೆಯು ಒಂದು ಸಾರ್ವಜನಿಕ ಸೇವೆಯ ಪ್ರತಿಷ್ಠಾನವಾಗಿ ಸಮಾನಾಸಕ್ತ ಜನರಿಂದ ಸ್ಥಾಪನೆಯಾಗಿದೆ. ಜಗತ್ತಿನಾದ್ಯಂತ ಚದುರಿಹೋಗಿರುವ ಬಂಜಾರ ರೋಮಾ ಸಮುದಾಯಗಳ ಚರಿತ್ರೆ, ಸಂಸ್ಕೃತಿ ಮತ್ತು ಸಮಕಾಲೀನ ವಿಷಯಗಳನ್ನು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಅನ್ವೇಷಿಸುವ ಮಹತ್ವಾಕಾಂಕ್ಷೆಯಿಂದ ಈ ಸಂಸ್ಥೆ ಪ್ರಾರಂಭವಾಗಿದೆ.

ಈ ನಿಟ್ಟಿನಲ್ಲಿ ಭಾರತೀಯ ಚರಿತ್ರೆಯ ಒಂದು ಪ್ರಮುಖ ಘಟ್ಟದಲ್ಲಿ ಬಂಜಾರರು ಪ್ರಧಾನ ಪಾತ್ರ ವಹಿಸಿ, ಒಂದು ಬೃಹತ್ ಆಂದೋಲನದಲ್ಲಿ ತೊಡಗಿಸಿಕೊಂಡ ಚಾರಿತ್ರಿಕ ವಿವರಗಳಿರುವ **'ಲೋಹಗಡ'** ಕೃತಿಯನ್ನು ಕನ್ನಡ ಓದುಗರ ಮತ್ತು ಶೈಕ್ಷಣಿಕ ಸಂಶೋಧನೆಗಳಲ್ಲಿ ತೊಡಗಿರುವವರ ಗಮನಕ್ಕೆ ತರಲು ಕನ್ನಡ ಭಾಷೆಯಲ್ಲಿ ಪ್ರಕಟಿಸುವ ಕಾರ್ಯವನ್ನು ಸಂಸ್ಥೆ ಕೈಗೆತ್ತಿಕೊಂಡಿದೆ. ಮುಘಲರ ನಿರಂಕುಶ ಪ್ರಭುತ್ವಕ್ಕೆ ಸೆಡ್ಡು ಹೊಡೆದ ಸಿಖ್ ಜನರ ಆಂದೋಲನದಲ್ಲಿ ಸಕಲವನ್ನು ಅರ್ಪಿಸಿಕೊಂಡ ಬಂಜಾರರ ಶೌರ್ಯ, ತ್ಯಾಗದ ವಿವರಗಳು ಈ ಕೃತಿಯಲ್ಲಿವೆ. ಮಧ್ಯ ಏಷ್ಯಾದಿಂದ ಶ್ರೀಲಂಕಾದವರೆಗೆ ತನ್ನ ವಾಣಿಜ್ಯ ಚಟುವಟಿಕೆಗಳನ್ನು ವಿಸ್ತರಿಸಿದ್ದ ವಂಜಾರರ ನಾಯಕ ಲಖಿ ರಾಯ್ ವಂಜಾರ ಈ ಆಂದೋಲನಕ್ಕೆ ನೀಡಿದ ಕೊಡುಗೆಗಳು ಈ ಕೃತಿಯಲ್ಲಿ ಒಡಮೂಡಿವೆ.

ಮೂಲಕೃತಿ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾದದ್ದು 2018ರ ಆದಿಯಲ್ಲಿ. ಕೇವಲ ಮೂರು ತಿಂಗಳಿನಲ್ಲಿಯೇ ಅನುವಾದಗೊಂಡು ಈಗ ಕನ್ನಡ ಓದುಗರ ಕೈಸೇರುತ್ತಿದೆ. ಬಂಜಾರ

ಸಮುದಾಯದಂತೆಯೇ ಅವರು ಕಟ್ಟಿದ ಬೃಹತ್ ಐತಿಹಾಸಿಕ ಸ್ಮಾರಕವೊಂದು ಮೂರು ಶತಮಾನಗಳ ಕಾಲ ಅವಜ್ಞೆಗೆ ಒಳಗಾಗಿತ್ತು. ಇತಿಹಾಸಕಾರ ಹರ್ಜಿಂದರ್ ಸಿಂಗ್ ದಲ್ಗೀರ್, ಸರ್ಕಾರದ ಅಧಿಕಾರಿಯಾಗಿಯೂ ಇತಿಹಾಸದ ಸಂಶೋಧನೆಯಲ್ಲಿ ತೊಡಗಿಸಿಕೊಂಡ ಗಗನ್‌ದೀಪ್ ಸಿಂಗ್ ಮತ್ತು ವಿದ್ವಾಂಸ ಗುರುವಿಂದರ್ ಸಿಂಗ್ ಅವರು ತಮ್ಮ ಸಂಶೋಧನೆ ಮತ್ತು ಶ್ರಮದಿಂದ ಲೋಹಗಡದ ಮೇಲೆ ಕವಿದಿದ್ದ ಶತಮಾನಗಳ ವಿಸ್ಮೃತಿಯ ತೆರೆಯನ್ನು ಸರಿಸಿ, ಸಿಖ್ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲಿದ್ದಾರೆ. ಆ ಮೂಲಕ ಉಪೇಕ್ಷೆಗೊಳಗಾಗಿದ್ದ ಬಂಜಾರ ಸಮುದಾಯವನ್ನು ಒಂದು ಚಾರಿತ್ರಿಕ ಭಿತ್ತಿಯಲ್ಲಿ ಕೇಂದ್ರಸ್ಥಾನಕ್ಕೆ ತಂದು ನಿಲ್ಲಿಸಿದ್ದಾರೆ. ಅವರ ಈ ಶ್ರಮವನ್ನು ಹಾಗೂ ಕನ್ನಡದಲ್ಲಿ ಪ್ರಕಟಿಸಲು ತೋರಿದ ಸಹಕಾರವನ್ನು ಅಂತಾರಾಷ್ಟ್ರೀಯ ಬಂಜಾರ ರೋಮಾ ಸಂಸ್ಥೆ ಅಭಿಮಾನದಿಂದ ನೆನೆಯುತ್ತದೆ.

ಈ ಕೃತಿಯನ್ನು ಓದಿ ನೀಡುವ ಸಲಹೆಗಳಿಗೆ ಸ್ವಾಗತ.

**ಡಿ. ರಾಮಾನಾಯಕ್**
ಅಧ್ಯಕ್ಷರು
ಅಂತಾರಾಷ್ಟ್ರೀಯ ಬಂಜಾರ ರೋಮಾ ಸಂಸ್ಥೆ

31.03.2018
ಬೆಂಗಳೂರು

## ನೆನಕೆಗಳು

ಈ ಕೃತಿಯನ್ನು ಪ್ರಕಟಿಸಿಲು ಅನುಮತಿ ನೀಡಿದ **ಹರಿಯಾಣ ಚರಿತ್ರೆ ಮತ್ತು ಸಂಸ್ಕೃತಿ ಅಕಾಡೆಮಿ** (**Haryana Academy of History & Culture,** Kurukshetra, Haryana State) ಸಂಸ್ಥೆಗೆ ವಿಶೇಷ ನೆನಕೆಗಳು

ಕೃತಿಯ ಸಹಲೇಖಕರೂ ಮತ್ತು ಕನ್ನಡದಲ್ಲಿ ಪ್ರಕಟಿಸಲು ಸರ್ವ ವಿಧದ ಸಹಕಾರ ನೀಡಿದ

**ಶ್ರೀ ಗಗನ್ ದೀಪ್,** ಜಿಲ್ಲಾ ಅಭಿವೃದ್ಧಿ ಮತ್ತು ಪಂಚಾಯತ್ ಅಧಿಕಾರಿ, ಹರಿಯಾಣ ಇವರಿಗೆ ತುಂಬು ಹೃದಯದ ಕೃತಜ್ಞತೆಗಳು.

ಪುಸ್ತಕವನ್ನು ತ್ವರಿತಕಾಲದಲ್ಲಿ ಅನುವಾದ ಮಾಡಿಕೊಟ್ಟು ಸಹಕರಿಸಿದ **ಡಾ. ಕೆ ಪುಟ್ಟಸ್ವಾಮಿ,**

**ಶ್ರೀ ಬಿ. ಬಾಲರಾಜ್,** ಅಧ್ಯಕ್ಷರು, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ,

**ಶ್ರೀ ಹೀರಾಲಾಲ್** ಐ.ಎಫ್.ಎಸ್., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ,

**ಶ್ರೀ ಬಿ. ಹೀರಾ ನಾಯಕ್,** ಮುಖ್ಯಮಂತ್ರಿಗಳ ಆಪ್ತಕಾರ್ಯದರ್ಶಿ,

**ಶ್ರೀ ಡಿ. ಥಾವರ್‍ಯ ನಾಯಕ್,** ಸದಸ್ಯರು, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ

ಇವರ ಪ್ರೋತ್ಸಾಹ ಸಲಹೆಗಳಿಗೆ

ವಿಶೇಷ ಆಸಕ್ತಿಯಿಂದ ಪುಸ್ತಕವನ್ನು ಸೊಗಸಾಗಿ ಮುದ್ರಿಸಿಕೊಟ್ಟ ಅಭಿಮಾನಿ ಸಂಸ್ಥೆಯ ಮಾಲೀಕರಾದ **ಶ್ರೀ ಟಿ. ವೆಂಕಟೇಶ್** ಮತ್ತು ಅವರ ಸಿಬ್ಬಂದಿ ಬಂಧುಗಳಿಗೆ

ಅಕ್ಷರ ಜೋಡಣೆ ಮಾಡಿದ **ಶ್ರೀ ದ್ರುವ್ ಎಸ್. ನಾರಾಯಣ್,** ಅವರಿಗೆ

ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬಂಜಾರ ಸಮುದಾಯದ ಏಳ್ಗೆಗಾಗಿ ದುಡಿಯುತ್ತಿರುವ ಮತ್ತು **IBRO** ಸಂಸ್ಥೆಯ ಚಟುವಟಿಕೆಗಳಲ್ಲಿ ಕೈಜೋಡಿಸಿ ನೆರವಾಗುತ್ತಿರುವ ಎಲ್ಲ ಸುಂದರ ಮನಸ್ಸುಗಳಿಗೆ

**ವಂದನೆಗಳು**

# ಪರಿವಿಡಿ


ಮುನ್ನುಡಿ ಮತ್ತು ಕೃತಜ್ಞತೆಗಳು v

ಮುನ್ನುಡಿ vii

ಪ್ರಕಾಶಕರು ನುಡಿ xi

ನೆನಕೆಗಳು xiv

ಅಧ್ಯಾಯ

1. ಲೋಹಗಡ : ಜಗತ್ತಿನ ಅತ್ಯಂತ ದೊಡ್ಡದಾದ ಕೋಟೆ 03
2. ಲೋಹಗಡ ಕೋಟೆಯ ರಚನೆ ಮತ್ತು ಸ್ಥಳ 21
3. ಲೋಹಗಡ ಕೋಟೆಯ ನಿರ್ಮಾಣ 30
4. ನಾಂದೇಡ್‌ನಿಂದ ಲೋಹಗಡ ಕೋಟೆಯವರೆಗೆ ಬಂದಾ ಸಿಂಗ್ ಬಹದ್ದೂರನ ಪ್ರಯಾಣ 35
5. ಲೋಹಗಡದಿಂದ ಬಂದಾ ಸಿಂಗ್ ಬಹದ್ದೂರನ ಸಾಹಸಗಳು 50
6. ಸಿಕ್ಖರ ವಿರುದ್ಧ ಮುಘಲರ ಕ್ರಮಗಳು 72
7. ಸಿಕ್ಖರ ವಿರುದ್ಧ ದಂಡಯಾತ್ರೆ ಮುನ್ನಡೆಸಿದ ಸಾಮ್ರಾಟ 104
8. ಲೋಹಗಡ ಕೋಟೆಯನ್ನು ತೊರೆದ ನಂತರ ಬಂದಾ ಸಿಂಗ್‌ನ ಸ್ಥಿತಿ 110
9. ಬಹದ್ದೂರ್ ಶಾ ಸಾಮ್ರಾಟನ ನಿಧನ 117
10. ಲೋಹಗಡದಿಂದ ಸಧೌರಗೆ ಹಿಂದಿರುಗಿದ ಬಂದಾ ಸಿಂಗ್ 127
11. ಸಿಕ್ಖರ ವಿರುದ್ಧ ಮುಘಲರ ಮೂರನೇ ದಂಡಯಾತ್ರೆ 132
12. ಲೋಹಗಡದ ಮೇಲೆ ಮುಘಲರ ಮೂರನೇ ಆಕ್ರಮಣ 142
13. ಬಂದಾ ಸಿಂಗ್ ಬಹದ್ದೂರ್‌ನ ಕೊನೆಯ ಯುದ್ಧ 147
14. ಗುರುದಾಸ್ ನಂಗಲ್ ಯುದ್ಧ ಮತ್ತು ಬಂದಾ ಸಿಂಗ್ ಬಹದ್ದೂರ್‌ನ ಬಂಧನ 172

**15. ಲೋಹಗಡ ನೆಲಸಮ : ಲೋಹಗಡವನ್ನು ಯಾರು ನೆಲಸಮ ಮಾಡಿದರು? ಎಷ್ಟು ಸಮಯ ಹಿಡಿಯಿತು? 175**

**16. ಲೋಹಗಡ ಕೋಟೆಯು ನೆಲಸಮವಾದ ನಂತರದ ಪರಿಸ್ಥಿತಿ 177**

**17. ಬಂದಾ ಸಿಂಗ್‌ನ ಕೊಡುಗೆ 180**

**ಅನುಬಂಧಗಳು**

ಅನುಬಂಧ–1 180

ಅನುಬಂಧ–2 181

ಅನುಬಂಧ–3 184

ಅನುಬಂಧ–4 187

ಅನುಬಂಧ–5 190

## ಅಧ್ಯಾಯ–1

# ಲೋಹಗಡ : ಜಗತ್ತಿನ ಅತ್ಯಂತ ದೊಡ್ಡದಾದ ಕೋಟೆ

ಒಂದು ಲಕ್ಷಕ್ಕೂ ಹೆಚ್ಚು ಸೈನಿಕರಿದ್ದ ಬೃಹತ್ ಸೇನೆಯನ್ನು ಮುನ್ನಡೆಸಿದ ಮುಘಲ್ ಸಾಮ್ರಾಟ್ ಬಹದ್ದೂರ್ ಶಾ 1710 ರ ನವೆಂಬರ್ 29 ರಂದು ಲೋಹಗಡ ಕೋಟೆಗೆ ಮುತ್ತಿಗೆ ಹಾಕಿ ಮಾರನೇಯ ದಿನವೇ ಅದನ್ನು ವಶಪಡಿಸಿಕೊಂಡ ಎಂದು ಬಹುತೇಕ ಎಲ್ಲ ಚರಿತ್ರೆಕಾರರು ಬರೆದಿದ್ದಾರೆ. ಈ ಲೇಖಕ (ಹರ್‌ಜಿಂದರ್ ಸಿಂಗ್ ದಿಲ್ಗೀರ್) ಸಹ ತನ್ನ ಹಿಂದಿನ ಕೃತಿಗಳಲ್ಲಿ ಹಾಗೆಯೇ ವರ್ಣಿಸಿದ್ದಾನೆ. ಆದರೆ, ಲೋಹಗಡದ ಸುತ್ತಮುತ್ತಲಿನ ಒಟ್ಟು ಕೋಟೆ ವಲಯಕ್ಕೆ ಭೇಟಿ ನೀಡಿದ ನಂತರ ಈ ಲೇಖಕ ಹೀಗೆ ಬರೆದಿದ್ದಾನೆ "ಮುಘಲರ ವಿಜಯದ ಬಗ್ಗೆ ಈಗಾಗಲೇ ಪ್ರಚಲಿತವಾಗಿರುವ ಸಂಗತಿಗಳನ್ನು ಗಮನಿಸಿದರೆ, ಮುಘಲರ ಸೇನೆಯು ಬಹುದೊಡ್ಡ ಸಾಧನೆ ಮಾಡಿದಂತೆ ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ ವಾಸ್ತವದಲ್ಲಿ ಇದೊಂದು ತಮಾಷೆಯ ಸಂಗತಿ. ಲೋಹಗಡ ಕೋಟೆಯೊಂದು ಸುಲಭವಾಗಿ ವಶಪಡಿಸಿಕೊಳ್ಳಬಹುದಾದ ಸಾಮಾನ್ಯ ಬೆಟ್ಟ ಅಥವಾ ಕಟ್ಟಡವಿದ್ದಿರಬಹುದೆಂಬ ಚಿತ್ರವನ್ನು ಇದು ನೀಡುತ್ತದೆ. ಆದರೆ ಈ ಪ್ರದೇಶದ ಭೂಸಮೀಕ್ಷೆ ಮತ್ತು ಕೋಟೆಯ ರಚನೆಯನ್ನು ಅಧ್ಯಯನ ಮಾಡಿದ ನಂತರ ಮುಘಲರು ಹೇಳಿಕೊಂಡಿರುವ ಸೇನೆಯ ಶೌರ್ಯ ವಾಸ್ತವಕ್ಕೆ ದೂರವಾದದು; ಉತ್ಪ್ರೇಕ್ಷಿತಗೊಂಡದ್ದು ಮತ್ತು ಐತಿಹಾಸಿಕವಾಗಿ ಸುಳ್ಳಿನದು".

1710ರಲ್ಲಿ ಲೋಹಗಡ ಕೋಟೆಯು ಬೇರೆಯದೇ ಆಗಿತ್ತು. ಹಾಗೆ ನೋಡಿದರೆ ಅಮೃತಸರದಲ್ಲಿರುವ ಗುರು–ಡ–ಚಕ್ ಸ್ಥಳದಲ್ಲಿ ಕೋಟೆಯೊಂದನ್ನು 1609ರಲ್ಲಿ ಗುರು ಹರಗೋವಿಂದ್ ಅವರು ನಿರ್ಮಿಸುವ ಮೂಲಕ ಲೋಹಗಡ ಕೋಟೆಯ ಚರಿತ್ರೆ ಆರಂಭವಾಯಿತು. ಈಗ ಆ ಕೋಟೆಯ ಪ್ರದೇಶದಲ್ಲಿ ಗುರುದ್ವಾರವೊಂದನ್ನು ನಿರ್ಮಿಸಲಾಗಿದೆ. ಈಗಿರುವ ಕೋಟೆ ಎರಡನೆಯ ಲೋಹಗಡ ಕೋಟೆ. ಇದನ್ನು ಗುರು ಹರ್ ರಾಯ್ ಅವರ ನಿರ್ದೇಶನದಲ್ಲಿ ಭಾಯಿ ಲಖಿ ರಾಯ್ ವಂಜಾರ ನಿರ್ಮಿಸಿದ. ಗುರುಗಳು ತಪಲ್‌ನಲ್ಲಿ 12–13 ವರ್ಷ ವಾಸವಿದ್ದ ಕಾಲದಲ್ಲಿ ಈ ಕೋಟೆಯ ನಿರ್ಮಾಣದ ಉಸ್ತುವಾರಿಯನ್ನು 1645 ರಿಂದ 1657ರವರೆಗೆ ನಿರ್ವಹಿಸಿದರು.

ಅದಾದ ನಂತರ ಪಾವೊಂತ ಸಾಹಿಬ್‌ನಲ್ಲಿ 1685 ರಿಂದ 1688 ರವರೆಗೆ ತಂಗಿದ್ದ ಗುರು ಗೋವಿಂದ ಸಿಂಗ್‌ರವರು ಸಹ ಈ ಕೋಟೆಯ ನಿರ್ಮಾಣದ ಉಸ್ತುವಾರಿಯನ್ನು ಮಾಡಿದರು. ಗುರು ಗೋವಿಂದ ಸಿಂಗ್‌ರವರು ಚಕ್ ನಾನಕಿ (ಈಗ ಅದು ಅನಂದಪುರ್ ಸಾಹಿಬ್‌ನ ಭಾಗವಾಗಿದೆ)ಗೆ ವಾಪಸ್ಸು ಬಂದ ನಂತರ ಅವರು ಅಲ್ಲಿಯೂ ಸಹ ಇದೇ ಹೆಸರಿನ ಮತ್ತೊಂದು ಕೋಟೆಯನ್ನು ನಿರ್ಮಿಸಿದರು. (1689–90). ಆ ಕೋಟೆಯಲ್ಲಿ ಗುರುಗಳು ಶಸ್ತ್ರಾಸ್ತ್ರಗಳ ಉತ್ಪಾದನೆ

ಮಾಡುವ ಉದ್ದಿಮೆಯನ್ನು ಸ್ಥಾಪಿಸಿದರು. ಈ ಶಸ್ತ್ರಗಳನ್ನು ತಮ್ಮ ಹಿರಿಯರಿಂದ ಬಳವಳಿಯಾಗಿ ಪಡೆದ ಕೌಶಲದಿಂದ ಸಿಕ್ಲಿಗಾರ್ ಹಾಗೂ ವಂಜಾರ ರಜಪೂತರು ತಯಾರು ಮಾಡಿದರು. ಇಲ್ಲಿ ತಯಾರಿಸಿದ ಶಸ್ತ್ರಗಳನ್ನು ನಹಾನ್ ರಾಜ್ಯ ಮತ್ತು ಪರ್ವತ ಶ್ರೇಣಿಯಲ್ಲಿದ್ದ ಲೋಹಗಡ ಕೋಟೆಗೂ ಕಳುಹಿಸಿಕೊಟ್ಟಿರುವಂತೆ ಕಾಣುತ್ತದೆ.

**ಲೋಹಗಡ ಕೋಟೆಯ ಭೌಗೋಳಿಕ ನಕ್ಷೆ**

ಲೋಹಗಡ ಕೋಟೆಯು ಒಂದೆರಡು ಬೆಟ್ಟಗಳ ಮೇಲೆ ನಿರ್ಮಿಸಿರುವ ಕೊತ್ತಲವಲ್ಲ. ಲೋಹಗಡ ಕೋಟೆ. ಆದರೆ ಅದು ಹತ್ತು ಹನ್ನೆರಡು ಬೆಟ್ಟಗಳಲ್ಲಿ ನಿರ್ಮಿಸಿರುವ ಕೋಟೆಯಾಗಿದೆ. ಹಾಗಾಗಿ ಇದು ಜಗತ್ತಿನ ಬಹುದೊಡ್ಡ ಕೋಟೆಯಾಗಿ ಪರಿಗಣಿಸಲಾಗಿದೆ.

ಲೋಹಗಡ ಕೋಟೆಯು ನಹಾನ್, ಸಧೌರ ಮತ್ತು ಪಾವೊಂಟ್ ಸಾಹಿಬ್‌ನಿಂದ 29 ಕಿ.ಮೀ. ದೂರದಲ್ಲಿದೆ. ಈ ಕೋಟೆಯ ಬಹುಪಾಲು ಪ್ರದೇಶ ಈ ಹಿಂದೆ ಅಸ್ತಿತ್ವದಲ್ಲಿದ್ದ ನಹಾನ್[(1)] ರಾಜ್ಯದ ವ್ಯಾಪ್ತಿಯಲ್ಲಿದೆ. ಕೋಟೆಯ ಕೇಂದ್ರ ಪ್ರದೇಶವು ಭಾರತದ ಈಗಿನ ರಾಜ್ಯಗಳಾದ ಹರಿಯಾಣದ ಯಮುನಾನಗರ ಜಿಲ್ಲೆ ಹಾಗೂ ಹಿಮಾಚಲ ಪ್ರದೇಶದ ಸಿರಮೌರ್ ಜಿಲ್ಲೆಗಳ 7000 ಎಕರೆ ಪ್ರದೇಶದಲ್ಲಿ ಹರಡಿದೆ. ಲೋಹಗಡ, ಹರಿಪುರ, ಬಂಕೆಬಾರ, ಮೇತಾವಳಿ, ದೇವಾವಲ, ಪಲೋರಿ, ಸುಕ್ರೋನ್, ಮೆಹ್ರೋನ್‌ವಾಲ, ಚರ್ನವಾಲ, ಜಾಮ್ನಿ (ಹಿಮಾಚಲ) ಮತ್ತು ಭಗವಾನ್‌ಪುರ, ನಾತೂರಿ–ಧನಾನುರ, ನಗ್ಲಿ, ಮೊಹಿಂದ್‌ಪುರ (ಹರಿಯಾಣ) ಮುಂತಾದ ಹಳ್ಳಿಗಳು ಲೋಹಗಡದ ಭಾಗವಾಗಿವೆ. ಹಾಗೆ ನೋಡಿದರೆ ಕೋಟೆಯು ಉಧಮಗಡದಿಂದ (ಕಾಲ ಅಂಬ್ ಹತ್ತಿರ) ಕಲೇಸರ್ ಅರಣ್ಯದವರೆಗೆ ಹರಡಿದೆ. ರಾಯಪುರ್ ರಾಣಿ, ತೋಕ, ಕಾಲ ಅರಬ್ ಮತ್ತು ಪಿಂಜೋರ್ ಈ ಕೋಟೆಯ ಭಾಗಗಳಾಗಿವೆ. ತಸಕ ಮತ್ತು ತೇವರ್‌ನ ನಡುವಿನ ಪ್ರದೇಶ ಮತ್ತು ಮಿಲ್ಕರ್, ತಹ್ರಾಪುರ, ದಾರಾಪುರ, ಚೀಕದಿಂದ ಕಲೇಸರ್ ಅರಣ್ಯದವರೆಗಿನ ಉದ್ದ 40–50 ಕಿಲೋಮೀಟರ್‌ಗಳಿದ್ದರೆ, ಅಗಲವು 10–15 ಕಿ.ಮೀ. ವ್ಯಾಪ್ತಿಗೆ ಹಿಗ್ಗಿದೆ. ಈ ಬೆಟ್ಟಗಳು ಸಮುದ್ರದ ಮಟ್ಟದಿಂದ 1200–1900 ಅಡಿ ಎತ್ತರದಲ್ಲಿವೆ.

ಮಹಮ್ಮದ್ ಕಾಸಿಂ ಔರಂಗಬಾದಿ ಅವರ ಪ್ರಕಾರ, 1710ರ ನವೆಂಬರ್‌ನಲ್ಲಿ ಲೋಹಗಡ ಕೋಟೆಯು 16–17 ಬೆಟ್ಟಗಳಲ್ಲಿ ಹರಡಿತ್ತು. ಈ ಬೆಟ್ಟಗಳನ್ನು ಹತ್ತುವುದು ದುಸ್ಸಾಧ್ಯವಾಗಿತ್ತು. ಸಿಕ್ಖರು 5 ರಿಂದ 7 ಕಿಲೋಮೀಟರ್ ಪ್ರದೇಶದಲ್ಲಿ ಬುರುಜುಗಳನ್ನು ಸ್ಥಾಪಿಸಿದರು. ಲೋಹಗಡ ಕೋಟೆಯ ಸುತ್ತಲೂ, ಲೋಹಗಡ ಹಳ್ಳಿಯಿಂದ ಕೌಲೇಸರ್ ಮತ್ತು ಸುಕ್ರೋನ್‌ವರೆಗೆ ನಿಬಿಡವಾದ ಅರಣ್ಯಗಳಿದ್ದವು. ಈಗಲೂ (2018) ಕೆಲವು ವನ್ಯಮೃಗಗಳು ಅಲ್ಲಿ ಬದುಕುತ್ತಿವೆ. ಈ ಪ್ರದೇಶವನ್ನು ಡಾಬರ್ ಪರ್ವತಗಳು ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಅಂದಿನ ಪರಿಸ್ಥಿತಿ ಹೀಗಿದ್ದಿರಬೇಕಾದರೆ, ಮುಘಲ್ ಸೇನೆಯು ಕೇವಲ ಒಂದೂವರೆ ದಿನದಲ್ಲಿ ಇದನ್ನು ವಶಪಡಿಸಿಕೊಳ್ಳಲು ಹೇಗೆ ಸಾಧ್ಯ?

ಲೋಹಗಡದ ಕೋಟೆಯ ಬಹುತೇಕ ಗೋಡೆಗಳು ಎರಡರಿಂದ ನಾಲ್ಕು ಸುತ್ತು ಇರುವಂಥವು. ಅಲ್ಲಿ ಗೋಡೆಯ ನಂತರ ಗೋಡೆಗಳು ಎದ್ದಿವೆ. ಕೆಲವು ಗೋಡೆಗಳಂತೂ 2.5 ಯಿಂದ 3.5 ಮೀಟರ್ ಅಗಲದವು. ಈ ಗೋಡೆಗಳನ್ನು ಸುಣ್ಣ ಗಾರೆಯನ್ನು ಬಳಸಿ ನಿರ್ಮಿಸಿರುವುದರಿಂದ ಗೋಡೆ ಹೆಚ್ಚು ಭದ್ರವಾಗಿವೆ. ಈ ಕಾಮಗಾರಿಗಳನ್ನು ಕೇವಲ ಕೆಲವು ದಿನಗಳು ಅಥವಾ ತಿಂಗಳು ಇಲ್ಲವೇ ವರ್ಷಗಳಲ್ಲಿ ಮಾಡಿ ಮುಗಿಸಿರಲು ಸಾಧ್ಯವಿಲ್ಲ. ಇದನ್ನು ಸಾಧಿಸಬೇಕಾದರೆ 70–80

ವರ್ಷಗಳೇ ಬೇಕಾಗಿರಬಹುದು.

ನದಿಗಳು ಮತ್ತು ಝರಿಗಳು ಈ ಕೋಟೆಯನ್ನು ಎರಡು ಭಾಗಗಳಾಗಿ ವಿಭಜಿಸಿವೆ. ಗೋಡೆಯ ಎಲ್ಲ ಭಾಗಗಳಲ್ಲಿ ಆಳವಾದ ನೀರು ಕಾಲುವೆಗಳಿವೆ. ಈ ಗೋಡೆಗಳು ಮತ್ತೊಂದು ಸುತ್ತಿನ ಗೋಡೆಗಳಿಂದ ರಕ್ಷಣೆಗೊಂಡು ಕೋಟೆಗೆ ಭಾರಿ ರಕ್ಷಣೆಯೊದಗಿಸಿದೆ. ಶತ್ರು ಸೇನೆಯು ಒಂದು ಗೋಡೆಯನ್ನು ದಾಟಿದ ಕೂಡಲೇ ಅದು ಮತ್ತೊಂದು ಗೋಡೆಯನ್ನು ದಾಟುವ ಮೊದಲು ಬಾರಿ ವಿರೋಧವನ್ನು ಎದುರಿಸಬೇಕಿತ್ತು. ಅಲ್ಲದೆ ಪ್ರತಿಯೊಂದು ಗುಡ್ಡದ ಸುತ್ತಲೂ ಗೋಡೆಯ ನಂತರ ಗೋಡೆಗಳ ರಚನೆಯಿತ್ತು. ಇಂಥ ಪ್ರದೇಶದಲ್ಲಿ ಸೇನೆಯು ತನ್ನ ಹಿಂದಿನಿಂದ ಬರುವವರಿಂದ ಯಾವುದೇ ರೀತಿಯ ಸಹಾಯವನ್ನು ಪಡೆಯುವ ಭರವಸೆಯಿರಲಿಲ್ಲ.

ಕೋಟೆಯ ಬೆಟ್ಟಗಳು ನಿಬಿಡವಾದ ಮುಳ್ಳುಕಂಠಿಗಳಿಂದ, ಪಾಪಾಸು ಕಳ್ಳಿಗಳಿಂದ ತುಂಬಿಹೋಗಿತ್ತು. ಇದಲ್ಲದೆ ಬೇರೆ ಬೇರೆ ಸಸ್ಯಗಳು, ಅದರಲ್ಲೂ ವಿಷಪೂರಿತ ಸಸ್ಯಗಳೂ ಆವರಿಸಿದ್ದವು. ಅಲ್ಲದೆ ಅಸಂಖ್ಯಾತವಾಗಿ ಜಾರುವ ಇಳಿಜಾರುಗಳು ಮತ್ತು ಕುದುರೆಗಳಾಗಲೀ, ಸೈನಿಕರಾಗಲೀ ಸುಲಭವಾಗಿ ದಾಟಲಾಗದ ಕಡಿದಾದ ಪ್ರದೇಶಗಳಿದ್ದವು. ಇವು ಕೋಟೆಯನ್ನು ಸುಲಭವಾಗಿ ವಶಪಡಿಸಿಕೊಳ್ಳಲು ಸಾಧ್ಯವಾಗದಂತಹ ಪರಿಸ್ಥಿತಿಯನ್ನು ರೂಪಿಸಿದ್ದವು.

ಇದರ ಜೊತೆಗೆ ಸಿಖ್ ಸೈನಿಕರು ತಮಗಾಗಿ ಕೆಲವು ಅನುಕೂಲಗಳನ್ನು ಕಲ್ಪಿಸಿಕೊಂಡಿದ್ದರು. ಅವರು ಬೆಟ್ಟಗಳ ತುದಿಯನ್ನು ಸುಲಭವಾಗಿ ತಲುಪುವ ಇಲ್ಲವೇ ಬೆಟ್ಟಗಳಿಂದ ವೇಗವಾಗಿ ನದಿ–ಝರಿಗಳನ್ನು ತಲುಪುವ ಅಥವಾ ಅರಣ್ಯ ಪ್ರದೇಶಗಳಿಗೆ ತಪ್ಪಿಸಿಕೊಂಡು ಹೋಗಬಲ್ಲ ಅನೇಕ ರಹಸ್ಯ ದಾರಿಗಳನ್ನು ನಿರ್ಮಿಸಿಕೊಂಡಿದ್ದರು. ಇಂಥ ಪ್ರದೇಶ ಗೆರಿಲ್ಲಾ ಮಾದರಿಯ ಯುದ್ಧ ತಂತ್ರಗಳಿಗೆ ಹೇಳಿ ಮಾಡಿಸಿದಂತಿತ್ತು. (ಇದರಲ್ಲಿ ಸಿಖ್ ಸೈನಿಕರು ನಿಪುಣರಾಗಿದ್ದರು) ಹಾಗಾಗಿ ಇದು ಶತ್ರು ಸೇನೆಯ ಪಾಲಿಗೆ ಮಸಣದ ಭೂಮಿಯಾಗಿತ್ತು. ಒಂದು ವೇಳೆ ಸಾವಿರಾರು ಸೈನಿಕರಿರುವ ನೂರಾರು ತುಕಡಿಗಳು ಏಕಕಾಲಕ್ಕೆ ದಾಳಿ ಮಾಡಿದಂತಹ ಸಂದರ್ಭಗಳಲ್ಲಿ ಅನೇಕ ವರ್ಷಗಳ ಕಾಲ ಯುದ್ಧ ನಡೆದರೆ, ಭಾರಿ ಮೊತ್ತದ ಸೇನಾ ನಷ್ಟದಲ್ಲಿ ಮಾತ್ರ ಇದನ್ನು ವಶಪಡಿಸಿಕೊಳ್ಳಬಹುದಿತ್ತು.

**ಅಮರ ವಿಲಾಸ (ತೂಗಾಡುವ ಬಳ್ಳಿಗಳು)**

ಅರಣ್ಯದಲ್ಲಿ ಕೆಲವು ಮರಗಳಿಂದ ಬೀಳುಬಿದ್ದ ತೂಗುವ ಬಳ್ಳಿಗಳಿರುತ್ತಿದ್ದವು. ಇವುಗಳ ಸಹಾಯದಿಂದ ಮನುಷ್ಯರು ಮರದಿಂದ ಮರಕ್ಕೆ, ಕಾಡಿನಿಂದ ಕಾಡಿಗೆ ಹಾರಿ ತಲುಪಬಹುದಿತ್ತು. ಈ ಬಳ್ಳಿಗಳು ಮರದ ಟೊಂಗೆಯಂತಲ್ಲ. ಬಹಳ ಗಟ್ಟಿಯಾಗಿದ್ದು, ಕಾಲಾನಂತರದಲ್ಲಿ ಕೊಳೆಯದೆ ಬಲವಾಗಿರುತ್ತಿದ್ದವು. ಅಥವಾ ಮುರಿದು ಹೋಗುತ್ತಿರಲಿಲ್ಲ. ವಾನರಗಳು ಈ ಬಳ್ಳಿಗಳನ್ನು ಬಳಸಿ ಒಂದು ಮರದಿಂದ ಮತ್ತೊಂದು ಮರಕ್ಕೆ ನೆಗೆಯುತ್ತಿದ್ದವು. ಕೆಲವು ಬಳ್ಳಿಗಳು ತುಂಬಾ ಉದ್ದವಿರುತ್ತಿದ್ದವು. ಕೆಲವು ಬಳ್ಳಿಗಳು ನೂರಾರು ವರ್ಷ ದೀರ್ಘಕಾಲ ಗಟ್ಟಿಯಾಗಿರುತ್ತಿದ್ದವು. ಅಂಥ ಬಳ್ಳಿಗಳು ಲೋಹಗಡ ಕೋಟೆಯಲ್ಲಿದ್ದವು. (ಈಗಲೂ ಅಂಥ ಬಳ್ಳಿಗಳನ್ನು ಕಾಣಬಹುದು) ಈ ಬಳ್ಳಿಗಳು ಸಾಮಾನ್ಯವಾಗಿ ಈ ವಲಯದಲ್ಲಿ ಸಹಜವಾದ ಸಸ್ಯವರ್ಗಕ್ಕೆ ಸೇರಿಲ್ಲ. ಹಾಗಾಗಿ ಯಾರ್ಕಾಂಡ್ ಮತ್ತು ಸಮರ್‌ಕಾಂಡ್ (ಮಧ್ಯ ಏಷ್ಯಾ)ದಿಂದ ಶ್ರೀಲಂಕಾದವರೆಗೂ ಸರಕು ಸರಂಜಾಮುಗಳ ವ್ಯವಹಾರ ನಡೆಸುತ್ತಿದ್ದ ಲಖಿ ರಾಯ್ ವಂಜಾರ ಇವುಗಳನ್ನು ಬೇರೆ ಅರಣ್ಯ ಪ್ರದೇಶಗಳಿಂದ ತಂದಿರಬಹುದೆಂದು ಕಾಣುತ್ತದೆ. ಸಿಖ್ ಸೈನಿಕರು ಕೋಟೆಯ ಬೇರೆ ಬೇರೆ ಭಾಗಗಳನ್ನು ತಲುಪಲು

ಈ ಬಳ್ಳಿಗಳನ್ನು ಬಳಸುತ್ತಿದ್ದರು. ಶತ್ರು ಸೇನೆ ದಾಳಿ ಮಾಡಿದಾಗ ಈ ಬಳ್ಳಿಗಳು ನೆರವಿಗೆ ಬರುತ್ತಿದ್ದವು.

**ರಹಸ್ಯ ದಾರಿಗಳು**

ಲೋಹಗಡ ಕೋಟೆಯ ಬೆಟ್ಟಗಳಲ್ಲಿ ಕೆಲವು ರಹಸ್ಯ ದಾರಿಗಳಿದ್ದವು. ಈ ದಾರಿಗಳು ಕೇವಲ ಕೆಲವು ಬೆಟ್ಟಗಳಲ್ಲಿ ನಿರ್ಮಿಸಿದವುಗಳಲ್ಲ. ಲೋಹಗಡ ಕೋಟೆಯ ಆದ್ಯಂತ, ಬಹುತೇಕ ಎಲ್ಲ ಬೆಟ್ಟಗಳ, ಎಲ್ಲ ಮಟ್ಟದಲ್ಲಿ ಇವುಗಳನ್ನು ನಿರ್ಮಿಸಲಾಗಿತ್ತು. ಕೆಲವು ದಾರಿಗಳು ನೋಡಲು ಸಹಜವಾದ ಕಲ್ಲುಗಳಿಂದ ಅಥವಾ ಇಟ್ಟಿಗೆಯಿಂದ ಮಾಡಿದ ದಾರಿಗಳಂತಿದ್ದವು. ಇಂಥ ಬಹುತೇಕ ದಾರಿಗಳನ್ನು ಪೊದೆ, ಮರಗಳು ಈಗ ಮುಚ್ಚಿದ್ದರೂ, ಕೆಲವು ಇನ್ನೂ ಅಸ್ತಿತ್ವದಲ್ಲಿವೆ. ಈ ದಾರಿಗಳ ನಿರ್ಮಾಣ ವಿನ್ಯಾಸ ವಿಶಿಷ್ಟವಾಗಿತ್ತು. ಯಾವುದೇ ಸೈನಿಕ ಈ ದಾರಿಯನ್ನು ಪ್ರವೇಶಿಸಿ ನಡೆಯಲಾರಂಭಿಸಿದರೆ, ಆತ ಜಾರಿ, ಬೆಟ್ಟದಿಂದ ಉರುಳಿ ಕೈಕಾಲು ಮುರಿದುಕೊಳ್ಳುವ ಇಲ್ಲವೇ ಪ್ರಾಣತೆತ್ತುವ ಸಾಧ್ಯತೆಯಿತ್ತು. ಅಲ್ಲದೆ ಈ ಮಾರ್ಗಗಳಲ್ಲಿ ಸಿಖ್ ಸೈನಿಕರು ಅಡಗಿ ಕುಳಿತು, ಸೈನಿಕರು ಹತ್ತಿರ ಬಂದಾಗ ಹಠಾತ್ ದಾಳಿ ನಡೆಸುತ್ತಿದ್ದರು. ಅವರು ಸೈನಿಕರನ್ನು ಬೇಸ್ತು ಬೀಳಿಸಿ ಹಿಡಿದು ಕೊಲ್ಲುತ್ತಿದ್ದರು.

**ನೀರಿನ ವ್ಯವಸ್ಥೆ**

ಲೋಹಗಡ ಕೋಟೆಯು ಕುಡಿಯುವ ನೀರಿನ ಸರಬರಾಜುವಿನ ಅತ್ಯಂತ ಶ್ರೇಷ್ಠವಾದ ವ್ಯವಸ್ಥೆಯೊಂದನ್ನು ರೂಪಿಸಿಕೊಂಡಿತ್ತು. ಕೋಟೆಯ ಒಂದು ಬದಿಯಲ್ಲಿ ಮಾರ್ಕಂಡ ಎಂಬ ದೊಡ್ಡ ನದಿಯಿತ್ತು. ಇದಲ್ಲದೆ ಕೋಟೆಯ ಸುತ್ತಮುತ್ತ ಎರಡು ಕಿರು ಝರಿಗಳು, 94 ಚಿಲುಮೆಗಳು, ನೀರಿನ ತಡಸಲುಗಳು, ಅಸಂಖ್ಯಾತ ಕುಂಟೆಗಳಿದ್ದವು. ಇವುಗಳ ಜೊತೆಗೆ ಕುಡಿಯಲು, ಸ್ನಾನ ಮಾಡಲು ಮತ್ತು ಕೃಷಿ ಬಳಕೆ ಮುಂತಾದವುಗಳಿಗಾಗಿ ಅನೇಕ ಕೆರೆಗಳನ್ನು, ಜಲಾಗಾರಗಳನ್ನು ನಿರ್ಮಿಸಿದ್ದರು. ಈಗಲೂ ಅಂಥ ನೂರಕ್ಕೂ ಹೆಚ್ಚಿನ ಜಲಾಗಾರಗಳು ಇನ್ನೂ ಅಸ್ತಿತ್ವದಲ್ಲಿವೆ.

**ಬೀಸುವ ಕಲ್ಲುಗಳು, ಎಣ್ಣೆಯ ಯಂತ್ರಗಳು ಮತ್ತು ಪಾತ್ರೆಗಳು**

ಕೋಟೆಯ ಬಹುತೇಕ ಬೆಟ್ಟಗಳಲ್ಲಿ, ಕೇವಲ ಕೆಳಹಂತದಲ್ಲಿ ಮಾತ್ರವಲ್ಲ, ಶಿಖರಸ್ಥಾನಗಳಲ್ಲಿಯೂ ಅಸಂಖ್ಯಾತ ಮಣ್ಣಿನ ಪಾತ್ರೆಗಳು, ಕೈ ಹಿಟ್ಟಿನ ಗಿರಣಿಗಳು, ಎಣ್ಣೆ ತೆಗೆಯುವ ಯಂತ್ರಗಳು ಕಂಡು ಬಂದಿವೆ. ಕೋಟೆಯಿರುವ ಬೆಟ್ಟಗಳಲ್ಲಿ ಅನೇಕ ಹಳ್ಳಿಗಳು ಇದ್ದಿರಬಹುದಾದ ಸಾಧ್ಯತೆಯನ್ನು ಇದು ರುಜುವಾತುಪಡಿಸುತ್ತದೆ. ಹಾಗಾಗಿ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರೂ ವಾಸವಿದ್ದಿರಬಹುದು. ಜೊತೆಗೆ ಸೈನಿಕರ ಕುಟುಂಬದವರು ಇಲ್ಲಿ ವಾಸವಿರಬಹುದು. ಇದು ಲೋಹಗಡ ಕೋಟೆಯು ತುಂಬಾ ದೊಡ್ಡದಾದ ಕೋಟೆಯಾಗಿತ್ತೆಂಬುದನ್ನು ಸಾಬೀತುಪಡಿಸುತ್ತದೆ.

**ಆಹಾರ ಧಾನ್ಯಗಳು**

ಲೋಹಗಡ ಕೋಟೆಯಲ್ಲಿ ಮತ್ತು ಅದರ ಸುತ್ತಲಿನ ಪ್ರದೇಶಗಳಲ್ಲಿ ಧಾನ್ಯ ಮತ್ತು ಬೇಳೆಕಾಳುಗಳನ್ನು ಸಂಗ್ರಹಿಸುವ ಕಣಜಗಳಿದ್ದ ಬಗ್ಗೆ ಸಾಕ್ಷ್ಯಗಳು ನಮಗೆ ದೊರೆತಿವೆ. ಇವುಗಳನ್ನು ದೊಡ್ಡ ಗಾತ್ರದ ಮಣ್ಣಿನ ವಾಡೆಗಳಲ್ಲಿ ಸಂಗ್ರಹಿಸಲಾಗುತ್ತಿತ್ತು. ಇತ್ತೀಚೆಗೆ ಒಂದು ಕ್ಷೇತ್ರದಲ್ಲಿ ದ್ವಿದಳ ಧಾನ್ಯ ಇನ್ನೂ ಇದ್ದ ದೊಡ್ಡ ವಾಡೆಯೊಂದು ಸಿಕ್ಕಿತು. ಇದು ಎರಡು ಮೂರು ಶತಮಾನಗಳ

ಹಿಂದಿನ ಪ್ರಾಚೀನ ವಾಡೆಯಾಗಿತ್ತು.

**ಶಸ್ತ್ರಾಸ್ತ್ರ ಕಾರ್ಖಾನೆಯ ಕುರುಹುಗಳು**

ಕೋಟೆಯ ಅನೇಕ ಭಾಗಗಳಲ್ಲಿ ಕಬ್ಬಿಣ ಮತ್ತು ಹಿತ್ತಾಳೆಯ ದೊಡ್ಡ ಪ್ರಮಾಣದ ತುಣುಕುಗಳು ದೊರೆತಿವೆ. ಈ ತುಣುಕುಗಳು ಎರಡರಿಂದ ಎರಡೂವರೆ ಕಿಲೋಮೀಟರ್ ಉದ್ದದ ಪ್ರದೇಶದಲ್ಲಿ ದೊರೆತಿವೆ. ಕೆಲವುಗಳು ಮುದ್ದೆಯ ಆಕಾರದಲ್ಲಿ ಅಥವಾ ಗಟ್ಟಿಯಾಗಿ ಕಂಡು ಬಂದಿವೆ. ಇದರಿಂದ ತಿಳಿದು ಬರುವುದೆಂದರೆ, ಆಗಿನ ಕಾಲದಲ್ಲಿ ಕಬ್ಬಿಣದ ಅದಿರನ್ನು ಇಲ್ಲಿ ತಂದು, ಭಟ್ಟಿಗಳಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಕಾಯಿಸಿ, ಅದಿರನ್ನು ಕರಗಿಸಿ, ಎರಕದಲ್ಲಿ ಹೊಯ್ದು, ಖಡ್ಗ, ಈಟಿ, ಭರ್ಜಿ, ಬಂದಾೂಕಿನ ನಳಿಕೆಗಳನ್ನು ತಯಾರಿಸಿರುವ ಸಾಧ್ಯತೆಯಿದೆ. ಅದರರ್ಥ ಅವರು ಅದಿರನ್ನು ಕರಗಿಸಿ, ಅದನ್ನು ನೀರು ಅಥವಾ ತೈಲ ಬಳಸಿ ತಣ್ಣಗೆ ಮಾಡುವ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದರು. ಈ ರೀತಿಯಲ್ಲಿ ತಯಾರಿಸಿದ ಶಸ್ತ್ರಗಳು ಬಹುಗಟ್ಟಿಯಾಗಿರುತ್ತಿದ್ದವು. ಸುಲಭವಾಗಿ ಮುರಿಯುತ್ತಿರಲಿಲ್ಲ. ಇದೇ ಪ್ರದೇಶದಲ್ಲಿ ಸಾಕಷ್ಟು ಅದಿರು, ಲೋಹದ ತುಣುಕು ಮತ್ತು ಹಿತ್ತಾಳೆಯ ಚೂರುಗಳು ದೊರೆತಿವೆ. ಇವುಗಳನ್ನು ಬಂದಾೂಕಿನ ಗುಂಡುಗಳ ತಯಾರಿಕೆಗೆ ಬಳಸುತ್ತಿದ್ದರು. ಬಹುಶಃ ಬಂದಾೂಕಿನ ನಳಿಕೆಗಳನ್ನು ಸಹ ಇಲ್ಲಿ ಉತ್ಪಾದಿಸಿರಬಹುದು.

ಗುರು ಹರ್‌ಗೋವಿಂದ್ ಅವರ ಕಾಲದಿಂದಲೂ ಸಿಖ್ ಸಮುದಾಯದ ಜೊತೆ ಗುರುತಿಸಿಕೊಂಡಿರುವ ಸಿಕ್ಲಿಗಾರ್‌ಗಳು ಶಸ್ತ್ರ ತಯಾರಿಕೆಯಲ್ಲಿ ನಿಪುಣರಾಗಿದ್ದರು. ಅವರ ಆಯುಧಗಳು ಗುರು ಹರಗೋವಿಂದ್‌ರವರ ಕಾಲದಿಂದಲೂ ತಯಾರಾಗಿರುವ ಸಾಧ್ಯತೆಯಿದೆ. ಈಗಲೂ ಸಹ ಲೋಹಗಡ ವಲಯದಲ್ಲಿ ಅನೇಕ ಸಂಖ್ಯೆಯ ಸಿಕ್ಲಿಗಾರ್ ಕುಟುಂಬಗಳು ವಾಸವಾಗಿವೆ.

ಶಸ್ತ್ರ ಕಾರ್ಖಾನೆ ಮತ್ತು ಆಯುಧಾಗಾರಗಳನ್ನು ಭಾವನಾಪುರ, ವಣಸಂತೂರು ಮತ್ತು ಶಹಜಾದ್‌ವಾಲ (ಈಗಿನ ಯಮುನಾನಗರ ಜಿಲ್ಲೆ) ಹಳ್ಳಿಗಳಲ್ಲಿ ಸ್ಥಾಪಿಸಲಾಗಿತ್ತು. ಸಿಖ್ ತಾಂಡಾಗಳು ಕಬ್ಬಿಣ ಮತ್ತು ತಾಮ್ರದ ಅದಿರನ್ನು ಓಡಿಸ್ಸಾದ ಗಣಿಗಳಿಂದ ತರುತ್ತಿದ್ದರು. ಇಲ್ಲಿ ಸಿಕ್ಲಿಗಾರರು ಡಮಾಸ್ಕಸ್ ಲೋಹ ಲೇಪಿತ ಉಕ್ಕಿನ ಬಲಶಾಲಿ ಖಡ್ಗಗಳನ್ನು ರೂಪಿಸುತ್ತಿದ್ದರು.

**ಗೊಂಬೆಗಳ ಉತ್ಪಾದನೆ**

ಲೋಹಗಡ ಕೋಟೆಯ ಅನೇಕ ಭಾಗಗಳಲ್ಲಿ ಅನೇಕ ಬಗೆಯ ಮುರಿದು ಬಿದ್ದ ಗೊಂಬೆಗಳು (ಉದಾ: ಒಂಟೆ, ಆನೆ, ಗುಬ್ಬಚ್ಚಿ, ಗಿಳಿ, ಗೊಂಬೆ ಇತ್ಯಾದಿ) ಸಿಕ್ಕಿವೆ. ಇವು ಸುಮಾರು 8 ಎಕರೆ ಪ್ರದೇಶದಲ್ಲಿ ಕಂಡುಬಂದಿವೆ. ಅಂದರೆ ಇಲ್ಲಿ ಸೈನಿಕರ ಕುಟುಂಬಗಳು ವಾಸವಾಗಿರುವ ಸಾಧ್ಯತೆಯನ್ನು ಹೇಳುತ್ತವೆ. ಅಲ್ಲಿನ ಕುಟುಂಬದಲ್ಲಿ ವಾಸವಿದ್ದ ಮಕ್ಕಳಿಗಾಗಿ ಈ ಗೊಂಬೆಗಳನ್ನು ತಯಾರಿಸುತ್ತಿದ್ದರೆಂದು ಕಾಣುತ್ತದೆ.

**ಲೋಹಗಡ ಕೋಟೆ, ಡಾಬರ್ ವಲಯ ಮತ್ತು ಅವುಗಳ ಸುತ್ತಮುತ್ತಲಿನ ಜಮೀನಿನ ಮಾಲೀಕ ಯಾರು?**

ಪ್ರಾಯಶಃ ಲಖಿ ರಾಯ್ ವಂಜಾರ 80 ಹಳ್ಳಿಗಳ ಮಾಲೀಕನಿರಬಹುದು. ಎಂಬತ್ತು ಹಳ್ಳಿಗಳು ಅಂದರೆ, ಲೋಹಗಡ ಕೋಟೆಯ ತಪ್ಪಲು ಪ್ರದೇಶ. ಆತ ಈ ಜಮೀನನ್ನು ತನ್ನ ನೌಕರರಿಗೆ ನೀಡಿದ್ದ. ಬಳಿಕ ಅವರನ್ನೂ ವಂಜಾರರು ಎಂದು ಕರೆಯಲಾಗುತ್ತಿತ್ತು. ಈತ ಎಲ್ಲ

ಗ್ರಾಮಗಳಲ್ಲೂ ಆಳದ ಬಾವಿಯನ್ನು ತೋಡಿಸಿರುವ ಕಾರಣ, ಆ ಹಳ್ಳಿಗಳ ಮಾಲೀಕತ್ವ ಅವನದೇ ಎನ್ನುವುದಕ್ಕೆ ಸಾಕ್ಷಿ. ಒಂದಲ್ಲ ಒಂದು ಕಾರಣಕ್ಕೆ ಬಹುತೇಕ ಬಾವಿಗಳು ಬತ್ತಿ ಹೋಗಿ ಇಲ್ಲವೇ ಪೊದೆ ಇತ್ಯಾದಿಗಳಿಂದ ಮುಚ್ಚಿ ಹೋಗಿ ಅಥವಾ ಕಾಣೆಯಾಗಿ ಹೋಗಿದ್ದರೂ ಕೆಲವು ಇನ್ನೂ ಜೀವಂತ ಸ್ಥಿತಿಯಲ್ಲಿ ಉಳಿದಿವೆ. ಇದುವರೆವಿಗೂ ಬಾವಿಗಳಿರುವ 52 ಹಳ್ಳಿಗಳನ್ನು ಗುರುತಿಸಲಾಗಿದೆ. ಉದಾ: ಬಂದಾ ಬಹದೂರ್‌ಪುರ, ಗರ್ಡಿ ವರಾಣ್, ಸಂಧಾಯ, ಮಷ್ರೋಲಿ ಇತ್ಯಾದಿ ಗ್ರಾಮಗಳ ಬಾವಿಗಳು. ಈ ಬಾವಿಗಳು ಸುಮಾರು 50 ಅಡಿ ಆಳವಾಗಿವೆ. ಇವುಗಳನ್ನು ನಾನಕ್ ಶಾಹಿ ಇಟ್ಟಿಗೆ ಮತ್ತು ಕತ್ತರಿಸಿದ ಕಲ್ಲು ಬಾಂದುಗಳಿಂದ ನಿರ್ಮಿಸಲಾಗಿದೆ. ಇಟ್ಟಿಗೆ ಮತ್ತು ಕಲ್ಲುಗಳನ್ನು ಗಾರೆಗಚ್ಚಿನಿಂದ ಜೋಡಿಸಿ ಕಟ್ಟಲಾಗಿದೆ. ಈಜಿಪ್ಟಿನ ಪಿರಮಿಡ್ ವಿನ್ಯಾಸದಲ್ಲಿ ಇಷ್ಟೊಂದು ಸಂಖ್ಯೆಯ ಬಾವಿಗಳನ್ನು ತೋಡಿಸಿ, ನಿರ್ಮಿಸುವುದು ಸುಲಭವಾದ ಕಾರ್ಯವಲ್ಲ. ಇಂಥ ಅಮೋಘವಾದ ಕಾಮಗಾರಿಯ ಬಗ್ಗೆ ಚರಿತ್ರೆಯಲ್ಲಿ ಉತ್ತರವಿಲ್ಲ. ಆ ಕಾಲದ ಅತ್ಯಂತ ದೊಡ್ಡ ವಣಿಕನಾಗಿದ್ದ ಲಖಿ ರಾಯ್ ವಂಜಾರನ ವಹಿವಾಟು ಮಧ್ಯ ಏಷ್ಯಾದಿಂದ ಶ್ರೀಲಂಕವರೆಗೆ ವ್ಯಾಪಿಸಿತ್ತು. ಹಾಗಾಗಿ ಆತನಿಗೆ ಎಲ್ಲ ಬಗೆಯ ವಾಸ್ತುಶೈಲಿ ಮತ್ತು ಕಟ್ಟಡ ನಿರ್ಮಾಣಗಳು ತಿಳಿದಿದ್ದವು. ಆತ ನಿರ್ಮಾಣಕ್ಕೆ ಬೇಕಾದ ವಸ್ತುಗಳನ್ನು ಮಾತ್ರ ಆಮದು ಮಾಡಿಕೊಳ್ಳಲಿಲ್ಲ. ಅದರ ಜೊತೆಗೆ ಜಗತ್ತಿನ ಬೇರೆ ಬೇರೆ ಭಾಗಗಳಿಂದ ಈ ಕಾರ್ಯದಲ್ಲಿ ಪರಿಣಿತರಾದವರನ್ನು, ಕೆಲಸಗಾರರನ್ನು ಕರೆತಂದ. ಕೆಲವು ಹಳ್ಳಿಗಳಲ್ಲಿ ಲಖಿ ರಾಯ್ ಬಂಜಾರ ಸಣ್ಣ ಕೋಟೆಗಳನ್ನು ಸಹ ನಿರ್ಮಿಸಿದ. ಉದಾ: ಬುರ್ಧಿಯ, ಗರಿ ವಂಜಾರ, ದಿಯಾಲ್‌ಗಡ, ಸೂಹ್, ದೀನ್, ಮೌಲನ, ಮನ್ಸೂರ್‌ಪುರ್ ಇತ್ಯಾದಿ.

ಲೋಹಗಡ, ಕೋಟೆಗೆ ಸಂಬಂಧಿಸಿದಂತೆ, ಲಖಿ ರಾಯ್ ಬಂಜಾರನಂತಹ ಶ್ರೀಮಂತ ವ್ಯಕ್ತಿ ಮಾತ್ರವೇ ನಿರ್ಮಿಸಲು ಸಾಧ್ಯ. ಆತನ ಬಳಿ ಸಾವಿರಾರು ಸಂಖ್ಯೆಯ ಯುವ ಕೆಲಸಗಾರರ ಪಡೆಯಿತ್ತು. ಅವರಿಗೆ ಸೇನಾ ತರಬೇತಿಯೂ ಇತ್ತು. ಈ ಕೋಟೆಯನ್ನು ನಿರ್ಮಿಸಲು ಅಪಾರ ಪ್ರಮಾಣದ ಕಲ್ಲು, ಇಟ್ಟಿಗೆ ಮತ್ತು ಸುಣ್ಣವನ್ನು ಬಳಸಲಾಯಿತು. ಅಷ್ಟೊಂದು ಬೃಹತ್ ಪ್ರಮಾಣದ ನಿರ್ಮಾಣ ವಸ್ತುಗಳನ್ನು ತಂದು ಸಂಗ್ರಹಿಸುವ ಕಾರ್ಯ ಕೇವಲ ನೂರಾರು ಜನರಿಂದ ಸಾಧ್ಯವಾಗುತ್ತಿರಲಿಲ್ಲ. ಸಾವಿರಾರು ಜನರಿದ್ದ ನೂರಾರು ತಾಂಡಾ (ಚಲಿಸುವ ವ್ಯಾಪಾರಿ ಗುಂಪು)ಗಳಿಂದ ಮಾತ್ರ ಇಂಥ ಕೆಲಸ ಸಾಧ್ಯವಾಗುತ್ತಿತ್ತು. ಲಖಿ ರಾಯ್ ವಂಜಾರನಿಗೆ ಇಂಥ ಕೋಟೆ ಮತ್ತು ಅರಮನೆಗಳನ್ನು ನಿರ್ಮಿಸುವುದರಲ್ಲಿ ಅನುಭವವಿತ್ತು. ಆತ ದೆಹಲಿಯ ಕೆಂಪು ಕೋಟೆ ಮತ್ತು ಮರಾಠರ ಕೋಟೆಗಳ ನಿರ್ಮಾಣಕ್ಕೆ ಕಲ್ಲು, ಸುಣ್ಣ ಮತ್ತು ಮರಮುಟ್ಟುಗಳ ಸರಬರಾಜುದಾರನಾಗಿದ್ದ. ಆತ ದೆಹಲಿಯಲ್ಲಿ ತನಗಾಗಿ **'ಮತಿಯ ಮಹಲ್'** ಎಂಬ ಅರಮನೆಯನ್ನು ಜೊತೆಗೆ ಹಲವಾರು ಕಟ್ಟಡಗಳನ್ನು ಕಟ್ಟಿಸಿಕೊಂಡಿದ್ದ. ಈ ಲೋಹಗಡದಂತ ಬೃಹತ್ ಕೋಟೆಯ ನಿರ್ಮಾಣಕ್ಕೆ ಅಗತ್ಯವಾದ ಸರಕು ಮತ್ತು ಕಾರ್ಯಪಡೆಯನ್ನು ಒದಗಿಸುವ ಹೊಣೆಗಾರಿಕೆಯನ್ನು ಗುರು ಹರ್‌ರಾಯ್ ಸಾಹಿಬ್ ಅವರು ಲಖಿ ರಾಯ್ ವಂಜಾರ ಅವರಿಗೆ ವಹಿಸಿರುವಂತೆ ಕಾಣುತ್ತದೆ.

ಕೋಟೆಯ ನಿರ್ಮಾಣ ಮಾತ್ರವಲ್ಲ, ಬಟ್ಟೆ, ಹೊದಿಕೆ, ತಲೆದಿಂಬು, ಧಾನ್ಯ, ಬೀಸುವ ಯಂತ್ರ, ತೈಲ ಯಂತ್ರ ಇತ್ಯಾದಿಗಳನ್ನು ಸಹ ಲಖಿ ರಾಯ್ ವಂಜಾರ ಮತ್ತು ಅವನ ಮಕ್ಕಳು ಮತ್ತು ಮೊಮ್ಮಕ್ಕಳು ಪೂರೈಸಿರಬಹುದು. ಸಿಖ್ ಸೈನಿಕರು ಲೋಹಗಡ ಕೋಟೆಯನ್ನು ತೊರೆದಾಗ ಮುಘಲ್ ಸೈನಿಕರು ಕೋಟೆಯನ್ನು ಮುತ್ತಿಗೆ ಹಾಕಿ ರೇಷ್ಮೆ ವಸ್ತ್ರಗಳನ್ನು ಲೂಟಿ ಮಾಡಿದ ಬಗ್ಗೆ ಕೆಲವು ಪರ್ಶಿಯನ್ ಲೇಖಕರು ಉಲ್ಲೇಖಿಸಿದ್ದಾರೆ. ಈ ರೇಷ್ಮೆ ವಸ್ತ್ರಗಳನ್ನು ಲಖಿ ರಾಯ್

ವಂಜಾರ ಚೀನಾ ಮತ್ತು ಮಧ್ಯ ಏಷ್ಯಾ ದೇಶಗಳಿಂದ ತಂದಿರಬೇಕು. ಇಲ್ಲದಿದ್ದರೆ, ಊಟಕ್ಕೂ ಕಷ್ಟಪಡಬೇಕಾದಂತಹ ಸ್ಥಳದಲ್ಲಿ ಅಂತಹ ಅಮೂಲ್ಯವಾದ ವಸ್ತ್ರಗಳು ಸಿಗುವ ಸಾಧ್ಯತೆಯೇ ಇರಲಿಲ್ಲ.

ಮೇಲೆ ಹೇಳಿದಂತೆ, ಲಖಿ ರಾಯ್ ಅವರ ಮಕ್ಕಳು ಮತ್ತು ಮೊಮ್ಮಕ್ಕಳು ಬಂದಾ ಸಿಂಗ್ ಸೇನೆಯ ಭಾಗವಾಗಿದ್ದರು. ಅವರೆಲ್ಲರೂ ಮುಘಲರ ವಿರುದ್ಧ ನಡೆದ ಯುದ್ಧದಲ್ಲಿ ಹತರಾದರು. ಎಲ್ಲರೂ ಹತರಾದ ನಂತರವೇ ಮುಘಲರು ಕೋಟೆಯನ್ನು ವಶಪಡಿಸಿಕೊಂಡಿರಬಹುದು. ಮುಘಲ್ ಸೈನಿಕರು ಕೋಟೆಯನ್ನು ಉರುಳಿಸಿ ಇಟ್ಟಿಗೆ ಮತ್ತು ಕಲ್ಲುಗಳನ್ನು ಗಾಡಿಗಳಲ್ಲಿ ತುಂಬಿ ಆ ವಲಯದಿಂದ ದೂರಕ್ಕೆ ಸಾಗಿಸಿದರು. ಸಿಕ್ಖರು ಮತ್ತೆ ಕೋಟೆಯನ್ನು ನಿರ್ಮಿಸದಂತೆ ಮಾಡಲು ಮುಘಲರು ಈ ಕಾರ್ಯವನ್ನು ಮಾಡಿದರು.

**ಲೋಹಗಡ ಕೋಟೆಯನ್ನು ಯಾರು ಕಟ್ಟಿದವರು ಮತ್ತು ಅದನ್ನು ನಿರ್ಮಿಸಲು ತೆಗೆದುಕೊಂಡ ಕಾಲಾವಧಿ**

ಕೆಲವು ಚರಿತ್ರೆಕಾರರು, ಈ ಕೋಟೆಯು ಬಂದಾ ಬಹದ್ದೂರ್ ಇರುವ ಕಾಲಕ್ಕೇ ಅಸ್ತಿತ್ವದಲ್ಲಿತ್ತು ಎಂದು ಹೇಳುತ್ತಾರೆ. ಸಮನ, ಘುರಂ, ಕಪೂಲಿ, ಶಹಬಾದ್ ಮೊದಲಾದ ಕೋಟೆಗಳನ್ನು ವಶಪಡಿಸಿಕೊಂಡ ನಂತರ ಲೋಹಗಡ ಕೋಟೆಯನ್ನೂ ಆತ ವಶಮಾಡಿಕೊಂಡಿರಬಹುದು. ಅನಂತರ ಅದನ್ನು ದುರಸ್ತಿಗೊಳಿಸಿ, ನವೀಕರಣ ಮಾಡಿ ತನ್ನ ರಾಜಧಾನಿಯನ್ನು ಇಲ್ಲಿ ಸ್ಥಾಪಿಸಿರಬಹುದು ಎಂಬ ಅವರ ಈ ಹೇಳಿಕೆ ಒಂದು ತಮಾಷೆಯಾಗಿ ಕಾಣುತ್ತದೆ. ಕೋಟೆಯು ಹತ್ತು ಹದಿನೈದು ಬೆಟ್ಟಗಳಲ್ಲಿ ಸುಮಾರು 7000 ಎಕರೆಯಲ್ಲಿ ಹರಡಿವೆ. ಹಾಗಾಗಿ ಅದನ್ನು ಒಂದೆರಡು ತಿಂಗಳು ಅಥವಾ ವರ್ಷದಲ್ಲಿ ನಿರ್ಮಿಸುವುದು ದುಸ್ಸಾಧ್ಯ. ಅದನ್ನು ಪೂರ್ಣಗೊಳಿಸಲು 70–80 ವರ್ಷಗಳು ಬೇಕು. ಲಖಿ ರಾಯ್ ವಂಜಾರನೇ ಇದಕ್ಕೆ ಅಗತ್ಯವಾದ ನಿರ್ಮಾಣ ಸರಕುಗಳನ್ನು ಸರಬರಾಜು ಮಾಡಿದ್ದರೂ, ಬಹುದೂರದ ಪ್ರದೇಶಗಳಿಂದ ಅವುಗಳನ್ನು ಬೆಟ್ಟಗಳ ಬೇರೆ ಬೇರೆ ಹಂತಗಳಿಗೆ ಸಾಗಿಸಲು ದೀರ್ಘ ಸಮಯ ಹಿಡಿದಿರಲೇಬೇಕು.

ಗುರು ಹರ್ ಗೋವಿಂದ್ ಸಿಂಗ್ ಅವರು 1635ರಲ್ಲಿ ಬಂದಾ ಸಮಯದಲ್ಲಿ ಕೀರತ್‌ಪುರಕ್ಕೆ ಕೋಟೆಯ ನಿರ್ಮಾಣ ಆರಂಭವಾಗಿರಬೇಕು. ಆದರೆ ಈ ಕೋಟೆಯ ಬಹುಭಾಗ ಕಾರ್ಯವು ಗುರು ಹರ್‌ರಾಯ್ ಸಾಹಿಬ್ ಅವರ ಕಾಲದಲ್ಲಿಯೇ ಆಗಿರಬೇಕು. ಮೌಬಾದ್ ಜುಲ್ಫೀಕರ್ ಅರ್ದಸ್ತಾನಿ ಅವರ ಕೃತಿ 'ದಬಾಯಿಸ್ತಾನ್–ಐ–ಮುಜಾಹಿಬಾದ್' ಪ್ರಕಾರ ಗುರು ಹರ್ ರಾಯ್ ಅವರು ಸುಮಾರು 13 ವರ್ಷಗಳನ್ನು (1645 ರಿಂದ 1657) ಲೋಹಗಢ್ ವಲಯದಲ್ಲಿರುವ ತಪಲ್[(3)] ಗ್ರಾಮದಲ್ಲಿ ಕಳೆದರು. ಗುರು ಅವರಲ್ಲಿ 2200 ಕುದುರೆಗಳಿದ್ದವು. (ಅಷ್ಟೇ ಸಂಖ್ಯೆಯ ಸೈನಿಕರೂ ಇದ್ದರೆಂಬುದು ಅದರರ್ಥ) ಇದು ಸಾಕಷ್ಟು ಹುಲ್ಲುಗಾವಲಿದ್ದ ಮತ್ತು ನೀರು ಸರಬರಾಜು ಇದ್ದ, ಕುದುರೆಗಳ ವಾಸಕ್ಕೆ ಅನುಕೂಲಕರವಾದ ಪ್ರದೇಶವಾಗಿತ್ತು.

ಗುರು ಹರ್ ರಾಯ್ ಸಾಹಿಬ್‌ರವರು ತಂಗಿದ್ದ ಕಾಲದಲ್ಲಿ ಲಖಿ ರಾಯ್ ವಂಜಾರ ಅವರನ್ನು ಭೇಟಿಯಾಗುತ್ತಿದ್ದರು. ಕೋಟೆಯ ನಿರ್ಮಾಣದ ಉಸ್ತುವಾರಿಯನ್ನು ಗುರುಗಳು ನಿರ್ವಹಿಸಿರುವಂತೆ ಕಾಣುತ್ತದೆ. ಲೋಹಗಡ ಕೋಟೆಯ ಕೇಂದ್ರ ಭಾಗವು ಇಲ್ಲಿಂದ ಹದಿನೈದು ಕಿ.ಮೀ. ದೂರದಲ್ಲಿದೆ. ಆಧುನಿಕ ರಸ್ತೆಗಳಲ್ಲಿ ಸಂಚರಿಸಿದರೆ ದೂರ 25 ಕಿ.ಮೀ.ಗಳಷ್ಟಾಗುತ್ತದೆ.

ತಪಲ್ ಮತ್ತು ಪಾವೊಂಟ ಸಾಹಿಬ್ ನಡುವೆ ಇರುವುದು ಕಾಲೇಸರ್ ಅರಣ್ಯ ಪ್ರದೇಶ ಮಾತ್ರ. (ಈಗ ಅದು ಕಾಲೇಸರ್ ವನ್ಯಜೀವಿ ಅಭಯಾರಣ್ಯವಾಗಿದೆ) ಲೋಹಗಡ ತಲುಪಲು ಇರುವ ಇನ್ನೊಂದು ಮಾರ್ಗವು ಸುಖ್ ಚೈನಾಪುರ ಮೂಲಕ ಸಾಗುತ್ತದೆ. ಸುಖ್ ಚೈನಾಪುರ ಹಳ್ಳಿಗೆ ಆ ಹೆಸರು ಅಲ್ಲಿ ಬದುಕಿದ್ದ ಸುಖ್‌ಚೈನ್ ಸಿಂಗ್ ವ್ಯಕ್ತಿಯ ಹೆಸರಿನಿಂದ ಬಂದಿದೆ. ಬಹುಶಃ ಆತ ಲಖಿ ರಾಯ್ ಬಂಜಾರದ ವಂಶಸ್ಥನಿರಬೇಕು.

ಈ ಹಿಂದೆ ಉಲ್ಲೇಖಿಸಿರುವಂತೆ, ಎಲ್ಲಾ ಕಟ್ಟಡ ಸಾಮಗ್ರಿಗಳನ್ನು ಲಖಿ ರಾಯ್ ವಂಜಾರ ಮತ್ತು ಅವರ ವ್ಯಾಪಾರಿ ತಂಡ ಇಲ್ಲಿಗೆ ತಂದು ಹಾಕಿದೆ. ಅವರು ಇಲ್ಲಿ ಇಟ್ಟಿಗೆ ಭಟ್ಟಿಯನ್ನು ಸ್ಥಾಪಿಸಿರುವ ಸಾಧ್ಯತೆಯೂ ಇದೆ. ಹತ್ತು–ಹನ್ನೆರಡು ಬೆಟ್ಟಗಳಲ್ಲಿರುವ ಕೋಟೆಯ ಗೋಡೆಗಳಿಗೆ ನಾನಕ್‌ಶಾಹಿ ಇಟ್ಟಿಗೆಗಳನ್ನು ಬಳಸಲಾಗಿದೆ. ಕೋಟೆಯ ಬಹುತೇಕ ಭಾಗಗಳಲ್ಲಿ ಮುಘಲರು ಕಲ್ಲು, ಇಟ್ಟಿಗೆ, ಗಾರೆಯನ್ನು ತೆಗೆದುಹಾಕಿದ್ದರೂ, ಎಲ್ಲೆಡೆಯಲ್ಲಿಯೂ, ಕೋಟೆಗಳ ಎಲ್ಲ ಹಂತಗಳಲ್ಲಿಯೂ, ನಾನಕ್‌ಶಾಹಿ ಇಟ್ಟಿಗೆಗಳ ಕುರುಹು ಕಾಣಸಿಗುತ್ತವೆ.

**ಲಖಿ ರಾಯ್ ವಂಜಾರ ಯಾರು?**[4]

ಸಿಖ್ ಚರಿತ್ರೆಯನ್ನು ಬಲ್ಲವರೆಲ್ಲರಿಗೂ ಭಾಯ್ ಲಖಿ ರಾಯ್ ವಂಜಾರ ಅವರ ಬಗ್ಗೆ ತಿಳಿದಿರುವ ಮಾಹಿತಿಯೆಂದರೆ, ಅವರು ಚಾಂದನಿ ಚೌಕದಲ್ಲಿ ಶಿರಚ್ಛೇದನಗೊಂಡ ಗುರು ತೇಗ್ ಬಹದ್ದೂರ್ ಅವರ ಶಿರವಿಲ್ಲದ ದೇಹವನ್ನು ಅಲ್ಲಿಂದ ಎತ್ತಿ ತಂದು ತನ್ನ ಮನೆಯಲ್ಲಿಟ್ಟು, ಮನೆಗೆ ಬೆಂಕಿಹಾಕಿ ಅಂತಿಮ ಸಂಸ್ಕಾರ ಮಾಡಿದ ಕತೆ. ಅವರು ಭಾಯ್ ಲಖಿ ರಾಯ್ ವಂಜಾರ ಎಂದೇ ಪ್ರಸಿದ್ಧರು. ಆದರೆ ಭಾಯ್ ಲಖಿ ರಾಯ್ ಅವರ ಕುಟುಂಬದವರು ಅಂದರೆ ಅವರ ತಂದೆ, ತಾತ ಮತ್ತು ಇತರರು ಗುರುನಾನಕ್‌ರವರ ಕಾಲದಿಂದಲೂ ಸಿಖ್ ಧರ್ಮದ ಅನುಯಾಯಿಗಳಾಗಿದ್ದರೆಂಬುದು ಅವರಿಗೆ ತಿಳಿದಿಲ್ಲ.

1508ರಲ್ಲಿ ಗುರುನಾನಕ್ ಮತ್ತು ಭಾಯ್ ಮರ್ದನ ಅವರು ತಮ್ಮ ಮೊದಲ ಉದಾಸಿ (ಧರ್ಮಯಾತ್ರೆ) ಕೈಗೊಂಡರು. ಹಾದಿಯಲ್ಲಿ ಒಮ್ಮೆ ವ್ಯಾಪಾರಿ ಮುಖಂಡನ ಕುಟುಂಬದಲ್ಲಿ ಗಂಡು ಮಗುವು ಹುಟ್ಟಿದ ಕಾರಣಕ್ಕೆ ಏರ್ಪಡಿಸಿದ ಸಂತೋಷ ಸಮಾರಂಭ ನಡೆಯುತ್ತಿದ್ದ ಸ್ಥಳಕ್ಕೆ (ಈಗ ಅದನ್ನು ತಾಂಡಾ[5] ಎಂದು ಕರೆಯುತ್ತಾರೆ) ಬಂದರು. ಅವರು ಆ ಸ್ಥಳದಲ್ಲಿ ನಿಂತು ಸ್ತೋತ್ರ ಗೀತೆಗಳನ್ನು ಪಠಿಸಿದರು. ಗುರುವಿನ ಸ್ತೋತ್ರವಾಣಿಯನ್ನು ಕೇಳಿಸಿಕೊಳ್ಳಲಾರದಷ್ಟು ಗಡಿಬಿಡಿಯಲ್ಲಿ ವಂಜಾರ (ವ್ಯಾಪಾರಿಗಳು)ರು ಸಂಭ್ರಮಾಚರಣೆಯಲ್ಲಿ ನಿರತರಾಗಿದ್ದರು. ಅವರು ಗುರುಗಳಿಗೆ ಊಟವನ್ನೂ ನೀಡಲಿಲ್ಲ. ಕೆಲವು ಸಮಯದ ನಂತರ ಗುರು ಆ ಸ್ಥಳವನ್ನು ಬಿಟ್ಟು ತಮ್ಮ ಪ್ರಯಾಣ ಬೆಳೆಸಿದರು.

ದುರಾದುಷ್ಟವಶಾತ್, ನವಜಾತ ಶಿಶು ಸಂಭ್ರಮಾಚರಣೆಯ ನಡುವೆಯೇ ಅಸುನೀಗಿತು. ಸಂಭ್ರಮಾಚರಣೆ ಶೋಕಾಚರಣೆಯಾಗಿ ಮಾರ್ಪಟ್ಟಿತು. ಆಗ ಇದ್ದಕ್ಕಿದ್ದಂತೆ ಒಬ್ಬ "ನಮ್ಮ ಸಂಭ್ರಮದ ಹತ್ತಿರವೇ ನಿಂತು ಸ್ತೋತ್ರಗೀತೆಗಳನ್ನು ಹಾಡುತ್ತಿದ್ದ ಇಬ್ಬರು ಫಕೀರರನ್ನು ನಾವು ಗಮನಿಸಲಿಲ್ಲ. ಅವರು ನಮಗೆ ಶಾಪ ನೀಡಿರಬೇಕು. ಅಥವಾ ಅಂತ ಸಂತರನ್ನು ಉಪಚರಿಸದ ನಮಗೆ ದೇವರೇ ಶಾಪ ನೀಡಿರಬಹುದು" ಎಂದು ಉದ್ಗರಿಸಿದ. ಇನ್ನಿತರ ವ್ಯಕ್ತಿಗಳು ಇದನ್ನು ಅನುಮೋದಿಸಿದರು. ಆಗ ಗುರು ಮತ್ತು ಭಾಯಿ ಮರ್ದನಾ ಅವರನ್ನು ಹುಡುಕಲು ಕುದುರೆ ಸವಾರರನ್ನು ಅಟ್ಟಿದರು.

ಅವರು ತುಂಬಾ ದೂರ ಹೋಗಿರಲಿಲ್ಲ. ಒಬ್ಬ ಸವಾರನ ಕಣ್ಣಿಗೆ ಬಿದ್ದರು. ಆತ ತಮ್ಮನ್ನು ಕ್ಷಮಿಸಬೇಕೆಂದು, ತಾವಿರುವ ಸ್ಥಳಕ್ಕೆ ಹಿಂದಿರುಗಬೇಕೆಂದು ಬೇಡಿಕೊಂಡ. ಹಾಗೆ ಬಾರಿ ಒತ್ತಾಯ ಮಾಡಿದ ನಂತರ ಗುರು ಮತ್ತು ಭಾಯ್ ಮರ್ದಾನ ಆ ಸ್ಥಳಕ್ಕೆ ಮರಳಿ ಬಂದರು.

ಗುರು ಆ ನಿರ್ದಿಷ್ಟ ಸ್ಥಳಕ್ಕೆ ಆಗಮಿಸಿದರು. ಆಗ ವಂಜಾರರ ಮುಖ್ಯಸ್ಥ ತಮ್ಮಿಂದಾದ ಲೋಪಕ್ಕೆ ಕ್ಷಮೆ ನೀಡಬೇಕೆಂದು ಕೋರಿದ. ಹಾಗೆಯೇ ಮಗುವಿಗೆ ಮತ್ತೆ ಜೀವ ಬರಲು ಪ್ರಾರ್ಥಿಸಬೇಕೆಂದು ಗುರುವನ್ನು ಕೋರಿದ. ಆಗ ಗುರು "ಹುಟ್ಟು ಮತ್ತು ಸಾವು ದೇವರ ಕೈಯಲ್ಲಿದೆ. ಅದನ್ನು ಬದಲಿಸುವ ಶಕ್ತಿ ಯಾರಿಗೂ ಇಲ್ಲ. ಮಗುವು ಬದುಕಲು ದೇವರು ಒಂದೆರಡು ಗಂಟೆ ಮಾತ್ರ ಆಯಸ್ಸು ದಯಪಾಲಿಸಿದ್ದರೆ ಅವನ ಸಂಕಲ್ಪವನ್ನು ಬದಲಿಸಲು ಪ್ರಾರ್ಥನೆ ಏಕೆ ಮಾಡಬೇಕು? ಅಂಥದೊಂದು ಅಲೌಕಿಕ ಶಕ್ತಿಯಾಗಲೀ ಇಲ್ಲ. ಅಂಥ ಪವಾಡ ಸಹ ಸಾಧ್ಯವಿಲ್ಲ. ಅಂಥವುಗಳೇನಾದರೂ ಇದ್ದಲ್ಲಿ ದೈವಾಜ್ಞೆ ಎನ್ನುವುದು ಅಂತಿಮ ಆದೇಶವಾಗಲು ಸಾಧ್ಯವಿಲ್ಲ" ಎಂದು ಹೇಳಿ ಗುರುಗಳು ಈ ಅರ್ಥ ಬರುವ ಸ್ತೋತ್ರಗೀತೆಯನ್ನು ಹೇಳಿದರು–

"ಒಂದೇ ಉಸಿರಿರುವ ನಾವು ಮರಣಿಸುವ ಮರ್ತ್ಯರು.
ನಾನಕ್ ಪ್ರಾರ್ಥಿಸುತ್ತಾನೆ.
ನಮ್ಮ ಜನನ ಮತ್ತು ಮರಣದ ನಿರ್ಧಾರಕನಾದ ಆತನನ್ನು ನಾವೆಲ್ಲ ಪೂಜಿಸೋಣ"

ಈಗ ವಂಜಾರರಿಗೆ ನಿಜ ದರ್ಶನವಾಯಿತು. ಇದಾದ ನಂತರ ಗುರು ಮಗುವಿನ ತಂದೆ ತಾಯಿಗಳು ಬಂಧುಗಳು ಮತ್ತು ಹಿತೈಷಿಗಳ ಮನಶ್ಶಾಂತಿಗಾಗಿ ದೇವರನ್ನು ಪ್ರಾರ್ಥಿಸಿದರು. ತಮ್ಮೊಡನೆ ಕೆಲವು ಕಾಲ ಉಳಿಯುವಂತೆ ಗುರುವನ್ನು ವಂಜಾರರು ಕೋರಿಕೊಂಡರು. ಗುರುವು ಒಪ್ಪಿ ಅವರಲ್ಲಿ ಕೆಲವು ದಿನ ಉಳಿದರು. ಪ್ರತಿದಿನ ಬೆಳಿಗ್ಗೆ ಮತ್ತು ಸಾಯಂಕಾಲ ಸಭೆಯನ್ನು ನಡೆಸಿ ತಮ್ಮ ಉದ್ದೇಶವನ್ನು ತಿಳಿ ಹೇಳಿದರು. ಆಗ ಭಾಯ್ ಠಾಕರ್ (ಗೋಧು ಅವರ ತಂದೆ ಹಾಗೂ ಲಖಿ ರಾಯ್ ವಂಜಾರ ಅವರ ಅಜ್ಜ) ಗುರುನಾನಕರ ಧರ್ಮವನ್ನು ಸ್ವೀಕರಿಸಿದರು. ಅಂದಿನಿಂದ ಅವರ ಕುಟುಂಬ ಸಿಖ್ ಜಗತ್ತಿನ ಭಾಗವಾಗಿ ಉಳಿಯಿತು. ಎಲ್ಲ ಗುರುಗಳ ಕಾಲದಲ್ಲೂ ಪಂಥಕ್ಕೆ ನಡೆದುಕೊಳ್ಳುತ್ತಾ ಬಂದರು.

**ಸಿಖ್ ವಂಜಾರರ ಚರಿತ್ರೆ**

ವಂಜಾರರು ಎಂದರೆ ವ್ಯಾಪಾರಿಗಳು ಎಂದರ್ಥ. ಹದಿನೆಂಟನೇ ಶತಮಾನದವರೆಗೂ ಬಹುತೇಕ ವ್ಯಾಪಾರವನ್ನು ನಿರ್ವಹಿಸುತ್ತಿದ್ದವರು ವಂಜಾರರು. ಇವರು ವಿವಿಧ ಬಗೆಯ ಸರಕು ಸರಂಜಾಮುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಿ ವ್ಯಾಪಾರ ಮಾಡುತ್ತಿದ್ದರು. ಅವರ ವ್ಯಾಪಾರದ ಸರಕಿನಲ್ಲಿ ಆಹಾರ ವಸ್ತುಗಳು, ಬಟ್ಟೆ, ನಿರ್ಮಾಣ ಸಾಮಗ್ರಿ ಮತ್ತು ಹೊತ್ತೊಯ್ಯಬಹುದಾದ ಯಾವುದೇ ವಸ್ತುಗಳು ಸೇರಿದ್ದವು. ಈ ಸರಕನ್ನು ಒಂಟೆ, ಆನೆ, ಕುದುರೆ, ಎತ್ತು, ಕತ್ತೆ ಇತ್ಯಾದಿಗಳ ಮೂಲಕ ಸಾಗಿಸಲಾಗುತ್ತಿತ್ತು. ಹದಿನೇಳನೇ ಶತಮಾನದಲ್ಲಿ ದಕ್ಷಿಣ ಏಷ್ಯಾ ಮತ್ತು ಮಧ್ಯ ಏಷ್ಯಾದಲ್ಲಿ ಮೂರು ವ್ಯಾಪಾರಿ ಸಮುದಾಯಗಳಿದ್ದವು. 1. ಬಂಗೇಶ್ರೀ (ಪರ್‌ಮಾರ್ ರಜಪೂತರು) ಬಖಾಂಖಶ್ಯ ಬಲ್ಲು ಅವರ ಇಬ್ಬರು ಗಂಡುಮಕ್ಕಳ ನೇತೃತ್ವದ ತಂಡ. 2. ಬಖಾಂಖಶ್ಯ ಮಖನ್ ಶಾಲುಬಾನ (ತೋಮರ್ ರಜಪೂತ) ಕುಟುಂಬ. 3. ಭಾಯಿ ಲಖಿ ರಾಯ್ ವಂಜಾರ (ಯಾದವ ರಜಪೂತ) ಕುಟುಂಬ. ಈ ಮೂರು ಕುಟುಂಬಗಳೂ ತಮ್ಮಲ್ಲಿ

ಸಾವಿರಾರು ಒಂಟೆ, ಆನೆ, ಕುದುರೆ, ಎತ್ತು, ಕತ್ತೆ ಇತ್ಯಾದಿಗಳ ಮಾಲೀಕತ್ವ ಹೊಂದಿದ್ದವು. ತಮ್ಮ ವ್ಯಾಪಾರಿ ಸರಕು, ಪ್ರಾಣಿ ಮತ್ತು ಹಣವನ್ನು ಸಂರಕ್ಷಿಸಲು ಮತ್ತು ನಿರ್ವಹಿಸಲು ಪ್ರತಿಯೊಂದು ಕುಟುಂಬ ಸಾವಿರಾರು ಸಂಖ್ಯೆಯಿದ್ದ ಯುವ ಪಡೆಯನ್ನು ಕಟ್ಟಿಕೊಂಡಿತ್ತು. ಈ ಮೂವರು ವ್ಯಾಪಾರಿ ಕುಟುಂಬದವರಲ್ಲಿ ಗೋಧುವಿನ ಮಗ ಮತ್ತು ಠಾಕರ್‌ನ ಮೊಮ್ಮಗನಾದ ಲಖಿ ರಾಯ್ ಬಂಜಾರ ಅತ್ಯಂತ ಶ್ರೀಮಂತ ವ್ಯಾಪಾರಿಯಾಗಿದ್ದ.

ಭಟ್‌ವಾಹಿ ಕರ್‌ಸಿಂದು ಅವರ ಪ್ರಕಾರ ಲಖಿ ರಾಯ್ ವಂಜಾರ ಈಗ ಪಾಕಿಸ್ತಾನದಲ್ಲಿರುವ ಆಲಿಪುರ್ ಜಿಲ್ಲೆಯ ಮುಜ಼ಾಪುರ ತಾಲೂಕಿನ ಕೈರಾಪುರ ಸದತ್ ಹಳ್ಳಿಯಲ್ಲಿ 1637ರ ಶಕೆ ಶ್ರಾವಣಾಬ್ದಿ ಅಷ್ಟಮಿ ಸಮ್ಮಲ್ (14.07.1580)ರಲ್ಲಿ ನಾಯಕ್ ಗೋಧು ಅವರ ಮನೆಯಲ್ಲಿ ಜನಿಸಿದ. ನಾರ್ನುವಲ್ (ಹರಿಯಾಣ) ಪ್ರದೇಶದ ಕೆಲವು ವಂಜಾರರು ಭಾಯ್ ಲಖಿ ರಾಯ್ ದಕ್ಷಿಣ ಹರಿಯಾಣದಲ್ಲಿ ಹುಟ್ಟಿ ವ್ಯಾಪಾರದ ಕಾರಣಕ್ಕಾಗಿ ದೆಹಲಿಗೆ ಸ್ಥಳ ಬದಲಾಯಿಸಿದರೆಂದು ಹೇಳುತ್ತಾರೆ.

ಅವರಿಗೆ ಏಷ್ಯಾ ಖಂಡದ ಬೇರೆ ಬೇರೆ ಭಾಗಗಳಲ್ಲಿ ಜಮೀನಿನ ಒಡೆತನವಿತ್ತು. ರೈಸಿನ, ಮಾಲ್ಚ, ನರೇಲ, ಬಾರ ಖಂಬ ಹಳ್ಳಿಗಳು ಹಾಗೂ ಈ ಹಳ್ಳಿಗಳ ಸುತ್ತಮುತ್ತಲಿನ ಅರಣ್ಯ ಪ್ರದೇಶಗಳು (ಈಗ ನವದೆಹಲಿಯ ಭಾಗವಾಗಿದೆ) ಆತನ ಆಸ್ತಿಯ ಭಾಗಗಳಾಗಿದ್ದವು. ಅದೇ ರೀತಿ ಕಾಲ ಅಂಬ ಮತ್ತು ಯಮುನಾ ನದಿಯ ನಡುವೆ ಇದ್ದ ಲೋಹಗಡ ಕೋಟೆಯ ಎಲ್ಲ ಪ್ರದೇಶಗಳೂ ಇವರ ಆಸ್ತಿಗಳಾಗಿದ್ದವು. ಹಾಗೆ ನೋಡಿದರೆ, ಲೋಹಗಡ ಆತನ ಸಾಮ್ರಾಜ್ಯವಾಗಿತ್ತು. ಆ ಕಾರಣಕ್ಕಾಗಿಯೇ ಅವರು ಈ ಪ್ರದೇಶದಲ್ಲಿ ಲೋಹಗಡ ಕೋಟೆ ಮತ್ತು ಅನೇಕ ಕಿರುಕೋಟೆಗಳನ್ನು ನಿರ್ಮಿಸಿದರು. ಲಖಿ ರಾಯ್ ವಂಜಾರನ ಬಳಿ ಐವತ್ತು ಸಾವಿರಕ್ಕೂ ಅಧಿಕ ಎತ್ತಿನ ಬಂಡಿಗಳು, ಮೂರರಿಂದ ನಾಲ್ಕು ಸಾವಿರ ಆನೆಗಳು, ಒಂಟೆಗಳು, ಕುದುರೆ, ಎತ್ತು, ಕತ್ತೆಗಳಿದ್ದವು. ಅಸಂಖ್ಯಾತ ಯುವಕರು ಅವರಲ್ಲಿ ಕೆಲಸ ಮಾಡುತ್ತಿದ್ದರು. ಲಖಿ ರಾಯ್ ಅವರು ಆನೆ, ಒಂಟೆ, ಕುದುರೆ, ಎತ್ತುಗಳಂತಹ ಪ್ರಾಣಿಗಳನ್ನು ಆಹಾರ ಧಾನ್ಯ, ಬೇಳೆಕಾಳು, ಉಪ್ಪು, ಸಾಂಬಾರ ಪದಾರ್ಥಗಳು, ಜವಳಿ (ವಿಶೇಷವಾಗಿ ರೇಷ್ಮೆ) ಉಣ್ಣೆ, ತುಪ್ಪಟ, ನಿರ್ಮಾಣ ಸಾಮಗ್ರಿ (ಕಲ್ಲು, ಅಮೃತಶಿಲೆ, ಸುಣ್ಣಕಲ್ಲು ಮುಂತಾದವು) ರಕ್ಷಣಾ ಸಾಮಗ್ರಿ (ಶಸ್ತ್ರ, ಆಯುಧ, ಸವಾರಿಪೀಠ, ರಿಕಾಪು ಇತ್ಯಾದಿ) ಮುಂತಾದವುಗಳ ವಹಿವಾಟು ನಡೆಸುತ್ತಿದ್ದರು. ಈ ತಾಂಡಾಗಳು ಒಂದು ಸುತ್ತಿನಲ್ಲಿ 15 ಲಕ್ಷ ಟನ್‌ನಷ್ಟು ಸರಂಜಾಮುಗಳನ್ನು ಸಾಗಿಸುತ್ತಿದ್ದವು ಎಂದು ನಂಬಲಾಗಿದೆ. ಲಖಿ ರಾಯ್ ಅವರು ವಹಿವಾಟು ಉದ್ದೇಶಕ್ಕಾಗಿ ಮುಘಲರ ನಾಣ್ಯ ಮತ್ತು ಪದ್ಧತಿಯನ್ನು ಅಳವಡಿಸಿಕೊಂಡಿದ್ದರು[(6)]. ಅವರ ವ್ಯಾಪಾರ ತಂಡವು ಶ್ರೀಲಂಕಾ ಮತ್ತು ಸಮರಕಾಂಡ ಮತ್ತು ಯಾರ್‌ಕಾಂಡ (ಮಧ್ಯ ಏಷ್ಯಾ) ನಡುವೆ ಸಂಚರಿಸುತ್ತಿತ್ತು. ಈ ತಂಡವು ಕಡು ಬೇಸಗೆ ಮತ್ತು ಮಳೆಗಾಲದ ದಿನಗಳನ್ನು ಹೊರತುಪಡಿಸಿದರೆ, ವರ್ಷದ ಉಳಿದೆಲ್ಲ ಕಾಲವು ಸಂಚರಿಸುತ್ತಿತ್ತು. ಅವರು ಉತ್ತರ ಪ್ರದೇಶ ಮತ್ತು ಮಧ್ಯ ಭಾರತದ ರಾಜ್ಯಗಳಲ್ಲಿ ನೂರಾರು ಕುಡಿಯುವ ನೀರಿನ ಕೆರೆ ಮತ್ತು ಬಾವಿಗಳನ್ನು ಕಟ್ಟಿಸಿದ್ದರು.

ಹದಿನೇಳನೇ ಶತಮಾನದಲ್ಲಿ ಮುಘಲರ ಸಾಮ್ರಾಜ್ಯ ಜಗತ್ತಿನಲ್ಲೇ ಅತ್ಯಂತ ಶ್ರೀಮಂತವಾದ ಆರ್ಥಿಕತೆಯನ್ನು ಹೊಂದಿತ್ತು. ಅದರ ಜಿ.ಡಿ.ಪಿ. ಅತ್ಯಂತ ಹೆಚ್ಚಿನ ಮಟ್ಟವನ್ನು ತಲುಪಿತ್ತು. ಜಗತ್ತಿನ ಆರ್ಥಿಕತೆಯಲ್ಲಿ ಶೇ. 24.4ರಷ್ಟು ಭಾಗ ಮುಘಲರ ಪಾಲಾಗಿತ್ತು[(7)]. ವಂಜಾರರು ಪ್ರಮುಖ

ವ್ಯಾಪಾರಿಗಳಾಗಿದ್ದ ಕಾರಣ ಮುಘಲರ ಆರ್ಥಿಕತೆ ಉನ್ನತಿಗೇರುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಹಾಗೆಯೇ ಉತ್ಪನ್ನಗಳಿಗೆ ಹೊಸ ಮಾರುಕಟ್ಟೆ ಸೃಷ್ಟಿಸುವಲ್ಲಿಯೂ ಯಶಸ್ವಿಯಾಗಿದ್ದರು. ಇದರ ಜೊತೆಗೆ ಅವರು ಅಲೆಮಾರಿಗಳಾಗಿದ್ದ ಕಾರಣ ಸರಕು ಸರಬರಾಜಿಗಾಗಿ ದೇಶದ ಎಲ್ಲ ಕಡೆಯೂ ಸಂಚರಿಸುತ್ತಿದ್ದರು. ಅವರು ಲೋಕಜ್ಞಾನ ಮತ್ತು ವ್ಯಾಪಾರದ ಕೌಶಲ್ಯ ಅವರ ವಹಿವಾಟು ಹೆಚ್ಚಲು ನೆರವಿಗೆ ಬಂತು. ಕ್ರಮೇಣ ವಂಜಾರರು ರಾಷ್ಟ್ರದಲ್ಲಿ ಶ್ರೀಮಂತ ಸಮುದಾಯವೆನಿಸಿಕೊಂಡರು. ಅವರು ಬಹುಬೇಗನೆ ವರ್ಣಪದ್ಧತಿಯನ್ನು ತೊರೆದು ತಾಂಡ ನಿರ್ವಹಣೆಯಲ್ಲಿ ವರ್ಗ ಪದ್ಧತಿಯನ್ನು ಅಳವಡಿಸಿಕೊಂಡರು[8]. ತಾನು ಮಾಡುವಂತಹ ಕರ್ತವ್ಯದ ಆಧಾರದಲ್ಲಿ ವ್ಯಕ್ತಿಯನ್ನು ವರ್ಗೀಕರಿಸಲಾಗುತ್ತಿತ್ತು. ಆದರೆ ಆತನಿಗೆ ನೀಡಲಾದ ಅಂತಸ್ತಿಗೆ ವಂಜಾರ ಸಂಸ್ಕೃತಿಯಲ್ಲಿ ಯಾವುದೇ ಮಹತ್ವವಿರಲಿಲ್ಲ.

ಲಖಿ ರಾಯ್ ವಂಜಾರ ಅವರಿಗೆ ಎಂಟು ಜನ ಗಂಡುಮಕ್ಕಳು. ಅವರೇ ನಿಗಾಹಿಯ, ಹೇಮ್‌ಚಂದ್, ಹಾರ್ರಿ, ಹೀರಾ, ಪುಂಡಿಯ, ಬಕ್ಷಿ, ಬಾಲ ಮತ್ತು ಜವಾಹರ್. ಇವರೆಲ್ಲರೂ ಗುರುಗೋವಿಂದ್ ಸಿಂಗ್ ಮತ್ತು ಬಂದಾ ಸಿಂಗ್ ಬಹದ್ದೂರ್ ಅವರ ಸೇನೆಯ ಭಾಗವಾಗಿದ್ದರು. ಇವರಲ್ಲಿ ಜವಾಹರ್ (ಮುಂದೆ ಜವಾಹರ್‌ಸಿಂಗ್ ಆದರು) 1700 ಆಗಸ್ಟ್ 30ರಂದು ಫತೇಗಡ್ ಯುದ್ಧದಲ್ಲಿ ಆನಂದಪುರದ ಬಳಿ ಹುತಾತ್ಮರಾದರೆ ಹೇಮ್‌ಸಿಂಗ್ 1704 ಜನವರಿ 16ರಂದು ಆನಂದಪುರದ ಹತ್ತಿರಲ್ಲಿ ನಡೆದ ತೀರ್‌ಗಢ್ ಯುದ್ಧದಲ್ಲಿ ಹುತಾತ್ಮರಾದರು. ನಿಗಾಹಿಯಾ ನಂತರ 1709ರ ಆರರಂದು ಅಮೃತಸರ ಯುದ್ಧದಲ್ಲಿ ಹುತಾತ್ಮಪಟ್ಟವನ್ನೇರಿದರು. ಉಳಿದ ಐವರು ಬಂದಾ ಸಿಂಗ್‌ರವರ ಸೇನೆಯ ಭಾಗವಾಗಿದ್ದರು. ಅವರೂ ಸಹ ಬೇರೆ ಬೇರೆ ಯುದ್ಧಗಳಲ್ಲಿ ಹುತಾತ್ಮರಾದರು. ಲಖಿ ರಾಯ್ ವಂಜಾರ ಅವರಿಗೆ 17 ಮೊಮ್ಮಕ್ಕಳು ಮತ್ತು 24 ಮರಿ ಮೊಮ್ಮಕ್ಕಳಿದ್ದರು. ಇವರೆಲ್ಲರು ಸಹ ವಿವಿಧ ಯುದ್ಧಗಳಲ್ಲಿ ತಮ್ಮ ಹಿರೀಕರಂತೆ ಹುತಾತ್ಮರಾದರು.

1630ರಲ್ಲಿ ಪುರಾತನ ದೆಹಲಿಯು ಒಂದು ಪುಟ್ಟ ಪಟ್ಟಣವಾಗಿತ್ತು. ಅದು ಕಾಲಕಾಲಕ್ಕೆ ಬೇರೆ ಬೇರೆ ಸಾಮ್ರಾಜ್ಯಗಳ ರಾಜಧಾನಿಯಾಗಿತ್ತು. ಅದು ಅನೇಕ ಬಾರಿ ನಿರ್ಮಾಣಗೊಂಡು, ಜನವಸತಿ ಹೆಚ್ಚಿ ಮತ್ತೆ ಮತ್ತೆ ನಾಶವಾಗುತ್ತಿತ್ತು. ಶಹಜಹಾನ್ ಆಳ್ವಿಕೆಯ ಕಾಲದಲ್ಲಿ ದೆಹಲಿಯು ವಿರಳ ಜನಸಂಖ್ಯೆಯ ಪಟ್ಟಣವಾಗಿತ್ತು. ಶಹಾ ಸೂರಿಯ ವಂಶಸ್ಥರು (ಸೂರಿಗಳೆಂದೇ ಪ್ರಸಿದ್ಧರು) 1556ರವರೆಗೆ ದೆಹಲಿಯನ್ನು ಆಳಿದರೂ ಅಂಥ ವೈಭವವನ್ನು ಕಾಣಲಿಲ್ಲ. ದೆಹಲಿಯಲ್ಲಿ ಅನೇಕ ಪುರಾತನ ಕಿಲ್ಲೆಗಳಿದ್ದವು. ಕೆಲವು ತೀರಾ ನಾಶಕ್ಕೊಳಗಾಗಿದ್ದವು. ಹಾಗಾಗಿ ನಿರ್ಜನವಾಗಿದ್ದವು. 1545 ರಿಂದ 1554ರವರೆಗೆ ಆಳಿದ ಇಸ್ಲಾಂ ಶಾ ಸೂರಿ ಕೆಂಪು ಕೋಟೆಯ ಹಿಂಭಾಗದಲ್ಲಿ ಸಲೀಂಗಡ ಕೋಟೆಯನ್ನು ಕಟ್ಟಿಸಿದ. ಸೂರಿಗಳನ್ನು ಸೋಲಿಸಿದ ನಂತರ ಮುಘಲರು ದೆಹಲಿಯನ್ನು ಆಕ್ರಮಿಸಿಕೊಂಡರು. 1628ರಲ್ಲಿ ಶಹಜಹಾನ್ ಸಾಮ್ರಾಟನಾದಾಗ ಆತ ಹೊಸ ಕೋಟೆಯೊಂದನ್ನು ನಿರ್ಮಿಸಲು ನಿರ್ಧರಿಸಿದ. ಹೊಸ ಕೋಟೆಯ ನಕ್ಷೆ ತಯಾರಿಸಲು ಆತ ಅಹ್ಮದ್ ಲಹೋರಿಗೆ ಆದೇಶಿಸಿದ. 1639ರ ಮೇ 12 ರಂದು ಹೊಸ ಕೋಟೆಯ ನಿರ್ಮಾಣ ಕಾಮಗಾರಿ ಆರಂಭಿಸಲು ಅಂತಿಮ ಆದೇಶ ನೀಡಲಾಯಿತು. ಮಾರನೆಯ ದಿನವೇ ಶಂಕುಸ್ಥಾಪನೆ ಮಾಡಲಾಯಿತು. ಒಂಬತ್ತು ವರ್ಷಗಳ ನಂತರ ಅದು ಪೂರ್ಣಗೊಂಡಿತು. 1648ರ ಏಪ್ರಿಲ್ 6 ರಂದು ಅದು ಸಿದ್ಧವಾಯಿತು. ಶಹಜಹಾನ್ ಇದಕ್ಕೆ ಕಿಲ್ಲಾ ಮುಬಾರಕ್ ಎಂದು ನಾಮಕರಣ ಮಾಡಿದ. ಕೆಂಪು ಕಲ್ಲುಗಳಿಂದ ಕಟ್ಟಿದ ಕಾರಣ ಇದಕ್ಕೆ ಲಾಲ್‌ಕಿಲ್ಲಾ (ಕೆಂಪುಕೋಟೆ) ಎಂಬ ಹೆಸರು ಸ್ಥಿರವಾಯಿತು[9].

ದೆಹಲಿಯ ಕೆಂಪು ಕೋಟೆಯು 254.67 ಎಕರೆ ಪ್ರದೇಶದಲ್ಲಿ ಹರಡಿದೆ. ಅದರ ಸುತ್ತ 2.41 ಕಿ.ಮೀ. ಉದ್ದದ ಗೋಡೆಯನ್ನು ನಿರ್ಮಿಸಲಾಗಿದೆ. ಈ ಗೋಡೆಯ ಎತ್ತರ 18 ರಿಂದ 31 ಮೀಟರ್‌ಗಳು. ಅದರ ಮುಖ್ಯದ್ವಾರ ದಕ್ಷಿಣಕ್ಕಿದ್ದು, ಲಾಹೋರಿ ಬಾಗಿಲು ಎಂದೇ ಪ್ರಸಿದ್ಧ. ಎರಡನೆಯ ಬಾಗಿಲನ್ನು ದೆಹಲಿ ಬಾಗಿಲು ಎಂದು ಕರೆಯುತ್ತಾರೆ. ಯಮುನಾ ನದಿಯ ಕಡೆಗೆ ತೆರೆದುಕೊಳ್ಳುವ ಬಾಗಿಲಿಗೆ ಪಾಣಿ ದರ್ವಾಜ (ನೀರು ಬಾಗಿಲು) ಎಂಬ ಹೆಸರು. ಈ ಕೋಟೆಯಲ್ಲಿ ಕಾಶ್ಮೀರಿ ಬಾಗಿಲು, ಕಲ್ಕತ್ತಾ ಬಾಗಿಲು, ಮೋರಿ ಬಾಗಿಲು, ಕಾಬೂಲ್ ಬಾಗಿಲು, ಫರೇಶ್‌ಖಾನಾ ಬಾಗಿಲು, ಆಜ್ಮೇರಿ ಬಾಗಿಲು ಮತ್ತು ತುರ್ಕಮನ್ ಬಾಗಿಲು ಸೇರಿದಂತೆ ಒಟ್ಟು 14 ಬಾಗಿಲುಗಳಿವೆ. ಕೋಟೆಯಲ್ಲಿ ಒಂದು ಮೆಟ್ಟಿಲುಗಳಿರುವ ಬಾವ್ಡಿ (ಬಾವಿ) ಇದೆ. ಸ್ಥಳೀಯ ಸಂಪ್ರದಾಯದ ಪ್ರಕಾರ, ಈ ಬಾವ್ಡಿಯು ಕೋಟೆ ನಿರ್ಮಾಣವಾಗುವ ಮೊದಲೇ ಅಲ್ಲಿತ್ತು.

ಕೋಟೆಯಲ್ಲಿ ಜನವಸತಿ ಆರಂಭವಾದ ನಂತರ ಜನರು ಅದರ ಸುತ್ತ ಮನೆಗಳನ್ನು ನಿರ್ಮಿಸಲು ಆರಂಭಿಸಿದರು. ಮೊದಲು ನಿರ್ಮಾಣಗೊಂಡ ಪ್ರದೇಶಗಳೆಂದರೆ ಚಾಂದನಿ ಚೌಕ್ ಮತ್ತು ಫತೇಪುರಿ. ಅವುಗಳನ್ನು ಅನುಸರಿಸಿ ಸದರ್ ಬಜಾರ್, ಚಾವ್ಡಿ ಬಜಾರ್, ದ ರಿಯಾಗಂಜ್ ಮತ್ತು ಇತರ ಪ್ರದೇಶಗಳು ನಿರ್ಮಾಣವಾದವು. ಆ ಸಮಯದಲ್ಲಿ ಈ ಎಲ್ಲ ಪ್ರದೇಶಗಳನ್ನು ಒಟ್ಟಾಗಿ ಶಹಜಹಾನ್‌ಬಾದ್ (ಈಗಿನ ಹಳೆ ದೆಹಲಿ) ಎಂದು ಕರೆಯಲಾಗುತ್ತಿತ್ತು. ಕೆಂಪು ಕೋಟೆ ಮತ್ತು ಹೊಸ ಕಟ್ಟಡದ ನಿರ್ಮಾಣಕ್ಕೆ ಅಗತ್ಯವಾದ ಕೆಂಪು ಶಿಲೆಗಳನ್ನು ಲಖಿ ರಾಯ್ ವಂಜಾರ ಸರಬರಾಜು ಮಾಡಿದ್ದರು.

ಲಖಿ ರಾಯ್ ವಂಜಾರ ಅವರಿಗೆ ದೆಹಲಿಯಲ್ಲಿ ಸುತ್ತ ಬಹುದೊಡ್ಡ ಆಸ್ತಿಯ ಒಡೆತನವಿತ್ತು ಎಂದು ನಂಬಲಾಗಿದೆ. ರೈಸಿನಾ ಗ್ರಾಮ ಮತ್ತು ಮಲ್ಚ ಮಹಲ್ ಗ್ರಾಮಗಳ ಸಂಪೂರ್ಣ ಒಡೆತನ ಮತ್ತು ಅದರ ಸುತ್ತಮುತ್ತಲಿನ ಜಮೀನಿನ ಒಡೆತನ ಅವರದಾಗಿತ್ತು. ಈಗಿನ ದೌಲಾ ಕುಆನ್, ಬಾರಾ ಕಂಭ, ಮುಸಾಹಿಲ್, ಕನಾಟ್ ಪ್ಲೇಸ್, ರಾಷ್ಟ್ರಪತಿ ಭವನ್ (ಹಿಂದಿನ ವೈಸ್‌ರೀಗಲ್ ಹೌಸ್), ಸಂಸತ್ ಭವನ, ಗುರುದ್ವಾರ ರಕಬ್‌ಗಂಜ್..... ಇವುಗಳ ಜಮೀನೆಲ್ಲವೂ ಒಂದು ಕಾಲಕ್ಕೆ ಲಖಿ ರಾಯ್ ವಂಜಾರಾ ಅವರಿಗೆ ಸೇರಿತ್ತು. ಬಿಹಾರದ ಲಖಿ ಸರಾಯ್ ಜಿಲ್ಲೆ, ಮಧ್ಯಪ್ರದೇಶದ ಸಾಗರ್ ಜಿಲ್ಲೆಯಲ್ಲಿರುವ ಲಖಿ ವಂಜಾರ ಕೆರೆ ಸಹ ಭಾಯ್ ಲಖಿ ರಾಯ್ ವಂಜಾರ ಅವರಿಗೇ ಸೇರಿದ್ದವು. ಭಾರತಾದ್ಯಂತ ಹಾಡುವ ಜನಪದ ಗೀತೆಗಳಲ್ಲಿ ಅವರನ್ನು ಈಗಲೂ ನೆನೆಯಲಾಗುತ್ತದೆ.

ಲಖಿ ರಾಯ್ ಅವರು ಕಾಲ ಅಂಬ್ ಮತ್ತು ಸಧೌರ ನಡುವೆ ಇರುವ ಜಮೀನಿನ ಅಂದರೆ ಡಾಬರ್‌ನ ಜಮೀನಿನ ಒಡೆಯರಾಗಿದ್ದರು. ಅವರಿಗೆ ಯಮುನಾ ನದಿಯ ಪೂರ್ವತೀರದ ಕಡೆ ಮುಖ್ಲಿಸ್‌ಗಡದಿಂದ ಕೆಲವು ಕಿ.ಮೀ. ದೂರದಲ್ಲಿ ಮತ್ತೊಂದು ಕೋಟೆಯಿತ್ತು. ಅದು ಖವಾಸ್‌ಪುರ ಮತ್ತು ಹೈದಾಪುರ ಆಲಿ ಹಿಂದೂವಾಲ ಗ್ರಾಮಗಳಿಗೆ ಹತ್ತಿರವಿತ್ತು. ಅದರ ಪಾಳುಬಿದ್ದ ಅವಶೇಷಗಳು ಹಿಂದಿನ ವೈಭವವನ್ನು ಹೇಳುತ್ತವೆ. ಇದರ ಕಲ್ಲುಗಳು ಸಹ ಲೋಹಗಡ ಕೋಟೆಯ ಕಲ್ಲುಗಳನ್ನೇ ಹೋಲುತ್ತವೆ. ಈ ಕೋಟೆಯ ಸುತ್ತಲು ಲಖಿ ರಾಯ್ ಅನೇಕ ಬಾವಿಗಳನ್ನು ನಿರ್ಮಿಸಿದ್ದರು. ಇದೆಲ್ಲವೂ ಲಖಿ ರಾಯ್ ಅವರು ಇದರ ಒಡೆಯರಾಗಿದ್ದವೆಂಬುದನ್ನು ನಿರೂಪಿಸುತ್ತವೆ. ಪಂಜಾಬ್‌ನಲ್ಲಿಯೂ ಸಹ, ರಾಜ್‌ಪುರದ ಬಳಿ ಒಂದು ಸರೈ ಹೊಂದಿದ್ದರು. ಅದನ್ನು ಸರೈ ವಂಜಾರ ಎಂದೇ ಈಗಲೂ ಕರೆಯಲಾಗುತ್ತಿದೆ.

**ಪೀರ್ ಬುಧುಶಾ ಅವರ ಪಾತ್ರ**

ಸಧೌರ ಮತ್ತು ಲೋಹಗಡದ ಚರಿತ್ರೆಯಲ್ಲಿ ಪೀರ್ ಬುಧು ಶಾ ಅವರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಆತನ ನಿಜವಾದ ಹೆಸರು ಸೈಯದ್ ಬಾಬರ್–ಉದ್–ದೀನ್. ಆತ ಇಸ್ಲಾಂ ಧರ್ಮದ ಸಂಸ್ಥಾಪಕ ಹಜರತ್ ಮಹಮ್ಮದ್‌ನ ವಂಶಸ್ಥನಾದ ಕಾರಣ ಸೈಯದ್ ಎಂಬ ಹೆಸರು ಪಡೆದ. ಅಲ್ಲದೆ ಆತ **'ಶಾಹ್'** ಜಿ ಮತ್ತು **'ಪೀರ್'** ಜಿ ಎಂಬ ಹೆಸರಿನಿಂದಲೂ ಪ್ರಖ್ಯಾತ. ಆತ 1647 ಜೂನ್ 13 ರಂದು ಜನಿಸಿದ. ಆತನ ನೆಲೆ ಸಧೌರ. ಮುಘಲ್ ಪ್ರಭುತ್ವ (ಪ್ರಾಯಶಃ ಅಕ್ಬರ್) ಆತನ ಕುಟುಂಬಕ್ಕೆ ಆಸ್ತಿ ದಯಪಾಲಿಸಿತ್ತು. ಆತ ಸೌಮ್ಯ ವ್ಯಕ್ತಿ. ಜನ ಅವನ ಮುಂದೆ ಬಾಗಿ ಪಾದ ಮುಟ್ಟಿ ನಮಸ್ಕರಿಸಿದರೆ ಆತ ತಡೆದು ಹಾಗೆ ಮಾಡಬಾರದೆಂದು ಹೇಳುತ್ತಿದ್ದ. ತನ್ನನ್ನು ಸಯ್ಯದ್ ಬಾದರ್–ಉದ್–ದೀನ್ ಶಾಹ ಎಂಬುದರ ಬದಲಿಗೆ ಬುಧು ಶಾ ಎಂದು ಕರೆಯಲು ಹೇಳುತ್ತಿದ್ದ.

ಪೀರ್ ಬುಧು ಶಾ ಮತ್ತು ತಸ್ಕಾದ ಬಿಖನ್ ಶಾ ಒಳ್ಳೆಯ ಸ್ನೇಹಿತರು. ಬಿಖನ್ ಶಾ ಮೂಲಕ ಆತನಿಗೆ ಗುರು ಗೋವಿಂದ್ ಸಿಂಗ್‌ರವರ ಭೇಟಿ ಸಾಧ್ಯವಾಯಿತು. ಪೀರ್ ಆಗಾಗ್ಗೆ ಗುರುಗಳನ್ನು ಬೇಟಿ ಮಾಡುತ್ತಿದ್ದ. ಆತನ ಹೆಂಡತಿ ಮತ್ತು ಗಂಡು ಮಕ್ಕಳು (ಆಶ್ರಫ್, ಮಹಮ್ಮದ್, ಮಹಮೂದ್ ಬಷ್ ಮತ್ತು ಹುಸೇನ್) ಸಹ ಚಕ್‌ನಾನಕಿ, ಪಾವೊಂಟ ಸಾಹಿಬ್ ಮತ್ತು ಆನಂದ್‌ಪುರದಲ್ಲಿ ಗುರುಗಳನ್ನು ಭೇಟಿಯಾಗುತ್ತಿದ್ದರು. ಬುಧು ಶಾ ಅವರು ನಸೀರನ್ ಎಂಬಾಕೆಯನ್ನು ಮದುವೆಯಾಗಿದ್ದರು. ಆಕೆ ಮುಘಲ್ ಸಾಮ್ರಾಟ್ ಔರಂಗಜೇಬ್‌ನ ಸೇನಾಧಿಕಾರಿಯಾಗಿದ್ದ ಸಯ್ಯದ್ ಬೇಗ್‌ನ ತಂಗಿ.

ಲೋಹಗಡ ಕೋಟೆಯ ಚರಿತ್ರೆಯಲ್ಲಿ ಪೀರ್ ಬುಧು ಶಾ ಗಮನಾರ್ಹ ಪಾತ್ರ ವಹಿಸಿದ್ದಾನೆ. ಈಗ ತಿಳಿದಿರುವ ಚರಿತ್ರೆಯ ಪ್ರಕಾರ, ಆತ ಮತ್ತು ಆತನ ತಂದೆ ಸೈಯದ್ ಆಶ್ರಫ್ ಅವರು ಗುರು ತೇಗ್ ಬಹದ್ದೂರ್ ಮತ್ತು ಗುರು ಗೋವಿಂದ್ ಸಿಂಗ್ ಅವರ ಒಡನಾಡಿಗಳಾಗಿದ್ದರು. ಪೀರ್ ಬುಧು ಶಾನ ಮಕ್ಕಳು 1710ರಲ್ಲಿ ಮುಘಲ್ ಸೈನಿಕರ ವಿರುದ್ಧ ಬಾಬಾ ಬಂದಾ ಸಿಂಗ್ ಬಹುದ್ದೂರ್ ಜೊತೆಯಲ್ಲಿ ಹೋರಾಡುತ್ತಾ ಸಧೌರ ಬಳಿ ಹತರಾದರು. ಪೀರ್ ಬುಧ ಶಾನ ಕುಟುಂಬ ಸಧೌರದ ಪ್ರಮುಖ ಜಮೀನುದಾರ ಕುಟುಂಬ. ಆದರೆ ಅವರು ದೇವರಲ್ಲಿ ಭಕ್ತಿ ಭಾವವಿದ್ದ ಮತ್ತು ಮಾನವೀಯತೆಯ ಆರಾಧಕರಾಗಿದ್ದ ಕಾರಣ ಔರಂಗಜೇಬ್ ಮತ್ತವರ ನಂತರ ಬಂದಾ ರಾಜರ ಸಂಪ್ರದಾಯ ನೀತಿಗಳು ಅವರಿಗೆ ಒಲವಿರಲಿಲ್ಲ. ಗುರುನಾನಕ್‌ರವರ ಧರ್ಮ ಪ್ರಚಾರದ ಉದ್ದೇಶಗಳು ಪೀರ್ ಬುಧು ಶಾ ಅವರ ಹಿರೀಕರಿಗೆ ಪ್ರಿಯವಾದ್ದರಿಂದ ಗುರುನಾನಕರ ಸಿದ್ಧಾಂತದ ಅನುಯಾಯಿಗಳಾದರು. ಲೋಹಗಡ ಕೋಟೆಯ ನಿರ್ಮಾಣವನ್ನು ಗುರು ಹರ್‌ಗೋವಿಂದ್ ಸಾಹಿಬ್ ಆರಂಭಿಸಿದಾಗ, ಪೀರ್ ಬುಧು ಶಾ ಅವರ ತಾತ ರಾಜ ಶಾ ಇಬ್ರಾಹಿಂ ಬಾಲ ಅವರು ಲೋಹಗಡ ಕೋಟೆಯ ಪ್ರಧಾನ ಸಮೀಕ್ಷೆ ಕಾರ್ಯದಲ್ಲಿ ಗುರು ಸಾಹಿಬ್ ಅವರ ಜೊತೆಗಿದ್ದರು. ಲೋಹಗಡ ಕೋಟೆಯ ಸ್ಥಳ ಸಧೌರದ ಪರಗಣದಲ್ಲಿತ್ತು. ಹಾಗಾಗಿ ಸಧೌರದ ಸಯ್ಯದರು ಲೋಹಗಡ ಕೋಟೆಯ ನಿರ್ಮಾಣದ ಪವಿತ್ರ ಕಾರ್ಯದಲ್ಲಿ ಭಾಗಿಯಾದರು. ಅನಂತರ ಗುರು ಹರ್ ರಾಯ್ ಸಾಹಿಬ್‌ರವರು ಇದೇ ಪ್ರದೇಶದಲ್ಲಿ 13 ವರ್ಷ ಬೀಡುಬಿಟ್ಟಿದ್ದ ಸಮಯದಲ್ಲಿ ಲೋಹಗಡ ಕೋಟೆಯ ನಿರ್ಮಾಣದಲ್ಲಿ ಬುಧು ಶಾ ಅವರ ತಂದೆ ಸಯ್ಯದ್ ಅಶ್ರಫ್ ಅವರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಸಯ್ಯದ್‌ರವರು ಮುಘಲರ ಸೇನೆಯಲ್ಲಿದ್ದ ಅತ್ಯಂತ ಕುಶಲಿ ಸೈನಿಕರಾಗಿದ್ದರು. ಅವರ ಸಮರ ಜ್ಞಾನ ನಿಸ್ಸಂದೇಹವಾಗಿ ಬೃಹತ್ ಮುಘಲರ ಸೇನೆಯನ್ನು

ಎದುರಿಸುವಾಗ ಗುರುಗಳ ನೆರವಿಗೆ ಬಂದಿದೆ. ಲೋಹಗಡ ಕೋಟೆಯ ನಿರ್ಮಾಣ ಕಾಲದಲ್ಲಿ ಭಾಯ್ ಲಖಿ ರಾಯ್ ವಂಜಾರ ಮತ್ತು ಭಾಯ್ ಮಖನ್ ಲುಬಾನ ಅವರು ಪೀರ್ ಬುಧು ಶಾ ಅವರು ಮತ್ತು ಅವರ ಹಿರೀಕರ ಜೊತೆಯಲ್ಲಿ ಕಾರ್ಯನಿರ್ವಹಿಸಿದ್ದಾರೆ.

ನಿರ್ಮಲ ಸಂಪ್ರದಾಯದ ಪ್ರಕಾರ, ಗಡವಾಲದ ರಾಜ ಫತೇ ಶಾ 1688 ಸೆಪ್ಟೆಂಬರ್ 18 ರಂದು ಭಂಗನಿ ಹತ್ತಿರ ಗುರುವಿನ ಮೇಲೆ ದಾಳಿ ಮಾಡಿದಾಗ ಬುಧು ಶಾ ಅವರ ಶಿಫಾರಸ್ಸಿನಂತೆ ನೇಮಕ ಮಾಡಿಕೊಂಡಿದ್ದ ಐದು ನೂರು ಪಠಾಣ ಸೈನಿಕರು ಗುರುವಿಗೆ ದ್ರೋಹವೆಸಗಿ ಫತೇ ಶಾ ಕಡೆ ಸೇರಿಕೊಂಡರು. ಈ ದ್ರೋಹವು ಪೀರ್ ಬುಧು ಶಾ ಅವರಿಗೆ ತಿಳಿದಾಗ, ಆತ ತನ್ನ ಮಕ್ಕಳು ಮತ್ತು 700 ಅನುಯಾಯಿಗಳೊಡನೆ ಯುದ್ಧ ಭೂಮಿಗೆ ಬಂದಾು ಗುರುವಿನ ಪರ ಕಾದಾಡಿದರು. ಈ ಯುದ್ಧದಲ್ಲಿ ಅವರ ಎರಡು ಮಕ್ಕಳಾದ ಆಶ್ರಫ್ ಮತ್ತು ಮಹಮ್ಮದ್ ಹಾಗೂ ಸೋದರ ಭುರೆ ಶಾ ಹುತಾತ್ಮರಾದರು.

ಚರಿತ್ರೆಯ ಯಾವುದೇ ಆಕರ ಇದನ್ನು ದೃಢಪಡಿಸುವುದಿಲ್ಲ. ಮೊದಲನೆಯದಾಗಿ ಗುರುಗಳ ಸೇನೆಯಲ್ಲಿ ವೇತನ ಪಡೆಯುವ ಯಾವುದೇ ಸೈನಿಕರಿರಲಿಲ್ಲ. ಹಾಗಾಗಿ ಐದುನೂರು ಪಠಾಣ್ ಸೈನಿಕರನ್ನು ನೇಮಿಸಿಕೊಂಡಿರುವ ಮಾಹಿತಿ ಸುಳ್ಳು. ಎರಡನೆಯದಾಗಿ ಯುದ್ಧವ ಭಂಗನಿ ಬಳಿ (ಪಾವೊಂಟ್ ಸಾಹಿಬ್‌ನಿಂದ ಸುಮಾರು 20 ಕಿ.ಮೀ. ದೂರ) ನಡೆಯಿತು. ಸ್ವರೂಪ್ ಸಿಂಗ್ ಅವರ ಪ್ರಕಾರ ಈ ಯುದ್ಧ ಕೇವಲ ಒಂದು ದಿನ ಅಂದರೆ 4–5 ಗಂಟೆಗಳ ಕಾಲ ನಡೆಯಿತು. ಒಂದು ವೇಳೆ ಪಠಾಣರು ಗುರುವಿಗೆ ಮೋಸ ಮಾಡಿದ್ದರೆ, ಆ ಸುದ್ದಿ 85 ದೂರವಿರುವ ಬುಧು ಶಾ ಅವರಿಗೆ ಆಧುನಿಕ ಸಂಪರ್ಕ ವಿಧಾನಗಳಿಲ್ಲದ ಕಾಲದಲ್ಲಿ ಅಷ್ಟು ಬೇಗ ಹೇಗೆ ತಿಳಿಯಿತು. ಅಷ್ಟು ಬೇಗನೆ ಸೇನೆಯನ್ನು ಕೂಡಿಸಿಕೊಂಡು ಯುದ್ಧದ ಸಮಯಕ್ಕೆ ಬರಲು ಹೇಗೆ ಸಾಧ್ಯ? ಹಾಗಾಗಿ ಇದೊಂದು ಕಟ್ಟುಕತೆ. ಅಲ್ಲದೆ, ಸ್ವರೂಪ್ ಸಿಂಗ್‌ರವರ 'ಗುರು ಕಿಯಾನ್ ಸಖಿಯಾನ್' ಕೃತಿಯಲ್ಲಿ ಈ ಯುದ್ಧದಲ್ಲಿ ಭಾಗಿಯಾದ ಎಲ್ಲ ಪ್ರಮುಖರ ಹೆಸರನ್ನು ಉಲ್ಲೇಖ ಮಾಡಲಾಗಿದೆ. ಎಲ್ಲಿಯೂ ಪೀರ್ ಬುಧು ಶಾನ ಉಲ್ಲೇಖವಿಲ್ಲ. ಆದರೆ ಒಂದಂತೂ ಸತ್ಯ. ಪೀರ್ ಬುಧು ಶಾ ಮತ್ತು ಗುರುವಿನ ನಡುವೆ ಮಧುರ ಸಂಬಂಧವಿತ್ತು. ಆತ ಗುರುಗಳನ್ನು ಆಗಾಗ್ಗೆ ಪಾವೊಂಟ ಸಾಹಿಬ್ ಮತ್ತು ಆನಂದ್‌ಪುರದಲ್ಲಿ ಭೇಟಿಯಗುತ್ತಿದ್ದರು.

ಗುರುವಿನ ಜೊತೆ ಪೀರ್ ಬುಧು ಶಾಗೆ ಇದ್ದ ಮೈತ್ರಿ ಸಧೌರ ಪಟ್ಟಣದ ಮುಖ್ಯಸ್ಥ ಉಸ್ಮಾನ್ ಖಾನ್‌ಗೆ ಇಷ್ಟವಾಗಲಿಲ್ಲ. ಒಮ್ಮೆ ಆತ ಬೇಟೆಯಾಡಲು ಪೀರ್‌ಗೆ ಆಹ್ವಾನವಿತ್ತ. ಆತ ಪೀರ್ ಬುಧು ಶಾ ನನ್ನು ಅರಣ್ಯಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಸುಟ್ಟು ಹಾಕಿದ. ಅದು ಸಂಭವಿಸಿದ್ದು 1704ರ ಮಾರ್ಚ್ 21 ರಂದು. ಈ ಸುದ್ದಿ ಗುರುಗಳಿಗೆ ತುಂಬಾ ತಡವಾಗಿ ತಿಳಿಯಿತು. ಆ ಸಮಯದಲ್ಲಿ ಆನಂದಪುರಕ್ಕೆ ಮುತ್ತಿಗೆ ಹಾಕಲಾಗಿತ್ತು. ಉಸ್ಮಾನ್ ಖಾನ್‌ನನ್ನು ಶಿಕ್ಷಿಸಲು ಗುರುಗಳಿಗೆ ಆಗಲಿಲ್ಲ. ಬಂದಾ ಬಹದ್ದೂರ್ ಸಿಂಗ್ 1709 ಡಿಸೆಂಬರ್ 9 ರಂದು ಸಧೌರ ಪಟ್ಟಣಕ್ಕೆ ಮುತ್ತಿಗೆ ಹಾಕಿದಾಗ ಪೀರ್ ಬುಧು ಶಾನ ಕುಟುಂಬದವರು ಆತನ ನೆರವಿಗೆ ಬಂದರು. ಮುಸ್ಲಿಮೇತರರನ್ನು ದ್ವೇಷಿಸುತ್ತಾ, ಬಲತ್ಕಾರದಿಂದ ಹಿಂದೂ ಮಹಿಳೆಯರನ್ನು ಅಪಹರಿಸುತ್ತಿದ್ದ ಉಸ್ಮಾನ್ ಖಾನ್‌ನನ್ನು ಬಂದಾ ಬಹದ್ದೂರ್ ಬಂಧಿಸಿ ಆತನ ಅಪರಾಧಗಳಿಗಾಗಿ ಸಾರ್ವಜನಿಕರ ಸಮ್ಮುಖದಲ್ಲಿ ಮರಣ ಶಿಕ್ಷೆ ವಿಧಿಸಿದ.

**ಮಕ್ಲಿಸ್‌ಗಡ ಮತ್ತು ಲೋಹಗಡ**

ಕೆಲವು ಇತಿಹಾಸಕಾರರು ಬಂದಾ ಬಹದ್ದೂರ್ ಸಿಂಗ್ ಅವರು ಮಕ್ಲಿಸ್‌ಗಡ ಕೋಟೆಯನ್ನು ವಶಪಡಿಸಿಕೊಂಡು ಅದಕ್ಕೆ ಲೋಹಗಡ ಎಂಬ ಹೆಸರನ್ನು ನೀಡಿದ ಎಂದು ಹೇಳುತ್ತಾರೆ(11). ಒಬ್ಬ ಚರಿತ್ರೆಕಾರ ಬಂದಾ ಬಹದ್ದೂರ್ ಸಿಂಗ್ ಮಕ್ಲಿಸ್‌ಗಡದಲ್ಲಿ ಕೋಟೆ ನಿರ್ಮಿಸಿ ಅದಕ್ಕೆ ಲೋಹಗಡ ಎಂದು ಹೆಸರಿಟ್ಟ ಎಂದು ಹೇಳುತ್ತಾರೆ. ಹಾಗೆ ನೋಡಿದರೆ ಮಕ್ಲಿಸ್‌ಗಡ ಎಂಬ ಹೆಸರಿನ ಹಳ್ಳಿಯೇ ಇಲ್ಲ. ಮೇಜರ್ ಜೇಮ್ಸ್ ರೆನೆಲ್ (1742–1830) ಅವರು ರಚಿಸಿದ ನಕ್ಷೆಗಳಿವೆ. ಆತ ಭೂಗೋಳದ ಪಿತಾಮಹನೆಂದೇ ಪ್ರಸಿದ್ಧ. 1792 ರಲ್ಲಿ ಆತ ತನ್ನ ನೆನಪುಗಳನ್ನು ಪ್ರಕಟಿಸಿದ. (Maps of Countries between Delhi and Candahar) ಈ ಪುಸ್ತಕವು ಮುಖ್ಲಿಸ್‌ಪುರ್ ಎಂಬ ಸ್ಥಳವನ್ನು ಉಲ್ಲೇಖಿಸಿ ಈ ವಿವರಣೆ ನೀಡುತ್ತದೆ. "ಸಧೌರದಿಂದ 7–8 ಕಿ.ಮೀ. ದೂರವಿರುವ ಉತ್ತರದ ಬೆಟ್ಟಗಳ ಹತ್ತಿರ ಮತ್ತು ಸಣ್ಣ ಗುಡ್ಡದ ಅಂಚಿನಲ್ಲಿರುವ ಸ್ಥಳ. ತಲುಪಲು ದುರ್ಗಮವಾದ ಸ್ಥಳ. ಅಲ್ಲಿ ಶೇರ್‌ಖಾನ್ ಸೂರಿಯ ಮಗ ಇಸ್ಲಾಂ ಖಾನ್, ತನಗಿದ್ದ ಅಧಿಕಾರದ ಅವಧಿಯಲ್ಲಿ ಪಾವಗಡ ಎಂಬ ಹೆಸರಿನ ಬಲವಾದ ಕೋಟೆಯನ್ನು ನಿರ್ಮಿಸಲು ಆರಂಭಿಸಿದ. ಆತ ಸತ್ತ ಕಾಲಕ್ಕೆ ಅದಿನ್ನೂ ಅಪೂರ್ಣವಾಗಿತ್ತು. ನಂತರ ಪಾಳು ಬಿತ್ತು. ಅದರ ಕೆಲವು ಅವಶೇಷಗಳು ಇನ್ನೂ ಇವೆ. ಬಂದಾ ಸಿಂಗ್ ಇದನ್ನು ಪುನರ್‌ನಿರ್ಮಿಸಿದ್ದ."(12) (ಅನುಬಂಧದಲ್ಲಿ ಸ್ಥಳನಕ್ಷೆ ಮತ್ತು ಚಿತ್ರಗಳನ್ನು ನೀಡಲಾಗಿದೆ)

ಮುಖ್ಲಿಸ್‌ಗಡ ಎಂಬ ಕೋಟೆಯೇ ಎಂದೂ ಇರಲಿಲ್ಲ. ರಾಜರ ಹಿರಿಯ ಸೇನಾಧಿಕಾರಿ ಮತ್ತು ಆಡಳಿತಗಾರ ಆಮೋದ ಪ್ರಮೋದಗಳಿಗಾಗಿ ಕಟ್ಟಲಾದ ಒಂದು ಅರಮನೆಗೆ ಈ ಹೆಸರು ನೀಡಲಾಗಿದೆ(13). ಇದು ಲೋಹಗಡದಿಂದ 40 ಕಿ.ಮೀ. ದೂರದಲ್ಲಿ ಯಮುನಾ ನದಿಯ ಪೂರ್ವಕ್ಕಿದೆ. ಹಾತ್ನಿ ಕುಂಡ್ ಅಣೆಕಟ್ಟೆಗೆ ಹತ್ತಿರವಿದೆ. ಇದು ಸುಮಾರು 45 ಎಕರೆ ಪ್ರದೇಶದಲ್ಲಿ ಹರಡಿಕೊಂಡಿದ್ದು, ಅರಮನೆ ಒಂದೂವರೆ ಎಕರೆ ಪ್ರದೇಶದಲ್ಲಿದೆ. ಬೆಟ್ಟದ ತಪ್ಪಲಿನಲ್ಲಿ ಹಾಗೂ ನದಿಗೆ ಸಮೀಪವಿರುವುದರಿಂದ ಇದೊಂದು ಸುಂದರ ವಿಹಾರ ತಾಣ. ಮುಘಲ್ ಸಾಮ್ರಾಟರು ಇದನ್ನು ಆಮೋದಗಳಿಗೆ ಹಾಗೂ ಬೇಟೆಯಾಡುವ ಸಮಯದಲ್ಲಿ ತಂಗಲು ಬಳಸುತ್ತಿದ್ದರು.

ಈ ಅರಮನೆಗೆ ಕೋಟೆಯ ಯಾವ ಲಕ್ಷಣವೂ ಇಲ್ಲ. ಹಾಗಾಗಿ ಇದನ್ನು ಕೋಟೆ ಎಂದು ಕರೆಯುವುದೇ ತಪ್ಪು. ಈ ಪ್ರದೇಶವನ್ನು ಬಾದ್‌ಶಾಹಿ ಬಾಗ್ (ರಾಜನ ತೋಟ) ಎಂದು ಕರೆಯಲಾಗುತ್ತದೆ. ಇರ್ವಿನ್ ಅವರು ಇದನ್ನು ಯಮುನಾ ಹತ್ತಿರ ಶಹಜಹಾನ್ ಕಟ್ಟಿಸಿದ, ಬಾದ್‌ಶಾಹಿ ಮಹಲ್ ಎಂದು ಈಗ ಕರೆಯುವ ಇದು ಬೇಟೆಯ ತಂಗುದಾಣ ಎಂದು ಈ ಅರಮನೆಯನ್ನು ವಿವರಿಸುತ್ತಾನೆ. ಈ ಕಟ್ಟಡದ ಕಾಯಕಲ್ಪಕ್ಕೆ ಭಾರತೀಯ ಪುರಾತತ್ವ ಇಲಾಖೆ ಎರಡು ಕೋಟಿ ರೂಪಾಯಿಗಳನ್ನು 2017ರಲ್ಲಿ ವ್ಯಯಿಸಿದೆ.

**ರಾಮ್‌ರಾಯ್, ರೂಪ್ ಕೌರ್ ಮತ್ತು ಗುರು ಹರ್‌ಕ್ರಿಷನ್ ಸಾಹಬ್‌ಜಿ ಜನನ**

ತಪಲ್ ಗ್ರಾಮದಲ್ಲಿ ಗುರು ಹರ್‌ರಾಯ್ ಸುಮಾರು 13 ವರ್ಷ ಕಳೆದರು. ಅವರ ಮಕ್ಕಳಾದ ರಾಮ್ ರಾಯ್ (24.02.1646), ರೂಪ್‌ಕೌರ್ (09.04.1649) ಮತ್ತು ಗುರು ಹರ್‌ಕ್ರಿಷನ್ (20.07.1652) ಅವರು ಅಲ್ಲಿಯೇ ಜನಿಸಿರಬೇಕು(14).

1657ರಲ್ಲಿ ಗುರು ಹರ್‌ರಾಯ್ ಅವರು ಕೀರತಪುರ, ಗೊಂಡ್‌ವಾಲ್, ಸಿಯಾಲ್‌ಕೋಟ್, ಕಾಶ್ಮೀರ ಮುಂತಾದ ಸ್ಥಳಗಳಿಗೆ ಭೇಟಿ ನೀಡಿ ಮುಂದಿನ ಎರಡು ವರ್ಷಗಳನ್ನು ಕೀರತಪುರದಲ್ಲಿ

ಕಳೆದು ಅಲ್ಲಿಯೇ 1661ರಲ್ಲಿ ನಿಧನರಾದರು. ಗುರು ಹರ್‌ಕ್ರಿಷನ್ ಅವರು ಕೇವಲ ಮೂರು ವರ್ಷಗಳ ಕಾಲ ಗುರುವಾಗಿದ್ದ ಕಾರಣದಿಂದ ಅವರು ತಪಲ್ ಅಥವಾ ಲೋಹಗಡಕ್ಕೆ ಭೇಟಿ ನೀಡಲಾಗಲಿಲ್ಲ. ಗುರು ತೇಗ್ ಬಹದ್ದೂರ್ ಅವರು ಚಕ್ ನಾನಕಿ ಪಟ್ಟಣವನ್ನು 1665ರಲ್ಲಿ ಸ್ಥಾಪಿಸಿದರು. (ಈಗ ಅದು ಆನಂದ್‌ಪುರ ಸಾಹಿಬ್‌ನ ಭಾಗ) ಅವರು ಸುಮಾರು ನಾಲ್ಕು ವರ್ಷಗಳ ಕಾಲ (1666 ರಿಂದ 1670) ಉತ್ತರ ಪ್ರದೇಶದ, ಬಿಹಾರ, ಬಂಗಾಳ ಮತ್ತು ಅಸ್ಸಾಂನಲ್ಲಿ ಸಂಚರಿಸಿ ಧರ್ಮೋಪದೇಶ ನೀಡಿದರು. ಈ ಸಮಯದಲ್ಲಿ ಲಖಿ ರಾಯ್ ವಂಜಾರ ಮತ್ತು ಅವರ ಮಕ್ಕಳು ಲೋಹಗಡ ಕೋಟೆಯ ಉಸ್ತುವಾರಿಯನ್ನು ವಹಿಸಿದ್ದರು.

ಗುರು ತೇಗ್ ಬಹದ್ದೂರ್ ಅವರು 1675ರಲ್ಲಿ ಹುತಾತ್ಮ ಪಟ್ಟವನ್ನು ಅಲಂಕರಿಸಿದರು. ಗುರು ಗೋವಿಂದ್ ಸಿಂಗ್ ಅವರು ಚಕ್ ನಾನಕಿಯಲ್ಲಿ ಹತ್ತು ವರ್ಷ (1685ರವರೆಗೆ) ಕಳೆದರು. ಅವರು 1685ರ ಏಪ್ರಿಲ್‌ನಲ್ಲಿ ನಹನ್‌ಗೆ ಭೇಟಿ ನೀಡಿ ಪಾವೊಂತ ಸಾಹಿಬ್ ಪಟ್ಟಣ ಸ್ಥಾಪಿಸಿದರು. ಈ ಅವಧಿಯಲ್ಲಿ ಅವರು ಲೋಹಗಡ ಕೋಟೆಯ ನಿರ್ಮಾಣದ ಅಂತಿಮ ಕಾರ್ಯಗಳನ್ನು ನೋಡಿಕೊಂಡರು. ಭಾಯ್ ಲಖಿ ರಾಯ್ ವಂಜಾರ 1680ರಲ್ಲಿ ನಿಧನರಾದರು. ಆದರೆ ಅವರ ಮಕ್ಕಳು ಗುರುವಿನೊಡನೆ ಉಳಿದರು. ಅವರು ಗುರುಗಳ ಸೇನೆಯ ಭಾಗವಾಗಿದ್ದು ಗುರುಗಳು ಮಾಡಿದ ಎಲ್ಲ ಯುದ್ಧಗಳಲ್ಲಿ ತೊಡಗಿಸಿಕೊಂಡಿದ್ದರು.

1688 ನವೆಂಬರ್‌ನಲ್ಲಿ ಗುರು ಗೋವಿಂದ್ ಸಿಂಗ್ ಅವರು ಚಕ್ ನಾನಕಿಗೆ ಹಿಂತಿರುಗಿ, ಚಕ್ ನಾನಕಿ, (ಫತೇಗಡ), ಆನಂದಪುರ ಸಾಹಿಬ್ (ಆನಂದಗಡ), ಸಹೋಟ (ಲೋಹಗಡ), ತೀರ್‌ಗಡ (ತೀರ್‌ಗಡ) ಮತ್ತು ಆಗಮ್‌ಗಡ (ಹೋಲ್‌ಗಡ / ಆಗಮ್‌ಗಡ) ಎಂಬ ಐದು ಕೋಟೆಗಳ ನಿರ್ಮಾಣವನ್ನು ಐದು ವಿವಿಧ ಸ್ಥಳಗಳಲ್ಲಿ ಆರಂಭಿಸಿದರು.

---

**ಅಡಿ ಟಿಪ್ಪಣಿಗಳು**

1. ನಹನ್ ಅಥವಾ ಸಿರಮಾರ್ ರಾಜ್ಯದ ರಾಜರುಗಳಿಗೂ ಸಿಕ್ಖರಿಗೂ ಗುರು ಹರ್‌ಗೋವಿಂದ್ (1590–1644) ಅವರ ಕಾಲದಿಂದಲೂ ಗಾಢವಾದ ನಂಟಿತ್ತು. ಒಂದು ಮೂಲದ ಪ್ರಕಾರ ರಾಜ್ಯವನ್ನು ಶೋಭ ರಾವಲ್ ಅವರು ಸ್ಥಾಪಿಸಿದರು (1095). ನಹನ್ ನಗರವನ್ನು ಕರಮ್ ಪ್ರಕಾಶ್ (1616–1630ರವರೆಗೆ ಆಳ್ವಿಕೆ) ಸ್ಥಾಪಿಸಿದ. ಆತ ಗುರು ಹರ್‌ಗೋವಿಂದರ ಅಭಿಮಾನಿ. ಗುರುಗಳು ಗ್ವಾಲಿಯರ್ ಕೋಟೆಯ ಬಂಧೀಖಾನೆಯಿಂದ 52 ಹಿಂದೂ ರಾಜರು, ರಾಜಕುಮಾರರು ಮತ್ತು ಮಂತ್ರಿಗಳನ್ನು 1619ರಲ್ಲಿ ಬಂಧ ಮುಕ್ತರಾಗಿಸಿದ್ದನ್ನು ಕೇಳಿ ನಂತರ ಆತ ಗುರುಗಳ ಜೊತೆ ಗೆಳೆತನ ಬೆಳೆಸಿದ. 1621ರಲ್ಲಿ ಗುರು ಹಿಂದೂ ಪಾಳೆಯಗಾರರು ಮತ್ತು ಡಾವೋಬಾ ವಲಯದ ಮುಘಲ್ ಸೇನಾಧಿಕಾರಿಗಳ ನೇತೃತ್ವದ ಸೈನ್ಯ ಪಡೆಯನ್ನು ಸೋಲಿಸಿದರು. ಕರಂ ಚಂದ್ ನಿಧನನಾದ ನಂತರ ರಾಜನಾದ ಮಂಧಾಟ ಪ್ರಕಾಶ್ (1630–1654)ಗೆ, ಗುರು ಹರ್‌ಗೋವಿಂದ್ ಮತ್ತು ಗುರು ಹರ್‌ರಾಯ್ (1631–1661) ಜೊತೆ ಮೈತ್ರಿಯಿತ್ತು. ಕೆಹಲೂರ್ ರಾಜ್ಯದ ರಾಜ ತಾರಾ ಚಂದ್ ಮುಘಲ್ ಸಾಮ್ರಾಟ ಶಹಜಹಾನ್‌ನಿಗೆ ತೆರಿಗೆ ಕೊಡುವುದನ್ನು ನಿಲ್ಲಿಸಿದಾಗ, ಸಾಮ್ರಾಟ ಆತನ ಬಂಧನಕ್ಕೆ ಆಜ್ಞೆ ಮಾಡಿದ. ಗುರುಗಳು ಸಂಧಾನ ಮಾಡಿಕೊಳ್ಳುವಂತೆ ಹೇಳಿದ ಮಾತಿಗೂ ಜಗ್ಗಲಿಲ್ಲ. ಆತ ಗುರು ಕೀರತಪುರವನ್ನು ತೊರೆದು ಲೋಹಗಡ ವಲಯದಲ್ಲಿರುವ, ನಹನ್ ರಾಜ್ಯದ

ತಪಲ್‌ಗೆ ಬಂದರು. ಅಲ್ಲಿ 13 ವರ್ಷ ತಂಗಿದ್ದರು. ಮಂಧಾಟ ಪ್ರಕಾಶ್ ನಂತರ ಸೌಭಾಗ್ ಪ್ರಕಾಶ್ (1654–1664) ಮತ್ತು ಆತನ ನಂತರ ಬುಧ್ ಪ್ರಕಾಶ್ (1664–1684) ಆಳ್ವಿಕೆಗೆ ಬಂದರು. ಬುಧ್ ಪ್ರಕಾಶ್ ಗುರು ತೇಗ್ ಬಹದ್ದೂರ್ ಜೊತೆ ಮೈತ್ರಿಯಿಂದ ಇದ್ದರು. 1684ರಲ್ಲಿ ಆತನ ನಿಧನವಾದ ನಂತರ ಪಟ್ಟಕ್ಕೆ ಬಂದಾ ಮತ್ ಪ್ರಕಾಶ್ (1684–1704) ಸಿರಾಮಾರ್ ರಾಜ್ಯವನ್ನು ಆಳಿದ. ಸಿಖ್ ಮೂಲಗಳಲ್ಲಿ ಆತನನ್ನು ಮೇದಿನಿ ಪ್ರಕಾಶ್ ಎಂದು ಉಲ್ಲೇಖಿಸಿದೆ. 1685ರಲ್ಲಿ ಮೇದಿನಿ ಪ್ರಕಾಶ್ ಗುರು ಗೋವಿಂದ್ ಸಿಂಗ್ ಅವರಿಗೆ ತನ್ನ ರಾಜ್ಯದಲ್ಲಿ ಅವರ ಕೇಂದ್ರ ಸ್ಥಾನ ಸ್ಥಾಪಿಸಲು ಮನವಿ ಮಾಡಿಕೊಂಡ. ಅದರಂತೆ ಗುರು ಗೋವಿಂದ್ ಸಿಂಗ್ ಅವರು ಪಾವೊಂಟ ಸಾಹಿಬ್ ಸ್ಥಾಪಿಸಿ 1685ನೇ ಏಪ್ರಿಲ್‌ನಿಂದ 1688ರ ಅಕ್ಟೋಬರ್ 27 ರವರೆಗೆ ತಂಗಿದ್ದರು.

ಮೇದಿನಿ ಪ್ರಕಾಶ್ ನಂತರ ಪಟ್ಟಕ್ಕೆ ಬಂದಾ ಆತನ ಮಗ ಬಿಜಯ್ ಪ್ರಕಾಶ್ ಮುಘಲರ ವಿರುದ್ಧದ ಯುದ್ಧಗಳಲ್ಲಿ ಬಂದಾ ಬಹದ್ದೂರ್ ಸಿಂಗ್ ಜೊತೆ ಕೈ ಜೋಡಿಸಿದ. ಆತ ಸೆರೆಯಾಳಾಗಿ 1710 ರಿಂದ ಒಂದು ವರ್ಷಕಾಲ ಸಲೀಂಗಡದ ಬಂಧೀಖಾನೆಯಲ್ಲಿದ್ದ. ಅನಂತರ ತನ್ನ ಬಿಡುಗಡೆ ಪಡೆದ ಆತ ಸಿಕ್ಖರ ವಿರುದ್ಧದ ಹೋರಾಟದಲ್ಲಿ ಮುಘಲರನ್ನು ಸೇರಿಕೊಂಡ.

2. ಹರಿಯಾಣದಲ್ಲಿ ಮೂರು ಮುಷ್ರೋಲಿ ಹೆಸರಿನ ಗ್ರಾಮಗಳಿವೆ. (ಸಮಲ್ಕ ತಾಲೂಕು, ಬಿಲಾಸ್‌ಪುರ ತಾಲೂಕು ಮತ್ತು ಜಜ್ಜರ್ ತಾಲೂಕು). ಇವೆಲ್ಲವೂ ಭಾಯ್ ಲಖಿ ರಾಯ್ ವಂಜಾರ ಜೊತೆ ಸಂಬಂಧ ಹೊಂದಿವೆ.

3. ಮೂರನೇ ಗುರು ಅಮರ್ ದಾಸ್ ಜಿ ಅವರು ನಹನ್‌ನಲ್ಲಿ ಗಂಗುಶಾಹಿ ಮಂಜಿ ಎಂಬ ಹೆಸರಿನ ಮಂಜಿಯನ್ನು ಯಮುನಾ ನಗರದಿಂದ 50 ಕಿ.ಮೀ. ದೂರದಲ್ಲಿ ಸ್ಥಾಪಿಸಿದರು. ಈಗಿನ ಸಿರಾಮಾರ್ ಜಿಲ್ಲೆ ಮತ್ತು ಯಮುನಾ ನಗರ ಜಿಲ್ಲೆಯಲ್ಲಿ ಸಿಖ್ ಪ್ರಭಾವ ಗಾಢವಾಗಿತ್ತೆಂಬುದಕ್ಕೆ ಇದು ನಿದರ್ಶನ.

4. ಲಖಿ ರಾಯ್ ವಂಜಾರ ಅವರನ್ನು ಲಖಿ ಶಾ ಎಂದೂ ಕರೆಯುತ್ತಾರೆ. ಹಿಂದೂಸ್ತಾನಿಯಲ್ಲಿ **'ರಾಯ್'** ಮತ್ತು ಪರ್ಶಿಯನ್ ಭಾಷೆಯಲ್ಲಿ **'ಶಾ'** ಎಂದರೆ **'ರಾಜ'** ಎಂದರ್ಥ.

5. ಈ ಸ್ಥಳವು ಈಗ ಉತ್ತರ ಪ್ರದೇಶದ ಮುರದಾಬಾದ್ ವಿಭಾಗದ ರಾಮ್‌ಪುರ್ ಜಿಲ್ಲೆಯಲ್ಲಿದೆ. ಕೆಲವು ಭಾಗ ಉತ್ತರಕಾಂಡದಲ್ಲಿದೆ.

6. ಮೋತಿಲಾಲ್ ರಾಥೋಡ್ ವಂಜಾರ ಸಮುದಾಯ (ಹಿಂದಿ) ಪುಟ 121.

7. ಜಾನ್ಸನ್ ಗೋರ್ಡನ್, ಬೇಲಿ ಸಿ.ಎ. (ಸಂಪಾದಕರು) The Mughal Empiro, The New Cambridge History of India 1.5.1. The Mughals and their Contemporaries. Cambridge University Press. Vol. 1. P. 190.

8. ಎಸ್.ಜಿ. ದೇವಗಾಂವ್‌ಕರ್, Caste and Tribes of India-3, The Vanjara, Chapter 2.

9. ಆಗ್ರ ಕೋಟೆಯು ಸಹ ಕೆಂಪುಕೋಟೆಯೆಂದೇ ಪ್ರಸಿದ್ಧಿ. ಅದು 94 ಎಕರೆ ವಿಸ್ತೀರ್ಣದಲ್ಲಿದೆ. ಇಲ್ಲಿ ಮೊದಲು ಇಟ್ಟಿಗೆಯ ಕಿರು ಕೋಟೆಯೊಂದು ಅಸ್ತಿತ್ವದಲ್ಲಿತ್ತು. ಇದನ್ನು ಅಕ್ಬರ್ ಕಾಲದಲ್ಲಿ ದುರಸ್ತಿ ಮಾಡಿಸಿ 1568 ರಿಂದ 1573 ರ ಅವಧಿಯಲ್ಲಿ ವಿಸ್ತರಿಸಲಾಯಿತು.

ಅಕ್ಬರ್ ರಾಜಸ್ತಾನದಿಂದ ಕೆಂಪು ಶಿಲೆಗಳನ್ನು ತರಿಸಿ ಹೊರಗೋಡೆಯನ್ನು ಕಟ್ಟಿಸಿದ. ಹಾಗಾಗಿ ಇದಕ್ಕೆ ಲಾಲ್‌ಕಿಲ್ಲಾ ಅಥವಾ ಕೆಂಪು ಕೋಟೆ ಎಂಬ ಹೆಸರು ಬಂತು.

10. ದೌಲ ಕುಆಗ್ ಸ್ಥಳವು ನಹನ್–ಪಾವೊಂಟ ರಸ್ತೆಯಿಂದ 20 ಕಿ.ಮೀ. ದೂರದಲ್ಲಿರುವ ಇದನ್ನು ಲಖಿ ರಾಯ್ ನಿರ್ಮಿಸಿದ.

11. ಬಲವಂತ್ ಸಿಂಗ್. Persian Sources on Banda Singh Bahadur, P. 36.

12. ಇರ್ವಿನ್, Later Mughals Vol. 1. P. 109

13. 1711ರಲ್ಲಿ ಮುಘಲ್‌ರಾಜ ಬಹದ್ದೂರ್ ಶಾ ಅಲ್ಲಿ ಕೆಲಕಾಲ ತಂಗಿದ್ದು ಬೆಟ್ಟಗಳಲ್ಲಿ ಭೇಟಿಯಾಡಿದ್ದ. ಇದನ್ನು ಜಯಪುರದ ರಾಜನಿಗೆ ತಾನು ಬರೆದ ಪತ್ರದಲ್ಲಿ ಪಂಚೋಲಿ ಜಗಜೀವನದಾಸ್ ಉಲ್ಲೇಖಿಸಿದ್ದಾನೆ.

14. ಹರ್‌ರಾಮ್ ಗುಪ್ತ ಅವರು ತಮ್ಮ "ಸಿಖ್ ಗುರುಗಳ ಚರಿತ್ರೆ" ಕೃತಿಯಲ್ಲಿ ಹೀಗೆ ಹೇಳಿದ್ದಾರೆ– "ರಾಜಾ ಕರಮ್ ಪ್ರಕಾಶ್‌ನ ಸಾಮ್ರಾಜ್ಯದಲ್ಲಿ ತಪಲ್ ಎಂಬ ಸ್ಥಳವಿರಲಿಲ್ಲ. ಇದು ನಿಸ್ಸಂದೇಹವಾಗಿ ಸಿರಾಮಾರ್ ರಾಜ್ಯದ ರಾಜಧಾನಿ ನಹನ್. ಅನೇಕ ಲೇಖಕರು ಅದನ್ನು ತಪಲ್ ಎಂದೇ ಅಂಗೀಕರಿಸಿದ್ದಾರೆ. ಖುಷವಂತ್ ಸಿಂಗ್ ತಮ್ಮ ಕೃತಿ (ಎ ಹಿಸ್ಟರ್ ಆಫ್ ಸಿಖ್ಸ್, 58)ಯಲ್ಲಿ ಅದನ್ನು ತಕ್ಸಲ್ ಅಥವಾ ಕಸಾಲಿ ಬಳಿಯಿರುವ ತಂಗ್ರಲ್ ಎಂದು ಅಭಿಪ್ರಾಯಪಟ್ಟಿದ್ದಾರೆ. ಹರ್ ರಾಮ್ ಗುಪ್ತ ಅವರು ರಾಮ್‌ರಾಯ್ ಮತ್ತು ಹರ್ ಕ್ರಿಷನ್ ಅವರು ಹುಟ್ಟಿದ ಸ್ಥಳ ನಹನ್ ಎಂದು ಹೇಳಿರುವುದನ್ನು ತಾರಾಲೋಚನ ಸಿಂಗ್ ತಿರಸ್ಕರಿಸುತ್ತಾರೆ. ತನ್ನ ಹೇಳಿಕೆಗೆ ಬೆಂಬಲವಾಗಿ ತಾರಾಲೋಚನ್ ಅವರು "ಗುರು ಹರ್‌ರಾಯ್ ಅವರು ಭೇಟಿ ನೀಡಿರುವುದರ ಸ್ಮರಣಾರ್ಥವಾಗಿ ನಹನ್ ಮತ್ತು ಸಿರಾಮಾರ್‌ನ ಇತರೆ ಸ್ಥಳಗಳಲ್ಲಿ ಯಾವುದೇ ಚಾರಿತ್ರಿಕ ಕುರುಹಿಲ್ಲ."

# ಅಧ್ಯಾಯ-2

# ಲೋಹಗಡ ಕೋಟೆಯ ರಚನೆ ಮತ್ತು ಸ್ಥಳ

ಮುಘಲರ ಬೃಹತ್ ಸೇನೆಯನ್ನು ಎದುರಿಸಲು ಮತ್ತು ಅವರ ಯುದ್ಧ ತಂತ್ರಗಳನ್ನು ನಿಷ್ಫಲಗೊಳಿಸುವ ದೃಷ್ಟಿಯಿಂದ ಲೋಹಗಡದ ಕೋಟೆಯ ನಿರ್ಮಾಣವನ್ನು ರಕ್ಷಣೆಯ ದೃಷ್ಟಿಯಿಂದ ವಿಶಾಲವಾದ ಸ್ಥಳದಲ್ಲಿ ಕೈಗೊಳ್ಳಲಾಯಿತು. ಇದರ ಕೇಂದ್ರ ಭಾಗದಿಂದ ಅದು ಏಳು ಸಾವಿರ ಎಕರೆಗಳಲ್ಲಿ ವಿಸ್ತರಿಸಿದ್ದು, ಅದು ಈಗಿನ ಹರಿಯಾಣ ರಾಜ್ಯದ ಯಮುನಾ ನಗರ ಜಿಲ್ಲೆ ಮತ್ತು ಹಿಮಾಚಲ ಪ್ರದೇಶದ ಸಿರ್‌ಮಾರ್ ಜಿಲ್ಲೆಯಲ್ಲಿ ವ್ಯಾಪಿಸಿದೆ. ಇಂಥ ವಿಶಾಲ ಪ್ರದೇಶದಲ್ಲಿ ಕೋಟೆಯನ್ನು ನಿರ್ಮಿಸಲು ಪುರಾತತ್ವ ಸಾಕ್ಷ್ಯಗಳು ಮತ್ತು ಲೋಹಗಡ ಕೋಟೆಯ ಬಗೆಗಿನ ಸಂಶೋಧನೆಗಳು ಸುಮಾರು 70 ರಿಂದ 80 ವರ್ಷ ತೆಗೆದುಕೊಂಡಿರಬಹುದೆಂದು ಸೂಚಿಸುತ್ತವೆ. ಯಮುನಾನಗರದ ಲೋಹಗಡ ಟ್ರಸ್ಟ್ ಪುರಾತತ್ವ ವಿಜ್ಞಾನಿಗಳಿಂದ ಹಾಗೂ ಟೈಂ ಅಂಡ್ ಮೋಷನ್ ಸಂಸ್ಥೆಯ ಇಂಜಿನೀಯರುಗಳಿಂದ ಸಾಕ್ಷ್ಯವನ್ನು ಸಂಗ್ರಹಿಸಿದೆ[1]. ಕೋಟೆಯ ಪ್ರದೇಶವು ಲೋಹಗಡ, ಹರಿಪುರ, ಚಿಲೆ, ಮೆಹ್ತವಾಡಿ, ಪಲೋರಿ, ಸುಕ್ರೋನ, ಮಹರೊನ್‌ವಾಲ (ಹಿಮಾಚಲ ಪ್ರದೇಶ) ಹಾಗೂ ಹರಿಯಾಣ ರಾಜ್ಯದ ಭಗವಾನ್‌ಪುರ ನತೋರಿ, ದನೌರ, ನಗ್ಲಿ ಮತ್ತು ಮೊಹಿಂದಿನ್‌ಪುರದ ಕಂದಾಯ ಜಮೀನಿನಲ್ಲಿ ಹರಡಿದೆ. ಈ ಕೋಟೆಯ ಸುತ್ತಳತೆ ಸುಮಾರು 50 ಕಿ.ಮೀ. ಲೋಹಗಡ ಕೋಟೆಯ ಬುರುಜುಗಳು ಡಾಬರ್ ಬೆಟ್ಟಗಳಲ್ಲಿ ಹರಡಿದೆ. ಇದು ಒಂದು ಕಮಾನಿನಾಕಾರದ ಕಲಾತ್ಮಕ ರಚನೆಯಂತಿದ್ದು ಯಮುನಾ ನದಿಯಿಂದ ಮಾರ್ಕಂಡ ನದಿಯವರೆಗೆ ಚಾಚಿದೆ. ಈ ಪ್ರದೇಶದಲ್ಲಿರುವ ಬೆಟ್ಟಗಳಲ್ಲಿನ ಒಟ್ಟಾರೆ ಕೋಟೆಯ ಪ್ರದೇಶ 60,000 ಎಕರೆಗಳವರೆಗೆ ಹಬ್ಬಿದೆ. ಸಂಶೋಧನಾ ಕಾರ್ಯಕ್ಕಾಗಿ ಕೋಟೆಯನ್ನು 32 ವಿಭಾಗಗಳಾಗಿ ವಿಭಜಿಸಿದೆ. ಲೋಹಗಡ ಕೋಟೆಯ ಮೇಲೆ ದಾಳಿ ಮಾಡುವ ಮೊದಲು ಮುಘಲ್ ಸೇನೆಯನ್ನು ಬಯಲಿನಲ್ಲಿ ತಡೆಯಲು ಕೈಗೊಂಡಿರುವ ರಕ್ಷಣಾ ಕ್ರಮಗಳು ಕುರುಕ್ಷೇತ್ರ ಮತ್ತು ಕರ್ನಲ್ ಜಿಲ್ಲೆಗಳ ಲಡ್ವ ಮತ್ತು ಇಂದ್ರಿಯವರೆಗೆ ಚಾಚಿವೆ. ಪುರಾತತ್ವ ಸಮೀಕ್ಷೆಗಳು ಹಾಗೂ ಪರ್ಶಿಯನ್ ದಾಖಲೆಗಳನ್ನು ಪರಿಶೀಲಿಸಿದ ನಂತರ ಸ್ಪಷ್ಟವಾಗಿ ವೇದ್ಯವಾದ ಸಂಗತಿಯೆಂದರೆ, ಕೋಟೆಯ ಚೌಕಿಗಳನ್ನು ಈಗಿನ ಯಮುನಾ ನಗರ ಜಿಲ್ಲೆಯಲ್ಲಿರುವ ಶಿವಾಲಿಕ್ ಬೆಟ್ಟಗಳು, ಅಂಬಾಲ (ತೋಕ ಸಾಹಿಬ್ ಪ್ರದೇಶ) ಮತ್ತು ಪಂಚ್‌ಕುಲ (ನಂದ ಸಾಹಿಬ್ ಹತ್ತಿರದ ಚೌಕಿಹಳ್ಳಿ)ಗಳಲ್ಲಿ ಸ್ಥಾಪಿಸಲಾಗಿತ್ತು. ಕೊನೆಯದಾಗಿ ಸಿಕ್ಖರು ಮತ್ತು ಬಂದಾ ಬಹುದ್ದೂರ್ ಸಿಂಗ್ ಕಟ್ಟಿದ ಕೋಟೆ ಪಿಂಜೋರ್ ಹತ್ತಿರ ಕಂಡುಬಂದಿದೆ. ಬಂದಾ ಸಿಂಗ್ ಬಹುದ್ದೂರ್ ಮುಘಲ್ ಸೇನೆಯನ್ನು ಬಹಳ ವಿಸ್ತಾರವಾದ ಪ್ರದೇಶದಲ್ಲಿ ಎದುರಿಸಿದ. ಅದು ಪಂಜಾಬಿನ ಜಲಂಧರ್ ದೋಬಾದಿಂದ ಹಿಡಿದು ಸುಬ ದೆಹಲಿಯ ಬರೇಲಿವರೆಗಿತ್ತು[2].

ಆದುದರಿಂದ ಕೋಟೆಯನ್ನು ಪಂಜಾಬಿನ ಶಿವಾಲಿಕ್ ಬೆಟ್ಟಗಳಿಂದ ಉತ್ತರ ಪ್ರದೇಶದವರೆಗೆ ನಿರ್ಮಿಸಿರುವುದು ಸ್ಪಷ್ಟವಾಗಿದೆ. ಅನೇಕ ಸ್ಥಳಗಳಲ್ಲಿ ಪ್ರಕೃತಿಯನ್ನು ರಕ್ಷಣಾ ತಂತ್ರವಾಗಿ ಕುಶಲದಿಂದ ಬಳಸಿಕೊಳ್ಳಲಾಗಿದೆ. ಕಿರುಗಂಡಿಗಳನ್ನು ನಿರ್ಮಿಸಲು ಬೆಟ್ಟದ ಕಲ್ಲುಗಳನ್ನು ಕೊರೆಯಲಾಗಿದೆ. ಒಂದು ವೇಳೆ ಮುಘಲ್ ಸೇನೆಯು ಏಕಕಾಲಕ್ಕೆ ಒಂದು ಬುರುಜಿನ ಹತ್ತಿರ ಬಂದಾರೆ ಒಂದೇ ಬಾರಿಗೆ ನುಗ್ಗುವುದನ್ನು ತಡೆಯುವ ತಂತ್ರವಾಗಿ ಹಾಗೆ ಮಾಡಲಾಗಿದೆ. ಅಲ್ಲದೆ ಇಂಥ ದಾರಿಗಳಲ್ಲಿ ಒಂದು ಬಾರಿಗೆ ಒಬ್ಬ ಸೈನಿಕ ಮಾತ್ರ ನುಗ್ಗಿ ಬರಲು ಸಾಧ್ಯ. ಒಬ್ಬ ಸೈನಿಕ ನುಸುಳಿದರೆ ಅವನನ್ನು ಎದುರಿಸುವುದು ಕಡಿಮೆ ಸಂಖ್ಯೆಯಲ್ಲಿದ್ದ ಸಿಖ್ ಸೈನಿಕರಿಗೆ ಅನುಕೂಲಕರವಾಗಿತ್ತು. ಈ ರೀತಿಯ ರಕ್ಷಣಾ ತಂತ್ರದಿಂದ ಅವರು ಮುಘಲ್ ಸೇನೆಗೆ ನಷ್ಟವುಂಟು ಮಾಡಿದರು. ಲೋಹಗಡ ಕೋಟೆಯನ್ನು ಅದರ ಹತ್ತಿರವೇ ವಾಸವಾಗಿದ್ದ ಸಾಮಾನ್ಯ ಜನರು ಅಂದರೆ ವಂಜಾರರು ಮತ್ತು ಸಿಕ್ಲಿಗಾರರು ಕಟ್ಟಿದರು. ಇದು ಸುಮಾರು 200 ಬೆಟ್ಟಗಳಲ್ಲಿ ನಿರ್ಮಿಸಲಾದ ಜಗತ್ತಿನ ಅತ್ಯಂತ ದೊಡ್ಡ ಹಾಗೂ ಬಲವಾದ ಕೋಟೆ. ವಿಶ್ವದ ಚರಿತ್ರೆಯಲ್ಲಿಯೇ ಇದು ಯಾವುದೇ ರಾಜರಿಂದ ನಿರ್ಮಿತವಾಗದೇ, ಕೇವಲ ಸಾಮಾನ್ಯ ಜನರು ಕಟ್ಟಿದ ಕೋಟೆಯಾಗಿದೆ.

ಮೊದಲ ಕೋಟೆಯ ಎಲ್ಲೆಕಟ್ಟು ಸಮುದ್ರ ಮಟ್ಟದಿಂದ 1200 ಅಡಿ ಎತ್ತರದಲ್ಲಿ ಆರಂಭವಾಗುತ್ತದೆ. ಕೋಟೆಯ ಕೊನೆಯ ಆಳುವೇರಿ (Rampart)ಯು 1900 ಅಡಿ ಎತ್ತರದ ಬೆಟ್ಟದ ಶಿಖರದಲ್ಲಿ ಕಂಡುಬರುತ್ತದೆ. ಪ್ರತಿಯೊಂದು ಬೆಟ್ಟದಲ್ಲೂ ಪ್ರತ್ಯೇಕವಾದ, ಸ್ವತಂತ್ರವಾದ ರಕ್ಷಣಾ ವ್ಯವಸ್ಥೆಯಿತ್ತು. ಜಗತ್ತಿನ ಶಕ್ತಿಶಾಲಿ ಮುಘಲರ ಸೇನೆಯನ್ನು ಎದುರಿಸಲು ಇಂತಹ ಆಯಕಟ್ಟಿನ ಕೋಟೆಯನ್ನು ನಿರ್ಮಿಸಲಾಗಿತ್ತು. ಅತ್ಯಂತ ಸುಧಾರಿತ ಶಸ್ತ್ರಗಳನ್ನೊಳಗೊಂಡ ಮುಘಲ್ ಸೇನೆಯು ಕೋಟೆಯ ಒಳಗಡೆ ವಾಸವಿರುವ ಜನರಿಗೆ ಅಗತ್ಯ ವಸ್ತುಗಳು ಸರಬರಾಜು ಆಗುವುದನ್ನು ತಡೆದು ಕೋಟೆಗೆ ಮುತ್ತಿಗೆ ಹಾಕುತ್ತಿತ್ತು. ಆಗ ಕೋಟೆಯಲ್ಲಿದ್ದ ಸೈನಿಕರು ಶರಣಾಗದೆ ಗತ್ಯಂತರವಿರಲಿಲ್ಲ. ಮುಘಲರ ಬಹುತೇಕ ದಾಳಿಗಳು ಸಣ್ಣಪುಟ್ಟ ಸಂಘರ್ಷಗಳನ್ನು ಬಿಟ್ಟರೆ ದೀರ್ಘಕಾಲ ಮುತ್ತಿಗೆ ಹಾಕಿ ಎದುರಾಳಿಗಳನ್ನು ಮೆತ್ತಗೆ ಮಾಡುವ ತಂತ್ರಗಳನ್ನು ಬಳಸುತ್ತಿದ್ದವು[3]. ಗೆರಿಲ್ಲಾ ಯುದ್ಧದಿಂದ ಮುಘಲರನ್ನು ಗೆಲ್ಲಲಾಗುತ್ತಿರಲಿಲ್ಲ[4]. ಈ ರೀತಿಯ ಹಲವು ಪ್ರಕರಣಗಳಲ್ಲಿ ಗುರುಗಳು ತಮ್ಮ ಅನುಯಾಯಿಗಳ ಪಡೆಗಳಿಗೆ ಉತ್ತಮ ರಕ್ಷಣಾ ತಂತ್ರವಿರುವ ಪಟ್ಟಣ ಮತ್ತು ಕಟ್ಟಡಗಳನ್ನು ಕ್ರಮಬದ್ಧವಾಗಿ ಕಟ್ಟುವಂತೆ ಸಲಹೆ ಮಾಡುತ್ತಿದ್ದರು. ಜೊತೆಗೆ ಸೈನಿಕ ತರಬೇತಿ ಸಹ ಇರಬೇಕೆಂದು ಪ್ರೇರೇಪಿಸುತ್ತಿದ್ದರು.

ಹಿಂದಿನ ಕಾಲದಲ್ಲಿ ನಿಸರ್ಗವನ್ನು ರಕ್ಷಣೆಗಾಗಿ ಬಳಸಿಕೊಳ್ಳಲಾಗುತ್ತಿತ್ತು. ನಿಬಿಡವಾದ ಅರಣ್ಯಗಳನ್ನು ವನದುರ್ಗ ಎಂತಲೂ, ಬೆಟ್ಟ / ಪರ್ವತಗಳನ್ನು ಪರ್ವ ದುರ್ಗ ಎಂತಲೂ ಕರೆಯುತ್ತಿದ್ದರು. (ದುರ್ಗ ಎಂದರೆ ಕೋಟೆ) ಲೋಹಗಡ ಕೋಟೆಗೆ ಸಂಬಂಧಿಸಿದಂತೆ ಸಿಖ್ ಸೇನೆಗೆ ಅನುಕೂಲಕರವಾಗಿ ವನದುರ್ಗ ಮತ್ತು ಪರ್ವ ದುರ್ಗಗಳೆರಡೂ ಬೆಂಗಾವಲಾಗಿದ್ದವು. ಅದರ ಭೌಗೋಳಿಕ ಪ್ರದೇಶ ಅಂತಹ ಆಯಕಟ್ಟಿನ ಪ್ರದೇಶದಲ್ಲಿತ್ತು. ಕೋಟೆಯ ಉತ್ತರ ಮತ್ತು ದಕ್ಷಿಣದ ಕಡೆಗೆ ನಿಬಿಡ ಅರಣ್ಯಗಳಿದ್ದವು. ಇವುಗಳ ಒಟ್ಟು ಅಗಲ 14 ಕಿ.ಮೀ. ಬಾಬ ಬಂದಾ ಸಿಂಗ್ ಬಹದ್ದೂರ್ 1709ರಲ್ಲಿ ಲೋಹಗಡ ಕೋಟೆಯನ್ನು ಸಿಖ್ ರಾಜ್ಯದ ರಾಜಧಾನಿಯಾಗಿ ಸ್ಥಾಪಿಸಿದ. ಸಿಖ್ ಸೇನೆಗೆ ಅಲ್ಲಿ ಯಥೇಚ್ಛ ನೀರು ಮಾತ್ರವಲ್ಲ, ಶತ್ರು ಸೇನೆ ಕಡೆಗೆ ಹರಿದುಹೋಗುವ ನೀರಿನ ಮೇಲೆ ಸಹ ನಿಯಂತ್ರಣವಿತ್ತು. ಈ ಕೋಟೆಯು ಎರಡು ಸುತ್ತಿನ ಕೋಟೆಯಾಗಿತ್ತು.

ಒಂದು ಸುತ್ತು ಬೆಟ್ಟದ ಸುತ್ತು ಚಲಿಸಿದರೆ ಮತ್ತೊಂದು ನದಿ, ಝರಿಯ ಗುಂಟ ಸಾಗುತ್ತಿತ್ತು. ಕೋಟೆಯ ಪ್ರದೇಶದ ಹರಿಯುವ ಹಳ್ಳಗಳು ಕೋಟೆಯನ್ನು ಆಯಕಟ್ಟಿನಲ್ಲಿ ವಿಭಜಿಸುತ್ತಿದ್ದವು. ಹೇಗೆಂದರೆ, ಪ್ರತಿಯೊಂದು ವಿಭಜಿತ ಕೋಟೆಯ ಪ್ರದೇಶವು ಇನ್ನೊಂದು ಪ್ರದೇಶಕ್ಕೆ ರಕ್ಷಣೆಯಾಗಿರುತ್ತಿದ್ದವು. ಒಂದು ಬದಿಯ ಕೋಟೆಯನ್ನು ಶತ್ರು ವಶಪಡಿಸಿಕೊಂಡರೂ, ಕೋಟೆಯು ಹಳ್ಳಗಳಿಂದ ವಿಭಜನೆಗೊಂಡು ರಕ್ಷಣಾ ಘಟಕಗಳಾಗಿ ನಿರ್ಮಾಣವಾಗುತ್ತಿದ್ದರ ಪರಿಣಾಮ ಇಡೀ ಕೋಟೆಯನ್ನು ಒಂದೇ ಕಾಲಕ್ಕೆ ವಶಪಡಿಸಿಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲ. ಸಿಖ್ ಸೈನಿಕರು ಯಾವುದೇ ಕೋಟೆಯಲ್ಲಿ ಆಯಕಟ್ಟಿನ ಸ್ಥಳದಲ್ಲಿ ಇರುತ್ತಿದ್ದ ಕಾರಣ, ಕೋಟೆಯ ಭಾಗವನ್ನು ಶತ್ರು ಸೈನ್ಯದಿಂದ ಮರುವಶಪಡಿಸಿಕೊಳ್ಳಬಹುದಿತ್ತು. ಬುರುಜುಗಳನ್ನು ಯಾವ ರೀತಿ ನಿರ್ಮಿಸಿದ್ದರೆಂದರೆ, ಒಂದು ಮತ್ತೊಂದನ್ನು ರಕ್ಷಿಸಬಹುದಿತ್ತು. ಕಾವಲು ಗೋಪುರ / ಚೌಕಿಗಳನ್ನು ಸಹ ಎಂಥ ಆಯಕಟ್ಟಿನ ಜಾಗಗಳಲ್ಲಿ ನಿರ್ಮಿಸಿದ್ದರೆಂದರೆ, ಸೋಮ ನದಿಯನ್ನು ಕೋಟೆಯ ಯಾವ ಭಾಗದಿಂದಲಾದರೂ ನೋಡಬಹುದಿತ್ತು. ಹಾಗಾಗಿ ಸಿಖ್ ಸೈನಿಕ ಸಂಖ್ಯೆ ಶತ್ರು ಸೈನಿಕರ ಪ್ರಮಾಣಕ್ಕಿಂತ ಕಡಿಮೆಯಿದ್ದರೂ, ಕೋಟೆಯ ರಕ್ಷಣಾ ತಂತ್ರ ಅವರಿಗೆ ಹೆಚ್ಚು ಅನುಕೂಲಕರವಾಗಿತ್ತು. ಅಭೇದ್ಯವಾದ ಮತ್ತು ಬಲಶಾಲಿಯಾದ ಲೋಹಗಡ ಕೋಟೆಯನ್ನು ಭೇದಿಸಲು ಯಾವ ಫಿರಂಗಿಗಳಿಗೂ ಸಾಧ್ಯವಾಗುತ್ತಿರಲಿಲ್ಲ. ಕೋಟೆಯ ಪಾರ್ಶ್ವಗಳು ಮತ್ತು ಹಿಂಭಾಗಗಳಿಗೆ ಸಣ್ಣ ಕಮರಿಗಳು ರಕ್ಷಣೆ ನೀಡಿದರೆ ಮುಂಭಾಗದ ಗೋಡೆ ಎತ್ತರವಾಗಿ ಲಂಬವಾಗಿದ್ದವು. ಬೆಟ್ಟದ ಕಡೆ ಉಷ್ಣ ವಲಯದ ಪೊದೆಗಳು, ಅಭೇದ್ಯವಾದ ಮುಳ್ಳು ಕಂಟಿಗಳು, ಪಾಪಾಸುಕಳ್ಳಿಗಳಿಂದ ತುಂಬಿದ್ದು ದೊಡ್ಡ ಮಟ್ಟದಲ್ಲಿ ದಾಳಿ ಮಾಡಲು ಅಸಾಧ್ಯವಾಗಿತ್ತು. ಹಾಗಾಗಿ ಅತ್ಯಂತ ಬಲವಾದ ರಕ್ಷಣೆಯಿದ್ದ ಕೋಟೆಯಾಗಿತ್ತು. ಒಂದು ವೇಳೆ ಮುತ್ತಿಗೆ ಯಶಸ್ವಿಯಾದರೆ ಸೈನಿಕರು ತಪ್ಪಿಸಿಕೊಂಡು ಹೋಗಲು ಅನೇಕ ರಹಸ್ಯ ದಾರಿಗಳಿದ್ದವು. ಇಂಥ ದೊಡ್ಡ ಕೋಟೆಯನ್ನು ಒಂದೆರಡು ವರ್ಷಗಳಲ್ಲಿ ಕಟ್ಟುವುದು ಸಾಧ್ಯವೇ ಇಲ್ಲ. ಅದು 1200 ರಿಂದ 1900 ಅಡಿ ಎತ್ತರದ ಪ್ರದೇಶ. ನಿಬಿಡವಾದ ಅರಣ್ಯಗಳ ಪ್ರದೇಶ. ಸಾಮಾನ್ಯ ವ್ಯಕ್ತಿಯೊಬ್ಬ ಇಂಥ ಅರಣ್ಯವನ್ನು ಭೇದಿಸಿ ಸಮೀಕ್ಷೆ ಮಾಡುವುದು ಸಹ ದುಸ್ತರ. ಈ ಪ್ರದೇಶ ಸುಣ್ಣ ಕಲ್ಲಿನಿಂದ ಶ್ರೀಮಂತವಾಗಿತ್ತು. ಜೊತೆಗೆ ರೂಪಾಂತರ ಶಿಲೆಗಳ ಆಗರ. ಹಾಗಾಗಿ ಕೋಟೆಯನ್ನು ಕಟ್ಟಲು ಕಚ್ಚಾ ವಸ್ತು ಹತ್ತಿರದಲ್ಲಿಯೇ ದೊರೆಯುತ್ತಿತ್ತು. ಯಥೇಚ್ಛ ನೀರು, ಆಹಾರ, ಶಸ್ತ್ರಗಳಿದ್ದ ರಾಜಧಾನಿ ಲೋಹಗಡ ಕೋಟೆ.

**ಕೋಟೆಯ ಪಶ್ಚಿಮ ಭಾಗ**

ಶಿವಾಲಿಕ್ ಬೆಟ್ಟಗಳ ಅತ್ಯಂತ ಕಡಿಮೆ ಎತ್ತರದ ಬೆಟ್ಟ ಸಾಲೆಂದರೆ ಡಾಬರ್. ಇದರ ಪರ್ವತ ಪಂಕ್ತಿಗಳ ಸಾಲುಗಳು 1200 ರಿಂದ 1900 ಅಡಿ ಎತ್ತರಕ್ಕಿವೆ. ಈ ಪರ್ವತ ಪಂಕ್ತಿಯಲ್ಲಿ ಆರಿಸಿಕೊಂಡ ಯುದ್ಧಭೂಮಿ ಕಾಲ ಅಂಬ್ ಬಳಿ ಇರುವ ಉಧಮ್‌ಗಡದಿಂದ ಕಾಲೇಸರ್‌ವರೆಗೆ ಚಾಚಿಕೊಂಡಿದ್ದು, ಈ ಪರ್ವತ ಪಂಕ್ತಿಯಲ್ಲಿ ಸರಿಯಾಗಿ ಮಧ್ಯಭಾಗವನ್ನು ಲೋಹಗಡ ಕೋಟೆ ನಿರ್ಮಾಣಕ್ಕೆ ಆರಿಸಲಾಯಿತು. ಉತ್ತರ ಭಾಗಕ್ಕೆ ಅಂದರೆ ಉಧಮ್‌ಗಡ ಭಾಗದಲ್ಲಿ ಶಿವಾಲಿಕ್ ಬೆಟ್ಟಗಳಿಂದ ಉಗಮವಾದ ಮಾರ್ಕಂಡ ನದಿ ಹರಿಯುತ್ತದೆ. ಇದು ಉಗಮವಾಗಿ ಡಾಬರ್ ಬೆಟ್ಟಗಳಲ್ಲಿ ಸುಮಾರು 20 ಕಿ.ಮೀ. ಬೆಟ್ಟದ ಗಡಿಯಲ್ಲಿ ಹರಿದು ಅದರ ತಪ್ಪಲನ್ನು ಸೇರುತ್ತದೆ. ಬಯಲನ್ನು ಪ್ರವೇಶಿಸುವಾಗ ನದಿಯ ಪಾತ್ರ ನೂರು ಮೀಟರ್‌ಗೂ ಹೆಚ್ಚು ಅಗಲವಿರುತ್ತದೆ. ಆದರೆ ಅದು ಡಾಬರ್ ಬೆಟ್ಟಗಳಲ್ಲಿ ಸಾಗಿದಂತೆಲ್ಲ ಪಾತ್ರದ ಅಗಲ ಕಿರಿದಾಗುತ್ತಾ, ಹೆಚ್ಚು ಹೆಚ್ಚು ಆಳವಾಗುತ್ತಾ

ಹೋಗುತ್ತದೆ. ಮುಘಲ್ ಸೇನೆಯು 1710 ರಿಂದ 1716 ರವರೆಗೆ ತನ್ನ ಯುದ್ಧ ತಂತ್ರದ ಭಾಗವಾಗಿ ಕೋಟೆಗೆ ಮುತ್ತಿಗೆ ಹಾಕಿದರೂ, ತನ್ನ ಎಂದಿನ ಯಶಸ್ಸನ್ನು ಸಾಧಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ಪ್ರಸ್ತುತ ಕಾಲದಲ್ಲಿ, ಈ ಬೆಟ್ಟಗಳ ಮೂಲಕ ಮಾರ್ಕಂಡ ನದಿಯ ಪಕ್ಕದಲ್ಲಿ ಡಾರು ರಸ್ತೆಯೊಂದನ್ನು ನಹನ್‌ನಿಂದ ಪಾವೊಂಟ ಸಾಹಿಬ್‌ವರೆಗೆ ನಿರ್ಮಿಸಲಾಗಿದೆ. ನದಿಯ ಎಲ್ಲೆಯಿಂದ ಲೋಹಗಡ ಕೋಟೆಯ ಗೋಡೆಯವರೆಗೆ ಮುಳ್ಳು ಕಂಠಿಗಳು, ಕಳ್ಳಿಗಳ ಪೊದೆಗಳು, ಉಷ್ಣವಲಯ ಅರಣ್ಯದ ಸಸ್ಯಗಳು ಮತ್ತು ಜೌಗಿನ ಮಾಳಗಳು ತುಂಬಿ ಹೋಗಿವೆ.

ಹಾಗಾಗಿ, ಕೋಟೆಯ ಗೋಡೆ ಮತ್ತು ಮಾರ್ಕಂಡ ನದಿಯ ನಡುವಿನ ಪ್ರದೇಶವು ಅಭೇದ್ಯವಾದ ನಿಬಿಡ ಅರಣ್ಯದಿಂದ ಆವೃತವಾಗಿದೆ. ಶತ್ರು ಸೈನಿಕರ ಪ್ರವೇಶವನ್ನು ತಡೆಯಲು ಸಿಖ್ ಸೈನಿಕರು ದುರ್ಬಲವಾದ ಸ್ಥಳಗಳಲ್ಲಿ ಆಳುವೇರಿಯನ್ನು ನಿರ್ಮಿಸಿದರು. ಶತ್ರು ಸೈನಿಕರೇನಾದರೂ ಈ ಕಾಡಿನ ಮೂಲಕ ಆಕ್ರಮಣ ಮಾಡಿದರೆ ಅವರನ್ನು ಹಠಾತ್ತನೆ ಎದುರಿಸಲು ಸಿಖ್ ಸೈನಿಕರು ಅಡಗಿ ಕೂರಲು ಅರಣ್ಯಗಳು ನೆರವಿಗೆ ಬಂದಾವು. ಸಿಖ್ ಸೈನಿಕರು ಮಾಡಿಕೊಂಡಿರುವ ರಕ್ಷಣಾ ವ್ಯವಸ್ಥೆಯನ್ನು ಊಹಿಸಲು ಮುಘಲ್ ಸೈನ್ಯಕ್ಕೆ ಸಾಧ್ಯವಿರಲಿಲ್ಲ. ಈ ಪ್ರದೇಶದಲ್ಲಿಯೇ ಹರಿಯುವ ಅನೇಕ ಖೋಲ್ ಅಂದರೆ ತೊರೆಗಳು (ಉದಾ: ಹರಿಪುರ ಖೋಲ್, ಲೋಹಗಡ ಖೋಲ್) ಮಾರ್ಕಂಡ ನದಿಯನ್ನು ಸೇರುತ್ತವೆ.

ಕೋಟೆಯ ದಕ್ಷಿಣ ಭಾಗದಲ್ಲಿ ಬೋಲಿ ನದಿಯೆಂಬ ಹೆಸರಿನ ನದಿಯೊಂದು ಹರಿಯುತ್ತದೆ. ಅದು ಬಯಲನ್ನು ಪ್ರವೇಶಿಸುವ ಮೊದಲು ಡಾಬರ್‌ನ ತಪ್ಪಲನ್ನು ಬೆಟ್ಟ ಸಾಲಿನಿಂದ ಹತ್ತು ಕಿ.ಮೀ. ದೂರದಲ್ಲಿ ಮುಟ್ಟಿ ಮುಂದುವರೆಯುತ್ತದೆ. ಇದು ವರ್ಷ ಪೂರ್ತಿ ಹರಿಯದು. ಮಳೆಗಾಲದಲ್ಲಿ ಹರಿದು ನದಿಯ ತೀರಕ್ಕೆ ಮೇಲಿನಿಂದ ಮರಳನ್ನು ಹೊತ್ತು ತರುತ್ತದೆ. ಈ ಮರಳಿನಲ್ಲಿ ಚಿನ್ನದ ಕಣಗಳಿದ್ದು, ಅದನ್ನು ತೆಗೆಯಲು ಈಗಲೂ ಯಮುನಾ ನಗರದ ಆಡಳಿತ ಗುತ್ತಿಗೆ ನೀಡುತ್ತದೆ. ನದಿಯ ಬೆಟ್ಟಗಳ ಭಾಗವು ಕಡಿದಾದ ಬೆಟ್ಟಗಳಿಂದ ಕೂಡಿದ್ದು, ಲೋಹಗಡ ಕೋಟೆಗೆ ಸುಲಭವಾಗಿ ತಲುಪಬಹುದಾದ ಕೆಲವು ದುರ್ಬಲ ಭಾಗಗಳನ್ನು ಕಂದಕಗಳನ್ನು ತೋಡಿ ಶತ್ರು ನಿವಾರಣೆ ಮಾಡುವ ಕಾರ್ಯವನ್ನು ನೆರವೇರಿಸಲಾಗಿದೆ. ನಗ್ಲಿ ಖೋಲ್‌ನಂತಹ ಇತರ ತೊರೆಗಳೂ ಇವೆ. ನಗ್ಲಿ ತೊರೆಯು ಮುಂದೆ ಪಾತ್ರಲ ಹೆಸರಿನ ದೊಡ್ಡ ನದಿಯಾಗಿ ಪರಿವರ್ತನೆಯಾಗಿದೆ. ಮಳೆಗಾಲದಲ್ಲಿ ಅದು ಸೆಕೆಂಡಿಗೆ 30 ಸಾವಿರ ಘನ ಅಡಿ ನೀರನ್ನು ಹೊರಬಿಡುತ್ತದೆ.

**ಕೋಟೆಯ ದಕ್ಷಿಣ ಭಾಗ**

ಲೋಹಗಡ ಕೋಟೆಯ ದಕ್ಷಿಣ ಭಾಗವು ಬಯಲು ಮುಖವಾಗಿದೆ. ಈ ಪ್ರದೇಶವನ್ನು ಆಹಾರ ಧಾನ್ಯ ಬೆಳೆಯಲು ಸಿಕ್ಖರು ಬಳಸುತ್ತಿದ್ದರು. ಕೋಟೆಯ ಬೆಟ್ಟಗಳು ಮತ್ತು ಬಯಲು ಪ್ರದೇಶದ ನಡುವೆ ಸೋಮ್ ನದಿಯ ಹರಿಯುತ್ತ ಅಂತಿಮವಾಗಿ ಯಮುನಾ ನದಿಯನ್ನು ಸೇರುತ್ತದೆ. ಬೆಟ್ಟದ ತಪ್ಪಲಿನಿಂದ ಸುಮಾರು 10 ಕಿ.ಮೀ. ದೂರದಲ್ಲಿ ಇದು ಹರಿಯುತ್ತದೆ.

ತೊರೆಗಳು ಮತ್ತು ಹಳ್ಳಗಳು ಲೋಹಗಡ ಕೋಟೆ ತಲುಪಲು ಸುಲಭದ ದಾರಿಗೆ ಅಡ್ಡ ಬಂದಿವೆ. ಸೋಮ್ ನದಿಯ ಅಂಚಿನಿಂದ ಬೆಟ್ಟದ ಇಳಿಜಾರು ಕಡಿದಾಗಿದ್ದು ಅಲ್ಲಲ್ಲಿ ಅತಿ ಎತ್ತರಕ್ಕೆ ಚಾಚಿವೆ. ಇದು ಲೋಹಗಡದ ಹಾದಿಯನ್ನು ಇನ್ನಷ್ಟು ಕಠಿಣ ಮಾಡಿದೆ. ಈ ಭಾಗದಿಂದ ದಾಳಿಯೇನಾದರೂ ನಡೆದರೆ ಶತ್ರು ಸೈನ್ಯಕ್ಕೆ ಭಾರಿ ನಷ್ಟವುಂಟು ಮಾಡಲು ಆಳುವೇರಿಗಳನ್ನು

ನಿರ್ಮಿಸಲಾಗಿದೆ. ಶತ್ರು ಸೈನಿಕರ ಚಲನೆಯನ್ನು ದೂರದಿಂದಲೇ ಗುರುತಿಸಲು ಅನೇಕ ರಕ್ಷಣಾ ದುರ್ಗಗಳನ್ನು ನಿರ್ಮಿಸಲಾಗಿದೆ.

ಕೋಟೆಯ ಎತ್ತರದ ಸ್ಥಳಗಳಿಂದ ಸೋಮ್ ನದಿಯನ್ನು ಮತ್ತು ಬಯಲನ್ನು ನೋಡಬಹುದು. ಡಾಬರ್ ಬೆಟ್ಟಗಳಿಂದ ಉಗಮವಾಗುವ ಅನೇಕ ತೊರೆಗಳು, ಕಮರಿಗಳು, ಹಳ್ಳಗಳಲ್ಲಿ ಹರಿಯುವ ನೀರು ಅಂತಿಮವಾಗಿ ಸೋಮ್ ನದಿಯನ್ನು ಸೇರುತ್ತದೆ. ಸೋಮ್ ನದಿಯು ಯಮುನಾ ನದಿಯನ್ನು ಸೇರುತ್ತದೆ. ಬೆಟ್ಟಗಳಲ್ಲಿ ಅಲ್ಲಲ್ಲಿ ದೀಪ ಗೋಪುರಗಳನ್ನು ನಿರ್ಮಿಸಲಾಗಿದೆ. ಬೀಡುಬಿಟ್ಟ ಮುಘಲ್ ಸೈನಿಕರ ಮೇಲೆ ರಾತ್ರಿ ಕೂಟ ಯುದ್ಧ ನಡೆಸಿ ಸುರಕ್ಷಿತವಾಗಿ ಹಿಂದಿರುಗುವ ಸಿಖ್ ಸೈನಿಕರ ಅನುಕೂಲಕ್ಕಾಗಿ ಇವುಗಳನ್ನು ನಿರ್ಮಿಸಲಾಗಿದೆ. ಗೋಪುರದ ಮೇಲಿನ ಸಣ್ಣ ಹೊಂಡದಲ್ಲಿ ಹತ್ತಿ ಬೀಜಗಳನ್ನು ಸುಟ್ಟಾಗ ಅದರಿಂದ ಬರುವ ಪ್ರಕಾಶಮಾನ ಬೆಳಕು ಬಹಳ ದೂರದಿಂದಲ್ಲೇ ಗೋಚರಿಸುತ್ತಿತ್ತು. ಕೋಟೆಯ ಈ ಭಾಗದಲ್ಲಿ ಇಂದ್ರಿ, ಲಡ್ವ ಮತ್ತು ಯಮುನಾ ನದಿಯ ದಡದಿಂದ ಆರಂಭವಾಗಿ 52 ಬುರುಜುಗಳನ್ನು ನಿರ್ಮಿಸಲಾಗಿತ್ತು. ಲೋಹಗಡ ಕೋಟೆಯ 52 ಬುರುಜುಗಳಿದ್ದ ಭಾಗದ ಬಯಲಿನಲ್ಲಿ ಸಿಖ್ ಸೈನಿಕರು ಮತ್ತು ಮುಘಲರ ನಡುವೆ ಬಹುತೇಕ ಯುದ್ಧ ನಡೆಯಿತು.

**ಕೋಟೆಯ ಪೂರ್ವದ ಭಾಗ**

ಕೋಟೆಯ ಹಿಂಭಾಗವಾದ ಪೂರ್ವ ಭಾಗವು ಸಂಪೂರ್ಣ ಅರಣ್ಯಾವೃತ ಪ್ರದೇಶ. ಈಗ ಅದನ್ನು ರಾಷ್ಟ್ರೀಯ ಅರಣ್ಯ ವನವಾಗಿ ಘೋಷಿಸಿದ್ದು, ಹಿಮಾಚಲ ಪ್ರದೇಶಕ್ಕೆ ಸೇರಿದೆ. ಲೋಹಗಡ ಕೋಟೆಯಿಂದ ಪಾವೊಂಟ ಸಾಹಿಬ್ ಮತ್ತು ನಹನ್ ನಗರಗಳವರೆಗೆ ಕರಡಿ, ಚಿರತೆ, ಹುಲಿಗಳಿದ್ದ ಉಷ್ಣವಲಯದ ಪೊದೆ ಮತ್ತು ಹುಲ್ಲಿನ ನಿಬಿಡ ಅರಣ್ಯ ಪ್ರದೇಶವಿತ್ತು. ಬೇಟೆಗಾರರು ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಈಗ ಈ ವನ್ಯ ಪ್ರದೇಶಕ್ಕೆ ರಕ್ಷಣೆ ಒದಗಿಸಲಾಗಿದೆ.

ಆ ಕಾಲದಲ್ಲಿ ಈ ಅರಣ್ಯದ ಅಗಲವು ಕೋಟೆಯ ಗೋಡೆಯಿಂದ ಅಂದಾಜು 8 ಕಿ.ಮೀ. ನಷ್ಟಿತ್ತು. ಲೋಹಗಡ ತಲುಪಲು ಹಲವಾರು ರಹಸ್ಯದಾರಿಗಳಿದ್ದವು. ಇವುಗಳನ್ನು ಸಿಖ್ ಸೈನಿಕರಿಗೆ ಅಗತ್ಯ ವಸ್ತುಗಳನ್ನು ಸರಬರಾಜು ಮಾಡಲು ಇಲ್ಲವೇ ಯುದ್ಧ ಕಾಲದಲ್ಲಿ ತಪ್ಪಿಸಿಕೊಂಡು ಹೋಗಲು ಬಳಸಲಾಗುತ್ತಿತ್ತು. ಈ ಕಳ್ಳದಾರಿಗಳ ಮೂಲಕ ಬಂದಾ ಸಿಂಗ್ ತನ್ನ ತುಕಡಿಯೊಡನೆ ಆನಂದಪುರ ಸಾಹಿಬ್, ಜಮ್ಮು ಚಂಬಾ ಬೆಟ್ಟಗಳ ಕಡೆಗೆ ಮತ್ತು ಪಂಜಾಬ್ ನಗರಗಳ ಮೇಲೆ ದಾಳಿ ಮಾಡಲು ಪಂಜಾಬಿನ ಬಯಲು ಪ್ರದೇಶಗಳ ಕಡೆಗೆ ತೆರಳುತ್ತಿದ್ದರು. ಅಲ್ಲದೆ ಈ ರಹಸ್ಯ ಮಾರ್ಗಗಳ ಅಕ್ಕ ಪಕ್ಕ ಕಂದಕಗಳಿದ್ದು ಶತ್ರು ಸೈನಿಕರಿಗೆ ಸುಲಭವಾಗಿ ಅವುಗಳ ಮೇಲೆ ಹತೋಟಿ ಸಾಧಿಸಲು ಆಗುತ್ತಿರಲಿಲ್ಲ. ಮಾರ್ಕಂಡ ನದಿ, ಸೋಮ್ ನದಿ ಹರಿಯುತ್ತಿದ್ದು, ಕಡಿದಾದ ಎತ್ತರದ ಬೆಟ್ಟಗಳು ಇದ್ದ ಕಾರಣದಿಂದ ಕೋಟೆಗೆ ಭದ್ರತೆ ಒದಗಿತ್ತು. ಈ ಭಾಗದಿಂದ ಮುಘಲರಿಗೆ ಮುತ್ತಿಗೆ ಹಾಕುವುದು ಕಷ್ಟವಾಗಿತ್ತು. ದಕ್ಷಿಣ ಭಾಗದ ಎಲ್ಲೋ ಸ್ವಲ್ಪ ಭಾಗ ಮಾತ್ರ ಶತ್ರು ದಾಳಿಗೆ ಸುಲಭದ ತುತ್ತಾಗಿತ್ತು. ಅಂಥ ಭಾಗದಲ್ಲಿ ಶತ್ರು ದಾಳಿ ಪಡೆಗೆ ಸಿಖ್ ಸೈನಿಕರು ಬಯಲಿನಲ್ಲಿ ಕಂದಕಗಳನ್ನು ತೋಡಿ, ಅಡೆತಡೆಗಳನ್ನು ನಿರ್ಮಿಸಿದ್ದರು. ಕೋಟೆಯ ಮುಂಭಾಗದಿಂದ ದಾಳಿ ನಡೆಸಿದರೆ ಶತ್ರು ಸೇನೆಗೆ ಅಪಾರ ಹಾನಿಯಾಗುತ್ತಿತ್ತು. ಹಾಗಾಗಿ ಅಂತಹ ದಾಳಿ ಮುಘಲರ ಸೈನ್ಯಕ್ಕೆ ಸಾಕಷ್ಟು ಹಾನಿಯುಂಟು ಮಾಡಿವೆ. ಲೋಹಗಢ್ ಟ್ರಸ್ಟ್‌ನ ಟ್ರಸ್ಟಿಯು ಅನೇಕ ಜನರೊಡನೆ ಲೋಹಗಡ ಕೋಟೆಯನ್ನು ಅನ್ವೇಷಿಸಿದ್ದಾರೆ. ಅದನ್ನು ಪ್ರವೇಶಿಸುವುದು ಹಾದಿಯಲ್ಲಿದ್ದ ಸಸ್ಯಗಳನ್ನು ತೆರವುಗಳಿಸಿದ ನಂತರವೇ?

ಏಳು ಸಾವಿರ ಎಕರೆಯಲ್ಲಿ ಹರಡಿಕೊಂಡಿರುವ ಲೋಹಗಡ ಕೋಟೆಯನ್ನು ಸಾವಿರಾರು ಎಕರೆಗಳ ಅನೇಕ ಭಾಗಗಳಾಗಿ ಅಧ್ಯಯನದ ಅನುಕೂಲಕ್ಕಾಗಿ ವಿಭಜಿಸಲಾಗಿದೆ. ಇವುಗಳಲ್ಲಿ ಈವರೆಗೆ 32 ಭಾಗಗಳನ್ನು ಅನ್ವೇಷಿಸಲಾಗಿದೆ. ಪ್ರತಿಯೊಂದು ವಿಭಾಗವೂ ಬೇರೆ ಬೇರೆ ಬೆಟ್ಟ ಸಾಲಿನಲ್ಲಿದೆ. ಪ್ರತಿಯೊಂದು ವಿಭಾಗವೂ ಎರಡು ಸುತ್ತಿನ ರಕ್ಷಣಾ ಗೋಡೆಯಿಂದ ಆವೃತವಾಗಿವೆ. ಆಳುವೇರಿಗಳ ಅಸ್ತಿಭಾರವನ್ನು ಸುಲಭದಾಳಿಗೆ ಪಕ್ಕಾಗುವ ಸ್ಥಳಗಳಲ್ಲಿ ಕಾಣಬಹುದು ಅಂಥ ಸ್ಥಳಗಳನ್ನು ಕಲ್ಲಿನ ಗೋಡೆಯಿಂದ ಭದ್ರಪಡಿಸಲಾಗಿದೆ.

ಒಂದು ವೇಳೆ ಒಂದು ವಿಭಾಗವನ್ನು ಶತ್ರು ಪಾಳೆಯ ವಶಪಡಿಸಿಕೊಂಡರೆ ಪಕ್ಕದ ವಿಭಾಗದ ಸೈನಿಕರು ತಮ್ಮ ಪ್ರದೇಶ ಎತ್ತರದಲ್ಲಿದ್ದ ಕಾರಣಕ್ಕಾಗಿ ಶತ್ರುಗಳ ಮೇಲೆ ಗುಂಡಿನ ಕಾಳಗ ಮಾಡಿ ಹಿಮ್ಮೆಟ್ಟಿಸಬಹುದಿತ್ತು. ಲೋಹಗಡದ ಅನೇಕ ಭಾಗಗಳನ್ನು ಇನ್ನೂ ಅನ್ವೇಷಿಸಲಾಗಿಲ್ಲ. ಯಾಕೆಂದರೆ ಅವುಗಳ ದಾರಿಯಲ್ಲಿರುವ ಸಸ್ಯಗಳನ್ನು ತೆರವುಗೊಳಿಸಿದ ನಂತರವೇ ಆ ಕಾರ್ಯಸಾಧ್ಯ. ಲೋಹಗಡ ಕೋಟೆಯ ಹೊರಗೋಡೆ ಅಖಂಡವಾಗಿಲ್ಲ. ಸುಲಭ ಭೇದ್ಯ ಸ್ಥಳಗಳಲ್ಲಿ ಅಸ್ತಿಭಾರವನ್ನು ಕಾಣಬಹುದು. ಕೋಟೆಯ ಹೊರಗೋಡೆಯ ಸುತ್ತು 50 ಕಿ.ಮೀ. ಉದ್ದವಿದೆ. ಇಂಥ ಹೊರಗೋಡೆಯಿರುವ ಹಾಗೂ ಪ್ರತಿಯೊಂದು ವಿಭಾಗದಲ್ಲಿಯೂ ಮತ್ತೊಂದು ಸುತ್ತು ಒಳಗೋಡೆಯಿರುವ ಕೋಟೆಯನ್ನು ಮುಘಲ್ ಸೈನಿಕರು ಕೆಲವು ಚರಿತ್ರೆಕಾರರು ಹೇಳುವಂತೆ ಒಂದೇ ದಿನದಲ್ಲಿ ವಶಪಡಿಸಿಕೊಳ್ಳಲು ಹೇಗೆ ಸಾಧ್ಯ? ಮುಘಲ್ ಸೈನಿಕರು ಮುತ್ತಿಗೆ ಹಾಕಿದ ಕೋಟೆಗೆ ಅಗತ್ಯ ಸಾಮಾನು ಸರಬರಾಜಾಗುವುದನ್ನು ತಡೆದು, ಕೋಟೆಯೊಳಗಿನ ಸೈನಿಕರನ್ನು ಕಂಗಾಲಾಗಿಸಿ ಶರಣಾಗುವಂತೆ ಮಾಡುವ ತಂತ್ರವನ್ನು ಪ್ರಯೋಗಿಸುತ್ತಿದ್ದರು. ಆದರೆ ಲೋಹಗಡ ಕೋಟೆಗೆ ಸಂಬಂಧಿಸಿದಂತೆ ಅಗತ್ಯ ವಸ್ತುಗಳ ಸರಬರಾಜಿನಲ್ಲಿ ವ್ಯತ್ಯಯ ಉಂಟು ಮಾಡಲು ಸಾಧ್ಯವಾಗದ ಕಾರಣ ಅಂಥ ತಂತ್ರ ಪ್ರಯೋಜನಕಾರಿಯಾಗುತ್ತಿರಲಿಲ್ಲ.

ಇಲ್ಲಿ ಮುಘಲರ ಸೈನ್ಯಕ್ಕೆ ಮುತ್ತಿಗೆ ಹಾಕಲು ಲೋಹಗಡ ಕೋಟೆಯ ಭೌಗೋಳಿಕ ನೆಲೆ ಮತ್ತು ಆ ಪ್ರದೇಶದ ಮೇಲ್ಮೈ ಲಕ್ಷಣ ಆಸ್ಪದ ನೀಡುತ್ತಿರಲಿಲ್ಲ. ಈ ಕೋಟೆಯ ಒಂದು ಪಾರ್ಶ್ವದಲ್ಲಿ ಕಡಿದಾದ ಬೆಟ್ಟಗಳು, ನಿಬಿಡವಾದ ಅರಣ್ಯಗಳು ಆವೃತ್ತವಾಗಿದ್ದವು. ಇನ್ನೊಂದು ಪಾರ್ಶ್ವದಲ್ಲಿ ಕಡಿದಾದ ಗುಡ್ಡಗಳು ಮತ್ತು ಅನೇಕ ಹಳ್ಳ, ನದಿ, ತೊರೆಗಳ ಜಾಲವು ಕೋಟೆಗೆ ರಕ್ಷಣೆಯೊದಗಿಸಿದ್ದವು. ಸಿಖ್ ಸೈನ್ಯದಿಂದ ಈ ಕೋಟೆಯನ್ನು ತೆರವುಗೊಳಿಸಲು ಮುಘಲ್ ಸಾಮ್ರಾಟ್ ಬಹದ್ದೂರ್ ಶಾ ಸ್ವತಃ ತಾನೇ 1710ರಲ್ಲಿ ಲೋಹಗಡಕ್ಕೆ ಆಗಮಿಸಿದ್ದ. ಈ ಸ್ಥಳವನ್ನು ತಲುಪಿದ ನಂತರ ಪರಿಸ್ಥಿತಿಯ ಗಂಭೀರತೆ ಅವನಿಗೆ ಅರ್ಥವಾಯಿತು. ಅಂದರೆ ಈ ಕೋಟೆಯನ್ನು ವಶಪಡಿಸಿಕೊಳ್ಳಲು ಸಾಧ್ಯವಿಲ್ಲವೆಂದು ಅರಿತು, ತನ್ನ ಸೇನೆಯನ್ನು ಹಿಂದಕ್ಕೆ ಕರೆದೊಯ್ಯಬೇಕಾಯಿತು. ವಿಶಾಲ ಮುಘಲ್ ಸಾಮ್ರಾಜ್ಯ ಪತನವಾಗುವ ಭಯ ಆತನನ್ನು ಕಾಡಿತು. ಅದರಿಂದ ಖಿನ್ನತೆಗೆ ಒಳಗಾದ ಆತ, ಅದಕ್ಕೆ ಬಲಿಯಾಗಿ ಹುಚ್ಚನಾಗಿ ಕೆಲಕಾಲದ ನಂತರ ನಿಧನನಾದ.

**ಲೋಹಗಡ ಕೋಟೆಯ ರಕ್ಷಣಾ ಗೋಡೆಗಳ ಅವಶೇಷಗಳು**

ಲೋಹಗಡ ಕೋಟೆಯ ಪ್ರದೇಶದಲ್ಲಿ ಹಲವಾರು ತಿಂಗಳು ಕಾಲ ವ್ಯವಸ್ಥಿತವಾದ ಪ್ರಾಚೀನ ಶೋಧನಾ ಸಮೀಕ್ಷೆಯನ್ನು ಕೈಗೊಳ್ಳಲಾಗಿದ್ದು ಲೋಹಗಡದಲ್ಲಿ ರಕ್ಷಣಾ ಗೋಡೆಗೆ ಸಂಬಂಧಿಸಿದಂತೆ ಅಪಾರ ಸಂಖ್ಯೆಯ ಅವಶೇಷಗಳು ಪತ್ತೆಯಾಗಿವೆ. ಈ ರಕ್ಷಣಾ ಗೋಡೆಗಳು 3–4 ಮೀಟರ್

ಅಗಲವಾಗಿದೆ. ಇಂಥ ಬಲವಾದ ರಕ್ಷಣೆಯನ್ನು ಮುಘಲರ ವಿರುದ್ಧ ಹೂಡಬೇಕಾದ ದೊಡ್ಡ ಯುದ್ಧವನ್ನು ನಿರೀಕ್ಷಿಸಿಯೇ ನಿರ್ಮಿಸಲಾಗಿದೆ. ಅಲ್ಲದೆ ಸಿಖ್ ಸೈನಿಕರಿಗೆ ಮುಘಲ್ ಸೈನ್ಯವು ಜಗತ್ತಿನ ಬಲಶಾಲಿ ಫಿರಂಗಿಗಳಿಂದ ಹಾಗೂ ಒಂಟೆಯ ಮೇಲೆ ಸಾಗಿಸಬಹುದಾದ ಸಣ್ಣ ಫಿರಂಗಿಗಳಿಂದ ಶಸ್ತ್ರ ಸಜ್ಜಾಗಿರುವ ಮಾಹಿತಿಯೂ ತಿಳಿದಿತ್ತು.

ಲೋಹಗಡ ಕೋಟೆಯ ಸುತ್ತಲೂ ರಕ್ಷಣಾ ಗೋಡೆಯಿರುವುದು ಕಂಡು ಬಂದಿದೆ. ಈ ಗೋಡೆಯನ್ನು ಆಶ್ಲರ್ ಕಲ್ಲುಗಳನ್ನು ಸರಿಯಾಗಿ ಲಂಬಾಕಾರದಲ್ಲಿ ಕಡಿದು ಇಟ್ಟಿಗೆಯಂತೆ ಜೋಡಿಸಿ, ಸುಣ್ಣ ಗಾರೆಯನ್ನು ಬಳಸಿ ಬಂದೋಬಸ್ತ್ ಆಗಿ ಕಟ್ಟಲಾಗಿದೆ. ಈ ಗೋಡೆಯ ನಿರ್ಮಾಣ ಕೌಶಲ್ಯ ಅದ್ಭುತವಾಗಿದೆ.

ರಕ್ಷಣಾ ಗೋಡೆಗಳ ಅವಶೇಷಗಳು ಪಹ್ಲೂರಿ ಕಾದಿಟ್ಟ ಅರಣ್ಯದಲ್ಲಿ ಕಂಡುಬಂದಿವೆ. ಈ ಪ್ರಾಚೀನ ಸಾಕ್ಷ್ಯಗಳು ಲೋಹಗಡ ಕೋಟೆಯ ಈಶಾನ್ಯ ದಿಕ್ಕಿನ ಪ್ರದೇಶಗಳಲ್ಲಿವೆ. ಈ ಪ್ರದೇಶದ ಹಿಂಭಾಗವು ನಿಬಿಡ ಅರಣ್ಯಗಳಿಂದ ಕೂಡಿದೆ. ಅದನ್ನು ಈಗ ಶೇರ್ ಜಂಗ್ ನ್ಯಾಷನಲ್ ಪಾರ್ಕ್ ಎಂದು ಘೋಷಿಸಲಾಗಿದೆ. ನಾವು ಕಾಡಿನ ಮೂಲಕ ಈ ಪ್ರಾಚೀನ ಸಾಕ್ಷ್ಯಗಳ ಸ್ಥಳದಿಂದ ಹತ್ತು ಕಿ.ಮೀ. ಈಶಾನ್ಯ ದಿಕ್ಕಿನಲ್ಲಿ ನಡೆದು ಪಾವೊಂಟ ಸಾಹಿಬ್ ತಲುಪಬಹುದು. ಮಧ್ಯದಲ್ಲಿ ಸುಖ್‌ಚೈನ್ ಸಿಂಗ್ ತಾಂಡ ಎಂಬ ಸ್ಥಳ ಸಿಗುತ್ತದೆ. ಅಲ್ಲಿಯೂ ಪ್ರಾಚೀನ ಶೋಧನಾ ಸಾಕ್ಷ್ಯಗಳನ್ನು ನೋಡಬಹುದು.

**ಒಂದು ಬುರುಜು ಅಥವಾ ಕೊತ್ತಲ**ದ ಅಸ್ತಿಭಾರವನ್ನು ಲೋಹಗಡ ಕೋಟೆಯ 30ನೇ ವಿಭಾಗದಲ್ಲಿ ನೋಡಬಹುದು. ಪ್ರಸ್ತುತ ಈ ಪ್ರಾಚೀನ ನಿವೇಶನದಲ್ಲಿ ಎರಡು ಪದರದ ಕಲ್ಲು ಮಾತ್ರವೇ ಉಳಿದಿವೆ. ಈ ರಚನೆಯ ಉಳಿದ ಭಾಗವನ್ನು ಮುಘಲ್ ಸೈನ್ಯ ನಾಶಪಡಿಸಿದೆ. ಈ ಪ್ರದೇಶದಲ್ಲಿ ಮಳೆಯಿಂದಾಗಿ ಭೂಸವಕಳಿಯಾಗಿದ್ದು, ಮುನ್ನೂರು ವರ್ಷಗಳ ಭೂಸವಕಳಿಯ ನಂತರ ಬುರುಜಿನ ಅಸ್ತಿಭಾರ ಮೇಲಕ್ಕೆ ಗೋಚರವಾಗಿದೆಯೆಂದು ಸಹಜವಾಗಿ ತರ್ಕಿಸಬಹುದು. ಪ್ರತಿಯೊಂದು ಬುರುಜು ಸಹ 50x50 ಅಡಿಯ ವಿಸ್ತೀರ್ಣದಲ್ಲಿದೆ.

**ಕೋಟೆಯ ಪಾಗಾರದ ಅವಶೇಷಗಳು** (Dregs of parapet) ಲೋಹಗಡ ಕೋಟೆಯ 12ನೇ ವಿಭಾಗದಲ್ಲಿ ಸಿಕ್ಕಿವೆ. ಕೋಟೆಯ ಮುಂಭಾಗದ ಹತ್ತಿರ ಇರುವ ಕಾರಣ ಇದೊಂದು ಆಯಕಟ್ಟಿನ ಜಾಗ. ಗೋಡೆಯ ದಪ್ಪ ಸುಮಾರು 3 ರಿಂದ 4 ಮೀಟರ್‌ಗಳು. ನಿಯತ ಆಕಾರದ ಮತ್ತು ಸುತ್ತಿಗೆ ಬಳಸಿ ಕೆತ್ತಿದ ಕಲ್ಲುಗಳಿಂದ ಮಾಡಿದ ಗೋಡೆ. ಒಂದು ಕಲ್ಲಿನಿಂದ ಮತ್ತೊಂದು ಕಲ್ಲಿನ ನಡುವಿನ ಅಂತರ ಇತರೆಡೆಗೆ ಹೋಲಿಸಿದಾಗ ದೊಡ್ಡದಿದ್ದು ಸುಣಗಾರೆ, ಇಟ್ಟಿಗೆ ಪುಡಿಯ ಸುರ್ಕಿಯನ್ನು ಬೆಸುಗೆಯಾಗಿ ಬಳಸಲಾಗಿದೆ.

ನಗ್ಲಿ ಹಳ್ಳಿಯಲ್ಲಿ ಕಂಡು ಬಂದಾ ಬಲವಾದ ತಡೆಗಟ್ಟು ಲೋಹಗಡ ಕೋಟೆಗೆ ಪ್ರಾಚೀನ ಸಾಕ್ಷ್ಯಗಳನ್ನು ಒದಗಿಸುತ್ತವೆ. ಇಲ್ಲಿ ಕಲ್ಲು ಕಟ್ಟಡವನ್ನು ಸುಣ್ಣಗಾರೆ ಬಳಸಿ ಮಾಡಲಾಗಿದೆ. ಈ ಪ್ರದೇಶದ ಎಲ್ಲೆ ಕಟ್ಟು ಒಂದು ಗುಡ್ಡದ ಮೇಲೆ ಇಲ್ಲಿರುವ ಆಳುವೇರಿಯು ಶತ್ರು ಸೈನಿಕರಿಗೆ ಸಿಖ್ ಸೈನಿಕರು ಬೀಡು ಬಿಟ್ಟಿದ್ದ ಸ್ಥಳಕ್ಕೆ ಹೋಗಲು ದೊಡ್ಡ ಅಡ್ಡಿಯಾಗಿತ್ತು. ಈ ಸ್ಥಳದಿಂದ ಕೆಲವೇ ಸಿಖ್ ಸೈನಿಕರು ದೊಡ್ಡ ಮುಘಲ್ ಸೈನ್ಯವನ್ನು ಎದುರಿಸಬಹುದಿತ್ತು.

ಲೋಹಗಡ ಕೋಟೆಯ 12ನೇ ವಿಭಾಗದಲ್ಲಿ 2.5 ರಿಂದ 3 ಮೀಟರ್ ದಪ್ಪವಿರುವ ಬಲವಾದ ರಕ್ಷಣಾ ಪಾಗಾರಗಳು ದೊರೆತಿವೆ. ಈ ಸ್ಥಳವು ಲೋಹಗಡ ಬೋಲ್ (ತೊರೆ)ನ

ದಂಡೆಯಲ್ಲಿದೆ. ಇದು 1710ರಲ್ಲಿ ಮುಘಲರ ದಾಳಿಗೆ ಸುಲಭವಾಗಿ ತುತ್ತಾಗಿತ್ತು. ಈ ಪ್ರದೇಶವು ಮುಂಭಾಗದಲ್ಲಿ ಬಯಲಾಗಿದೆ. ಸೈನಿಕರು ಬೀಡು ಬಿಡಲು ತಕ್ಕದಾಗಿದೆ. ಈ ಪ್ರದೇಶದ ಹಿಂಭಾಗವು ಎತ್ತರಕ್ಕಿದ್ದು ಕಿರಿದಾಗಿದೆ. ಕಡಿದಾದ ಏಣುಗಳಿಂದ ಕೂಡಿದೆ. ಈ ಏಣುಗಳ ಅಕ್ಕಪಕ್ಕದಲ್ಲಿ ಎರಡು ತೊರೆಗಳು ಹರಿದು ಲೋಹಗಡ ಬೋಲ್ ಅನ್ನು ಸೇರುತ್ತವೆ. ಈ ಪ್ರದೇಶವು ಸಿಕ್ಖರ ಪಾಲಿಗೆ ಆಯಕಟ್ಟಿನ ಸ್ಥಳ. ಅದು ಮುಘಲರ ಸೈನ್ಯದ ವಿರುದ್ಧ ಹೋರಾಡುವ ಸಿಖ್ ಸೈನಿಕರಿಗೆ ಸರಬರಾಜು ಮಾಡುವ ಸರಕು ದಾಸ್ತಾನಾಗಿ ನಿರ್ವಹಿಸುತ್ತಿತ್ತು. ಈ ರಕ್ಷಣಾ ಪಾಗಾರದ ತುದಿಯು ಹರಿಪುರ ಕಾದಿಟ್ಟ ಅರಣ್ಯದ ಸಿ–4ನೇ ವಿಭಾಗಕ್ಕೆ ಚಾಚಿಕೊಂಡಿದ್ದು ಅತ್ಯಂತ ಸುರಕ್ಷ ಹಾಗೂ ಅಜೇಯ ಸ್ಥಳವಾಗಿತ್ತು.

ಆಳುವೇರಿಯ ಅವಶೇಷಗಳು ಹರಿಯಾಣದ ಜಂಡಾ ಹಳ್ಳಿಯ ಕಾದಿಟ್ಟ ಅರಣ್ಯಗಳಲ್ಲಿ ಸಹ ಕಂಡುಬಂದಿವೆ. ಈ ಬೆಟ್ಟಗಳಲ್ಲಿರುವ ಎರಡು ರಕ್ಷಣಾ ಪಾಗಾರಗಳಲ್ಲಿ ಪ್ರಾಚೀನ ಶೋಧನ ಸಮೀಕ್ಷೆಯನ್ನು ಮಾಡಿದ ನಂತರ, ವಿಶಾಲವಾದ ಬಯಲನ್ನು ಅಂದರೆ ಲೋಹಗಡದ ಯುದ್ಧ ಭೂಮಿಯನ್ನು ನೋಡಬಹುದಿತ್ತು. ಲೋಹಗಡದ 52 ಬುರುಜುಗಳನ್ನು ಕೆಲವನ್ನು ಇಲ್ಲಿಂದ ಸುಲಭವಾಗಿ ನೋಡಬಹುದಿತ್ತು. ಕಡಿದಾದ ಬೆಟ್ಟಗಳು ಮತ್ತು ಅದಕ್ಕೆ ಹೊಂದಿಕೊಂಡಂತೆ ಮಾರ್ಕಂಡ ನದಿ ಹರಿಯುತ್ತಿದ್ದ ಕಾರಣ, ಈ ಪ್ರದೇಶವನ್ನು ಮುತ್ತಿಗೆ ಹಾಕುವುದು ಸಾಧ್ಯವಿರಲಿಲ್ಲ. ನಹನ್ ಪಕ್ಕದಲ್ಲಿರುವ ಕೋಟೆಯ ಹಿಂಭಾಗದಿಂದ ಸಿಖ್ ಸೈನ್ಯಕ್ಕೆ ಅಗತ್ಯ ವಸ್ತುಗಳನ್ನು ಸರಬರಾಜು ಮಾಡಬಹುದಿತ್ತು.

**ಕಲ್ಲುಗಳ ಬೇಲಿಯ ಅವಶೇಷಗಳು** ನನ್‌ಹರಿ ಕಾದಿಟ್ಟ ಅರಣ್ಯ ಪ್ರದೇಶದಲ್ಲಿ ಕಂಡುಬಂದಿವೆ. ಈ ಪ್ರದೇಶದ ಲೋಹಗಡದ ಆಗ್ನೇಯ ಭಾಗದಲ್ಲಿದೆ. ಅದು ಕೋಟೆಯ ಆಕ್ರಮಣ ಮಾಡುವ ದಿಕ್ಕಿನಲ್ಲಿದೆ. ಭೌಗೋಳಿಕವಾಗಿ ಈ ಪ್ರದೇಶವು ಹರಿಯಾಣ ಜಿಲ್ಲೆಯ ಜಫಾರ್‌ಪುರ ಜಾಫ್ರಿ ಹಳ್ಳಿಗೆ ತಲುಪುವ ತೊರೆಗಳು ಮತ್ತು ಕಣಿವೆ ಘಾಟಿಯ ನಡುವೆ ಇದೆ.

ಕೋಟ್ಲ ಮೀಸಲು ಅರಣ್ಯದಲ್ಲಿ ಪ್ರಾಚೀನ ಸಾಕ್ಷ್ಯಗಳು ದೊರೆತಿವೆ. ಕೋಟ್ಲದ ಎಲ್ಲ ಬೆಟ್ಟ ಪಂಕ್ತಿಗಳಲ್ಲಿ ಮತ್ತು ಅದರ ಪಕ್ಕದ ಹಿಮಾಚಲ ಪ್ರದೇಶಕ್ಕೆ ಸೇರಿದ ಪ್ರದೇಶದಲ್ಲಿನ ಬೆಟ್ಟಗಳಲ್ಲಿ ಬಲವಾದ ರಕ್ಷಣಾ ಪಾಗಾರಗಳಿವೆ. ಹಿಟ್ಟನ್ನು ಬೀಸುವ ಕಲ್ಲುಗಳ ಅವಶೇಷಗಳು ಇವೆ. ಸಿಖ್ ಸೈನಿಕರ ಅಡುಗೆ ಮನೆಗಳು ಎಲ್ಲೆಕಟ್ಟಿನ ತುದಿಯಲ್ಲಿರುವುದನ್ನು ತೋರಿಸುತ್ತದೆ. ಇದರಿಂದಾಗಿ ಆಹಾರ ಹಾಗೂ ಇತರೆ ಅಗತ್ಯ ಸೌಲಭ್ಯಗಳ ಸರಬರಾಜು ಮುಘಲ್ ಸೈನಿಕರ ದಾಳಿಯಿಂದ ದೂರವಾಗಿದ್ದ ಸ್ಥಳದಲ್ಲಿತ್ತು.

ಸಂಗೋಳಿಯ ಕಂದಾಯ ಜಮೀನಿನಲ್ಲಿ ಅಡ್ಡಾದಿಡ್ಡಿಯಾಗಿ ಜೋಡಿಸಿದ ಕಲ್ಲುಗಳ ರಕ್ಷಣಾ ಪಾಗಾರ ಕಂಡುಬಂದಿದೆ. ಇಲ್ಲಿ ಬಳಸಿರುವ ವಿವಿಧ ಗಾತ್ರದ ಕಲ್ಲುಗಳನ್ನು ಈ ಪ್ರದೇಶಕ್ಕೆ ಹೊಂದಿಕೊಂಡಂತೆ ಹರಿಯುವ ಹಳ್ಳದ ದಂಡೆಯ ಕಲ್ಲುಗಣಿಯಿಂದ ತರಲಾಗಿದೆ. ಇಲ್ಲಿ ಸುಣ್ಣ ಕಲ್ಲು–ಗಾರೆ ಮತ್ತು ಸುರ್ಕಿಯನ್ನು ಕಲ್ಲುಗಳ ಕಟ್ಟಡಕ್ಕೆ ಬಳಸಲಾಗಿದೆ. ಈ ಪ್ರದೇಶವು ಕೋಟೆಯ ಮುಂಭಾಗದಲ್ಲಿದ್ದು ಶತ್ರು ಸೇನೆಯ ಆಕ್ರಮಣಕ್ಕೆ ಸುಲಭವಾಗಿ ತುತ್ತಾಗುತ್ತಿದ್ದರಿಂದ ಇಲ್ಲಿ ಬಹುಪದರಗಳ ರಕ್ಷಣಾ ರಚನೆಯನ್ನು ಕೈಗೊಳ್ಳಲಾಗಿದೆ.

ಎಸ್. ಜರ್ನೈಲ್ ಸಿಂಗ್ ಅವರ ಜೊತೆ ಲೋಹಗಡ ಕೋಟೆಗೆ ಭೇಟಿ ನೀಡಿದ ಇತಿಹಾಸ

ತಜ್ಞ ಡಾ. ಹರ್ಜಿಂದರ್ ದಿಲ್ಗೀರ್‌ರವರು ಲೋಹಗಡ ಕೋಟೆಯ 16ನೇ ವಿಭಾಗದ ಬುರುಜು ಮತ್ತು ಕಾವಲು ಗೋಪುರವನ್ನು ತಪಾಸಣೆ ಮಾಡಿದರು. ಬುರುಜಿನ ಆಸ್ತಿಭಾರವು ಈಗ ಕೇವಲ ಎರಡು ಪದರಗಳನ್ನೊಳಗೊಂಡಿದೆ. ಉಳಿದ ಭಾಗವು ಮುಘಲ್ ಸೈನಿಕರ ದಾಳಿಯಿಂದ ನಾಶವಾಗಿದೆ.

ಲೋಹಗಡ ಕೋಟೆಯ ಸಿ–2 ವಿಭಾಗಕ್ಕೆ ಅವರು ಭೇಟಿ ನೀಡಿದಾಗ, ಈ ವಿಭಾಗವು ಕೋಟೆಯ ಒಳಗಡೆ 10 ಕಿ.ಮೀ. ದೂರವಿದ್ದು ಕೋಟೆಯ ಮುಂಭಾಗದಿಂದ ಬಹಳ ದೂರದಲ್ಲಿರುವುದನ್ನು ಕಂಡರು. ಸಿಖ್ ಸೈನಿಕರ ದಾಸ್ತಾನು ಮಳಿಗೆಯು ಇಲ್ಲಿರುವುದನ್ನು ಗುರುತಿಸಿದರು.

**ಕೋಟೆಯ ಪಾಗಾರದ ಅವಶೇಷಗಳು** ಕೋಟೆಯ ವಿಭಾಗ 17ರಲ್ಲಿ ಕಂಡು ಬಂದಿವೆ. ಕೋಟೆಯ ಮುಂಭಾಗದಲ್ಲಿ ಇರುವುದರಿಂದ ಇದೊಂದು ಆಯಕಟ್ಟಿನ ಜಾಗ. ಇಲ್ಲಿ ಗೋಡೆಯ ದಪ್ಪ 2 ರಿಂದ 2.5 ಮೀಟರ್‌ಗಳು. ನಿಯತ ಆಕಾರದ ಕಲ್ಲುಗಳನ್ನು ಬಳಸಿ ನಿರ್ಮಿಸಲಾದ ರಚನೆ. ಸುಣ್ಣ ಗಾರೆ ಮತ್ತು ಸುರ್ಕಿ ಬಳಸಿದ ದಪ್ಪನೆಯ ಬಂಧ ಇರುವುದು ಕಂಡು ಬಂದಿದೆ.

ಲೋಹಗಡ ಕೋಟೆಗೆ ಸಂಬಂಧಿಸಿದಂತೆ ಲಖಿ ರಾಯ್ ವಂಜಾರನಂಥ ಶ್ರೀಮಂತ ವ್ಯಕ್ತಿ ಮಾತ್ರ ಅದನ್ನು ನಿರ್ಮಿಸಲು ಸಾಧ್ಯ. ಆತನ ಬಳಿ ಸಾವಿರಾರು ಯುವ ಜನರ ನೂರಾರು ತುಕಡಿಗಳಿದ್ದವು. ಅವರಿಗೆ ಸೇನಾ ತರಬೇತಿ ಸಹ ಇತ್ತು. ಈ ಕೋಟೆಯನ್ನು ಕಟ್ಟಲು ಅಪಾರ ಪ್ರಮಾಣದ ಕಲ್ಲು, ಸುಣ್ಣ, ಇಟ್ಟಿಗೆಗಳನ್ನು ಬಳಸಲಾಗಿದೆ. ಇಂಥ ಅಪಾರ ಪ್ರಮಾಣದ ನಿರ್ಮಾಣದ ವಸ್ತುಗಳನ್ನು ನೂರಾರು ಜನರಿಂದ ತರಲು ಸಾಧ್ಯವಿಲ್ಲ. ಸಾವಿರಾರು ಜನರಿರುವ ನೂರಾರು **'ತಾಂಡ'** (ವ್ಯಾಪಾರಿ ತಂಡ)ಗಳಿಂದ ಮಾತ್ರ ಇದನ್ನು ತರಲು ಸಾಧ್ಯ. ಸುಮಾರು ಎರಡು ಡಜನ್ ಕೋಟೆ ಮತ್ತು ಅರಮನೆಗಳನ್ನು ನಿರ್ಮಿಸಿದ ಅನುಭವ ಲಖಿ ಶಾ ವಂಜಾರರವರಿಗಿತ್ತು. ಕೆಂಪುಕೋಟೆ ಮತ್ತು ಮರಾಠರ ಕೋಟೆಗಳಿಗೆ ಈಗಾಗಲೇ ಆತ ಕಲ್ಲು, ಸುಣ್ಣ, ಮರಮುಟ್ಟು ಇತ್ಯಾದಿ ನಿರ್ಮಾಣ ಸಾಮಗ್ರಿಯನ್ನು ಸರಬರಾಜು ಮಾಡಿದ್ದ.

---

**ಅಡಿ ಟಿಪ್ಪಣಿಗಳು**

1. ಇಂಡಿಯಾ ಟ್ರಸ್ಟ್ ಸಿದ್ಧಪಡಿಸಿದ ಸಂಶೋಧನಾ ವರದಿ. ನವದೆಹಲಿಯ ರೂರಲ್ ಹೆರಿಟೇಜ್ ಮತ್ತು ಡೆವಲಪ್‌ಮೆಂಟ್ ಸಂಸ್ಥೆಗಾಗಿ ತಯಾರಿಸಿದ್ದು. (2016) ಪು. 8.
2. ಮುಜಾಫರ್ ಅಲಂ. ದಿ ಕ್ರೈಸಿಸ್ ಆಫ್ ಎಂಪೈರ್ ಇನ್ ಮುಘಲ್ ನಾರ್ತ್ ಇಂಡಿಯಾ.
3. ಅದೇ ಪುಟ 160–74
4. ಆಂಡ್ರಿಯಾ ಹಿಂಟ್ಜ್, ಮುಘಲ್ ಎಂಪೈರ್ ಅಂಡ್ ಇಟ್ಸ್ ಡಿಕ್ಲೈನ್: ಎನ್ ಇಂಟರ್ ಪ್ರಿಟೇಷನ್ ಆಫ್ ದಿ ಸೋರ್ಸಸ್ ಆಫ್ ಸೋಷಿಯಲ್ ಪವರ್. ಪು. 62.

# ಅಧ್ಯಾಯ–3

# ಲೋಹಗಡ ಕೋಟೆಯ ನಿರ್ಮಾಣ

ಲೋಹಗಡ ಕೋಟೆಯನ್ನು ಕಟ್ಟುವ ಪರಿಕಲ್ಪನೆಯು ಗುರು ಹರ್‌ಗೋವಿಂದ್‌ರವರು ಗ್ವಾಲಿಯರ್ ಕೋಟೆಯಲ್ಲಿ 1613 ರಿಂದ 1618ರ ಅವಧಿಯಲ್ಲಿ ಆರೂವರೆ ವರ್ಷ ಸೆರೆಮನೆ ವಾಸ ಅನುಭವಿಸುತ್ತಿದ್ದಾಗ ಹೊಳೆಯಿತು. ಈ ಸೆರೆಮನೆಯನ್ನು ತೆರಿಗೆ ಪಾವಿಸದ ಸಾಮಂತರಾಜರು, ಅಪರಾಧ ಮಾಡಿದ ರಾಜ್ಯದ ಅಧಿಕಾರಿಗಳು, ಪ್ರಭುತ್ವ ವಿರೋಧಿಗಳು, ದಂಗೆ ಕೋರರು ಮತ್ತು ಮುಸ್ಲಿಮೇತರ ಧಾರ್ಮಿಕ ವ್ಯಕ್ತಿಗಳಂತಹ ವಿಶೇಷ ಅಪರಾಧಿಗಳನ್ನು ಕೂಡಿಡಲು ಮೀಸಲಿಡಲಾಗಿತ್ತು. ಗುರುವು ಸೆರೆಮನೆಯಲ್ಲಿದ್ದ ಕಾಲದಲ್ಲಿ 101 ಜನ ಸಾಮಂತರು, ಯುವರಾಜರು, ಮುಖ್ಯಸ್ಥರು, ಪಾಳೆಯಗಾರರು, ಜಮೀನುದಾರರು, ರಾಜ್ಯದ ಅಧಿಕಾರಿಗಳು ಮತ್ತು ಇತರೆ ಗಣ್ಯ ವ್ಯಕ್ತಿಗಳು ಗ್ವಾಲಿಯರ್ ಕೋಟೆಯ ಸೆರೆಮನೆಯಲ್ಲಿದ್ದರು. ಅವರನ್ನು ತೆರಿಗೆ ಪಾವತಿಸದ ಇಲ್ಲವೇ ಸಾಮ್ರಾಟನ ಯಾವುದಾದರೊಂದು ಆದೇಶವನ್ನು ಉಲ್ಲಂಘಿಸಿದ ಅಪರಾಧಕ್ಕಾಗಿ ಶಿಕ್ಷೆ ಅನುಭವಿಸುತ್ತಿದ್ದರು. ಅವರಲ್ಲಿ ಕಲ್ಯಾಣ ಚಂದ್ ಮತ್ತು ಅವನ ಮಗ ತಾರಾ ಚಂದ್ (ಕೆಹ್ಲೂರ್ / ಬಿಲಾಸ್‌ಪುರ ರಾಜ್ಯದ ರಾಜರು), ಹರಿಚಂದ್ (ಹಂಡೂರು/ನಲಗಡದ ರಾಜರು), ಮತ್ತು ಇತರ ಬೆಟ್ಟಸಾಲಿನ ಅಥವಾ ರಾಜಪುತಾಣ ರಾಜ್ಯಗಳ ರಾಜರು ಸೆರೆಯಾಗಿದ್ದರು. ಗುರುಗಳು ಆಗಮಿಸುವ ಮುನ್ನ ಈ ಸೆರೆಯಾಳುಗಳು ಕಳವಳ, ನಿರುತ್ಸಾಹ ಮತ್ತು ಅಸಹಾಯಕತೆಯ ಪರಿಸ್ಥಿತಿಯಲ್ಲಿ ಬದುಕಿದ್ದರು. ಗುರುಗಳು ಅಲ್ಲಿಗೆ ಆಗಮಿಸಿದಾಗ, ಅವರು ಪ್ರತಿದಿನ ಕೀರ್ತನೆಗಳನ್ನು ಹಾಡುತ್ತಾ ಧಾರ್ಮಿಕ ಮತ್ತು ತಾತ್ವಿಕ ಉಪದೇಶ ಸಭೆಗಳನ್ನು ನಡೆಸಲಾರಂಭಿಸಿದರು. ಗುರು ಅವರಿಗೆ ಆತ್ಮ ವಿಶ್ವಾಸವನ್ನು ತುಂಬಿ ಅವರು ಉತ್ಸಾಹದಿಂದ ಇರುವಂತೆ ಮಾಡಿದರು. ಅಸಹಾಯಕತೆಯಿಂದ ಮಂಕು ಹಿಡಿದವರಿಗೆ ಭರವಸೆ ತಾಳಿ ಉಲ್ಲಾಸದಿಮದ ಜೀವಿಸತೊಡಗಿದರು. ಅವರು ಗುರುವಿನ ಭಕ್ತರಾದರು. ಗುರುಗಳು ಇಲ್ಲಿಯೇ ಮುಘಲ್ ಸಾಮ್ರಾಟರನ್ನು ಎದುರಿಸಲು ಬಲಶಾಲಿಯಾದ ಕೋಟೆ ನಿರ್ಮಿಸುವ ಯೋಜನೆಯನ್ನು ರೂಪಿಸಿರಬಹುದು. ಲೋಹಗಡ ಕೋಟೆ ಈ ಕಾರ್ಯತಂತ್ರದ ಒಂದು ಭಾಗವಾಗಿತ್ತು.

**ಗುರು ಹರ್‌ಗೋವಿಂದ್ ಸಾಹಿಬ್ ಮತ್ತು ರಾಜ್ಯದ ಮುಖ್ಯಸ್ಥರ ಬಿಡುಗಡೆ**

ಲಾಹೋರದ ರಾಜ್ಯಪಾಲ ಮುರ್ತಾಜಾ ಖಾನ್ 1618ರಲ್ಲಿ ನಿಧನನಾದ. ಅದೇ ವೇಳೆ ಚಿನಿಯಾಟ್‌ನ ವಾಜಿರ್ ಖಾನ್ ಜಹಾಂಗೀರ್‌ನ ಮೆಚ್ಚಿನ ಆಸ್ಥಾನಿಕನಾಗಿದ್ದ. ಸರಿಸುಮಾರು ಅದೇ ವೇಳೆ ಜಹಾಂಗೀರ್ ರಾಜ ಮಿಯಾನ್ ಮೀರ್‌ನನ್ನು ಭೇಟಿಯಾದ. ವಾಜಿರ್‌ಖಾನ್ ಮತ್ತು

ಮಿಯಾನ್‌ಮೀರ್ ಇಬ್ಬರೂ ಗುರು ಹರ್‌ಗೋವೀಂದ್‌ರವರನ್ನು ಬಿಡುಗಡೆ ಮಾಡಲು ಜಹಾಂಗೀರ್‌ನನ್ನು ಕೋರಿದರು. ಜಹಾಂಗೀರನ ಪತ್ನಿ ನೂರ್ ಜಹಾನ್ ಸಹ ಇಬ್ಬರ ಸಲಹೆಯನ್ನು ಅಂಗೀಕರಿಸಿ, ಗುರುವನ್ನು ಬಿಡುಗಡೆ ಮಾಡಲು ಒತ್ತಾಯಿಸಿದಳು. ಇದೇ ವೇಳೆಯಲ್ಲಿ ಜಹಾಂಗೀರ್ ಸಹ ಶೇಖ್ ಅಹಮದ್ ಸರ್ಹಂದಿಯೂ ಸೇರಿದಂತೆ ಅಂಧಾಭಿಮಾನದ ಮುಸಲ್ಮಾನ ಪುರೋಹಿತರಿಂದ ಬಿಡುಗಡೆಯಾಗಿದ್ದ. ಇವೆಲ್ಲವೂ ಗುರು ಸಾಹಿಬ್‌ನ ಬಿಡುಗಡೆಗೆ ಆದೇಶ ಹೊರಡಿಸಲು ಜಹಾಂಗೀರನ ಮೇಲೆ ಪ್ರಭಾವ ಬೀರಿದವು.

ಗುರು ಸಾಹಿಬ್‌ರವರ ಬಿಡುಗಡೆಯ ಆದೇಶವನ್ನು ಸ್ವತಃ ವಜೀರ್ ಖಾನ್ ತಲುಪಿಸಿದ. ಗುರು ಸಾಹಿಬ್‌ರವರ ಬಿಡುಗಡೆಯ ಸುದ್ದಿಯು ಇತರೆ ಸಮುದಾಯದ ಸೆರೆಯಾಳುಗಳಿಗೆ ತಲುಪಿದ ಕೂಡಲೇ ಅವರು ದುಃಖಿತರಾದರು. ಗುರುಗಳ ದಿನನಿತ್ಯದ ಉಪದೇಶಗಳು ಅವರ ಚೈತನ್ಯ ಹುರುಪುಗೊಳ್ಳುವಂತೆ ಮಾಡಿದ್ದವು. ಗುರು ಅವರ ಜೀವನವನ್ನು ಬದಲಿಸಿದ್ದರು. ಗುರು ಸಾಹಿಬ್‌ರವರು ಅವರಿಗೆ ನೆರವಾಗಲು ನಿರ್ಧರಿಸಿದರು. ಅವರು ವಜೀರ್ ಖಾನ್‌ಗೆ **"ಇತರೆ ಸೆರೆಯಾಳುಗಳು ಬಿಡುಗಡೆಯಾದರೆ ಮಾತ್ರ ನಾನು ಸೆರೆಯಿಂದ ಹೊರನಡೆಯುತ್ತೇನೆ"** ಎಂದು ಹೇಳಿದರು. ಸಾಮ್ರಾಟನನ್ನು ಈ ವಿಷಯದಲ್ಲಿ ಭೇಟಿಯಾಗುವುದಾಗಿ ಭರವಸೆ ನೀಡಿದ ವಜೀರ್‌ಖಾನ್, ಗುರುಗಳ ಕೋರಿಕೆಯನ್ನು ಜಹಾಂಗೀರ್‌ನ ಮುಂದಿಟ್ಟ. ಸಾಮ್ರಾಟನ ಮೇಲೆ ಇದು ಭಾರಿ ಪರಿಣಾಮ ಬೀರಿತು. ಒಂದೆರಡು ವರ್ಷ ಶಿಕ್ಷೆಗೊಳಗಾದವರನ್ನು ಗುರುವಿನ ಜೊತೆ ಬಿಡುಗಡೆ ಮಾಡಲು ಹಾಗೂ ದೀರ್ಘಾವಧಿ ಶಿಕ್ಷೆಗೊಳಗಾದವರಲ್ಲಿ ಯಾರು ಗುರುವಿನ ವಸ್ತ್ರ ಹಿಡಿದುಕೊಳ್ಳುವರೋ ಅವರನ್ನು ಸಹ ಬಿಡುಗಡೆ ಮಾಡಲು ಜಹಾಂಗೀರ್ ಆದೇಶಿಸಿದ. ಅಲ್ಪಾವಧಿ ಶಿಕ್ಷೆಗೆ ಒಳಗಾದವರಲ್ಲಿ 49 ಮಂದಿ ಇದ್ದರು. ದೀರ್ಘಾವಧಿ ಶಿಕ್ಷೆಗೆ 52 ಮಂದಿ ಗುರಿಯಾಗಿದ್ದರು.

ಈ ಆದೇಶದ ಬಗ್ಗೆ ಗುರು ಹರಿಗೋವಿಂದ್ ತಿಳಿದಾಗ, ಅವರು ಬಂದೀಖಾನೆ ಅಧಿಕಾರಿ ಹರಿದಾಸ್ ಯಾದವ್ ಅವರನ್ನು ಕರೆದು ತಮಗೆ 52 ತೂಗಾಡುವ ಪಟ್ಟಿಯಿರುವ ಅಂಗಿಯನ್ನು ಸಿದ್ಧಪಡಿಸಲು ಹೇಳಿದರು. ಅಂಥ ವಸ್ತ್ರ ಮಾರನೆಯ ಬೆಳಿಗ್ಗೆ ಸಿದ್ಧವಾಗಿತ್ತು. ಗುರು ವಸ್ತ್ರವನ್ನು ಧರಿಸಿದರು. ಅದರ 52 ಪಟ್ಟಿಗಳನ್ನು ಹಿಡಿದು ಎಲ್ಲರೂ ಸೆರೆಮನೆಯಿಂದ ಹೊರಗೆ ಬಂದರು. ಈ ರೀತಿ ಬಿಡುಗಡೆಯಾದವರಲ್ಲಿ ಪಂಜಾಬ್ ರಾಜಪುತಾಣ ಮತ್ತು ಇತರೆ ವಲಯದ ರಾಜರುಗಳಿದ್ದರು. ಗುರುವು 1619ರ ಅಕ್ಟೋಬರ್ 26 ರಂದು ಬಿಡುಗಡೆಯಾದರು. ಈ ಸುದ್ದಿಯನ್ನು ತಿಳಿದ ಜಹಾಂಗೀರ್‌ಗೆ ಗುರುವು ಎಲ್ಲರನ್ನೂ ಸಮಾನಭಾವದಿಂದ ಕಾಣುವ ಒಬ್ಬ ನಿಜವಾದ ಫಕೀರನೆಂಬುದು ಮನವರಿಕೆಯಾಯಿತು. ಇದಾದ ನಂತರ ಜಹಾಂಗೀರ್ ಶೇಖ್ ಅಹ್ಮದ್ ಸರ್ಹಂದಿಯನ್ನು ಬಂಧಿಸಿ ಗ್ವಾಲಿಯರ್ ಕೋಟೆಯ ಸೆರೆಮನೆಯಲ್ಲಿ ಇಡಿಸಿದ.

**ರುಹಿಲ ಯುದ್ಧ**

ಬೀಯಾಸ್ ನದಿಯ ಬಲದಂಡೆಯಲ್ಲಿ ಈ ಹಿಂದೆ ಇದ್ದ ರುಹಿಲ ಗ್ರಾಮದ ಪಾಳುಬಿದ್ದ ಪ್ರದೇಶದಲ್ಲಿ ಗುರು ಅರ್ಜನ್‌ಸಿಂಗ್ ಅವರು ಗೋವಿಂದಪುರ (ಈಗ ಶ್ರೀ ಹರ್‌ಗೋವಿಂದ್ ಪುರ)ವನ್ನು ಸ್ಥಾಪಿಸಿದರು. ಗುರು ಹರ್ ಗೋವಿಂದ್‌ರವರನ್ನು ಬಂಧಿಸಿದ ನಂತರ ಈ ಹಳ್ಳಿಯನ್ನು ಚಂದು ಮತ್ತು ಭಗವಾನ್‌ದಾಸ್ ಗೆರಾರ್ ಅವರು ಆಕ್ರಮಿಸಿಕೊಂಡರು. ಗುರು ಸಾಹಿಬ್‌ರವರು ತಾವು ಉಳಿಯಲು ಗುರು–ಡ–ಚಕ್ (ಈಗಿನ ಚಂದೀಗಡ) ಆಯ್ಕೆ ಮಾಡಿಕೊಂಡಾಗ, ಅವರು

ಗೋವಿಂದಪುರವನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದರು. ಚಂದು 1620ರ ಬೇಸಗೆಯಲ್ಲಿ ಹತನಾದರೂ, ಆತನ ಮಗ ಕರಮ್ ಚಂದ್ ಪಾಠ ಕಲಿಯಲಿಲ್ಲ. ಗುರು ಅವರು ಗೋವಿಂದಪುರವನ್ನು ವಶಪಡಿಸಿಕೊಂಡ ವಿಷಯ ತಿಳಿದಾಗ, ಆತ ಅಪಾರ ಸಂಖ್ಯೆಯಲ್ಲಿ ಜನರನ್ನು ಕೂಡಿಸಿ ಸಿಕ್ಖರ ಮೇಲೆ ಆಕ್ರಮಣ ಮಾಡಿದ. 1621ರ ಸೆಪ್ಟೆಂಬರ್ 27ರಂದು ಯುದ್ಧವೊಂದು ಆರಂಭವಾಯಿತು[1]. ಸಿಕ್ಖರು ಆಕ್ರಮಣಕಾರರ ವಿರುದ್ಧ ಸೆಣಸಿ ಅವರನ್ನು ಹಿಮ್ಮೆಟ್ಟಿಸಿ ಸೋಲಿಸಿದರು. ಸೋತ ಪಡೆ ಜಲಂಧರ್–ಡಾವೋಬ್ ಬಳಿಯ ಪೊಲೀಸ್ ಮುಖ್ಯಸ್ಥನನ್ನು ಭೇಟಿ ಮಾಡಿ ಹಣವನ್ನಿತ್ತು ತನಗೆ ಸಹಾಯ ಮಾಡುವಂತೆ ಕೋರಿತು. ಆತ ಅದಕ್ಕೆ ಒಪ್ಪಿ ಅನೇಕ ಮುಘಲ್ ಸೈನಿಕರನ್ನು ಅವರ ಕೂಡ ಕಳುಹಿಸಿದ.

ಈ ಸೇನೆಯು 1621ರ ಅಕ್ಟೋಬರ್ 3 ರಂದು ರುಹಿಲ ತಲುಪಿತು. ಮತ್ತೊಂದು ಯುದ್ಧ ನಡೆಯಿತು. ಇದೊಂದು ನಿರ್ಣಾಯದ ಯುದ್ಧ. ಇದರಲ್ಲಿ ಚಂದುವಿನ ಮಗ ಕರಮ್ ಚಂದ್, ಅವನ ಮಾವ ಭಗವಾನ್‌ದಾಸ್ ಗೆರಾರ್ ಮತ್ತು ಗಿರಾರ್‌ನ ಮಗ ರತನ್ ಚಂದ್ ಹತರಾದರು. ಅವರ ಸಾವಿನ ನಂತರ, ಅವರೊಡನೆ ಬಂದಿದ್ದ ಬಂಟರು ಪರಾರಿಯಾದರು. ಇದಾದ ಮೇಲೆ ಸಿಕ್ಖರ ಮೇಲೆ ಆಕ್ರಮಣ ಮಾಡಲು ಯಾರಿಗೂ ಧೈರ್ಯ ಬರಲಿಲ್ಲ. ಗುರುವಿನ ವಿಜಯವಾರ್ತೆ ಬಿಲಾಸಪುರದ ರಾಜ ಕಲ್ಯಾಣ ಸಿಂಗ್‌ಗೆ ತಲುಪಿದಾಗ, ಆತ ಬೆಟ್ಟಸಾಲಿನ ಇತರೆ ರಾಜರನ್ನು ಸಂಪರ್ಕಿಸಿದ. ಗುರುವನ್ನು ಅಭಿನಂದಿಸಲು ಅವರನ್ನು ಭೇಟಿಯಾಗಲು ನಿರ್ಧರಿಸಿದ. ಮುಘಲ್ ಸಾಮ್ರಾಟನಿಂದ ದಾಳಿ ಅಥವಾ ಸಂಘರ್ಷ ಎದುರಾದರೆ ಗುರುವಿನ ನೆರವು ಕೇಳುವುದು ಆತನ ಇರಾದೆಯಾಗಿತ್ತು.

ಸಿಕ್ಖರ ಬಹುದೊಡ್ಡ ಸಮಾವೇಶವೊಂದು ಗುರು–ಡ–ಚಕ್‌ನಲ್ಲಿ 1624 ಮಾರ್ಚ್ 28ರಂದು ನಡೆಯಿತು. ಅದರಲ್ಲಿ ಭಾಗವಹಿಸಿದ್ದವರಲ್ಲಿ ಬಿಲಾಸಪುರ ಹಂಡೂರು ಮುಂತಾದ ರಾಜರುಗಳಿದ್ದರು. ನಹನ್‌ನ ರಾಜ (ಸಿರಮಾರ್ ರಾಜ್ಯ) ಸಹ ಕಲ್ಯಾಣ್ ಸಿಂಗ್ ಜೊತೆಗೂಡಿದ. ಗುರು ತನ್ನ ಕೇಂದ್ರ ಸ್ಥಾನವನ್ನು ತನ್ನ ರಾಜ್ಯದಲ್ಲಿ ಸ್ಥಾಪಿಸಬೇಕೆಂಬ ಕಲ್ಯಾಣ್ ಚಂದ್ ಕೋರಿಕೆಯನ್ನಿಟ್ಟು ಜಮೀನು ನೀಡುವುದಾಗಿಯೂ ತಿಳಿಸಿದ. ಈಗಾಗಲೇ ಗುರುವು ಒಂದು ಸುರಕ್ಷಿತವಾದ ಆಯಕಟ್ಟಿನ ಜಾಗದಲ್ಲಿ ಕೋಟೆಯನ್ನು ನಿರ್ಮಿಸಲು ನಿರ್ಧರಿಸಿದ್ದರಿಂದ ಜಮೀನಿನ ದಾನವನ್ನು ನಿರಾಕರಿಸಿದರು. ಗುರು ಸಟ್ಲೆಜ್ ನದಿಯ ಸುತ್ತಮುತ್ತ ಪ್ರವಾಸ ಮಾಡಿ ಕಲ್ಯಾಣಪುರ, ಭಾಟೋಲಿ ಮತ್ತು ಜಿಯೋವಾಲ್ ಹಳ್ಳಿಗಳ ಕೆಲವು ಪ್ರದೇಶಗಳನ್ನು ಆಯ್ಕೆ ಮಾಡಿ ಜಮೀನಿನ ಬೆಲೆಯನ್ನು ಪಾವತಿಸಿದರು. ಆರಂಭದಲ್ಲಿ ಕಲ್ಯಾಣ್ ಚಂದ್ ಹಣವನ್ನು ನಿರಾಕರಿಸಿದರು. ಗುರುವು ಸಹ ಜಮೀನನ್ನು ದಾನವಾಗಿ ಪಡೆಯಲು ಒಪ್ಪಲಿಲ್ಲ. ರಾಜ ಅಂತಿಮವಾಗಿ ಹಣ ಸ್ವೀಕರಿಸಿದ.

**ಕೀರತಪುರ ಸ್ಥಾಪನೆಗೆ ಭೂಮಿ ಖರೀದಿ**

ಗುರು ಭೂಮಿಯನ್ನು ಖರೀದಿಸಿದರೂ ಹೊಸ ಸ್ಥಳಕ್ಕೆ ಹೋಗಲಿಲ್ಲ. ಅಂತಿಮವಾಗಿ ತಮ್ಮ ಹಿರಿಯ ಮಗ ಗುರುದಿತ್ತನನ್ನು ಜಮೀನನ್ನು ವಹಿಸಿಕೊಳ್ಳಲು ಕೋರಿದರು. ಗುರುದಿತ್ತ ಅವರು 1624 ಮೇ 1ರಂದು ಕೀರತಪುರವನ್ನು ಸ್ಥಾಪಿಸಿ ಅಲ್ಲಿಯೇ ವಾಸವಾಗಲು ಆರಂಭಿಸಿದರು. 1624 ರಿಂದ 1634ರವರೆಗೆ ಗುರು ಹರ್‌ಗೋವಿಂದ್‌ರವರು ಈಗ ಅಮೃತಸರದಲ್ಲಿರುವ ಗುರು–ಡ–ಚಕ್‌ನಲ್ಲಿಯೇ ಉಳಿದರು. ಈ ಅವಧಿಯಲ್ಲಿ ಮುಘಲ್ ಚಕ್ರವರ್ತಿ ಜಹಾಂಗೀರ್ 1627ರ

ಅಕ್ಟೋಬರ್ 28ರಂದು ನಿಧನಹೊಂದಿದ. ಅವನ ನಂತರ ಶಹಜಹಾನ್ ಪಟ್ಟಕ್ಕೆ ಬಂದಾ. ಕಾಲಾನಂತರದಲ್ಲಿ ಶಹಜಹಾನ್ ಸಹ ದುರಭಿಮಾನಿ ಮುಸ್ಲಿಂ ಪುರೋಹಿತರ ಪ್ರಭಾವಕ್ಕೆ ಸಿಲುಕಿದ. ಈ ಅವಧಿಯಲ್ಲಿ ಗುರುವು ಕೆಲವು ನಗಣ್ಯ ಮುಸ್ಲಿಂ ಸೇನಾಧಿಕಾರಿಗಳ ದಾಳಿಯನ್ನು ಎದುರಿಸಬೇಕಾಯಿತು. ಗುರು ಮೂರು ದಾಳಿಗಳನ್ನು ಎದುರಿಸಿದರು. 1634 ಏಪ್ರಿಲ್ 13 ರಂದು ಗುರು–ಡ–ಚಕ್‌ನಲ್ಲಿ; 1634 ಡಿಸೆಂಬರ್ 16–17ರಂದು ಮೆಹ್ರಾಜ್‌ನಲ್ಲಿ; 1635ರ ಏಪ್ರಿಲ್ 29ರಂದು ಕರ್ತಾರ್‌ಪುರದಲ್ಲಿ.

ಈ ಮೂರು ದಾಳಿಗಳಲ್ಲಿ ಗುರುವೇ ವಿಜಯಿಯಾದರೂ ಇದಕ್ಕೆ ಕೊನೆಯೆಂಬುದಿಲ್ಲವೆಂಬ ಅರಿವು ಗುರುವಿಗಾಯಿತು. ಮುಂದೆ ಮತ್ತಷ್ಟು ದಾಳಿಗಳಾಗಬಹುದೆಂದು ತೋರಿತು. ಆದುದರಿಂದ ಅವರು ಬಯಲನ್ನು ತೊರೆದು ಬಿಲಾಸ್‌ಪುರದಲ್ಲಿ ಸ್ಥಾಪಿಸಿದ್ದ ಕೀರತಪುರ ನಗರಕ್ಕೆ ತೆರಳಲು ನಿರ್ಧರಿಸಿದರು. ತನ್ನ ಆಸ್ಥಾನದ ಗಣ್ಯರೊಡನೆ ಚರ್ಚಿಸಿದ ಗುರು 1635ರ ಏಪ್ರಿಲ್ 29ರಂದು ಕರ್ತಾರ್‌ಪುರವನ್ನು ತೊರೆದು ಕೀರತಪುರದ ಕಡೆಗೆ ಪ್ರಯಾಣ ಆರಂಭಿಸಿದರು.

ಗುರು ಹರ್‌ಗೋವಿಂದ್‌ರವರು 1635 ಮೇ 3 ರಂದು ಕೀರತಪುರ ತಲುಪಿದರು. ಈಗ ಕೀರತಪುರ ರೇಷ್ಮೆ ವ್ಯಾಪಾರದ ದೊಡ್ಡ ಕೇಂದ್ರವಾಗಿತ್ತು. ಸಿಕ್ಖರಲ್ಲದೆ, ಬೆಟ್ಟಸಾಲಿನ ಅನೇಕ ರಾಜರು ಗುರುವನ್ನು ಭೇಟಿ ಮಾಡಲು ಬರುತ್ತಿದ್ದರು. ಗುರುವು ದಂಡೆತ್ತಿ ಬಂದಾ ಶತ್ರು ಸೇನೆಯನ್ನು ಅನೇಕ ಬಾರಿ ಸೋಲಿಸಿದ್ದರಿಂದ ಅವರಿಗೆ ಗುರುವು ಹತ್ತಿರವಿರುವುದು ಸಂತೋಷ ತಂದಿತ್ತು. ಮುಘಲರು ದಾಳಿ ಮಾಡಿದ ಸಂದರ್ಭದಲ್ಲಿ ಗುರುವಿನಿಂದ ನೆರವನ್ನು ಅವರು ನಿರೀಕ್ಷಿಸುತ್ತಿದ್ದರು.

ಕೀರತಪುರದಲ್ಲಿ ಗುರುವು ತಂಗಿದ್ದ ಕಾಲದಲ್ಲಿ ಬಿಲಾಸ್‌ಪುರದ ಕೆಹ್ಲೂರು, ಹಂಡುರ್ (ನಲಗಡ), ಸಿರಮಾರ್ (ನಹನ್) ಮತ್ತು ಇತರ ರಾಜ್ಯಗಳ ರಾಜರು ಗುರುವನ್ನು ನಿಯತವಾಗಿ ಭೇಟಿಯಾಗುತ್ತಿದ್ದರು. ಸಂದೇಶ ಕಳಿಸುತ್ತಿದ್ದರು. ಇದೇ ಕಾಲದಲ್ಲಿ ಅನೇಕ ರಜಪೂತ ರಾಜರು ಮತ್ತು ಯುವರಾಜರು ಹಾಗೂ ರಾಜಕೀಯ ಸಂತ್ರಸ್ತರು ಗುರುವಿನ ಬಳಿ ಆಶ್ರಯ ಪಡೆದು ಕೀರತಪುರದಲ್ಲಿ ವಾಸವಾಗಿದ್ದರು. ಭಾಯ್ ಲಖಿ ರಾಯ್ ವಂಜಾರ ಮತ್ತು ಇತರೆ ಪ್ರಮುಖ ವ್ಯಾಪಾರಿಗಳು ಗುರುವನ್ನು ಆಗಾಗ್ಗೆ ಭೇಟಿ ಮಾಡುತ್ತಿದ್ದರು. ಈ ಸಮಯದಲ್ಲಿ ಗುರುವು ಕೋಟೆಯೊಂದನ್ನು ನಿರ್ಮಿಸುವ ಯೋಜನೆಯನ್ನು ರೂಪಿಸಿದ್ದಿರಬಹುದು. ಶಿವಾಲಿಕ್ ಪರ್ವತದ ತಪ್ಪಲಿನಲ್ಲಿ ಲಖಿ ರಾಯ್ ಬಂಜಾರಾ ತನ್ನ ಒಡೆತನದಲ್ಲಿದ್ದ ವಿಸ್ತಾರವಾದ ಜಮೀನು ನೀಡುವುದಾಗಿ ಹೇಳಿರಬಹುದು. ಲೋಹಗಡ ಕೋಟೆಯ ನಿರ್ಮಾಣವನ್ನು ಗುರುವಿನ ನಿರ್ದೇಶನದಂತೆ ಲಖಿ ರಾಯ್ ವಂಜಾರ್ ಆರಂಭಿಸಿರಬಹುದು.

ಗುರು ಹರ್ ಗೋವಿಂದ್‌ರವರು 1644 ಮಾರ್ಚ್ 4 ರಂದು ಕೊನೆಯುಸಿರೆಳೆದರು. ಅವರ ಶವಸಂಸ್ಕಾರ ನಡೆಯುತ್ತಿದ್ದ ಸಮಯದಲ್ಲಿ ಹಿಂದಿನ ರಜಪೂತ ರಾಜನೊಬ್ಬ ಬೆಂಕಿಗೆ ಹಾರಿ ಆತ್ಮಾಹುತಿ ಮಾಡಿಕೊಂಡ. ಇದು ರಜಪೂತರು ಭಕ್ತಿ ಮತ್ತು ಪ್ರೀತಿಯನ್ನು ತೋರುವ ಮಾರ್ಗವಾಗಿತ್ತು. ಈ ರಜಪೂತ ರಾಜ ತನ್ನ ಮಗಳ ಶೀಲವನ್ನು ಕಾಪಾಡಲು ಅನೇಕ ಮುಘಲರನ್ನು ಕೊಂದು ಕೀರತಪುರದಲ್ಲಿ ಆಶ್ರಯಪಡೆದಿದ್ದ. ಗುರುವಿನ ಸಂಸ್ಕಾರದ ಸಮಯದಲ್ಲಿ, ಆತ ಭಾವಾವೇಶಕ್ಕೆ ಒಳಗಾಗಿ ಗುರುವಿನ ಅಗಲಿಕೆಯನ್ನು ತಡೆಯಲಾರದೆ ಆತ್ಮಾಹುತಿ ಮಾಡಿಕೊಂಡ. ಅದೇ ರೀತಿ ಆತ್ಮಾಹುತಿ ಮಾಡಿಕೊಳ್ಳಲು ಯತ್ನಿಸುತ್ತಿದ್ದ ಮತ್ತೊಬ್ಬ ರಜಪೂತನನ್ನು ಗುರು ಹರ್ ರಾಯ್

ತಡೆದರು. ಆದರೆ ಆತ ತನ್ನ ಕಠಾರಿಯಿಂದ ಇರಿದುಕೊಂಡು ಸತ್ತ. ಆತನನ್ನು ಗುರುವಿನ ಪಕ್ಕದಲ್ಲಿಯೇ ಸಂಸ್ಕಾರ ಮಾಡಲಾಯಿತು.

ಗುರು ಹರ್ ರಾಯ್ ಅವರು ತಮ್ಮ ಆರಂಭದ ದಿನಗಳನ್ನು ಕೀರತ್‌ಪುರ್‌ನಲ್ಲಿಯೇ ಕಳೆದರು. 1645ರಲ್ಲಿ ಕೆಹ್ಲೂರಿನ ರಾಜ ತಾರಾ ಚಂದ್ ಮುಘಲರ್ ಚಕ್ರವರ್ತಿ ಶಹಜಾನನಿಗೆ ಕಪ್ಪ ಕೊಡಲು ನಿರಾಕರಿಸಿದ. ಚಕ್ರವರ್ತಿ ಅವನ ಬಂಧನಕ್ಕೆ ಆಜ್ಞಾಪಿಸಿದ. ಗುರುವು ತಾರಾಚಂದ್‌ಗೆ ತನ್ನ ಸಾರ್ವಭೌಮತ್ವವನ್ನು ಘೋಷಿಸಿಕೊಳ್ಳಲು ಇಲ್ಲವೇ ಮುಘಲರ ಜೊತೆ ಯುದ್ಧಕ್ಕೆ ಸನ್ನದ್ಧನಾಗಲು ಅಥವಾ ಕಪ್ಪವನ್ನು ನೀಡಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಸಲಹೆ ಮಾಡಿದರು. ಆದರೆ ಆತ ಗುರುವಿನ ಮಾತಿಗೆ ಬೆಲೆ ನೀಡಲಿಲ್ಲ. ಪರಿಣಾಮವಾಗಿ ಆತ ಬಂಧನಕ್ಕೊಳಗಾಗಿ ಸೆರೆಮನೆ ಸೇರಿದ. ತಾರಾಚಂದ್ ತಮ್ಮ ಮಾತನ್ನು ಕೇಳದೇ ಹೋದಾಗ ಗುರುವು ಕೀರತಪುರವನ್ನು ತೊರೆದು ಹಳೆಯ ನಹನ್ / ಸಿರಾಮಾರ್ ರಾಜ್ಯದ ತಪಲ್‌ಗೆ ಬಂದರು. ಗುರು ಅವರು ತಪಲ್‌ನಲ್ಲಿ ಉಳಿದುಕೊಂಡ ಸಮಯದಲ್ಲಿ ಲೋಹಗಡದ ಬಹುತೇಕ ಕಾಮಗಾರಿಗಳು ನಡೆದಿರಬಹುದು. ತಾರಾಚಂದ್ ಬಿಡುಗಡೆಯಾದ ಕೂಡಲೇ ಗುರುವನ್ನು ಭೇಟಿ ಮಾಡಿ ಕೀರತ್‌ಪುರಕ್ಕೆ ಹಿಂದಿರುಗುವಂತೆ ಕೋರಿಕೆಯನ್ನಿಟ್ಟ.

---

**ಅಡಿ ಟಿಪ್ಪಣಿಗಳು**

1. ಭಾಯ್ ನನ್ನು ಶಾ ವಂಜಾರ ರುಹಿಲ ಯುದ್ಧದಲ್ಲಿ ಮಡಿದು ಸಿಖ್ ಹುತಾತ್ಮ ಸರಣಿಯನ್ನು ಆರಂಭಿಸಿದ. ಆತ ಭಾಯ್ ಮಾಣಿ ಸಿಂಗ್ ಮತ್ತು ಭಾಯಿ ಭಗವಂತ್ ಸಿಂಗ್ ಬಂಗೇಶ್ವರಿಯ ಹಿರಿಯ ವಂಶಸ್ಥ.

# ಅಧ್ಯಾಯ-4

# ನಾಂದೇಡ್‌ನಿಂದ ಲೋಹಗಡ ಕೋಟೆಯವರೆಗೆ ಬಂದಾ ಸಿಂಗ್ ಬಹದ್ದೂರನ ಪ್ರಯಾಣ

ಔರಂಗಜೇಬ್ ನಿಧನರಾದ ತರುವಾಯ ಸಿಂಹಾಸನದ ಹಕ್ಕಿಗಾಗಿ ಮಕ್ಕಳ ನಡುವೆ ಯುದ್ಧ ಶುರುವಾಯಿತು. ಆ ಮಕ್ಕಳಲ್ಲಿ ಮೌಜಾಮ್ (ಮುಂದೆ ಬಹದ್ದೂರ್ ಶಾ) ಜಯಶಾಲಿಯಾದ. ನಿರ್ಣಾಯಕ ಯುದ್ಧವು 1707ನೇ ಜೂನ್ 8 ರಂದು ಜಜಾವುನಲ್ಲಿ ನಡೆಯಿತು. ಅದರಲ್ಲಿ ತಾರಾ ಅಜಂ ಸತ್ತು ಮೌಜಮ್ ಗೆದ್ದ. ಈಗ ಮೌಜಂ ಮುಘಲ್ ಸಿಂಹಾಸನದ ಮೇಲೆ ಬಹದ್ದೂರ್ ಶಾ ಆಗಿ ಕುಳಿತು. ತನ್ನ ಬೆಂಬಲಗರಿಗೆ ಕೃತಜ್ಞತೆ ಹೇಳಲು ಹಾಗೂ ಪುರಸ್ಕರಿಸಲು ದರ್ಬಾರ್ ನಡೆಸಿದ. 1707ರ ಜುಲೈ 23 ರಂದು ಆತ ತನ್ನ ದರ್ಬಾರ್‌ಗೆ ಗುರುವನ್ನು ಸ್ವಾಗತಿಸಿ ಅವರ ಆಶೀರ್ವಾದಕ್ಕಾಗಿ ಕೃತಜ್ಞತೆ ಸಲ್ಲಿಸಿ, ಅವರಿಗೆ ವಜ್ರದ ಹರಳನ್ನು ನೇಯ್ದ ಗೌರವಾನ್ವಿತ ವಸ್ತ್ರ **'ಖಿಲ್ಲತ್'** ನೀಡಿದ. ಇದಲ್ಲದೆ ಬಹದ್ದೂರ್ ಶಾ ಮುಂದುವರೆದು ಗುರುವಿನ ತಾಯಿಗೆ ದೌರ್ಜನ್ಯವೆಸಗಿದ ದುಷ್ಟರನ್ನು ಶಿಕ್ಷಿಸುವುದಾಗಿ ಅಭಯವನಿತ್ತ. ಗುರು ವಜೀರ್ ಖಾನನನ್ನೂ ಸೇರಿದಂತೆ ಹತ್ತು ಜನರ ಪಟ್ಟಿ ನೀಡಿದರು(1). ಇವರೆಲ್ಲರೂ ಸಹಿಬ್ಜಾದಾಸ್, ಮಾತಾ ಗುರುಜಿ ಮತ್ತು ಇತರರ ಮರಣಕ್ಕೆ ಕಾರಣರಾಗಿದ್ದರು. ಆದರೆ ಭರವಸೆ ನೀಡಿದಂತೆ ಯಾವುದೇ ಕ್ರಮ ತೆಗೆದುಕೊಳ್ಳುವ ಮೊದಲು ಅಂಬರ್ (ಜೈಪುರ), ಜೋಧ್‌ಪುರ ಮತ್ತು ಆಜ್ಮೀರ್‌ನಲ್ಲಿ ರಜಪೂತ ರಾಜರು ಎಬ್ಬಿಸಿದ್ದ ದಂಗೆಯನ್ನು ಶಮನ ಮಾಡಲು ಬಹದ್ದೂರ್ ಶಾ ಆಗ್ರಾದಿಂದ ಹೊರಡಬೇಕಾಯಿತು. ಈ ಯಾತ್ರೆಯಲ್ಲಿ ಗುರುವನ್ನು ತನ್ನೊಡನಿರಲು ಆಹ್ವಾನಿಸಿದ ಬಹದ್ದೂರ್ ಶಾ ಪ್ರಯಾಣದಲ್ಲಿ ವಜೀರ್ ಖಾನ್ ಮತ್ತು ಇತರರ ಮೇಲೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಅಂತಿಮಗೊಳಿಸಬಹುದೆಂದು ಹೇಳಿದ.

ಇನ್ನೊಂದು ಮೂಲದ ಪ್ರಕಾರ, ಗುರು ಆತನ ಜೊತೆ ಹೋಗಲಿಲ್ಲ. ಬಹದ್ದೂರ್ ಶಾ ರಜಪೂತ್ ದಂಡಯಾತ್ರೆಯಲ್ಲಿ ಸುಮಾರು ಐದು ತಿಂಗಳು ನಿರತನಾಗಿದ್ದ ಕಾಲದಲ್ಲಿ ಗುರುವಿನ ಬಳಿ ದೂತರನ್ನು ಕಳುಹಿಸಿ ಅಜ್ಮೀರ್‌ಗೆ ಬರಮಾಡಿಕೊಂಡ. ಗುರುವು 1708ರ ಮಾರ್ಚ್ ತಿಂಗಳ ಆರಂಭದಲ್ಲಿ ಅಜ್ಮೀರ್ ತಲುಪಿದರು. ಆದರೆ ವಜೀರ್‌ಖಾನ್ ವಿಷಯದ ಬಗ್ಗೆ ಚರ್ಚೆ ಮಾಡುವ ಮೊದಲೇ ತನ್ನ ತಮ್ಮ ಕಾಮ್ ಬಕ್ಷ್ ಬಂಡಾಯವೆದ್ದ ವರದಿ ಬಹದ್ದೂರ್ ಶಾಗೆ ತಲುಪಿತು. ಹಾಗಾಗಿ ಬಂಡಾಯವನ್ನು ದಮನ ಮಾಡಲು ಆತ ದಕ್ಷಿಣದ ಕಡೆ ಪ್ರಯಾಣಿಸಲು ನಿರ್ಧರಿಸಿದ. ಪ್ರಯಾಣದ ಕಾಲದಲ್ಲಿ ಈ ಬಗ್ಗೆ ಚರ್ಚಿಸಲು ತನ್ನೊಡನೆ ಬರುವಂತೆ ಆತ ಗುರುವನ್ನು ಕೋರಿದ.

ದಕ್ಷಿಣದ ಕಡೆಯ ಪ್ರಯಾಣದಲ್ಲಿ ಗುರುವು ಬಹದ್ದೂರ್ ಶಾ ಜೊತೆ ಒಂದೆರಡು ಬಾರಿ ಭೇಟಿಯಾಗಿ ತೆಗೆದುಕೊಳ್ಳಬೇಕಾದ ಶಿಕ್ಷಾ ಕ್ರಮಗಳ ಬಗ್ಗೆ ಚರ್ಚಿಸಿದರು. ಇಬ್ಬರ ತಂಡಗಳೂ

1708 ಮೇ ತಿಂಗಳಿನಲ್ಲಿ ಬುರ್ಹಾಣ್‌ಪುರ ತಲುಪಿದವು. ಆಗ ನರ್ಮದಾ ನದಿಯಲ್ಲಿ ಪ್ರವಾಹ ಏರ್ಪಟ್ಟಿತ್ತು. ಹಾಗಾಗಿ ಅವರು ಬುರ್ಹಾಣ್‌ಪುರದಲ್ಲಿಯೇ ಉಳಿಯಬೇಕಾಯಿತು.

ಈ ಹಂತದಲ್ಲಿ ಸರ್ಹಿಂದ್‌ನ ರಾಜ್ಯಪಾಲ ವಜೀರ್‌ಖಾನ್‌ಗೆ ಗುರುಗಳು ಸಾಮ್ರಾಟನನ್ನು ಭೇಟಿಯಾಗುತ್ತಿರುವ ಸುದ್ದಿ ತಲುಪಿತು. ಗುರುವಿನ ಜೊತೆ ಗೆಳೆತನ ಬೆಳೆಸಿರುವ ಬಹದ್ದೂರ್ ಶಾ ತನ್ನ ವಿರುದ್ಧ ಕ್ರಮ ಜರುಗಿಸಬಹುದೆಂಬ ಶಂಕೆ ಕಾಡಿತು. ಅವರಿಬ್ಬರ ಸ್ನೇಹವನ್ನು ಮುರಿಯಲು ವಜೀರ್‌ಖಾನ್ ಸಂಚು ಹೂಡಿದ. ಈ ಸಂಚಿನ ಅಂಗವಾಗಿ ಎಂಟು ಲಕ್ಷ ರೂಪಾಯಿಗಳ ದೊಡ್ಡ ಮೊತ್ತವನ್ನು ಯುದ್ಧ ವೆಚ್ಚಕ್ಕೆಂದು ದೊರೆ ಬಹದ್ದೂರ್ ಶಾಗೆ ಕಳುಹಿಸಿಕೊಟ್ಟ. ಜೊತೆಗೆ ಗುರುವಿನ ಶಿಬಿರದೊಳಗೆ ನುಸುಳಿ ಸಮಯ ಸಿಕ್ಕಾಗ ಅವರನ್ನು ಕೊಲ್ಲುವುದಕ್ಕಾಗಿ ಕೆಲವೊಂದು ಪಠಾಣರನ್ನು ಕಳುಹಿಸಿಕೊಟ್ಟ.

ಬಹುದ್ದೂರ್ ಶಾ ಮತ್ತು ಗುರು 1708 ಮೇ ತಿಂಗಳ ಉತ್ತರಾರ್ಧದಲ್ಲಿ ನರ್ಮದಾ ನದಿಯನ್ನು ದಾಟಿದರು. ಆ ವೇಳೆಗೆ ವಜೀರ್‌ಖಾನ್ ಕಳಿಸಿದ್ದ 8 ಲಕ್ಷ ರೂಪಾಯಿಗಳು ಬಹದ್ದೂರ್ ಶಾಗೆ ತಲುಪಿದ್ದರು. ಇದರಿಂದ ವಜೀರ್‌ಖಾನ್ ವಿರುದ್ಧ ಕ್ರಮ ತೆಗೆದುಕೊಳ್ಳಲು ಅವನ ಕೈಕಟ್ಟಿತು. ಹಾಗಾಗಿ ಶಾ ಗುರುವಿನ ಭೇಟಿಯಿಂದ ತಪ್ಪಿಸಿಕೊಳ್ಳುತ್ತಿದ್ದ. ವಜೀರ್‌ಖಾನ್ ವಿರುದ್ಧ ಕ್ರಮ ತೆಗೆದುಕೊಳ್ಳುವ ಬಗ್ಗೆ ಶಾಗೆ ಇಚ್ಛೆಯಿಲ್ಲವೆಂಬುದನ್ನು ಅರಿತ ಗುರು ಶಾನನ್ನು ಮರೆತು ತಾವೇ ಕ್ರಮ ಜರುಗಿಸಲು ಸಿದ್ಧರಾದರು. ಹಾಗಾಗಿ ಗುರುವು ಬಹದ್ದೂರ್ ಶಾನ ಜೊತೆಗಿನ ಪ್ರಯಾಣವನ್ನು ಬಿಟ್ಟು ಪಂಜಾಬ್‌ಗೆ ಮರಳಿದರು. ಆದರೆ ಪಂಜಾಬ್‌ಗೆ ಮರಳುವ ಮೊದಲು ಗುರು ನಾಂದೇಡ್‌ನಲ್ಲಿ ಡೇರೆ ಹೂಡಿರುವ ಮಧೊ ದಾಸ್ ಬೈರಾಗಿಯನ್ನು ಭೇಟಿ ಮಾಡಲು ನಿರ್ಣಯಿಸಿದರು. ಮಧೋ ದಾಸ್‌ರವರು ಗುರುವನ್ನು 1694ರಲ್ಲಿ ರಿಷಿಕೇಶದಲ್ಲಿ ಭೇಟಿಯಾಗಿದ್ದರು.

**ಬಂದಾ ಸಿಂಗ್ ಸಿಖ್ ಪಂಥಕ್ಕೆ ಸೇರಿದ್ದು**

ಮಧೋ ದಾಸನ ಶಿಬಿರಕ್ಕೆ ಗುರು ಗೋವಿಂದ್ ಸಿಂಗ್ 1708ರ ಸೆಪ್ಟೆಂಬರ್ 3 ರಂದು ಭೇಟಿ ನೀಡಿದರು[3]. ಮಧೋ ದಾಸ ಒಂದು ನುಡಿಯನ್ನು ಆಡುವ ಮೊದಲೇ ಗುರು "ಮಧೊ ದಾಸ್ ನಾವು ನಿಮ್ಮನ್ನು ನೋಡಲು ಬಂದಿದ್ದೇವೆ. ನಿಮ್ಮದು ವಿಷ್ಣು ಡೇರಾ ಎಂಬುದು ಗೊತ್ತು. ಆದರೆ ನಿಮಗೆ ಮತ್ತೊಂದು ದೊಡ್ಡ ಡೇರಾ ಇರುವುದು ತಿಳಿಯದೆಂದು ಕಾಣುತ್ತದೆ. ಅಲ್ಲಿ ಪ್ರತಿದಿನವೂ ಸಾವಿರಾರು ಮುಗ್ಧ ಜನರನ್ನು ಕತ್ತರಿಸಲಾಗುತ್ತಿದೆ. ಈ ಸಂಕಷ್ಟದ ಕಡೆ ನಿಮ್ಮ ಗಮನ ಹರಿಸುವಂತೆ ಮಾಡಲು ನಾನಿಲ್ಲಿ ಬಂದಿದ್ದೇನೆ" ಎಂದರು. ಈ ಮಾತುಗಳು ಮಧೊ ದಾಸ್ ಮೇಲೆ ಮಹಾನ್ ಪರಿಣಾಮವನ್ನು ಉಂಟು ಮಾಡಿದವು. ನಡುಗುವ ಧ್ವನಿಯಿಂದ ಆತ "ಗುರುದೇವ, ಈ ಹೊತ್ತಿನಿಂದ ನಾನು ನಿಮ್ಮ ಬಂದಾ (ದಾಸ). ನನ್ನ ಮೈ ಮನಸ್ಸು ನಿಮ್ಮ ಸೇವೆಗೆ ಮೀಸಲು. ನಾನು ಈಗೇನು ಮಾಡಬೇಕೋ ಆದೇಶ ನೀಡಿ" ಎಂದರು. ನಸುನಕ್ಕ ಗುರು ಮಧೋ ದಾಸ್‌ನನ್ನು ದಿಟ್ಟಿಸಿ ನೋಡಿ ಹೇಳಿದರು– "ಮಧೋ ದಾಸ್! ಯಾರೋ ಒಬ್ಬನ 'ಬಂದಾ' ಆಗಿ ಅವನ ಆಜ್ಞೆಯನ್ನು ಪಾಲಿಸುವುದು ತುಂಬಾ ಕಷ್ಟದ ಕಾರ್ಯ. ತನ್ನ ದೇಹ, ಮನಸ್ಸು ಮತ್ತು ಶ್ರೀಮಂತಿಕೆಯನ್ನು ತ್ಯಾಗ ಮಾಡುವವನೇ 'ಬಂದಾ' ಎಂದು ಹೇಳಿದರು."

ಈಗ ಮಧೋ ದಾಸ್ ಈ ಹಿಂದಿನ ಮಧೋ ಆಗಿರಲಿಲ್ಲ. ತನ್ನ ಗೌರವ ಮತ್ತು ಅಹಂ ಅನ್ನು ತ್ಯಾಗ ಮಾಡಿ ಗುರುವಿನ ವಿನಯದಂತೆ 'ಬಂದಾ' ಆಗಿಯೇ ಹೋದ. ಈ ಬಗ್ಗೆ ಗುರು

ಮತ್ತೆ "ಮಧೊ ದಾಸ್, ನಮ್ಮ ಧರ್ಮ (ಸಿಖ್ ಧರ್ಮ) ಗುರುನಾನಕ್ ಅವರ ಮನೆ. ಯಾರಾದರೂ ಅವನ ಮನೆಯನ್ನು ಪ್ರವೇಶಿಸಿದರೆ ಆತ ತನ್ನ ಹಿಂದಿನ ಹುಟ್ಟು, ನಂಬಿಕೆ, ವರ್ತನೆ, ಹಿಂಜರಿಕೆ ಮತ್ತು ಸಂದೇಹಗಳನ್ನು ಬಿಟ್ಟುಬಿಡಬೇಕು" ಎಂದರು. ಮಧೋ ದಾಸ್ ಒಪ್ಪಿದರು. "ಸ್ವಾಮಿ, ನನಗೀಗ ಯಾವ ಮನೆಯೂ ಇಲ್ಲ... ನಾನು ಅಂತರಂಗ, ಬಹಿರಂಗವಾಗಿ ನಿಮ್ಮ 'ಬಂದಾ' ಆಗಿ ಹೋಗಿದ್ದೇನೆ" ಎಂದ.

### ಸಿಕ್ ಧರ್ಮಕ್ಕೆ ಬಂದಾ ಸಿಂಗ್‌ನ ದೀಕ್ಷೆ

ಮಾರನೆಯ ದಿನ ಅಂದರೆ 1708ರ ಸೆಪ್ಟೆಂಬರ್ 4 ರಂದು ಗುರು ಸ್ವತಃ ತಾನೇ ಸಿಖ್ ಧರ್ಮದ ಐದು ಕುರುಹುಗಳು ಅಂದರೆ ಕಕಾರಗಳನ್ನು (ಕಂಗ, ಕಿರ್ಪಾನ್, ಕರ್ಹ್ರಾ, ಕಬೇರ ಮತ್ತು ಕೇಸ್ಕಿ) ಕೊಟ್ಟು ಮಧೊ ದಾಸನನ್ನು ಆಶೀರ್ವದಿಸಿ ದೀಕ್ಷೆ ನೀಡಿದರು. ಹಿಂದಿನ ಬೈರಾಗಿ ಸಾಧು ಈಗ ಕೇಸ್ಕಿ (ಪೇಟ) ಧರಿಸಿ ಸಿಖ್ ಆದ. ಮಧೊ ದಾಸ್ ಅಲ್ಲದೆ ಅವನ ಜೊತೆಯಲ್ಲಿ ದಯಾ ಸಿಂಗ್, ಭಾಯ್ ಧರಂ ಸಿಂಗ್ ಮತ್ತು ಇನ್ನಿಬ್ಬರಿಗೆ ಖಂಡೆ–ದಿ–ಪಾಊಹಲ್ ದಯಪಾಲಿಸಲಾಯಿತು. ಮಧೊ ದಾಸ್‌ಗೆ ಬಂದಾ ಸಿಂಗ್ ಎಂಬ ಹೆಸರು ನೀಡಲಾಯಿತು. ಅಲ್ಲಿ ಹಾಜರಿದ್ದ ಸಿಕ್ಖರು ಜಯಕಾರ ಮೊಳಗಿಸಿದರು. ಬಂದಾ ಸಿಂಗ್‌ನ ಪಂಥ ಪ್ರವೇಶ ಹೀಗಾಯಿತು. 'ಭಟ್ ವಾಹಿ'ಯ ಲೇಖಕರು, ಬಂದಾ ಸಿಂಗ್ ದೀಕ್ಷೆ ಪಡೆದ ದೃಶ್ಯವನ್ನು ದಾಖಲಿಸಿದ್ದಾರೆ. ಈ ಘಟನೆಯನ್ನು 'ಗುರು ಕಿಯಾನ್ ಸಖಿಯಾನ್' ಗ್ರಂಥದಲ್ಲಿ ಅದರ ಲೇಖಕ ಸ್ವರೂಪ ಸಿಂಗ್ ಕೌಶಿಶ್ ವಿವರವಾಗಿ ವರ್ಣಿಸಿದ್ದಾರೆ.

ಸ್ವರೂಪ್ ಸಿಂಗ್ ಕೌಶಿಶ್ ಅಲ್ಲದೆ ಹದಿನೆಂಟು ಮತ್ತು ಹತ್ತೊಂಬತ್ತನೆ ಶತಮಾನದ ಹಲವು ಇತರೆ ಲೇಖಕರು (ಬಹುತೇಕ ಸಿಖ್ ಅಲ್ಲದವರು), ಬಂದಾ ಸಿಂಗ್‌ಗೆ ಸಿಖ್ ಸೈನ್ಯದ ದಂಡಾಧಿಕಾರವನ್ನು ನೀಡುವ ಮುನ್ನ ನಾಂದೇಡ್‌ನಲ್ಲಿ ಹತ್ತನೇ ಗುರು ಮಧೊ ದಾಸ್‌ಗೆ ನೀಡಿದ ದೀಕ್ಷೆಯನ್ನು ಕುರಿತು ಉಲ್ಲೇಖಿಸಿದ್ದಾರೆ.

ಬಂದಾ ಸಿಂಗ್‌ಗೆ ದೀಕ್ಷೆಯನ್ನು ನೀಡಿದ ತರುವಾಯ ಗುರು ಗೋವಿಂದ್ ಸಿಂಗ್ ಅವರು ಆತನಿಗೆ ಸಿಕ್ಖರ ಸ್ವಂತ ನೆಲದಲ್ಲಿ ಅವರ ಪರಿಸ್ಥಿತಿಯನ್ನು ವಿವರಿಸಿದರು. ಅಲ್ಲದೆ ತಾವು ಆನಂದಪುರ ಸಾಹಿಬ್ ಅನ್ನು ತೊರೆದ ವಿಚಾರವನ್ನು ವಿವರವಾಗಿ ಹೇಳಿದರು. ಇದು ಬಂದಾ ಸಿಂಗ್‌ನಲ್ಲಿ ಚಡಪಡಿಕೆ ತರಿಸಿತು. ಆದರೆ ಗುರು ಆತನನ್ನು ಎಚ್ಚರಿಸಿ "ದುಃಖಿಸುವ ಅಥವಾ ಪರಿತಪಿಸುವ ಕಾಲ ಇದಲ್ಲ. ಇದು ಕ್ರೂರ ಆಡಳಿತವನ್ನು ಕೊನೆಗಾಣಿಸಲು ಕ್ರಮವಹಿಸಬೇಕಾದ ಕಾಲ" ಎಂದರು. ಆಗ ಬಂದಾ ಸಿಂಗ್ "ಗುರೂಜಿ ನಾನು ನಿಮ್ಮ ಬಂದಾ... ನಿಮಗೆ ಅನಿಸಿದ್ದನ್ನು ಆದೇಶ ಮಾಡಿ. ನಾನದನ್ನು ತಕ್ಷಣವೇ ಪಾಲಿಸುತ್ತೇನೆ" ಎಂದ. ಆಗ ಗುರು ಸಿಖ್ ಸೇನೆಯ ನೇತೃತ್ವ ವಹಿಸಿ ಮುಘಲರ ಕ್ರೂರ ಆಡಳಿತವನ್ನು ಕೊನೆಗಾಣಿಸಲು ಹೇಳಿದರು. ಸಿಕ್ಖರ ತಾಯ್ನಾಡು ತಲುಪಿದಾಗ ಸಾವಿರಾರು ಸಿಖ್ ಜನರು ನಿನ್ನ ಜೊತೆಯಾಗುತ್ತಾರೆಂದು ಬಂದಾ ಸಿಂಗ್‌ಗೆ ಅಭಯ ನೀಡಿದರು.

### ನಾಂದೇಡನ್ನು ತೊರೆದ ಬಂದಾ ಸಿಂಗ್

ಈ ಅವಧಿಯಲ್ಲಿ ಭಾಯ್ ಭಗವಂತ ಸಿಂಗ್ ಬಂಗೇಶ್ವರಿಯ ವ್ಯಾಪಾರಿ ತಾಂಡವೊಂದು ನಾಂದೇಡ್ ಮಾರ್ಗವಾಗಿ ಹೋಗುತ್ತಿತ್ತು. ಗುರು ಅವರು ನಾಂದೇಡ್‌ನಲ್ಲಿರುವುದನ್ನು ಅರಿತ ಬಂಗೇಶ್ವರಿಯು ತನ್ನ ಪ್ರಣಾಮ ಅರ್ಪಿಸಲು ಗುರುವಿನ ಬಳಿ ಬಂದಾ. ಗುರುವು ಈ ಅವಕಾಶವನ್ನು

ಬಳಸಿಕೊಂಡು ವ್ಯಾಪಾರಿ ತಂಡದ ಜೊತೆ ಬಂದಾ ಸಿಂಗ್‌ನನ್ನು ಕಳುಹಿಸಲು ನಿರ್ಧರಿಸಿದರು. ಹಾಗಾಗಿ ಬಂದಾ ಸಿಂಗ್ 1708 ಅಕ್ಟೋಬರ್ 5 ರಂದು ನಾಂದೇಡ್ ಬಿಟ್ಟು ಬಂಗೇಶ್ವರಿಯ ತಂಡದೊಡನೆ ಹೊರಟ. ಗುರು ಗೋವಿಂದ ಸಿಂಗ್ ಅವರು ಬಂದಾ ಸಿಂಗ್‌ಗೆ ಒಂದು ನೀಲಿ ಬಾವುಟ (ಸಿಖ್ ಸಾರ್ವಭೌಮತ್ವದ ಸಂಕೇತ), ಒಂದು ನಗಾಡ (ರಣಭೇರಿ) ಮತ್ತು ತಮ್ಮಲ್ಲಿದ್ದ ಐದು ಬಾಣಗಳನ್ನು ನೀಡಿದರು. ಬಂದಾ ಸಿಂಗ್‌ಗೆ ಎಲ್ಲ ಬೆಂಬಲ, ನೆರವು ನೀಡುವಂತೆ ತಿಳಿಸಿ ಕೆಲವು ಪ್ರಮುಖ ಸಿಖ್ ಗಣ್ಯರಿಗೆ ಬರೆದ ಹಲವು *ಹುಕುಂನಾಮಾ*ಗಳನ್ನು ಬಂದ್ ಸಿಂಗ್‌ಗೆ ನೀಡಿದರು. ಬಂಗೇಶ್ವರಿ ತಂಡವು ಆ ಕಾಲದ ಶ್ರೀಮಂತ ತಂಡಗಳಲ್ಲೊಂದಾಗಿದ್ದು, ಅದು ಭಾಯ್ ಲಖಿ ರಾಯ್ ವಂಜಾರ ಒಡೆತನಕ್ಕೆ ಸೇರಿತ್ತು. ಭಗವಂತಸಿಂಗ್ ಬಂಗೇಶ್ವರಿಯು ಔರಂಗಜೇಬ್ ಚಕ್ರವರ್ತಿಯ ಮಾನ್ಸಾಬದಾರ್ ಅವರಲ್ಲೊಬ್ಬ. ಮಾನ್ಸಾಬದಾರ್ ಎಂದರೆ ಒಂದು ನಿರ್ದಿಷ್ಟ ಸಂಖ್ಯೆಯ ಸೇನೆಯ ಕುದುರೆ ಅಥವಾ ಕಾಲಾಳುಗಳ ಮೇಲೆ ಅಧಿಕಾರವಿರುವ ವ್ಯಕ್ತಿ. ಸಾಮಾನ್ಯವಾಗಿ ಆತನಿಗೆ ನಿರ್ವಹಣೆಗಾಗಿ ಜಮೀನು ತೋಟಗಳನ್ನು ಉಂಬಳಿಯಗಿ ಕೊಡಲಾಗುತ್ತದೆ(5).

ಬಂದಾ ಸಿಂಗ್ ಜೊತೆಯಲ್ಲಿ ಗುರು ಕೆಲವು ಸಿಕ್ಖರನ್ನು ಕಳುಹಿಸಿದರು. ರತನ್‌ಸಿಂಗ್ ಭಂಗು ಅವರು ಈ ಜೊತೆಗಾರರ ಹೆಸರನ್ನು ಬಿನೋದ್ ಸಿಂಗ್, ಕಹಾನ್ ಸಿಂಗ್, ಬಜ್‌ಸಿಂಗ್, ರಣ್‌ಸಿಂಗ್ ಮತ್ತು ರಾಮ್‌ಸಿಂಗ್ ಎಂದು ಹೆಸರಿಸಿದ್ದಾರೆ. ಆದರೆ ಭಟ್‌ವಾಹಿಗಳು ಭಗವಂತ್ ಸಿಂಗ್, ಬಜ್‌ಸಿಂಗ್, ಕುಯಿರ್ ಸಿಂಗ್, ಕಹಾನ್‌ಸಿಂಗ್ ಮತ್ತು ಬಿನೋದ್ ಸಿಂಗ್ ಹೆಸರುಗಳನ್ನು ಉಲ್ಲೇಖಿಸಿದ್ದಾರೆ(6).

ಬಂದಾ ಸಿಂಗ್ ಪ್ರಯಾಣದ ಮಧ್ಯದಲ್ಲಿರುವಾಗಲೇ ಗುರು ಹುತಾತ್ಮರಾದ ಸುದ್ದಿ ತಿಳಿಯಿತು. ಆದರೆ ತನ್ನ ಗುರಿಯಲ್ಲಿ ನಿಷ್ಠೆಯಿಂದಿದ್ದ ಆತ ಧೃತಿಗೆಡದೆ ಪಂಜಾಬ್ ಕಡೆಗೆ ಪ್ರಯಾಣ ಮುಂದುವರೆಸಿದ. ಒಂದು ವರ್ಷದಲ್ಲಿ ಆತ 1500ಕ್ಕೂ ಹೆಚ್ಚು ದೂರ ಪ್ರಯಾಣಿಸಿದ. ಆತ ಖಾನ್ ದೇಶ (ಬುರ್ಹಾಣ್‌ಪುರ ಇತ್ಯಾದಿ), ಮಂಡ್‌ಸಾರ್, ಆಜ್ಮೀರ್, ಫುಲೇರ, ಚುರು, ಭರತ್‌ಪುರ ಮೂಲಕ ಬಂಗಾರ್ ದೇಶ ತಲುಪಿದ. ಮುಂದೆ ಆತ ಸಂಪ್ಲ ಮತ್ತು ಸೋನೆಪಟ್ ನಡುವೆ ಇರುವ *ಖರ್ಖೌಡ* ಪರಗಣದ ಖಾಂಡ ಮತ್ತು ಸೆಹ್ರಿ ಹಳ್ಳಿಗಳ ನಡುವೆ ಇರುವ ಅರಣ್ಯದಲ್ಲಿ ಬೀಡುಬಿಟ್ಟ.

ಅದು ತೆಳುವಾದ ಅರಣ್ಯವಿದ್ದ, ಮರುಭೂಮಿಯಂಥ ನಿರ್ಜನ ಪ್ರದೇಶ. ಗುರುಗಳ ಪತ್ರಗಳನ್ನು ಸಿಖ್ ಜನಾಂಗದ ಗಣ್ಯ ವ್ಯಕ್ತಿಗಳಿಗೆ ತಲುಪಿಸಲು ಮತ್ತು ಬಂದಾ ಸಿಂಗ್ ಸೈನ್ಯಕ್ಕೆ ಜನರನ್ನು ಸೇರಿಸಲು ಬಂಗೇಶ್ವರಿಯು ಭರವಸೆ ನೀಡಿ ಅಲ್ಲಿಂದ ಮಲ್ಲಾನ್ ಹತ್ತಿರವಿದ್ದ ತನ್ನ ಮನೆಯ ದಾರಿ ಹಿಡಿದ. ಹಾಗಾಗಿ ಕೆಲವೇ ವಾರಗಳಲ್ಲಿ ಶಸ್ತ್ರ ಸಜ್ಜಿತ ಸಿಕ್ಖರು ಬಂದಾ ಸಿಂಗ್‌ನನ್ನು ಸೇರಿಕೊಂಡರು. ಒಂದು ತಿಂಗಳಲ್ಲಿ ಅವರ ಸಂಖ್ಯೆ ಐದುನೂರಕ್ಕೆ ಏರಿತು. ಎರಡು ತಿಂಗಳಲ್ಲಿ ದುಪ್ಪಟ್ಟಾಯಿತು. ಹೊಸ ಹೊಸ ಜನರು ಸೈನ್ಯಕ್ಕೆ ಸೇರಲು ಪ್ರತಿದಿನವೂ ಬರತೊಡಗಿದರು.

### ರಾಜಖಜಾನೆಯನ್ನು ವಶಪಡಿಸಿಕೊಂಡ ಬಂದಾ ಸಿಂಗ್

ಒಂದು ದಿನ ರಾಜಕೋಶವನ್ನು ದೆಹಲಿಗೆ ಸಾಗಿಸುತ್ತಿರುವ ಸುದ್ದಿ ಬಂದಾ ಸಿಂಗ್‌ನನ್ನು ತಲುಪಿತು. ಈ ತಂಡವು ಬಹುನ್ ಗ್ರಾಮವನ್ನು ತಲುಪಿದಾಗ ವಿಶ್ರಾಂತಿಗಾಗಿ ಬೀಡುಬಿಟ್ಟಿತು. ಬಂದಾ ಸಿಂಗ್‌ನ ನೇತೃತ್ವದಲ್ಲಿ ಸಿಕ್ಖರ ತಂಡ ಖಜಾನೆಯನ್ನು ಒಯ್ಯುತ್ತಿದ್ದ ತಂಡದ ಮೇಲೆ ಮುಗಿಬಿದ್ದಿತು. ಸಿಕ್ಖರನ್ನು ಕಂಡ ಕೂಡಲೇ ಬಾಡಿಗೆ ಬಂಟರು ಖಜಾನೆಯನ್ನು ಬಿಟ್ಟು ಓಡಿಹೋದರು.

ಬಹುನ್‌ನಿಂದ ಓಡಿಹೋದ ಬಂಟರು, ಖೈತಾಲ್‌ನ ಮುಖ್ಯಸ್ಥನ ಬಳಿ ಹೋಗಿ ಘಟನೆಯನ್ನು ವರದಿ ಮಾಡಿದರು. ಖೈತಾಲ್‌ನ ಮುಖ್ಯಸ್ಥ ಹಿಂದೂ ಆದರೂ ಮುಘಲರಿಗೆ ನಿಷ್ಠೆಯಿಂದಿದ್ದ. ಮಾಹಿತಿಯನ್ನು ಪಡೆದ ಆತ ಅವರ ಮೇಲೆ ದಾಳಿ ಮಾಡಲು ತನ್ನ ಪಡೆಯೊಡನೆ ಹೊರಟ. ಈತನ ದಾಳಿಯ ಮುನ್ಸೂಚನೆ ಪಡೆದ ಸಿಕ್ಖರು ದಾಳಿ ಎದುರಿಸಲು ಸಜ್ಜಾದರು. ಮರಗಳಲ್ಲಿ ಅವಿತು ಕುಳಿತ ಸಿಖ್ ಸೈನಿಕರು ಮುಘಲರ ಸೈನಿಕರು ಹತ್ತಿರ ಬಂದಾಗ ಹಠಾತ್ತನೆ ದಾಳಿ ಮಾಡಿದರು. ಹೀಗೆ ತ್ವರಿತವಾದ ದಾಳಿಯಿಂದಾಗಿ ರಾಜನ ಅನೇಕ ಸೈನಿಕರು ಹತರಾದರು. ಖೈತಾಲ್‌ನ ಮುಖ್ಯಸ್ಥನನ್ನೇ ಅವರು ಸೆರೆ ಹಿಡಿದರು. ಆತನನ್ನು ಬಂದಾ ಸಿಂಗ್‌ನ ಮುಂದೆ ಹಾಜರುಪಡಿಸಿದಾಗ, ಆತ ತನ್ನ ಪ್ರಾಣ ಉಳಿಸುವಂತೆ ಮೊರೆಯಿಟ್ಟ. ಬಂದಾ ಸಿಂಗ್ ಆತನನ್ನು ಕ್ಷಮಿಸಿ ಅವನ ಕುದುರೆಗಳನ್ನು ಶಸ್ತ್ರ, ಮದ್ದುಗುಂಡುಗಳನ್ನು ವಶಕ್ಕೆ ಪಡೆದ. ಆತನನ್ನು ಬಂದಾ ಸಿಂಗ್ ಖೈತಾಲ್‌ನ ಸಿಕ್ಖರ ಮುಖ್ಯಸ್ಥನನ್ನಾಗಿ ನೇಮಕ ಮಾಡಿದ. ಅನಂತರ ಬಂದಾ ಸಿಂಗ್ ವಶಪಡಿಸಿಕೊಂಡ ಕುದುರೆ ಮತ್ತು ಶಸ್ತ್ರಗಳನ್ನು ತನ್ನ ಹೋರಾಟದ ಪಡೆಗೆ ಹಂಚಿಬಿಟ್ಟ. ತನಗಾಗಿ ಏನನ್ನೂ ಇಟ್ಟುಕೊಳ್ಳಲಿಲ್ಲ. ಇದು ಅವನ ಜೊತೆಗಾರರಲ್ಲಿ ಹೆಚ್ಚಿನ ಗೌರವ ಮೂಡಿಸಿತು.

ಇದಾದ ಕೆಲವು ದಿನಗಳ ನಂತರ ಈಗಿನ ಮಾಳ್ವಾ ವಲಯದಲ್ಲಿದ್ದ ಭಾಯ್ ರೂಪ, ಭಾಯ್ ಬಹಿಲೊ ಕುಟುಂಬ ಮತ್ತು ಇತರೆ ಕುಟುಂಬಕ್ಕೆ ಸೇರಿದ ಸಿಖ್ ಯುವಕರು ಬಂದಾ ಸಿಂಗ್ ಶಿಬಿರವನು ತಲುಪಿದರು. ಕೆಲವೇ ದಿನಗಳಲ್ಲಿ ಸಿಖ್ ಸೈನಿಕರ ಸಂಖ್ಯೆ ನಾಲ್ಕು ಸಾವಿರವನ್ನು ಮೀರಿತು. ಸರ್ಹಿಂದ್‌ನ ರಾಜ್ಯಪಾಲ ವಜೀರ್‌ಖಾನ್‌ನನ್ನು ಶಿಕ್ಷಿಸಲು ಅವರು ಬಯಸಿದರು. ಸರ್ಹಿಂದ್ ಸೇನೆ ದೊಡ್ಡದಾಗಿರುವ ಕಾರಣ ಸ್ವಲ್ಪ ಕಾಲ ಸಂಯಮದಿಂದಿರುವಂತೆ ಬಂದಾ ಸಿಂಗ್ ಸೈನಿಕರಿಗೆ ತಿಳಿಹೇಳಿದ. ಅದಲ್ಲದೆ ಸರ್ಹಿಂದ್ ಸುತ್ತಮುತ್ತಲಿನ ಸಮನ, ಮಲೇರ್‌ಕೊಟ್ಲ, ಸನಾರ್, ಘುರಂ, ಶಹಬಾದ್, ಮುಸ್ತಾಫಬಾದ್ ಮುಂತಾದ ಪಟ್ಟಣಗಳ ಮುಖ್ಯಸ್ಥರು ವಜೀರ್‌ಖಾನ್‌ನ ನೆರವಿಗೆ ಬರುವ ಸಾಧ್ಯತೆಯಿತ್ತು. ಹಾಗಾಗಿ ಸರ್ಹಿಂದ್ ಮೇಲೆ ದಾಳಿ ಮಾಡಲು ಹೆಚ್ಚಿನ ಸೈನಿಕರು, ಶಸ್ತ್ರಾಸ್ತ್ರಗಳಿರುವ ದೊಡ್ಡ ಸೇನೆಯ ಅಗತ್ಯವಿತ್ತು.

ಅಗತ್ಯವಾದ ಶಸ್ತ್ರಗಳನ್ನು ಖರೀದಿಸಲು ಸಿಕ್ಖರ ಬಳಿ ಹಣವಿರಲಿಲ್ಲ. ಆದುದರಿಂದ ನರ್ನಾಲ್, ಬಿವಣಿ, ಹಿಸ್ಸಾರ್ ಫಿರೋಜ ಮೊದಲಾದ ಪಟ್ಟಣಗಳ ಮೇಲೆ ದಾಳಿ ಮಾಡಿದ ಬಂದಾ ಸಿಂಗ್ ಸಾಕಷ್ಟು ಆಯುಧ ಮತ್ತು ಕುದುರೆಗಳನ್ನು ವಶಪಡಿಸಿಕೊಂಡ. ಈ ದಾಳಿಯಲ್ಲಿ ಸಿಖ್ ಸೇನೆಯು ಪ್ರಭುತ್ವದ ಖಜಾನೆಯನ್ನು ಲೂಟಿ ಹೊಡೆಯಿತು.

**ಸಿಖ್‌ರ ಮೊದಲ ಗೆಲುವು: ಸಮನ ಕೈವಶ**

ಬಂದಾ ಸಿಂಗ್ ಓರ್ವ ವಿವೇಕಿ ದಂಡನಾಯಕ. ಸರ್ಹಿಂದ್ ಅನ್ನು ದುರ್ಬಲಗೊಳಿಸಲು ಆತ ಅದರ ಸುತ್ತಲಿರುವ ಕೋಟೆಗಳನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದ. ಮೊದಲ ದಾಳಿಗೆ ತುತ್ತಾದದ್ದು ಸಮನ. ಈ ಪಟ್ಟಣವು 1360ರವರೆಗೆ ಪಂಜಾಬ್‌ನ ರಾಜಧಾನಿಯಾಗಿತ್ತು. ಅನಂತರ ಫಿರೋಜ್ ಶಾ ತುಘಲಕ್ ಇದನ್ನು ಸರ್ಹಿಂದ್‌ಗೆ ಬದಲಾಯಿಸಿದ. ಇದೆಲ್ಲ ಆದರೂ ಸಮನ ನಗರವು ಬಹಳ ಶ್ರೀಮಂತರ ಸ್ವರ್ಗ ಸೀಮೆಯಾಗಿತ್ತು. ಅಲ್ಲಿ ಸಯ್ಯದ್[(8)] ಮತ್ತು ಮುಘಲರಿಗೆ ಸೇರಿದ ಅನೇಕ ಮಹಲುಗಳಿದ್ದವು. ಆ ನಗರದಲ್ಲಿ ಅಂತಹ 22 ಉಮ್ರಗಳಿದ್ದರು. ಉಮ್ರಾ ಎಂದರೆ ಅತಿ ಶ್ರೀಮಂತರು ಮತ್ತು ಮುಖ್ಯಸ್ಥರಾದ ಮಂದಿ. ಅಂದರೆ ಕುಲೀನ ವಂಶಸ್ಥರು.

ಅಮೀರ್ ಎನ್ನುವುದು ಉಮ್ರಾದ ಬಹುವಚನ. ಈ ಉಮ್ರಾಗಳ ಮಹಲುಗಳು ಕಿರುಕೋಟೆಗಿಂತಲೂ ಕಡಿಮೆ ಇರಲಿಲ್ಲ. ಈ ಮಹಲುಗಳಲ್ಲಿ ಚಿನ್ನ ಮತ್ತು ವಜ್ರದ ಸಂಪತ್ತು ಹೇರಳವಾಗಿತ್ತು. ನಗರಕ್ಕೆ ದೊಡ್ಡ ಕೋಟೆಯೂ ಇತ್ತು. (ಕೋಟೆಯ ಪಾರ್ಶ್ವಭಾಗ ಈಗಲು ಅಸ್ತಿತ್ವದಲ್ಲಿದೆ) ಅಲ್ಲಿ ಸೈನ್ಯಪಡೆ ಇಲ್ಲದಿದ್ದರೂ ಸಮನದಲ್ಲಿ ತಮ್ಮ ಮೇಲೆ ದಾಳಿ ಮಾಡುವ ಧೈರ್ಯ ಯಾರಿಗೂ ಇಲ್ಲವೆಂದು ಉಮ್ರಾಗಳು ಭಯಪಡದೆ ಇದ್ದರು.

ಸಿಖ್ ಚರಿತ್ರೆಯಲ್ಲಿ ಮತ್ತು ಸಿಖ್‌ರ ಭಾವ ಭಿತ್ತಿಯಲ್ಲಿ ಸಮನ ಒಂದು ಕುಪ್ರಸಿದ್ಧ ಸ್ಥಳ. ಈ ನಗರಕ್ಕೆ 'ಜಲ್ಲದ್ (ವಧಾಕಾರರ) ನಗರ' ಎಂಬ ಹೆಸರಿದೆ. ಗುರು ತೇಗ್ ಬಹದ್ದೂರ್ ಅವರನ್ನು ವಧಿಸಿದ ಸಯ್ಯದ್ ಜಲಾಲ್–ಉದ್–ದಿನ್ ಈ ನಗರದವರನು. ಸರ್ಹಿಂದ್‌ನಲ್ಲಿ ಕಿರಿಯ ಸಹಿಬ್ಜಾದಾಗಳನ್ನು ವಧಿಸಿದ ವಧಾಕಾರರಾದ ಶಾಶಾಲ್ ಬೇಗ್ ಮತ್ತು ಬಾಶಾಲ್ ಬೇಗ್ ಈ ಸ್ಥಳದವರು. ಆನಂದಪುರವನ್ನು ತ್ಯಜಿಸಿ ಕಂಗಾರ್ ಗ್ರಾಮಕ್ಕೆ ಬರಬೇಕೆಂದು ಗುರುವಿಗೆ ಔರಂಗಜೇಬ್ ಬರೆದ ಪತ್ರವನ್ನು (ಅದನ್ನು ಔರಂಗಜೇಬ್ ಬರೆದಿರಲಿಲ್ಲ) ತಲುಪಿಸಿದ ಖಾಜಿ ಸಹ ಸಮನದವನು. ಅನೇಕ ಸಿಕ್ಖರಿಗೆ ಈ ಸ್ಥಳದ ಬಗ್ಗೆ ತಿರಸ್ಕಾರವಿತ್ತು.

ಸಮನ ಮೇಲೆ ದಾಳಿ ಮಾಡಲು ಬಂದಾ ಸಿಂಗ್ ಪರಿಸ್ಥಿತಿಯನ್ನು ಸಂಪೂರ್ಣ ಪರಿಶೀಲಿಸಿದ. 1709ರ ನವೆಂಬರ್ ತಿಂಗಳ 26 ರಂದು ಆತ ನಸುಕಿನಲ್ಲಿ ದಾಳಿ ಮಾಡಿದ. ಸೂರ್ಯೋದಯಕ್ಕೂ ಮುನ್ನವೇ ಸಿಖ್ ಸೈನಿಕರು ನಗರ ಪ್ರದೇಶ ಮಾಡಿದರು. ಜನತೆ ಇನ್ನೂ ನಿದ್ರೆಯಲ್ಲಿತ್ತು. ತಮ್ಮನ್ನು ವಿರೋಧಿಸಿದವರೆಲ್ಲರನ್ನು ಸೈನಿಕರು ಕೊಲ್ಲುತ್ತಾ ಹೋದರು. ಸಿಖ್ ಸೈನ್ಯವನ್ನು ಕಂಡಕೂಡಲೇ ಕೆಲವು ಉಮ್ರಾಗಳು ಅವರನ್ನು ಎದುರಿಸಲು ಪ್ರಯತ್ನಿಸಿದರು; ದೀರ್ಘಕಾಲ ಎದುರಿಸಲಾಗದೆ ಮಹಲು ಸೇರಿ ಬಾಗಿಲು ಹಾಕಿಕೊಂಡರು.

ಮುಖ್ಯ ಕೋಟೆಯನ್ನು ವಶಪಡಿಸಿಕೊಂಡ ನಂತರ ಬಂದಾ ಸಿಂಗ್, ಕ್ರೂರಿ ಅಧಿಕಾರಿಗಳು, ವಧಾಕಾರರನ್ನು ಹೊರತುಪಡಿಸಿ ಸಾಮಾನ್ಯ ಜನರ ಮೇಲೆ ಸೇಡು ತೀರಿಸಿಕೊಳ್ಳುವುದಿಲ್ಲವೆಂದು ಘೋಷಿಸಿದರು. ಈ ಘೋಷಣೆಯ ನಂತರ ಸ್ಥಳೀಯ ಸಾಮಾನ್ಯ ಮುಸ್ಲಿಂ ಜನತೆ ಸಿಕ್ಖರ ಪರ ಸೇರಿಕೊಂಡರು. ಅಮೀರರ ಸಂಪತ್ತಿನ ಬಗ್ಗೆ ಹಲವಾರು ಮಾಹಿತಿಯನ್ನು ಅವರು ಸಿಖ್ ಸೇನೆಗೆ ನೀಡಿದರು. ಇದಾದ ನಂತರ ಸಿಖ್ ಸೇನೆ ಆಡಳಿತ ಕುಟುಂಬಕ್ಕೆ ಸೇರಿದ ಮಹಲುಗಳು ಹಾಗೂ ಕ್ರೂರ ಅಧಿಕಾರಿಗಳ ಮನೆಗಳ ಮೇಲೆ ದಾಳಿ ಮಾಡಿತು. ಅಮೀರ್‌ಗಳು ತಮ್ಮ ಮಹಲಿನ ಛಾವಣಿ ಮೇಲೆ ನಿಂತು ಸಿಖ್ ಸೈನ್ಯದ ಮೇಲೆ ಗುಂಡು ಹಾರಿಸುತ್ತಾ, ಬಾಣ ಬಿಡುತ್ತಾ, ಉರಿಯುವ ಕಟ್ಟಿಗೆಯನ್ನು ಎಸೆಯುತ್ತಾ ಹೋರಾಡತೊಡಗಿದರು. ಇದು ಬಹಳ ಸಮಯ ನಡೆಯಿತು. ಬೇರೆ ದಾರಿಯಿಲ್ಲದೆ ಸಿಖ್ ಸೈನಿಕರು ಮಹಲುಗಳಿಗೆ ಬೆಂಕಿ ಹಾಕಿದರು. ಅದರಿಂದಾಗಿ ಸಯ್ಯದ್ ಮತ್ತು ಮುಘಲರ ಕುಟುಂಬದ ಅನೇಕ ಜನ ಜೀವಂತವಾಗಿ ಸುಟ್ಟುಹೋದರು. ಹೊರಗಡೆ ಬಂದಾವರು ಸಿಖ್ ಸೈನಿಕರ ಪ್ರಹಾರಕ್ಕೆ ಹತರಾದರು. ಹೋರಾಟ ಸಂಜೆಯವರೆಗೂ ನಡೆಯಿತು. ಕೆಲವು ಮುಘಲರು ಮತ್ತು ಸಯ್ಯದರು ಕೆಚ್ಚೆದೆಯಿಂದ ಹೋರಾಡಿದರು. ಆದರೆ ಸೂರ್ಯಾಸ್ತದ ವೇಳೆಗೆ ಅವರಲ್ಲಿ ಬಹುತೇಕ ಮಂದಿ ಹತರಾಗಿದ್ದರು. ಅಥವಾ ಜೀವ ಉಳಿಸಿಕೊಳ್ಳಲು ನಗರದಿಂದ ಓಡಿ ಹೋಗಿದ್ದರು. ಸತ್ತವರ ಸಂಖ್ಯೆ ಐದರಿಂದ ಹತ್ತು ಸಾವಿರ ಎಂದು ಅಂದಾಜಿಸಲಾಗಿತ್ತು. ಅಲ್ಲದೆ ಎಲ್ಲ ಭವ್ಯ ಮಹಲುಗಳು ಉರಿದು ಭಸ್ಮವಾದವು.

ಸಂಜೆಯ ವೇಳೆಗೆ ಸಿಕ್ಖರು ಮುಖ್ಯ ಕೋಟೆ ಮತ್ತು ನಗರವನ್ನು ಕೈವಶ ಮಾಡಿಕೊಂಡಿದ್ದರು. ಈಗ ಸಯ್ಯದ್ ಅಥವಾ ಮುಘಲ್ ಕುಟುಂಬದ ಯಾವೊಬ್ಬ ಯುವಕನೂ ನಗರದಲ್ಲಿ ಉಳಿದಿರಲಿಲ್ಲ. ಅಲ್ಲಿ ಉಳಿದವರೆಂದರೆ, ಮುದುಕರು, ಮಹಿಳೆಯರು ಮತ್ತು ಸಣ್ಣ ಮಕ್ಕಳು. ಅಲ್ಲದೆ ಕೆಲವು ಕುಟುಂಬದಲ್ಲಿ ಊಳಿಗಮಾಡುತ್ತಿದ್ದವರು. ಸಿಕ್ಖರು ಯಾವುದೇ ಮಹಿಳೆಯನ್ನು, ಮಗುವನ್ನು, ಮುದುಕರನ್ನು ಮತ್ತು ಶರಣಾದವರನ್ನು ಕೊಲ್ಲುತ್ತಿರಲಿಲ್ಲ. ಇದಲ್ಲದೆ ಮುಸ್ಲಿಮರ ಯಾವುದೇ ಮಸೀದಿ ಅಥವಾ ಗೋರಿಯನ್ನು ಅವರು ಹಾನಿ ಮಾಡಲಿಲ್ಲ. (ಮುನ್ನೂರು ವರ್ಷಗಳ ನಂತರವು ಕೆಲವು ಇನ್ನೂ ಅಸ್ತಿತ್ವದಲ್ಲಿವೆ)

ಹಾಗೆ ನೋಡಿದರೆ ನಗರದ ಸಾಮಾನ್ಯ ಜನರು ಉಮ್ರಾಗಳ ಮೇಲೆ ಕಿಡಿ ಕಾರುತ್ತಿದ್ದರು. ಯಾಕೆಂದರೆ ಅವರು ಸಾಮಾನ್ಯ ಜನರನ್ನು ಜೀತದಾಳುಗಳಂತೆ ಭಾವಿಸುತ್ತಿದ್ದರು. ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡ ಕೆಲವು ಕಾರ್ಮಿಕರು ತಮ್ಮ ಮೇಲೆ ದೌರ್ಜನ್ಯವೆಸಗಿದ ಉಮ್ರಾಗಳನ್ನು ಕೊಂದು ಸೇಡು ತೀರಿಸಿಕೊಂಡರು. ಈ ಸಾಮಾನ್ಯ ಮುಸ್ಲಿಮರಲ್ಲದೆ ಹಿಂದೂಗಳು ಸಹ ಉಮ್ರಾಗಳ ವಿರುದ್ಧದ ದಾಳಿಯಲ್ಲಿ ಪಾಲ್ಗೊಂಡರು. ಮಹಲುಗಳಿಗೆ ಅಗ್ನಿಸ್ಪರ್ಶ ಮತ್ತು ಲೂಟಿ ದಂಧೆಯನ್ನು ಅಲ್ಲಿ ಸಂಕಷ್ಟಕ್ಕೊಳಗಾಗಿದ್ದ ಸ್ಥಳೀಯ ನಿವಾಸಿಗಳೇ ಸೇಡು ತೀರಿಸಿಕೊಳ್ಳಲು ಮಾಡಿದ್ದರು.

ಸಮನದಲ್ಲಿ ಸಿಖ್ ಸೈನಿಕರು ಅಪಾರ ಮೊತ್ತದ ಶಸ್ತ್ರಗಳು, ಕುದುರೆಗಳು, ಚಿನ್ನ, ವಜ್ರ, ಬೆಳ್ಳಿ ಮತ್ತು ಇತರ ಅಮೂಲ್ಯ ವಸ್ತುಗಳನ್ನು ವಶಪಡಿಸಿಕೊಂಡರು. ಈಗ ಅವರು ಯಾವುದೇ ಕೋಟೆಯ ಮೇಲೆ ದಾಳಿ ಮಾಡುವಷ್ಟು ಶಸ್ತ್ರ ಸನ್ನದ್ಧರಾಗಿದ್ದರು. ಸಮನ ಯುದ್ಧದಲ್ಲಿ ದೊಡ್ಡ ಪಾತ್ರ ವಹಿಸಿದ್ದವನು ಭಾಯ್ ಫತೇ ಸಿಂಗ್. ಅದನ್ನು ಕಂಡ ಬಂದಾ ಸಿಂಗ್ ಅವನನ್ನು ಸಮನದ ರಾಜ್ಯಪಾಲನನ್ನಾಗಿ ನೇಮಿಸಿದ. ಸಿಖ್ ಸೈನಿಕರ ಒಂದು ತುಕಡಿಯನ್ನು ಸಮನದಲ್ಲಿಯೇ ಬಿಟ್ಟು ಬಂದಾ ಸಿಂಗ್ ಸಿರ್ಹಿಂದ್‌ನ ಸುತ್ತಲು ಇರುವ ಇತರೆ ಕೋಟೆಗಳನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದ.

ಈ ವೇಳೆಗೆ ಸಿಖ್ ಸೈನಿಕರ ಸಂಖ್ಯೆ ಹತ್ತು ಸಾವಿರಕ್ಕೇರಿತ್ತು. ಖಾಫಿ ಖಾನ್ ಪ್ರಕಾರ "ಕೇವಲ ಎರಡು ಮೂರು ತಿಂಗಳಿನಲ್ಲಿ ಐದು ಸಾವಿರ ಕುದುರೆ ಸವಾರರು, ಏಳರಿಂದ ಎಂಟು ಸಾವಿರ ಪದಾತಿ ಸೈನಿಕರು ಆತನನ್ನು ಸೇರಿಕೊಂಡರು. ದಿನದಿಂದ ದಿನಕ್ಕೆ ಅವರ ಸಂಖ್ಯೆ ಏರುತ್ತಾ ಹೋಯಿತು. ಅವರು ಸಂಪತ್ತನ್ನು ಸೂರೆ ಮಾಡಿದರು. ಬಹುಬೇಗನೆ ಹದಿನೆಂಟರಿಂದ ಹತ್ತೊಂಬತ್ತು ಸಾವಿರ ಜನರು ಲೂಟಿ ದಂಧೆಯನ್ನು ಆರಂಭಿಸಿದರು.

**ಸಿಕ್ಖರು ಗುರ್‍ರಂ ವಶಮಾಡಿಕೊಂಡದ್ದು**

ಫತೇ ಸಿಂಗ್‌ಗೆ ಸಮನವನ್ನು ವಹಿಸಿಕೊಟ್ಟ ನಂತರ ಬಂದಾ ಸಿಂಗ್ ತನ್ನ ಗಮನವನ್ನು ಗುರ್‍ರಂ[11] ಕಡೆ ತಿರುಗಿಸಿದ. ಗುರ್‍ರಂನ ಹಾದಿಯಲ್ಲಿ ಆತ ಸನಾರ್[12] ಅನ್ನು ವಶಪಡಿಸಿಕೊಂಡ. ಇಲ್ಲಿಯೂ ಆತ ಶಸ್ತ್ರ ಹಾಗೂ ಕುದುರೆಗಳನ್ನು ಕೈವಶ ಮಾಡಿಕೊಂಡ.

ಸರ್ಹಿಂದ್‌ಗೆ ಯಾವುದೇ ನೆರವು ಹೊರಗಿನಿಂದ ಬರುವುದನ್ನು ತಡೆದು ಅದನ್ನು ಮಣಿಸುವ ಸಲುವಾಗಿ ಸರ್ಹಿಂದ್‌ನ ಸುತ್ತಮುತ್ತಲಿನ ಕೋಟೆಗಳನ್ನು ವಶಪಡಿಸಿಕೊಳ್ಳುವ ಬಯಕೆ ಬಂದಾ ಸಿಂಗ್‌ನದು. ಗುರ್‍ರಂ ಕೋಟೆಯಲ್ಲಿ ದೊಡ್ಡ ಪಡೆ ಇಲ್ಲದಿದ್ದರೂ, ಅದರ ಉಸ್ತುವಾರಿ ಅಧಿಕಾರಿ ಸಿಖ್ ಸೈನ್ಯದ ವಿರುದ್ಧ ಹೋರಾಡಲು ನಿರ್ಧರಿಸಿದ.

ಹಾಗಾಗಿ ಅಲ್ಲೊಂದು ಬಿರುಸಿನ ಯುದ್ಧ ನಡೆಯಿತು. ಆದರೆ ಸಂಜೆಯೊಳಗಾಗಿ ಗುರಂ ಸಿಕ್ಖರ ವಶವಾಯಿತು. ಈ ಯುದ್ಧದಲ್ಲಿ ನೂರಾರು ಮುಘಲ್ ಸೈನಿಕರು ಹತರಾದರು ಮತ್ತು ಗಾಯಗೊಂಡರು.

**ತಸ್ಕದ ಮೇಲೆ ದಾಳಿ**

ಗುರಂ ಅನ್ನು ವಶಪಡಿಸಿಕೊಂಡು ಅಲ್ಲಿಂದ 20 ಕಿ.ಮೀ. ದೂರದಲ್ಲಿರುವ ತಸ್ಕ ದಿಕ್ಕಿಗೆ ಬಂದಾ ಸಿಂಗ್ ಹೊರಟ. ಇದಕ್ಕೆ ಇನ್ನೊಂದು ಹೆಸರು ತಸ್ಕ ಮಿರಾನ್ ಜಿ[13]. ಇದು ನೂರಾರು ಸಯ್ಯದ್‌ಗಳು, ಮುಘಲರು ಮತ್ತು ಉಮ್ರಾಗಳ ನೆಲೆಯಾಗಿತ್ತು. ಕೆಲವರು ತಮ್ಮನ್ನು ಪೀರ್ (ಮುಸ್ಲಿಮರ ಸ್ವಾಮೀಜಿಗಳು)ಗಳೆಂದು ಕರೆದುಕೊಳ್ಳುತ್ತಿದ್ದರು. ಅವರು ತಮ್ಮಲ್ಲಿ ಪವಾಡ ಶಕ್ತಿಗಳಿವೆಯೆಂದು ಹೇಳುತ್ತಾ ಜನರನ್ನು ಮೋಸಗೊಳಿಸುತ್ತಿದ್ದರು. ಇದು ಪರ್ಬಸ್ ಪಟ್ಟಣ್ (ಸೋಮನಾಥ ದೇವಾಲಯವಿರುವ ನಗರ)ದ ಪೂಜಾರಿಗಳು ಹೇಳಿಕೊಳ್ಳುತ್ತಿದ್ದಂತಹ ಸುಳ್ಳಿನ ರೀತಿಯಲ್ಲಿ ಈ ಪೀರ್‌ಗಳು ನಡೆದುಕೊಳ್ಳುತ್ತಿದ್ದರು. 1027ರಲ್ಲಿ ಮಹಮ್ಮದ್ ಘಜನಿ ಸೋಮನಾಥ ಮೇಲೆ ಆಕ್ರಮಣ ಮಾಡಿದಾಗ ಅಲ್ಲಿನ ಪೂಜಾರಿಗಳು ತಮ್ಮ ಮಂತ್ರ ಪಠಣದಿಂದ ಘಜ್ನಿಗೆ ಸೋಮನಾಥ ಪ್ರವೇಶ ಸಾಧ್ಯವಾಗದೆಂದು ಕೊಚ್ಚಿಕೊಳ್ಳುತ್ತಿದ್ದರು. ಅಂತಹುದೇ ಬಡಾಯಿಯನ್ನು ಬಾಬರ್ 1520[14] ರಲ್ಲಿ ಸಯ್ಯದ್‌ಪುರ್ (ಇಮಾನಬಾದ್)ದ ಮೇಲೆ ದಾಳಿ ಮಾಡಿದಾಗ ಅಲ್ಲಿನ ಪೀರ್‌ಗಳು ಕೊಚ್ಚುತ್ತಿದ್ದರು. ಆದರೆ ಸೋಮನಾಥ ಅಥವಾ ಸಯ್ಯದ್‌ಪುರ ದಾಳಿಗೊಳಗಾದಾಗ ಅಂತಹ ಯಾವುದೇ ಪವಾಡ ಜರುಗಲಿಲ್ಲ. ದಾಳಿಕೋರರು ಲೂಟಿ ಮಾಡಿದರು. ದೌರ್ಜನ್ಯವೆಸಗಿದರು. ಹಾಗೆಯೇ ತಸ್ಕದಲ್ಲಿ ದಾಳಿ ನಡೆದಾಗ ಪೀರ್‌ಗಳ ನಾಟಕ, ಪವಾಡ, ವಾಮಾಚಾರ, ಮೋಡಿ ಯಾವುದೂ ನಡೆಯದೆ ಅವರ ಬಂಡವಾಳ ಬಯಲಾಯಿತು.

ಬಂದಾ ಸಿಂಗ್ ಕೋಟೆಯನ್ನು ವಶಪಡಿಸಿಕೊಂಡಾಗ ಪಟ್ಟಣದ ಶ್ರೀಮಂತರೆಲ್ಲ ಪೀರ್ ಜಫಾರಿ ಆಲಿ ನೇತೃತ್ವದಲ್ಲಿ ಬಾಯಲ್ಲಿ ಹುಲ್ಲನ್ನು ಕಚ್ಚಿ ಆತನ ಬಳಿ ಬಂದರು. ಅದರರ್ಥ **"**ನಾವು ನಿಮ್ಮ ಹಸುಗಳು. ಕೊಲ್ಲಬೇಡಿ**"**[15]. ಆಗ ಬಂದಾ ಸಿಂಗ್ **"**ಹಿಂದೂಗಳಿಗೆ ಹಸು ಪವಿತ್ರ ಪ್ರಾಣಿಯಾಗಿರಬಹುದು. ಸಿಖ್ ಧರ್ಮಕ್ಕೂ ಅದಕ್ಕೂ ಸಂಬಂಧವಿಲ್ಲ. ನಮಗೆ ನಿಮ್ಮ ಶರಣಾಗತಿ ಸಾಕು. ಯಾವುದೇ ನಿರಪರಾಧಿಗೆ ಅಪಾಯ ಮಾಡೆವು. ನಿರಪರಾಧಿಗಳ ಮೇಲೆ ದೌರ್ಜನ್ಯ ಮಾಡಿದವರನ್ನಷ್ಟೆ ನಾವು ಶಿಕ್ಷಿಸುತ್ತೇವೆ**"** ಎಂದು ಹೇಳಿದ. ಮಾತುಗಳನ್ನು ಕೇಳಿದ ಮೇಲೆ ಉಮ್ರಾಗಳು ಅಮೂಲ್ಯ ಉಡುಗೊರೆಗಳನ್ನು ಹಿಡಿದು ಬಂದಾ ಹತ್ತಿರ ಬಂದರು. ಬಂದಾ ಸಿಂಗ್ ತನ್ನ ದರ್ಬಾರು ನಡೆಸಿ ನಗರದ ಪ್ರಭಾವಿ ವ್ಯಕ್ತಿಗಳ ವಿಶ್ವಾಸಾರ್ಹತೆಯನ್ನು ಪರೀಕ್ಷಿಸಿದ. ಸಾಮಾನ್ಯ ಜನರನ್ನು ಕರೆಸಿ ಅವರ ಮಾತುಗಳನ್ನು ಕೇಳಿದ. ಈ ರೀತಿ ಮಾಹಿತಿ ಪಡೆದ ನಂತರ ಕ್ರೂರ ಅಧಿಕಾರಿಗಳನ್ನು ಶಿಕ್ಷಿಸಿದ. ಇದನ್ನು ನೋಡಿದ ಪುರಜನರು ಸಿಕ್ಖರ ನ್ಯಾಯಪರತೆಯನ್ನು ಕೊಂಡಾಡಿದರು.

**ತಾನೇಸರ ಮತ್ತು ಶಹಾಬಾದ್–ಮಾರ್ಕಂಡ ವಶ**

ತಸ್ಕವನ್ನು ವಶಪಡಿಸಿಕೊಂಡ ನಂತರ ಬಂದಾ ಸಿಂಗ್ ಈಗ ತಾನೇಸರ (ಈಗಿನ ಕುರುಕ್ಷೇತ್ರ)ದ ಕಡೆ ದಂಡನ್ನು ಮುಂದುವರೆಸಿ ಹೆಚ್ಚಿನ ಶ್ರಮವಿಲ್ಲದೆ ಸ್ವಾಧೀನಪಡಿಸಿಕೊಂಡ. ಇಲ್ಲಿಂದ ಆತ ಶಹಾಬಾದ್ ಕಡೆ ನಡೆದ. ಇದು ಮಾರ್ಕಂಡ ನದಿಯ ದಂಡೆಯಲ್ಲಿದ್ದ ನಗರ. ಸಿಕ್ಖರು ದಂಡೆತ್ತಿ ಬರುತ್ತಿರುವ ಸುದ್ದಿಯನ್ನು ನಗರದ ಮುಖ್ಯಸ್ಥ ತಿಳಿದ ತಕ್ಷಣ, ಆತ ನಗರವನ್ನು ತೊರೆದು ಓಡಿ

ಹೋಗಿ ಸುರಕ್ಷತೆಗಾಗಿ ದೆಹಲಿಯನ್ನು ಸೇರಿಕೊಂಡ. ಸಿಖ್ ಸೈನ್ಯ ಅಲ್ಲಿಗೆ ಬಂದಾ ನಂತರ, ಅಲ್ಲಿನ ಅಧೀನ ಅಧಿಕಾರಿಗಳು ಯಾವುದೇ ಪ್ರತಿರೋಧ ಒಡ್ಡದೆ ಕೋಟೆಯನ್ನು ಬಿಟ್ಟುಕೊಟ್ಟರು.

**ಮಸ್ತಾಫಾಬಾದ್ ವಶ**

ಈ ವೇಳೆಗೆ ಬಹುತೇಕ ಕೋಟೆಗಳನ್ನು ಸಿಖ್ ಸೈನ್ಯ ಆಕ್ರಮಿಸಿಕೊಂಡಿತ್ತು. ಆದರೆ ದೊಡ್ಡ ಕೋಟೆ ಮಸ್ತಫಾಬಾದ್ ಅನ್ನು ಇನ್ನೂ ಸ್ವಾಧೀನಪಡಿಸಿಕೊಳ್ಳಬೇಕಿತ್ತು. ಈ ಪಟ್ಟಣದ ಸೇನಾ ಮುಖ್ಯಸ್ಥನ ಅಧೀನದಲ್ಲಿ ಶಸ್ತ್ರಸಜ್ಜಿತ 2500 ಸೈನಿಕರ ಪಡೆಯಿತ್ತು. ಸಿಖ್ ಸೈನಿಕರು ದಂಡೆತ್ತಿ ಬರುತ್ತಿರುವ ಸುದ್ದಿ ತಿಳಿದ ತಕ್ಷಣ ಅವರನ್ನು ದಾರಿಯಲ್ಲಿಯೇ ತಡೆಯಲು 2000 ಸೈನಿಕರನ್ನು ಮತ್ತು ಎರಡು ಫಿರಂಗಿಗಳ ಜೊತೆ ಕಳುಹಿಸಿದ.

ಮುಸ್ತಫಾಬಾದ್‌ನ ಸೇನಾ ನಾಯಕ ಸೈನಿಕರ ಜೊತೆಯಲ್ಲಿ ಫಿರಂಗಿ ಕಳುಹಿಸಿರುವ ಸುದ್ದಿ ತಿಳಿಯುತ್ತಲೆ ಬಂದಾ ಸಿಂಗ್ ಸೈನ್ಯದಲ್ಲಿದ್ದ ಹಿಂದೂ ಸೈನಿಕರು ಪಡೆಯನ್ನು ಬಿಟ್ಟು ಓಡಿ ಹೋದರು (ಅವರು ಯುದ್ಧ ಸಮಯದಲ್ಲಿ ಲೂಟಿ ಮಾಡುವ ಉದ್ದೇಶದಿಂದ ಸಿಖ್ ಸೈನ್ಯ ಸೇರಿದ್ದರು) ಈಗ ಬಂದಾ ಸಿಂಗ್ ಸೈನ್ಯದಲ್ಲಿ ಉಳಿದವರು ಸಿಖ್ ಸೈನಿಕರು ಮಾತ್ರ.

ಎರಡೂ ಸೈನ್ಯ ಮುಖಾಮುಖಿಯಾಯಿತು. ಸಿಖ್ ಸೈನಿಕರು ಪರಾಕ್ರಮದಿಂದ ಹೋರಾಡಿ ಶತ್ರು ಸೇನೆಯನ್ನು ಹಿಮ್ಮೆಟ್ಟಿಸಿದರು. ಶತ್ರು ಸೇನೆ ಯುದ್ಧ ಭೂಮಿಯನ್ನು ತೊರೆದು ಓಡುವಾಗ ಒಂದು ಫಿರಂಗಿಯನ್ನು ಬಿಟ್ಟು ಹೋದರು. ಸಿಖ್ ಸೇನೆ ಅದನ್ನು ವಶಕ್ಕೆ ತೆಗೆದುಕೊಂಡಿತು. ಈಗ ಸಿಖ್ ಸೈನ್ಯ ಮುಸ್ತಫಾಬಾದ್ ಕೋಟೆಯ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡಿತು.

**ಕುಂಜ್‌ಪುರದ ಮೇಲೆ ದಾಳಿ**

ಮುಸ್ತಫಾಬಾದ್ ಮೇಲೆ ವಿಜಯ ಸಾಧಿಸಿದ ಮೇಲೆ, ಸರ್ಹಿಂದ್ ಸುತ್ತಲಿನ ಏಳು ಕೋಟೆಗಳು ಸಿಖ್ ಸೇನೆಯ ವಶವಾದವು. ಜೊತೆಗೆ ಸಿಕ್ಖರ ಸೈನಿಕರ ಸಂಖ್ಯೆ ಹಲವಾರು ಸಾವಿರ ಹೆಚ್ಚಿತು. ಸುಮಾರು ಆರು ತಿಂಗಳಿನಿಂದಲೂ ಯೋಜಿಸಿದ್ದ ಸರ್ಹಿಂದ್ ಮೇಲಿನ ದಾಳಿಯನ್ನು ಈಗ ಆರಂಭಿಸಬಹುದಿತ್ತು. ಆದರೆ ಬಂದಾ ಸಿಂಗ್ ಇನ್ನಷ್ಟು ದಿನ ಕಾಯಲು ಯೋಚಿಸಿದ. ಸರ್ಹಿಂದ್ ಮೇಲಿನ ದಾಳಿ ಅದನ್ನು ವಶಪಡಿಸಿಕೊಳ್ಳುವಷ್ಟು ಪರಿಪೂರ್ಣವಾಗಿ ಸಿದ್ಧವಾಗಬೇಕೆಂಬುದು ಅವನ ಯೋಜನೆಯಾಗಿತ್ತು.

ಇದೇ ಸಮಯದಲ್ಲಿ, ಸಿಖ್ ಸೇನೆಯ ಬಗ್ಗೆ ಮಾಹಿತಿ ಸಂಗ್ರಹಿಸಲು ವಜೀರ್ ಖಾನ್ ಕಳುಹಿಸಿದ್ದ ಬೇಹುಗಾರರನ್ನು ಸಿಖ್ ಸೇನೆ ಬಂಧಿಸಿತು. ಸಿಖ್ ಸೈನಿಕರು ಆತನಿಗೆ ಹಿಂಸೆ ನೀಡಲಿಲ್ಲ. ಸರ್ಹಿಂದ್ ನಗರ ಮತ್ತು ಕೋಟೆಯನ್ನು ವಶಪಡಿಸಿಕೊಳ್ಳಲು ಸಿಖ್ ಸೇನೆ ದಾಳಿಗೆ ಬರುತ್ತಿದೆಯೆಂದು ವಜೀರ್ ಖಾನ್‌ಗೆ ಸಂದೇಶ ತಿಳಿಸಲು ಆತನನ್ನು ಬಿಟ್ಟರು. ಅಲ್ಲದೆ ಸರ್ಹಿಂದ್‌ಗೆ ದಾಳಿ ಮಾಡುವ ಮುನ್ನ ವಜೀರ್ ಖಾನ್ ಹುಟ್ಟಿದ ಪಟ್ಟಣ ಕುಂಜ್‌ಪುರದ ಮೇಲೆ ದಾಳಿ ಮಾಡುತ್ತಿರುವ ವಿಷಯವನ್ನು ವಜೀರ್ ಖಾನ್‌ಗೆ ತಿಳಿಸಲು ಬಂದಾ ಸಿಂಗ್ ಆಜ್ಞಾಪಿಸಿದ.

ವಜೀರ್‌ಖಾನ್‌ಗೆ ಈ ಸುದ್ದಿ ತಿಳಿಯಿತು. ಆತ ಭಯಗೊಂಡ. ಈಗಾಗಲೇ ಸಿಖ್ ಸೇನೆ ವಶಪಡಿಸಿಕೊಂಡ ಕೋಟೆಗಳ ಬಗ್ಗೆ ತಿಳಿದಿತ್ತು. ಸಿಖ್ ಸೇನೆ ಸರ್ಹಿಂದ್ ಮತ್ತು ಕುಂಜ್‌ಪುರ ಪಟ್ಟಣದ ಮೇಲೆ ದಂಡೆತ್ತಿ ಬರುವುದು ನಿಶ್ಚಯವೆಂದು ತಿಳಿದು, ಸಿಖ್ ಸೇನೆಯನ್ನು ಸದೆ

ಬಡಿಯಲು ಕುಂಜ್‌ಪುರಕ್ಕೆ ನಾಲ್ಕು ಸಾವಿರ ಸೈನಿಕರು ಮತ್ತು ಎರಡು ದೊಡ್ಡ ಫಿರಂಗಿಗಳನ್ನು ಕಳುಹಿಸಿದ.

ಆದರೆ ವಜೀರ್‌ಖಾನ್‌ನ ಸೈನಿಕರು ಕುಂಜ್‌ಪುರ ತಲುಪುವ ವೇಳೆಗೆ ಸಿಖ್ ಸೈನ್ಯ ಅದನ್ನು ಆಕ್ರಮಿಸಿಕೊಂಡಿತ್ತು. ವಜೀರ್ ಖಾನ್‌ನ ಸೈನ್ಯ ಕುಂಜ್‌ಪುರಕ್ಕೆ ತಲುಪಿದಾಗ ಸಿಖ್ ಸೈನಿಕರು ಮುಗಿಬಿದ್ದ ವೀರಾವೇಶದಿಂದ ಹೋರಾಡಿ ನೂರಾರು ಸೈನಿಕರನ್ನು ಕೊಂದರು. ಇದನ್ನು ಕಂಡ ಸರ್ಹಿಂದ್‌ನಿಂದ ಬಂದಾ ಸೈನಿಕರು ಯುದ್ಧ ಭೂಮಿಯಿಂದ ಸತ್ತ ಸೈನಿಕರು ಮತ್ತು ಫಿರಂಗಿಗಳನ್ನು ಬಿಟ್ಟು ಓಡಿ ಹೋದರು. ಫಿರಂಗಿಗಳು ಸಿಖ್ ಸೈನಿಕರ ವಶವಾದವು. ಫಿರಂಗಿಗಳಲ್ಲದೆ ಆಯುಧಗಳನ್ನು ಮತ್ತು ಕುದುರೆಗಳನ್ನು ವಶಪಡಿಸಿಕೊಳ್ಳಲಾಯಿತು. ಇದಾದ ನಂತರ ಆ ಪ್ರದೇಶದ ಮತ್ತೊಂದು ಶ್ರೀಮಂತ ಪಟ್ಟಣ ದಹ್ಮಾಲವನ್ನೂ ಸಿಖ್ ಸೇನೆ ವಶಪಡಿಸಿಕೊಂಡಿತು.

**ಕಪೂರಿ ಗೆಲುವು**

ಆ ಕಾಲದಲ್ಲಿ ಕದಂ–ಉದ್–ದೀನ್ ಕಪೂರಿಯ ಸೇನಾ ನಾಯಕನಾಗಿದ್ದ. ಔರಂಗಜೇಬ್‌ನ ಕಾಲದಲ್ಲಿ ಗುಜರಾತಿನ ರಾಜ್ಯಪಾಲನಾಗಿದ್ದ ಅಮಾನುಲ್ಲಾನ ಮಗನೇ ಕದಂ. ಆತ ಮುಸ್ಲಿಂ ಅಲ್ಲದವರನ್ನು ದ್ವೇಷಿಸುತ್ತಿದ್ದ. ಅವರನ್ನು ಹಿಂಸಿಸಲು ಸಿಗುವ ಯಾವ ಅವಕಾಶವನ್ನೂ ಬಿಟ್ಟುಕೊಡುತ್ತಿರಲಿಲ್ಲ. ಆತ ಎಷ್ಟೊಂದು ಕ್ರೂರಿಯೆಂದರೆ ತನ್ನ ಸುಖಕ್ಕಾಗಿ ಸುಂದರ ಹಿಂದೂ ಯುವತಿಯರನ್ನು ಅಪಹರಿಸಿಕೊಂಡು ಬರಲು ಸೈನಿಕರ ತಂಡವೊಂದನ್ನು ರಚಿಸಿದ್ದ. ಅಲ್ಲದೆ ಹಿಂದೂ ಸುಂದರ ಯುವತಿಯರು ಎಲ್ಲಿರುವರೆಂಬ ಬಗ್ಗೆ ಹಾಗೂ ಅವರು ಮದುವೆಯಾಗುವ ದಿನ ಮತ್ತು ಸ್ಥಳದ ಬಗ್ಗೆ ಮಾಹಿತಿ ಕಲೆಹಾಕಲು ದಳ್ಳಾಳಿಗಳನ್ನು ನೇಮಿಸಿಕೊಂಡಿದ್ದ. ತನ್ನ ಲೈಂಗಿಕ ತೃಷೆಗಾಗಿ ಮದುವೆ ನಿಷ್ಕರ್ಷೆಯಾದ ವಧುಗಳನ್ನು ಹಾಗೂ ಇತ್ತೀಚೆಗೆ ಮದುವೆಯಾದ ಯುವತಿಯರನ್ನು ಬಲಾತ್ಕಾರವಾಗಿ ಎಳೆತರಲು ಸೈನಿಕರನ್ನು ಕಳುಹಿಸುತ್ತಿದ್ದ. ಇತರ ಜಿಲ್ಲೆ ಅಥವಾ ಪರಗಣಗಳಿಂದಲೂ ಹಿಂದೂ ಯುವತಿಯರನ್ನು ಎಳೆದು ತರಲು ದಲ್ಲಾಳಿ, ಸೈನಿಕರನ್ನು ಕಳುಹಿಸುತ್ತಿದ್ದ. ಅವನ ಕಾಮತೃಷೆ ಜನಜನಿತವಾಗಿತ್ತು. ತನ್ನ ತಂದೆಯಿಂದ ಸಾಕಷ್ಟು ಸಂಪತ್ತು ಪಡೆದಿದ್ದ ಕದಂ–ಉದ್–ದೀನ್ ಸ್ವತಃ ಸಂಪತನ್ನು ಗಳಿಸಿದ್ದ. ಅವೆಲ್ಲವನ್ನೂ ಆತ ಕಾಮತೃಷೆಗಾಗಿ ಧಾರಾಳವಾಗಿ ವೆಚ್ಚ ಮಾಡುತ್ತಿದ್ದ.

ಒಮ್ಮೆ ಕಪೂರಿಯಿಂದ ಬಂದಾ ಕೆಲವು ಹಿಂದೂಗಳು ತಮ್ಮ ಸಂಕಷ್ಟವನ್ನು ಬಂದಾ ಸಿಂಗ್ ಮುಂದೆ ಅರುಹಿದರು. ಅದನ್ನು ಕೇಳಿದ ಕೂಡಲೇ ಕಪೂರಿಯೆಡೆಗೆ ತೆರಳಲು ಸಿಖ್ ಸೈನಿಕರಿಗೆ ಬಂದಾ ಸಿಂಗ್ ಆಜ್ಞಾಪಿಸಿದ. ಆರಂಭದಲ್ಲಿ ಕದಂ–ಉದ್–ದೀನ್ ಸೈನಿಕರು ಸಿಖ್ ಸೈನ್ಯದ ವಿರುದ್ಧ ಹೋರಾಡಿದರು. ಆದರೆ ದುಷ್ಟರು, ಜಂತುಗಳು ಮತ್ತು ನೀಚರಾಗಿದ್ದ ಅವರ ಆಟ ಸಿಖ್ ಸೈನಿಕರ ವೀರಾವೇಶದ ಹೋರಾಟದ ಮುಂದೆ ನಡೆಯಲಿಲ್ಲ. ಕೊನೆಗೆ ಕದಂ–ಉದ್–ದೀನ್ ಒಬ್ಬನನ್ನೇ ಬಿಟ್ಟು ಓಡಿಹೋದರು. ಕದಂ ಸಹ ಕೆಲಕಾಲ ಹೋರಾಡಿದರೂ, ಧರ್ಮನಿಷ್ಠ ಸಿಖ್ ಸೈನಿಕರ ಮುಂದೆ ತನ್ನ ಆಟ ನಡೆಯಲಾರದೆಂದು ಅರಿತು ತನ್ನ ಮಹಲು ಸೇರಿ ಅಡಗಿದ. ಆ ಮಹಲಿನ ಬಾಗಿಲನ್ನು ಮುರಿದು ಪ್ರವೇಶಿಸಲು ಸಿಖ್ ಸೈನಿಕರು ಮಾಡಿದ ಪ್ರಯತ್ನ ಫಲಿಸಲಿಲ್ಲ. ಹಾಗಾಗಿ ಅವರು ಮಹಲಿಗೆ ಬೆಂಕಿ ಹಚ್ಚಿದರು. ಕದಂ–ಉದ್–ದೀನ್ ಬೆಂಕಿಯಲ್ಲಿ ಸುಟ್ಟುಹೋದ[16].

**ಸಧೌರ ಪತನ**

ಶಿವಾಲಿಕ್ ಪರ್ವತಗಳ ತಪ್ಪಲಿನಲ್ಲಿರುವ ಸಧೌರ ಪಂಜಾಬ್‌ನ ಪುರಾತನ ಪಟ್ಟಣಗಳಲ್ಲೊಂದು. ಆ ಕಾಲದಲ್ಲಿ ಅಲ್ಲೊಂದು ದೊಡ್ಡ ಕೋಟೆಯಿತ್ತು. ಅದನ್ನು ಸಹ ವಶಪಡಿಸಿಕೊಳ್ಳಲು ಬಂದಾ ಸಿಂಗ್ ನಿರ್ಧರಿಸಿದ. ಪಟ್ಟಣವನ್ನು ಆಳುತ್ತಿದ್ದವನು ಉಸ್ಮಾನ್ ಖಾನ್. ಸಿಖ್ ಸೈನಿಕರ ಹತಮಾಡಬೇಕಾದ ಪಟ್ಟಿಯಲ್ಲಿ ಆತನಿದ್ದ. ಗುರು ಗೋವಿಂದ್ ಸಿಂಗ್ ಅವರ ಜೊತೆ ಮೈತ್ರಿ ಹೊಂದಿದ್ದ ಪೀರ್ ಬುಧು ಶಾನನ್ನು ಆಗ ಹಿಂಸಿಸಿ ಕೊಂದು ಹಾಕಿದ್ದ. ಅದಕ್ಕಾಗಿಯೇ ಈ ಸೇಡು.

ಕದಂ–ಉದ್–ದೀನ್ ನಂತೆಯೇ ಉಸ್ಮಾನ್ ಖಾನ್ ಸಹ ಕಾಮಪಿಶಾಚಿಯಾಗಿದ್ದ. ಲೈಂಗಿಕ ಅಪರಾಧಗಳಿಗೆ ಹೆಸರುವಾಸಿಯಾಗಿದ್ದ. ಸ್ಥಳೀಯ ಹಿಂದೂಗಳು ಗುಲಾಮರಂತೆ ಬಾಳುತ್ತಿದ್ದರು. ಕಪೂರಿಯನ್ನು ವಶಪಡಿಸಿಕೊಂಡ ನಂತರ ಬಂದಾ ಸಿಂಗ್ ಸಧೌರ ಕಡೆ ಯಾತ್ರೆ ಹೊರಟ. ಆ ಕಾಲಕ್ಕೆ ಸಧೌರ ಒಂದು ಭದ್ರವಾದ ಕೋಟೆ. ಎತ್ತರದ ಕೋಟೆಯ ಗೋಡೆ ಮತ್ತು ಗಟ್ಟಿಯಾದ ಬಾಗಿಲುಗಳಿಂದ ಅಭೇದ್ಯವೆನಿಸಿತ್ತು. ಬಂದೂಕಿನಿಂದ ಸತತವಾಗಿ ಗುಂಡು ಹಾರಿಸದೆ ಕೋಟೆಯನುನ ಭೇಧಿಸುವುದು ಸಾಧ್ಯವಿರಲಿಲ್ಲ.

ಆದರೆ ಈ ಸಮಯದಲ್ಲಿ 35 ರಿಂದ 40 ಸಾವಿರ ಸಿಖ್ ಸೈನಿಕರು ಬಂದಾ ಸಿಂಗ್ ಸೈನ್ಯದಲ್ಲಿದ್ದರು[17]. ಇನ್ನೊಂದ ಪಕ್ಷದಲ್ಲಿ ಉಸ್ಮಾನ್ ಖಾನ್ ಸಹ ಬಲವಾದ ಸೇನೆ ಮತ್ತು ಫಿರಂಗಿಗಳಿಂದ ಸಜ್ಜಾಗಿದ್ದ. ಈ ಕೋಟೆಯನ್ನು ಸಿಕ್ಖರು ಸುಲಭವಾಗಿ ವಶಪಡಿಸಿಕೊಳ್ಳುವಂತೆ ತೋರುತ್ತಿರಲಿಲ್ಲ.

ಸಿಖ್ ಸೈನ್ಯವು ಸಧೌರದ ಹೊರವಲಯವನ್ನು ತಲುಪಿದಾಗ, ಉಸ್ಮಾನ್ ಖಾನನ ಫಿರಂಗಿಗಳು ಮೊಳಗಲಾರಂಭಿಸಿದವು. ಅನೇಕ ಸೈನಿಕರು ಹತರಾದರು. ಆದರೂ ಸಿಖ್ ಸೇನೆ ಮುಂದುವರಿಯಿತು. ಬಹುಬೇಗನೆ ಸೈನ್ಯವು ಪಟ್ಟಣದ ಒಂದು ಬಾಗಿಲನ್ನು ಮುರಿಯವಲ್ಲಿ ಯಶಸ್ವಿಯಾಯಿತು. ಪಟ್ಟಣದ ಬೀದಿಯಲ್ಲಿ ಸಿಖ್ ಮತ್ತು ಸಧೌರ ಸೈನ್ಯದ ನಡುವೆ ಬುಧು ಶಾನ ಸಂಬಂಧಿಕರು ಸಿಖ್ ಸೈನ್ಯಕ್ಕೆ ನೆರವಾದರು. ಹಾಗಾಗಿ ನಗರವನ್ನು ವಶಪಡಿಸಿಕೊಳ್ಳಲು ಸಿಖ್ ಸೈನ್ಯಕ್ಕೆ ಹೆಚ್ಚಿನ ಕಷ್ಟವಾಗಲಿಲ್ಲ. ಈಗ ಉಳಿದಿದ್ದು ಕೋಟೆ ಮಾತ್ರ. ಉಸ್ಮಾನ್ ಖಾನ್ ಅದರಲ್ಲಿ ಅಡಗಿ ಕುಳಿತ.

ಸಿಖ್ ಸೈನ್ಯ ಪಟ್ಟಣವನ್ನು ಹತೋಟಿಗೆ ತೆಗೆದುಕೊಂಡ ನಂತರ ಪಟ್ಟಣದ ಅನೇಕ ನವಾಬರು, ಸಚಿವರು ಮತ್ತು ಅಮೀರರು ಬಿಳಿಯ ಬಾವುಟ ಹಿಡಿದು ಬಾಯಲ್ಲಿ ಹುಲ್ಲು ಕಚ್ಚಿ ಶರಣಾಗತರಾಗಿ ಕ್ಷಮೆ ಕೋರಿದರು. ಬಂದಾ ಸಿಂಗ್ ಅವರಿಗೆ ಕ್ಷಮಾದಾನ ಮಾಡಿ "ನೀವು ನಮಗೆ ನಿಷ್ಠರಾದರೆ, ಯಾವ ತೊಂದರೆಯೂ ನಮ್ಮಿಂದ ಆಗದು" ಎಂದು ಅಭಯ ನೀಡಿದ.

ಇತರರೆಲ್ಲರೂ ಶರಣಾದರೂ ಉಸ್ಮಾನ್ ಖಾನ್ ಶರಣಾಗದೇ ಕೋಟೆಯಲ್ಲಿ ಉಳಿದ. ಈ ಕೋಟೆಯನ್ನು ವಶಪಡಿಸಿಕೊಳ್ಳಬೇಕಾದರೆ ಅಪಾರವಾದ ಹಾನಿಯಾಗುತ್ತಿತ್ತು. ಸಿಖ್ ಸೈನಿಕರ ತ್ಯಾಗವಾಗುತ್ತಿತ್ತು. ಆದರೆ ಈ ಕೋಟೆಯನ್ನು ವಶಪಡಿಸಿಕೊಳ್ಳಲು ದೊಡ್ಡ ಪ್ರಮಾಣದ ಜೀವತ್ಯಾಗ ಮಾಡುವುದು ಬಂದಾ ಸಿಂಗ್‌ಗೆ ಇಷ್ಟವಿರಲಿಲ್ಲ. ಅವರ ಪ್ರಮುಖ ಗುರಿ ಸರ್ಹಿಂದ್ ಆಗಿತ್ತು. ಆದರೆ ಇಲ್ಲಿಯೂ ಕೋಟೆಯ ಒಳಗಿದ್ದ ಪೀರ್‌ಬುಧು ಶಾನ ಸಂಬಂಧಿಕರು ಮಹತ್ವದ ಪಾತ್ರ ವಹಿಸಿದರು. ಅವರು ಕೋಟೆಯ ಒಂದು ಬಾಗಿಲನ್ನು ತೆರೆದು ಸಿಖ್ ಸೈನ್ಯ ಪ್ರವೇಶಿಸಲು ಅನುವು ಮಾಡಿಕೊಟ್ಟರು. ಅತ್ಯುತ್ಸಾಹದಿಂದ ಸೈನಿಕರು ಒಳನುಗ್ಗಿದರು. ಸಿಖ್ ಸೈನಿಕರ ವಿರುದ್ಧ ಉಸ್ಮಾನ್ ಖಾನ್ ಹೋರಾಡಲು ಪ್ರಯತ್ನಿಸಿದ. ಆದರೆ ದೀರ್ಘಕಾಲ ಹೋರಾಟ ಸಾಗಲಿಲ್ಲ. ಸಿಖ್ ಸೈನಿಕರು ಆತನನ್ನು ಸೆರೆ

ಹಿಡಿದರು. ಆತನಿಗೆ ಮರಣದಂಡನೆ ವಿಧಿಸಲಾಯಿತು(18). ಸಧೌರ ಒಂದು ಶ್ರೀಮಂತ ಪಾಳೆಯ. ಇಲ್ಲಿ ಸಿಕ್ಖರು ಲಕ್ಷಾಂತರ ರೂಪಾಯಿ ಹಣ, ಚಿನ್ನಾಭರಣ, ವಜ್ರಗಳು ಸಾವಿರಾರು ಬಂದಾಊಕು ಮತ್ತು ಕುದುರೆಗಳನ್ನು ವಶಕ್ಕೆ ತೆಗೆದುಕೊಂಡರು. ಇದರಿಂದಾಗಿ ಸಿಖ್ ಸೈನ್ಯದ ಶಸ್ತ್ರ ಭಂಡಾರ ಹಿಗ್ಗಿತು.

ಸಧೌರವನು ವಶಪಡಿಸಿಕೊಂಡ ನಂತರ ಸಿಖ್ ಸೈನ್ಯ ತಕ್ಷಣ ಹೊರಹೋಗಲಿಲ್ಲ. ಕೆಲಕಾಲ ಸೈನ್ಯ ಅಲ್ಲಿಯೇ ಬಿಡಾರ ಹೂಡಿತು. ಆ ಸಮಯದಲ್ಲಿ ಸರ್ಹಿಂದ್ ಮೇಲೆ ದಾಳಿ ಮಾಡುವ ಪಾತ್ರದ ಬಗ್ಗೆ ಚರ್ಚೆಗಳಾದವು. ಒಂದು ದಿನ ಕೆಲವು ಸಿಕ್ಖರು ಕುದುರೆಗಳನ್ನು ಮೇಯಿಸುತ್ತಿದ್ದರು. ಆ ಬಯಲಿನಲ್ಲಿ ಒಂಟೆಯೊಂದು ಓಡಾಡುತ್ತಿರುವುದನ್ನು ಕಂಡರು. ಬೆಳೆಯನ್ನು ಒಂಟೆಯಿಂದ ರಕ್ಷಿಸಲು ಸಿಖ್ ಸೈನಿಕರು ಅದನ್ನು ಹೊಲಗಳಿಂದ ಓಡಿಸಲು ಪ್ರಯತ್ನಿಸಿದರು. ಅದೇ ವೇಳೆ ಹೊಲದ ಅಂಚಿನಲ್ಲಿ ವ್ಯಕ್ತಿಯೊಬ್ಬ ನಡೆಯುತ್ತಿದ್ದ. ಆತನ ಕೈಯಲ್ಲಿ ಕೋಲೊಂದಿತ್ತು. ಒಂಟೆಯನ್ನು ಓಡಿಸಲು ಆತನ ಕೋಲನ್ನು ಕಸಿದು ಹೊಡೆದರು. ಏಟಿನ ರಭಸಕ್ಕೆ ಟೊಳ್ಳಾಗಿದ್ದ ಕೋಲು ಸೀಳಿತು. ಅದರಿಂದ ಪತ್ರವೊಂದು ಹೊರಬಿತ್ತು. ಪರ್ಶಿಯನ್ ಬಲ್ಲ ಸಿಖ್ ಸೈನಿಕನೊಬ್ಬ ಪತ್ರವನ್ನು ಓದಿದ. ಅದು ಸಧೌರದ ಉಮ್ರಾ ಒಬ್ಬ ವಜೀರ್‌ಖಾನ್‌ಗೆ ಬರೆದ ರಹಸ್ಯಪತ್ರವಾಗಿತ್ತು. ವಿವರ ಹೀಗಿತ್ತು. "ನೀವು ಸಧೌರ ಮೇಲೆ ದಾಳಿ ಮಾಡಲೇಬೇಕು. ಬಂದಾ ಸಿಂಗ್ ಮತ್ತು ಅವನ ಜೊತೆಗಾರರು ನಮ್ಮ ಮೇಲೆ ವಿಶ್ವಾಸವಿರಿಸಿದ್ದಾರೆ. ಯುದ್ಧಕ್ಕೆ ಸನ್ನದ್ಧರಾಗದಂತೆ ಸಿಖ್ ಸೈನಿಕರನ್ನು ನಾವು ಕೆಲಸಕ್ಕೆ ಬಾರದ ವಿಷಯಗಳಲ್ಲಿ ತೊಡಗಿಸಿರುತ್ತೇವೆ. ಈ ಯತ್ನದಲ್ಲಿ ಬಂದಾ ಸಿಂಗ್‌ನನ್ನು ಸೆರೆ ಹಿಡಿಯಲಾಗದಿದ್ದರೆ, ಕೊನೆ ಪಕ್ಷ ಆತ ಪಟ್ಟಣದಿಂದ ಓಡಿಹೋಗುವಂತೆ ಮಾಡಿದರೆ, ಉಳಿದ ಸಿಕ್ಖರಿಂದ ನಾವು ಪಟ್ಟಣವನ್ನು ಮರುವಶ ಮಾಡಿಕೊಳ್ಳುತ್ತೇವೆ." ಪತ್ರವನ್ನು ಒಯ್ಯುತ್ತಿದ್ದ ವ್ಯಕ್ತಿಯನ್ನು ಸಿಕ್ಖರು ಬಂಧಿಸಿ ಬಂದಾ ಸಿಂಗ್ ಮುಂದೆ ಹಾಜರುಪಡಿಸಿದರು. ಸಧೌರದ ಎಲ್ಲ ಗಣ್ಯ ಮುಸ್ಲಿಮರ ಸಭೆಯನ್ನು ಬಂದಾ ಸಿಂಗ್ ಕರೆದು ಕೇಳಿದ– "ಕೊಟ್ಟ ಮಾತಿಗೆ ದ್ರೋಹ ಮಾಡುವವನಿಗೆ ಯಾವ ಶಿಕ್ಷೆಯನ್ನು ನೀಡಬೇಕು?" ಸಭೆಯಿಂದ ಒಂದು ಧ್ವನಿ ಕೇಳಿ ಬಂತು– "ಅಂಥವರಿಗೆ ಮರಣ ದಂಡನೆ ವಿಧಿಸಬೇಕು" ಆಗ ಬಂದಾ ಸಿಂಗ್ ಅವರಿಗೆ ಪತ್ರವನ್ನು ತೋರಿಸಿದ. ಅದನ್ನು ಕಂಡ ಕೂಡಲೇ ಅನೇಕ ಅಮೀರ್‌ಗಳು ನಡುಗುತ್ತಾ, ಕ್ಷಮೆ ನೀಡುವಂತೆ ಕೋರಿದರು. ಅಂಥ ಪಾಪವನ್ನು ಮತ್ತೆ ಮಾಡುವುದಿಲ್ಲವೆಂದು ಕುರಾನ್ ಮೇಲೆ ಪ್ರಮಾಣ ಮಾಡಿದರು. ಬಂದಾ ಸಿಂಗ್ ಹೇಳಿದ– "ಪೀರ್ ಬುಧು ಶಾನ ಮಹಲ್ ಪ್ರವೇಶಿಸುವವರನ್ನು ಕೊಲ್ಲುವುದಿಲ್ಲ." ಅದನ್ನು ಕೇಳಿದ ಕೂಡಲೇ ನಿಜವಾದ ದೋಷಿಗಳೆಲ್ಲ ಮಹಲಿನತ್ತ ಓಡಿದರು. ಅವರ ಸಂಖ್ಯೆ ನೂರರಿಂದ ನೂರೈವತ್ತರಷ್ಟಿತ್ತು. ಅವರೆಲ್ಲ ಮಹಲ್‌ಗೆ ಹೋದ ನಂತರ ಬಂದಾ ಸಿಂಗ್ ಅವರಿಗೆ ಒಳಗಿನಿಂದ ಅಗುಳಿ ಹಾಕಿಕೊಳ್ಳಲು ಹೇಳಿದ. ನಂತರ ಮಹಲಿಗೆ ಬೆಂಕಿ ಹಾಕಲು ಆಜ್ಞಾಪಿಸಿದ. ಎಲ್ಲ ಸಂಚುಕೋರರು ಭಸ್ಮವಾದರು. ಈ ರೀತಿಯ ಭಯಂಕರ ಶಿಕ್ಷೆ ಉಳಿದವರು ತಪ್ಪು ಮಾಡದಂತೆ ತಡೆಯುವಲ್ಲಿ ಯಶಸ್ವಿಯಾಯಿತು. ಅದಾದ ನಂತರ ದ್ರೋಹ ಚಿಂತನೆ ಯಾರೊಬ್ಬರ ಹತ್ತಿರವೂ ಸುಳಿಯಲಿಲ್ಲ.

ಸಿಕ್ಖರು ಪಟ್ಟಣದ ಯಾವೊಬ್ಬ ನಿರಪರಾಧಿಗೂ ತೊಂದರೆ ನೀಡಲಿಲ್ಲ. ಮುಸ್ಲಿಮರ ಯಾವುದೇ ಪವಿತ್ರ ಸ್ಥಳವನ್ನು ಅಪವಿತ್ರಗೊಳಿಸಲಿಲ್ಲ. ಈಗಲೂ ಸಹ 1709ರ ಡಿಸೆಂಬರ್‌ನಲ್ಲಿ ಇದ್ದ ರೀತಿಯಲ್ಲಿಯೇ ಕುತುಬ್–ಉಲ್–ಆಕ್ತಾಬ್‌ನ ಗೋರಿ ಮತ್ತು ಗಂಜ್–ಇ–ಇಲಂನ ಗೋರಿಗಳು ಇವೆ(19).

ವಿಜಯದ ನಂತರ ಸಿಕ್ಖರು ಸಧೌರ ಕೋಟೆಯ ಮೇಲೆ ನೀಲಿ ಬಾವುಟವನ್ನು ಹಾರಿಸಿದರು(20).

ಪಟ್ಟಣದ ಆಡಳಿತಕ್ಕಾಗಿ ಸಿಕ್ಖರು ಖಲ್ಸಾ ಪಂಚಾಯತ್ ಅನ್ನು ಸ್ಥಾಪಿಸಿದರು. ಸಧೌರದಲ್ಲಿ ನಡೆದ ಘಟನೆಗಳನ್ನು ಚಕ್ರವರ್ತಿ ಬಹದ್ದೂರ್ ಶಾಗೆ ವರದಿ ಮಾಡಲಾಯಿತು. ಆತ ಸಿಕ್ಖರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಸರ್ಹಿಂದ್ ಮತ್ತು ಲಾಹೋರ್‌ನ ರಾಜ್ಯಪಾಲರಿಗೆ ರಾಯಸ ಬರೆದ.

ಬಂದಾ ಸಿಂಗ್ ಸಧೌರವನ್ನು ಅಜೇಯಗಡ ಎಂದು ಮರು ನಾಮಕರಣ ಮಾಡಿದ[21].

**ಲೋಹಗಡವನ್ನು ಸಿಖ್ ಸಾಮ್ರಾಜ್ಯದ ರಾಜಧಾನಿಯೆಂದು ಬಂದಾ ಸಿಂಗ್‌ನಿಂದ ಘೋಷಣೆ**

ಸಮನ, ಗುರ್‍ರಂ, ಸನೌರ್, ತಸ್ಕ ಮಿರಂಜಿ, ಕುಂಜ್‌ಪುರ, ಶಹಬಾದ್, ದಹ್ಮಾಲ, ಮುಸ್ತಫಾಬಾದ್, ಕಪೂರಿ ಮತ್ತು ಸಧೌರಗಳನ್ನು ವಶಪಡಿಸಿಕೊಂಡ ನಂತರ 1709ರ ಡಿಸೆಂಬರ್‌ನಲ್ಲಿ ಬಂದಾ ಸಿಂಗ್ ಲೋಹಗಡವನ್ನು ಸಿಖ್ ಸಾಮ್ರಾಜ್ಯದ ರಾಜಧಾನಿಯಾಗಿ ಘೋಷಿಸಿದ.

ಮೊದಲ ಅಧ್ಯಾಯದಲ್ಲಿ ಉಲ್ಲೇಖಿಸಿರುವಂತೆ, ಗುರುಗಳ ಮಾರ್ಗದರ್ಶನದಲ್ಲಿ ಲಖಿ ರಾಯ್ ವಂಜಾರ ಲೋಹಗಡ ಕೋಟೆಯನ್ನು ನಿರ್ಮಿಸಿದ್ದ. ಸಿಕ್ಖರು ಈ ವೇಳೆಗಾಗಲೇ ರಕ್ಷಣಾ ಗೋಡೆಗಳನ್ನು, ಆಳುವೇರಿಗಳನ್ನು ಮತ್ತು ಬುರುಜುಗಳನ್ನು ಕಟ್ಟಿದ್ದರು. ಧಾನ್ಯ, ಶಸ್ತ್ರ ಮತ್ತು ಇತರೆ ವಸ್ತುಗಳನ್ನು ಸಂಗ್ರಹಿಸಲು ಕಟ್ಟಡಗಳನ್ನು ಕಟ್ಟಿದ್ದರು. ಅಲ್ಲದೆ ಸೈನಿಕರ ಕುಟುಂಬಗಳಿಗೆ ವಸತಿ ಗೃಹಗಳನ್ನು ನಿರ್ಮಿಸಿದ್ದರು. ಬಂದಾ ಸಿಂಗ್ ತನ್ನೆಲ್ಲ ಸಂಪತ್ತು ಮತ್ತು ಆಯುಧಗಳನ್ನು ಈ ಕೋಟೆಗೆ ಸಾಗಿಸಿದ್ದ.

ಈ ಕೋಟೆಯ ಸುತ್ತಲೂ ಕಡಿದಾದ ಅನೇಕ ಬೆಟ್ಟಗಳು, ಕಣಿವೆಗಳು, ಕಮರಿಗಳು, ಅರಣ್ಯಗಳು ಇದ್ದ ಕಾರಣ ಅದನ್ನು ಸುಲಭದಲ್ಲಿ ವಶಪಡಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಈ ಪ್ರದೇಶಕ್ಕೆ ಡಾಬರ್[22] ಎಂಬ ಇನ್ನೊಂದು ಹೆಸರಿತ್ತು. ಡಾಬರ್ ಎಂಬ ಪದವನ್ನು ಮೊದಲ ಬಾರಿಗೆ ಇರದತ್ ಖಾನ್ ತನ್ನ 'ತರೀಖ್–ಇ–ಇರಾದತ್ ಖಾನಿ' ಕೃತಿಯಲ್ಲಿ ಬಳಸಿದ್ದಾನೆ.

**ಡಾಬರ್ ವಲಯದ ವಂಜಾರರ ಪಾತ್ರ**

ದಕ್ಷಿಣ ಮತ್ತು ಮಧ್ಯ ಏಷ್ಯಾದ ಬಹುದೊಡ್ಡ ವರ್ತಕನಾದ ಲಖಿ ರಾಯ್ ವಂಜಾರನೇ ಡಾಬರ್‌ನ ಸುತ್ತಮುತ್ತಲಿನ ಜಮೀನಿನ ಒಡೆಯ. ಆತ ಸಾವಿರಾರು ಯುವಕರಿಗೆ ಉದ್ಯೋಗ ನೀಡಿದ್ದ. ಆ ಯುವ ಪಡೆ ಸರಕು ಸರಂಜಾಮುಗಳನ್ನು ವ್ಯಾಪಾರ ತಂಡ ಅಥವಾ ಕಾರವಾನ್‌ನಲ್ಲಿ ಸಾಗಿಸಲು ನೆರವಾಗುತ್ತಿತ್ತು. ಕಾರವಾನ್‌ನಲ್ಲಿನ ಸಂಪತ್ತನ್ನು ಕೊಳ್ಳೆ ಹೊಡೆಯಲು ಬರುವ ಕಳ್ಳರು, ಹೆದ್ದಾರಿ ದರೋಡೆಕೋರರು ಮತ್ತು ಕಳ್ಳರ ಕೂಟಗಳಿಂದ ಅವರು ರಕ್ಷಣೆ ಒದಗಿಸುತ್ತಿದ್ದರು. ಅವರೆಲ್ಲರೂ ಸಿಖ್ ಧರ್ಮೀಯರು. ಬಂದಾ ಸಿಂಗ್ ಲೋಹಗಡ ಕೋಟೆಯನ್ನು ರಾಜಧಾನಿಯಾಗಿ ಘೋಷಿಸಿದಾಗ ಅನೇಕ ವಂಜಾರರು ಆತನ ಸೈನ್ಯವನ್ನು ಸೇರಿದರು. ಕೆಲವರು ಸೈನಿಕರ ಆಹಾರ ಮತ್ತು ಕುದುರೆಗಳಿಗೆ ಮೇವು ಸರಬರಾಜು ಮಾಡುವ ಕೆಲಸದಲ್ಲಿ ತೊಡಗಿಸಿಕೊಂಡರು. ಕೆಲವರು ಆಯುಧಗಳ ವ್ಯವಸ್ಥೆ ಮಾಡುತ್ತಿದ್ದರು. ಇನ್ನು ಕೆಲವರು ಮುಘಲ್ ಸೇನೆ, ಮುಘಲ್ ಅಧಿಕಾರಿಗಳು ಮತ್ತು ಅವರ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಬೇಹುಗಾರಿಕೆ ಮಾಡುತ್ತಿದ್ದರು. ಬಹುತೇಕ ಮುಘಲರು ಇವರಿಂದ ಸರಕು ಖರೀದಿಸುತ್ತಿದ್ದರು. ಇದು ಸಹ ಮಾಹಿತಿ ಕಲೆ ಹಾಕಲು ಅವರಿಗೆ ನೆರವಾಗುತ್ತಿತ್ತು. ವಂಜಾರರು ಏಕ ದೈವ ಉಪಾಸಕರು. ಗುರುನಾನಕ್‌ರವರನ್ನು ಪರಮಗುರು[23] ಎಂದು ನಂಬಿದ್ದರು. ತಮ್ಮ ವ್ಯಾಪಾರ ಚಟುವಟಿಕೆಯ ಕಾರಣಕ್ಕಾಗಿ ದೇಶದ

ಎಲ್ಲಾ ಭಾಗಗಳಲ್ಲಿ ಸಂಚರಿಸುತ್ತಿದ್ದ ಪರಿಣಾಮವಾಗಿ ವಂಜಾರರು (ಧಾನ್ಯ ಸಾಗಿಸುವ ಒಂದು ವರ್ಗ) ಬಂದಾ ಸಿಂಗ್ ನೇತೃತ್ವದಲ್ಲಿ ನಡೆಯುತ್ತಿದ್ದ ಸಿಖ್ ಆಂದೋಲನದಲ್ಲಿ ತುಂಬ ಸಹಾಯ ಮಾಡಿದರು. ಹೆಚ್ಚಿನ ಪಾಲು ವಂಜಾರರು ಸಿಖ್ ಧರ್ಮದ ಆಚರಣೆಗಳನ್ನು ಪಾಲಿಸುತ್ತಿದ್ದರು. ಆ ಧರ್ಮದ ಬಗ್ಗೆ ಅವರಿಗೆ ಅಚಲ ವಿಶ್ವಾಸವಿತ್ತು.

**ಅಡಿ ಟಿಪ್ಪಣಿಗಳು**

1. ಮಿರ್ಜಾ ಅಸ್ಕರಿ (ಬಿರುದು–ವಜೀರ್‌ಖಾನ್)ಗೆ 2000 ಎಕರೆ ಉಂಬಳಿಯಿತ್ತು. ಆತನ ಹುಟ್ಟೂರು ಕುಂಜ್‌ಪುರ. ಆತ ಇರಾನಿ ವಂಶಸ್ಥ. (M. Athar Ali, The Mughal Nobility under Aurangazeb P. 249)
2. ಇಲ್ಲಿ ಗುರುಗಳು ಸಹಿಬ್‌ಜಾದ ಅಜಿತ್‌ಸಿಂಗ್‌ನ ಮಾವನಾದ ಭಾಯಿ ಜೇತಾ ಸಿಂಗ್ ಮನೆಯಲ್ಲಿ ತಂಗಿದ್ದರು. ಮಾತಾ ಸುಂದರ್‌ಕೌರ್, ತಾರಾಕೌರ್ ಮತ್ತು ಹತ್ತೀಸಿಂಗ್ ಸಹ ಅವರ ಜೊತೆಗಿದ್ದರು. ಗುರುಗಳ ಸೂಚನೆಯಂತೆ ವಿಧವೆ ತಾರಾಕೌರ್ ಅವರು ಮರುಮದುವೆಗೆ ಒಪ್ಪಿ ಯುವ ಸಿಖ್‌ನನ್ನು ಮದುವೆಯಾದರು.
3. ಡಾ. ಹರ್ಜಿಂದರ್ ಸಿಂಗ್ ದಿಲ್ಗೀರ್, Sikh History in 10 Vols, Vol. 2
4. ಈ ಘಟನೆಯನ್ನು ಸ್ವರೂಪಸಿಂಗ್ ಕೈಲಾಸ್‌ರವರು ತಮ್ಮ ಕೃತಿ ಗುರು ಕಿಯಾನ್ ಸಖಿಯಾನ್‌ನಲ್ಲಿ ವಿವರವಾಗಿ ವರ್ಣಿಸಿದ್ದಾರೆ.
5. Page 222-The Mughal Nobility under Auranga Zeb, by M. Athar Ali.
6. ಗುರು ಕಿಯಾನ್ ಸಖಿಯಾನ್, ಸಖಿ ಸಂ. 111.
7. ಇದು ದೆಹಲಿಯಿಂದ 40 ಕಿ.ಮೀ. ಮತ್ತು ರೋಹ್ತಕ್‌ನಿಂದ 33 ಕಿ.ಮೀ. ಹಾಗೂ ಖರ್ಖೌಡದಿಂದ 13 ಕಿ.ಮೀ. ದೂರದಲ್ಲಿದೆ.
8. ಇಸ್ಲಾಂ ಸಂಸ್ಥಾಪಕರಾದ ಹಜರತ್ ಮಹಮದ್‌ನ ಮಗಳು ಮತ್ತು ಅಳಿಯಂದಿರಾದ ಫತಿಮಾ ಮತ್ತು ಅಲಿ ಅವರ ನೇರ ವಂಶಸ್ಥರು, ಈ ಸಯ್ಯದ್‌ಗಳು.
9. ಈ ಕೃತಿಯ ಚಿತ್ರ ಸಂಪುಟದಲ್ಲಿ ಮುಸ್ಲಿಂ ಮಸೀದಿಗಳ ಇತ್ತೀಚಿನ ಚಿತ್ರಗಳನ್ನು ನೋಡಿ.
10. ಖಾಫಿಖಾನ್, Muntkhab-ul-Lubab (1722) Vol. 2. P. 652.
11. ಗುರ್‍ರಂ, ಸನೌರ್‌ನಿಂದ 20 ಕಿ.ಮೀ. ದೂರದ ಐತಿಹಾಸಿಕ ಸ್ಥಳ. ರಜಿಯಾ ಸುಲ್ತಾನ್ ಸಾಮ್ರಾಜ್ಞಿಯಾದಾಗ ಈ ಕೋಟೆಯನ್ನು ರಾಜ ಖೈದಿಗಳಿಗೆ ಬಂದೀಖಾನೆಯಾಗಿ ಬಳಸುತ್ತಿದ್ದಳು.
12. ಇದು ಸಮನದಿಂದ 28 ಕಿ.ಮೀ. ಮತ್ತು ಪಾಟಿಯಾಲದಿಂದ 3 ಕಿ.ಮೀ. ದೂರದಲ್ಲಿದೆ.
13. ಮೀರನ್ ಎಂದರೆ ಉಮ್ರಾಗೆ ಸೇರಿದ್ದು ಎಂದರ್ಥ. ಮೀರನ್ ಎಂಬುದು ಮೀರ್ ಎಂಬುದರ ಗುಣವಾಚಕ. ಉಮ್ರಾದಂತೆ ಅದೂ ಸಹ ಅಮೀರ್‌ನಿಂದಲೇ ಬಂದಿದೆ.
14. ಗುರ್‌ಬಾನಿಯ ಒಂದು ಸ್ತೋತ್ರ. ಬಾಬರ್‌ವಾಣಿ ಎಂಬ ಹೆಸರಿನಿಂದ ಪ್ರಸಿದ್ಧವಾದ ಅದು ಈ ಘಟನೆಯನ್ನು ಬಿಂಬಿಸುತ್ತದೆ.

15. ಹಿಂದೂ ವೈಷ್ಣವರ ಪ್ರಕಾರ ಹಸು ಒಂದು ಅಸಹಾಯಕ ಸಾಧು ಪ್ರಾಣಿ; ಕರುಣೆಗೆ ತಕ್ಕುದಾದ ಪ್ರಾಣಿ.
16. ದೇಹವನ್ನು ಸುಡುವುದು ಮುಸ್ಲಿಮರಲ್ಲಿ ದೊಡ್ಡ ಶಾಪ. ಅದು ನರಕಕ್ಕೆ ದೂಡುವುದಕ್ಕೆ ಸಮ.
17. ಜೈಪುರ ರಾಜ್ಯದ ದಾಖಲೆ. 'ಅಕ್ಬರಾತ್-ಇ-ದರ್ಬಾರ್-ಇ-ಮೌಲ್ಲ'ದಲ್ಲಿ ಉಲ್ಲೇಖಿಸಿರುವಂತೆ.
18. ಪೀರ್ ಬುಧು ಶಾಗೆ ನೀಡಿದ ಶಿಕ್ಷೆಯೇ ಅವನಿಗೂ ಆಯಿತು. ಬಿತ್ತಿದಂತೆ ಬೆಳೆ ಎಂಬ ಗಾದೆಗೆ ಸಮ. ಜನ ಪೀರ್ ಬುಧು ಶಾ ನನ್ನು ಇನ್ನೂ ನೆನಪಿಟ್ಟುಕೊಂಡಿದ್ದಾರೆ. ಆದರೆ ಉಸ್ಮಾನ್ ಖಾನ್ ಸ್ಮೃತಿಯಲ್ಲಿ ಉಳಿದಿಲ್ಲ.
19. ಪೀರ್‌ಬುಧು ಶಾನ ಮಹಲು ಈಗಿಲ್ಲ. ಅದರ ನಿವೇಶನದಲ್ಲಿ ಒಂದು ಶಾಲೆಯನ್ನು ನಿರ್ಮಿಸಲಾಗಿದೆ.
20. ಗುರು ಸಾಹಿಬ್‌ರವರ ಕಾಲದಲ್ಲಿ ಸಿಖ್ ಬಾವುಟದ ಬಣ್ಣ ನೀಲಿ.
21. ಮಹಮ್ಮದ್ ಖಾಸಿಂ ಔರಂಗಬಾದಿ-ಅಹ್ವಾಲ್-ಉಲ್-ಖವಾಕೀನ್ ಪು. 68–69.
22. ಡಾಬರ್ ಎಂದರೆ ಅರಣ್ಯ ಮತ್ತು ನದಿಯಿಂದ ಸುತ್ತುವರೆದ ಎತ್ತರದ ಬೆಟ್ಟಗಳ ಪ್ರದೇಶ.
23. Tribes and Castes of N.W. India. 1542, W. Crook.
24. ಕಮ್ವರ್‌ಖಾನ್ ತಜ್ಕಿರಾತುತ್ ಸಲತಿನ್ ಚಗಟ್ಟ, ಪು. 93–94.

# ಅಧ್ಯಾಯ–5

# ಲೋಹಗಡದಿಂದ ಬಂದಾ ಸಿಂಗ್ ಬಹದ್ದೂರನ ಸಾಹಸಗಳು

### ಸರ್ಹಿಂದ್ ಮೇಲೆ ದಾಳಿ ಮಾಡಲು ಸಿದ್ಧತೆ

1710ರ ಏಪ್ರಿಲ್ ವೇಳೆಗೆ ಸರ್ಹಿಂದ್‌ನ ಸುತ್ತಮುತ್ತಲಿನ ಪ್ರದೇಶಗಳನ್ನು ಮುಘಲರ ಆಳ್ವಿಕೆಯಿಂದ ತೆರವುಗೊಳಿಸುವಲ್ಲಿ ಬಂದಾ ಸಿಂಗ್ ಯಶಸ್ವಿಯಾದ. ಎಂಟು ಕೋಟೆಗಳೂ ಸೇರಿದಂತೆ ಯಮುನಾ ಮತ್ತು ಸಟ್ಲೆಜ್ ನದಿಗಳ ನಡುವಣ ಭೂಪ್ರದೇಶ ಬಂದಾ ಸಿಂಗ್‌ನ ಸ್ವಾಧೀನದಲ್ಲಿತ್ತು. ಸರ್ಹಿಂದ್ ಒಂದು ಪ್ರಾಂತ್ಯವಲ್ಲದಿದ್ದರೂ (ಅದು ದೆಹಲಿ ರಾಜ್ಯದ ಅಧೀನದಲ್ಲಿತ್ತು). ಮುಘಲ್ ಸಾಮ್ರಾಜ್ಯದ ಪ್ರಮುಖ ಶಕ್ತಿ ಕೇಂದ್ರಗಳಲ್ಲೊಂದೆನಿಸಿತ್ತು. ಹಾಗಾಗಿ ಅದನ್ನು ಒಂದು ಪ್ರಾಂತ್ಯದ ರೀತಿಯಲ್ಲಿಯೇ ಪರಿಗಣಿಸಲಾಗಿತ್ತು. ಅದರಲ್ಲಿ 28 ಪರಗಣ (ಜಿಲ್ಲೆ)ಗಳಿದ್ದವು. 1710ರ ಕಾಲಕ್ಕೆ ಅದರಿಂದ 52 ಲಕ್ಷ ರೂಪಾಯಿ ಆದಾಯ ಬರುತ್ತಿತ್ತು. ಹಾಗಾಗಿಯೇ ಅದನ್ನು ಬಾವನಿ ಸರ್ಹಿಂದ್ ಎಂದು ಕರೆಯಲಾಗುತ್ತಿತ್ತು (ಬಾವನಿ ಎಂದರೆ 52). ಅಂಥ ಪ್ರಾಂತ್ಯದ ರಾಜ್ಯಪಾಲ ಹುದ್ದೆಯನ್ನು ಹಿರಿಯ ವ್ಯಕ್ತಿಗೆ ನೀಡಲಾಗುತ್ತಿತ್ತು. ವಜೀರ್‌ಖಾನ್ ಹೆಸರಿನಲ್ಲಿ ಪರಿಚಿತವಾದ ಮಿರ್ಜಿ ಅಸ್ಕರಿಗೆ ಇರಾನ್ ಮೂಲದ ಹಿನ್ನೆಲೆಯಿತ್ತು. ಔರಂಗಜೇಬನ ಉಗ್ರನಿಷ್ಠರಲ್ಲಿ ಒಬ್ಬನಾಗಿದ್ದ. ಆತನಿಗೆ 2000 ಕುದುರೆಗಳ ಮಾನ್ಸಾಬ್ ಇತ್ತು. ಯಮುನಾ ಮತ್ತು ಸಟ್ಲಜ್ ನದಿಗಳ ನಡುವಿನ ಭೂ ಪ್ರದೇಶದ ಆಡಳಿತ ಅವನ ಅಧೀನಕ್ಕೊಳಪಟ್ಟಿತ್ತು. ಮಲೇರ್ ಕೊಟ್ಲ, ರೂಪಾರ್, ಮಚ್ಚಿವರ ಮೊದಲಾದ ಪ್ರದೇಶಗಳ ಮುಖ್ಯಸ್ಥರು ವಜೀರ್‌ಖಾನ್ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

1710ರ ಮೇ ತಿಂಗಳಿನಲ್ಲಿ ಸರ್ಹಿಂದ್‌ನ ಆಡಳಿತಗಾರ ಮತ್ತು ಶಕ್ತಿಶಾಲಿ ಶತ್ರುವಿನ ವಿರುದ್ಧ ದಾಳಿ ಮಾಡಲು ಬಂದಾ ಸಿಂಗ್ ನಿರ್ಧರಿಸಿದ. ಸಿಖ್‌ರಿಂದ ಮುಂಬರುವ ದಾಳಿಯ ಬಗ್ಗೆ ವಜೀರ್ ಖಾನ್‌ಗೆ ಸಹ ಮಾಹಿತಿಯಿತ್ತು. ಸಿಕ್ಖರು ಈಗಾಗಲೇ ಎಂಟು ಕೋಟೆ ಹಾಗೂ ದೊಡ್ಡ ಪಟ್ಟಣ / ನಗರಗಳನ್ನು ವಶಪಡಿಸಿಕೊಂಡಿರುವುದೂ ತಿಳಿದಿತ್ತು. ತನ್ನ ಹುಟ್ಟೂರು ಕುಂಜ್‌ಪುರದ ಮೇಲೆ ಸಿಖ್ ಸೇನೆ ನಡೆಸಿದ ದಾಳಿಯಿಂದ ವ್ಯಗ್ರನಾಗಿದ್ದ. ಹಾಗಾಗಿ ಅವರನ್ನು ಸದೆಬಡಿಯಲು ಇಚ್ಛಿಸಿದ್ದ. ಆ ಸಮಯದಲ್ಲಿ ಬಂದಾ ಸಿಂಗ್ ಛಾಟ್–ಬನುರ್ ಅರಣ್ಯದಲ್ಲಿ ತಂಗಿದ್ದ.

ಸಿಕ್ಖರ ವಿರುದ್ಧ ಯುದ್ಧ ಮಾಡಲು ಸಿದ್ಧರಾಗಿರುವಂತೆ ವಜೀರ್‌ಖಾನ್ ತನ್ನ ನೆರೆಹೊರೆಯ ಸಾಮಂತರಿಗೆ ಸಂದೇಶ ಕಳುಹಿಸಿದ. ಆತ ಜಿಹಾದ್ (ಧರ್ಮಯುದ್ಧ)ಗೆ ಕರೆ ನೀಡಿ ಮುಸ್ಲಿಂ ಯುವಕರು ತನ್ನ ಸೇನೆಗೆ ಸೇರುವಂತೆ ಪ್ರಚೋದಿಸಿದ. ಎಲ್ಲ ಪಠಾಣರಿಗೆ, ಬಲೋಚರಿಗೆ, ರಣಗರ್‌ಗಳಿಗೆ ಮತ್ತು ಇತರೆ, ಮುಸ್ಲಿಂ ಪಂಗಡದವರಿಗೆ ತನ್ನ ಸೈನ್ಯಕ್ಕೆ ಸೇರಲು ಕರೆ ನೀಡಿದ.

ಮುಂಬರುವ ಯುದ್ಧಕ್ಕೆ ಸಾವಿರಾರು ಜನರನ್ನು ನೇಮಕ ಮಾಡಿಕೊಂಡ. ಅನೇಕ ಮುಸ್ಲಿಂ ಚೌಧರಿಗಳು ಮತ್ತು ಪಾಳಯಗಾರರು ತಮ್ಮ ಖಾಸಗಿ ಪಡೆಯನ್ನು ನೆರವಿಗಾಗಿ ಕಳುಹಿಸಿಕೊಡುವ ಭರವಸೆ ನೀಡಿದರು. ಈ ಯುದ್ಧದ ಆಂದೋಲನದಲ್ಲಿ ಅವನ ಬಲಗೈಯಾಗಿದ್ದವನು ಮಲೇರ್‌ಕೊಟ್ಲದ ಶೇರ್ ಮಹಮ್ಮದ್‌ಖಾನ್ (ಕೆಲವು ಲೇಖಕರು ಈತನನ್ನು ಸಿಖ್ ಜನಾಂಗದ ಪರ ಸಹಾನುಭೂತಿಯಿದ್ದವನೆಂದು ಉಲ್ಲೇಖಿಸುತ್ತಾರೆ)

**ಮಲೇರ್‌ಕೊಟ್ಲ ಸೈನ್ಯವು ಮಾಜ್ಹಾ ಸಿಖ್‌ರ ಮೇಲೆ ಮಾಡಿದ ದಾಳಿ**

ಬಿಯಾಸ್ ಮತ್ತು ರಾವಿ ನದಿಯ ನಡುವಣ ಪ್ರದೇಶ ಮಾಜ್ಹಾ. ಬಂದಾ ಸಿಂಗ್ ಸರ್ಹಿಂದ್ ಮೇಲೆ ಆಕ್ರಮಣ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿರುವ ಸುದ್ದಿ ತಿಳಿದ ಮಾಜ್ಹಾ ಪ್ರದೇಶದ ನೂರಾರು ಸಿಕ್ಖರು ಯುದ್ಧದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದರು. ಅವರು ಬೇರೆ ಬೇರೆ ತಂಡಗಳನ್ನು ರಚಿಸಿಕೊಂಡು ಕೀರತ್‌ಪುರ ತಲುಪಿದರು. ಅವರ ಸಂಖ್ಯೆ ಸುಮಾರು 2000ದಷ್ಟಿತ್ತು. ಅವರು ಬಂದಾ ಸಿಂಗ್‌ನನ್ನು ಛಾಟ್–ಬನುರ್‌ನಲ್ಲಿ ಸೇರಿಕೊಳ್ಳಲು ಯೋಜಿಸಿದರು. ಈ ಸಿಕ್ಖರ ಬಗ್ಗೆ ವಜೀರ್‌ಖಾನ್‌ಗೆ ಸುದ್ದಿ ತಿಳಿದಾಗ, ಆತ ಅವರನ್ನು ಮಧ್ಯದಲ್ಲಿಯೇ ತಡೆದು ಕೊಲ್ಲುವಂತೆ ಶೇರ್ ಮಹಮ್ಮದ್‌ಗೆ ಆಜ್ಞಾಪಿಸಿದ. ಶೇರ್ ಮಹಮ್ಮದ್ ಖಾನ್ ತನ್ನ ತಮ್ಮ ಖಿಜರ್‌ಖಾನ್, ತಮ್ಮನ ಮಕ್ಕಳಾದ ವಲಿಖಾನ್ ಮತ್ತು ಮಹಮ್ಮದ್ ಭಕ್ಷ್ ಜೊತೆಗೂಡಿ ಮಾಜ್ಹಾದ ಸಿಖ್ ಪಡೆಯ ಮೇಲೆ ದಾಳಿ ಮಾಡಲು ದೊಡ್ಡ ಸೇನೆಯೊಡನೆ ಹೊರಟ. ಮಲೇರ್‌ಕೊಟ್ಲದಿಂದ ಆತ ರೂಪರ್ ಕಡೆ ಹೊರಟ. ಆದರೆ ದಾರಿಯಲ್ಲಿ ಆತನಿಗೆ ಮಾಜ್ಹಾ ಸಿಕ್ಖರು ಬಹ್ಲೋಲ್‌ಪುರದ ಹತ್ತಿರ ಸಟ್ಲೆಜ್ ನದಿಯನ್ನು ದಾಟುವ ವಿಷಯ ತಿಳಿಯಿತು[1].

ಸಿಖ್ ಪಡೆಯ ಮಾರ್ಗದ ಮಾಹಿತಿಯನ್ನು ಪಡೆದ ನಂತರ ಶೇರ್ ಮಹಮ್ಮದ್ ಖಾನ್ ಬೆಹ್ಲೋಲ್‌ಪುರದತ್ತ ನಡೆದ. ಬೆಹ್ಲೋಲ್ ಪುರದಲ್ಲಿ ಸಂಧಿಸಿದ ಎರಡೂ ಸೈನ್ಯ ಭೀಕರ ಕಾಳಗದಲ್ಲಿ ತೊಡಗಿತು. ಮಲೇರ್‌ಕೊಟ್ಲದ ಸೈನಿಕ ಬಲ ಹೆಚ್ಚಿದ್ದರೂ, ಸಿಖ್ ಸೈನಿಕರು ತಮ್ಮ ಅರ್ಪಣಾ ಮನೋಭಾವದಿಂದ, ಯಾವುದೇ ತ್ಯಾಗಕ್ಕೂ ಸಿದ್ಧರಾಗಿ ಹೋರಾಡಿದರು. ಎರಡೂ ಕಡೆ ಅಪಾರ ಸಾವು ನೋವುಗಳಾದವು. ಆದರೆ ಮಲೇರ್‌ಕೊಟ್ಲ ಸೈನ್ಯ ಯುದ್ಧದಲ್ಲಿ ಮೇಲುಗೈ ಸಾಧಿಸುತ್ತಿರುವಂತೆ ಕಂಡಿತು. ಕತ್ತಲಾಗುತ್ತಿದ್ದಂತೆ ಯುದ್ಧವನ್ನು ನಿಲ್ಲಿಸಲಾಯಿತು. ಮಾರನೆಯ ದಿನ ನಸುಕಿನಲ್ಲಿಯೇ ಮಲೇರ್‌ಕೊಟ್ಲ ಸೈನ್ಯದ ಮೇಲೆ ಹುರುಪಿನಿಂದ ಮುಗಿಬಿದ್ದು ಅವರನ್ನು ಹಿಮ್ಮೆಟ್ಟಿಸತೊಡಗಿದರು.

ಮಧ್ಯಾಹ್ನದ ವೇಳೆಗೆ ಕಾಳಗದ ಬಿರುಸು ತುದಿ ಮುಟ್ಟಿತ್ತು. ಆಗ ಶೇರ್ ಮಹಮ್ಮದ್ ಖಾನನ ತಮ್ಮ ಖಿಜರ್‌ಖಾನನಿಗೆ ಒಂದು ಗುಂಡು ತಗುಲಿ ತಕ್ಷಣವೇ ಮಡಿದ. ಅದನ್ನು ನೋಡಿ ಮಲೇರ್‌ಕೊಟ್ಲ ಸೈನಿಕರು ದಿಕ್ಕಾಪಾಲಾಗಿ ಓಡಿದರು. ಆಗ ಶೇರ್ ಮಹಮ್ಮದ್ ಖಾನ್ ಗಟ್ಟಿಯಾಗಿ ಕೂಗಿ ಹುರುದುಂಬಿಸಿ ತನ್ನ ನಿಷ್ಠಾವಂತ ಸೈನಿಕರನ್ನು ಒಗ್ಗೂಡಿಸಿದ. ತನ್ನ ಸೋದರರ ಇಬ್ಬರು ಮಕ್ಕಳ ನೆರವಿನಿಂದ ಆತ ತನ್ನ ತಮ್ಮನ ದೇಹವನ್ನು ಎತ್ತಿಕೊಂಡು ಬರಲು ಮುನ್ನುಗ್ಗಿದ. ಸಿಕ್ಖರು ಅವರ ಮೇಲೆ ದಾಳಿ ಮಾಡಿದರು. ಈ ಹಂತದಲ್ಲಿ ವಲಿಖಾನ್ ಮತ್ತು ಮಹಮ್ಮದ್ ಭಕ್ಷ್ ಮಡಿದರು. ಶೇರ್ ಮಹಮ್ಮದ್ ಖಾನ್ ಸಹ ಗಾಯಗೊಂಡ. ಆ ಕ್ಷಣದಿಂದ ಮಲೇರ್‌ಕೊಟ್ಲದ ಯಾವುದೇ ಸೈನಿಕ ಯುದ್ಧಭೂಮಿಯಲ್ಲಿ ನಿಲ್ಲುವ ಸಂಕಲ್ಪ ತೋರಲಿಲ್ಲ. ಸಿಕ್ಖರು ಮುಗಿಲು ಮುಟ್ಟುವಂತೆ ಜಯಘೋಷ ಕೂಗಿ ಬನುರ್‌ಕಡೆ ಹೊರಟರು. ದಾರಿಯಲ್ಲಿ ಅವರು ರಣವನ್

ಗ್ರಾಮ (ಪುರಾತನ ಪಟ್ಟಣ ಸಂಗೋಲ್ ಬಳಿಯ ಪುಟ್ಟಗ್ರಾಮ)ದ ಬಳಿ ಮತ್ತೊಂದು ದಾಳಿ ಎದುರಿಸಿ ಅಲ್ಲಿಯೂ ಜಯಶಾಲಿಗಳಾದರು. ಬನುರ್ ತಲುಪಿದಾಗ ಸ್ವತಃ ಬಂದಾ ಸಿಂಗ್ ಅವರನ್ನು ಸ್ವಾಗತಿಸಿದ. ಸಿಕ್ಖರು ಪರಸ್ಪರ ಆಲಂಗಿಸಿ ಜಯಕಾರ ಹಾಕಿದರು'.(2)

**ಚಪ್ಪರ್‌ಚಿರಿ ಯುದ್ಧ ಮತ್ತು ಸರ್ಹಿಂದ್ ಸ್ವಾಧೀನ**

ಸಿಖ್ ಸೈನಿಕರ ಕೈಯಲ್ಲಿ ಖಿಜರ್‌ಖಾನ್ ಮತ್ತವನ ಮಕ್ಕಳು ಮಡಿದ ಹಾಗೂ ಮಲೇರ್‌ಕೊಟ್ಲ ಸೈನ್ಯ ಸೋತ ಸುದ್ದಿಯನ್ನು ಕೇಳಿದ ವಜೀರ್‌ಖಾನ್ ಕಳವಳಕ್ಕೆ ತುತ್ತಾದ. ಆದರೂ ಹಿಂದೆಗೆಯಲಿಲ್ಲ. ದೆಹಲಿ ಮತ್ತು ಲಾಹೋರ್‌ಗೆ ದೂತರನ್ನು ಕಳುಹಿಸಿ ಹೆಚ್ಚಿನ ಸೇನೆ ಮತ್ತು ಶಸ್ತ್ರಕ್ಕಾಗಿ ಕೋರಿಕೆ ಸಲ್ಲಿಸಿದ. ಹಾಗಾಗಿ ಆತ ದೊಡ್ಡ ಸೈನ್ಯ ಮತ್ತು ಶಸ್ತ್ರಾಸ್ತ್ರಗಳನ್ನು ಕ್ರೋಢೀಕರಿಸಿದ. ಅಪಾರ ಸಂಖ್ಯೆಯ ಕುದುರೆಗಳಲ್ಲದೆ ಆನೆಗಳು ಸೈನ್ಯಕ್ಕೆ ಸೇರಿದವು. ಆತನಿಗೆ ಯುದ್ಧ ಸರ್ಹಿಂದ್ ಹತ್ತಿರ ಅಥವಾ ಒಳಗೆ ನಡೆಯುವುದು ಬೇಕಿರಲಿಲ್ಲ. ಆದುದರಿಂದ ಸಿಖ್ ಸೇನೆ ಸರ್ಹಿಂದ್ ಕಡೆ ಚಲಿಸುವ ಮೊದಲೇ ದಾಳಿ ಮಾಡಲು ನಿರ್ಧರಿಸಿದ. ಸಿಖ್ ಸೇನೆ ಸರ್ಹಿಂದ್ ಮೇಲೆ ದಾಳಿ ಮಾಡಲು ಸಿದ್ಧತೆ ನಡೆಸಲು ಬೀಡುಬಿಟ್ಟಿದ ಸ್ಥಳಕ್ಕೆ ತನ್ನ ಸೇನೆಯನ್ನು ಚಲಾಯಿಸಿದ.

ಇದಲ್ಲದೆ, ವಜೀರ್‌ಖಾನ್ ಮತ್ತೊಂದು ತಂತ್ರವನ್ನು ಪ್ರಯೋಗಿಸಿದ. ತನ್ನ ಸಚಿವ ಸಚ್ಚಾನಂದನ ಸೋದರನ ಮಗ ಗಂಡ ಮಲ್ಲನನ್ನು, ವಜೀರ್‌ಖಾನ್ ವಿರುದ್ಧ ಬಂಡಾಯವೆದ್ದವನ ರೀತಿಯಲ್ಲಿ ಬಂದಾ ಸಿಂಗ್ ಬಳಿಗೆ ಕಳುಹಿಸಿದ. ವಜೀರ್‌ಖಾನ್‌ನ ಹಂಚಿಕೆ ಹೀಗಿತ್ತು. ಬಂದಾ ಸಿಂಗ್ ಸೈನ್ಯದ ಜೊತೆ ಸೇರಿದ ಗಂಡ ಮಲ್ಲ ಯುದ್ಧ ಆರಂಭವಾದಾಗ ಯುದ್ಧ ಭೂಮಿಯಿಂದ ಓಡಿಹೋಗುವುದು. ಆಗ ಸಿಖ್ ಸೇನೆ ಕಕ್ಕಾಬಿಕ್ಕಿಯಾಗಿ ಧೈರ್ಯಗುಂದುತ್ತದೆ. ಹಾಗಾಗಿ ಯುದ್ಧವನ್ನು ಸೋಲುತ್ತದೆ. ಈ ನಡುವೆ ಬಂದಾ ಸಿಂಗ್ ಸೆರೆಯಾದರೂ ಆಗಬಹುದು. ಈ ಗುಳ್ಳೆ ನರಿಯ ಬುದ್ಧಿಯಿಂದ ಗಂಡ ಮಲ್ಲನು ಬಂದಾ ಸಿಂಗ್‌ನನ್ನು ಭೇಟಿಯಾದನು. ಅವನ ಮಾತನ್ನು ಕೇಳಿದ ಬಂದಾ ಸಿಂಗ್ ವಿಶ್ವಾಸ ತಾಳಲಿಲ್ಲ. ಆದರೂ ಅವನನ್ನು ತಿರಸ್ಕರಿಸಿದೆ, ಸೈನ್ಯದ ಮುಂಭಾಗದಲ್ಲಿ ಅವನನ್ನು ಇರಿಸದಂತೆ ಸೇನಾ ನಾಯಕರಿಗೆ ಸೂಚನೆ ನೀಡಿದ.

ಚಪ್ಪರ್ ಚಿರಿ(3) ಸ್ಥಳ (ಈಗ ಅದು ಹಳ್ಳಿಯಾಗಿದೆ)ವು ಸರ್ಹಿಂದ್‌ನಿಂದ 20 ಕಿ.ಮೀ. ದೂರದಲ್ಲಿದೆ. ಸರ್ಹಿಂದ್ ಮೇಲೆ ದಾಳಿ ಮಾಡಲು ಸಿಖ್ ಸೈನಿಕರು ಬೀಡುಬಿಟ್ಟು ವಿಶ್ರಾಂತಿ ಪಡೆಯುತ್ತಿದ್ದರು. ವಜೀರ್‌ಖಾನ್ ದಾಳಿ ಮಾಡಲು ಬರುತ್ತಿರುವ ಸುದ್ದಿ ತಿಳಿದ ತಕ್ಷಣ ಅವರೆಲ್ಲ ರಕ್ಷಣೆಯ ತಂತ್ರಕ್ಕೆ ಮೊರೆ ಹೋದರು. ಅವರಿಗೆ ಮರಗಳ ಮತ್ತು ದಿಬ್ಬಗಳ ರಕ್ಷಣೆಯಿತ್ತು. ಬಂದಾ ಸಿಂಗ್ ತನ್ನ ಸೇನೆಯನ್ನು ಫತೇಸಿಂಗ್, ಕರಮ್‌ಸಿಂಗ್–ಧರಂ ಸಿಂಗ್, ಆಲಿಸಿಂಗ್–ಮಾಲಿಸಿಂಗ್ ಮತ್ತು ಬಜ್‌ಸಿಂಗ್ ನೇತೃತ್ವದಲ್ಲಿ ನಾಲ್ಕು ತುಕಡಿಗಳನ್ನಾಗಿ ರಚಿಸಿದ. ಆ ವೇಳೆಗೆ ಅವರಲ್ಲಿ ಆರು ಫಿರಂಗಿಗಳಿದ್ದವು. ಅವುಗಳನ್ನು ಶಹಬಾಜ್ ಸಿಂಗ್ ಸುಪರ್ದಿಗೆ ವಹಿಸಲಾಯಿತು. ಶತ್ರು ಸೇನೆಯ ಚಲನವಲನವನ್ನು ಗುರುತಿಸಿ ಅಗತ್ಯ ಆದೇಶಗಳನ್ನು ನೀಡಲು ಅನುಕೂಲವಾಗುವಂತೆ ಬಂದಾ ಸಿಂಗ್ ಒಂದು ದಿಬ್ಬದ ಮರೆಯಲ್ಲಿ ನಿಂತ.

ಖಾಫಿಖಾನ್ ಪ್ರಕಾರ ಸಿಖ್ ಸೈನಿಕರ ಸಂಖ್ಯೆ 30 ರಿಂದ 40 ಸಾವಿರದಷ್ಟಿತ್ತು. ಆದರೆ ಅವರಲ್ಲಿ ಉತ್ತಮ ಆಯುಧಗಳಿರಲಿಲ್ಲ. ಅವರ ಬಳಿ ಬಹುತೇಕ ಇದ್ದದ್ದು–ಖಡ್ಗ, ಈಟಿ, ಬಾಣ. ಕೆಲವರ ಹತ್ತಿರ ಮಾತ್ರ ಬಂದೂಕುಗಳು ಮತ್ತು ಆರು ಫಿರಂಗಿಗಳು(4).

1710ರ ಮೇ 12ರ ಬೆಳಿಗ್ಗೆ ಚಪ್ಪರ್ ಚಿರಿಯ ಮೈದಾನದಲ್ಲಿ ಎರಡು ಸೈನ್ಯ ಯುದ್ಧ ಮಾಡಲು ಎದುರು ಬದರಾಯಿತು. ವಜೀರ್ ಖಾನ್‌ನ ಸೈನಿಕರ ಸಂಖ್ಯೆ ಒಂದು ಲಕ್ಷವಿತ್ತೆಂದು ಹೇಳುತ್ತಾರೆ. ಆದರೆ ಅದು ಉತ್ಪ್ರೇಕ್ಷಿತ ಸಂಖ್ಯೆ. ಮತ್ತೊಂದು ಮೂಲಕ ಪ್ರಕಾರ ಆ ಸೇನೆಯಲ್ಲಿ 5–6 ಸಾವಿರ ಕುದುರೆಯಾಳು. 7–8 ಸಾವಿರ ಫಿರಂಗಿ ದಳ ಮತ್ತು 8 ಸಾವಿರ ಗಾಜಿಗಳು (ಜಿಹಾದ್ ಹೆಸರಿನಲ್ಲಿ ಸೈನ್ಯ ಸೇರಿದವರು) ಇತ್ತು. ಅಂದರೆ ಅವರ ಸೈನ್ಯದ 20,000 ಮೀರಿರಲಿಲ್ಲ[(5)].

ವಜೀರ್‌ಖಾನನ ಸೇನೆಯ ಮುಂಭಾಗದಲ್ಲಿದ್ದ ಆನೆಗಳು ಸಿಖ್ ದಾಳಿಯಿಂದ ರಕ್ಷಣೆ ಒದಗಿಸಿದವು. ಅವನ ಸೈನಿಕರು 'ಯಾ ಅಲಿ' 'ಯಾ ಅಲಿ' ಮತ್ತು 'ಅಲ್ಲಾ ಹು ಅಕ್ಬರ್' ಎಂದು ಯುದ್ಧ ಘೋಷ ಮೊಳಗಿಸುತ್ತಿದ್ದರು. ಸಿಖ್ ಸೈನಿಕರು ಪ್ರತಿಯಾಗಿ 'ಅಕಾಲ್' 'ಅಕಾಲ್' ಎಂದು ಘೋಷ ಕೂಗಿದರು. ವಜೀರ್ ಖಾನ್ ಸೇನೆಯ 'ಅಲ್ಲಾ ಹು ಅಕ್ಬರ್' ಘೋಷದ ತೀವ್ರತೆಯು ಹೆಚ್ಚಾಗಿದೆಯೆಂದು ಮನಗಂಡ ಸಿಖ್ ಸೈನಿಕರು ಅದೇ ಪ್ರಾಸದಲ್ಲಿ 'ಪತೇಹ್ ದರ್ಶನ್' ಎಂಬ ಹೊಸ ಪದವನ್ನು ಹೆಣೆದು ಅದೇ ತೀವ್ರತೆಯನ್ನು ಮೊಳಗಿಸಿದರು[(6)]. ಕೆಲವು ಲೇಖಕರು ಫತೀಹ್ ದರ್ಶನ್ ಘೋಷವಾಕ್ಯವನ್ನು ಬಂದಾ ಸಿಂಗ್ ರಚಿಸಿದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಅದನ್ನು ರತನ್‌ಸಿಂಗ್ ಭಂಗು ರಚಿಸಿದ್ದೆಂದು ಹೇಳುತ್ತಾರೆ. ಆದರೆ ಎಲಿಯಟ್ ಮತ್ತು ಡಾಸನ್ ಇದನ್ನು ಬಂದಾ ಸಿಂಗ್ ರಚಿಸಿದ್ದೆಂದು ಸ್ಪಷ್ಟೀಕರಿಸಿದ್ದಾರೆ[(7)].

ಯುದ್ಧ ಆರಂಭವಾದಾಗ, ಸರ್ಹಿಂದ ಸೈನಿಕರ ಮೇಲೆ ದಾಳಿ ಮಾಡಬೇಕಾದರೆ ಮೊದಲು ಸೇನೆಯ ಮುಂದಿದ್ದ ಆನೆಗಳನ್ನು ನಿವಾರಿಸುವ ಅಗತ್ಯವಿತ್ತು. ಆದುದರಿಂದ ಸಿಖ್ ಸೈನಿಕರು ಫಿರಂಗಿ ಗುಂಡುಗಳನ್ನು ಆನೆಗಳತ್ತ ಎಸೆಯತೊಡಗಿದರು. ಇದರಿಂದ ಕೆಲವು ಆನೆಗಳು ಘಾಯಗೊಂಡವು. ಅವು ಘೀಳಿಟ್ಟು ಹಿಂದೆಗೆಯುತ್ತಾ ತಮ್ಮದೇ ಸೈನಿಕರನ್ನು ಘಾಯಗೊಳಿಸಿದವು.

ಇದು ವಜೀರ್‌ಖಾನ್‌ಗೆ ಸಿಟ್ಟು ತರಿಸಿತು. ಆತ ಫಿರಂಗಿ ಗುಂಡುಗಳನ್ನು ಶತ್ರುಸೈನ್ಯದ ಮೇಲೆ ಸುರಿಯುವಂತೆ ಆಜ್ಞಾಪಿಸಿದ. ಆದರೆ ಸಿಖ್ ಸೈನಿಕರ ಪಾಲಿಗೆ ಮರ, ಪೊದೆಗಳು ರಕ್ಷಾಕವಚವಾಗಿ ಒದಗಿ ಬಂದಾವು. ಫಿರಂಗಿ ದಾಳಿ ಅಷ್ಟೇನು ಪರಿಣಾಮಕಾರಿಯಾಗಲಿಲ್ಲ. ಬದಲಾಗಿ ಸಿಖ್ ಫಿರಂಗಿಗಳು ಶತ್ರು ಸೈನ್ಯದ ಫಿರಂಗಿಗಳ ಮೇಲೆ ಗುಂಡಿನ ಮಳೆ ಕರೆದವು. ಸರ್ಹಿಂದ್ ಫಿರಂಗಿಗಳ ಕಾರ್ಯಾಚರಣೆ ಹೊತ್ತ ಸೈನಿಕರು ಹತರಾದರು. ಅವರ ಫಿರಂಗಿ ಸದ್ದೂ ಅಡಗಿತು. ಸಿಖ್ ಸೈನಿಕರು ನೇರ ದಾಳಿಗೆ ತುತ್ತಾಗಿರಲಿಲ್ಲ. ಪರಿಣಾಮವಾಗಿ ಅವರ ಕುದುರೆ ಸವಾರರು ಮುನ್ನುಗ್ಗಿ ಸರ್ಹಿಂದ್ ಸೈನಿಕರ ಮುನ್ನಡೆಗೆ ಬಂದಾು ನಿಂತರು. ಬಹುಬೇಗನೆ ಅಲ್ಲೊಂದು ತೀವ್ರವಾದ ಯುದ್ಧ ಆರಂಭವಾಯಿತು. ಸಿಖ್ ಸೈನಿಕರು ಶತ್ರು ಪಾಳೆಯವನ್ನು ಭೇಧಿಸತೊಡಗಿದರು. ನೂರಾರು ಶತ್ರು ಸೈನಿಕರು ಹತರಾದರು. ಇದು ಶತ್ರು ಸೈನ್ಯವನ್ನು ಕಂಗಾಲಾಗಿಸಿತು. ಅವರು ಯುದ್ಧ ಭೂಮಿಯಿಂದ ಓಡತೊಡಗಿದರು. ಅಲ್ಲಿಂದ ಮೊದಲು ಕಾಲ್ತೆಗೆದವರು ಜಿಹಾದ್ ಹೆಸರಿನಲ್ಲಿ ಯುದ್ಧಕ್ಕೆ ಬಂದಿದ್ದ ಗಾಜಿಗಳು. ಯಾಕೆಂದರೆ ಅವರ ಪಾಳೆಯದ ಹೆಚ್ಚಿನ ಸಂಖ್ಯೆಯ ಸೈನಿಕರು ಹತರಾಗಿದ್ದರು.

ಸಿಖ್ ಸೈನಿಕರೊಡನೆ ಸೇರಲು ವಜೀರ್‌ಖಾನ್ ಕಳುಹಿಸಿದ ಗಂಡ ಮಲ್ಲ ಈಗ ತನ್ನ ನಿಜ ಬಣ್ಣವನ್ನು ತೋರಿಸತೊಡಗಿದ. ತನ್ನ ಸೈನಿಕರಿಗೆ ಯುದ್ಧ ಭೂಮಿಯಿಂದ ಕಾಲ್ತೆಗೆಯುವಂತೆ ಸೂಚಿಸಿದ. ಇದು ಸಹಜವಾಗಿಯೇ ಸಿಖ್ ಸೈನಿಕರ ಶಿಬಿರದಲ್ಲಿ ಗೊಂದಲ ಮೂಡಿಸಿತು. ಇದನ್ನು ಕಂಡ ಬಂದಾ ಸಿಂಗ್ ದಿಬ್ಬದಿಂದ ಹೊರಬಂದಾು ಸಿಖ್ ಸೈನಿಕರನ್ನು ಹುರಿದುಂಬಿಸಲು ಸೇನೆಯು

ಮುಂಚೂಣಿಯತ್ತ ನಡೆದ. ಅವರನ್ನುದ್ದೇಶಿಸಿ "ಗುರು ತನ್ನ ತೋಳ್ತೆಕ್ಕೆಯಲ್ಲಿ ನಿಮ್ಮನ್ನು ಆಲಂಗಿಸಲು ಕಾಯುತ್ತಿದ್ದಾನೆ. ನಾವು ಈ ಕ್ರೂರ ಶತ್ರುಗಳನ್ನು ನಾಶಪಡಿಸೋಣ ಇಲ್ಲವೇ ಹುತಾತ್ಮ ಪಟ್ಟವನ್ನು ಅಲಂಕರಿಸೋಣ" ಎಂದು ಹುರಿದುಂಬಿಸಿದ. ಈ ಮಾತುಗಳು ಸಿಖ್ ಸೈನಿಕರು ಪುನಶ್ಚೇತನಗೊಳ್ಳುವಂತೆ ಮಾಡಿದವು. ಕೆಚ್ಚೆದೆಯಿಂದ ಅವರು ಸರ್ಹಿಂದ್ ಸೈನಿಕರ ಮೇಲೆ ಮುಗಿಬಿದ್ದರು. ತನ್ನ ಸೈನಿಕರು ಹೌಹಾರಿದ್ದನ್ನು ಕಂಡ ವಜೀರ್‌ಖಾನ್ ತಾನೇ ಮುನ್ನುಗ್ಗಿ ಅಲ್ಲಾಹು ಮತ್ತು ಇಸ್ಲಾಂ ಹೆಸರಿನಲ್ಲಿ ತನ್ನ ಸೈನಿಕರನ್ನು ಪ್ರಚೋದಿಸಿದ. ಅವನ ಮಂತ್ರಿ ಸಚ್ಚ ನಂದ ಕೂಡ ಅವನ ಜೊತೆ ಸೇರಿದ. ವಜೀರ್‌ಖಾನ್ ಮತ್ತು ಸಚ್ಚ ನಂದ ಜೊತೆಯಾಗಿರುವನ್ನು ಕಂಡ ಸಿಖ್ ಸೈನಿಕರು ಸಮರೋತ್ಸಾಹದಿಂದ ಅವರೆಡೆಗೆ ನುಗ್ಗಿ ಶತ್ರು ಸೈನಿಕರನ್ನು ಸದೆ ಬಡಿಯತೊಡಗಿದರು. ಘಾತವನ್ನು ತಾಳಲಾರದೆ ವಜೀರ್ ಖಾನನ ಸೈನಿಕರು ಯುದ್ಧ ಭೂಮಿಯಿಂದ ಓಡಲು ತೊಡಗಿದರು. ಕೆಲವು ಸಿಖ್ ಸೈನಿಕರು ಅವರನ್ನು ಅಟ್ಟಿಸಿಕೊಂಡು ಹೋದರು. ಆದರೆ ಬೆನ್ನು ತಿರುಗಿಸಿ ಓಡುತ್ತಿದ್ದ ಶತ್ರುಗಳನ್ನು ಕೊಲ್ಲದೆ ಅವರ ಜೀವ ಉಳಿಸಿದರು. ಅವರು ತೊರೆದ ಕುದುರೆ ಮತ್ತು ಶಸ್ತ್ರಾಸ್ತ್ರಗಳು ಸಿಖ್ ಸೈನಿಕರ ವಶವಾದವು.

ಇದಾದ ನಂತರ ಹಲವಾರು ಸರ್ಹಿಂದ್‌ನ ಸೈನಿಕರು ಮುಂದಿನ ಸಾಲಿನಿಂದ ಹಿಂದೆಗೆದರು. ಈ ಹೋರಾಟದ ಸಮಯದಲ್ಲಿ ಬಜ್‌ಸಿಂಗ್ ಮತ್ತು ಸಚ್ಚ ನಂದ್ ಮುಖಾಮುಖಿಯಾದರು. ಬಜ್‌ಸಿಂಗ್‌ನನ್ನು ನೋಡುತ್ತಿದ್ದಂತೆ ಸಚ್ಚ ನಂದ್ ಭಯಭೀತನಾದ. ಸಾವನ್ನು ಕಂಡವನಂತೆ ನಡುಗಹತ್ತಿದ. ಹೇಡಿ ಸಚ್ಚ ನಂದ್ ತಕ್ಷಣವೇ ಪರಾರಿಯಾಗಿ ಸರ್ಹಿಂದ್ ತಲುಪುವವರೆಗೆ ಹಿಂದಿರುಗಿ ನೋಡಲಿಲ್ಲ.

ವಜೀರ್‌ಖಾನ್(8) ಇನ್ನೂ ಅಲ್ಲಿಯೇ ಇದ್ದ. ತನ್ನ ಆನೆಯ ಮೇಲೆ ಕುಳಿತು ಮುಂದಿನ ಸಾಲಿನಲ್ಲಿ ಸಕ್ರಿಯವಾಗಿದ್ದ. ಬಜ್‌ಸಿಂಗ್ ಮತ್ತು ಫತೇಸಿಂಗ್ ಆತನನ್ನು ನೋಡಿದ ಕೂಡಲೇ ಆತನೆಡೆಗೆ ಮುನ್ನುಗ್ಗಿ ದಾಳಿ ಮಾಡತೊಡಗಿದರು. ವಜೀರ್‌ಖಾನ್ ವೀರಾವೇಶದಿಂದ ಹೋರಾಡಿದರೂ ಅವರೊಡನೆ ಕೈ ಕೈ ಮಿಲಾಯಿಸಿ ಹತನಾದ.

ಕೆಲವು ಸಿಖ್ ಸೈನಿಕರು ಮಲೆರ್‌ಕೊಟ್ಲದ ಶೇರ್ ಮಹಮ್ಮದ್ ಖಾನ್‌ನನ್ನು ಹುಡುಕಿ ಹೋದರು. ಕೇವಲ ಎರಡು ದಿನಗಳ ಹಿಂದೆ ಆತ ಬೆಹ್ಲೋಲ್‌ಪುರದ ಹತ್ತಿರ ಮಾಜ್ಹಾ ಸಿಖ್ ಸೈನಿಕರ ವಿರುದ್ಧ ಹೋರಾಡಿ ತನ್ನ ಸೋದರರನ್ನು ಮಕ್ಕಳನ್ನು ಕಳೆದುಕೊಂಡಿದ್ದ. ತಾನೂ ಗಾಯಗೊಂಡಿದ್ದ. ಇಲ್ಲಿ ಆತ ಚಪ್ಪರ್ ಚರಿಯಲ್ಲಿ ಎರಡನೇ ದಂಡನಾಯಕನಾಗಿದ್ದ. ವಜೀರ್‌ಖಾನ್ ಸತ್ತ ನಂತರ ಸೈನ್ಯದ ಮುಂದಿನ ಸಾಲಿಗೆ ಬಂದು ಹೋರಾಡಿ ಆತನೂ ಹತನಾದ. ಅವನ ತಮ್ಮ ಖ್ವಾಜಾ ಅಲಿ ಸಹ ಆತನನ್ನು ಹಿಂಬಾಲಿಸಿದ(9). ಉಳಿದ ಸರ್ಹಿಂದ್ ಸೈನಿಕರು ಶರಣಾಗಿ ಪ್ರಾಣ ಭಿಕ್ಷೆ ಬೇಡಿದರು. ಅದಕ್ಕೆ ಸಿಖ್ ಸೈನಿಕರು "ನೀವು ಚಿಂತಿಸುವ ಅಗತ್ಯವಿಲ್ಲ. ಶರಣಾದವರ ಮೇಲೆ ನಾವು ದಾಳಿ ಮಾಡುವುದಿಲ್ಲ" ಎಂದು ಅಭಯ ನೀಡಿದರು. ಸಿಖ್ ಸೈನಿಕರು ಅದರ ಶಸ್ತ್ರಗಳನ್ನೆಲ್ಲ ವಶಪಡಿಸಿಕೊಂಡು ಮುಕ್ತವಾಗಿ ಹೋಗಲು ಬಿಟ್ಟರು(10). ಮಧ್ಯಾಹ್ನದ ವೇಳೆಗೆ ಸರ್ಹಿಂದ್ ಸೈನ್ಯ ಸಂಪೂರ್ಣ ಧೂಳಿಪಟವಾಯಿತು(11).

**ವಜೀರ್‌ಖಾನ್‌ನನ್ನು ಹೇಗೆ ಕೊಂದರು:** ವಜೀರ್‌ಖಾನ್ ಸತ್ತ ಬಗ್ಗೆ ಅನೇಕ ಬೇರೆ ಬೇರೆ ವಿವರಗಳಿವೆ. ಖಾಫಿಖಾನ್ ಪ್ರಕಾರ ವಜೀರ್‌ಖಾನ್‌ಗೆ ಗುಂಡು ತಗುಲಿದ್ದರಿಂದ ಸತ್ತ. ಅವನ

ಪ್ರಕಾರ ಶೇರ್ ಮಹಮ್ಮದ್ ಖಾನ್ ಬಿನೋದ್ ಸಿಂಗ್ ಮೇಲೆ ಆಕ್ರಮಣ ಮಾಡಿದ. ಆದರೆ ಅದೇ ವೇಳೆ ಒಂದು ಗುಂಡು ವಜೀರ್ ಖಾನ್‌ಗೆ ಬಡಿಯಿತು. ಶೇರ್ ಮಹಮ್ಮದ್ ಖಾನ್ ನೆರವು ನೀಡಲು ವಜೀರ್‌ಖಾನ್‌ನತ್ತ ಧಾವಿಸಿದ[12].

ಕನ್ಹಯ್ಯಲಾಲ್ ಪ್ರಕಾರ ಸಹ ವಜೀರ್‌ಖಾನ್ ಗುಂಡೇಟಿನಿಂದಲೇ ಸತ್ತ[13]. ಆದರೆ ಲತೀಫ್‌ಖಾನ್ ಪ್ರಕಾರ ಆತ ಬಾಣದಿಂದ ಹತನಾದ[14]. ಮೀರ್ ಅಶನ್ ಇಜಾದ್ ಶಹನಾಮದಲ್ಲಿ ಹೇಳುವ ಪ್ರಕಾರ ಬಂದಾ ಸಿಂಗ್‌ನನ್ನು ನೋಡಿದ ವಜೀರ್‌ಖಾನ್ ಆತನ ಮೇಲೆ ಆಕ್ರಮಣ ಮಾಡಲು ಮುನ್ನುಗ್ಗಿದ. ಇದನ್ನು ಗಮನಿಸಿದ ಬಜ್ ಸಿಂಗ್ ತನ್ನ ಕುದುರೆಯನ್ನು ಚಲಾಯಿಸಿ ಬಂದಾ ಸಿಂಗ್ ಮತ್ತು ವಜೀರ್ ಖಾನ್ ನಡುವೆ ತಂದ. ವಜೀರ್ ಖಾನ್ ತನ್ನ ಈಟಿಯನ್ನು ಬಜ್ ಸಿಂಗ್‌ನತ್ತ ಎಸೆದ. ಬಜ್‌ಸಿಂಗ್ ಅದನ್ನು ಕೈಯಲ್ಲಿ ಹಿಡಿದು ಮತ್ತೆ ವಜೀರ್‌ಖಾನ್‌ನತ್ತ ಎಸೆದ. ಈಟಿಯು ವಜೀರ್ ಖಾನನ ಕುದುರೆಗೆ ತಗುಲಿತು. ಆತ ಕುದುರೆಯಿಂದ ನೆಲಕ್ಕೆ ಬಿದ್ದ. ಈ ಹಂತದಲ್ಲಿಯೂ ವಜೀರ್‌ಖಾನ್ ಬಿಟ್ಟ ಬಾಣ ಬಜ್‌ಸಿಂಗ್‌ನ ತೋಳನ್ನು ಬೇಧಿಸಿತು. "ಮತ್ತೆ ವಜೀರ್‌ಖಾನ್ ಖಡ್ಗವನ್ನು ಹಿಡಿದು ಬಜ್‌ಸಿಂಗ್ ಮೇಲೆ ಏರಿ ಹೋದ. ವಜೀರ್‌ಖಾನ್‌ನ ಖಡ್ಗ ಬಜ್‌ಸಿಂಗ್ ದೇಹವನ್ನು ಮುಟ್ಟುವ ಮೊದಲೇ ಫತೇ ಸಿಂಗ್ ತನ್ನ ಖಡ್ಗವನ್ನು ಬಳಸಿ ವಜೀರ್ ಖಾನ್‌ನ ಬಲಗೈ ಮುರಿದು ಹೋಗುವಂತೆ ಏಟು ಕೊಟ್ಟ. ಮತ್ತೊಂದು ಖಡ್ಗ ಪ್ರಹಾರದಿಂದ ಆತನ ತಲೆಯನ್ನು ಕತ್ತರಿಸಿದ. ಯಾರ್ ಮಹಮ್ಮದ್ ತನ್ನ "ದಸ್ತೂರ್–ಉಲ್–ಇನ್ಶಾ"ದಲ್ಲಿ ಹೀಗೆ ಬರೆಯುತ್ತಾನೆ– "ವಜೀರ್ ಖಾನನ ಶಿರವು ಭರ್ಜಿಯೊಂದರಲ್ಲಿ ತೂಗಾಡುತ್ತಿದ್ದರೆ ಅವನ ದೇಹವನ್ನು ಗಾಡಿಯೊಂದಕ್ಕೆ ಕಟ್ಟಿಸಿ ಸರ್ಹಿಂದ್‌ವರೆಗೆ ಎಳೆದುಕೊಂಡು ಹೋಗಲಾಯಿತು."

**ಹಾನಿಗೊಳಗಾದವರ ಸಂಖ್ಯೆ:** ಜನಸಾಮಾನ್ಯರ ನಡುವೆ ಪ್ರಚಲಿತವಿರುವ ನಂಬಿಕೆಯಂತೆ ಈ ಯುದ್ಧದಲ್ಲಿ 50 ಸಾವಿರ ಮುಸ್ಲಿಂ ಸೈನಿಕರು ಮತ್ತು 30 ಸಾವಿರ ಸಿಖ್ ಸೈನಿಕರು ಮಡಿದರು. ಇದು ನಂಬಲಸಾಧ್ಯವಾದ ಸಂಖ್ಯೆ. ಐದು ಸಾವಿರ ಮುಸ್ಲಿಂ ಸೈನಿಕರು ಮತ್ತು ಮೂರು ಸಾವಿರ ಸಿಖ್ ಸೈನಿಕರು ಹತರಾಗಿರುವುದನ್ನು ನಂಬಬಹುದು. ಗಾಯಾಳುಗಳ ಸಂಖ್ಯೆ ಇದರಲ್ಲಿ ಸೇರಿಲ್ಲ. ಈ ಯುದ್ಧದಲ್ಲಿ ಹುತಾತ್ಮರಾದ ಪ್ರಮುಖ ವ್ಯಕ್ತಿಗಳಲ್ಲಿ ಭಾಯ್ ಬಜ್ಜಾರ್‌ಸಿಂಗ್ ಒಬ್ಬರು. ಅವರು ಗುರು ಗೋವಿಂದ್ ಸಿಂಗ್ ಅವರಿಗೆ ಸಮರಕಲೆಯನ್ನು ಹೇಳಿಕೊಟ್ಟವರು. ಈ ಯುದ್ಧದಲ್ಲಿ ಸಿಖ್ ಸೈನಿಕರು 45 ದೊಡ್ಡ ಮತ್ತು ಸಣ್ಣ ಫಿರಂಗಿಗಳನ್ನು ವಶಪಡಿಸಿಕೊಂಡರು. ಅಲ್ಲದೆ ಹನ್ನೆರಡು ಆನೆಗಳು, ನೂರಾರು ಕುದುರೆಗಳು, ಅಸಂಖ್ಯಾತ ಬಂದೂಕು, ಖಡ್ಗ ಮೊದಲಾದವುಗಳನ್ನು ಸ್ವಾಧೀನಪಡಿಸಿಕೊಂಡರು.

ಯುದ್ಧ ಮುಗಿದ ತರುವಾಯ ಸಿಖ್ ಸೈನಿಕರು ಹತರಾದವರಿಗೆ ಸಾಮೂಹಿಕವಾಗಿ ಸಂಸ್ಕಾರ ಮಾಡಿದರು. ಗಾಯಗೊಂಡವರಿಗೆ ಚಿಕಿತ್ಸೆ ನೀಡಿದರು. ಇದೇ ವೇಳೆಯಲ್ಲಿ ವಿಜಯಶಾಲಿಯಾದ ಸಿಖ್ ಸೈನಿಕರು ದೇವರನ್ನು ಸ್ತುತಿಸಿದರು. ಸಂಸ್ಕಾರದ ನಂತರ ಸೈನಿಕರು ಸರ್ಹಿಂದ್ ಕಡೆ ಹೊರಟರು. ಶವಸಂಸ್ಕಾರವನ್ನು ಮುಗಿಸಿ, ಭಸ್ಮ ವಿಸರ್ಜಿಸಲು ಕೆಲವರನ್ನು ಅಲ್ಲಿಯೇ ಉಳಿಸಿದರು.

ಇಪ್ಪತ್ತು ಕಿ.ಮೀ. ಕ್ರಮಿಸಿದ ನಂತರ ಸಿಖ್ ಸೈನ್ಯ ಸರ್ಹಿಂದ್ ತಲುಪಿತು. ಇನ್ನೂ ಬೆಳಗಾಗಿರಲಿಲ್ಲ. ಕೋಟೆಯಿಂದ ಆವೃತವಾಗಿದ್ದ ನಗರದ ಬಾಗಿಲುಗಳಿಗೆ ಒಳಗಿನಿಂದ ಅಗುಳಿ ಹಾಕಿದ್ದರು. ಹಾಗಾಗಿ ಅವರಿಗೆ ಪ್ರವೇಶ ಸಿಗಲಿಲ್ಲ. ಅವರು ಒಳಪ್ರವೇಶಿಸಲು ಬಾಗಿಲುಗಳನ್ನು ಮುರಿಯಲು ಸರ್ಹಿಂದ್

ಕೋಟೆಯ ಕಾವಲು ಪಡೆಯೊಡನೆ ಹೋರಾಡಿದರು. ಸತ್ತ ವಜೀರ್‌ಖಾನನ ಶವವನ್ನು ಸಿಕ್ಖರು ತಮ್ಮ ಜೊತೆ ತಂದಿದ್ದರು. ವಜೀರ್‌ಖಾನನ ರುಂಡ ಮುಂಡವನ್ನು ಜನರಿಗೆ ತೋರಿಸುತ್ತಾ ಬೀದಿಗಳಲ್ಲಿ ಒಂದು ಸುತ್ತು ಬಂದರು. ಬಳಿಕ ಕ್ರೂರ ರಾಜನಿಗೆ ಸಿಗುವ ಅಂತ್ಯವನ್ನು ಜನರು ತಮ್ಮ ಕಣ್ಣಿಂದಲೇ ನೋಡಲು ಅವನ ರುಂಡ ಮುಂಡವನ್ನು ಮರವೊಂದಕ್ಕೆ ನೇತಹಾಕಿದರು. ಅದು ಬಿರುಬೇಸಗೆಯ ಕಾಲ. ವಜೀರ್‌ಖಾನ್‌ನ ದೇಹ ಕೊಳೆಯಲಾರಂಭಿಸಿ ವಾಸನೆ ಹೊಡೆಯತೊಡಗಿತು. ರಣಹದ್ದುಗಳು ತಮ್ಮ ಪಾಲಿಗಾಗಿ ಹಾರಿ ಬಂದಾವು. ಈ ದೃಶ್ಯ ಸರ್ಹಿಂದ್ ಜನರಲ್ಲಿ ಭೀತಿ ಮೂಡಿಸಿತು. ಸಿಖ್ ಸೈನ್ಯದ ಕ್ಷಮೆ ಕೋರಿದರು. ಸಿಖ್ ಸೈನಿಕರು ಯಾವುದೇ ನಿರಪರಾಧಿ ಜನರಿಗೆ ತೊಂದರೆ ಕೊಡುವುದಿಲ್ಲ. ಆದರೆ ಪ್ರಜಾ ಪೀಡಕರಿಗೆ ಶಿಕ್ಷೆ ನೀಡುತ್ತಾರೆಂಬ ಸಂದೇಶವನ್ನು ಬಂದಾ ಸಿಂಗ್ ಕಳುಹಿಸಿದ.

ಈಗ ಸಿಕ್ಖರು ತಮ್ಮ ಗಮನವನ್ನು ಕೋಟೆಯತ್ತ ಹರಿಸಿದರು. ಆದರೆ ಒಳಗಿದ್ದ ಫಿರಂಗಿಗಳು ಸಿಕ್ಖರತ್ತ ಮೊಳಗಲಾರಂಭಿಸಿದವು. ಸುಮಾರು 500 ಸಿಖ್ ಸೈನಿಕರು ಹತರಾದರು. ಆಗ ಕೋಟೆಯ ಪ್ರವೇಶ ಇನ್ನೂ ಸಾಕಷ್ಟು ದಿನ ಸಾಧ್ಯವಿಲ್ಲವೆಂಬುದು ಸಿಖ್ ಸೈನಿಕರಿಗೆ ಮನವರಿಕೆಯಾಯಿತು. ಅವರು ಹತ್ತಿರದ ಇಟ್ಟಿಗೆ ಭಟ್ಟಿಯ ಹತ್ತಿರ ಫಿರಂಗಿಯೊಂದನ್ನು ಸ್ಥಾಪಿಸಿ, ತಮ್ಮತ್ತ ಫಿರಂಗಿ ಹಾರಿಸುತ್ತಿದ್ದ ಕೋಟೆಯ ಭಾಗಕ್ಕೆ ಗುಂಡು ಹಾರಿಸಿದರು. ಫಿರಂಗಿ ನಿರ್ವಹಿಸುತ್ತಿದ್ದ ಸರ್ಹಿಂದ್‌ನ ಸೈನಿಕರು ಹತರಾದರು. ಅಲ್ಲಿಂದಾಚೆಗೆ ಕೋಟೆಯ ಬಾಗಿಲಿಗೆ ಫಿರಂಗಿ ಹಾರಿಸತೊಡಗಿದರು. ಸಾಕಷ್ಟು ಗುಂಡಿನ ದಾಳಿ ಮಾಡಿದ ನಂತರ ಒಂದು ಬಾಗಿಲು ಮುರಿದುಬಿತ್ತು. ಸಿಕ್ಖರು ಕೋಟೆಯ ಪ್ರವೇಶ ಮಾಡಿದರು. ಇಲ್ಲಿ ರಾಜನ ಕೆಲವು ನಿಷ್ಠಾವಂತ ಸೈನಿಕರು ಪ್ರತಿರೋಧವೊಡ್ಡಿದರು. ಆದರೆ ಅವರೆಲ್ಲ ಬೇಗನೆ ಬಲಿಯಾದರು. ಉಳಿದವರು ಶರಣಾಗತರಾದರು. ಅವರನ್ನು ಬಂಧಿಸಲಾಯಿತು.

ಈಗ ಸರ್ಹಿಂದ್ ಸಂಪೂರ್ಣ ಸಿಕ್ಖರ ವಶವಾಯಿತು. ವಜೀರ್‌ಖಾನ್ ಸತ್ತ. ಅವನ ಮಗ ದೆಹಲಿಗೆ ಓಡಿಹೋದ. ಉಳಿದ ಅಧಿಕಾರಿಗಳು ಹತರಾದರು ಇಲ್ಲವೇ ಬಂಧನಕ್ಕೊಳಗಾದರು. ತಪ್ಪಿಸಿಕೊಂಡಿದ್ದ ಒಬ್ಬನೇ ವ್ಯಕ್ತಿಯೆಂದರೆ ಸಚ್ಚ ನಂದ್. ಆತ ಚಪ್ಪರ್ ಚಿರಿಯ ಯುದ್ಧ ಭೂಮಿಯಿಂದ ಹಿಂದಿನ ದಿನವೇ ಓಡಿಹೋಗಿದ್ದ. ಆತ ನಗರದ ಯಾವುದೋ ಒಂದು ಕಟ್ಟಡದಲ್ಲಿ ಅವಿತಿರಬಹುದೆಂದು ಭಾವಿಸಲಾಯಿತು.

ಆ ದಿನ ಸಾಯಂಕಾಲ ಸರ್ಹಿಂದ್‌ನ ಸ್ಥಳೀಯ ಗಣ್ಯ ವ್ಯಕ್ತಿಗಳ ಸಭೆಯೊಂದನ್ನು ಬಂದಾ ಸಿಂಗ್ ಏರ್ಪಡಿಸಿದ. ಅಲ್ಲಿ ನಗರದ ಯಾವೊಬ್ಬ ನಿರಪರಾಧಿಯೂ ಭಯಪಡುವ ಅಗತ್ಯವಿಲ್ಲ; ಆದರೆ ಯಾರೊಬ್ಬರೂ ಅನ್ಯಾಯ ಮಾಡಲು ಬಿಡುವುದಿಲ್ಲ; ಹಾಗೆಯೇ ಯಾವುದೇ ಅಪರಾಧಿಯನ್ನು ಶಿಕ್ಷಿಸದೆ ಬಿಡುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಿದ. ಸಾಮಾನ್ಯ ಜನರು ನಿಟ್ಟುಸಿರಿಟ್ಟರು. ಬಹುತೇಕ ಜನರು ಸಿಕ್ಖರಿಗೆ ಸಹಕಾರ ನೀಡತೊಡಗಿದರು. ಒಬ್ಬನಂತೂ ಸಚ್ಚಾ ನಂದನ ಅಡುಗುದಾಣದ ಬಗ್ಗೆ ಮಾಹಿತಿ ನೀಡಿದ. ಚಪ್ಪರ್ ಚಿರಿಯಿಂದ ಓಡಿಹೋದ ನಂತರ ಸಚ್ಚನಂದ್ ಸರ್ಹಿಂದ್ ತಲುಪಿದ. ಅಲ್ಲಿ ತನ್ನ ಸಂಪತ್ತನ್ನು ಉಳಿಸಿಕೊಳ್ಳುವ ಅಗತ್ಯವಿದ್ದುದರಿಂದ ಅಲ್ಲಿಂದಾಚೆಗೆ ಹೋಗಲಿಲ್ಲ. ಬೇಗನೆ ಅವನನ್ನು ದಸ್ತಗಿರಿ ಮಾಡಿದರು. ಮೂಗಿಗೆ ಮೂಗುದಾರ ಕಟ್ಟಿ, ಕುತ್ತಿಗೆಗೆ ಹಗ್ಗ ಹಾಕಿ ಪ್ರಾಣಿಯನ್ನು ದರದರನೆ ಎಳೆಯುವಂತೆ ಅವನನ್ನು ಬೀದಿಯಲ್ಲಿ ಮೆರವಣಿಗೆ ಮಾಡಿದರು. ಆತ ಜನರಲ್ಲಿ ಭಿಕ್ಷೆ ಬೇಡುವಂತೆ ಮಾಡಲಾಯಿತು. ಅವನನ್ನು ಹಾಗೆ ಬೀದಿಯಲ್ಲಿ ಮೆರವಣಿಗೆ ಮಾಡುತ್ತಿರುವಾಗ ಹಿಂದೆ ಆತನ ಕ್ರೂರ ದಬ್ಬಾಳಿಕೆಗೆ ಒಳಗಾಗಿದ್ದ ಸಾಮಾನ್ಯ ಹಿಂದೂ ಮತ್ತು

ಮುಸ್ಲಿಮರು ಅವನತ್ತ ಕಲ್ಲು ತೂರಿದರು. ಕಲ್ಲಿನ ಹೊಡೆತ ಮತ್ತು ಹಿಂಸೆಯಿಂದ ಸಾಯಂಕಾಲದ ವೇಳೆಗೆ ಆತ ಅಸುನೀಗಿದ.

ಸಚ್ಚನಂದ ಅಪಾರ ಸಂಪತ್ತನ್ನು ಲೂಟಿ ಮಾಡಿ ಕೂಡಿಟ್ಟಿದ್ದ. ಅದೆಲ್ಲವನ್ನು ವಶಪಡಿಸಿಕೊಂಡು ಸಿಖ್ ಖಜಾನೆಗೆ ತುಂಬಿದರು. ಮಹಮ್ಮದ್ ಖಾಸಿಂ ಈ ಬಗ್ಗೆ ಬರೆಯುತ್ತಾರೆ "ಈ ದಿನಕ್ಕಾಗಿಯೇ ಅವ ಅಷ್ಟೊಂದು ಸಂಪತ್ತನ್ನು ಕೂಡಿಟ್ಟಿದ್ದನೆಂದು ಕಾಣುತ್ತದೆ..... ಬಡ ಜನರ ಮೇಲೆ ವಜೀರ್‌ಖಾನ್ ನಡೆಸದ ದಬ್ಬಾಳಿಕೆಯ ರೀತಿಯೇ ಇರಲಿಲ್ಲ. ಆತ ಬಿತ್ತಿದಂತೆಯೇ ಬೆಳೆ ಬಂತು."

ಸಚ್ಚ ನಂದನ ಕುಟುಂಬದವರಿಗೂ ಶಿಕ್ಷೆಯಲ್ಲಿ ಪಾಲು ಸಿಕ್ಕಿತು. ಅವರ ವೈಭವದ ಉಡುಪುಗಳನ್ನು ಕಳಚಿ ಒಳ ಉಡುಪಿನಲ್ಲಿರಿಸಿ, ಪಟ್ಟಣದ ಬೀದಿಗಳಲ್ಲಿ ಭಿಕ್ಷೆ ಎತ್ತುವಂತೆ ಮಾಡಲಾಯಿತು. ಅವರಿಗೆ ಒಂದು ಕವಡೆ (ಒಂದು ಪೈಸೆಯ ಇಪ್ಪತ್ತರಲ್ಲಿ ಒಂದು ಭಾಗ)ಗಿಂತಲೂ ಹೆಚ್ಚು ಕೊಡಬಾರದೆಂದು ಜನರಿಗೆ ಮೊದಲೇ ಸೂಚನೆ ಕೊಡಲಾಯಿತು. ಎಲ್ಲ ಅಪರಾಧಿಗಳಿಗೆ ಮರಣದಂಡನೆ ವಿಧಿಸಲಾಯಿತು. ನಂದ ಸಚ್ಚ ಮತ್ತು ವಜೀರ್‌ಖಾನ್ ಸ್ವರ್ಗದಂತಿದ್ದ ಮಹಲುಗಳು ಕಾಗೆಗಳ ಆಡೊಂಬಲವಾಯಿತು[16].

**ಸರ್ಹಿಂದ್ ಪತನದ ಸುದ್ದಿ ಕೇಳಿದ ಬಹದ್ದೂರ್ ಶಾ**

ಚಕ್ರವರ್ತಿ ಬಹದ್ದೂರ್ ಶಾ 1710 ಮೇ 20ರಂದು ದಕ್ಷಿಣದಿಂದ ಮರಳಿ ದೆಹಲಿಗೆ ಬರುತ್ತಿದ್ದ ಹಾದಿಯಲ್ಲಿ ಸರ್‌ಹಿಂದ್ ನಗರ ಸಿಕ್ಖರ ವಶವಾದ ಹಾಗೂ ವಜೀರ್‌ಖಾನ್ ನಿಧನನಾದ ಸುದ್ದಿ ತಲುಪಿತು. ಸಿಖ್ ಬಂಡಾಯವನ್ನು ದಮನ ಮಾಡಲು ಆತ ಲಾಹೋರ್ ಮತ್ತು ದೆಹಲಿಯ ಮುಖ್ಯಸ್ಥರಿಗೆ ಆಜ್ಞೆ ಮಾಡಿದ[17].

**ಚಪ್ಪರ್ ಚಿರಿ ಯುದ್ಧದ ಸರಿಯಾದ ದಿನಾಂಕ:** ಇರ್ವಿನ್[18] ಅವರು ಈ ಯುದ್ಧವು ನಡೆದ ದಿನಾಂಕವನ್ನು 24 ರಬ್ಬಿ–ಉಲ್–ಅವ್ವಲ್ ಎಂದು ಉಲ್ಲೇಖಿಸಿ 1710ರ ಮೇ 12 ಎಂದು ತಪ್ಪಾಗಿ ಲೆಕ್ಕಾಚಾರ ಮಾಡಿದ್ದಾರೆ (24 ರಬ್ಬಿ–ಐ–ಎನ್ನುವುದು ಮೇ 12ಕ್ಕೆ ಸಮಾನವದುದು) ಬಹುಶಃ ಆತ ಅಕ್ಬರಾತ್–ಇ–ದರ್ಬಾರ್–ಇ–ಮೌಲದಲ್ಲಿರುವ ದಿನಾಂಕರಹಿತ ನಮೂದನ್ನು ಆಧರಿಸಿರುವಂತೆ ಕಾಣುತ್ತದೆ. ಇವು ಮುಘಲ್ ಆಸ್ಥಾನದ ನಡವಳಿಗಳ ನಿರೂಪಣೆಯೇ ಹೊರತು ದಿನಚರಿಯ ವಿವರಗಳಲ್ಲ. ಇದನ್ನು ಅನುವಾದಿಸಿದವರು ಹಿಜ್ರಿ ಶಕೆಯನ್ನು ಗ್ರೆಗೋರಿಯನ್ ಶಕೆಗೆ ಪರಿವರ್ತಿಸುವಾಗ ತಪ್ಪೆಸಗಿರುವಂತೆ ಕಾಣುತ್ತದೆ. ಅಕ್ಬರ್–ಇ–ದರ್ಬಾರ್–ಇ–ಮೌಲ[19]ದಲ್ಲಿರುವ ನಮೂದಿನ ಪ್ರಕಾರ ಈ ಯುದ್ಧದ ವರದಿಯನ್ನು ಬಹದ್ದೂರ್ ಶಾಗೆ 1710 ಮೇ 20 ರಂದು ಆತ ಬಹಸುವಿನಲ್ಲಿರುವಾಗ ನೀಡಿದೆ[20]. ಅವನಿಗೆ ಸುದ್ದಿ ತಲುಪಲು 8 ದಿನ ಬೇಕಾಯಿತು. ಹಾಗಾಗಿ 1770ನೇ ಮೇ 12 ರಂದು ಯುದ್ಧ ನಡೆದಿದೆಯೆಂಬುದು ಸರಿಯಾದ ದಿನಾಂಕ[21].

**ಮುಸ್ಲಿಮರ ಬಗ್ಗೆ ಬಂದಾ ಸಿಂಗ್ ತೋರಿದ ವರ್ತನೆ**

ಗೆಲುವು ಸಾಧಿಸಿದ ನಂತರ ಸಿಖ್ ಸೈನಿಕರು ಸಿಖ್ ನೀಲಿ ಬಾವುಟವನ್ನು[22] ಕೋಟೆಯ ಮೇಲ್ಭಾಗದಲ್ಲಿ ಹಾರಿಸಿದರು[23]. ಬಂದಾ ಸಿಂಗ್ ಸರ್ಹಿಂದ್‌ನ ರಾಜ್ಯಪಾಲನಾಗಿ ಬಜ್‌ಸಿಂಗ್ ಬಂಗೇಶ್ವರಿ ಮತ್ತು ಅವನ ಬಲಗೈ ಬಂಟನಾಗಿ ಸಲೌದಿಯ ಅಲಿ ಸಿಂಗ್‌ನನ್ನು ನೇಮಿಸಿದ. ಅಪರಾಧಿಗಳನ್ನು ಕ್ರೂರ ಆಡಳಿತಗಾರರಿಗೆ ಶಿಕ್ಷೆ ವಿಧಿಸಿದ. ಬಂದಾ ಸಿಂಗ್ ನಿರಪರಾಧಿಗಳಿಗೆ ತೊಂದರೆ ನೀಡಲಿಲ್ಲ. ಯಾರ ಮೇಲೂ ಸೇಡು ತೀರಿಸಿಕೊಳ್ಳಲಿಲ್ಲ. ಗುರು ಅರ್ಜುನ್ ಮತ್ತು

ಗುರು ತೇಗ್ ಬಹದ್ದೂರ್‌ರವರ ತಲೆ ಕತ್ತರಿಸಲು ಮುಘಲ್ ಸಾಮ್ರಾಟರನ್ನು ಪ್ರಚೋದಿಸಿ, ಅವರ ಸಾವನ್ನು ಸಂಭ್ರಮಿಸಿದ ನಕ್ಷಬಂದಿ ಪಂಥದ ಶೇಖ್‌ಗಳನ್ನು ಆತ ಶಿಕ್ಷಿಸಲಿಲ್ಲ.

ಹಾಗೆ ನೋಡಿದರೆ ಸಿಕ್ಖರ ಯುದ್ಧ ವ್ಯಕ್ತಿಯೊಬ್ಬರನ್ನು ಗುರಿಯಾಗಿಸಿಕೊಂಡಿರಲಿಲ್ಲ. ಅದು ಅನ್ಯಾಯ, ಕ್ರೌರ್ಯ ಮತ್ತು ಅಮಾನವೀಯತೆಯ ವಿರುದ್ಧ ಸಾರಿದ ಯುದ್ಧವಾಗಿತ್ತು. ಆದುದರಿಂದಲೇ ಬಂದಾ ಸಿಂಗ್ ಮುಸ್ಲಿಮರ ಯಾವುದೇ ಪವಿತ್ರ ಸ್ಥಾನಗಳನ್ನು ಅಪವಿತ್ರಗೊಳಿಸಲಿಲ್ಲ. ಈಗಲೂ ಸಹ ಹಳೆಯ ಸರ್ಹಿಂದ್‌ನಲ್ಲಿ ಅನೇಕ ಮುಸ್ಲಿಂ ಪವಿತ್ರ ಸ್ಥಳಗಳು, ಸ್ಮಾರಕಗಳು ಹಾಗೆಯೇ ಉಳಿದಿವೆ. ಇದರಲ್ಲಿ ಮುಸ್ಲಿಮರು ಅತ್ಯಂತ ಪವಿತ್ರವೆಂದು ಭಾವಿಸುವ ರೋಜಾ ಶರೀಫ್ (ಶೇಖ್ ಅಹ್ಮದ್ ಸರ್ಹಿಂದಿಯ ಗೋರಿ), ಔರಂಗಜೇಬ್ ನಿರ್ಮಿಸಿದ ಲಾಲ್ ಮಸ್ಜಿದ್, ಸದ್ನದ ಮಸೀದಿ ಉಸ್ತಾದ್ ಮತ್ತು ಶಾಗಿರ್ದ್ ಅವರ ಮಕ್ಬರ್‌ಗಳು (ಗೋರಿಗಳು) ಮೇಯಿರ್–ಇ–ಮಿರಾನ್ ಗೋರಿ ಮೊದಲಾದವು ಸೇರಿವೆ. ಈ ಸ್ಮಾರಕಗಳು ಶತ್ರುಗಳ ಧರ್ಮದ ಪವಿತ್ರ ಸ್ಥಳಗಳ ಬಗ್ಗೆ ಸಿಕ್ಖರಿಗೆ ಇದ್ದ ಗೌರವಕ್ಕೆ ಸಾಕ್ಷಿಯಾಗಿವೆ. ಸಿಕ್ಖರು ಮುಸ್ಲಿಂ ವಿರೋಧಿಗಳಾಗಿದ್ದರೆ, ತಮ್ಮ ಗುರುಗಳು ಮತ್ತು ಸಿಖ್ ಜನಾಂಗದ ವಿರುದ್ಧ ಕ್ರೂರವಾಗಿ ವರ್ತಿಸಲು ಕಾರಣರಾದ ಧರ್ಮಾಂಧ ಮುಸ್ಲಿಮರ ಸ್ಮಾರಕಗಳನ್ನಾದರೂ ನಾಶಮಾಡುತ್ತಿದ್ದರು.

**ಬಂದಾ ಸಿಂಗ್ ತನ್ನ ರಾಜಧಾನಿ ಲೋಹಗಡಕ್ಕೆ ಹೋಗಿದ್ದು**

ಸರ್ಹಿಂದ್‌ನ ರಾಜ್ಯಪಾಲನಾಗಿ ಬಜ್‌ಸಿಂಗ್‌ನನ್ನು ನೇಮಿಸಿದ ಬಂದಾ ಸಿಂಗ್, ತಾಣೇಸರದ ಆಡಳಿತವನ್ನು ರಾಮ್‌ಸಿಂಗ್ ಮತ್ತು ಬಿನೋದ್ ಸಿಂಗ್‌ಗೆ ವಹಿಸಿದ. ಅನಂತರ ಆತ ಸಿಖ್ ಸಾಮ್ರಾಜ್ಯದ ರಾಜಧಾನಿಯಾದ ಲೋಹಗಡಕ್ಕೆ ತೆರಳಿದ. ಆವರೆಗೆ ಸಂಗ್ರಹಿಸಿದ ಹಣವನ್ನೆಲ್ಲ ಆತ ಲೋಹಗಡಕ್ಕೆ ತಂದ. ಹಲವಾರು ಮೂಲಗಳ ಪ್ರಕಾರ, ಆ ಹಣ ಮೂರು ಕೋಟಿಯಷ್ಟಿತ್ತು. ಸರ್ಹಿಂದ್ ಖಜಾನೆಯಿಂದ 2 ಕೋಟಿ ಹಣ ಸಂಗ್ರಹವಾಯಿತೆಂದು ಕಮ್‌ವಾರ್ ಹೇಳುತ್ತಾನೆ. ಇದರಲ್ಲಿ ಸಚ್ಚ ನಂದನ ಅರಮನೆಯಿಂದ ಸಂಗ್ರಹಿಸಿದ ಹಣ ಸೇರಿಲ್ಲ[24]. ಅಕ್ಬರಾತ್–ಇ–ದರ್ಬಾರ್–ಇ–ಮುಲ್ಲದಲ್ಲಿರುವ ನಮೂದಿನ ಪ್ರಕಾರ ಲೋಹಗಡದ ಸಿಖ್ ಖಜಾನೆಯಲ್ಲಿ ಅಪಾರ ಮೊತ್ತದ ಚಿನ್ನದ ನಾಣ್ಯಗಳಿದ್ದವು. ಮುಘಲ್ ಸೈನಿಕರು 1710ನೇ ನವೆಂಬರ್ 30 ರಂದು ಲೋಹಗಡ ಕೋಟೆಯ ಮೇಲೆ ದಾಳಿಯಿಡುವ ಸುದ್ದಿಯನ್ನು ಕೇಳಿದ ಬಂದಾ ಸಿಂಗ್ ಈ ಚಿನ್ನದ ನಾಣ್ಯಗಳನ್ನು 40 ಒಂಟೆಗಳ ಮೇಲೆ ಸಾಗಿಸಿ ನಹನ್ ರಾಜನ ಬಳಿಗೆ ಕಳುಹಿಸಿದ[26]. ಮತ್ತೊಂದು ನಮೂದಿನ ಪ್ರಕಾರ "ಸಿಕ್ಖರು ರಾಜ್ಯ ಬೊಕ್ಕಸಕ್ಕೆ ಸೇರಬೇಕಾದ ತೆರಿಗೆ ಮತ್ತು ಬೆಳೆಯನ್ನು ಪಡೆದು ದಾಬರ್‌ಗೆ ಸಾಗಿಸುತ್ತಿದ್ದರು..... ಒಮ್ಮೆ ಮೂರು ನೂರು ಗಾಡಿಗಳಲ್ಲಿ ತುಂಬಿ ತೆಗೆದುಕೊಂಡು ಹೋದರು. ದಾರಿಯಲ್ಲಿ ಯಾರೂ ಅವರನ್ನು ತಡೆಯಲಿಲ್ಲ." ಈಗ ದೊಡ್ಡ ಜನವಸತಿಯಾದ ಲೋಹಗಡ ಕೋಟೆಯಲ್ಲಿ ಸೈನಿಕರು ಮತ್ತು ಅವರ ಕುಟುಂಬ ವಾಸಿಸುತ್ತಿತ್ತು. ಸಿಖ್ ರಾಜಧಾನಿಯು ಹತ್ತಾರು ಬೆಟ್ಟಗಳಲ್ಲಿ ಚದುರಿಹೋಗಿತ್ತು. ಪ್ರತಿಯೊಂದು ಬೆಟ್ಟದಲ್ಲಿಯೂ ಪ್ರತ್ಯೇಕವಾಗಿ ಹಲವಾರು ಮನೆಗಳಿದ್ದವು.

**ಸಿಖ್ ಆಳ್ವಿಕೆ ಮತ್ತು ಸಮಾನ ವ್ಯವಸ್ಥೆಯ ಘೋಷಣೆ**

ಸರ್ಹಿಂದ್‌ನ ಆಡಳಿತ ಮತ್ತು ಮೂಲಭೂತ ಸೌಲಭ್ಯಗಳನ್ನು ನಿಯಂತ್ರಣಕ್ಕೆ ತೆಗೆದುಕೊಂಡ ನಂತರ ಬಂದಾ ಸಿಂಗ್ 1710ರ ಮೇ 27 ರಂದು ಸಾರ್ವಜನಿಕ ದರ್ಬಾರ್ ನಡೆಸಿದ. ಸಾರ್ವಜನಿಕರು ನೆರೆದ ಮುಕ್ತ ದರ್ಬಾರಿನಲ್ಲಿ ಆತ ಸಿಖ್ ಆಳ್ವಿಕೆ "ಜನರ ಆಳ್ವಿಕೆ" ಎಂಬುದನ್ನು ಘೋಷಿಸಿದ.

ಉಳುವವನ ಒಡೆತನಕ್ಕೆ ಭೂಮಿ ಸೇರಿರುತ್ತದೆ. ಯಾವುದೇ ಜಮೀನುದಾರನಿಗೆ ಯಾರೂ ಜೀತದಾಳಲ್ಲ. ಎಲ್ಲ ರೈತರು ತಮ್ಮ ಉತ್ಪನ್ನದ ಮೂರನೇ ಒಂದರಷ್ಟು ಭಾಗವನ್ನು ಸಿಖ್ ಬೊಕ್ಕಸಕ್ಕೆ ನೀಡಬೇಕು (ವಜೀರ್ ಖಾನ್ ಆಳ್ವಿಕೆಯಲ್ಲಿ ಸಮಪಾಲು ಇತ್ತು) ಬಂದಾ ಸಿಂಗ್ ಊಳಿಗ ಪದ್ಧತಿಗೆ ಅಂತ್ಯ ಹಾಡಿದ. ಈಗ ಜಾಟರು ಭೂಮಿಯ ಒಡೆಯರಾದರು. ಅಂದರೆ ಸಂಪೂರ್ಣ ಸ್ವತಂತ್ರ ಭೂಒಡೆಯರು. ಒಬ್ಬ ಜಾಟ್ (ರೈತ) ಈಗ ದಲಿತನಲ್ಲ. ಈ ರೀತಿಯ ಸಮಾನತಾ ವ್ಯವಸ್ಥೆಯನ್ನು ಘೋಷಿಸಿದವರಲ್ಲಿ ಬಂದಾ ಸಿಂಗ್ ಮೊದಲಿಗ.

**ಮೊದಲ ಸಿಖ್ ನಾಣ್ಯ ಬಿಡುಗಡೆ**

ಇದಾದ ನಂತರ ಬಂದಾ ಸಿಂಗ್ ಗುರುಗಳ ಹೆಸರಿನಲ್ಲಿ ಸಿಖ್ ಸಾರ್ವಭೌಮತ್ವದ ಸಂಕೇತವಾಗಿ ಹೊಸ ನಾಣ್ಯವನ್ನು ಬಿಡುಗಡೆ ಮಾಡಿದ. ಸಿಖ್ ನಾಣ್ಯದ ಮೇಲೆ ಮುಂದಿನಂತೆ ಬರಹವಿತ್ತು.

"ಎರಡೂ ಜಗತ್ತಿನ ಗುರುಗಳ ಆಶೀರ್ವಾದದಿಂದ ಪ್ರಕಟಿಸಿದೆ. ಗುರುನಾನಕ್‌ರವರ ಖಡ್ಗ ಸಕಲಕ್ಕೂ ದಿವ್ಯ ಔಷಧ. ನಿಜ ಗುರುವಿನ ಆಶೀರ್ವಾದದಿಂದ ಇದು ಗುರುಗೋವಿಂದ್ ಸಿಂಗ್‌ರವರ ವಿಜಯ."

ನಾಣ್ಯದ ಹಿಂಭಾಗದಲ್ಲಿ ಬಾಬ ಬಂದಾ ಸಿಂಗ್ ಬಹುದ್ದೂರ್ ಲೋಹಗಡವನ್ನು ಖಲ್ಸಾ–ತಕ್ತ್ ಎಂದು ಬರೆಸಿದ.

"ಮಾದರಿ ನಗರದಲ್ಲಿ ರೂಪುಗೊಂಡ, ಜಗತಾಶ್ರಿತ, ಖಲ್ಸಾ ಸಿಂಹಾಸನದ ಆಭರಣ."

ಇವೆಲ್ಲ ಲೋಹಗಡ ಕೋಟೆಯ ಬಗ್ಗೆ ಬಾಬಾ ಬಂದಾ ಸಿಂಗ್ ಬಳಸಿದ ಬಿರುದು ಬಾವಲಿಗಳು. ಖಲ್ಸಾ ತಕ್ತ್ ಎಂದರೆ ಅಧಿಕಾರದ ಸಿಂಹಾಸನ. ಅಕಾಲ್ ತಕ್ತ್ ಎಂದರೆ ಅಮರ ಸಿಂಹಾಸನ. ಈ ಎರಡೂ ಪದಗಳು ಸಂಶೋಧನೆಗೆ ಆಸಕ್ತಿದಾಯಕ ಆಕರಗಳು. ಗುರು ಹರ್‌ಗೋವಿಂದ್ ಸಾಹಿಬ್ ಅಕಾಲ್ ತಕ್ತ್ ಅನ್ನು ಅನಾವರಣಗೊಳಿಸಿದರು. ಬಾಬಾ ಬಂದಾ ಸಿಂಗ್ ಬಹದ್ದೂರ್ ಲೋಹಗಡವನ್ನು ಖಲ್ಸಾ ತಕ್ತ್ ಎಂದು ಘೋಷಿಸಿ ಖಲ್ಸಾ ರಾಜ್ಯದ ಮೊದಲ ನಾಣ್ಯದಲ್ಲಿಯೇ ಮುದ್ರಿಸಿದ. ಈಗ ಪ್ರಶ್ನೆಯೆಂದರೆ "ಖಲ್ಸಾ ತಕ್ತ್ ಅಂದರೆ ಸುಂದರ ನಗರ (ಮಾದರಿನಗರ) ಮತ್ತು ಖಲ್ಸಾ ರಾಜ್ಯದ ರಾಜಧಾನಿ ಎಲ್ಲಿದೆ?"

ಸಿಖ್ ಸಾಮ್ರಾಜ್ಯದ ಮೊಹರನ್ನು ಸಹ ಬಿಡುಗಡೆ ಮಾಡಲಾಯಿತು. ಅದರ ಬರಹ ಹೀಗಿದೆ.

"ಅಂತರಂಗ ಬಹಿರಂಗ ಎಲ್ಲೆಲ್ಲೂ ಗುರುನಾನಕರ ಶ್ರೇಷ್ಠತೆಯೇ ತುಂಬಿದೆ. ನಿಜವಾದ ದೇವರು ಎರಡರ ಅಂದರೆ ಈ ಜಗತ್ತು ಮತ್ತು ಮೇಲಿನ ಜಗತ್ತಿನ ಒಡೆಯ".

ಕೆಲಕಾಲದ ನಂತರ ಮತ್ತೊಂದು ಮೊಹರು ಬಿಡುಗಡೆಯಾಯಿತು.

"ಗುರುನಾನಕ್–ಗುರುಗೋವಿಂದ್ ಸಿಂಗ್ ಅವರಿಂದ ಖಡ್ಗ ಮತ್ತು ಬಟ್ಟಲು (ಅಂದರೆ ರಾಜಕೀಯ ಮತ್ತು ಆರ್ಥಿಕ)ಗಳ ವಿಜಯ ವಿಳಂಬವಿಲ್ಲದೆ ಸಾಧಿತವಾಯಿತು."

ಇವು ಬಾಬಾ ಬಂದಾ ಸಿಂಗ್ ತನ್ನ ಹೆಸರಿನಲ್ಲಿ ರಾಜ್ಯಭಾರ ಮಾಡದ ಎಲ್ಲವನ್ನೂ ಗುರುಗಳು ಮತ್ತು ದೇವರಿಗೆ ಸಮರ್ಪಿಸಿದ್ದನ್ನು ದೃಢಪಡಿಸುತ್ತವೆ. ನಾಣ್ಯವನ್ನು ಮತ್ತು ಮೊಹರನ್ನು

ಆತ ಗುರು ಹೆಸರಿನಲ್ಲಿಯೇ ಬಿಡುಗಡೆ ಮಾಡಿದ. ಜಗತ್ತಿನ ಚರಿತ್ರೆಯಲ್ಲಿ ರಾಜನಾದವನ್ನೊಬ್ಬ ತನ್ನ ಹೆಸರಿನಲ್ಲಿ ನಾಣ್ಯವನ್ನು ಬಿಡುಗಡೆ ಮಾಡದವನೊಬ್ಬನೆಂದರೆ ಬಾಬಾ ಬಂದಾ ಸಿಂಗ್ ಬಹದ್ದೂರ್ ಮಾತ್ರ. ಇಸ್ಲಾಂ ಅಥವಾ ಪ್ರವಾದಿ ಮಹಮ್ಮದ್ ಅಥವಾ ಅಲ್ಲಾಹುವಿನ ಹೆಸರಿನಲ್ಲಿ ರಾಜ್ಯಭಾರ ಮಾಡುತ್ತಿದ್ದೇವೆ ಎಂದು ಹೇಳಿಕೊಳ್ಳುವ ಮುಸ್ಲಿಂ ರಾಜರು ಸಹ ನಾಣ್ಯಗಳ ಮೇಲೆ ತಮ್ಮ ಹೆಸರನ್ನು ಬಳಸಿಕೊಳ್ಳುತ್ತಿದ್ದರು. ಹಲವಾರು ರಾಜರು ಕಲ್ಮಾ (ಪ್ರಾರ್ಥನೆ)ಗಳಲ್ಲಿ ಅಲ್ಲಾಹುವಿನ ಜೊತೆ ತಮ್ಮ ಹೆಸರನ್ನು ಪಠಿಸಲು ಜನರಿಗೆ ಆಜ್ಞಾಪಿಸುತ್ತಿದ್ದರು.

### ಹೊಸ ಸಿಖ್ ಕ್ಯಾಲೆಂಡರ್ ಬಿಡುಗಡೆ

ಸರ್ಹಿಂದ್ ವಿಜಯದ ನಂತರ ಬಂದಾ ಸಿಂಗ್ ಹೊಸ ಸಮ್ಮತ್ ಪಂಚಾಂಗ (ಕ್ಯಾಲೆಂಡರ್)ವೊಂದನ್ನು ಬಿಡುಗಡೆ ಮಾಡಿದ. ಹಿಜರಿ ಶಕೆ 1122, ವಿಕ್ರಯ ಶಕೆ 1767 ಮತ್ತು ಕ್ರಿ. ಶಕೆ. 1710ನೇ ಸಾಲು ಖಲ್ಸಾ ರಾಜ್ಯದ ಮೊದಲ ವರ್ಷವಾಗಿತ್ತು.

### ಮಲೇರ್‌ಕೊಟ್ಲ ಕಡೆ ಬಂದಾ ಸಿಂಗ್ ಯಾತ್ರೆ

ಶೇರ್ ಮಹಮ್ಮದ್ ಖಾನ್, ಅವನ ಇಬ್ಬರು ಸೋದರರು ಮತ್ತು ಸೋದರನ ಇಬ್ಬರು ಮಕ್ಕಳು ಈ ವೇಳೆಗೆ ಹತರಾಗಿದ್ದರೂ, ಮಲೇರ್‌ಕೊಟ್ಲದ ಉಳಿದ ರಾಜರನ್ನು ಶಿಕ್ಷಿಸಲು ಸಿಕ್ಖರು ಇಚ್ಛಿಸಿದ್ದರು. ಸರ್ಹಿಂದ್‌ನಲ್ಲಿ ನೆಲೆಯಾದ ಸಿಕ್ಖರು ಈಗ ಮಲೇರ್‌ಕೊಟ್ಲದ ಕಡೆ ಗಮನಹರಿಸಿದರು. ಸಿಖ್ ಸೈನಿಕರು ಮಲೇರ್‌ಕೊಟ್ಲದ ಕಡೆ ಬರುತ್ತಿರುವ ಬಗ್ಗೆ ಸುದ್ದಿ ತಿಳಿದ ಅಲ್ಲಿನ ಪಠಾಣರು ಆ ಪ್ರದೇಶದ ವರ್ತಕ ಮತ್ತು ಲೇವಾದೇವಿಗಾರ ಕಿಷನ್ ಚಂದನ ಬಳಿ ಹೋಗಿ ನೆರವು ಕೋರಿದರು. ಈಗಾಗಲೇ ಹಲವು ಬಾರಿ ಬಂದಾ ಸಿಂಗ್‌ನನ್ನು ಭೇಟಿ ಮಾಡಿದ್ದ ಕಿಷನ್ ಚಂದ್ ಅವರ ನಡವೆ ಮಧ್ಯಸ್ಥಿಕೆ ವಹಿಸಲು ಒಪ್ಪಿದ. ಆತ ಸಿಖ್ ಸೈನ್ಯ ಬರುತ್ತಿದ್ದ ಮಾರ್ಗದಲ್ಲಿ ಹೋಗಿ ಮಲೇರ್‌ಕೊಟ್ಲದ ಹೊರಭಾಗದಲ್ಲಿ ಬಂದಾ ಸಿಂಗ್‌ನನ್ನು ಭೇಟಿಯಾದ. ಮಲೇರ್‌ಕೊಟ್ಲದ ಮೇಲೆ ದಾಳಿ ಮಾಡದಿರಲು ಮನವಿ ಮಾಡಿದ. ಬಂದಾ ಸಿಂಗ್ ಒಪ್ಪಿದ. ಆ ನಗರದ ಅಮೀರರು ಸಿಖ್ ಸೈನ್ಯಕ್ಕೆ ಅಪಾರ ಮೊತ್ತವನ್ನು ಕಾಣಿಕೆ ನೀಡಿ ತಮ್ಮ ರಾಜ್ಯವನ್ನು ವಿನಾಶದಿಂದ ಕಾಪಾಡಿಕೊಂಡರು[27].

### ಅನೂಪ್ ಕೌರ್ ಮತ್ತು ಬುಲಾಕ ಸಿಂಗ್

ಈ ಯುದ್ಧಕ್ಕೂ ಮೊದಲು ಅನೂಪ್ ಕೌರ್ ಎಂಬ ಹೆಸರಿನ ಸಿಖ್ ಮಹಿಳೆ ಮಲೇರ್‌ಕೊಟ್ಲದ ಒಬ್ಬ ಅಧಿಕಾರಿಯ ಕಿರುಕುಳದಿಂದ ತಪ್ಪಿಸಿಕೊಂಡು ತನ್ನ ಶೀಲ ಕಾಪಾಡಿಕೊಳ್ಳಲು ಜೀವತೆತ್ತಿದ್ದಳು. ಸಾವಿನ ನಂತರ ಆಕೆಯ ಶವಕ್ಕೆ ಸಂಸ್ಕಾರ ಮಾಡದೇ ಹೂತು ಹಾಕಿದ್ದರು. ಮಲೇರ್‌ಕೊಟ್ಲವನ್ನು ಮಣಿಸಿದ ನಂತರ ಸಿಖ್ ಸೈನಿಕರು ಆಕೆಯ ಸಮಾಧಿಯನ್ನು ಗುರುತಿಸಿ, ಹೆಣವನ್ನು ಹೊರತೆದು ಸಿಖ್ ಆಚರಣೆಯಂತೆ ಸಂಸ್ಕಾರ ನೆರವೇರಿಸಿದರು. ಅದೇ ರೀತಿ ಗುರಾನಿ ಎಂಬಲ್ಲಿ, ಗುರು ಗೋವಿಂದ್ ಸಿಂಗ್ ಅವರು ಸಿಖ್ ಪಂಥದಿಂದ ಬಹಿಷ್ಕರಿಸಿದ್ದ. ರಾಮರೈಯಸ್ ಎಂಬಾತ ಬುಲಾಕ ಸಿಂಗ್ ಎಂಬುವನಿಗೆ ಕಿರುಕುಳ ನೀಡುತ್ತಿದ್ದ. ಬಂದಾ ಸಿಂಗ್ ಆ ಹಳ್ಳಿಗೆ ಹೋಗಿ ರಾಮ್‌ರೈಯಸ್‌ನನ್ನು ಶಿಕ್ಷಿಸಿ ಬುಲಾಕ ಸಿಂಗ್‌ನನ್ನು ಆ ಪ್ರದೇಶದ ಪೊಲೀಸ್ ಮುಖ್ಯಸ್ಥನನ್ನಾಗಿ ನೇಮಿಸಿದ.

### ಸಿಖ್ ಧರ್ಮ ಅಪ್ಪಿಕೊಂಡ ಹಿಂದೂ ಮತ್ತು ಮುಸ್ಲಿಮರು

ಸರ್ಹಿಂದ್ ವಿಜಯದ ನಂತರ ನೂರಾರು ಹಿಂದುಗಳು ಸಿಖ್ ಧರ್ಮವನ್ನು ಸೇರಿದರು (ಆದರೆ ಬಂದಾ ಸಿಂಗ್ ಹುತಾತ್ಮರಾದ ತರುವಾಯ ಬಹುತೇಕ ಮಂದಿ ತಮ್ಮ ಮೂಲ ಧರ್ಮಕ್ಕೆ ಹಿಂದಿರುಗಿದರು)[28]. ಅದೇ ರೀತಿ ಹಲವರು ಸೋತ ಮುಸ್ಲಿಮರ ಅಧಿಕಾರದ ರುಚಿ ಸವಿಯಲು ಸಿಖ್ ಧರ್ಮಕ್ಕೆ ಮತಾಂತರಗೊಂಡರು. ಇವರಲ್ಲಿ ಜಲಾಲ್‌ಖಾನ್ ರುಹಿಯಾನ ಮಕ್ಕಳಾದ ಮೀರ್ ನಸೀರ್ ಉದ್-ದೀನ್ (ನಸೀರ್ ಸಿಂಗ್ ಎಂಬ ಹೆಸರು ಪಡೆದ) ಮತ್ತು ದಿಂದರ್ ಖಾನ್ (ದಿಂದರ್ ಸಿಂಗ್) ಸಹ ಸೇರಿದ್ದರು. ಬಂದಾ ಸಿಂಗ್ ಆಳ್ವಿಕೆ ಕೊನೆಗೊಳ್ಳುತ್ತಿದ್ದಂತೆ, ದಿಂದರ್ ಸಿಂಗ್ ಮರಳಿ ಇಸ್ಲಾಂ ಧರ್ಮ ಸೇರಿದ. 1713ರಲ್ಲಿ ಆತ ಸಯ್ಯದ್ ಸೋದರರ ಜೊತೆ ಸೇರಿ ಫರೂಕ್ ಸಿಯಾರ್‌ನನ್ನು ದೆಹಲಿಯ ಸಾಮ್ರಾಟ ಪಟ್ಟಕ್ಕೆ ತರುವಲ್ಲಿ ಪರಿಣಾಮಕಾರಿ ಪಾತ್ರ ವಹಿಸಿದ. ಅನಂತರ 1719ರಲ್ಲಿ ಫರೂಕ್ ಸಿಯಾರ್‌ನನ್ನು ಅರಮನೆಯಿಂದ ಎಳೆತಂದು ಕಣ್ಣು ಕಿತ್ತು ನಂತರ ಕೊಂದು ಹಾಕಿದವನೂ ಈತನೇ.

**ದೇವೋಬಂದ್, ಸಹರಾಣ್‌ಪುರ ಮತ್ತು ಜಲಾಲಬಾದ್‌ನಲ್ಲಿ ಸಿಕ್ಖರ ದಂಡೆಯಾತ್ರೆ**

ಸಿಖ್ ಗೆಲುವು ಯಮುನಾ ನದಿಯಿಂದ ಆಚೆಗಿನ ಜನರನ್ನು ಪ್ರಭಾವಿಸಿತು. ಅವರು ಸಿಖ್ ಧರ್ಮಗಳನ್ನು ಸ್ವೀಕರಿಸಿದರು. ದೇವೋಬಂದ್ ಪರಗಣದ ಉನರಸ ಊರಿನ ಕೆಲವು ಮುಸ್ಲಿಂ ನಿವಾಸಿಗಳು ಸಿಖ್ ಧರ್ಮವನ್ನು ಸ್ವೀಕರಿಸಿರುವ ವಿಷಯ ಆ ಪ್ರದೇಶದ ಮುಸ್ಲಿಂ ಮುಖ್ಯಸ್ಥ ಜಲಾಲ್-ಉದ್-ದೀನ್ ಗೆ ತಿಳಿಯಿತು. ಆತ ಅಂತಹವರನ್ನು ಬಂಧಿಸಿ ಸೆರೆಯಲ್ಲಿಟ್ಟು ಹಿಂಸಿಸಿದ. ಈ ಪ್ರದೇಶದಲ್ಲಿಯೇ ಭಾಯ್ ಕಪೂರ್ ಸಿಂಗ್ ಎಂಬಾತ ಸಿಖ್ ಧರ್ಮದ ಬಗ್ಗೆ ಪ್ರವಚನ ನೀಡುತ್ತಿದ್ದ. ಆತ ಈ ಬಗ್ಗೆ ಬಂದಾ ಸಿಂಗ್‌ಗೆ ಸಂದೇಶ ಕಳುಹಿಸಿದ.

ಎಲ್ಲ ಸಿದ್ಧತೆ ನಡೆಸಿ ಬಂದಾ ಸಿಂಗ್‌ನ ಸೈನ್ಯ ದೇವೋ ಬಂದ್ ಮೇಳೆ ದಾಳಿ ಮಾಡಿ ವಶಪಡಿಸಿಕೊಂಡಿತು. ಬಂದಾ ಸಿಂಗ್ ಈಗ ಜಲಾಲಾಬಾದ್ ಮೇಲೂ ದಾಳಿ ಮಾಡಬಯಸಿದ. ಆದರೆ ಜಲಾಲ್-ಉದ್-ದೀನ್‌ನ ಬಿಗಿ ಕೋಟೆಯ ಮೇಲೆ ದಾಳಿ ಮಾಡುವ ಮುನ್ನ ಸಹರಾಣ್‌ಪುರವನ್ನು ವಶಪಡಿಸಿಕೊಳ್ಳಬಯಸಿದ. ಸಹರಾಣ್‌ಪುರ ಸಹ ಸರ್ಹಿಂದ್ ಮತ್ತು ಹಿಸ್ಸಾರ್-ಫಿರೋಜದಂತೆ ವಿಶಾಲವಾದ ರಾಜ್ಯ. ಅದರಲ್ಲಿ 28 ಪುರಗಣಗಳಿದ್ದವು. ಸಯ್ಯದ್ ಆಲಿ ಮಹಮ್ಮದ್ ಖಾನ್ ಕನೌಜಿ ಸಹರಾಣ್ಪುರದ ಮುಖ್ಯಸ್ಥನಾಗಿದ್ದ. ಬಂದಾ ಸಿಂಗ್ ಆತನಿಗೆ ಶರಣಾಗಲು ಸಂದೇಶ ಕಳುಹಿಸಿ ಕಪ್ಪವನ್ನು ಒಪ್ಪಿಸಲು ತಿಳಿಸಿದ. ಆದರೆ ಹೇಡಿ ಕನೌಜಿ ಹೋರಾಡುವ ಅಥವಾ ಶರಣಾಗುವ ಬದಲು ಸಂಪತ್ತಿನೊಡನೆ ತನ್ನ ಕುಟುಂಬ ಸಮೇತ ನಗರ ತೊರೆದು ಓಡಿಹೋಗಲು ನಿರ್ಧರಿಸಿದ. ತನ್ನ ಸ್ಥಾನದಲ್ಲಿ ಮಗ ದಿಂದರ್ ಖಾನ್‌ನನ್ನು ಪಟ್ಟಕ್ಕೆ ಕೂರಿಸಿ ತಾನು ದೆಹಲಿಗೆ ಪರಾರಿಯಾದ.

ಆತ ಪರಾರಿಯಾದ ನಂತರ ಮುಸ್ಲಿಂ ಪುರೋಹಿತ ವರ್ಗ ಜಿಹಾದ್ ಹೆಸರಿನಲ್ಲಿ ಯುದ್ಧವನ್ನು ಪ್ರಚೋದಿಸಲು ಯತ್ನಿಸಿದರು. ಅವರ ಪರವಾಗಿ ಕೆಲವು ಉಮ್ರಾಗಳು ಮತ್ತು ಸಚಿವರು ಸೇರಿದರು. ಅವರು ಈ ಕೋಟೆಯ ನಗರದ ಎಲ್ಲ ದಿಡ್ಡಿ ಬಾಗಿಲುಗಳನ್ನು ಹಾಕಿ ಕಾವಲು ಗೋಪುರಗಲಲ್ಲಿ ಭದ್ರತಾ ಸೈನಿಕರನ್ನು ಕಾವಲಿಟ್ಟರು. ಸಿಖ್ ಸೈನಿಕರು ಅಲ್ಲಿಗೆ ತಲುಪಿದಾಗ ಅವರನ್ನು ಬಾಣಗಳು ಮತ್ತು ಗುಂಡುಗಳ ಮಳೆ ಸ್ವಾಗತಿಸಿತು. ಆದರೆ ಇದು ದೀರ್ಘಕಾಲ ನಡೆಯಲಿಲ್ಲ. ಸಿಖ್ ಸೈನಿಕರೂ ಎದೆಗುಂದಲಿಲ್ಲ. ಅವರು ಬಾಗಿಲನ್ನು ಮುರಿದು ಒಳನುಗ್ಗಿ ನಗರವನ್ನು ವಶಕ್ಕೆ ತೆಗೆದುಕೊಂಡರು.

ಸಿಖ್ ಸೇನೆಯನ್ನು ಹಲವಾರು ಹಿಂದೂಗಳು ಮುಖ್ಯವಾಗಿ ಗುಜ್ಜರರು ಸೇರಿದರು.

ಅವರ ಜೊತೆ ಬಾಡಿಗೆ ಸೈನಿಕರೂ ಸೇರಿದರು. ಅವರು ಲೂಟಿ ಹೊಡೆಯುವ ಉದ್ದೇಶದಿಂದಲೇ ಸಿಖ್ ಸೈನ್ಯಕ್ಕೆ ಸೇರಿಕೊಂಡರು. ಆ ವಿಷಯ ಬಾಬಾ ಬಂದ್ ಸಿಂಗ್‌ಗೆ ತಿಳಿದ ತಕ್ಷಣ ಅವರಿಗೆ ಛೀಮಾರಿ ಹಾಕಿ ಸೈನ್ಯದಿಂದ ಹೊರ ಹಾಕಿದ. ಅಲ್ಲಿಂದ ಹೊರಟ ಈ ದುಷ್ಟ ಗುಜ್ಜರರು ಸುತ್ತಮುತ್ತಲಿನ ಕೆಲವು ಹಳ್ಳಿಗಳಿಗೆ ಹೋಗಿ ಲೂಟಿ ಮಾಡಿದರು.

ಸಹರಾಣ್‌ಪುರ ಪ್ರಮುಖವಾಗಿ ಒಂದು ಮುಸ್ಲಿಂ ಪ್ರಾಬಲ್ಯವಿದ್ದ ಊರು. ಸ್ಥಳೀಯ ಹಿಂದೂ ಜನರು ಅವರ ದಬ್ಬಾಳಿಕೆಗೆ ಒಳಗಾಗಿದ್ದರು. ಸಿಕ್ಖರು ನಗರವನ್ನು ಆಕ್ರಮಿಸಿಕೊಂಡಾಗ ಅವರು ನೆಮ್ಮದಿಯಾದರು. ಸಿಕ್ಖರು ನಗರದ ಆಡಳಿತದ ಮೇಲೆ ನಿಯಂತ್ರಣ ಸಾಧಿಸಿದ ನಂತರ ಕೆಲವು ಶ್ರೀಮಂತ ಮತ್ತು ಕುಲೀನ ಮುಸ್ಲಿಮರು ನಗರ ತೊರೆಯಲಾರಂಭಿಸಿದರು. ಬಂದಾ ಸಿಂಗ್ ಕೆಲಕಾಲ ಇಲ್ಲಿಯೇ ಉಳಿದಿದ್ದ. ಆತ ಸಹರಾಣ್‌ಪುರ ಹೆಸರನ್ನು ಭಾಗನ್‌ವಾಲ ನಗರ (ಭಾಗ್‌ನಗರ್) ಎಂದು ಬದಲಾಯಿಸಿದ.

### ಬೆಹತ್‌ನ ಪೀರ್‌ಜಾದಾಗಳಿಗೆ ಶಿಕ್ಷೆ ವಿಧಿಸಿದ್ದು

ಸಂತ ಸಿಂಗ್ ಇನ್ನೂ ಸಹರಾಣ್‌ಪುರದಲ್ಲಿ ಬೀಡು ಬಿಟ್ಟಿದ್ದ ಕಾಲದಲ್ಲಿ, ಅಲ್ಲಿಂದ 25 ಕಿ.ಮೀ. ದೂರದ ಬೆಟ್ಟ ಸಾಲಿನಲ್ಲಿರುವ ಬೆಹತ್‌ನಿಂದ ತಮ್ಮ ಸಂಕಷ್ಟವನ್ನು ಹೇಳಿಕೊಳ್ಳಲು ಜನರು ಬಂದಾ ಸಿಂಗ್‌ನನ್ನು ಭೇಟಿಯಗಲು ಬಂದರು. ಬೆಹತ್‌ನ ಪೀರ್‌ಜಾದಾಗಳು (ಮುಸ್ಲಿಂ ಪುರೋಹಿತ ವರ್ಗ ಪೀರ್‌ಗಳ ವಂಶಸ್ಥರು) ಹಿಂದೂಗಳ ವಿರುದ್ಧ ಕ್ರೂರವಾಗಿ ವರ್ತಿಸುವುದನ್ನು, ಮಹಿಳೆಯರ ಗೌರವಕ್ಕೆ ಧಕ್ಕೆ ತರಲು ಸಿಗುವ ಯಾವುದೇ ಅವಕಾಶವನ್ನು ಅವರು ಬಳಸಿಕೊಳ್ಳುವ ವಿಧಾನಗಳನ್ನು ಕುರಿತು ದೂರು ಹೇಳಿದರು. ಅಲ್ಲಿನ ಪೀರ್‌ಜಾದಾಗಳಿಗೆ ಪಾಠ ಕಲಿಸಲು ಬಂದಾ ಸಿಂಗ್ ಸಿಖ್ ಸೈನ್ಯದ ದೊಡ್ಡಪಡೆಯನ್ನು ಕಳುಹಿಸಿಕೊಟ್ಟ.

ಆ ನಗರವನ್ನು ಸಿಖ್ ಸೈನ್ಯ ಸುಲಭದಲ್ಲಿಯೇ ಹೆಚ್ಚು ಹಾನಿಯಿಲ್ಲದೆ ಆಕ್ರಮಿಸಿಕೊಂಡಿತು. ನಗರದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಿದ ನಂತರ ಸೈನಿಕರು ಬಯಲೊಂದರಲ್ಲಿ ಸೇರಲು ಎಲ್ಲ ಪೀರ್‌ಜಾದಾಗಳನ್ನು ಕರೆಸಿದರು. ಅವರ ಮುಂದೆ ತಮ್ಮ ಸಂಕಷ್ಟದ ಕತೆಗಳನ್ನು ನಿರೂಪಿಸುವಂತೆ ಸಾರ್ವಜನಿಕರನ್ನು ಕೋರಲಾಯಿತು. ಅಲ್ಲಿನ ಎಲ್ಲ ಪೀರ್‌ಜಾದಾಗಳು ಅತ್ಯಾಚಾರ ಮತ್ತು ಇತರ ಅಪರಾಧಗಳಲ್ಲಿ ಭಾಗಿಯಾಗಿದ್ದವರೆ. ಅವರೆಲ್ಲರನ್ನು ಅಲ್ಲಿಂದಲ್ಲಿಯೇ ಕೊಲ್ಲಲಾಯಿತು. ಇದು ನಡೆದದ್ದು 1710ರ ಜೂನ್‌ನಲ್ಲಿ.

### ಜಲಾಲ್‌ಗರ್ಡಿ ಮೇಲೆ ವಿಫಲ ದಾಳಿ

ಬೆಹತ್ ನಗರವನ್ನು ಆಕ್ರಮಿಸಿಕೊಂಡ ಕೆಲವು ದಿನಗಳ ನಂತರ ಸಿಖ್ ಸೈನಿಕರು ಜಲಾಲ್–ಉದ್–ದೀನ್‌ನ ಕೋಟೆಯಾದ ಜಲಾಲ್‌ಗರ್ಡಿಯ ಮೇಲೆ ದಾಳಿ ಮಾಡಲು ನಿರ್ಧರಿಸಿದರು. ಇಲ್ಲಿ ಜಲಾಲುದ್ದೀನ್ (ಜಲಾಲ್‌ಖಾನ್ ಎಂದೂ ಹೆಸರು) ತನ್ನ ಸೈನ್ಯವನ್ನು ನಿಲ್ಲಿಸಿದ್ದ. ಅಲ್ಲದೆ ತನ್ನ ಬಹುತೇಕ ಕೋಶ ಮತ್ತು ಶಸ್ತ್ರಾಸ್ತ್ರಗಳನ್ನು ಅಲ್ಲಿರಿಸಿದ್ದ. ಸಿಕ್ಖರು ಅದನ್ನು ಸ್ವಾಧೀನಪಡಿಸಿಕೊಳ್ಳಲು ಬಯಸಿದರು.

ಜಲಾಲುದ್ದೀನ್‌ಗೂ ಸಿಕ್ಖರ ಉದ್ದೇಶ ತಿಳಿಯಿತು. ಆತ ಈ ಯುದ್ಧಕ್ಕಾಗಿ ಸರಿಯಾಗಿಯೇ ಸಿದ್ಧನಾಗಿದ್ದ. ಧರ್ಮ ಯುದ್ಧದ ಹೆಸರು ಹೇಳಿ ಜನರನ್ನು ಪ್ರಚೋದಿಸಿ ಸೈನ್ಯಕ್ಕೆ ಮುಸ್ಲಿಂ ಯುವಕರನ್ನೂ

ಭರ್ತಿ ಮಾಡಿಕೊಂಡ. ಅಲ್ಲದೆ ಹಲವಾರು ತಿಂಗಳಿಗೆ ಸಾಕಾಗುವಷ್ಟು ಆಹಾರ ಸರಕನ್ನು ಕೋಟೆಯೊಳಗೆ ದಾಸ್ತಾನು ಇರಿಸಿದ್ದ. ಸಿಖ್ ಸೈನ್ಯ ಈ ಕೋಟೆಗೆ ಮುತ್ತಿಗೆ ಹಾಕಿತು. ಇದು 20 ದಿನಗಳ ಕಾಲ ಮುಂದುವರೆಯಿತು. ಅದು ಮಳೆಗಾಲವಾದ ಕಾರಣ ಅವರ ಯೋಜನೆ ಸಫಲವಾಗಲಿಲ್ಲ. ಆದುದರಿಂದ ಅವರು ಕೋಟೆ ವಶಮಾಡಿಕೊಳ್ಳುವ ಗುರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದರು.

**ಅಂಬಹೇತ ಮೇಲೆ ದಾಳಿ**

ಜಲಾಲಾಬಾದ್‌ನ ವಿಫಲ ಯಾತ್ರೆಯ ನಂತರ ಸಿಖ್ ಸೇನೆ ಸಹರಾಣಪುರ್‌ಗೆ ಹಿಂದಿರುಗಿತು. ದಾರಿಯಲ್ಲಿ ಅವರು ಗಂಗೋ ಮತ್ತು ನಕುರ್ ನಡುವೆ ಇದ್ದ ಅಂಬಹೇತದ ಮೇಲೆ ದಾಳಿ ನಡೆಸಿದರು. ಅದಕ್ಕೆ ಜಲಾಲುದ್ದೀನನ ನಿಕಟವರ್ತಿ ಪೀರ್ ಖಾನ್ ಎಂಬಾತ ರಕ್ಷಣೆಗೆ ನಿಂತಿದ್ದ. ಸಿಕ್ಖರ ದಾಳಿಯಲ್ಲಿ ಆತ ಮಡಿದ. ಈ ಯುದ್ಧದಲ್ಲಿ ಹೆಚ್ಚಿನ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಸಿಖ್ ಸೇನೆ ವಶಪಡಿಸಿಕೊಂಡಿತು. ಆದರೆ ಜೂನ್ 20 ರಂದು ಸಿಖ್ ಸೈನಿಕರು ರಾಡ್ ಹತ್ತಿರದ ಕೆಹ್ರಾ ಗ್ರಾಮದ ಹೊಲದಲ್ಲಿ ಯುದ್ಧವೊಂದನ್ನು ಮಾಡಬೇಕಾಯಿತು. ಇಲ್ಲಿ ಡೆಹ್ರಾನ ಮತ್ತು ಮುಕಡ್‌ನ ಆಫ್ಘನ್ನರು ಜಲಾಲ್‌ಖಾನನ ಮೊಮ್ಮಗ ಗುಲಾಂ ಮಹಮ್ಮದ್ ಬಂಜಾರ ಮತ್ತು ಪೀರ್ ಮಹಮ್ಮದ್ದನ ಜೊತೆ ಸೇರಿದರು. ಅವರೆಲ್ಲ ಕೂಡಿ ಸಿಕ್ಖರ ವಿರುದ್ಧ ಪ್ರಬಲವಾದ ಹೋರಾಟ ಮಾಡಿದರು. ಶತ್ರು ಸೈನ್ಯದ ಪ್ರಮಾಣ ಹೆಚ್ಚಿದ್ದ ಕಾರಣ ಸಿಖ್ ಸೈನ್ಯ ಹಿಮ್ಮೆಟ್ಟಿತು. ಈ ಯುದ್ಧದಲ್ಲಿ ಅನೇಕ ಸಿಖ್ ಸೈನಿಕರು ಮಡಿದರು. ಎರಡು ಫಿರಂಗಿಗಳನ್ನು ಐದು ಬಂದೂಕುಗಳನ್ನು ಹಲವಾರು ರೈಫಲ್‌ಗಳನ್ನು, ಸಾವಿರ ಬಾಣಗಳನ್ನು, ನಾಲ್ಕು ಡೇರೆ ಮತ್ತಿತರ ವಸ್ತುಗಳನ್ನೂ ಕಳೆದುಕೊಂಡರು. ತುಕಡಿಯ ಜೊತೆ ಬಂದಾ ಸಿಂಗ್ ಇರಲಿಲ್ಲ. ಇದನ್ನು ಮುನ್ನಡೆಸಿದವನು ಅಮರ್‌ಸಿಂಗ್. ಲಾಲ್ ಕನ್ವರ್ ಗುಜ್ಜರ್ ಮಾಡಿದ ದ್ರೋಹದಿಂದ ಈ ಯುದ್ಧದಲ್ಲಿ ಸಿಕ್ಖರು ಸೋತರು.

**ಬುರಿಯಾ ಗುಲಾಬ್ ನಗರವಾಯಿತು**

ಈ ಕಾಲಘಟ್ಟದಲ್ಲಿ ಕೆಲವು ಸಿಖ್ ತುಕಡಿಗಳು ಬುರಿಯಾ[(29)(30)] ರಾಜ್ಯವನ್ನು ಆಕ್ರಮಿಸಿಕೊಂಡಿದ್ದವು. ಪರಾಕ್ರಮಿಯಾಗಿದ್ದ ಗುಲಾಬ್‌ಸಿಂಗ್ ಭಕ್ಷಿ ಈ ರಾಜ್ಯವನ್ನು ಕೈವಶಮಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ. ಹಾಗಾಗಿ ಬಂದಾ ಸಿಂಗ್ ಬುರಿಯಾ ಪಟ್ಟಣಕ್ಕೆ ಗುಲಾಬ್‌ನಗರ ಎಂದು ನಾಮಕರಣ ಮಾಡಿದ. ಈ ಪಟ್ಟಣದ ಮುಖ್ಯ ಆಡಳಿತಾಕಾರಿಯಾಗಿ ಗುರುಭಕ್ಷ್‌ನನ್ನು ನೇಮಕ ಮಾಡಿದ.

ಬುರಿಯಾ ಪಟ್ಟಣದ ಖಾಜಿ ಶಾ ಮಹಮ್ಮದ್ ಒಬ್ಬ ಸೊಕ್ಕಿನ ವ್ಯಕ್ತಿ. ಸಾಮಾನ್ಯ ಜನರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ. ಜನ ಅವನ ದುರ್ವರ್ತನೆಯಿಂದ ಬಸವಳಿದಿದ್ದರು. ಅವರು ಗುರುಭಕ್ಷ್‌ನಲ್ಲಿ ದೂರು ಹೇಳಿದರು. ಖಾಜಿಯನ್ನು ಬಂಧಿಸಿ ಲೋಹಗಡ ಕೋಟೆಯ ಜೇಲಿನಲ್ಲಿರಿಸಲಾಯಿತು. ಅವನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಲೋಹಗಡ ಕೋಟೆಯ ಉಸ್ತುವಾರಿ ವಹಿಸಿದ್ದ ಮಿಹಾನ್‌ಸಿಂಗ್ ಜೊತೆ ಸೇರಿ ಗುರುಭಕ್ಷ್ ಖಾಜಿಯ ಕೆಲ ಸಂಪತ್ತನ್ನು ಎತ್ತಿ ಹಾಕಿಕೊಂಡ. ಈ ವಿಷಯ ಬಂದಾ ಸಿಂಗ್‌ಗೆ ತಿಳಿದಕೂಡಲೇ ಅವನನ್ನು ಹುದ್ದೆಯಿಂದ ವಜಾಗೊಳಿಸಿ ಅವನ ಸ್ಥಾನಕ್ಕೆ ಕಿಶೋರ್‌ಸಿಂಗ್‌ನನ್ನು ನೇಮಕ ಮಾಡಿ ವಿಳಂಬವಿಲ್ಲದೆ ಅನ್ಯಾಯವನ್ನು ಸರಿಪಡಿಸಿದನು.

**ನಾನೌಟ ಮೇಲೆ ದಾಳಿ**

ಸಹರಾಣ್‌ಪುರ್‌ನಿಂದ ಜಲಾಲ್‌ಬಾದ್ ದಿಕ್ಕಿನಲ್ಲಿ 30 ಕಿ.ಮೀ. ದೂರದಲ್ಲಿರುವ ಮತ್ತು ಜಲಾಲಾಬಾದ್ ಹಾಗೂ ರಾಮಪುರದಿಂದ ಸಮಾನವಾಗಿ 15 ಕಿ.ಮೀ. ಅಂತರದಲ್ಲಿರುವ ನನೌಟ ಮೇಲೆ ಸಿಖ್ ಸೇನೆ 1710 ಜುಲೈ 11ರಂದು ದಾಳಿ ನಡೆಸಿತು. ಈ ಪಟ್ಟಣದ ಪ್ರಭುಗಳು ಜನರ ಮೇಲೆ ದಬ್ಬಾಳಿಕೆ ಮಾಡುವುದರಲ್ಲಿ ಪ್ರಸಿದ್ಧಿಯಾಗಿದ್ದರು. ಸಿಖ್ ಸೇನೆ ನಗರವನ್ನು ಕೈವಶಮಾಡಿಕೊಂಡು, ಇಲ್ಲಿ ರಾಜ್ಯಭಾರ ಮಾಡುತ್ತಿದ್ದ ಶ್ರೀಮಂತರ ಮಹಲಿನಿಂದ ಶಸ್ತ್ರಾಸ್ತ್ರ, ಹಣ ಮತ್ತು ಇತರೆ ಬೆಲೆಬಾಳುವ ವಸ್ತುಗಳನ್ನು ದೋಚಿತು. ವಿರೋಧ ವ್ಯಕ್ತಪಡಿಸಿದವರ ಮನೆಗಳಿಗೆ ಸಿಖ್ ಸೈನಿಕರು ಬೆಂಕಿ ಹಚ್ಚಿದರು. ಸಿಖ್ ಸೇನೆ ಪಟ್ಟಣವನ್ನು ಬಿಟ್ಟು ಹೊರಟ ನಂತರ ಇಡೀ ಪಟ್ಟಣ ಸ್ಮಶಾನದಂತಾಗಿತ್ತು. ಹಾಗಾಗಿ ಈ ನಗರಕ್ಕೆ ಫೂಟ ಶಹರ್ (ಮುರಿದು ಬಿದ್ದ ನಗರ) ಎಂದು ಹೆಸರು ಬಂತು.

ಖಾಫಿ ಖಾನ್ ಪ್ರಕಾರ ನನೌಟ ಯುದ್ಧದಲ್ಲಿ ಕಾದಾಡಲು ಜಲಾಲುದ್ದೀನ್ ಖಾನ್ ಅಥವಾ ಜಲಾಲ್ ಖಾನ್ ತನ್ನ ಮಗ ದಿಂದರ್‌ಖಾನ್, ತಂಗಿಯ ಮಗ ಗುಲಾಂ ಮಹಮ್ಮದ್ ಖಾನ್ ಮತ್ತು ಸೋದರನ ಮಗ ಹಜ್‌ಬರ್ ಖಾನ್ ಅವರನ್ನು ಕಳುಹಿಸಿಕೊಟ್ಟಿದ್ದ. ಆದರೆ ಯುದ್ಧದಲ್ಲಿ ಮೂವರೂ ಮಡಿದರು. ದಿಂದರ್‌ಖಾನ್ ಪರಾಕ್ರಮದಿಂದ ಹೋರಾಡಿದರೂ ಸಫಲನಾಗಲಿಲ್ಲ. ಸಹರಾಣ್‌ಪುರದ ಸೇನಾ ಮುಖ್ಯಸ್ಥ ಮಹಮ್ಮದ್ ಆಲಿ ಖಾನ್‌ನ ಸೋದರನ ಮಕ್ಕಳಾದ ಪೀರ್ ಖಾನ್ ಮತ್ತು ಜಮಾನ್ ಖಾನ್ ಇಬ್ಬರೂ ಮಡಿದರು(31).

ಜಲಾಲ್‌ಗಡ ಮತ್ತು ಅಂಬಹೇತದಲ್ಲಿ ನಡೆದ ಯುದ್ಧದಲ್ಲಿ ಜಲಾಲುದ್ದೀನ್ ತೋರಿದ ಪರಾಕ್ರಮದ ಸುದ್ದಿ ಮುಘಲ್ ಸಾಮ್ರಾಟನಿಗೆ ತಲುಪಿತು. ಆತ ಜಲಾಲುದ್ದೀನ್‌ನನ್ನು ಸಹರಾಣ್‌ಪುರದ ಮುಖ್ಯಸ್ಥನನ್ನಾಗಿ ನೇಮಿಸಿದ. ಸಿಕ್ಖರು ಸಹರಾಣ್‌ಪುರದ ಮೇಲೆ ದಾಳಿ ಮಾಡಿದಾಗ ಹೇಡಿತನ ಪ್ರದರ್ಶಿಸಿದ ಮುಖ್ಯಸ್ಥ ಮಹಮ್ಮದ್ ಆಲಿ ಖಾನ್‌ನನ್ನು ಸಾಮ್ರಾಟ ಪದಚ್ಯುತಿಗೊಳಿಸಿದ.

**ದೆಹಲಿಯಲ್ಲಿ ಉಮ್ರಾ ಮತ್ತು ಸಚಿವರ ಮನಸ್ಸಿನ ಭೀತಿ**

ಸಿಖ್ ಸೇನೆ ಸಹರಾಣಪುರವನ್ನು ವಶಪಡಿಸಿಕೊಂಡ ನಂತರ ಶ್ರೀಮಂತರಾಗಿದ್ದ ಅಮೀರರು ಮತ್ತು ಮುಘಲ್ ಸಾಮ್ರಾಜ್ಯದ ರಾಜಧಾನಿ ದೆಹಲಿಯಲ್ಲಿದ್ದ ಸಚಿವರು, ದೆಹಲಿಯಲ್ಲಿಯೂ ಸಿಖ್ ಸೇನೆ ಆಕ್ರಮಣ ಮಾಡಬಹುದೆಂಬ ಭೀತಿಯಿಂದ ಕಂಗಾಲಾದರು. ಈ ಬಗ್ಗೆ ಇರದತ್‌ಖಾನ್ ಬರೆಯುತ್ತಾರೆ(32)– "ದೆಹಲಿಯಿಂದ ಮುಲ್ತಾನ್‌ವರೆಗೆ (ಸಿಕ್ಖರ ಪ್ರಾಬಲ್ಯದ ಬಗ್ಗೆ) ಕೋಲಾಹಲ ಉಂಟಾಗಿತ್ತು. ಆದರೆ ತಾನೇಸರ್‌ನಿಂದ ಲಾಹೋರ್‌ವರೆಗೆ ಈ ಕೋಲಾಹಲ ಇನ್ನೂ ಬಲವಾಗಿತ್ತು. ಆಸಿಫ್ ಆಲಿ, ನಿಜಾಮ್–ಉಲ್–ಮುಲ್ಕ್ ಸಹ ಭೀತರಾಗಿ ಚಕ್ರವರ್ತಿಗೆ ಈ ಬಗ್ಗೆ ಪತ್ರ ಬರೆದರು. ದಿವಾನ್ ಬಯೋತತ್, ದಿವಾನ್ ಹಫೀಜ್ ಖಾನ್, ಕೊತ್ವಾಲ್ ರಜಾಖಾನ್, ಫಕ್ರುದ್ದೀನ್ ಭಕ್ಷಿ, ಮಹಮದ್ ತಹಿರ್ ಮತ್ತು ಖಾಜಿ ದರ್ವೇಶ್ ಮಹಮದ್ ಸಹ ಪ್ರತ್ಯೇಕವಾಗಿ ಪತ್ರ ಬರೆದರು. ದೆಹಲಿಯ ರಾಜ್ಯಪಾಲ ಆಸಿಫ್–ಉದ್–ದೌಲ ತುಂಬಾ ಭೀತನಾಗಿದ್ದ. ಅಮೀರರು ಬಹುದೂರದ ಸ್ಥಳಗಳಿಂದ ತಮ್ಮ ಸಂಪತ್ತನ್ನು ಕಟ್ಟಿಕೊಂಡು ದೆಹಲಿಯತ್ತ ಓಡಿದರು."

ದೆಹಲಿಯ ಸುತ್ತಮುತ್ತಲಿನ ಪರಿಸ್ಥಿತಿ ತುಂಬಾ ಗಂಭೀರವಾಗಿತ್ತು. ಸಿಖ್ ಸೈನಿಕರು ದೆಹಲಿಯ ಸುತ್ತ ಇದ್ದ ಮೂರು ರಾಜ್ಯಗಳನ್ನು–ಸರ್‌ಹಿಂದ್, ತಾನೇಸರ್, ಸಹರಾಣ್‌ಪುರ ವಶಪಡಿಸಿಕೊಂಡಿದ್ದರು. ಇದು ಮುಘಲ್ ಸಾಮ್ರಾಜ್ಯದ ರಾಜಧಾನಿಗೆ ಎಲ್ಲ ಕಡೆಯಿಂದ ದಿಗ್ಬಂಧನ ವಿಧಿಸಿದಂತಾಗಿತ್ತು.

ಲಾಹೋರ್‌ನ ಆಡಳಿತಗಾರರೂ ಸಿಖ್ ಸೇನೆಯ ಬಗ್ಗೆ ಭಯಭೀತರಾಗಿದ್ದರು.

**ಲಾಹೋರ್ ಮತ್ತು ರಿಯಾರ್ಕಿ ಪ್ರದೇಶದಲ್ಲಿ ಸಿಕ್ಖರ ಕ್ರಮ**

ಮಾಜ್ಹಾ (ಆಗ ಮಾಂಜಾ ಎಂದು ಉಚ್ಚರಿಸುತ್ತಿದ್ದರು)ದ ಸಿಕ್ಖರು 1709ರ ಏಪ್ರಿಲ್‌ನಲ್ಲಿ ಮುಘಲ್ ಸಾಮ್ರಾಜ್ಯದ ಒಂದು ಪ್ರದೇಶದ ಸೇನಾನಾಯಕನನ್ನು ಸೋಲಿಸಿದ್ದರು. ಇದು ನವೆಂಬರ್ 1709ರಲ್ಲಿ ಬಂದಾ ಸಿಂಗ್ ಸಮನದ ಮೇಲೆ ಸಾಧಿಸಿದ ವಿಜಯಕ್ಕಿಂತಲೂ ಏಳು ತಿಂಗಳು ಮೊದಲೇ ನಡೆದಿದ್ದ ಘಟನೆ. 1709ರ ಏಪ್ರಿಲ್‌ನಲ್ಲಿ ಗುರು–ಡ–ಚಕ್ (ಅಮೃತಸರ)ನ ಚುಹರ್ ಮಲ್ ಓಹ್ರಿ, ಅಮೃತಸರದ ಮೇಲೆ ದಾಳಿ ನಡೆಸುವಂತೆ ಲಾಹೋರ್ ಪ್ರಾಂತ್ಯದ ಉಪ ಸೇನಾನಾಯಕನಾದ ಅಸ್ಲಂ ಖಾನ್‌ನನ್ನು ಪ್ರಚೋದಿಸಿದ್ದ. ಅಸ್ಲಂ ಖಾನ್ ಒಂದು ಸೇನೆಯ ತುಕಡಿಯನ್ನು ಪತ್ತಿಯ ಸೇನಾಧಿಕಾರಿ ಹರ್‌ಸಹಾಯ್ ನೇತೃತ್ವದಲ್ಲಿ ನಿಯೋಜಿಸಿದ ಗುರು–ಡ–ಚಕ್ ಮೇಲೆ ದಾಳಿ ನಡೆಸಲು ನಿರ್ಧರಿಸಿದ. 1709ರ ಏಪ್ರಿಲ್ 12 ರಂದು ಎರಡು ಯುದ್ಧಗಳು ನಡೆದವು. ಅದರಲ್ಲಿ ಭಾಯ್ ಮಣಿ ಸಿಂಗ್ ದಲ್‌ವಾನ್‌ನ ತಾರಾಸಿಂಗ್, ಮೋಹ್ಕಂ ಸಿಂಗ್ ಓಹ್ರಿ ಮತ್ತು ಇತರರ ನೇತೃತ್ವದ ಸಿಖ್ ಸೇನೆ ಎದುರಾಳಿಯನ್ನು ಸದೆಬಡಿಯಿತು. ಎರಡನೇ ಯುದ್ಧದಲ್ಲಿ ಅಪಾರ ಜೀವ ಹಾನಿಯಾಯಿತು. ಸತ್ತವರಲ್ಲಿ ಸೇನಾನಾಯಕ ಹರ್‌ಸಹಾಯ್ ಸಹ ಸೇರಿದ್ದ. ಇಂಥ ಹೀನಾಯ ಸೋಲಿನ ನಂತರ ಮುಘಲ್ ಸೇನೆ ಅಮೃತಸರದ ಮೇಲೆ ದಾಳಿ ಮಾಡುವ ದುಸ್ಸಾಹಕ್ಕೆ ಕೈಹಾಕಲಿಲ್ಲ.

ಬಂದಾ ಸಿಂಗ್ ಸರ್ಹಿಂದ್ ಮೇಲೆ ದಾಳಿ ಮಾಡಲು ಯೋಜನೆ ರೂಪಿಸುತ್ತಿರುವಾಗ ಮಾಜ್ಹಾದ ಸಿಖ್ ಸೈನಿಕರು ಅವನ ಜೊತೆಗೂಡಿದರು. ಸರ್ಹಿಂದ್ ಮೇಲೆ ವಿಜಯ ಸಾಧಿಸಿದ ನಂತರ ಕೆಲವು ಸೈನಿಕರು ತಮ್ಮ ಹಳ್ಳಿಗಳಿಗೆ ಹಿಂದಿರುಗಿದರು. ಅವರು ಸ್ಥಳೀಯ ಸಿಕ್ಖರನ್ನು ಸಂಘಟಿಸಿ, ಊರುಗಳನ್ನಾಳುತ್ತಿದ್ದ ಮುಘಲ್ ಮತ್ತು ಪಠಾಣರನ್ನು ಅಟ್ಟ ತೊಡಗಿದರು. ರಾವಿ ಮತ್ತು ಬೀಯಾಸ್ ನದಿಗಳ ನಡುವೆ ಇರುವ ರಿಯಾರ್ಕಿ ಪ್ರದೇಶವು ಈಗ ಸಿಕ್ಖರ ಆಡಳಿತಕ್ಕೆ ಒಳಪಟ್ಟಿತು. ಈ ಸುದ್ದಿಯು ಲಾಹೋರ್‌ನ ಉಪರಾಜ್ಯಪಾಲ ಅಸ್ಲಾಂ ಖಾನ್‌ನನ್ನು ತಲುಪಿತು. ಆದರೆ ಸಿಕ್ಖರ ವಿರುದ್ಧ ಕ್ರಮ ತೆಗೆದುಕೊಳ್ಳಲು ಧೈರ್ಯ ಸಾಲಲಿಲ್ಲ. ಮುಘಲ್ ಆಡಳಿತಗಾರರು ಯಾವುದೇ ಕ್ರಮ ಜರುಗಿಸದ ಕಾರಣ ಮತ್ತಷ್ಟು ಧೈರ್ಯ ತಾಳಿದ ಸಿಕ್ಖರು ಸಣ್ಣ ಪಟ್ಟಣಗಳನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದರು. ಆದರೆ ಅವರು ಸೇನಾ ನೆಲೆಯಿದ್ದ ಲಾಹೋರ್ ಅಥವಾ ಕಸೂರ್‌ಕಡೆ ಹೋಗಲಿಲ್ಲ.

ಅವರ ಮೊದಲ ಗುರಿ, ಲಾಹೋರ್ ನಂತರ ಹೆಚ್ಚು ಮಹತ್ವ ಪಡೆದಿದ್ದ ಬಟಲ ಮತ್ತು ಕಲನೂರುಗಳನ್ನು ವಶಪಡಿಸಿಕೊಳ್ಳುವುದಾಗಿತ್ತು. ಬಟಲ ಒಂದು ಪ್ರಮುಖ ವಾಣಿಜ್ಯ ಕೇಂದ್ರ. ಕಾಶ್ಮೀರದ ವರ್ತಕರು ಅಲ್ಲಿ ಮಾರುಕಟ್ಟೆಗಳನ್ನು ತೆರೆದಿದ್ದರು. ಈ ನಗರದಲ್ಲಿ ಅನೇಕ ಶ್ರೀಮಂತ ಮುಘಲರ ಮತ್ತು ಪಠಾಣರ ಮಹಲುಗಳಿದ್ದವು. ಅದೇ ರೀತಿ ಕಲನೂರು ಸಹ ಒಂದು ಪ್ರಸಿದ್ಧ ನಗರ. ಒಂದು ಜನಪದ ಗೀತೆಯು "ನಿಮಗೆ ವೈಭವವನ್ನು ನೋಡಲು ಲಾಹೋರ್‌ಗೆ ಹೋಗಲು ಸಾಧ್ಯವಿಲ್ಲದಿದ್ದರೆ ಕಲನೂರು ನೋಡಿ ಆನಂದಿಸಿ" ಎಂಬರ್ಥದಲ್ಲಿ ಜನಜನಿತವಾಗಿತ್ತು. ಅಂದರೆ ಕಲನೂರು ಲಾಹೋರ್‌ನಷ್ಟೇ ಶ್ರೀಮಂತ ಮತ್ತು ವೈಭವದ ನಗರವಾಗಿತ್ತೆಂದು ಅರ್ಥ. ಇದೇ ಊರಿನಲ್ಲಿ ಅಕ್ಬರ್ ಸಿಂಹಾರೋಹಣ ಮಾಡಿದ್ದು. ಆ ಕಾಲದಲ್ಲಿ ಇಲ್ಲಿ 350ಕ್ಕೂ ಹೆಚ್ಚು ಮಸೀದಿಗಳಿದ್ದವು.

ಸಿಕ್ಖರು ಎರಡೂ ನಗರಗಳಿಗೆ ಮುತ್ತಿಗೆ ಹಾಕಿದರು. ಹೊರಜಗತ್ತಿನ ಸಂಪರ್ಕವಾಗದಂತೆ ದಿಗ್ಬಂಧನ ವಿಧಿಸಿದರು. ಅಲ್ಲಿನ ಸುತ್ತಮುತ್ತಲಿನ ಎಲ್ಲ ಊರುಗಳು ಸಿಖ್ ಸೈನಿಕರ ನಿಯಂತ್ರಣದಲ್ಲಿದ್ದವು. ಮುಘಲರ ಆಳ್ವಿಕೆ ಈಗ ಬಟಲ ಮತ್ತು ಕಲನೂರಿನ ಕೋಟೆಯಿಂದ ಆವೃತವಾದ ನಗರಗಳಿಗೆ ಸೀಮಿತಗೊಂಡಿತ್ತು(33).

ಈ ವಲಯದಲ್ಲಿ ತಮ್ಮ ಪ್ರಾಬಲ್ಯ ಸಾಧಿಸಿದ ಸಿಕ್ಖರು ಬಟಲ, ಸಾತಿಯಾಲ, ಗುಮನ್ ಮತ್ತು ಕಾಲ ಆಫ್ಘಾನ ಹಳ್ಳಿಗಳನ್ನು ಸ್ವಾಧೀನಪಡಿಸಿಕೊಂಡರು.

**ಲಾಹೋರ್ ಮೇಲೆ ದಾಳಿ (1710 ಶರತ್ಕಾಲ)**

ರಿಯಾರ್ಕಿ ಮತ್ತು ಪತ್ತಿ ವಲಯದಲ್ಲಿ ತಮ್ಮ ಆಳ್ವಿಕೆಯನ್ನು ಸ್ಥಾಪಿಸಿದ ನಂತರ ಸಿಕ್ಖರು ಲಾಹೋರ್ ಮೇಲೆ ದಾಳಿ ನಡೆಸಲು ನಿರ್ಧರಿಸಿದರು. ಅದು ಪ್ರಬಲವಾದ ಸೇನಾ ನೆಲೆಯಾಗಿತ್ತು. ಪಂಜಾಬಿನ ರಾಜಧಾನಿಯಾಗಿದ್ದ ಲಾಹೋರ್‌ನಲ್ಲಿ ಬೃಹತ್ ಸೇನೆ ಮತ್ತು ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಇದ್ದುದರಿಂದ ಸಿಕ್ಖರು ನಡೆಸಿದ ದಾಳಿ ಬಲು ದೊಡ್ಡ ಪ್ರಮಾಣದ್ದೇ ಆಗಬೇಕಿತ್ತು. ಈ ಪ್ರಾಂತ್ಯವು ಆಗ ಬಹದ್ದೂರ್ ಶಾನ ಮಗ ಯುವರಾಜ ಜಹಂದರ್ ಖಾನ್‌ನ ಅಧಿಪತ್ಯದಲ್ಲಿತ್ತು. ಕಾಬೂಲ್‌ನ ಸಯ್ಯದ್ ಅಸ್ಲಮ್ ಖಾನ್ ಆತನ ಸಹಾಯಕನಾಗಿದ್ದ. ಯುವರಾಜ ಜಹಂದರ್ ಶಾ ಹೆಚ್ಚು ಕಾಲ ದೆಹಲಿಯಲ್ಲಿರುತ್ತಿದ್ದ. ಆದುದರಿಂದ ಆಡಳಿತವನ್ನು ಅಸ್ಲಾಂ ಖಾನ್ ನೋಡಿಕೊಳ್ಳುತ್ತಿದ್ದ.

ದಾಳಿಯನ್ನು ಯೋಜಿಸಿದ ಸಿಕ್ಖರು ಲಾಹೋರ್‌ನ ಹೊರವಲಯ ತಲುಪಿದರು. ಅವರು ಶಾಲಿಮಾರ್ ಸುತ್ತಲಿನ ಪ್ರದೇಶಗಳನ್ನು ಆಕ್ರಮಿಸಿಕೊಂಡು ಸರ್ಕಾರಿ ಅಧಿಕಾರಿಗಳ, ಪಾಳೆಯಗಾರರ ಮತ್ತು ಇತರೆ ಶ್ರೀಮಂತರ ಮಹಲುಗಳನ್ನು ಲೂಟಿ ಮಾಡಿದರು. ಶಾಲಿಮಾರ್ ಪ್ರದೇಶದ ಬಹುತೇಕ ಶ್ರೀಮಂತರು ಮತ್ತು ಮುಸ್ಲಿಂ ಅಧಿಕಾರಿಗಳು ಊರನ್ನು ತೊರೆದು ಕೋಟೆಯ ನಗರ ಲಾಹೋರ್‌ಗೆ ಓಡಿ ಬಂದರು. ಸಿಕ್ಖರ ಪ್ರವೇಶವನ್ನು ತಡೆಯಲು ಲಾಹೋರ್ ಕೋಟೆಯ ಬಾಗಿಲುಗಳನ್ನು ಬಂದ್ ಮಾಡಿದರು. ಅಸ್ಲಾಂ ಖಾನನ ಅಧಿಕಾರಿಗಳು ಲಾಹೋರ್ ನಗರದ ಸಿಖ್ ನಿವಾಸಿಗಳನ್ನು ಹೊರಹಾಕಲು ಸಲಹೆ ಮಾಡಿದರು. ಆದರೆ 1709ರ ಏಪ್ರಿಲ್‌ನಲ್ಲಿ ನಡೆದ ಹೋರಾಟದಲ್ಲಿ ಪತ್ತಿಯ ನಾಯಕನನ್ನು ಸಿಕ್ಖರು ಸಾಯಿಸಿದ ಘಟನೆಯನ್ನು ಅಸ್ಲಂ ಖಾನ್ ಮರೆತಿರಲಿಲ್ಲ. ಹಾಗಾಗಿ ಅವರ ಸಲಹೆಯನ್ನು ಕೇಳಲಿಲ್ಲ. ಆತ ಲಾಹೋರ್‌ನ ದಿಡ್ಡಿ ಬಾಗಿಲುಗಳನ್ನು ಮುಚ್ಚಿ ಕೋಟೆಯನ್ನು ರಕ್ಷಿಸುವ ಉಪಾಯ ಕೈಗೊಂಡ. ಅವನ ಸೈನಿಕರು ಕೋಟೆಯೊಳಗೆ ಕುಳಿತು ಸಿಖ್ ಸೈನಿಕರ ಮೇಲೆ ಬಾನ ಮತ್ತು ಬಂದೂಕಿನ ಗುಂಡುಗಳ ಮಳೆ ಕರೆದರು. ಸಿಕ್ಖರು ಸಹ ತಮ್ಮಲ್ಲಿದ್ದ ಎಲ್ಲಾ ಆಯುಧಗಳನ್ನು ಪ್ರಯೋಗಿಸಿದರು. ಯುದ್ಧ ಎರಡು ದಿನಗಳ ಕಾಲ ನಡೆಯಿತು. ಆದರೆ ನಗರ ಪ್ರವೇಶ ಸಿಕ್ಖರಿಗೆ ಸಾಧ್ಯವಾಗಲಿಲ್ಲ. ಎರಡೂ ಪಕ್ಷದಿಂದ ನೂರಾರು ಸೈನಿಕರು ಹತರಾದರು.

ನಗರದೊಳಗೆ ಪ್ರವೇಶ ಸಾಧ್ಯವಾಗದಿರುವುದನ್ನು ಅರಿತ ಸಿಖ್ ಸೈನಿಕರು ವಾಪಸ್ಸು ತೆರಳಿ ಮತ್ತೊಂದು ಅವಕಾಶಕ್ಕಾಗಿ ಕಾಯಲು ನಿರ್ಧರಿಸಿದರು. ಸಿಕ್ಖರು ಹೀಗೆ ಹಿಂದಿರುಗುವ ಸಮಯದಲ್ಲಿ ಕೆಲವು ಸೈನಿಕರು ಮುಸ್ಲಿಂ ಮನೆಗಳಿಗೆ ನುಗ್ಗಿ ವಸ್ತುಗಳನ್ನು ದೋಚಿದರು(34).

**ಸಿಕ್ಖರ ವಿರುದ್ಧ ಜಿಹಾದ್ (ಪವಿತ್ರ ಯುದ್ಧ)**

ಮಹಮ್ಮದ್ ಕಾಸಿಂ ಪ್ರಕಾರ 1710ರ ಸೆಪ್ಟೆಂಬರ್ ಅಕ್ಟೋಬರ್ ತಿಂಗಳಲ್ಲಿ ಸಿಕ್ಖರು ಮತ್ತೆ

ಲಾಹೋರ್ ಕಡೆ ಮುನ್ನಡೆದರು. ಲಾಹೋರ್‌ನ ಮೌಲ್ವಿಗಳು (ಮುಸ್ಲಿಂ ಪುರೋಹಿತರು) ಈ ಬಾರಿ ಸಿಕ್ಖರ ವಿರುದ್ಧ ಜಿಹಾದ್ ಸಾರಿದರು. ಅವರು ದೆಹಲಿ ದರ್ವಾಜದ ಬಳಿಯ ಈದ್ಗಾಕ್ಕೆ ಬರಲು ಜನರಿಗೆ ಕರೆ ನೀಡಿದರು. ಸುಮಾರು ಹತ್ತು ಸಾವಿರ ಜನ ಅವರ ಕರೆಗೆ ಓಗೊಟ್ಟು ಸೇರಿದರು. ಆ ಸಭೆಯಲ್ಲಿ ಭಾಗವಹಿಸಿದ್ದವರಲ್ಲಿ ಹಿಂದಿನ ಮುಘಲ್ ಸಾಮ್ರಾಟ ಶಹಜಹಾನ್‌ನ ಸಂಬಂಧಿ ಪೀರ್ ಮಹಮದ್ ತಾಕಿ, ಆಲಿ ವರ್ದಿಖಾನ್ ಅಗರ್ಕಾನಿಯ ಮಗ ಮೂಸಬೇಗ್, ಮಹಮದ್ ಜಮನ್ ರನ್‌ಗಢ್, ಮೌಲ್ವಿ ಮೀರ್ ಮಹಮ್ಮದ್ ಮೊದಲಾದವರಿದ್ದರು.

ಈ ಧರ್ಮಾಂಧ ಮುಸ್ಲಿಮರ ಜೊತೆ ಕೆಲವು ಹಿಂದೂಗಳು ಸೇರಿದರು. ಈ ಹಿಂದೂಗಳ ನೇತೃತ್ವವನ್ನು ಅಕ್ಬರನ ಸಚಿವ ತೋದರ್‌ಮಲ್‌ನ ಮೊಮ್ಮಗ ವಹಿಸಿದ್ದ. ಆತ ಮುಸ್ಲಿಂ ಜಿಹಾದ್‌ಗೆ ಧಾರಾಳವಾಗಿ ದೇಣಿಗೆ ನೀಡಿ ತನ್ನಲ್ಲಿದ್ದ ಫಿರಂಗಿಗಳು, ಬಂದೂಕುಗಳು, ಶಸ್ತ್ರಾಸ್ತ್ರ ಮತ್ತು ಕುದುರೆಗಳನ್ನು ನೀಡಿದ. ಆತ ತನ್ನ ಸ್ವಂತ ಹಣದಿಂದ ಹೆಚ್ಚಿನ ವೇತನ ಕೊಟ್ಟು ಯುವಕರನ್ನು ಸೈನ್ಯಕ್ಕೆ ಭರ್ತಿ ಮಾಡಿಸಿದ. ಇತರೆ ಹಿಂದೂಗಳು ಸಹ ಜಿಹಾದ್‌ಗೆ ತಮ್ಮ ಬಂದೂಕುಗಳನ್ನು ಕೊಟ್ಟರು.

ಲಾಹೋರ್‌ನ ಉಪರಾಜ್ಯಪಾಲ ಅಸ್ಲಾಂ ಖಾನ್ ಸಿಕ್ಖರ ಬಗ್ಗೆ ಭಯಭೀತನಾದರೂ, ಒಂದು ಸಾವಿರ ಸೈನಿಕರ ಪದಾತಿ ದಳ, 500 ಕುದುರೆ ಸೈನ್ಯವನ್ನು ಅತಾವುಲ್ಲಾ ಖಾನ್ ಮತ್ತು ಮುಹಿಬ್‌ಖಾನ್ ಖರಲ್ ನೇತೃತ್ವದಲ್ಲಿ ಸಿಕ್ಖರ ವಿರುದ್ಧ ಹೋರಾಡಲು ಕಳಿಸಿಕೊಟ್ಟ.

ಈ ಇಸ್ಲಾಂನ ಪವಿತ್ರ ಸೈನಿಕರು ಸಿಕ್ಖರ ವಿರುದ್ಧ ಮೂರು ಯುದ್ಧಗಳನ್ನು ನಡೆಸಿದರು. ಒಂದು ಚಮಿಯಾರಿ ಹಳ್ಳಿಯ ಹತ್ತಿರದಲ್ಲಿ ಇದ್ದ ಕೋಟ್ಲಂ ಬೇಗಂನಲ್ಲಿ; ಮತ್ತೊಂದು ಸೆಹನ್ಸಾರ ಪರಗಣದ ಕಿಲ ಭಗವಂತ್‌ಸಿಂಗ್ ಬಳಿ; ಮಗದೊಂದು ಲಾಹೋರ್ ವಲಯದ ಭಿಲೋವಲ್ ಅಥವಾ ಭರ್ಲಿಯಲ್ಲಿ. ಮೊದಲ ಯುದ್ಧ ಭರತ್ ಮತ್ತು ರಾಣಿ ಹಳ್ಳಿಗಳ ಹತ್ತಿರವಿರುವ ಕೊಟ್ಲ ಬೇಗಂ ಎಂಬ ಸ್ಥಳದಲ್ಲಿ ನಡೆಯಿತು. ಸಾವಿರಾರು ಮುಸ್ಲಿಂ ಸೈನಿಕರು ಆ ಸ್ಥಳದಲ್ಲಿದ್ದ ಸಿಕ್ಖರನ್ನು ಸುತ್ತುವರೆದರು. ಅಲ್ಲಿ ಸಿಕ್ಖರ ಸಂಖ್ಯೆ ಕಡಿಮೆಯಿತ್ತು. ಹಾಗಾಗಿ ಅವರು ರಕ್ಷಣಾತ್ಮಕ ಯುದ್ಧವನ್ನು ಮಾಡಿ ಸೂರ್ಯಾಸ್ತವಾದ ನಂತರ ಸ್ಥಳವನ್ನು ಬಿಟ್ಟು ಹೋದರು. ಸಿಕ್ಖರು ಮುಂದೆ ಚಮಿಯರಿ ಪಟ್ಟಣಕ್ಕೆ ಬಂದರು. ಅಲ್ಲಿಯೂ ಮುಸ್ಲಿಂ ಸೈನಿಕರು ಅವರನ್ನು ಓಡಿಸಿದರು. ದಾರಿಯಲ್ಲಿ ಮುಸ್ಲಿಂ ಸೈನಿಕರು ಹಲವು ಹಳ್ಳಿಗಳನ್ನು ಲೂಟಿ ಮಾಡಿದರು. ಈ 'ಪವಿತ್ರ ಯುದ್ಧ'ದ ನಾಯಕ ತನ್ನ ಸೈನಿಕರ ದುಷ್ಕೃತ್ಯದ ಬಗ್ಗೆ ತಿಳಿದಾಗ, ಅವರಲ್ಲಿ ಕೆಲವರಿಗೆ ಶಿಕ್ಷೆ ವಿಧಿಸಿದ. ಆದರೆ ಅದು ಅಂತಹ ಗಮನಾರ್ಹ ಬದಲಾವಣೆ ಬೀರಲಿಲ್ಲ. ಇಲ್ಲಿನ ಬಹುತೇಕ ಸೈನಿಕರು ಸಿಖ್ ಯುವಕರ ವಿರೋಧಿಗಳಾಗಿದ್ದರೇ ಹೊರತು ನಿಜವಾದ ಮುಸ್ಲಿಮರಾಗಿರಲಿಲ್ಲ.

ಮಾರನೆಯ ದಿನ ಚಮಿಯರಿ ಹತ್ತಿರ ಮುಸ್ಲಿಮ್ ಸೈನಿಕರು ಸಿಖ್ ಸೈನಿಕರ ನಡುವೆ ತೀವ್ರವಾದ ಯುದ್ಧ ನಡೆಯಿತು. ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಸಿಕ್ಖರು ವೀರಾವೇಶದಿಂದ ಹೋರಾಡಿದರು. ಅದೇ ವೇಳೆ ಸುರಕ್ಷಿತ ಸ್ಥಳಗಳಿಗೆ ಹಿಂದಿರುಗುವದನ್ನು ಮುಂದುವರೆಸಿದರು. ಮಧ್ಯರಾತ್ರಿಯಲ್ಲಿ ಸಿಕ್ಖರು ಕೋಟೆಯಾಚೆ ನುಸುಳಿ ಪರಾರಿಯಾದರು.

ಮಾರನೆಯ ದಿನ 'ಇಸ್ಲಾಂನ ಪವಿತ್ರ ಸೈನಿಕರು' ಕೋಟೆಯನ್ನು ಪ್ರವೇಶಿಸಿ ತಮ್ಮ ಗೆಲುವನ್ನು ಘೋಷಿಸಿದರು. ಜಯಘೋಷ ಮಾಡುತ್ತಾ ಲಾಹೋರ್‌ನತ್ತ ಮರುಪ್ರಯಾಣ ಕೈಗೊಂಡರು. ದಾರಿಯಲ್ಲಿ ಅವರು ಭಿಲೋವಲ್ ಕೋಟೆಯಲ್ಲಿ ರಾತ್ರಿಯನ್ನು ಕಳೆಯಲು ತೀರ್ಮಾನಿಸಿದರು.

ಅದೊಂದು ಚಿಕ್ಕಕೋಟೆ. ಕೆಲವರಷ್ಟೇ ತಂಗಬಹುದಿತ್ತು. ಹಾಗಾಗಿ ನಾಯಕರು, ಹಿರಿಯ ಅಧಿಕಾರಿಗಳು ಮತ್ತು ಮೌಲ್ವಿಗಳು ಕೋಟೆಯಲ್ಲಿ ಸ್ಥಳ ಗಿಟ್ಟಿಸಿಕೊಂಡರು. ಉಳಿದವರು ಹೊರಗಡೆ ಬಯಲಿನಲ್ಲಿ ಮಲಗಿದರು. ಸೈನಿಕರು ಬಯಲಿನಲ್ಲಿ ಮಲಗಿರುವ ಸುದ್ದಿ ತಿಳಿದ ಸಿಖ್ ಜನರು, ಮಾರನೆಯ ದಿನ ನಸುಕಿನಲ್ಲಿಯೇ ಸೂರ್ಯೋದಯಕ್ಕೂ ಮೊದಲೆ ಮುಸ್ಲಿಂ ಸೈನಿಕರನ್ನು ಸುತ್ತುವರೆದು ಇನ್ನೂ ಮಲಗಿದ್ದ ಸೈನಿಕರ ಮೇಲೆ ದಾಳಿ ಮಾಡಿದರು. ಈ ಯುದ್ಧದಲ್ಲಿ ತೋದರ್‌ಮಲ್‌ನ ಮೊಮ್ಮಗ ಪರೋಹ್ ಮಲ್, ಮುರ್ತಜಾ ಖಾನ್ ಸೇರಿದಂತೆ ಹಲವಾರು ನಾಯಕರು ಹತರಾದರು. ಭಿಲೋವಲ್ ಯುದ್ಧವು ಸಿಕ್ಖರ ಮೇಲೆ ಸಾರಿದ ಇಸ್ಲಾಂನ ಪವಿತ್ರ ಸೈನಿಕರು ಸಾರಿದ ಧರ್ಮಯುದ್ಧದ ಅಂತ್ಯವನ್ನು ಬರೆಯಿತು. ಹಾಗೆ ನೋಡಿದರೆ ಧರ್ಮ ಯುದ್ಧದ ಪವಿತ್ರ ಸೈನಿಕರು, ತರಬೇತು ಪಡೆದ ಸೈನಿಕರಾಗಿರಲಿಲ್ಲ. ಸಿಕ್ಖರ ವಿರುದ್ಧದ ಅವರ ಮೊದಲ ಮುಖಾಮುಖಿಯಲ್ಲಿಯೇ ಅವರು ಭಯಪಟ್ಟಿದ್ದರು. ಸಿಖ್ ಸೈನಿಕರ ಪರಾಕ್ರಮಕ್ಕೆ ತಾವು ಸಮಾನರಲ್ಲ ಎಂಬುದು ಅವರ ಅರಿವಿಗೆ ಬಂದಿತ್ತು.

ಸಿಖ್ ಸೈನಿಕರು ಈ ಮೂರು ಯುದ್ಧಗಳಲ್ಲಿ ಗೆಲುವು ಪಡೆದು ಭಿಲೋವಲ್, ಗರ್ಡಿ ಭಗವಂತ್ ಸಿಂಗ್ ಕೋಟೆಗಳನ್ನು ವಶಪಡಿಸಿಕೊಂಡರು. ಆದರೆ ಅವರು ಅಲ್ಲಿ ಉಳಿಯಲಿಲ್ಲ. ಆದರೆ ಹಲವು ಮುಸ್ಲಿಂ ಪೂಜಾರಿಗಳು ಧರ್ಮಯುದ್ಧದ ಹೆಸರಿನಲ್ಲಿ ಯುವಕರನ್ನು ಸಿಕ್ಖರ ಮೇಲೆ ಯುದ್ಧ ಮಾಡಲು ಪ್ರಚೋದಿಸುವ ಪ್ರಯತ್ನ ಮಾಡಿದರೂ ಕೈಗೂಡಲಿಲ್ಲ. ಸಿಕ್ಖರ ಬಗ್ಗೆ ಅವರಲ್ಲಿ ಭಯ ಮನೆ ಮಾಡಿತ್ತು. ಹೋರಾಡುವ ಧೈರ್ಯ ತಾಳಲಿಲ್ಲ. ಆ ವಲಯದಲ್ಲಿ ಸಿಖ್ ಪ್ರಾಬಲ್ಯವನ್ನು ಸ್ಥಾಪಿಸಲು ಇದು ಸಾಕಾಗಿತ್ತು ಈಗ ಮುಸ್ಲಿಂ ಅಧಿಕಾರಿಗಳು ಸಿಖ್ ಸೈನಿಕರನ್ನು ಕಂಡು ಹೆದರಲಾರಂಭಿಸಿದರು. ಈ ಸುದ್ದಿ ಮುಘಲ್ ಸಾಮ್ರಾಟ ಬಹದ್ದೂರ್ ಶಾನನ್ನು ತಲುಪಿದಾಗ ಆತನೂ ಭಯಗ್ರಸ್ತನಾದ[36]. ರಿಯಾರ್ಕಿ–ಮಾಜ್ಹಾ ಪ್ರದೇಶದಿಂದ ಲಾಹೋರ್ ನಗರದ ಕೋಟೆಯವರೆಗೂ ಸಿಖ್ ಸೈನಿಕರು ನಿಯಂತ್ರಣ ಸಾಧಿಸಿದ್ದರೆಂದು ಮಹಮ್ಮದ್ ಕಾಸಿಂ ಬರೆಯುತ್ತಾನೆ[37].

ಒಂದು ವರ್ಷಕ್ಕೂ ಕಡಿಮೆ ಅವಧಿಯಲ್ಲಿ (ಅಂದರೆ 1709ರ ನವೆಂಬರ್‌ನಿಂದ 1710ರ ಸೆಪ್ಟೆಂಬರ್) ಸಿಖ್ ಸೈನಿಕರು ರಾವಿನದಿ ಮತ್ತು ಯಮುನಾ ನದಿಯ ಪ್ರದೇಶವನ್ನು ಸ್ವತಂತ್ರಗೊಳಿಸಿದ್ದರು. ಅವರು ಸರ್ಹಿಂದ್, ಸಮನ, ಚಾಟ್, ಬನುರ್, ರೂಪಾರ್, ಗುರು, ಕಪೂರಿ, ತಾಣೇಸರ್, ಶಹಬಾದ್, ಬುರಿಯ, ತಸ್ಕ, ಸಧೌರ, ಸಹರಾಣ್‌ಪುರ, ದೇವೋಬಂದ್, ನನೌಟ್, ಅಂಬಹೇತ (ಸಹರಾಣ್‌ಪುರ ಪ್ರಾಂತ್ಯ), ರಹೋನ್, ಬಟಲ, ಕಲನಾರು, ಪಠಾಣ್‌ಕೋಟ್ ಮತ್ತು ಬಸೋಹ್ಲಿ (ಜಮ್ಮು ಪ್ರಾಂತ್ಯ) ಪ್ರದೇಶಗಳನ್ನು ವಶಪಡಿಸಿಕೊಂಡು ಈ ನಗರಗಳಲ್ಲಿ ತಮ್ಮ ಪರಮಾಧಿಕಾರವನ್ನು ಸ್ಥಾಪಿಸಿದ್ದರು. ಇದಲ್ಲದೆ ಚಂಬ, ಕುಲ್ಲು, ಮಂಡಿ, ಬಿಲಾಸ್‌ಪುರ, ನಹನ್, ಗಡವಾಲ್ ಮುಂತಾದ ರಾಜ್ಯಗಳು ಸಹ ಸಿಕ್ಖರ ಪಾರಮ್ಯವನ್ನು ಅಂಗೀಕರಿಸಿದ್ದವು. ಬಹುತೇಕ ಪ್ರದೇಶಗಳಲ್ಲಿ ಸಿಕ್ಖರು ತಮ್ಮದೇ ಆದ ಅಧಿಕಾರಿಗಳನ್ನು (ಪೊಲೀಸ್, ನ್ಯಾಯಾಧೀಶರು, ರಾಜ್ಯಪಾಲರು, ಇತ್ಯಾದಿ) ನೇಮಿಸಿದ್ದರು. ಅದು ಸಿಕ್ಖರ ಶಕ್ತಿಯನ್ನು ಕಂಡು ದೆಹಲಿ ರಾಜರು ಸಹ ಹೆದರಿದ್ದಂತಹ ಕಾಲ ಅದು[38].

**ಅಡಿ ಟಿಪ್ಪಣಿಗಳು**

1. ಆ ಕಾಲದಲ್ಲಿ ಬಹುದೊಡ್ಡ ನಗರಗಳೆನಿಸಿದ ಮಚ್ಚಿವರ ಮತ್ತು ಬೆಹ್ಲೋರ್‌ಪುರದ ನಡುವೆ ಸಟ್ಲೆಜ್ ನದಿ ಹರಿಯುತ್ತಿತ್ತು. 1750ರ ನಂತರ ನದಿ ತನ್ನ ಪಾತ್ರವನ್ನು ಉತ್ತರದಿಂದ 10 ಕಿ.ಮೀ. ದೂರಕ್ಕೆ ಬದಲಿಸಿತು.
2. ಖಾಫಿಖಾನ್, ಮುಂತಾಕಬ್–ಉಲ್–ಲುಬಾಜ್ ಪು. 653.
3. ಇದು ಚಪ್ಪರ್ ಝಿರಿ ಎಂಬ ಮೂಲ ಹೆಸರಿನ ಮತ್ತೊಂದು ಉಚ್ಚಾರ (ಚಪ್ಪರ್ ಝಿರಿ ಎಂದರೆ ಮರ ಪೊದೆಗಳಿಂದ ತುಂಬಿದ ಕೆರೆ)
4. ಖಾಫಿ ಖಾನ್, Op. cit. PP 652-53.
5. ಎಲಿಯಟ್ ಮತ್ತು ಡಾಸನ್, ಹಿಸ್ಟರಿ ಆಫ್ ಇಂಡಿಯಾ ಯಾಸ್ ಟೋಲ್ಡ್ ಬೈ ಇಟ್ಸ್ ಹಿಸ್ಟೋರಿಯನ್ಸ್. ಸಂ. ಏಳು. ಪುಟ 414.
6. ಎಲಿಯಟ್ ಮತ್ತು ಡಾಸನ್, ಹಿಸ್ಟರಿ ಆಫ್ ಇಂಡಿಯಾ ಯಾಸ್ ಟೋಲ್ಡ್ ಬೈ ಇಟ್ಸ್ ಹಿಸ್ಟೋರಿಯನ್ಸ್. ಸಂ. ಏಳು. ಪುಟ 414.
7. ಎಲಿಯಟ್ ಮತ್ತು ಡಾಸನ್, ಹಿಸ್ಟರಿ ಆಫ್ ಇಂಡಿಯಾ ಯಾಸ್ ಟೋಲ್ಡ್ ಬೈ ಇಟ್ಸ್ ಹಿಸ್ಟೋರಿಯನ್ಸ್. ಸಂ. ಏಳು. ಪುಟ 414.
8. ಇರ್ವಿನ್ ಪ್ರಕಾರ ವಜೀರ್‌ಖಾನ್‌ಗೆ ಆಗ 80 ವರ್ಷ ವಯಸ್ಸಾಗಿತ್ತು.
9. ಇರ್ವಿನ್ ಅದೇ. ಇರ್ವಿನ್ ಪ್ರಕಾರ ವಜೀರ್‌ಖಾನ್ ಸಾಯುವ ಮೊದಲೇ ಶರ್ ಮಹಮ್ಮದ್ ಖಾನ್ ಕೊಲ್ಲಲ್ಪಟ್ಟ. ಆದರೆ ಮಲೆರ್‌ಕೊಟ್ಲ ಕುಟುಂಬವು ಆತ ಯುದ್ಧದಲ್ಲಿ ಸಾಯಲಿಲ್ಲವೆಂದು ನಂಬಿದೆ.
10. ಖಾಫಿ ಖಾನ್ Op. Cit P 654
11. ಖಾಫಿ ಖಾನ್ Op. Cit P 654
12. Kafi Khan Muntakhab-ul-Lubab. P. 653, Irvine, Later Mughals, Vol. 1, P. 96; Elliot and Dawson, History of India as todl by its Historians. Vol. 7 P. 414.
13. ತರೀಖ್–ಐ–ಪಂಜಾಬಿ ಪು. 59
14. History of the Punjab. P. 274
15. ಇಬ್ಬತ್‌ನಾಮ ಪು. 133–46.
16. ಇಬ್ಬತ್‌ನಾಮ ಪು. 133–46.
17. ಅಕ್ಬರಾತ್–ಐ–ದರ್ಬಾರ್–ಐ–ಮೌಲಾ 20 ಮೇ 1710.
18. Later Mughals P. 95

19. ಅಕ್ಬರಾತ್–ಐ–ದರ್ಬಾರ್–ಐ–ಮಾಲಾದಲ್ಲಿ ದಿನಾಂಕ ರಹಿತ ನಮೂದು.

20. ಅಕ್ಬರಾತ್–ಐ–ದರ್ಬಾರ್–ಐ–ಮಾಲಾದಲ್ಲಿನ ದಿನಾಂಕ 20.05.1710ರ ನಮೂದು.

21. ಗುರುವು ಇನ್ನೂ ಬದುಕಿರುವಾಗಲೇ 1707ರಲ್ಲಿ ಸರ್ಹಿಂದ್ ಯುದ್ಧ ನಡೆಯಿತೆಂದು ಸಂತೋಖ್ ಸಿಂಗ್ ಬರೆದಿರುವುದು ಕುತೂಹಲಕಾರಿಯಾಗಿದೆ (ಗುರು ಪ್ರತಾಪ್ ಸೂರಜ್ ಗ್ರಂಥ). ಈ ಸುದ್ದಿಯನ್ನು ಕೇಳಿ ಗುರು 'ಹರ್ಷ' ಪಟ್ಟರಂತೆ. ಸಂತೋಖ್ ಸಿಂಗ್‌ನ ಗ್ರಂಥದಿಂದ ಮಾಹಿತಿ ಪಡೆದಿರುವ ಮತ್ತೊಬ್ಬ ಲೇಖಕ ಗ್ಯಾನಿ ಗ್ಯಾನ್ ಸಿಂಗ್ ಸಹ (ಗುರು ಪರಪ್ ಸೂರಜ್) ಮತ್ತು ರತನ್‌ಸಿಂಗ್ (ಪ್ರಾಚೀನ್ ಪಂಥ್ ಪರ್ಕಾಶ್) ಸಹ ತಮ್ಮ ಗ್ರಂಥಗಳಲ್ಲಿ ವಿಕ್ರಮ ಶಕೆಯ ಜೇಷ್ಠ 1764ರಲ್ಲಿ (ಕ್ರಿ. ಶ. ಮೇ. 1707) ಯುದ್ಧ ನಡೆಯಿತೆಂದು ಬರೆಯುತ್ತಾರೆ.

22. ಸಿಕ್ಖರ ಮೂಲ ಬಾವುಟದ ಬಣ್ಣ ನೀಲಿ. 1830ರ ನಂತರ ಕೇಸರಿ ಬಣ್ಣವನ್ನೇ ಅಂಗೀಕರಿಸಲಾಯಿತು. ದಡ್ಡತನದಿಂದ ಮಾಡಿಕೊಂಡ ಬದಲಾವಣೆಯನ್ನು ಸಿಕ್ಖರು ಇನ್ನೂ ಮುಂದುವರೆಸುತ್ತಿದ್ದಾರೆ.

23. ತಾರಿಖ್–ಐ–ಇರಾದತ್‌ಖಾನಿ ಪು. 68.

24. ಕಮ್ವಾರ್, ತಜ್ಕಿರಾತಸ್ ಸಲಾತಿನ್ ಚುಗಟ್ಟ ಪು. 334.

25. ಅಕ್ಬರ್–ಐ–ದರ್ಬಾರಿ–ಐ–ಮೌಲ ನಮೂದು 6ನೇ ನವೆಂಬರ್ 1710

26. ಅಕ್ಬರ್–ಐ–ದರ್ಬಾರಿ–ಐ–ಮೌಲ, 1ನೇ ಡಿಸೆಂಬರ್ 1710

27. ತಮ್ಮನ್ನು ರಕ್ಷಿಸಿದ ಕಿಷನ್ ಚಂದ್‌ಗೆ ಯಾವುದೇ ಸ್ಮಾರಕ ನಿರ್ಮಿಸದಿರುವುದು ಮಲೇರ್‌ಕೊಟ್ಲ ರಾಜರ ಕೃತಘ್ನತೆಯನ್ನು ತೋರಿಸುತ್ತದೆ.

28. ಈ ಹಿಂದೂಗಳಲ್ಲಿ ಪರಮನಂದ ಛಬ್ಬೀರ್ ಸಹ ಇದ್ದ; ಅವನ ಹಿರೀಕರು ಮುಸ್ಲಿಂ ಕಿರುಕುಳವನ್ನು ತಪ್ಪಿಸಿಕೊಳ್ಳಲು ಸಿಖ್ ಧರ್ಮವನ್ನು ತ್ಯಜಿಸಿ ಹಿಂದೂ ಧರ್ಮಕ್ಕೆ ಮರಳಿದ್ದರು. ಬಳಿಕ ಬಂದಾ ಸಿಂಗ್ ಮತ್ತು ವೀರ ಹಕೀಕತ್ ಸಿಂಗ್ ಅವರನ್ನು ಹಿಂದೂಗಳೆಂದು ಬಿಂಬಿಸಲು ಅವರ ಚರಿತ್ರೆಯನ್ನು ತಿರುಚಿ ಪರಮ ನಂದ ಕೃತಿಯನ್ನು ರಚಿಸಿದ. ಅವರನ್ನು ಕ್ರಮವಾಗಿ ಬಂದಾ ಬೈರಾಗಿ ಹಾಗೂ ಹಕೀಕತ್ ರಾಯ್ ಎಂದೇ ಹೆಸರಿಸಿದ್ದಾನೆ. ಅದರಲ್ಲಿ ತಾನ ಭಾಯಿ ಮತಿದಾಸ್ (1675 ನವೆಂಬರ್ 11 ರಂದು ಹುತಾತ್ಮನಾದ)ನ ಕುಟುಂಬಕ್ಕೆ ಸೇರಿದವನೆಂದು ಬಡಾಯಿ ಕೊಚ್ಚಿಕೊಳ್ಳುತ್ತಾನೆ. ಆದರೆ ಆತ ಜತಿನ್‌ದಾಸನ ವಂಶಸ್ಥ. ಇದೇ ರೀತಿ ಮಹರಾಜ ರಣಜಿತ್ ಸಿಂಗ್‌ನ ಆಸ್ಥಾನದಲ್ಲಿ ಅಧಿಕಾರ ಪಡೆಯಲು ಪಂಜಾಬ್‌ನ ಹಿಂದೂಗಳು ಉ.ಪ್ರ.ದ. ಬ್ರಾಹ್ಮಣರು, ಜಮ್ಮುವಿನ ಡೋಗ್ರಗಳು ತಾವು ಸಿಖ್ ಧರ್ಮೀಯರೆಂದು ಹೇಳಿಕೊಂಡು, ಸಾಮ್ರಾಜ್ಯ ಪತನವಾದ ನಂತರ ಮತ್ತೆ ಹಿಂದೂ ಧರ್ಮಕ್ಕೆ ಮರಳಿದ ಪ್ರಕರಣಗಳಿವೆ.

29. ಹದಿನಾರನೇ ಶತಮಾನದ ಮಧ್ಯಭಾಗದಲ್ಲಿ ಸಿಕ್ಖರ ಮೂರನೇ ಗುರು ಅಮರ್‌ದಾಸ್‌ಜಿ ಅವರು 22 ಮಾಂಜಿಗಳನ್ನು (ಸಿಖ್ ಧರ್ಮ ಪ್ರಸಾರ ಕೇಂದ್ರಗಳು) ಭಾರತದ ವಿವಿಧ ಭಾಗಗಳಲ್ಲಿ ಸ್ಥಾಪಿಸಿದರು. ಒಂದು ಮಾಂಜಿಯನ್ನು ಬುರಿಯಾದಲ್ಲಿ ಸ್ಥಾಪಿಸಿದ್ದರು. ಅತ್ಯಂತ ಹಳೆಯ ಮಾಂಜಿ ಜಗಾದ್ರಿಯಿಂದ ನಾಲ್ಕು ಕಿ.ಮೀ. ಪೂರ್ವದಲ್ಲಿದೆ.

30. ಹದಿನಾರನೇ ಶತಮಾನದ ಮಧ್ಯಭಾಗದಲ್ಲಿ ಸಿಕ್ಖರ ಮೂರನೇ ಗುರು ಅಮರ್‌ದಾಸ್‌ಜಿ ಅವರು 22 ಮಾಂಜಿಗಳನ್ನು (ಸಿಖ್ ಧರ್ಮ ಪ್ರಸಾರ ಕೇಂದ್ರಗಳು) ಭಾರತದ ವಿವಿಧ ಭಾಗಗಳಲ್ಲಿ ಸ್ಥಾಪಿಸಿದರು. ಒಂದು ಮಾಂಜಿಯನ್ನು ಬುರಿಯಾದಲ್ಲಿ ಸ್ಥಾಪಿಸಿದ್ದರು. ಅತ್ಯಂತ ಹಳೆಯ ಮಾಂಜಿ ಜಗಾದ್ರಿಯಿಂದ ನಾಲ್ಕು ಕಿ.ಮೀ. ಪೂರ್ವದಲ್ಲಿದೆ.
31. ಸಹರಾಣ್‌ಪುರ್–ದೆಹಲಿ ರಸ್ತೆಯಲ್ಲಿರುವ ಕಾಲೆ ಶಹನ ಸಮಾಧಿ ಭವನದ ಹತ್ತಿರ ಅವರ ಗೋರಿಗಳು ಇನ್ನೂ ಅಸ್ತಿತ್ವದಲ್ಲಿವೆ.
32. ತಾರಿಖ್–ಐ–ಮಹಮ್ಮದ್ ಶಾಹಿಯಲ್ಲಿ
33. ಖುಷ್‌ವಕ್ತ್ ರಾಯ್, ತ್ವಾರೀಖ್–ಐ–ಸಿಖಾನ್
34. ಎಲಿಯಟ್ ಮತ್ತು ಡಾಸನ್ History of India as told by its Historious, Vol. 7 P. 419. Mohammed Lahf, History of the Punjab, Page 275.
35. ಚಮಿಯರಿ ಎಂಬುದು ಆ ಕಾಲದಲ್ಲಿ ದೊಡ್ಡ ಪಟ್ಟಣವಾಗಿತ್ತು. ಒಂದು ಕೋಟೆಯೂ ಇತ್ತು.
36. ಮಹಮ್ಮದ್ ಕಾಸಿಂ, ಇಬ್ರತ್‌ನಾಮ, ಪು. 22. ಖುಷ್‌ವಕ್ತ್ ರಾಯ್, ತ್ಸಾರೀಖ್–ಐ–ಸಿಖಾನ್
37. ಮಹಮದ್ ಕಾಸಿಂ
38. ಸಿಖ್ ಹಿಸ್ಟರಿ (10 ಸಂಪುಟಗಳು) ಸಂ. 2 ಪು. 57–58

# ಅಧ್ಯಾಯ-6

# ಸಿಕ್ಖರ ವಿರುದ್ಧ ಮುಘಲರ ಕ್ರಮಗಳು

ಆ ಕಾಲದಲ್ಲಿ ಮುಘಲರ ದೊರೆ ಬಹದ್ದೂರ್‌ಶಾ ತನ್ನ ತಮ್ಮ ಕಾಮಭಕ್ಷ್ ಎಬ್ಬಿಸಿದ ಬಂಡಾಯವನ್ನು ಶಮನ ಮಾಡಲು ದಕ್ಷಿಣದ ಕಡೆ ತೆರಳಿದ್ದನು. ಅಂತಿಮವಾಗಿ 1709ರ ಜನವರಿ 2 ರಂದು ಕಾಮಭಕ್ಷ್ ಸೋತು. ಕೊಲ್ಲಲ್ಪಟ್ಟನು. ಬಹದ್ದೂರ್ ಶಾ ತನ್ನ ರಾಜಧಾನಿ ದೆಹಲಿಯೆಡೆಗೆ 1709ರ ಜನವರಿ 19 ರಂದು ಮರು ಪ್ರಯಾಣ ಬೆಳೆಸಿದನು. 1709ರ ಜನವರಿ 29ರಂದು ಆತ 'ತಲಬ್ ಜಾಕಿರ್ ಹುಸೇನ್' ಎಂಬಲ್ಲಿಗೆ ತಲುಪಿದನು. ಅಲ್ಲಿ ಲಾಹೋರ್ ಮತ್ತು ಜಮ್ಮು ಪ್ರಾಂತ್ಯದ ರಾಜ್ಯಪಾಲನಾಗಿ ಖ್ವಾಜ ಅಬ್ದುಲ್ಲಾ ದಿಲ್ ದಿಲೇರ್ ಖಾನ್‌ನನ್ನು ನೇಮಿಸಿ, ಅಧಿಕಾರವಹಿಸಿಕೊಳ್ಳುವಂತೆ ಸಂದೇಶ ಕಳುಹಿಸಿದ(1).

1709ರ ಮಾರ್ಚ್ 6 ರಂದು ಆತ ಕಮಲಾಪುರ ನಗರದ ಹತ್ತಿರಕ್ಕೆ ಬಂದಾನು. ಆತ ತನ್ನೆಲ್ಲ ಶತ್ರುಗಳನ್ನು ಸೋಲಿಸಿ, ಕೊಂದ ಕಾರಣದಿಂದ ಉಲ್ಲಸಿತ ಭಾವದಲ್ಲಿ ನಿಧಾನವಾಗಿ ದೆಹಲಿಯತ್ತ ಪ್ರಯಾಣಿಸುತ್ತಿದ್ದ. ಮಾರ್ಚ್ ಆರರಂದು ಆತ "ಹಬ್ಬದ ದಿನಗಳ ಹೊರತಾಗಿ, ಮುನೈಮ್ ಖಾನ್, 'ಖಾನ್‌ಖಾನನ್', 'ಜುಲ್ಫಿಕರ್ ಖಾನ್', 'ಆಮೀರ್-ಉಲ್-ಉಮ್ರಾ', ಚುಗತ್ತ ಖಾನ್, ಮಹಬ್ಬತ್ ಖಾನ್, ಶಾ ನವಾಜ್‌ಖಾನ್ ಮತ್ತು ಹಮೀದ್‌ಖಾನ್ ಇವರನ್ನು ಬಿಟ್ಟು ಬೇರೆ ಯಾರೂ ತಮ್ಮ ತಲೆಯ ಮೇಲೆ ಅಲಂಕಾರಿಕ ರುಮಾಲು ಧರಿಸುವಂತಿಲ್ಲ" ಎಂಬ ರಾಜಾಜ್ಞೆಯನ್ನು ಹೊರಡಿಸಿದ. ಮಾರ್ಚ್ 13 ರಂದು ಹಿಂದೂಗಳು ಪಲ್ಲಕ್ಕಿ ಹೊರುವುದನ್ನು ನಿಷೇಧಿಸಿದ. ಪಲ್ಲಕ್ಕಿಯಲ್ಲಿ(2) ಹಿಂದೂ ವ್ಯಕ್ತಿ ಕುಳಿತಿರುವುದನ್ನು ಕಂಡರೆ ಅಲ್ಲೆ ಬಂಧಿಸಿ, ಸೆರೆಮನೆಗೆ ತಳ್ಳುವಂತೆ ಅಪ್ಪಣೆ ಹೊರಡಿಸಿದ.

ಬಹದ್ದೂರ್ ಶಾ ಮಾರ್ಚ್ 29 ರಂದು ಮಾದ್ರಿ ನಗರವನ್ನು ತಲುಪಿದ. ಅಲ್ಲಿಂದ ಆತ ಅಸಾದ್‌ಖಾನ್ (ನವಾಬ್ ಅಸೀಫ್-ಉದ್-ದೌಲ-ನಿಜಾಮ್-ಉಲ್-ಮಾಲಿಕ್) ಮತ್ತು ಮೊರದಾಬದ್‌ನ ದಂಡನಾಯಕ ಅಮೀನ್‌ಖಾನ್ (ಚೈನ್ ಬಹದ್ದೂರ್) ಅವರಿಗೆ ಸಂದೇಶ ಕಳುಹಿಸಿ, ಬಂಡಾಯವೆದ್ದ ಕೃತ್ಯಗಳಿಗಾಗಿ ಮಾರವಾಡ (ಜೋಧಪುರ)ದ ರಾಜ ಅಜಿತ್‌ಸಿಂಗ್‌ಗೆ ಶಿಕ್ಷೆ ವಿಧಿಸಲು ಆಜ್ಞೆ ಮಡಿದ. ಇದಲ್ಲದೆ ದಂಗೆ ಎದ್ದಿದ್ದ ರಜಪೂತ ರಾಜರಾದ ರಾಜ ಅಜಿತ್‌ಸಿಂಗ್ (ಜೋಧಪುರ), ಜೈ ಸಿಂಗ್ ಸವಾಯ್ (ಅಂಬರ್), ಅಮರಸಿಂಗ್ (ಉದಯಪುರ) ಮೊದಲಾದವರನ್ನು ಶಿಕ್ಷಿಸಲು ರಾಜಪುತಾಣ (ಈಗಿನ ರಾಜಸ್ತಾನ)ದ ಕಡೆ ಹೊರಡಲು ನಿರ್ಧರಿಸಿದ. ಈ ರಜಪೂತ ರಾಜರು ತಮ್ಮ ಕಾಮಭಕ್ಷ್ ವಿರುದ್ಧ ಹೋರಾಟ ಯಾತ್ರೆಯಲ್ಲಿ ಮುಘಲ ದೊರೆಗೆ ಜೊತೆಯಾದರು. ಆದರೆ ಮಂಡ್ಸೂರ್‌ನಿಂದ ಅವರು ದೊರೆಯ ಸಾಂಗತ್ಯ ತೊರೆದು ಆತನಿಗೆ

ತಿಳಿಯದಂತೆ ಹಿಂದಿರುಗಿ ತಮ್ಮ ರಾಜಧಾನಿಗಳನ್ನು ಸೇರಿಕೊಂಡಿದ್ದರು. ತಮ್ಮ ರಾಜ್ಯಗಳಿಗೆ ಬಂದಾ ನಂತರ, ಮುಘಲ್ ದೊರೆಯು ನೇಮಿಸಿದ್ದ ನಿಯೋಗಿಗಳನ್ನು ಕೊಂದು ಸಂಪೂರ್ಣ ಸ್ವತಂತ್ರರೆಂದು ಘೋಷಿಸಿಕೊಂಡರು.

1709ರ ಆಗಸ್ಟ್ 21 ರಂದು ಬಹದ್ದೂರ್ ಶಾ ಸಮರ್ದವನ್ನು ತಲುಪಿದ. ಆತ ಮೀರ್ ಅಬ್ದುಲ್ಲಾ ಸಲಾಂ (ಕಾಜಿ ಕುರ್ಬಾನ್‌ನ ಮಗ) ನನ್ನು ಲಾಹೋರ್‌ನ ಕೊತ್ವಾಲನನ್ನಾಗಿ ನೇಮಿಸಿ ಆಜ್ಞೆಯನ್ನು ಹೊರಡಿಸಿದ. ಆಗಸ್ಟ್ 23 ರಂದು ಆಲಿ ಮರ್ದನ್ ಖಾನ್ (ಜಬರ್ದಸ್ತ್ ಖಾನ್)ನನ್ನು ಕಾಶ್ಮೀರದ ರಾಜ್ಯಪಾಲನನ್ನಾಗಿ ನೇಮಿಸಿದ. ಅದೇ ದಿನ ಮುಘಲ್ ಸೇನೆಯಲ್ಲಿ ಹಿಂದೂ ಕುದುರೆ ಸವಾರರ ಸಂಖ್ಯೆ ಕಡಿತಗೊಳಿಸುವ ಆದೇಶ ನೀಡಿದ. ಅಕ್ಟೋಬರ್ 12 ರಂದು ಲಾಹೋರ್ ದರ್ಬಾರ್‌ನ ಭಕ್ಷಿ ಹಾಗು ಮುಖ್ಯ ವರದಿಗಾರನನ್ನಾಗಿ ಅಲ್ತಾಫ್ ಖಾನ್‌ನನ್ನು ನೇಮಿಸಿದ.

### ಸಿಖ್ ವಿಜಯಗಳ ಸುದ್ದಿ ಬಹದ್ದೂರ್ ಶಾಗೆ ತಲುಪಿದ್ದು

1710ರ ಫೆಬ್ರವರಿ 25ರಂದು ಬಹದ್ದೂರ್ ಶಾ ಜಮ್ರೂಲಿ ನಗರವನ್ನು ತಲುಪಿದ. ಅಲ್ಲಿ ಸರ್ಹಿಂದ್‌ನ ರಾಜ್ಯಪಾಲ ವಜೀರ್ ಖಾನ್ ಪಂಜಾಬ್‌ನ ಕೆಲವು ಪ್ರದೇಶಗಳಲ್ಲಿ ಸಿಕ್ಖರು ಸಾಧಿಸಿದ ಗೆಲುವನ್ನು ವರದಿ ಮಾಡಿದ್ದ ಪತ್ರ ತಲುಪಿತು. ಆ ಪತ್ರದಲ್ಲಿ ವಜೀರ್ ಖಾನ್ ಒಕ್ಕಣೆ ಹೀಗಿತ್ತು– "ಸರ್ಹಿಂದ್ ಮತ್ತು ಪಂಜಾಬ್ ಪ್ರದೇಶದಲ್ಲಿ ಸಿಖ್ ಖಲ್ಸಾ ಉಂಟು ಮಾಡಿರುವ ನಾಶವನ್ನು ನಾನು ಹೇಗೆ ನಿರೂಪಿಸಲಿ? ಅವರು ಶ್ರೀಮಂತವಾಗಿದ್ದ ಪರಗಣಗಳನ್ನು ನಾಶಪಡಿಸಿದ್ದಾರೆ. ಬುರಿಯ ಮತ್ತು ಸಧೌರ ಪರಗಣವನ್ನು ವಶಪಡಿಸಿಕೊಂಡು ಲೂಟಿ ಮಾಡಿರುವ ಸುದ್ದಿ ಇಂದು ನನಗೆ ತಲುಪಿತು. ಸರ್ಕಾರಿ ಅಧಿಕಾರಿಗಳನ್ನು ಕೊಂದು ಹಾಕಿದ್ದಾರೆ. ದಹಮಾಲಾದ ಆಫ್ಘನ್ ಕುಟುಂಬದವರೂ ಹತರಾಗಿದ್ದಾರೆ." ಈ ಸುದ್ದಿಯನ್ನು ಕೇಳಿದ ತಕ್ಷಣ, ಮುಘಲ್ ದೊರೆ ದೆಹಲಿಯ ಪ್ರಧಾನಿ ನಿಜಾಮ್–ಉಲ್–ಮುಲ್ಕ್‌ಗೆ ಪತ್ರ ಬರೆದು ಸಿಖ್ ಬಂಡಾಯವನ್ನು ಸದೆ ಬಡಿಯಲು ವಜೀರ್‌ಖಾನ್‌ಗೆ ನೆರವಾಗಲು ಆಜ್ಞಾಪಿಸಿದ.

ಏಪ್ರಿಲ್ 23 ರಂದು ಲಾಹೋರ್‌ನಿಂದ ರುಸ್ತುಂ ಖಾನ್ ಬರೆದ ಪತ್ರವು ದೊರೆಯನ್ನು ತಲುಪಿತು. ಅದರಲ್ಲಿ "ಯಾವನೋ ಒಬ್ಬ ವ್ಯಕ್ತಿ ತನ್ನನ್ನು ಗುರು ಎಂದು ಕರೆದುಕೊಂಡು ಸೇನೆಗೆ ಜನರನ್ನು ಭರ್ತಿ ಮಾಡಿಕೊಂಡು ದೊಂಬಿಯನ್ನು ಹುಟ್ಟುಹಾಕುತ್ತಿದ್ದಾನೆ" ಎಂದು ಹೇಳಲಾಗಿತ್ತು. ಅದನ್ನು ಕಂಡು ದೊರೆ ಬಹದ್ದೂರ್ ಶಾ ಇಮಾನಾಬಾದ್ ಮತ್ತು ಲಾಹೋರ್‌ನ ಸುತ್ತಮುತ್ತ ಇದ್ದ ಸೇನಾಧಿಪತಿಗಳಿಗೆ ನಿರೂಪ ಕಳುಹಿಸಿ ಸಿಕ್ಖರಿಗೆ ಶಿಕ್ಷೆ ವಿಧಿಸಲು ಲಾಹೋರ್‌ನ ರಾಜ್ಯಪಾಲರಿಗೆ ನೆರವಾಗಬೇಕೆಂದು ಆದೇಶಿಸಿದ[(4)].

1710ರ ಮೇ 5ರಂದು ಬಹದ್ದೂರ್ ಶಾ ಅಜ್ಮೀರನ್ನು ತಲುಪಿದ. ಇಲ್ಲಿ ಜೈಪುರ, ಜೋಧಪುರ ಮತ್ತು ಉದಯಪುರ ರಾಜರ ರಾಯಭಾರಿಗಳು ಬಹದ್ದೂರ್ ಶಾನ ಮುಂದೆ ಹಾಜರಾಗಿ ತಮ್ಮ ರಾಜರ ಪರವಾಗಿ ಕ್ಷಮಾಪಣೆ ಬೇಡಿದರು[(5)]. ಮೇ 10ರಂದು ಯುವರಾಜ ಜಹಂದಾರ್ ಶಾನ ಮಧ್ಯಸ್ಥಿಕೆ ಮತ್ತು ಕೋರಿಕೆಯ ಮೇರೆಗೆ ಬಹದ್ದೂರ್ ಶಾ ಈ ರಜಪೂತ ರಾಜರನ್ನು ಕ್ಷಮಿಸಿ, ಗೌರವ ಪೋಷಾಕುಗಳನ್ನು ಕಳುಹಿಸಿಕೊಟ್ಟ. ಪಂಜಾಬ್‌ನ ಪರಿಸ್ಥಿತಿಯ ಬಗ್ಗೆ ಹೆಚ್ಚು ವ್ಯಾಕುಲನಾಗಿದ್ದ ಬಹದ್ದೂರ್ ಶಾ, ರಜಪೂತ ರಾಜರ ಮೇಲೆ ಕ್ರಮ ಜರುಗಿಸಲು ಬಯಸಲಿಲ್ಲ. ಹಾಗಾಗಿ ಅವರೊಡನೆ ರಾಜಿ ಮಾಡಿಕೊಳ್ಳುವುದನ್ನು ಆಯ್ಕೆ ಮಾಡಿಕೊಂಡ[(6)].

1710ರ ಮೇ 12ರಂದು ಪ್ರೀತ್‌ರಾವ್ ಎಂಬ ದೂತ ಹಾಜರಾಗಿ ಬಹದ್ದೂರ್ ಶಾ ನಿಗೆ "ಗುರು ಎಂದು ಘೋಷಿಸಿಕೊಂಡ ಒಬ್ಬ ಸಿಖ್ ವ್ಯಕ್ತಿ ಅನೇಕ ಜನರನ್ನು ಒಗ್ಗೂಡಿಸಿ ಸಹರಾಣ್‌ಪುರದ ಮೇಲೆ ದಾಳಿ ಮಾಡಿದ" ಎಂದು ಅರುಹಿದ. ಇದನ್ನು ಕೇಳಿದ ಕೂಡಲೇ ಸಿಕ್ಖರ ವಿರುದ್ಧ ತಕ್ಷಣವೇ ಕ್ರಮ ಜರುಗಿಸುವಂತೆ ಸರ್ಹಿಂದ್, ಲಾಹೋರ್ ಮತ್ತು ಜಮ್ಮು ಪ್ರಾಂತ್ಯದ ರಾಜ್ಯಪಾಲರಿಗೆ ಆದೇಶ ಕಳುಹಿಸಿದ.

ಅದೇ ದಿನ ಅಂಬರ್‌ನಲ್ಲಿದ್ದ ಚಕ್ರವರ್ತಿಯ ನಿಯೋಗಿ ತನ್ನ ಒಡೆಯನಿಗೆ ಬರೆದ ಪತ್ರದಲ್ಲಿ ಮುಂದಿನ ವಿಷಯವನ್ನು ತಿಳಿಸಿದ.

"ಈ ಸಿಖ್ ಪಂಥದ ಬಂಡಾಯವನ್ನು ಕಡೆಗಣಿಸಬಾರದೆಂದು ಸರ್ಹಿಂದ್‌ನ ರಾಜ್ಯಪಾಲರ ನಿಯೋಗಿಯೊಬ್ಬ ನನಗೆ ಹೇಳಿದ್ದಾನೆ. ಸಧೌರದಲ್ಲಿ ಎಪ್ಪತ್ತು ಸಾವಿರ (ಸಿಖ್) ಜನರು ಒಗ್ಗೂಡಿದ್ದಾರೆ. ಅವರು ಗುರುವಿನ ಹೆಸರನ್ನು ಪಠಿಸುತ್ತಾ "ಪವಿತ್ರಾತ್ಮನೊಬ್ಬ ಸ್ವರ್ಗದಿಂದ ಇಳಿದು ನಮ್ಮೊಡನೆ ಸೇರಿದ್ದಾನೆ" ಎಂದು ಹೇಳುತ್ತಾರೆ. ಅವರು ದಾವೋಬ ಪರಗಣವನ್ನು ನಾಶಪಡಿಸಿದ್ದಾರೆ. ಫತೇಬಾದ್ (ಬೀಯಾಸ್‌ನದಿ)ವರೆಗೆ ತಮ್ಮ ಪಾರಮ್ಯವನ್ನು ಸ್ಥಾಪಿಸಿದ್ದಾರೆ. ವಜೀರ್‌ಖಾನ್ ಬರೆದ ಪತ್ರವನ್ನು ಸ್ವೀಕರಿಸಿದ ನಂತರ, ನವಾಬ್ ನಿಜಾಮ್–ಉಲ್–ಮುಲ್ಕ್ ಅಸಾದ್ ಖಾನ್ ಅವರು ಹಿಸ್ಸಾರ್‌ನ ರಾಜ್ಯಪಾಲರಿಗೆ ಪತ್ರ ಬರೆದು ಸಿಕ್ಖರ ವಿರುದ್ಧದ ಆಂದೋಲನದಲ್ಲಿ ತನ್ನೊಡನೆ ಸೇರಬೇಕೆಂದು ಕೋರಿದ್ದಾರೆ. ಆದರೆ ಅವರೂ ಭಯಭೀತರಾಗಿದ್ದಾರೆ. ದೇವರ ಸಂಕಲ್ಪ ಏನಿದೆಯೋ ನೋಡೋಣ. ಈ ಸಂಘಟನೆಯ ಕೆಲವು ಜನರು ಲಾಹೋರ್ ವಲಯದಲ್ಲಿಯೂ ಕೋಲಾಹಲ ಸೃಷ್ಟಿಸಿದ್ದಾರೆ. ಅವರು ಹಲವರನ್ನು ಕೊಂದು ಸಹರಾಣಪುರ್‌ಗೆ ಮುತ್ತಿಗೆ ಹಾಕಿರುವುದಾಗಿ ತಿಳಿದುಬಂದಿದೆ. ಒಟ್ಟಾರೆ ಈ ಪಂಥದ ಶಕ್ತಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಈಗ ನವಾಬ್ ಆಸಿಫ್–ಉದ್–ದೌಲ ಅವರು ಮಹಮ್ಮದ್ ಅಮೀರ್ ಖಾನ್ ಮತ್ತು ಖಾನ್ ದುರಾನ್ ಬಹದ್ದೂರ್ ಅವರಿಗೆ ಪತ್ರ ಬರೆದು ಸಿಕ್ಖರ ವಿರುದ್ಧ ಕ್ರಮ ಕೈಗೊಳ್ಳಲು ತಕ್ಷಣವೇ ಹೊರಡಲು ಆಜ್ಞಾಪಿಸಿದ್ದಾರೆ. ಪತ್ರ ಸ್ವೀಕರಿಸಿದ ಅವರು ನವಾಬ್ ಸಹ ಸಿಕ್ಖರ ವಿರುದ್ಧ ಕ್ರಮಕ್ಕೆ ಹೊರಟರೆ ತಾವು ಅವರನ್ನು ಕೂಡಿಕೊಳ್ಳುವುದಾಗಿ ಉತ್ತರಿಸಿದ್ದಾರೆ........ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ಸಂಭವಿಸದ ಕಾರಣ, ವಜೀರ್‌ಖಾನನ ಜೊತೆ ಸಮಾಲೋಚಿಸಲು ಅಬ್ದುಲ್ಲಾ ಖಾನ್ (ಖ್ವಾಜಾ)ನನ್ನು ಕಳುಹಿಸಲು ನವಾಬ ನಿರ್ಧರಿಸಿದ್ದಾನೆ. ಆತ ಆ ಪ್ರದೇಶದ ಸುತ್ತಮುತ್ತ ಇರುವ ಸೇನಾನಾಯಕರಿಗೆ ಪತ್ರ ಬರೆದು ಈ ಪಂಥದ ಸಿಕ್ಖರನ್ನು ನಿಯಂತ್ರಿಸಲು ತಮ್ಮ ತಮ್ಮಲೇ ಚರ್ಚಿಸಿ ತೀರ್ಮಾನಿಸಬೇಕೆಂದು ನವಾಬ ತಿಳಿಸಿದ್ದಾನೆ. ಸಿಕ್ಖರ ವಿರುದ್ಧ ಕ್ರಮ ಕೈಗೊಳ್ಳಲು ಸಹ ಸಾಮ್ರಾಟರು ಆ ಪ್ರದೇಶಗಳ ಸೇನಾನಾಯಕರಿಗೆ ಆಜ್ಞಾಪಿಸಿದ್ದಾರೆ. (ಮುಘಲ್ ದೊರೆಗಳು) ಅಬ್ದುಲ್ ಖಾನ್‌ಗೆ 25 ಸಾವಿರ ಬೆಳ್ಳಿ ನಾಣ್ಯಗಳನ್ನು (ಆಲತ್–ಇ–ನುಕ್ರ) ಐವತ್ತು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಲು ಆಜ್ಞಾಪಿಸಿದ್ದಾರೆ. ಖಾನ್ ಸಾಹಿಬ್ ಅವರಿಗೂ ದುರ್ದಿನಗಳು ಕಾಡುತ್ತಿವೆ. ಆದರೆ ಮುಘಲ್ ಸಾಮ್ರಾಟರ ಆಜ್ಞೆಯ ಮೇರೆಗೆ ಈ ಕಾರ್ಯ ಕೈಗೊಳ್ಳಲು ಅಂಗೀಕರಿಸಿದ್ದಾರೆ[(8)]."

1710ರ ಮೇ 20 ರಂದು ಬಹದ್ದೂರ್ ಶಾ ನ ಕಾರವಾನ್ ಬಹಸು ಹತ್ತಿರ ನಿಂತಿತು. ಸಿಕ್ಖರು ಸರ್ಹಿಂದ್ ನಗರವನ್ನು ಆಕ್ರಮಿಸಿಕೊಂಡ ಸುದ್ದಿ ಅಲ್ಲಿ ತಲುಪಿತು. ವಜೀರ್‌ಖಾನ್‌ನನ್ನು ಕೊಲ್ಲಲಾಯಿತೆಂದು ಅವನ ಅಳಿಯ ಸಹ ಕೊಲ್ಲಲ್ಪಟ್ಟಿರಬೇಕು ಅಥವಾ ಬಂಧಿಯಾಗಿರಬೇಕೆಂದು ಚಕ್ರವರ್ತಿಗೆ ಸುದ್ದಿ ಹೇಳಲಾಯಿತು. ಈ ಸುದ್ದಿ ಇನ್ನೂ ದೃಢಪಡಬೇಕಾಗಿದೆಯೆಂದು ಮಾಹಿತಿದಾರ

ಸಾಮ್ರಾಟನಿಗೆ ಹೇಳಿದ.

1710ರ ಮೇ 24 ರಂದು ಬಹದ್ದೂರ್ ಆ ತೋಡ ತಲುಪಿದ. ಅಲ್ಲಿ ಆತನಿಗೆ ಸರ್‌ಹಿಂದ್ ಸಿಕ್ಖರಿಂದ ಪತನವಾಗಿರುವ ಮತ್ತು ವಜೀರ್‌ಖಾನ್ ಹತ್ಯೆಯಾಗಿರುವ ಸುದ್ದಿ ದೃಢಪಟ್ಟಿತು. ಬಹದ್ದೂರ್ ಶಾ ತಕ್ಷಣವೇ ಶಹಜಹಾನಾಬಾದ್ (ದೆಹಲಿ)ದಲ್ಲಿರುವ ಅಧಿಕಾರಿಗಳಿಗೆ ನಿರೂಪ ಕಳುಹಿಸಿ ಸಿಕ್ಖರ ವಿರುದ್ಧದ ಆಂದೋಲನಕ್ಕೆ ಅಲಹಾಬಾದ್‌ನ ರಾಜ್ಯಪಾಲ ಖಾನ್ ಜಹಾನ್ ಮತ್ತು ಉಬೇದ್‌ಖಾನ್‌ಗೆ ಎಂಟು ಲಕ್ಷ ರೂಪಾಯಿಗಳನ್ನು ಕಳುಹಿಸುವಂತೆ ಆದೇಶಿಸಿದ. ಸಾಮ್ರಾಟನು ಗುರು (ಬಂದಾ ಸಿಂಗ್) ವಿರುದ್ಧ ಸೇನೆಯನ್ನು ಮುನ್ನಡೆಸಲು ಖಾನ್ ಬಹದ್ದೂರ್, ಸಂಶೇರ್ ಖಾನ್, ಚೇತ್ ಸಿಂಗ್ ಕಟೋನ್, ಅನೂಪ್ ಸಿಂಗ್ ಮತ್ತು ಇಸ್ಲಾಖಾನ್ ಅವರುಗಳಿಗೆ ತನ್ನ ಆಜ್ಞೆಯನ್ನು ತಲುಪಿಸಲು ಅಫ್ಜಲ್ ಖಾನ್‌ನನ್ನು ಶಹಜಹಾನಾಬಾದ್‌ಗೆ ಕಳುಹಿಸಿದ.

ಬಂದಾ ಸಿಂಗ್‌ನ ಗೆಲುವುಗಳು ಬಹದ್ದೂರ್ ಶಾ ತನ್ನ ಯುದ್ಧ ತಂತ್ರವನ್ನು ಬದಲಿಸುವಂತೆ ಮಾಡಿದವು. ಆತ ಒಂದು ಕಡೆ ರಜಪೂತರು, ಇನ್ನೊಂದೆಡೆ ಸಿಕ್ಖರು–ಹೀಗೆ ಎರಡು ಕಡೆ ಏಕಕಾಲಕ್ಕೆ ಹೋರಾಡಲಾಗದೆಂಬ ವಾಸ್ತವವನ್ನು ಮನಗಂಡ. ಹಾಗಾಗಿ ಈ ಹಿಂದೆ ಉಲ್ಲೇಖಿಸಿರುವಂತೆ ಆತ ರಜಪೂತರ ಜೊತೆ ಸಂಧಾನ ಮಾಡಿಕೊಳ್ಳಲು ನಿರ್ಧರಿಸಿದ. ಆತ ಮೂವರು ರಜಪೂತ ರಾಜರಿಗೆ (ಅಂಬರ್/ಜೈಪುರ, ಅಜ್ಮೀರ್ ಮತ್ತು ಜೋಧ್‌ಪುರ) ಕ್ಷಮಾದಾನ ಪತ್ರವನ್ನು ಕಳುಹಿಸುವ ಜೊತೆಗೆ ಹೊಸ ಹಕ್ಕು ಮತ್ತು ಅನುದಾನಗಳನ್ನು ದಯಪಾಲಿಸಿದ. ಅಲ್ಲದೆ ಸಿಕ್ಖರ ವಿರುದ್ಧದ ಯುದ್ಧಗಳಲ್ಲಿ ತನ್ನನ್ನು ಸೇರಿಕೊಳ್ಳುವಂತೆ ಅವರಿಗೆ ಸಂದೇಶ ಕಳುಹಿಸಿದ. ಇದಲ್ಲದೆ ಸಿಕ್ಖರ ವಿರುದ್ಧದ ಹೋರಾಟ ಯಾತ್ರೆಯಲ್ಲಿ ತಾನೇ ಸೇನೆ ಮುನ್ನಡೆಸಲು ಪಂಜಾಬ್‌ಗೆ ತೆರಳುವುದಾಗಿ ಹೇಳಿದ.

1710ರ ಮೇ 27ರಂದು ಶಪ್‌ಶಿಕಾನ್‌ಖಾನ್ ಸಾವಮ್ರಾಟ ಬಹದ್ದೂರ್ ಶಾಗೆ ಕೋರಿಕೆಯೊಂದನ್ನು ಕಳುಹಿಸಿದ. ಅದು ಹೀಗಿತ್ತು– "ಮುಘಲ್ ಸಾಮ್ರಾಟರು ಸರ್‌ಹಿಂದ್‌ನ ರಾಜ್ಯಪಾಲ ಹುದ್ದೆಯನ್ನು ನನಗೆ ದಯಪಾಲಿಸಿದರೆ, ಪ್ರಕ್ಷುಬ್ಧತೆಯನ್ನುಂಟು ಮಾಡಿರುವ ಆ ಗುರುವನ್ನು ಬಗ್ಗು ಬಡಿಯುತ್ತೇನೆ." ಈ ಕೋರಿಕೆಯನ್ನು ಸಾಮ್ರಾಟನಿಗೆ ಬಕ್ಷಿ–ಉಲ್–ಮುಲ್ಕ್–ಜುಲ್ಫೀಕರ್ ಮೂಲಕ ಕಳುಹಿಸಿದ. ಆದರೆ ಸಾಮ್ರಾಟ ಅದನ್ನು ಅಂಗೀಕರಿಸಲಿಲ್ಲ(11).

ಗುರು (ಬಂದಾ ಸಿಂಗ್) ಸಹಾಯವನ್ನು ಕೋರಿ ರಜಪೂತ ರಾಜನಾದ ಅಜಿತ್‌ಸಿಂಗ್, ಜೈಸಿಂಗ್ ಸವಾಯ್ ಅವರಿಗೆ ಪತ್ರ ಕಳುಹಿಸಿರುವನೆಂದೂ, ಅದಕ್ಕೆ ಅವರು ಉತ್ತರ ಕಳುಹಿಸಿರುವ ವಿಷಯ ಚಕ್ರವರ್ತಿ ಬಹದ್ದೂರ್ ಶಾಗೆ ಮೇ 28 ರಂದು ತಿಳಿಯಿತು. ಅಲ್ಲದೆ ಇಬ್ಬರು ರಾಜರು ಮನೋಹರಪುರಕ್ಕೆ ತೆರಳಲು ಸಂಭಾರ್ ಪಟ್ಟಣವನ್ನು ಬಿಟ್ಟಿರುವುದು ಸಹ ಚಕ್ರವರ್ತಿಗೆ ತಿಳಿಯಿತು. ಮುನ್ನೈಮ್ ಖಾನ್ ಖಾನ್ ಖಾನಂನ ಕೋರಿಕೆಯ ಮೇರೆಗೆ ಜೂನ್ 5ರಿಂದ ಚಕ್ರವರ್ತಿಯು ಮನ್ನೈಯಂ ಖಾನ್‌ನ ಮಗ ಮಹಬ್ಬತ್ ಖಾನ್‌ನನ್ನು ಕರೆಸಿ ರಜಪೂತ ರಾಜರನ್ನು ಭೇಟಿಯಾಗಿ ತನ್ನ (ಚಕ್ರವರ್ತಿಯ) ಸ್ನೇಹಹಸ್ತವಿರುವುದನ್ನು ತಿಳಿಸಿ ಅವರನ್ನು ಆಸ್ಥಾನಕ್ಕೆ ಕರೆತರಲು ರಜಪೂತ ರಾಜರ ಹತ್ತಿರಕ್ಕೆ ಕಳುಹಿಸಿದ(12).

ಮಹಬ್ಬತ್‌ಖಾನ್ ತನ್ನ ಕಾರ್ಯದಲ್ಲಿ ಸಫಲನಾಗಿ ರಜಪೂತ ರಾಜರನ್ನು ದೆಹಲಿಗೆ ಕರೆತರುತ್ತಿರುವ ಸುದ್ದಿ ಚಕ್ರವರ್ತಿ ಬಹದ್ದೂರ್ ಶಾಗೆ ಜೂನ್ 10ರಂದು ತಲುಪಿತು. ಅವರು

ಬರುತ್ತಿರುವ ಹಾದಿಯಲ್ಲಿ ಎದುರುಗೊಂಡು ರಜಪೂತ ರಾಜರನ್ನು ಗೌರವದಿಂದ ತನ್ನ ಆಸ್ಥಾನದಲ್ಲಿ ಹಾಜರಪಡಿಸಬೇಕೆಂದು ತಿಳಿಸಿ ಚಕ್ರವರ್ತಿ ತನ್ನ ಸಚಿವರನ್ನು ಅಟ್ಟಿದ. ಅದೇ ದಿನ ಲಾಹೋರ್‌ನ ಅಧಿಕಾರಿಗಳಿಗೆ ಆದೇಶ ಕಳುಹಿಸಿ, ವಜೀರ್‌ಖಾನ್‌ನ ಸೋದರರನ ಮಗ ಮಹಮ್ಮದ್ ಶಾಕಿಗೆ ಪ್ರಯಾಣ ವೆಚ್ಚವಾಗಿ ಮೂರು ಸಾವಿರ ರೂಪಾಯಿಗಳನ್ನು ನೀಡುವಂತೆ ಮತ್ತು ಆತ ತನ್ನ (ಚಕ್ರವರ್ತಿಯ) ಮುಂದೆ ಹಾಜರಾಗುವಂತೆ ಆಜ್ಞಾಪಿಸಿದ. ಬಕ್ಷಿ ಶಾ ನವಾಜ್‌ನ ಪಾಳೆಯದ ಅಧಿಕಾರಿಗಳು ಸಿಕ್ಖರಿಗೆ ಹೆದರಿ ತಮ್ಮ ಪ್ರಾಂತ್ಯವನ್ನು ತೊರೆದು ಹೋಗಿರುವ ಸುದ್ದಿ ಸಹ ಚಕ್ರವರ್ತಿ ಬಹದ್ದೂರ್ ಶಾ ನನ್ನು ತಲುಪಿತು. ಶಾಣೆಸರ ವಲಯದಲ್ಲೂ ಭಯ ಮನೆ ಮಾಡಿತ್ತು. ಪಾಣಿಪತ್ (ಪರಗಣ ಫೈಜಾಬಾದ್)ನ ಅನೇಕ ಶ್ರೀಮಂತರು ತಮ್ಮ ಸಂಪತ್ತು ಮತ್ತು ಕುಟುಂಬದೊಡನೆ ಊರನ್ನು ತೊರೆದು ದೆಹಲಿಯ ಶಹಜಹಾನ್‌ಬಾದ್ ತಲುಪಿದರು.

ಜೂನ್ 11 ರಂದು ಬಹದ್ದೂರ್ ಶಾ ತನ್ನ ಪ್ರಯಾಣವನ್ನು ಮುಂದುವರೆಸಿದ. ಆತ ಸ್ವಲ್ಪ ದೂರ ಕ್ರಮಿಸಿದ್ದಾಗಲೇ ದಾರಿಯಲ್ಲಿ ಮಹಬ್ಬತ್ ಖಾನ್ ಎದುರುಗೊಂಡ. ಇಬ್ಬರು ರಜಪೂತ ರಾಜರು ಅವನೊಡನಿದ್ದರು. ಅಜಿತ್ ಸಿಂಗ್ ಮತ್ತು ಜೈಸಿಂಗ್ ಸವಾಯ್ ತಲಾ 200 ಚಿನ್ನದ ಮೊಹರುಗಳನ್ನು ಮತ್ತು 5000 ರೂಪಾಯಿಗಳನ್ನು ಚಕ್ರವರ್ತಿಗೆ ಕಾಣಿಕೆಯಾಗಿ ನೀಡಿದರು. ಬದಲಾಗಿ ಬಹದ್ದೂರ್ ಶಾ ಅವರಿಗೆ ಗೌರವ ವಸ್ತ್ರ, ರತ್ನ ಖಚಿತ ಖಡ್ಗಗಳು, ಆನೆಗಳು, ಕುದುರೆಗಳು ಮತ್ತು ಇತರೆ ಅಮೂಲ್ಯ ವಸ್ತುಗಳನ್ನಿತ್ತು ಗೌರವಿಸಿದ. ಚಕ್ರವರ್ತಿ ಪ್ರೀತಿ ಮತ್ತು ಸ್ನೇಹದ ಮಾತುಗಳಿಂದ ಅವರನ್ನುದ್ದೇಶಿಸಿ ಮಾತನಾಡಿದ. ಭೇಟಿಯ ನಂತರ ಅವರು ಚಕ್ರವರ್ತಿಯ ಎಲ್ಲ ಹೋರಾಟಗಳಲ್ಲಿ ವಿಶೇಷವಾಗಿ ಸಿಕ್ಖರ ವಿರುದ್ಧದ ಹೋರಾಟಗಳಲ್ಲಿ ತಮ್ಮೆಲ್ಲ ನೆರವು ನೀಡುವುದಗಿ ಭರವಸೆ ನೀಡಿ ಚಕ್ರವರ್ತಿಗೆ ವಿದಾಯ ಹೇಳಿದರು.

ಖಾಫಿಖಾನ್[14] ಹೇಳುತ್ತಾರೆ: “ಚಕ್ರವರ್ತಿ ಅಜ್ಮೀರನ್ನು ತಲುಪಿದಾಗ ಸಿಕ್ಖರು ಸೃಷ್ಟಿಸಿದ ಗಲಭೆಯ ಹೆಚ್ಚು ಹೆಚ್ಚು ಸುದ್ದಿಗಳು ತಲುಪತೊಡಗಿದವು. ಈ ವೇಳೆಗೆ ಸರ್ಹಿಂದ್‌ನ ಅಮೀರ್‌ಗಳು ಮತ್ತು ಸಧೌರದ ಪೀರ್‌ಜಾದಾಗಳು ಅಲ್ಲಿಗೆ ತಲುಪಿದರು. ಅವರ ಪರಿಸ್ಥಿತಿಯನ್ನು ತಿಳಿದ ನಂತರ ಚಕ್ರವರ್ತಿ ಬಹಳಷ್ಟು ಚಡಪಡಿಸಿದ. ಅವರು ಸಂಭವಿಸಿದ ಘಟನೆಗಳನ್ನು ನಿರೂಪಿಸಿದಾಗ ಅಲ್ಲಿದ್ದವರೆಲ್ಲರೂ ಭಯದಿಂದ ಹೌಹಾರಿದರು.”

ಬಂದಾ ಸಿಂಗ್ ಸ್ವತಃ ತಾನೇ ಲೋಹಗಡದಲ್ಲಿ ಬೀಡುಬಿಟ್ಟಿರುವ ಸುದ್ದಿ ಜೂನ್ 22 ರಂದು ಚಕ್ರವರ್ತಿಗೆ ತಲುಪಿತು. ಒಂದು ವಾರದ ಹಿಂದೆ ಬಂದಾ ಸಿಂಗ್ ಗುಲಾಬ್‌ನಗರ (ಬುರಿಯ ನಗರಕ್ಕೆ ಬಂದಾ ಸಿಂಗ್ ನೀಡಿದ ಹೆಸರು)ದಿಂದ ಆನೆಯ ಮೇಲೆ ಕುಳಿತು ಅಲ್ಲಿಂದ ಹನ್ನೆರಡು ಕಿ.ಮೀ. ದೂರದಲ್ಲಿದ್ದ ಲೋಹಗಡಕ್ಕೆ ಹೊರಟಿದ್ದ. ಅವನ ಹಿಂದೆ ಎರಡೂವರೆ ಸಾವಿರ ಕುದರೆ ಸೈನ್ಯ, ಹತ್ತು ಸಾವಿರಕ್ಕೂ ಹೆಚ್ಚಿನ ಪದಾತಿ ಹೊರಟಿತ್ತು. ಜಲಾಲ್‌ಖಾನ್ ವಿರುದ್ಧ ಸೋತ ಸಿಖ್ ಸೈನಿಕರು ಸಹರಾಣ್‌ಪುರಕ್ಕೆ ಹಿಂದಿರುಗಿರುವ ವಿಷಯ ಬಂದಾ ಸಿಂಗ್‌ಗೆ ಬುರಿಯಾದಲ್ಲಿ ತಿಳಿಯಿತು. ಅಲ್ಲಿನ ಹೊಸ ಪೊಲೀಸ್ ಮುಖ್ಯಸ್ಥ ಅಮರ್‌ಸಿಂಗ್‌ನನ್ನು ಬಂದಾ ಸಿಂಗ್ ಭೇಟಿಯಾದ. ಅಮರಸಿಂಗ್‌ನ ಮುಖವನ್ನು ಎರಡು ಬಾರಿ ಈಟಿಯಲ್ಲಿ ಸ್ಪರ್ಶಿಸಿದ ಬಂದಾ ಸಿಂಗ್ “ಆಫ್ಘನ್ನರ ವಿರುದ್ಧದ ಯುದ್ಧದಲ್ಲಿ ನೀನೇಕೆ ಓಡಿಹೋದೆ” ಎಂದು ಪ್ರಶ್ನಿಸಿದ. ಅದಕ್ಕೆ ಅಮರ್‌ಸಿಂಗ್, ಹಿಂದೂ ಚೌಧರಿ ಲಾಲ್‌ಕನ್ವರ್ ಗುಜ್ಜರ್ ಮೋಸ ಮಾಡಿದನೆಂದು ಹೇಳಿದ. ಆಗ ಬಂದಾ ಸಿಂಗ್ ಹೇಳಿದ– “ನಾವು ಈ ಹೋರಾಟವನ್ನು ನ್ಯಾಯಕ್ಕಾಗಿ ಮಾಡುತ್ತಿದ್ದೇವೆ. ಗುಜ್ಜರ್‌ಗಳ ಮಾತಿರಲಿ, ಎಲ್ಲ

ಹಿಂದೂಗಳು ಇದರಲ್ಲಿ ಪಾಲ್ಗೊಳ್ಳಲು ನಮ್ಮ ಜೊತೆಯಾಗಬೇಕು." ಅನಂತರ ಬಂದಾ ಸಿಂಗ್ ಬುರಿಯಾದ ಜಮೀನುದಾರ ಜನ್ ಮಹಮ್ಮದ್‌ನನ್ನು ಉದ್ದೇಶಿಸಿ ಹೇಳಿದ– "ನಿಮ್ಮೆಲ್ಲ ಪಾಪ ಕೃತ್ಯಗಳನ್ನು ನಾವು ಕ್ಷಮಿಸಿದ್ದೇವೆ. ಈ ಪರಗಣದ ಮುಖ್ಯಸ್ಥನಾಗಿ ನಿನ್ನನ್ನು ನೇಮಿಸಿದ್ದೇವೆ. ಈಗ ನೀನು ಚಾಂದ್ಲದ ನಾಯಕ ಸರದಾರ್‌ಖಾನ್‌ನನ್ನು ಜೊತೆಯಲ್ಲಿ ಕರೆದುಕೊಂಡು ಜಲಾಲ್ ಖಾನ್‌ನನ್ನು ಸೋಲಿಸಲು ಹೋಗಬೇಕು" ಎಂದು ಹೇಳಿದ.

ಬುರಿಯಾ ನಾಯಕ ಖಾಜಿ ಶಾ ಮಹಮ್ಮದ್‌ನನ್ನು ಬಂಧಿಸಿ ಅವನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು, ಅವನನ್ನು ಲೋಹಗಡದ ಸೆರೆಮನೆಯಲ್ಲಿಡಲಾಗಿದೆಯೆಂಬ ವಾರ್ತೆಯನ್ನು ಚಕ್ರವರ್ತಿ ಬಹದ್ದೂರ್ ಶಾಗೆ ಅರುಹಲಾಯಿತು. ಖಾಜಿ ಶಾ ಮಹಮದ್‌ನ ಸ್ಥಾನದಲ್ಲಿ ಈಗ ಗುರು ಭಕ್ಷ್‌ಸಿಂಗ್ ನೇಮಕಗೊಂಡು ಸೇನೆ ಮತ್ತು ಆಡಳಿತ ವಹಿಸಿಕೊಂಡಿರುವನೆಂದು, ಅವನ ಸಹಾಯಕನಾಗಿ ಕಿಶೋರ್‌ಸಿಂಗ್ ನೇಮಕವಾಗಿರುವುದನ್ನು ಸಹ ತಿಳಿಸಿದರು. ಬಂದಾ ಸಿಂಗ್ ಈಗ ಬುರಿಯಾ ನಗರವನ್ನು ಗುಲಾಬ್‌ನಗರವೆಂದು ನಾಮಕರಣ ಮಾಡಿದ ಸುದ್ದಿ ಸಹ ಚಕ್ರವರ್ತಿಯ ಕಿವಿಗೆ ಬಿತ್ತು. ಈ ಎಲ್ಲ ಘಟನೆಗಳು ಬಹದ್ದೂರ್‌ಶಾ ನನ್ನು ಕಲಕಿದವು[15].

ಬಹದ್ದೂರ್ ಶಾನ ಕಾರವಾನ್ 1710ರ ಜುಲೈ 1 ರಂದು ಅಜ್ಮೀರ್‌ನಿಂದ 45 ಕಿ.ಮೀ. ದೂರದಲ್ಲಿರುವ ರೂಪ್ ನಗರವನ್ನು ತಲುಪಿತು. ಸಿಕ್ಖರು ರಾಂಪುರ, ನನೌಟ, ಜುಂಜಾನ, ಬಕೌರ್, ಬರಸದು, ಸಧೌರ, ಕರನ, ಬುಧನ, ಕಂಡಾಲ, ಬುರಿಯ ಮುಂತಾದ ನಗರ ಪಟ್ಟಣಗಳನ್ನು ವಶಪಡಿಸಿಕೊಂಡಿರುವ ಸುದ್ದಿ ಚಕ್ರವರ್ತಿಗೆ ತಲುಪಿತು. ಅದೇ ವೇಳೆ ಚಕ್ರವರ್ತಿಗೆ ಜಲಾಲ್‌ಖಾನ್ ಸಿಕ್ಖರನ್ನು ಸೋಲಿಸಿ ಅವರ ಎರಡು ಫಿರಂಗಿಗಳು, ಐದು ಬಂದೂಕುಗಳು, ಹಲವಾರು ರೈಫಲ್‌ಗಳು, ಒಂದು ಸಾವಿರ ಬಾಣ, ನಾಲ್ಕು ಡೇರೆ ಮತ್ತು ಇತರೆ ಸಾಮಾನುಗಳನ್ನು ಹಾಗೂ 14 ಸಾವಿರ ರೂಪಾಯಿಗಳನ್ನು ವಶಪಡಿಸಿಕೊಂಡ ಸುದ್ದಿ ತಿಳಿಯಿತು. ಇದು ಚಕ್ರವರ್ತಿಯ ಮುದುಡಿದ್ದ ಮನಸ್ಸನ್ನು ತುಸು ಅರಳಿಸಿತು. ಜಲಾಲ್‌ಖಾನ್‌ಗೆ ಚಕ್ರವರ್ತಿ ರಾಜವಸ್ತ್ರ ಮತ್ತು ಅಭಿನಂದನಾ ಪತ್ರ ಕಳುಹಿಸಿದ. ಒಂದು ಸಣ್ಣ ವಿಜಯಕ್ಕೆ ಚಕ್ರವರ್ತಿ ಎಷ್ಟೊಂದು ಸಂತುಷ್ಟನಾದನೆಂದರೆ, ಸರ್ಹಿಂದ್ ಮತ್ತು ಸಹರಾಣ್‌ಪುರದ ರಾಜ್ಯಪಾಲ ಹುದ್ದೆಯನ್ನು ಜಲಾಲ್‌ಖಾನ್‌ಗೆ ವಹಿಸಲು ನಿರ್ಧರಿಸಿದ[16].

ಜುಲೈ 2ರಂದು ಚಕ್ರವರ್ತಿಗೆ, ಸರ್ಹಿಂದ್ ವಿಜಯದ ನಂತರ ಬಂದಾ ಸಿಂಗ್ ಮಾಡಿದ ಘೋಷಣೆಗಳನ್ನು ಯಾರೋ ಒಬ್ಬರು ಓದಿ ಹೇಳಿದರು. ಅದು ಹೀಗಿತ್ತು. "ಗುರುನಾನಕರ ಮಹಿಮೆ ಈ ಜಗತ್ತು ಮತ್ತು ದೇವಲೋಕದಲ್ಲಿ ಸಾಧಿತವಾಗಿದೆ. ನಿಜವಾದ ಗುರು ಲೌಕಿಕ ಮತ್ತು ಅಲೌಕಿಕ ಕ್ಷೇತ್ರಗಳ ಗುರು". ಹಾಗೆಯೇ ಚಕ್ರವರ್ತಿಗೆ ಸಿಕ್ಖರು ಬಳಕೆಯಲ್ಲಿರುವ ಕೆಲವು ಪದಗಳಿಗೆ ಬೇರೊಂದು ವಿಚಿತ್ರ ಪದಗಳನ್ನು ಸೃಷ್ಟಿಸಿರುವ ವಿಷಯವನ್ನು ತಿಳಿಸಿದರು. ಒಬ್ಬನೇ ಸಿಖ್ ವ್ಯಕ್ತಿಯನ್ನು ಅವರು ಫೌಜ್ (ಸೈನ್ಯ) ಎಂದು ಕರೆಯುತ್ತಿದ್ದರು. ತಮ್ಮದೇ ನಾಣ್ಯವನ್ನು ಚಲಾವಣೆಗೆ ತಂದಿದ್ದರು. ತಮ್ಮದೇ ಪಂಚಾಂಗ ಅಥವಾ ಶಕವರ್ಷವನ್ನು ಆರಂಭಿಸಿ ಅಧಿಕಾರಿಗಳಿಗೆ ಕಳುಹಿಸುತ್ತಿದ್ದ ಪತ್ರಗಳಲ್ಲಿ ಒಂದನೇ ವರ್ಷ ಎಂದು ನಮೂದಿಸುತ್ತಿದ್ದರು. ರೈತರಿಗೆ ಬೆಳೆದ ಉತ್ಪನ್ನದಲ್ಲಿ ಮೂರನೇ ಒಂದರಷ್ಟು ತೆರಿಗೆ ವಿಧಿಸುತ್ತಿದ್ದರು. ವಜೀರ್‌ಖಾನ್‌ನಿಂದ ಅಪಾರ ಸಂಪತ್ತಿನ ಜೊತೆಗೆ ಅನೇಕ ಆನೆಗಳು ಕುದುರೆ ಮತ್ತು ಸರಕುಗಳನ್ನು ಸೂರೆ ಮಾಡಿದ್ದರು. ಸಾಮಾನ್ಯ ಜನರ ಮನಸ್ಸು ಅನಿಶ್ಚತೆಯ ಗೂಡಾಗಿತ್ತು[17].

ಬಂದಾ ಸಿಂಗ್ ಸ್ವತಃ ಸಹರಾಣ್‌ಪುರ ತಲುಪಿದ ಸುದ್ದಿ ಕೆಲ ಕಾಲದ ನಂತರ ಚಕ್ರವರ್ತಿಗೆ ತಿಳಿಯಿತು. ಸಾದತ್ ಖಾನ್ ಮತ್ತು ಕೆಲವು ಅಮೀರರು ಅವನ ವಿರುದ್ಧ ಹೋರಾಡಲು ಯೋಜಿಸಿದರು. ಸಾದತ್‌ಖಾನ್ ಬಳಿ ಏಳು ಸಾವಿರ ಸೈನಿಕರಿದ್ದರು. ಜಲಾಲ್‌ಖಾನ್ ತನ್ನ ಭದ್ರಕೋಟೆ ಜಲಾಲಾಬಾದ್‌ನಲ್ಲಿ ಉಳಿದಿದ್ದ. ಸಾದತ್‌ಖಾನ್‌ನ ಆರರಿಂದ ಎಂಟು ಸಾವಿರ ಸೈನಿಕರು ಸಿಕ್ಖರಿಗೆ ಪ್ರಬಲವಾದ ಹೋರಾಟ ನೀಡಿದ ಸುದ್ದಿ ಚಕ್ರವರ್ತಿಗೆ ಜುಲೈ 7ರಂದು ತಲುಪಿತು. ಆ ಯುದ್ಧದಲ್ಲಿ ಎಂಟು ನೂರು ಸಿಖ್ ಸೈನಿಕರು ಹತರಾದ ಹಾಗೂ ಸಿಕ್ಖರು ಸೋತುಹೋದ ಸುದ್ದಿಯಾಗಿತ್ತು. ಅದೇ ಸುದ್ದಿಯಲ್ಲಿ ಸತ್ತವರಲ್ಲಿ ಬಂದಾ ಸಿಂಗ್ ಸಹ ಸೇರಿದ್ದ ಎಂದೂ ಕೇಳಿ ಬಂತು. ಚಕ್ರವರ್ತಿಗೆ ಇದನ್ನು ಕೇಳಿ ಸಂತೋಷಪಟ್ಟ. ಆದರೆ ಬಂದಾ ಸಿಂಗ್ ಸಾವನ್ನು ದೃಢಪಡಿಸಿಕೊಳ್ಳಬಯಸಿದ. ಅದರ ವಿವರಗಳನ್ನು ಪಡೆಯುವಂತೆ ಸಯ್ಯದ್ ವಾಜಿದ್ದೀನ್‌ಗೆ ಸೂಚಿಸಿದ. ಆದರೆ ಈ ಸುದ್ದಿಯು ಸತ್ಯವಲ್ಲವೆಂದು ತಿಳಿಸಿದ ವಾಜಿದ್ದೀನ್, ಬಂದಾ ಸಿಂಗ್ ಗಾಯಗೊಳ್ಳದೆ ತಪ್ಪಿಸಿಕೊಂಡನೆಂದೂ, ಜಲಾಲ್‌ಖಾನ್ ಅವನನ್ನು ಅಟ್ಟಿಸಿಕೊಂಡು ಹೋದರೂ, ಅವನ ಹತ್ತಿರಕ್ಕೆ ಹೋಗಲಾಗಲಿಲ್ಲವೆಂದು ತಿಳಿಸಿದ.

ಜುಲೈ 8ರಂದು ಬಹದ್ದೂರ್ ಶಾ, ಸರ್ಹಿಂದ್‌ನ ರಾಜ್ಯಪಾಲನಾಗಿ ಸಿಕರಂದರಬಾದ್ ಮತ್ತು ಮೀರತ್‌ನ ಸೇನಾನಾಯಕನಾಗಿದ್ದ ಜೈನುದ್ದೀನ್ ಅಹ್ಮದ್‌ಖಾನ್‌ನನ್ನು ನೇಮಿಸಿದ. ಅವನ ಮಾನ್ಸಾಬ್ 1400 ಕುದುರೆಯಾಳುಗಳಿಂದ 2200 ಕ್ಕೇರಿತು. ಆದರೆ ಸರ್ಹಿಂದ್‌ಗೆ ಹೋಗಲು ಜೈನುದ್ದೀನ್‌ಗೆ ಭಯವಾಯಿತು[18].

ಜುಲೈ 23ರಂದು ಬಹದ್ದೂರ್ ಶಾ ಉದಯಪುರ ತಲುಪಿದ. ಇಲ್ಲಿಗೆ ಬಂದಾಗ ಬಂದಾ ಸಿಂಗ್ ಪಾಣಿಪತ್ ಅನ್ನು ವಶಪಡಿಸಿಕೊಳ್ಳಲು ಸೈನ್ಯವೊಂದನ್ನು ಕಳುಹಿಸಿರುವ ಸುದ್ದಿ ತಿಳಿಯಿತು. ಕೆಲವು ರಾಜಾಧಿಕಾರಿಗಳು ಸಹ ಬಂದಾ ಸಿಂಗ್‌ನ ಸೇನೆಯಲ್ಲಿ ಸೇರಿಹೋಗಿರುವುದನ್ನು ಚಕ್ರವರ್ತಿಯ ಗಮನಕ್ಕೆ ತರಲಾಯಿತು. ಸಿಕ್ಖರು ಈಗ ಸರ್ಹಿಂದ್ ಮತ್ತು ಸಹರಾಣ್‌ಪುರದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಿದ್ದರು. ಕೆಲವು ಮುಸ್ಲಿಮರ ಸಹ ಸಿಖ್ ಧರ್ಮಕ್ಕೆ ಸೇರಿದ್ದರು. ಭಕ್ಷಿ ಮಹಮ್ಮದ್ ನಾಸಿರ್ ಸಿಖ್ ಧರ್ಮಕ್ಕೆ ಸೇರಿ ಭಕ್ಷಿ ನಸೀರ್‌ಸಿಂಗ್ ಎಂಬ ಹೆಸರಿಟ್ಟುಕೊಂಡ. ಆತನನ್ನು ಕೋಶಾಧಿಕಾರಿಯಾಗಿ ಬಂದಾ ಸಿಂಗ್ ನೇಮಿಸಿದ. ಈ ಎರಡೂ ನಗರಗಳಲ್ಲಿ ಒಬ್ಬ ಆಫ್ಘನ್ ಅಧಿಕಾರಿಯೂ ಉಳಿದಿರಲಿಲ್ಲ. ಬಂದಾ ಸಿಂಗ್‌ಗೆ ಕೆಲವು ಅಲೌಕಿಕ ಶಕ್ತಿಗಳಿವೆ ಎಂದು ಕೆಲವರು ಚಕ್ರವರ್ತಿಗೆ ಹೇಳಿದರು. ಅದಕ್ಕೆ ಪೂರಕವಾಗಿ ಕತೆಯೊಂದನ್ನು ಹೇಳುತ್ತಿದ್ದರು. ಬಂದಾ ಸಿಂಗ್‌ನ ಸೈನ್ಯ ಯಮುನಾ ತೀರಕ್ಕೆ ಬಂದಾಗ **"**ನನ್ನ ಸೈನ್ಯ ದಾಟಲು ದಾರಿಬಿಡು**"** ಎಂದು ಬಂದಾ ಸಿಂಗ್ ನದಿಗೆ ಹೇಳಿದನಂತೆ. ನದಿ ನಿಶ್ಚಲವಾಯಿತಂತೆ. ಸಿಕ್ಖರು ಸುಲಭವಾಗಿ, ತೊಂದರೆಯಿಲ್ಲದೆ ನದಿಯನ್ನು ದಾಟಿದರಂತೆ![19].

ಈಗ ಸಹರಾಣ್‌ಪುರ್ ಮತ್ತು ನನೌಟ ಸಂಪೂರ್ಣ ಸಿಕ್ಖರ ಹಿಡಿತದಲ್ಲಿದೆಯೆಂದು ಜುಲೈ 25ರಂದು ಚಕ್ರವರ್ತಿಗೆ ಸುದ್ದಿ ತಿಳಿಸಿದರು. ಸಿಕ್ಖರ ವಿರುದ್ಧ ಹೋರಾಡಲು ಫಿರೋಜ್‌ಖಾನ್ ಮೆವಾಟಿಯ ಅಡಿಯಲ್ಲಿ ಸೈನ್ಯವೊಂದನ್ನು ಕಳುಹಿಸಿಕೊಡಲು ಚಕ್ರವರ್ತಿಗೆ ಕೋರಿಕೆಯೊಂದು ತಲುಪಿತು. ತಕ್ಷಣವೇ ಚಕ್ರವರ್ತಿಯು ದಂಡಯಾತ್ರೆಗೆ ಫಿರೋಜ್‌ಖಾನ್ ಮೆವಾಟಿಯನ್ನು ಕಳುಹಿಸುವಂತಗೆ ರುಸ್ತುಂ ವಿಲ್ ಖಾನ್‌ಗೆ ಆಜ್ಞಾಪಿಸಿದ. ಐವತ್ತು ಸಾವಿರ ರೂಪಾಯಿಗಳನ್ನು ಸಹ ಫಿರೋಜ್‌ಖಾನ್ ಮೆವಾಟಿಗೆ ಮಂಜೂರು ಮಾಡಲಾಯಿತು[20].

## ಸಿಕ್ಖರ ವಿರುದ್ಧ ಸ್ವತಃ ಬಹದ್ದೂರ್ ಶಾ ದಂಡಯಾತ್ರೆ ಮುನ್ನಡೆಸಿದ್ದು

ಈ ಎಲ್ಲ ಆಂದೋಲನಗಳು ಸಿಕ್ಖರನ್ನು ಸೋಲಿಸಲು ವಿಫಲವಾದಾಗ ಬಹದ್ದೂರ್ ಶಾ ಸ್ವತಃ ತಾನೇ ಸೇನೆಯನ್ನು ಮುನ್ನಡೆಸಲು ನಿರ್ಧರಿಸಿದ. 1710ರ ಆಗಸ್ಟ್ 4 ರಂದು ಗೌರವವಸ್ತ್ರ, ಅಲಂಕೃತ ಪಲ್ಲಕ್ಕಿ, ಚಿನ್ನದ ಜೀನು ಇರುವ ಕುದುರೆ ಮತ್ತು ಒಂದು ರತ್ನ ಖಚಿತ ಶೀರೋಭರಣವನ್ನು ಉದಯಪುರದ ರಾಜ ಅಮರಸಿಂಗ್‌ಗೆ ಕಳುಹಿಸಿದ. ಅದರ ಉದ್ದೇಶ ಸಿಕ್ಖರ ವಿರುದ್ಧ ಚಕ್ರವರ್ತಿ ಕೈಗೊಳ್ಳುವ ದಂಡಯಾತ್ರೆಯಲ್ಲಿ ಆತನು ಚಕ್ರವರ್ತಿಯ ಜೊತೆಗಾರನಾಗಬೇಕೆಂಬ ಸೂಚನೆಯಾಗಿತ್ತು.

ಆಗಸ್ಟ್ 14ರಂದು ಬಹದ್ದೂರ್ ಶಾ ಮಡೆಗಾಂವ್ ಅನ್ನು ತಲುಪಿದ. ಚಕ್ರವರ್ತಿಯ ಕಾರವಾನ್‌ನಲ್ಲಿರುವ ಯಾರೂ ಸಹ ದೆಹಲಿಯ ಶಹಜಹಾನ್‌ಬಾದ್‌ಗೆ ಹೋಗಬಾರದೆಂದು ಹಾಗೆಯೇ ರಾಜಧಾನಿಯಿಂದ ಬರುವ ಯಾರಿಗೂ ಕಾರವಾನ್ ಪ್ರವೇಶಿಸಲು ಬಿಡಬಾರದೆಂದು ಇಲ್ಲಿ ಚಕ್ರವರ್ತಿ ಆಜ್ಞೆ ಹೊರಡಿಸಿದ[21]. ಚಕ್ರವರ್ತಿ ಸಹ ಶಹಜಹಾನ್‌ಬಾದ್‌ಗೆ ಹೋಗಲಿಲ್ಲ. ನೇರವಾಗಿ ಸೋನೆಪೇಟ್‌ಗೆ ಹೋದ. ಬಹುಬೇಗನೆ ಲಕ್ನೊ, ಮೊರದಬಾದ್ ಮತ್ತು ಶಹಜಹಾನ್‌ಬಾದ್‌ನ ಸೇನೆ, ಅವರವರ ದಂಡನಾಯಕರ ನೇತೃತ್ವದಲ್ಲಿ ಚಕ್ರವರ್ತಿಯ ಸೈನ್ಯದೊಡನೆ ಸೇರಿತು. ಮುಜಾಫರ್‌ನಗರದ ಬಾರ ಸಾದತ್‌ನ ಸಯ್ಯದ್ ಅಬ್ದುಲ್ಲಾ, ಚತರ್ಸಾಲ್‌ನ ಹಿಂದೂ ರಾಜ ಉದಿತ್‌ಸಿಂಗ್ ಬುಂದೇಲ ತಮ್ಮ ದೊಡ್ಡ ಸೇನಾ ತುಕಡಿಯ ಜೊತೆ ರಾಜ ಸೇನೆಯನ್ನು ಸೇರಿಕೊಂಡರು.

26ನೇ ಆಗಸ್ಟ್ ಚಕ್ರವರ್ತಿಯು ಬಂದಾ ಸಿಂಗ್‌ನನ್ನು ಬೆನ್ನಟ್ಟುವಂತೆ ಕುಮೋನ್‌ನ ಹಿಂದೂ ರಾಜನಿಗೆ ಆಜ್ಞಾಪಿಸಿದ. ಬಂದಾ ಸಿಂಗ್‌ನನ್ನು ಶಿಕ್ಷಿಸಿದ ಮೇಲೆ ರಾಜನ ಆಸ್ಥಾನದಲ್ಲಿ ಹಾಜರಾಗಬೇಕೆಂದು ಆಜ್ಞೆಯಲ್ಲಿ ತಿಳಿಸಲಾಗಿತ್ತು. ಆಗಸ್ಟ್ 28 ರಂದು ಅದೇ ಆದೇಶವನ್ನು ಚಕ್ರವರ್ತಿಯು ಗಡವಾಲದ ರಾಜ ಫತೇ ಸಿಂಗ್‌ಗೂ ಕಳಿಸಿ ಕೊಟ್ಟು ನಾನಕ್ ಪಂಥೀಯರ ಮೇಲೆ ಯುದ್ಧ ಸಾರಲು ಆಜ್ಞಾಪಿಸಿದ[23].

ಈ ಅವಧಿಯಲ್ಲಿ ಸಿಕ್ಖರ ವಿರುದ್ಧ ಹೋರಾಟ ನಡೆಸಲು ಅಳವಡಿಸಿಕೊಳ್ಳಬೇಕಾದ ತಂತ್ರದ ಬಗ್ಗೆ ಫಿರೋಜ್ ಖಾನ್ ಮೆವಾಟಿ ಮತ್ತು ಸಯ್ಯದ್ ವಾಜೀಹ್–ಉದ್–ದೀನ್ ನಡುವೆ ಭಿನ್ನಾಭಿಪ್ರಾಯ ಉಂಟಾಯಿತು. ಸಯ್ಯದ್‌ನ ಮಾತಿಗೆ ಬೆಲೆಕೊಡದ ಕಾರಣ, ಆತ ಯುದ್ಧ ಮಾಡುವ ನಿರ್ಧಾರ ಕೈಬಿಟ್ಟ. ಈ ವಿಷಯ ತಿಳಿದ ಬಹದ್ದೂರ್ ಶಾ ತಕ್ಷಣವೇ ಸಯ್ಯದ್ ವಾಜೀಹ್–ಉದ್–ದೀನ್‌ಗೆ ನೀಡಿದ್ದ ಮಾನ್ಸಾಬ್ ಅನ್ನು ಕಡಿತಗೊಳಿಸಿದ. ಒಡನೆಯೇ ಆತನನ್ನು ಆಸ್ಥಾನದಲ್ಲಿ ಹಾಜರುಪಡಿಸಲು ತನ್ನ ಗುರ್ಜ್ ಬರ್ದಾರ್ (ಗಧಾಧಾರಿಗಳು) ಗಳನ್ನು ಅಟ್ಟಿದ.

ಯಮುನಾ ಪ್ರದೇಶದಾದ್ಯಂತ ತನ್ನ ಪಾರಮ್ಯವನ್ನು ಸ್ಥಾಪಿಸಿದ್ದ ಬಂದಾ ಸಿಂಗ್ ಈಗ ಪಂಜಾಬ್ ಕಡೆಗೆ ತನ್ನ ಪ್ರಯಾಣ ಬೆಳೆಸಿದ. ಪಾಣಿಪತ್ ಮತ್ತು ತ್ರಾವರಿಗಳನ್ನು ವಶಪಡಿಸಿಕೊಳ್ಳಲು ಆತ ಮುಂದಾಗಿಯೇ ಬಿನೋದ್ ಸಿಂಗ್ ಮತ್ತು ರಾಮ್‌ಸಿಂಗ್‌ನನ್ನು ಕಳುಹಿಸಿದ. ಮಾಳ್ವ ಪ್ರದೇಶವನ್ನು ಬಂದಾ ಸಿಂಗ್ ಫತೇ ಸಿಂಗ್ ಮತ್ತು ಗುರುಭಕ್ತಸಿಂಗ್ (ಭಾಯ್ ಭಗ್ತು ಕುಟುಂಬ), ತ್ರಿಲೋಕ್ ಸಿಂಗ್ ಮತ್ತು ರಾಮ್‌ಸಿಂಗ್ (ಫುಲ್ ಕುಟುಂಬ) ಮತ್ತು ಪರಂ ಸಿಂಗ್ ಮತ್ತು ಧರಂ ಸಿಂಗ್ (ಭಾಯ್ ರೂಪ ಕುಟುಂಬ) ಇವರಿಗೆ ವಹಿಸಿ ತಾನು ಲೋಹಗಡಕ್ಕೆ ಹಿಂದಿರುಗಿದ್ದ.

ಮುಘಲರು ಮತ್ತು ಆಫ್ಘನ್ ಶ್ರೀಮಂತರಿಗೆ ಪಂಜಾಬ್‌ನ ಪರಿಸ್ಥಿತಿ ತುಂಬಾ ಭಯಂಕರವಾಗಿತ್ತು.

ದೆಹಲಿಯಿಂದ ಲಾಹೋರ್‌ವರೆಗಿನ ಮುಘಲ್ ಸಾಮ್ರಾಜ್ಯದ ಐದು ಪ್ರಾಂತ್ಯಗಳನ್ನು ಸಿಕ್ಖರು ವಶಪಡಿಸಿಕೊಂಡಿದ್ದರು. ಅವು ಸಿಕ್ಖರ ಅಧಿಪತ್ಯವನ್ನು ಅಂಗೀಕರಿಸಿದ್ದವು. ಮಹಮದ್ ಹಕೀಮ್ ಖಾಫಿ ಖಾನ್ ತನ್ನ ಮುಂತಖಾಬ್–ಉಲ್–ಲುಬಾಬ್‌ನಲ್ಲಿ ಪರಿಸ್ಥಿತಿಯನ್ನು ಹೀಗೆ ವಿವರಿಸುತ್ತಾನೆ–

"ಇಲ್ಲಿ, ಶಹಜಹನಾಬಾದ್ ನಗರದಿಂದ ಆರಂಭವಾಗಿ, ಲಾಹೋರ್‌ವರೆಗಿನ ಎಲ್ಲ ನಗರ ಪಟ್ಟಣಗಳನ್ನು ಪಾಪಿ ಸಿಕ್ಖರು ಕೊಳ್ಳೆ ಹೊಡೆದರು. ಅವರ ಪಾದಾಘಾತಕ್ಕೆ ಸಿಕ್ಕ ಪ್ರಮುಖ ನಗರಗಳೆಲ್ಲ ಪುಡಿಯಾದವು. ಕಾಫಿರರ (ಸಿಕ್ಖರ) ಆಕ್ರಮಣದಿಂದ ಈ ಜಗತ್ತು (ವಲಯ) ನಾಶವಾಯಿತು. ಅಸಂಖ್ಯಾತ ಜನರು (ಮುಸ್ಲಿಮರು) ಹುತಾತ್ಮರಾದರು. ಅತಿಯಾದ ನಾಶಕ್ಕೊಳಗಾದ ನಗರಗಳೆಂದರೆ ಸಧೌರ ಮತ್ತು ಕರ್ನಾಲ್ ಹಾಗೂ ಅವುಗಳ ಸುತ್ತಮುತ್ತಲಿನ ಹಳ್ಳಿಗಳು, ಇಲ್ಲಿ ಅಸಂಖ್ಯಾತ ಮುಸ್ಲಿಮ್ ಬಂಧುಗಳು ತಮ್ಮ ಸೇನಾನಾಯಕರೊಡನೆ ಹುತಾತ್ಮ ಪಟ್ಟವನ್ನಲಂಕರಿಸಿದರು."

1710ರ ಆಗಸ್ಟ್ 28ರಂದು ಬಹದ್ದೂರ್ ಶಾನ ಆಸ್ಥಾನದಲ್ಲಿ ಸುದ್ದಿ ಓದುವವನೊಬ್ಬ ಪತ್ರವೊಂದನ್ನು ಓದಿ ಹೇಳಿದ. ಅದರ ಒಕ್ಕಣೆ ಹೀಗಿತ್ತು. "ಸರ್ಹಿಂದ್‌ನ ರಹಸ್ಯ ನಿಧಿಯ ಮಾತಂತಿರಲಿ, ದಾವೋಬದಿಂದಲೂ ಯಾವುದೇ ಹಣ ಬಂದಿಲ್ಲವೆಂದು ವರದಿಯಾಗಿದೆ. ಖಲ್ಸಾ ಮಾತ್ರವೇ ತೆರಿಗೆಯನ್ನು ಸಂಗ್ರಹಿಸುತ್ತಿದೆ. ಸಿಕ್ಖರು ತಮ್ಮ ರಾಜಧಾನಿಯಾಗಿ ಸ್ಥಾಪಿಸಿರುವ ಲೋಹಗಡಕ್ಕೆ ಬಂಡಿ ತುಂಬ ಹಣವನ್ನು ಸಾಗಿಸುತ್ತಿದ್ದಾರೆ. ಒಂದು ದಿನ ಅವರು ಮುನ್ನೂರ ಬಂಡಿಗಳ ತುಂಬ ಸಂಪತ್ತು ತುಂಬಿ ಸಾಗಿಸಿದರು. ಲಾಹೋರ್‌ವರೆಗೆ ಅವರನ್ನು ಯಾರೊಬ್ಬರೂ ತಡೆಯಲಿಲ್ಲ[24]."

ಆಗಸ್ಟ್ 29ರಂದು ಬಹದ್ದೂರ್ ಶಾ, ತನ್ನ ಆಸ್ಥಾನಕ್ಕೆ ಹಾಜರಾಗುವ ಮೊದಲು ಎಲ್ಲ ಹಿಂದೂಗಳು ತಮ್ಮ ಗಡ್ಡವನ್ನು ಬೋಳಿಸಿಕೊಂಡು ಬರಬೇಕೆಂದು ಆಜ್ಞೆ ಹೊರಡಿಸಿದ. ಹಾಗೆ ತಕ್ಷಣ ಗಡ್ಡ ಬೋಳಿಸಿಕೊಂಡು ಬಂದಾವರಿಗೆ ಗೌರವ ವಸ್ತ್ರ ಮತ್ತು ರತ್ನಗಳನ್ನು ಉಡುಗೊರೆಯಾಗಿ ನೀಡಲಾಯಿತು[25]."

ಸಿಕ್ಖರ ಬಗ್ಗೆ ಈ ವೇಳೆಗೆ ಆತಂಕಿತನಾಗಿದ್ದ ಬಹದ್ದೂರ್ ಶಾ ಈಗ, ಬಂದಾ ಸಿಂಗ್‌ನನ್ನು ಬಗ್ಗು ಬಡಿಯುವ ಬಗ್ಗೆ ತನ್ನ ಗಮನವನ್ನು ಕೇಂದ್ರೀಕರಿಸಿದ. ತನ್ನ ಆಸ್ಥಾನಿಕರು ಮತ್ತು ಇತರರೊಡನೆ ಆತ ಸಿಕ್ಖರ ವಿಷಯವನ್ನು ದಿನದಲ್ಲಿ ಹಲವಾರು ಬಾರಿ ಚರ್ಚಿಸುತ್ತಿದ್ದ. ಸೆಪ್ಟೆಂಬರ್ 29ರಂದು ಆತ ಮುನೈಯಮ್ ಖಾನ್‌ನ ಮಗ ಮಹಬ್ಬತ್ ಖಾನ್‌ನನ್ನು ಕರೆಸಿ ಸಿಕ್ಖರ ವಿರುದ್ಧ ದಂಡಯಾತ್ರೆ ಕೈಗೊಳ್ಳಲು ಆಜ್ಞಾಪಿಸಿದ. ಸರ್ಹಿಂದ್‌ಗೆ ಸಮೀಪದಲ್ಲಿರುವ ಕರ್ನಲ್‌ನಲ್ಲಿ ಬೀಡುಬಿಡಲು ಚಕ್ರವರ್ತಿ ಅವನಿಗೆ ತಿಳಿಸಿದ. ಮಹಬ್ಬತ್ ಖಾನ್‌ನನ್ನು ಸೇರಿಕೊಳ್ಳಬೇಕೆಂದು ಚಕ್ರವರ್ತಿಯು ನುಸ್ರತ್‌ಖಾನ್, ಗುಲಾಂ ನಬಿ ಕುರಿಖಾನ್ ಮತ್ತು ಸಯ್ಯದ್ ಹುಸೇನ ಆಲಿಖಾನ್ ಅವರುಗಳಿಗೆ ತಿಳಿಸಿದ. ಅವರೆಲ್ಲರೂ ಸಂತೋಷದಿಂದ ಒಪ್ಪಿದರು[26].

ಫಿರೋಜ್‌ಖಾನ್ ಮೆವಾಟಿಯ ಕರ್ನಲ್ ಅನ್ನು ಸೆಪ್ಟೆಂಬರ್ 28ರಂದೇ ತಲುಪಿ, ಶೀಘ್ರದಲ್ಲಿಯೇ ಸರ್ಹಿಂದ್ ಮೇಲೆ ದಾಳಿ ಮಾಡಲಿರುವ ವಿಷಯ ಚಕ್ರವರ್ತಿಗೆ ಅಕ್ಟೋಬರ್ 2ರಂದು ಮುಟ್ಟಿತು[27]. ಫಿರೋಜ್‌ಖಾನ್ ತನ್ನ ಸೇನೆಯನ್ನು ಕರ್ನಾಲ್‌ನಿಂದ 6 ಕಿ.ಮೀ. ದೂರದಲ್ಲಿರುವ ತ್ರಾವರಿ ಬಳಿ ನಿಲ್ಲಿಸಿದ್ದು, ಸಿಖ್‌ಗಳು ಓಡಿಹೋದ ಸುದ್ದಿ ಚಕ್ರವರ್ತಿಗೆ ಅಕ್ಟೋಬರ್ 21 ರಂದು ತಲುಪಿತು. ಜಲಾಲ್‌ಖಾನ್ ರುಹಿಲ ಮತ್ತು ಸಿಕ್ಖರ ನಡುವೆ ಯುದ್ಧ ಜರುಗಿ, ರಾಜರ 300 ಸಿಪಾಯಿಗಳು ಮತ್ತು ಹಲವಾರು ಸಿಕ್ಖರು ಹತರಾದ ಸುದ್ದಿ ಚಕ್ರವರ್ತಿಗೆ ಅಕ್ಟೋಬರ್ 14ರಂದು

ತಿಳಿಯಿತು[28].

**ರಹೋನ್ ಯುದ್ಧ**

1710ರ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಸಿಕ್ಖರು ರಹೋನ್ ಮೇಲೆ ದಾಳಿ ಮಾಡಿ ಅದನ್ನು ಆಕ್ರಮಿಸಿಕೊಂಡರು. ಇದಾದ ನಂತರ ಪಟ್ಟಣದ ಶ್ರೀಮಂತ ಮುಸ್ಲಿಮರು ತಮ್ಮ ಮನೆಗಳನ್ನು ತೊರೆದು ಹೊಸ ಪಟ್ಟಣವೊಂದರಲ್ಲಿ ನೆಲೆಸಿದರು. ಅದರ ಹೆಸರ ನೌಶೆಹು (ಈಗ ನವಾನ್ ಶಹರ್ ಆಗಿದೆ).

ಸರ್ಹಿಂದ್ ನಗರವು ಸಿಕ್ಖರಿಗೆ ವಶವಾದ ದಿನದಿಂದಲೂ ಅವರನ್ನು ನಗರದಿಂದ ಓಡಿಸಲು ಪಂಜಾಬಿನಲ್ಲಿದ್ದ ಮುಘಲ್ ಮತ್ತು ಪಠಾಣ್ ನಾಯಕರು ಮತ್ತು ಅಧಿಕಾರಿಗಳು ಯೋಜನೆ ರೂಪಿಸುತ್ತಲೇ ಇದ್ದರು. ಅವರಲ್ಲಿ ಸುಲ್ತಾನ್‌ಪುರ್ ಲೋಧಿಯ ಹಿಂದಿನ ಸೇನಾ ನಾಯಕ ಶಮಸ್‌ಖಾನ್ ಸಹ ಒಬ್ಬ. 1710ರ ಸೆಪ್ಟೆಂಬರ್‌ನಲ್ಲಿ ಸಿಕ್ಖರ ವಿರುದ್ಧ ಶಮಸ್‌ಖಾನ್ **'ಜಿಹಾದ್'** ಘೋಷಿಸಿದ. ಅದಕ್ಕಾಗಿ ತನ್ನ ಸೇನೆಗೆ ಸುಲ್ತಾನ್‌ಪುರ ಮತ್ತು ಅದರ ಸುತ್ತಮುತ್ತಲಿನ ಊರುಗಳ ಮುಸ್ಲಿಂ ಯುವಕರನ್ನು ಭರ್ತಿ ಮಾಡಿಕೊಂಡ. ಸರ್ಹಿಂದ್‌ನಲ್ಲಿ ಸಿಕ್ಖರ ಮೇಲೆ ಆಕ್ರಮಣ ಮಾಡುವ ಮೊದಲು ರಹೋನ್ ಪಟ್ಟಣವನ್ನು ಸಿಕ್ಖರಿಂದ ಬಿಡುಗಡೆ ಮಾಡಲು ಹವಣಿಸಿದ. ಶಮಸ್‌ಖಾನ್‌ನ ಸೇನೆ ಒಂದು ಲಕ್ಷ ಸೈನಿಕರನ್ನೊಳಗೊಂಡಿತ್ತು ಎಂದು ಖಾಫಿ ಖಾನ್ ಬಣ್ಣಿಸುತ್ತಾನೆ. ಆತನ ಪ್ರಕಾರ ಸೇನೆಯಲ್ಲಿ 4–5 ಸಾವಿರ ಕುದುರೆಗಳು, 30 ಸಾವಿರ ಸೈನಿಕರ ಪದಾತಿದಳ, ಮತ್ತು ಉಳಿದವರು ಸಾಮಾನ್ಯ ಮುಸ್ಲಿಂ ಜನರು. ಇವರಲ್ಲಿ ಜುಲಾಹಸ್ (ನೇಕಾರರು) ಹೆಚ್ಚಿದ್ದರು. ಸಿಖ್ ಸೈನ್ಯದಲ್ಲಿ 20 ಸಾವಿರ ಸೈನಿಕರಿದ್ದರೆಂದು ಖಾಫಿಖಾನ್ ಉಲ್ಲೇಖಿಸುತ್ತಾನೆ. ಎರಡೂ ಸಂಖ್ಯೆಗಳು ಉತ್ಪ್ರೇಕ್ಷಿತವೇ[29].

ಶಮಸ್‌ಖಾನ್‌ನ ಸೈನ್ಯ ರಹೋನ್ ತಲುಪಿದಾಗ ಕೋಟೆಯಲ್ಲಿ ಇದ್ದವರು ಹಲವು ನೂರು ಸಿಕ್ಖರು ಮಾತ್ರ. ಆದರೆ ಅವರು ಕೋಟೆಯಿಂದ ಹೊರಬಂದಾು ಶಮಸ್‌ಖಾನ್ ಸೈನ್ಯದ ಮೇಲೆ ಮುಗಿಬಿದ್ದರು. ನಗರದ ಕೋಟೆಯ ಹೊರಗಡೆ ಬಿರುಸಿನ ಕಾಳಗ ನಡೆಯಿತು. ಸಿಖ್ ಸೈನಿಕರು ಎಷ್ಟು ವೀರಾವೇಶದಿಂದ ಹೋರಾಡಿದರೆಂದರೆ, ಒಂದು ಹಂತದಲ್ಲಿ ಶಮಸ್‌ಖಾನ್ ಹೋರಾಟ ನಿಲ್ಲಿಸಲು ಅಥವಾ ಯುದ್ಧ ಭೂಮಿಯಿಂದ ಓಡಿಹೋಗಲಿರುವಂತೆ ಕಂಡಿತು. ಅದೇ ವೇಳೆ ಶಮಸ್‌ಖಾನ್‌ನ ಚಿಕ್ಕಪ್ಪ (ಜಮ್ಮುವಿನ ರಾಜ್ಯಪಾಲ) ಬೇಜಿದ್ ಖಾನ್ ದೊಡ್ಡ ಸೇನೆಯೊಡನೆ ಅಲ್ಲಿಗೆ ಬಂದಾ. ಹೆಚ್ಚು ಕಡಿಮೆ ಅದೇ ವೇಳೆಗೆ ಕಸೂರ್‌ನ ದಂಡನಾಯಕ ಉಮರ್‌ಖಾನ್ ಸಹ ತನ್ನ ಸೇನೆಯೊಡನೆ ಬಂದಾು ಕೂಡಿಕೊಂಡ. ಇದರಿಂದ ಸಿಕ್ಖರು ಹಿಮ್ಮೆಟ್ಟಿ ಕೋಟೆಯಲ್ಲಿ ಆಶ್ರಯ ಪಡೆದರು. ಈಗ ಒಂದು ಬೃಹತ್ ಸೇನೆ ಕೋಟೆಯ ಎಲ್ಲ ದಿಕ್ಕುಗಳಿಂದ ಸುತ್ತುವರೆಯಿತು. ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಸಿಕ್ಖರು ಮೂರು ದಿನಗಳ ಕಾಲ ತಮ್ಮ ಹೋರಾಟ ಮುಂದುವರೆಸಿದರು. ಅವರ ಮದ್ದು ಗುಂಡು ಮತ್ತು ಆಹಾರ ಸರಕು ಮುಗಿದಾಗ ಅವರು ಕೋಟೆಯನ್ನು ತೊರೆಯಲು ನಿರ್ಧರಿಸಿದರು. ಹಾಗಾಗಿ ಮಧ್ಯರಾತ್ರಿಯಲ್ಲಿ ಓಡಿಹೋಗುವ ಪ್ರಯತ್ನ ಮಾಡಿದರು. ಹಾಗೆ ಮಾಡುವಾಗ ಸಾಕಷ್ಟು ಸಿಖ್ ಸೈನಿಕರು ಬಲಿಯಾದರು. ಕೆಲವರು ಮಾತ್ರ ತಮ್ಮ ಜೀವ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಈ ವಿಜಯ ಶಮಸ್ ಖಾನ್‌ನಲ್ಲಿ ಹೆಮ್ಮೆ ಮೂಡಿಸಿತು. ಶಮಸ್‌ಖಾನ್ ಮತ್ತು ಬ್ರೆಜಿದ್ ಖಾನ್ ಸರ್ಹಿಂದ್‌ನಲ್ಲಿ ಇದೇ ಕಾರ್ಯಾಚರಣೆಯನ್ನು ಪುನರಾವರ್ತಿಸುವ ಬಗ್ಗೆ ನಿರ್ಧರಿಸಿದರು. ಅವರು ಮಚ್ಚಿವಾರದ ಹತ್ತಿರ ಸಟ್ಲೆಜ್ ನದಿಯನ್ನು ದಾಟಿ ಅಲ್ಲಿಯ ಪಕ್ಕಿ ಸರನ್[30]ನಲ್ಲಿ ರಾತ್ರಿ ಕಳೆದರು.

ಶಮಸ್ ಖಾನನ ಗೆಲುವಿನ ಸುದ್ದಿ ಚಕ್ರವರ್ತಿ ಬಹದ್ದೂರ್ ಶಾಗೆ ಅಕ್ಟೋಬರ್ 15ರಂದು ತಲುಪಿತು. ಆದರೆ ಯುದ್ಧ ನಡೆದದ್ದು ಮುಚ್ಚಿವಾರದಲ್ಲಿ ಹಾಗೂ ಎರಡು ಸಾವಿರ ಸಿಖ್ ಸೈನಿಕರು ಸತ್ತರೆಂಬ ತಪ್ಪು ಮಾಹಿತಿಯಿಂದ ಆ ಸುದ್ದಿ ಕೂಡಿತ್ತು(31).

**ತ್ರಾವಡಿಯ ಯುದ್ಧ**

ರಹೋನ್‌ನನ್ನು ಆಕ್ರಮಿಸಿಕೊಂಡ ಘಟನೆಯು ಮುಘಲರ ಮೊದಲ ಗೆಲುವಾದರೂ, ಬಹುದ್ದೂರ್ ಶಾ ಸ್ವತಃ ತಾನೇ ಕಳುಹಿಸಿದ ಮುಘಲ್ ಸೇನೆಯ ಮೊದಲ ದಾಳಿ ನಡೆದದ್ದು ಕರ್ನಲ್‌ನಿಂದ 24 ಕಿ.ಮೀ. ದೂರದಲ್ಲಿದ್ದ ಅಮೀನ್‌ಗಡದ ಬಳಿ, 1710ರ ಅಕ್ಟೋಬರ್ 16–17ರಂದು. ಬಿನೋದ್ ಸಿಂಗ್ ನಾಯಕತ್ವದಲ್ಲಿ ಉಳಿದಿದ್ದ ಸಿಖ್ ಸೈನಿಕರು ಸಂಖ್ಯೆಯಲ್ಲಿ ಅತ್ಯಂತ ಕಡಿಮೆ ಇದ್ದರು. ಮದ್ದುಗುಂಡುಗಳ ಕೊರತೆಯಿತ್ತು. ಆದರೂ ಅರವತ್ತು ಸಾವಿರ ಸೈನಿಕರಿದ್ದ ಚಕ್ರವರ್ತಿಯ ಶಕ್ತಿಶಾಲಿ ಸೈನ್ಯಕ್ಕೆ ಪ್ರಬಲ ಪ್ರತಿರೋಧ ಒಡ್ಡಿದರು. ಆರಂಭದಲ್ಲಿ ಮಹಬ್ಬತ್ ಖಾನ್ ಹಿಂದಿರುಗಲಾರಂಭಿಸಿದ. ಆದರೆ ಮುನ್ನುಗ್ಗಿ ಬಂದಾ ಫಿರೋಜ್ ಖಾನ್ ಮೆವಾಟಿ ಸೈನಿಕರನ್ನು ಹುರುದುಂಭಿಸಿದ. ಅವರು ಸಿಕ್ಖರ ಮೇಲೆ ತೀವ್ರವಾದ ದಾಳಿ ನಡೆಸಿದರು. ಸಂಪೂರ್ಣ ಶಸ್ತ್ರಾಸ್ತ್ರ ಸಜ್ಜಿತವಾದ, ಬೃಹತ್ತಾದ ರಾಜ ಸೇನೆಯನ್ನು ಎದುರಿಸುವಷ್ಟು ಶಕ್ತಿ ಇಲ್ಲದ್ದನ್ನು ಮನಗಂಡ ಸಿಕ್ಖರು ಓಡಿಹೋಗಲು ಆರಂಭಿಸಿದರು. ಅದೊಂದು ಅಸಮಾನ ಬಲದ ಯುದ್ಧ. ಓಡಿ ಹೋಗುವಾಗಲು ಹಲವಾರು ಸಿಕ್ಖರು ಹತರಾದರು. ಯುದ್ಧದಲ್ಲಿ ಸತ್ತ ಮುನ್ನೂರು ಜನ ಸೈನಿಕರ ತಲೆಗಳನ್ನು ತುಂಡರಿಸಿದ ಫಿರೋಜ್‌ಖಾನ್ ಮೆವಾಟಿಯು ಚಕ್ರವರ್ತಿಯ ಒಲವು ಗಳಿಸಿಕೊಳ್ಳಲು ಅವುಗಳನ್ನು ಕಳುಹಿಸಿಕೊಟ್ಟ. ತಾಣೇಸರದ ಬಳಿ ಸಿಕ್ಖರು ತಮ್ಮ ಒಡೆತನವನ್ನು ಸಾರಲು ದೊಡ್ಡ ಮಿನಾರುಗಳನ್ನು ನಿಲ್ಲಿಸಿದ್ದರು. ತಮ್ಮ ಪ್ರದೇಶಗಳನ್ನು ಗುರುತಿಸಲು ಅಂಥ ಮಿನಾರು ನಿಲ್ಲಿಸುವುದು ಸಿಕ್ಖರು ಅನುಸರಿಸುತ್ತಿದ್ದ ಅಂದಿನ ರೂಢಿಯಾಗಿತ್ತು.(32)

ವಿಜಯದ ನಂತರ ಮೆವಾಟಿಯು ಅಕ್ಟೋಬರ್ 19ರಂದು ತ್ರಾವಡಿ ಮತ್ತು ತಾಣೇಸರ್ ಬಳಿ ಸಿಕ್ಖರ ಮೇಲೆ ಆಕ್ರಮಣ ಮಾಡಿದ. ಈ ಎರಡೂ ನೆಲೆಗಳನ್ನು ಸಹ ಸಿಕ್ಖರು ತೊರೆದರು. ಮುಘಲ್ ಪಡೆಗೆ ಪತನವಾದ ಮುಂದಿನ ಕೋಟೆ ಶಹಬಾದ್. ಈ ಎಲ್ಲ ನಾಲ್ಕು ಸ್ಥಳಗಳಿಂದ ಸಿಕ್ಖರು ಪಲಾಯನ ಮಾಡಿ ಮೊದಲು ಸಧೌರದಲ್ಲಿ ನಿಂತು ಅನಂತರ ಲೋಹಗಡ ತಲುಪಿದರು. ಈ ಸುದ್ದಿಯನ್ನು ಚಕ್ರವರ್ತಿಯ ಅಕ್ಟೋಬರ್ 20 ರಂದು ಕೇಳಿಸಿಕೊಂಡ ಮೇಲೆ ಮೆವಾಟಿಗೆ ಅಮೂಲ್ಯ ವಸ್ತುಗಳ ಕಾಣಿಕೆಗಳನ್ನು ಕಳುಹಿಸಿಕೊಟ್ಟನು. ಅದರಲ್ಲಿ ಒಂದು ಲಕ್ಷ ರೂಪಾಯಿಗಳು, ಸರ್ಹಿಂದ್‌ನ ರಾಜ್ಯಪಾಲ ಹುದ್ದೆ ಸೇರಿದ್ದವು. (ಜಿಯಾನುದ್ದೀನ್ ಅಹಮದ್ ಖಾನ್‌ನನ್ನು ರಾಜ್ಯಪಾಲ ಹುದ್ದೆಯಿಂದ ಕಿತ್ತುಹಾಕಲಾಗಿತ್ತು)(33)

**ಚಕ್ರವರ್ತಿಯು ಲೋಹಗಡದ ಮೊದಲ ಕೋಟೆ (ಉಗಲ, ಬರರ ತಾಲೂಕ)ಯನ್ನು ತಲುಪಿದ್ದು**

1710ರ ನವೆಂಬರ್ 11ರಂದು ಕರ್ನಲ್ ಮೂಲಕ ಹೊರಟ ಚಕ್ರವರ್ತಿಯು ಅಲಂಗಿರ್‌ಪುರ್, ತಾಣೇಸರ್, ಶಹಬಾದ್ ಮೂಲಕ ಹಾಯ್ದು 1710ರ ನವೆಂಬರ್ 27ರಂದು ಓಕಲ (ಈಗ ಉಗಲ, ಬರರ ತಾಲೂಕು) ಹಳ್ಳಿಯ ಹತ್ತಿರ ಬೀಡುಬಿಟ್ಟ. ಚಕ್ರವರ್ತಿಯ ಪ್ರಯಾಣವನ್ನು ಸುಗಮಗೊಳಿಸಲು ಈ ಹಾದಿಯ ಎಲ್ಲ ಕೋಟೆಗಳನ್ನು ವಶಪಡಿಸಿಕೊಳ್ಳಲು ಮುಘಲ್ ಸೇನೆಗೆ ಒಂದು ತಿಂಗಳು ಹಿಡಿಯಿತು. ಈ ಹಾದಿಯು ನಿಬಿಡ ವನಗಳಿಂದ ಆವೃತವಾದ ಯಮುನಾ

ನದಿಯ ಗುಂಟೆ ಸಾಗುವ ಕಾರಣದಿಂದ ಚಕ್ರವರ್ತಿಯು ಕಡಿಮೆ ಅಂತರದ ಮಾರ್ಗವನ್ನು ಹಿಡಿಯಲಿಲ್ಲ. ಅಲ್ಲದೆ ಸಿಕ್ಖರು, ಸಧೌರ ತಲುಪುವ ಕಡಿಮೆ ಮಾರ್ಗದಲ್ಲಿನ ಎಲ್ಲ ಪರಗಣಗಳಲ್ಲಿ ಪಾರಮ್ಯ ಸಾಧಿಸಿದರು. ಆ ಮಾರ್ಗ ಅಪಾಯಕಾರಿಯಾಗಬಹುದಿತ್ತು. ಅದರ ಜೊತೆಗೆ ಚಕ್ರವರ್ತಿಯು ಆರಿಸಿಕೊಂಡ ಮಾರ್ಗವು ಬತ್ತಿದ ಮಾರ್ಕಂಡ ನದಿಯು ಅಗಲವಾದ ತೀರದ ಉದ್ದಕ್ಕೆ ಸಾಗಿತ್ತು. ಹಾಗಾಗಿ ಚಕ್ರವರ್ತಿಯ ಸುರಕ್ಷಿತ ಪ್ರಯಾಣಕ್ಕೆ ಈ ಮೊದಲೇ ಕಳುಹಿಸಿದ್ದ ಪಡೆಯು ಶಹಬಾದ್ ಮೂಲಕ ಹೋಗುವ ದೀರ್ಘ ಅಂತರದ ಮಾರ್ಗವನ್ನು ಆಯ್ಕೆ ಮಾಡಿತ್ತು. ಬಹದ್ದೂರ್ ಶಾ ಸಧೌರವನ್ನು ತಲುಪಲೇ ಇಲ್ಲ. ಸಧೌರದಿಂದ ಹಲವು ಮೈಲಿಗಳ ದೂರದ ಪ್ರದೇಶದಲ್ಲಿ ಬೀಡುಬಿಟ್ಟಿದ್ದ. ಅಲ್ಲಿ ವಂಜಾರ ಸಿಕ್ಖರು ಮತ್ತು ಸಿಕ್ಲಿಗಾರರ ಸೈನ್ಯ ಬಹದ್ದೂರ್ ಶಾನ ಶಿಬಿರದ ಮೇಲೆ ದಾಳಿ ಮಾಡಿದಾಗ, ಬಹದ್ದೂರ್ ಶಾ ಮತ್ತು ಅವನ ಜೊತೆಗಿದ್ದ ರಾಜ್ಯದ ಅಧಿಕಾರಿ ವರ್ಗ ಶಹಬಾದ್‌ನಿಂದ 12 ಕೋಸು (48 ಕಿ.ಮೀ.) ದೂರದಲ್ಲಿನ ಸ್ಥಳಕ್ಕೆ ಶಿಬಿರ ಬದಲಾಯಿಸಿತು. ಚಕ್ರವರ್ತಿ ಬಹದ್ದೂರ್ ಶಾ ಲೋಹಗಡದ ಮೇಲಿನ ಯುದ್ಧ ಉಸ್ತುವಾರಿ ನಡೆಸಿದ. ಬಂದಾ ಸಿಂಗ್ ಬಹದ್ದೂರ್, ಪಂಜಾಬ್‌ನ ಜಲಂಧರ್ ದಾವೋಬ್‌ನಿಂದ ದೆಹಲಿಯ ಬರೇಲಿವರೆಗೆ ವ್ಯಾಪಿಸಿದ್ದ ವಿಶಾಲ ಪ್ರದೇಶದಲ್ಲಿ ಮುಘಲರ ಮೇಲೆ ದಾಳಿ ಮಾಡಿದ. ಈಗಿನ ಕರ್ನಲ್, ಕುರುಕ್ಷೇತ್ರ, ಯಮುನಾನಗರ, ಅಂಬಾಲ ಮತ್ತು ಪಿಂಜಾರ್ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಪ್ರದೇಶಗಳಲ್ಲಿ ಸಿಕ್ಖರು ಕೋಟೆಗಳನ್ನು ಸ್ಥಾಪಿಸಿದ್ದರು.

**ಲೋಹಗಡದ ಮೊದಲ ಯುದ್ಧ 1710 ರಿಂದ 1702**

ತಮ್ಮ 246 ವರ್ಷಗಳ ಆಳ್ವಿಕೆಯಲ್ಲಿ ಮುಘಲರು ತಮ್ಮ ಯಾವುದೇ ಶತ್ರುವಿನ ವಿರುದ್ಧ ನಡೆಸಿದ ಅತಿದೀರ್ಘ ಸಮರಯಾತ್ರೆಯೆಂದರೆ ಲೋಹಗಡ ಯುದ್ಧ. ಇದಾದ ನಂತರ ಮುಘಲರ ಪತನ ಆರಂಭವಾಯಿತು.

ಚಕ್ರವರ್ತಿ ಬಹದ್ದೂರ್ ಶಾ ತನ್ನ ನಾಲ್ವರು ರಾಜಕುಮಾರರು–ರಫಿ–ಉಸ್–ಶಾ, ಅಜಿಮುಶಾನ್, ಜಲಂಧರ್ ಶಾ ಮತ್ತು ಖಿಜಿಸ್ತ ಇವರ ಜೊತೆ ಬೃಹತ್ ಸೇನೆಯೊಡನೆ ಲೋಹಗಡ ತಲುಪಿದ. ತನ್ನ ಸೇನೆಯಲ್ಲದೆ, ಚತ್ರಸಾಲ್ ಬುಂಡೇಲ ಮತ್ತು ಚುರಿಮನಿಜಾಟ್‌ನಂತರ ಹಿಂದೂ ರಾಜರ ಮೈತ್ರಿ ಸೇನೆ ಸಹ ಬಂದಾ ಸಿಂಗ್ ವಿರುದ್ಧದ ಯುದ್ಧಕ್ಕೆ ಆಗಮಿಸಿತ್ತು. ಸಿಕ್ಖರನ್ನು ನಿಯಂತ್ರಿಸಲು ಮುಘಲರ್ ಸೈನ್ಯವು ಬಲವಾದ ಫಿರಂಗಿಗಳನ್ನು ಬಳಸಿತು. ಲೋಹಗಡದ ಮೂಲಕ ಫಿರಂಗಿಗಳನ್ನು ಎತ್ತಲು, ಸಾಗಿಸಲು ಆನೆಗಳನ್ನು ಬಳಸಲಾಯಿತು. ರಾವುತರಿಗೆ ಲೋಹಗಡಕ್ಕೆ ಸಮೀಪದಿಂದ ಮುತ್ತಿಗೆ ಹಾಕಲು ಸಣ್ಣ ಆಯುಧಗಳ ಅವಶ್ಯಕತೆಯಿತ್ತು. ಮುಘಲರ ಬಳಿ ಇದ್ದ ಶಸ್ತ್ರಾಸ್ತ್ರಗಳನ್ನು ಐದು ವರ್ಗಗಳಾಗಿ ವಿಂಗಡಿಸಲಾಗಿತ್ತು: ಕತ್ತಿ ಮತ್ತು ಗುರಾಣಿಗಳು, ಗದೆಗಳು, ಯುದ್ಧ ಕೊಡಲಿಗಳು, ಭರ್ಜಿ ಮತ್ತು ಈಟಿಗಳು. ದೂರ ವ್ಯಾಪ್ತಿಯ ಕಾಳಗಕ್ಕೆ ಬಳಸುತ್ತಿದ್ದ ಶಸ್ತ್ರಗಳೆಂದರೆ ಬಿಲ್ಲು–ಬಾಣ ಮತ್ತು ಪಿಸ್ತೂಲುಗಳು. ಯುದ್ಧದಲ್ಲಿ ಫಿರಂಗಿಗಳು, ರಾಕೆಟ್‌ಗಳನ್ನೂ ಬಳಸುತ್ತಿತ್ತು.

1710ರ ನವೆಂಬರ್ 29ರಂದು ರಾಜಕುಮಾರ ಜಹಂದರ್ ಶಾನ ನೇತೃತ್ವದಲ್ಲಿ ರಾಜ ಸೇನೆಯು ಬೆಟ್ಟದ ತಪ್ಪಲನ್ನು ತಲುಪಿತು. ಮುಘಲ್ ಸೇನೆಯು ಲೋಹಗಡ ಕೋಟೆಯನ್ನು ತೀವ್ರವಾಗಿ ಪರಿಶೀಲಿಸಿತು.[36] ರಾಜಕುಮಾರ ಜಹಂದರ್ ಶಾ ದಾಬರ್ ಅಥವಾ ಲೋಹಗಡ ಕೋಟೆಯ ನಕ್ಷೆಯೊಂದನ್ನು ತಯಾರಿಸಿಕೊಂಡ. ಐವತ್ತೆರಡು ಘಟಕಗಳಿದ್ದ ಲೋಹಗಡ ಕೋಟೆಯ ನಕ್ಷೆ ರೂಪಿಸಲು ಸಾಕಷ್ಟು ಸಮಯ ಹಿಡಿಯಿತು. ಅಂತಹದೊಂದು ಕೋಟೆಯ ವ್ಯವಸ್ಥೆ ಮತ್ತು

ಪ್ರಬಲ ವಿರೋಧವನ್ನು ಈವರೆಗೂ ಮುಘಲ್ ಸೈನ್ಯ ಎದುರಿಸಲಿಲ್ಲ. ಇಂಥದೊಂದು ಕ್ಲಿಷ್ಟಕರ ಯುದ್ಧವನ್ನು ಊಹಿಸಿ ಅವರು ಸಿದ್ಧರಾಗಿರಲಿಲ್ಲ. ಹಾಗಾಗಿ ಮುಘಲ್ ದಂಡನಾಯಕರು ಮತ್ತು ಮುಘಲ್ ಚಕ್ರವರ್ತಿ ನಿಸ್ತೇಜವಾಗುವಂತೆ ಮಾಡಿತ್ತು.

1711ರ ಜನವರಿಯಲ್ಲಿ ಚಕ್ರವರ್ತಿಯು ಮಾರ್ಕಂಡ ಮತ್ತು ಯಮುನಾ ನದಿಯ ನಡುವಣ ಪ್ರದೇಶಕ್ಕೆ ಮುತ್ತಿಗೆ ಹಾಕಲು ಚಕ್ರವರ್ತಿ ಯೋಜಿಸಿದ. ತನ್ನ ಸೇನೆಯನ್ನು ಆರು ಗುಂಪುಗಳಾಗಿ ವಿಂಗಡಿಸಿದ. ಆದರೆ ಲೋಹಗಡದ ಹಾದಿಯಲ್ಲಿರುವ ಐವತ್ತೆರಡು ಬತೇರಿಗಳನ್ನು ಒಡೆದು ನುಗ್ಗುವ ಬಗ್ಗೆ ಮುಘಲ್ ಸೈನ್ಯಕ್ಕೆ ಹೇಗೆಂದು ಹೊಳೆಯಲಿಲ್ಲ. ಸಿಖ್ ಸೈನ್ಯವು ಸಿದ್ಧಪಡಿಸಿಕೊಂಡ ಮತ್ತು ಅಳವಡಿಸಿಕೊಂಡ ಯುದ್ಧ ತಂತ್ರಗಳು ಸಂಕೀರ್ಣ ಮತ್ತು ಅಭೇದ್ಯವಾದ್ದರಿಂದ ಅನುಭವಿ ಮುಘಲ್ ದಂಡನಾಯಕರಿಗೂ ಮುಂದುವರಿಯುವುದು ಕಷ್ಟವಾಯಿತು. ಮುತ್ತಿಗೆ ಹಾಕುವ ಯೋಜನೆ ಸಿದ್ಧಪಡಿಸಲಾಗಲಿಲ್ಲ. ರಾಜಕುಮಾರ ತಯಾರಿಸಿದ ನಕ್ಷೆ ಸಹ ಅಪೂರ್ಣವಾಗಿತ್ತು. ಸಿಕ್ಖರು ಬರೇಲಿಯಿಂದ ಬೀಯಾಸ್ ನದಿಯವರೆಗೆ ಚೌಕಿ ಮತ್ತು ಕೋಟೆಗಳನ್ನು ಸ್ಥಾಪಿಸಿದ್ದರು. ಅಲ್ಲದೆ ಅವರು ಅಪೂರ್ವವಾದ ಹೊಂದಾಣಿಕೆಯಿಂದ ಪರಸ್ಪರ ನೆರವಾಗುವ ರೀತಿಯಲ್ಲಿ ಯುದ್ಧ ಮಾಡುತ್ತಿದ್ದರು. ಶಿವಾಲಿಕ್ ಪರ್ವತ ಪಂಕ್ತಿಯ ಎತ್ತರದ ಪ್ರದೇಶಗಳನ್ನು ಆಳುವೇರಿ ನಿರ್ಮಾಣಕ್ಕೆ ಆಯ್ಕೆ ಮಾಡಿಕೊಂಡಿದ್ದರು.

ಸಿಕ್ಖರ ಸೈನ್ಯದ ಬೇರೆ ಬೇರೆ ತುಕಡಿಗಳು ಲಾಹೋರ್ ಮತ್ತು ದೆಹಲಿಯ ಬೇರೆ ಬೇರೆ ಪ್ರಾಂತ್ಯಗಳ ಪರಗಣಗಳ ಮೇಲೆ ಸಮಾನಾಂತರವಾಗಿ ದಾಳಿ ಮಾಡುತ್ತಿದ್ದ ಸಂದರ್ಭಗಳಲ್ಲಿ ಮುಘಲರ ಸೈನ್ಯ ಲೋಹಗಡದ ಹತ್ತಿರ ಬೀಡುಬಿಟ್ಟಿತ್ತು. ಮುಘಲರ ಸೈನ್ಯವು ಈಗಿನ ಯಮುನಾ ನಗರದ ಭಾಗದಲ್ಲಿರುವ ಲೋಹಗಡವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. ಆದರೆ ಸಿಕ್ಕರು ಈಗಿನ ಅಂಬಾಲ ಮತ್ತು ಪಂಚಕುಲ ಜಿಲ್ಲೆಗೆ ಸೇರಿದ ವಿವಿಧ ಭಾಗಗಳಲ್ಲಿ ಬತೇರಿಗಳನ್ನು ನಿರ್ಮಿಸಿದ್ದರು. ಲೋಹಗಡದ ದಕ್ಷಿಣ ಭಾಗದಲ್ಲಿ ಯುದ್ದ ಭೂಮಿಯಿತ್ತು. ಅದು ಉಬ್ಬು ತಗ್ಗುಗಳ, ನಿಬಿಡ ವನಾವೃತವಾದ ಸ್ಥಳ. ಲೋಹಗಡಕ್ಕೆ ಸಾಗುವ ಹಾದಿಯಲ್ಲಿ 52 ಕೋಟೆಗಳನ್ನು ನಿರ್ಮಿಸಲಾಗಿತ್ತು. ಕೋಟೆಗಳ ಮೇಲೆ ಬಂದಾೂಕು ಹಾರಿಸುವ ತಾಣಗಳಿದ್ದವು. ಮುಘಲರಿಗೆ ಸಧೌರ ಕೋಟೆಯನ್ನೇ ಮರುವಶ ಮಾಡಿಕೊಳ್ಳಲು ಆಗಿರಲಿಲ್ಲ. ಅಂತಹುದರಲ್ಲಿ ಇಷ್ಟೆಲ್ಲ ಸಿದ್ಧತೆಗಳಿರುವ ಲೋಹಗಡ ಆಕ್ರಮಿಸುವುದು ಸುಲಭದ ಮಾತಾಗಿರಲಿಲ್ಲ. ಲೋಹಗಡ ಕೋಟೆಯನ್ನು ವಶಪಡಿಸಿಕೊಳ್ಳುವ ಯುದ್ಧ ತಂತ್ರದಲ್ಲಿ ಮುಘಲರು ಸೋತಿದ್ದರು. ಅದು ವಿಶಾಲವಾದ ಪ್ರದೇಶದಲ್ಲಿದ್ದುದರಿಂದ ಲೋಹಗಡಕ್ಕೆ ಆಗುತ್ತಿದ್ದ ಅಗತ್ಯ ಸರಬರಾಜು ವಸ್ತುಗಳನ್ನು ಪ್ರತಿಬಂಧಿಸುವ ಕಾರ್ಯ ಸಫಲವಾಗಲಿಲ್ಲ. ಅಗತ್ಯ ವಸ್ತುಗಳನ್ನು ಸಿಖ್ ಸೈನ್ಯಕ್ಕೆ ನಿಯತವಾಗಿ ಸರಬರಾಜಾಗುತ್ತಿದ್ದರಿಂದ, ಸೈನಿಕರು ಶರಣಾಗುವ ಪ್ರಶ್ನೆಯೇ ಉದ್ಭವಿಸಲಿಲ್ಲ. ದೊಡ್ಡ ಯುದ್ಧವನ್ನು ನಿರೀಕ್ಷಿಸಿಯೇ ಲೋಹಗಡದಲ್ಲಿ ಆಹಾರ ಧಾನ್ಯ, ಅಗತ್ಯ ವಸ್ತು ಮತ್ತು ಶಸ್ತ್ರಾಸ್ತ್ರ ಕೋಠಿಗಳನ್ನು ನಿರ್ಮಿಸಲಾಗಿತ್ತು. ಅದರ ಜೊತೆಗೆ ಕೋಟೆಯ ಉತ್ತರ ಭಾಗದಲ್ಲಿದ್ದ ರಹಸ್ಯ ಮಾರ್ಗಗಳ ಮೂಲಕ ಕೋಟೆಯೊಳಕ್ಕೆ ಅಗತ್ಯ ವಸ್ತುಗಳ ರವಾನೆಯಾಗುತ್ತಿತ್ತು. ಮುಘಲರು ಕೋಟೆಗಳನ್ನು ಆಕ್ರಮಿಸಲು ಹೆಣೆಯುವ ಯುದ್ಧ ತಂತ್ರಗಳ ಅರಿವು ಗುರುಗಳಿಗೆ ಮತ್ತು ಲಖಿ ರಾಯ್ ವಂಜಾರನಿಗೆ ಮೊದಲೇ ಗೊತ್ತಿದ್ದರಿಂದ ಅವರು ಈ ರಕ್ಷಣಾ ವಿಧಾನಗಳನ್ನು ಅಳವಡಿಸಿಕೊಳ್ಳಲು ಕಾರಣವೆಂದು ಸಹಜವಾಗಿ ತರ್ಕಿಸಬಹುದು. ಸಂಖ್ಯೆಯಲ್ಲಿ ಬೃಹತ್ತಾದ ಸೇನೆಯಾದರೂ ಮುಘಲರಿಗೆ ಸಿಖ್ ಸೈನ್ಯದ ಮೇಲೆ ದಾಳಿ ಮಾಡುವ ಯೋಜನೆ

ಮತ್ತು ತಂತ್ರವಿಧಾನ ತಿಳಿಯದಾಗಿತ್ತು. ನಿಬಿಡವಾದ ಅರಣ್ಯ, ಗೆರಿಲ್ಲ ಯುದ್ಧದಲ್ಲಿ ನಿಪುಣರಾದ ಸಿಕ್ಖರು ಮತ್ತು ನೈಸರ್ಗಿಕವಾಗಿ ಒದಗಿ ಬಂದಿದ್ದ ರಕ್ಷಣೋಪಾಯಗಳು ಜಗತ್ತಿನ ಆ ಕಾಲದ ಅತಿ ದೊಡ್ಡ ಸೇನೆಯನ್ನು ಅಸಹಾಯಕತೆಗೆ ದೂಡಿದ್ದವು. ಈ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ವಿಫಲನಾದ ಮುಘಲ್ ದೊರೆ ಕ್ರಮೇಣ ವಿಶ್ವಾಸವನ್ನು ಕಳೆದುಕೊಳ್ಳಲಾರಂಭಿಸಿದ.

ಫಿರೋಜ್‌ಖಾನ್ ಮೆವಾಟಿ ಮತ್ತು ರುಸ್ತುಂ ದಿಲ್ ಖಾನ್‌ನ ನೇತೃತ್ವದಲ್ಲಿ ಮುಘಲ್ ಸೇನೆ ಸಧೌರ ಕಡೆ ಚಲಿಸಿ ಕೋಟೆಯನ್ನು ಸುತ್ತುವರೆಯಿತು. ನವೆಂಬರ್ 24ರಂದು ಸಿಖ್ ಮತ್ತು ಮುಘಲ್ ಸೈನಿಕರ ನಡುವೆ ಕೋಟೆಯ ಹೊರಭಾಗದಲ್ಲಿ ತುರುಸಿನ ಕಾಳಗ ನಡೆಯಿತು.

ಯುದ್ಧವನ್ನು ಕಣ್ಣಾರೆ ಕಂಡೆನೆಂದು ಹೇಳಿಕೊಳ್ಳುವ ಕಮ್ವರ್ ಖಾನ್ ಪ್ರಕಾರ– "ಈ ಬಡಮನುಷ್ಯನಾದ ನಾನು ರಾಜಕುಮಾರ ರಫಿಯುಶಾನ್‌ನ ಸೈನ್ಯ ತುಕಡಿಯಲ್ಲಿ ಇದ್ದ. ಆ ದುಷ್ಟ ಜನರಲ್ಲಿದ್ದ ಪ್ರತಿಯೊಬ್ಬನೂ ಯುದ್ಧಭೂಮಿಗೆ ನೆಗೆದುಬಂದಾ ರಾಜ ಪಡೆಯ ಜೊತೆ ಕಾದಾಡುತ್ತಿದ್ದನು. ಬಹು ಪರಾಕ್ರಮವನ್ನು ಮೆರೆದ ನಂತರ ಅವರು ರಾಜ ಸೇನೆಯ ಪವಿತ್ರ ಹೋರಾಟಗಾರರ ಖಡ್ಗಕ್ಕೆ ಬಲಿಯಾಗುತ್ತಿದ್ದರು. ಈ ಸಮಯದಲ್ಲಿ ರಾಜನ ಸೈನ್ಯ ಮತ್ತು ಉಮ್ರಾನ ಸೈನ್ಯ ಎದುರಾಳಿಗಳನ್ನು ಎಲ್ಲ ಕಡೆಯಿಂದ ಸುತ್ತುವರೆಯಿತು. ಆ ಕಾಲದ ಪ್ರಸಿದ್ಧ ಕಾದಾಳುಗಳಾದ ರುಸ್ತಂ ಮತ್ತು ಇಸ್‌ಫಾಂದ್ಯಾರ್ ಅವರಿಗಿಂತಲೂ ಮೇಲಾಗಿ ಶತ್ರು ವಿರುದ್ಧ ಸೈನಿಕರು ಕಾದಾಡಿದರು. ಆ ನೀತಿಭ್ರಷ್ಠ ಪಂಥದ (ಸಿಖ್) ಐದು ನೂರು ಜನರು ಮತ್ತವರ ನಾಯಕರು ಪರಾಕ್ರಮ ಮುಸ್ಲಿಂ ಸೈನಿಕರ ಖಡ್ಗಳಿಗೆ ಆಹಾರವಾದರು. ಜಯಶಾಲಿಯಾದ ಸೈನ್ಯಪಡೆಯ ಫಿರೋಜಾ ಶಾ ಮೇವಾಟಿಯ ಸೋದರನ ಮಗ ಹತನಾದ; ಮೇದಾಟಿಯ ಮಗ ಗಾಯಗೊಂಡ".

ಆ ಸಮಯದಲ್ಲಿಯೇ ಚಕ್ರವರ್ತಿಯು ತನ್ನ ಸೈನ್ಯವನ್ನು ಆರು ವಿಭಾಗಗಳಾಗಿ ವಿಂಗಡಿಸಿದ ರಾಜಕುಮಾರ ರಫಿಯ ಶಾನ್ 31 ಸಾವಿರ ಸೈನಿಕರ ದಂಡನಾಯಕನಾದ ಅವನ ಸಹಾಯಕ ಬಕ್ಷಿ–ಉಲ್–ಮುಲ್ಕ್ ಜಲ್ಫಿಕರ್ ಖಾನ್ ನಿಂತ. ಉಳಿದ ಮೂವರು ರಾಜಕುಮಾರರ ಬಳಿ ತಲಾ ಒಂದು ಸಾವಿರ ಸೈನಿಕರಿದ್ದರು. ಖಾನ್ ಖಾನ ಮುನ್ನೈಯಂ ಖಾನ್ ಹತ್ತಿರ ಹನ್ನೊಂದು ಸಾವಿರ ಸೈನಿಕರು ಹಾಗೂ ಖಾನ್ ಖಾನನ ಮಗನಾದ ಮಹಬ್ಬತ್ ಖಾನನ ಕೈಕೆಳಗೆ ಏಳು ಸಾವಿರ ಸೈನಿಕರ ಆರನೇ ತುಕಡಿಯಿತ್ತು.(38) ಚತ್ರಸಾಲ್ ಬುಂದೇಲ ಮತ್ತು ಉದಿತ್ ಸಿಂಗ್ ಬುಂದೇಲ ಅವರ ನೇತೃತ್ವದ ಹಿಂದೂ ರಾಜರ ಪಡೆ ಕೂಡ ರಾಜನ ಪಡೆಯನ್ನು ಬಂದಾ ಸೇರಿಕೊಂಡಿತು. ಹಾಗಾಗಿ ಲೋಹಗಡದ ಕಡೆ ಚಲಿಸಿದ ಬೃಹತ್ ಸೈನ್ಯದಲ್ಲಿ ಒಂದು ಲಕ್ಷ ಸೈನಿಕರಿದ್ದರು.(34)

ಲೋಹಗಡದ ಕೋಟೆಯ ವಿನ್ಯಾಸದ ಎಲ್ಲ ವಿವರಗಳನ್ನು ಕಲೆಹಾಕುವಂತೆ ಚಕ್ರವರ್ತಿಯು ರುಸ್ತುಂ ದಿಲ್ ಖಾನ್ ಮತ್ತು ರಫಿಯುಸ್ ಶಾನ್ ಗೆ ಸೂಚಿಸಿದ. ಮಹಮ್ಮದ್ ಕಾಸಿಂ ಔರಂಗಾಬಾದಿಯ ಪ್ರಕಾರ ಬಂದಾ ಸಿಂಗ್ ಬಳಿ ಒಂದೂವರೆ ಲಕ್ಷ ಸೈನಿಕರ ಪಡೆಯಿತ್ತು. ಮುಘಲರ ಸೈನ್ಯವು ಹೆಚ್ಚು ಕಡಿಮೆ ಅದೇ ಪ್ರಮಾಣದ್ದಾಗಿತ್ತು. ಸಿಕ್ಖರ ವಿರುದ್ಧದ ಯುದ್ಧಗಳಲ್ಲಿ ಅಪಾರ ಸಂಖ್ಯೆಯ ಮುಘಲ್ ಸೈನಿಕರು ಹತರಾದ ಬಗ್ಗೆ ಬಂದಾ ಸಿಂಗ್‌ಗೆ ಸುದ್ದಿ ಬಂತು. ಬಂದಾ ಸಿಂಗ್ "ಒಬ್ಬ ಶಕ್ತಿಶಾಲಿ ಜಾದೂಗಾರ. ಆತ ತನ್ನತ್ತ ಹಾರಿ ಬರುವ ಗುಂಡಿನ ದಿಕ್ಕನ್ನು ತಪ್ಪಿಸಬಲ್ಲ; ಈಟಿ ಭರ್ಜಿಗಳು ತನ್ನ ಸೈನಿಕರ ವಿರುದ್ಧ ನಿರುಪಾಯವಾಗುವಂತೆ ಮಾಡಬಲ್ಲ" ಎಂಬ ಸುದ್ದಿಗಳು ಚಕ್ರವರ್ತಿಯ ಕಿವಿಗೆ ಬಿದ್ದವು." ಇದು ಚಕ್ರವರ್ತಿಯಲ್ಲಿ ನಿರುತ್ಸಾಹ ತುಂಬಿತು. ತನ್ನ ಶಿಬಿರದ ಹತ್ತಿರ ಯಾವ ಹಿಂದೂವೂ ಬರಬಾರದೆಂದು ಆಜ್ಞೆ ಮಾಡಿದ; ತನ್ನ ಮುಘಲ ಸೈನಿಕರ ಬಗ್ಗೆಯೂ ಭಯಗೊಂಡಿದ್ದ. ಯುದ್ಧ

ಭೂಮಿಯಿಂದ ದೂರವಿರಲು ನಿರ್ಧರಿಸಿ, ಲೋಹಗಡದಿಂದ 12 ಕೋಸು (48 ಕಿ.ಮೀ) ದೂರದಲ್ಲಿದ್ದ ಕೈಂಪುರ ಗ್ರಾಮದ ಬಳಿ ಬೀಡುಬಿಟ್ಟ. ರಾಜನ ಕಾರವಾನ್ ಜೊತೆಗಿದ್ದ ಹದಿ ಕಮ್ವಾರ್ ಖಾನ್ ಹೀಗೆ ಬರೆಯುತ್ತಾನೆ.[40] "ಆ ಪ್ರದೇಶದ ತುಂಬ ಒಂಟೆಯ ಮೇಲೆ ಕುಳಿತ ರಜಪೂತ ಸೈನಿಕರನ್ನು ನೋಡಿದೆ. ಸಾವಿರಾರು ಜನರು ಅಲ್ಲಿದ್ದರೂ, ಚಕ್ರವರ್ತಿಯ ಜೊತೆ ಆತನ ನಾಲ್ವರು ಮಕ್ಕಳು ಮತ್ತು ಕೆಲವು ಆಸ್ಥಾನಿಕರು ಮಾತ್ರ ಇರುತ್ತಿದ್ದರು". ಅದರರ್ಥ ಯಾವುದೇ ಅಹಿತಕರ ಘಟನೆಗೆ ಪ್ರತಿಕ್ರಿಯಿಸಲು ರಜಪೂತ ಸೈನಿಕರು ಸಂಪೂರ್ಣ ಸನ್ನದ್ಧರಾಗಿದ್ದರು; ಬಹದ್ದೂರ್ ಶಾ ತಪ್ಪು ಹೆಜ್ಜೆ ಇಟ್ಟಿದ್ದರೆ, ಆತನನ್ನು ಮುಗಿಸಿಬಿಡುತ್ತಿದ್ದರು. ಸಿಕ್ಖರು ಮುಘಲ್ ಸೇನೆಗೆ ಅಪಾರ ಜೀವಹಾನಿ ಉಂಟುಮಾಡಿದ್ದರಿಂದ ಸಹಜವಾಗಿ ಮುಘಲರು ನಿರುತ್ಸಾಹಗೊಂಡಿದ್ದರು. ಮುಘಲರನ್ನ ವಿರೋಧಿಸಿ ಕಾದಾಡಲು ಸಿಖ್ ಸೈನಿಕರೊಡನೆ ಬಂದಾ ಸಿಂಗ್ ಬಹದ್ದೂರ್ ರಣೋತ್ಸಾಹದಲ್ಲಿದ್ದ. ಐವತ್ತೆರಡು ಕೋಟೆಗಳಿಂದಲೂ ಸೈನಿಕರು ಮುಗಿಲು ಮುಟ್ಟುವಂತೆ 'ಫತೇ ದರ್ಶನ್' ಮತ್ತು 'ಸಚ್ಚಾ ಪದ್ ಶಾ' ಎಂದು ಕೂಗುತ್ತಾ ರಣಘೋಷವನ್ನು ಮೊಳಗಿಸಿದ ಸಿಖ್ ಸೈನಿಕರು ಶತ್ರು ಪಾಳಯದ ಫಿರಂಗಿದಳ ಮತ್ತು ಸೇನಾ ತುಕಡಿಗಳ ಮೇಲೆ ಮುಗಿಬಿದ್ದರು. ರಾಜಸೇನೆಯು ನಡುಗುವಂತೆ ತೀವ್ರ ದಾಳಿ ನಡೆಸಿದರು. ಎರಡೂ ಕಡೆಯೂ ಅಪಾರ ಸಂಖ್ಯೆಯಲ್ಲಿ ಸೈನಿಕರು ಪ್ರತಿದಿನವೂ ಸಾಯತೊಡಗಿದರು.

ಲೋಹಗಡದ ಕೋಟೆಯನ್ನು ತಲುಪುವ ಮಾರ್ಗದಲ್ಲಿ ನಡೆಯುತ್ತಿದ್ದ ಮುಘಲರ ಹೋರಾಟ ಮತ್ತು ಸಾವಿನ ವರದಿಯನ್ನು ರಾಜ್ಯಾಡಳಿತದ ಅಧಿಕಾರಿ ಮಿರ್ಜಾ ಖಾನ್ ತಂದು ಒಪ್ಪಿಸುತ್ತಿದ್ದ. ರುಸ್ತುಂ ದಿಲ್ ಖಾನ್ ಬಹದ್ದೂರ್, ಸಧವಾಲ್ ಎಂಬ ಹೆಸರಿನ ಕೋಟೆಯನ್ನು ಸಮೀಪಿಸಿ ಅದನ್ನು ಸುತ್ತುವರೆದ. ಆ ಕಟ್ಟಡದ ಒಳಗೆ ಬಂದಾ ಸಿಂಗ್ ಇರಬಹುದೆಂಬ ನಂಬಿಕೆಯಿಂದ ಮುತ್ತಿಗೆ ಹಾಕಿದ. ಆದರೆ ಅವನಿಗೆ ಬಂದಾ ಮಾಹಿತಿ ತಪ್ಪಾಗಿತ್ತು. ಆ ಬೆಟ್ಟದ ಬಹುದೂರದ ಮರವೊಂದರ ಕೆಳಗಿನ ಗುಡಾರದಲ್ಲಿ ಕುಳಿತ ಬಂದಾ ಸಿಂಗ್ ತನ್ನ ಪ್ರೀತಿಯ ಅನುಯಾಯಿಗಳ ಶೌರ್ಯವನ್ನು ನೋಡುತ್ತಿದ್ದ. ಒಂದು ಕೋಟೆಯಿಂದ ಮತ್ತೊಂದು ಕೋಟೆಗೆ ಮಿಂಚಿನಂತೆ ಸಂಚರಿಸುತ್ತಿದ್ದ ಬಂದಾ ಸಿಂಗ್‌ನನ್ನು ಮುಘಲ್ ಸೇನೆಯ ಯಾವೊಬ್ಬ ದಳಪತಿಗೂ, ತಲುಪಲಾಗಲಿಲ್ಲ. ಆತ ಸ್ವತಃ ದಾಳಿಗೆ ಸುಲಭವಾಗಿ ತುತ್ತಾಗಬಹುದಾದ ಕೋಟೆಯ ಕೆಲವು ದುರ್ಬಲ ಭಾಗಗಳ ರಕ್ಷಣೆಗೆ ನಿಂತು, ಅದಕ್ಕೆ ತಕ್ಕಂತೆ ಸೈನಿಕರನ್ನು ಕಳುಹಿಸುವ ಕಾರ್ಯದಲ್ಲಿ ನಿರತನಾಗಿದ್ದ.

ಮುಘಲ್ ಮಾನ್ಸಾಬದಾರರು ತಮ್ಮ ಸೇನೆಯೊಡನೆ 52 ಕೋಟೆಗಳ ಜಾಲವನ್ನು ಭೇದಿಸಲು ಪ್ರಯತ್ನಿಸಿದರು. ಸಿಕ್ಖರು ಪ್ರತಿಯೊಂದು ಕೊತ್ತಲದಿಂದ ಫಿರಂಗಿ, ತುಪಾಕಿಗಳಿಂದ ಶತೃ ಸೈನ್ಯದ ಮೇಲೆ ದಾಳಿ ನಡೆಸಿದರು. ಮುಘಲರ ದೊಡ್ಡ ಸೇನೆಯನ್ನು ಕಂಡು ಸಿಕ್ಖರು ಹೆದರಲಿಲ್ಲ. ತಮ್ಮ ಕೋಟೆಯ ಆಯಕಟ್ಟಿನ ಜಾಗಲ್ಲಿ ಇದ್ದುದರಿಂದ ಸಿಕ್ಖರಿಗೆ ಅನುಕೂಲವಾಗಿತ್ತು, ಎತ್ತರದ ಸ್ಥಳಗಳಿಂದ ಮುಘಲರ ಕಡೆ ಬಾಣ ಪ್ರಯೋಗ ಮಾಡಿದರು. ಬಂದೂಕಿನಿಂದ ಗುಂಡಿನ ಮಳೆ ಕರೆದರು. ಸಿಕ್ಖರ ಖಡ್ಗಗಳ ಆಘಾತಕ್ಕೆ ಅನೇಕ ಮುಘಲ್ ಸೈನಿಕರು ಜೀವ ತೆತ್ತರು. ಖಾನ್–ಐ–ಖಾನನ್ ಕೋಟೆಯತ್ತ ಮುನ್ನುಗ್ಗಲು ಪ್ರಯತ್ನಿಸಿದನಾದರೂ ಗುರಿಮುಟ್ಟಲು ವಿಫಲನಾದ. ಎರಡೂ ಪಕ್ಷದವರು ವೀರಾವೇಶದಿಂದ ಹೋರಾಡಿದರು. ಕೋಟೆಯ ಬತೇರಿಯಿಂದ ಆಗಾಗ್ಗೆ ಫಿರಂಗಿ ಗುಂಡುಗಳು ಹಾರಿ ರಾಜನ ಸೈನ್ಯದ ಮೇಲೆ ಬೀಳುತ್ತಿದ್ದವು. ಅಪಾರ ಸೈನಿಕರು ಇದರಿಂದ ಹತರಾದರು. ಅಮೀನ್ ಉಮರ ಬಹದ್ದೂರ್ ನುಸ್ರತ್ ಜಂಗ್ ಲೋಹಗಡದ ಕೋಟೆಯ ಹತ್ತಿರ ಎಂದೂ

ಹೋಗಲಿಲ್ಲ. ತಮ್ಮ ಡೇರೆಯಲ್ಲಿಯೇ ಕುಳಿತ ಚಕ್ರವರ್ತಿಗೆ ಯುದ್ಧದ ವರದಿಯನ್ನು ಕಳುಹಿಸುತ್ತಿದ್ದ. ಉಗಲ ಗ್ರಾಮದ ಹತ್ತಿರ ಬೀಡುಬಿಟ್ಟಿದ್ದ ಚಕ್ರವರ್ತಿಯು ದೂರದಿಂದಲೇ ಯುದ್ಧದ ಉಸ್ತುವಾರಿ ನಡೆಸುತ್ತಿದ್ದು. ಇದು ಒಂದು ತಿಂಗಳವರೆಗೆ ಮುಂದುವರೆಯಿತು. ಪ್ರತಿದಿನ ನೂರಾರು ಮುಘಲ್ ಸೈನಿಕರು ಬಲಿಯಾಗುತ್ತಿದ್ದರು. ಮುಘಲ್ ಸೈನ್ಯದ ಕಡೆಯಿಂದ ಯುದ್ದದಲ್ಲಿ ಸ್ವಲ್ಪವೂ ಪ್ರಗತಿ ಕಾಣಲಿಲ್ಲ.

ಇರ್ವಿನ್ ಬರೆಯುತ್ತಾರೆ– "ಬಂದಾ ಸಿಂಗ್ ಬಗೆಗೆ ಹಬ್ಬಿದ್ದ ಗಾಳಿ ಮಾತಿನಿಂದ ಮುಘಲ್ ಮತ್ತು ಪಠಾಣ್ ಸೈನಿಕರು ಭಯ ವಿಹ್ವಲರಾಗಿದ್ದರು. ಶತ್ರುಗಳ ಸೈನ್ಯದ ಈಟಿ, ಭರ್ಜಿ, ಕತ್ತಿಗಳು ಏನೂ ಮಾಡಲಾಗದಂತೆ ಮಾಡುವ ಶಕ್ತಿ ಬಂದಾ ಸಿಂಗ್‌ಗೆ ಇದೆಯೆಂಬ ವಾರ್ತೆಯನ್ನು ಅವರು ಕೇಳಿದ್ದರು. ಯಾರೆ ಯುದ್ಧದಲ್ಲಿ ಸತ್ತರೂ ಆತ ಮತ್ತೆ ಹುಟ್ಟಿ, ಮರು ಜನ್ಮದಲ್ಲಿ ಉನ್ನತ ಸ್ಥಾನ ತಲುಪಲು ಬಂದಾ ಸಿಂಗ್ 'ವರ' ನೀಡುತ್ತಾನೆಂದು ಹೇಳುತ್ತಿದ್ದರು. ಇಂಥ ಗಾಳಿ ಸುದ್ದಿಗಳಿಂದ ಮುಘಲ ಸೇನೆಯ ಹಿರಿಯ ಅಧಿಕಾರಿಗಳು ಗೊಂದಲಗೊಂಡು ನಿರುತ್ಸಾಹದ ಮಡುವಿನಲ್ಲಿ ಬಿದ್ದರು."

ಇಂಥ ಸುದೀರ್ಘ ಯುದ್ಧದ ತರುವಾಯ, ಲೋಹಗಡ ಕೋಟೆಯನ್ನು ಕೈವಶಮಾಡಿಕೊಳ್ಳುವುದು ಸುಲಭವಲ್ಲವೆಂಬುದು ಚಕ್ರವರ್ತಿಗೆ ಮನವರಿಕೆಯಾಯಿತು. ಲೋಹಗಡ ಕೋಟೆಯನ್ನು ವಶಪಡಿಸಿಕೊಳ್ಳಲು ಇರುವ ಒಂದೇ ಮಾರ್ಗವೆಂದರೆ ಸಿಕ್ಖರ ನಾಯಕ ಬಂದಾ ಸಿಂಗ್ ಬಹದ್ದೂರ್‌ನನ್ನು ಸೆರೆ ಹಿಡಿಯುವುದು. ಇದಾದ ನಂತರ ಚಕ್ರವರ್ತಿಯ ತನ್ನ ಬಹುತೇಕ ಸಂಪನ್ಮೂಲ ಮತ್ತು ಶಕ್ತಿಯನ್ನು ಬಂದಾ ಸಿಂಗ್‌ನ ಬಂಧನಕ್ಕೆ ವ್ಯಯಿಸತೊಡಗಿದ. ಮುಘಲರ ಚರಿತ್ರೆಯ ದಾಖಲುಕಾರರ ಪ್ರಕಾರ 1711ರ ಮೇ–ಜೂನ್‌ನಲ್ಲಿ ಮುಘಲ್ ಸೇನೆಯು ಅಲ್ಲಲ್ಲೇ ಬೀಡುಬಿಟ್ಟು ಸಿಖ್ ಸೈನಿಕರ ವಿರುದ್ಧ ದಾಳಿ ಮಾಡುತ್ತಿತ್ತು. ಸಿಖ್ ಸೈನಿಕರನ್ನು ಕೊಲ್ಲುವುದರಲ್ಲಿ ಯಶಸ್ವಿಯಾದರೂ ಬಂದಾ ಸಿಂಗ್‌ನನ್ನು ಹಿಡಿಯುವಲ್ಲಿ ಸಫಲವಾಗಲಿಲ್ಲ. ಬಹದ್ದೂರ್ ಶಾ ಮತ್ತು ಬಂದಾ ಬಹದ್ದೂರ್ ಈ ಇಬ್ಬರು ನಾಯಕರ ನಡುವೆ ದೊಡ್ಡದಾದ ವ್ಯತ್ಯಾಸವೊಂದಿತ್ತು. ಇಲ್ಲಿ ಸಿಖ್ ನಾಯಕ ಸ್ವತಃ ತಾನೇ ಯುದ್ಧದಲ್ಲಿ ಭಾಗಿಯಾಗುತ್ತಿದ್ದ. ಅತ್ತ ಮುಘಲ್ ಚಕ್ರವರ್ತಿ ಯುದ್ಧ ಭೂಮಿಯಿಂದ ಸುಮಾರು 35 ಕಿ.ಮೀ. ದೂರದಿಂದ ಯುದ್ಧವನ್ನು ಗಮನಿಸುತ್ತಿದ್ದ. ಅಲ್ಲದೆ ಬಂದಾ ಸಿಂಗ್‌ನ ಯುದ್ಧ ಕೌಶಲ್ಯ ಮತ್ತು ಯುದ್ಧ ತಂತ್ರಕ್ಕೆ ಎಣೆಯಿರಲಿಲ್ಲ. ಸಿಖ್ ದಳನಾಯಕ 35ರ ವಯಸ್ಸಿನವನಾದರೆ ಚಕ್ರವರ್ತಿಗೆ 65 ವರ್ಷ ವಯಸ್ಸಾಗಿತ್ತು. ಸೈನ್ಯದ ಮುಂದಿನ ಸಾಲಿಗೆ ಬಂದಾು ಸೇನೆಯನ್ನು ಮುನ್ನಡೆಸುವ ಬದಲು ದೂರದ ಶಹಬಾದ್‌ನಲ್ಲಿ ಕುಳಿತು ಯುದ್ಧ ನಡೆಸುವ ಚಕ್ರವರ್ತಿಯು ಹೇಡಿಯಿರಬೇಕೆಂದು ಬಂದಾ ಸಿಂಗ್‌ಗೆ ಅನಿಸಿತು. ತನ್ನ ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಸೈನಿಕರು ಹತರಾಗುತ್ತಿರುವುದನ್ನು ಕಂಡು ಚಕ್ರವರ್ತಿಗೆ ಅಭದ್ರತೆ ಕಾಡಿತು. ತನ್ನ ಶಿಬಿರಕ್ಕೆ ಹಿಂದೂ ವ್ಯಕ್ತಿ ಅಥವಾ ರಾಜ ಪ್ರವೇಶಿಸದಿರಲು ಆಜ್ಞೆ ಹೊರಡಿಸಿದ. ತನ್ನ ನಿಷ್ಠಾವಂತ ಸೈನಿಕರನ್ನು ನಂಬದ ಸ್ಥಿತಿ ತಲುಪಿದ.

ಈ ಸುದೀರ್ಘ ಸಮರದ ಕಾಲದಲ್ಲಿ ಮುಘಲರ ಸೈನ್ಯಕ್ಕೆ ಬರುತ್ತಿದ್ದ ಅಗತ್ಯ ವಸ್ತುಗಳ ಸರಬರಾಜಿನಲ್ಲಿ ವ್ಯತ್ಯಯ ಉಂಟಾಯಿತು. ಸಿಖ್ ಸೈನಿಕರ ವಿರುದ್ಧ ಸೆಣೆಸಲು ಅಪಾರ ಸಂಖ್ಯೆಯ ಸೈನಿಕರಿಗೆ ಆಹಾರ, ಶಸ್ತ್ರಾಸ್ತ್ರ, ಔಷಧಿ ಮತ್ತು ಕುದುರೆಗಳ ಅಗತ್ಯವಿತ್ತು. ಯುದ್ಧ ಸಾಮಗ್ರಿಗಳನ್ನು ಸಾಮಾನ್ಯವಾಗಿ ಪೂರೈಸುತ್ತಿದ್ದವರು ವಂಜಾರರು. ಆದರೆ ಈಗ ಅವರು ತಮ್ಮ ಶತ್ರು ಪಡೆಯಾದ

ಸಿಕ್ಖರಿಗೆ ನೆರವಾಗುತ್ತಿದ್ದರು. ವಂಜಾರರು ಸಿಖ್ ಸೈನ್ಯಕ್ಕೆ ಅಗತ್ಯವಾದ ಆಹಾರ ಸರಂಜಾಮು ಮಾತ್ರವಲ್ಲ, ಶಸ್ತ್ರಾಸ್ತ್ರ, ಮದ್ದುಗುಂಡುಗಳನ್ನು ಸಹ ಪೂರೈಸುತ್ತಿದ್ದರು.

ಗೆರಿಲ್ಲ ಯುದ್ಧ ತಂತ್ರದಲ್ಲಿ ಸಿಕ್ಖರು ನಿಪುಣರಾಗಿದ್ದರು. ಅವರು ಶತ್ರುಗಳ ಮೇಲೆ ದಾಳಿ ಮಾಡಲು ಯಾವಾಗಲೂ ಮೊದಲಿರುತ್ತಿದ್ದರು. ಅವರ ದಾಳಿ ಹಠಾತ್ ಹಾಗೂ ತ್ವರಿತ. ಅವರು ಚಿರತೆಯಂತೆ ದಾಳಿ ಮಾಡಿ ಅದರ ವೇಗದಲ್ಲಿಯೇ ಓಡಿಹೋಗುತ್ತಿದ್ದರು. ನೇರವಾದ ಹಾದಿಯಲ್ಲಿ ಅವರೆಂದು ಕ್ರಮಿಸಿದ್ದಿಲ್ಲ. ಬದಲು ಕಾಡಿನ ದುರ್ಗಮವಾದ ಕಾಲುದಾರಿಗಳಲ್ಲಿ ಚಿರತೆಗಳಂತೆ ಅಡಗಿ ಚಲಿಸುತ್ತಿದ್ದರು. ಸಮಕಾಲೀನ ಲೇಖಕ ಮತ್ತು 'ಅಸ್ರಾರ್–ಐ–ಸಮಾಧಿ'ಯ ಗ್ರಂಥಕರ್ತನು ಬಂದಾ ಸಿಂಗ್ ಮತ್ತು ಅವನ ಖಲ್ಸಾ ಸಹಚರರು ಸಿಂಹ ಮತ್ತು ಚಿರತೆಗಳ ಚಲನೆಯಂತೆ ಮಿಂಚಿನ ವೇಗದಲ್ಲಿ ನಡೆಯುತ್ತಿದ್ದರು ಎಂದು ಹೇಳುತ್ತಾನೆ. ಅವನ ಪ್ರಕಾರ "ಸಿಖ್ ಸೈನಿಕರು ಆನೆಯ ಬೆನ್ನಿನತ್ತ ಸಿಂಹಗಳಂತೆ ಹಾರಿ ಅಂಬಾರಿಯಲ್ಲಿ ಕುಳಿತವರನ್ನು ನೆಲಕ್ಕೆ ಒಗೆಯುತ್ತಿದ್ದರು ಅವರು ಚಿರತೆಗಳಂತೆ ಚಲಿಸಿ ಕಾಡುಕುದುರೆಯೂ ಮುಟ್ಟಲಾಗದ ದುರ್ಗಮ ಪ್ರದೇಶಗಳನ್ನು ತಲುಪುತ್ತಿದ್ದರು." ಭೂ ಪರಿಸರ ಸಿಕ್ಖರಿಗೆ ಅನುಕೂಲಕರವಾಗಿತ್ತು. ಹಾಗಾಗಿ ಮುಘಲರ ದಾಳಿಯ ಮಟ್ಟ ದುರ್ಬಲವಾಗಿತ್ತು. ಉಬ್ಬು ತಗ್ಗುಗಳ ಭೂ ಪ್ರದೇಶ ಮತ್ತು ನಿಬಿಡ ವನಗಳಲ್ಲಿ ಕಾದಾಡುವ ಬಗ್ಗೆ ಸಿಕ್ಖರಿಗೆ ತರಬೇತಿಯಿತ್ತು. ಸಿಖ್ ಸೈನಿಕರು ಸೂರ್ಯಾಸ್ತದ ನಂತರ ಕತ್ತಲಲ್ಲಿ ಮುಘಲ್ ಸೈನಿಕರ ಮೇಲೆ ಮುಗಿಬೀಳುತ್ತಿದ್ದರು. ಇದರಿಂದ ಅವರ ಸೇನೆಯಲ್ಲಿ ಹೆಚ್ಚಿನ ಮೊತ್ತದ ಜೀವಹಾನಿಯಾಯಿತು. ಶತ್ರುಗಳ ಒಂದು ಸ್ಥಳದಲ್ಲಿ ಭದ್ರವಾದ ನೆಲೆಯಾಗಲು ಸಿಖ್ ಸೈನಿಕರು ಬಿಡುತ್ತಿರಲಿಲ್ಲ. ಎತ್ತರದ ಬೆಟ್ಟಗಳ ತುದಿಯಲ್ಲಿ ಸಣ್ಣ ಗುಂಡಿ ತೋಡಿ ಸಿಖ್ ಸೈನಿಕರು ಹತ್ತಿ ಬೀಜಗಳನ್ನು ಉರಿಸುತ್ತಿದ್ದರು. ಅದರ ಬೆಳಕಿನಲ್ಲಿ ಬಂದಾ ಮುಘಲ್ ಸೇನೆಯ ಮೇಲೆ ಮುಗಿಬಿದ್ದು ಲೂಟಿ ಮಾಡಿ ಆ ಬೆಳಕಿನ ಗುರುತು ಹಿಡಿದು ಸುರಕ್ಷಿತ ತಾಣವನ್ನು ಸೇರಿಕೊಳ್ಳುತ್ತಿದ್ದರು. ಮಹಮ್ಮದ್ ಖಾಸಿಂ ಔರಂಗಾಬಾದಿಯ ಪ್ರಕಾರ "ಈ ಕೋಟೆಯನ್ನು ಆಕ್ರಮಿಸುವುದು ಒಂದು ವರ್ಷದೊಳಗೆ ಸಾಧ್ಯವಿಲ್ಲ ಎಂಬುದು ಖಾನ್ ಖಾನನ್ ಮತ್ತು ಮುಘಲ್ ರಾಜಕುಮಾರನ ಅಭಿಪ್ರಾಯವಾಗಿತ್ತು."

**ಸಿಖ್ ಸೇನೆಗೆ ಸರಬರಾಜು**

ಲೋಹಗಡ ವಲಯದ ತಪಲ್‌ನಲ್ಲಿ ಗುರು ಹರ್ ರಾಯ್ ಸಾಹಿಬ್ ವಾಸವಾಗಿದ್ದ ಕಾಲದಲ್ಲಿ, ಯುದ್ಧಕ್ಕೆ ಅಗತ್ಯವಾದ ಆಹಾರ ದಾಸ್ತಾನು ಹಾಗೂ ಇತರೆ ಸರಂಜಾಮುಗಳನ್ನು ಸಂಗ್ರಹಿಸಲು ಸೂಕ್ತವಾದ ದಾಸ್ತಾನು ಮಳಿಗೆಗಳನ್ನು ನಿರ್ಮಿಸಿರಬಹುದೆಂದು ಕಾಣುತ್ತದೆ. ಆತನ ಈ ಕಲ್ಪನೆಯೇ ಅಮೋಘವಾದದ್ದು. ಲೋಹಗಡ ಕೋಟೆಯನ್ನು ಕಟ್ಟುವಾಗ ಅವರು ಎಲ್ಲವನ್ನೂ ಆಮೂಲಾಗ್ರವಾಗಿ ವೀಕ್ಷಿಸುತ್ತಿದ್ದರು. ಕಾಯುತ್ತಿದ್ದರು. ಉದಾರಿಗಳಾಗಿದ್ದರು. ತಂತ್ರವನ್ನು ಬಲ್ಲವರಾಗಿದ್ದರು. ಗುರು ಹರ್ ರಾಯ್ ಸಾಹಿಬ್ ಅವರಿಗೆ ಮನುಕುಲದ ಬಗ್ಗೆ ಅರಿವಿತ್ತು. ಲೋಹಗಡ ಕೋಟೆಗೆ ಅಗತ್ಯವಾದ ಕಚ್ಚಾ ಸಾಮಗ್ರಿ ಮೊತ್ತದ ಅಂದಾಜು ತಿಳಿದಿತ್ತು. ಇವೆಲ್ಲಕ್ಕೂ ಮುಖ್ಯವಾಗಿ ಅವರು ಸಿಕ್ಖರಲ್ಲಿ ಕೆಚ್ಚೆದೆಯಿಂದ ಹೋರಾಡುವ ಕೌಶಲ್ಯವನ್ನು ಮತ್ತು ಗೆಲ್ಲಲೇಬೇಕೆಂಬ ದೃಢಸಂಕಲ್ಪವನ್ನು ಧಾರೆ ಎರೆದರು. ಭೌತಿಕ ಬಲವನ್ನು ವೃದ್ಧಿಸುವುದಕ್ಕಿಂತ ಹೆಚ್ಚಾಗಿ ಮಾನಸಿಕ ದೃಢತೆಯನ್ನು ಪೋಷಿಸಿದರು. ಅಲ್ಲದೆ ಯಾವುದು ಸಾಧ್ಯವಿದೆ, ಯಾವುದು ಅಸಾಧ್ಯ ಎಂದು ನಿಷ್ಕರ್ಷಿಸುವ ಲೋಕಜ್ಞಾನವನ್ನು ಬೆಳೆಸಿದರು. ಯುದ್ಧದ ವಿಧಾನಗಳು, ಪರಿಸರದ ತಿಳಿವಳಿಕೆ, ಸೇನೆಯ ಚಲನೆ ಮತ್ತು ಸರಕುಗಳ ಪೂರೈಕೆ ಬಗ್ಗೆ ಸಿಖ್ ಸೈನಿಕರಿಗೆ ಒಳ್ಳೆಯ ಪರಿಜ್ಞಾನವಿತ್ತು.

ಅದರು ಲೋಹಗಡದ ಹತ್ತಿರ ಮುಘಲರನ್ನು ಎದುರಿಸುವಾಗ ನೆರವಿಗೆ ಬಂತು.

ಭಾಯ್ ಲಕಿ ರಾಯ್ ವಂಜಾರನ ವ್ಯಾಪಾರಿ ತಾಂಡವು ಯುದ್ಧದಲ್ಲಿ ನಿರತವಾದ ಉಭಯ ಸೈನ್ಯಗಳಿಗೆ ಆಹಾರಧಾನ್ಯ ಮತ್ತು ಇತರೆ ಸರಕುಗಳನ್ನು ಪೂರೈಸುತ್ತಿತ್ತು. ಆತ ಈಗಿನ ಕಾಲದ ರೆಡ್‌ಕ್ರಾಸ್ ಸಂಸ್ಥೆಯ ರೀತಿ ಯುದ್ಧ ಕಾಲದಲ್ಲಿ, ಯಾವುದೇ ಪಕ್ಷದ ದಾಳಿಗೆ ತುತ್ತಾಗುತ್ತಿರಲಿಲ್ಲ. ಮುಘಲರಾಗಲಿ, ಮರಾಠರಾಗಲಿ, ಸಿಕ್ಖರಾಗಲಿ, ರಜಪೂತರಗಲಿ, ಯುದ್ಧ ಕಾಲದಲ್ಲಿ ಎಲ್ಲರೂ ಈತನಿಂದಲೇ ಸಾಮಗ್ರಿ ಖರೀದಿಸುತ್ತಿದ್ದರು. ಸೈನ್ಯವು ಸಾಮಾನ್ಯವಾಗಿ ಆಹಾರಧಾನ್ಯ, ಡೇರೆಗಳು, ಶಸ್ತ್ರಾಸ್ತ್ರ, ಕುದುರೆ, ಆಡು, ಮೇಕೆ ಇತ್ಯಾದಿಗಳನ್ನು ಖರೀದಿಸುತ್ತಿತ್ತು. ಆತನ ತಾಂಡ ಶಿಬಿರಗಳನ್ನು ಸ್ಥಳಾಂತರಿಸುವ ಕಾರ್ಯದಲ್ಲಿ ಸರಕು ಸಾಗಿಸುವ ಕೆಲಸ ನಿರ್ವಹಿಸುತ್ತಿತ್ತು. ಆತನ ತಾಂಡದಲ್ಲಿ 40 ರಿಂದ 50 ಎತ್ತಿನ ಬಂಡಿಗಳು ಮತ್ತು ಅವುಗಳನ್ನು ರಕ್ಷಿಸಲು ನಾಯಿಗಳ ದಳವಿರುತ್ತಿತ್ತು. ಅವನ ತಂಡ ಸಂಜೆಯ ವೇಳೆ ಬೀಡುಬಿಟ್ಟು ತಂಗುವಾಗ ಸುರಕ್ಷತೆಗಾಗಿ "ಆಹಾರ ಧಾನ್ಯವಿರುವ ಮೂಟೆಗಳನ್ನು ಚೌಕಾಕಾರದಲ್ಲಿ ಜೋಡಿಸಿ ಮಧ್ಯದಲ್ಲಿ ವಂಜಾರರು ಉಳಿದುಕೊಳ್ಳುತ್ತಿದ್ದರು. ಎತ್ತುಗಳಿಗೆ ಹೊರಗೆ ಮೇವು ಹಾಕಲಾಗುತ್ತಿತ್ತು, ಆದರೆ ಲೋಹಗಡ ಯುದ್ಧಕ್ಕೆ ಸಂಬಂಧಿಸಿದಂತೆ ವಂಜಾರರು ಸಿಖ್ ಸೈನ್ಯಕ್ಕೆ ಆಹಾರ ಮತ್ತು ಶಸ್ತ್ರಾಸ್ತ್ರ ಸಾಮಗ್ರಿ ಪೂರೈಕೆ ಮಾಡುವುದರ ಜೊತೆಗೆ ಸೇನೆಯ ಮುಂಭಾಗದಲ್ಲಿ ನಿಂತು ಮುಘಲರ ಸೈನ್ಯದ ವಿರುದ್ಧ ಹೋರಾಡಿದರು.

ಸಂಚಾರಿ ವರ್ತಕರಾದ ವಂಜಾರರು ಸಿಕ್ಖರನ್ನು ಕಾಡಿನ ದುರ್ಗಮ ದಾರಿಗಳಲ್ಲಿ ಮುನ್ನಡೆಸಿದರು. ಅವರು ಬೆಟ್ಟಗಳಲ್ಲಿದ್ದ ಸಿಕ್ಖರ ಅಡುಗುದಾಣಗಳಿಗೆ ಶಸ್ತ್ರಾಸ್ತ್ರ ಮತ್ತು ಆಹಾರ ಧಾನ್ಯಗಳನ್ನು ಸಾಗಿಸುತ್ತಿದ್ದರು. ಯುದ್ಧವನ್ನು ನಿರೀಕ್ಷಿಸಿ ಆಹಾರ ದಾಸ್ತಾನನ್ನು ಸೂಕ್ತ ಪ್ರಮಾಣದಲ್ಲಿ ಸಂಗ್ರಹಿಸಿದ್ದರಿಂದ ಸಿಕ್ಖರಿಗೆ ಕೊರತೆಯುಂಟಾಗಲಿಲ್ಲ. ಆದರೆ ಮುಘಲರಿಗೆ ತೊಂದರೆಯಾಯಿತು. ಆಹಾರ ಧಾನ್ಯ ಪೂರೈಸುತ್ತಿದ್ದ ವಂಜಾರರು ಸಾಮಗ್ರಿ ಪೂರೈಸುವುದನ್ನು ನಿಲ್ಲಿಸಿ ಸಿಕ್ಖರ ಪರ ಹೋರಾಟದಲ್ಲಿ ನಿರತರಾದರು. ಆಹಾರ ಧಾನ್ಯಗಳ ಬೆಲೆಯೇರಿಕೆಯು ಬೆಟ್ಟಗಳಲ್ಲಿ ವಾಸಿಸುತ್ತಿದ್ದ ಜನರು ಮತ್ತು ವಂಜಾರರ ಬದುಕಿನ ಮೇಲೆ ಪರಿಣಾಮ ಬೀರಿತು. ಆದುದರಿಂದ ವಂಜಾರರು ಬಾಬಾ ಬಂದಾ ಸಿಂಗ್ ಕಡೆ ವಾಲಿದ್ದು ಸಹಜವೇ ಆಗಿತ್ತು.[(42)] ಮಹಾರಾಜ ಜೈಸಿಂಗ್‌ನ ದಿವಾನ ಭಿಕಾರಿ ದಾಸ್ ನಿರಂತರವಾಗಿ ಸುರಿಯುತ್ತಿದ್ದ ಮಳೆ, ರಾಜ ಶಿಬಿರದಲ್ಲಿ ಆಹಾರಧಾನ್ಯದ ಕೊರತೆ, ಕುದುರೆ ಮತ್ತು ಕತ್ತೆಗಳ ಅಪಾರ ಪ್ರಮಾಣದ ಹಾನಿ ಬಗ್ಗೆ ಮಾಹಿತಿ ನೀಡಿ, ಯುದ್ಧ ಭೂಮಿಯಲ್ಲಿ ಸಾಂಕ್ರಮಿಕ ರೋಗದ ಚಹರೆ ಮೂಡಿತ್ತು[(43)] ಎಂದು ಹೇಳುತ್ತಾನೆ. ಪಂಜಾಬ್‌ನ ಸಿಕ್ಖರು ಮತ್ತು ಸಿಖ್ ಆಂದೋಲನಕ್ಕೆ ನಿಷ್ಠರಾಗಿದ್ದ ವಂಜಾರರು, ಕೋಟೆಗೆ ಮುತ್ತಿಗೆ ಹಾಕಿದಾಗಲೂ ಸೈನ್ಯಕ್ಕೆ ಆಹಾರಧಾನ್ಯದ ಕೊರತೆಯಾಗದಂತೆ ನೋಡಿಕೊಂಡರು. ಕೋಟೆಯ ಒಳಗೆ ಬಂದಿಯಾಗಿದ್ದವರು ಕೋಟೆಯ ಗೋಡೆಯಿಂದ ಹಗ್ಗೆ ಕಟ್ಟಿ ಬಟ್ಟೆಗಳನ್ನು ಎಸೆಯುತ್ತಿದ್ದರು. ವಂಜಾರರು ಆ ಬಟ್ಟೆಯಲ್ಲಿ ಆಹಾರಧಾನ್ಯ ತುಂಬಿ, ಚೆಲ್ಲದಂತೆ ಕಟ್ಟುತ್ತಿದ್ದರು. ಅದೇ ಹಗ್ಗವನ್ನು ಮೇಲಿನಿಂದ ಎಳೆದುಕೊಳ್ಳುತ್ತಿದ್ದರು.[(44)] ಆಹಾರ ಧಾನ್ಯದ ಅಭಾವ, ಬೆಲೆಯೇರಲು ಕಾರಣವಾಗಿ ವಂಜಾರರು ಮತ್ತು ಬೆಟ್ಟಸಾಲಿನ ಜನರ ಬದುಕಿನ ಮೇಲೆ ಅದು ಪರಿಣಾಮ ಬೀರಿತು.

ಈ ವಿಷಯವಾಗಿ ಅಕ್ಬರ್–ಐ–ದರ್ಬಾರಿ–ಐ–ಮೌಲದಲ್ಲಿ ಕುತೂಹಲಕಾರಿ ನಮೂದುಗಳಿವೆ. ಬಹದ್ದೂರ್ ಶಾನ ಆಳ್ವಿಕೆಯ ಐದನೇ ವರ್ಷದಲ್ಲಿ (1710) ದಾಖಲಾದ ಜಗಜೀವನದಾಸ್ ಪ್ರಸ್ತುತಪಡಿಸಿದ ವರದಿ ಹೀಗೆ ಹೇಳುತ್ತದೆ. "ಕೆಲವರು ಸಿಖ್ ಬಂಡುಕೋರರಿಗೆ ಕುದುರೆ ಮತ್ತು

ಮದ್ದುಗುಂಡುಗಳನ್ನು ಪೂರೈಸಲು ಖರೀದಿಸಿದರು. ಅವುಗಳನ್ನು ಅವರು ಕೋಶಿಸ್ತಾನ್ ಬೆಟ್ಟಗಳ ಮೂಲಕ ಒಯ್ದರು. ಯಾರಾದರೂ ಅವರನ್ನು ತಡೆದು ವಿಚಾರಿಸಿದರೆ ಜಿಲ್ಲೆಯ ಜಮೀನುದಾರನಿಗೆ ಕೊಂಡೊಯ್ಯುತ್ತಿರುವುದಾಗಿ ಹೇಳುತ್ತಿದ್ದರು. ಈ ಬಗ್ಗೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುವಂತೆ ಚಕ್ರವರ್ತಿ ಆದೇಶಿಸಿದ.[45]"

**ಲೋಹಗಡ ಮತ್ತು ಬತೇರಿಯಲ್ಲಿ ನೀರು ನಿರ್ವಹಣೆ**

ಯುದ್ಧ ಕಾಲದಲ್ಲಿ ನೀರು ಬಹಳ ಮುಖ್ಯವಾದ ಅಗತ್ಯ ವಸ್ತು. ನೀರಿನ ಏಕೈಕ ಮೂಲ ಬಾವಿಗಳು. ಅವೆಲ್ಲವೂ ಲೋಹಗಡ ಕೋಟೆಯ ಒಳಗಡೆ ಇದ್ದವು. ಹಾಗಾಗಿ ಮುಘಲರಿಗೆ ನೀರನ್ನು ಪಡೆಯುವ ದಾರಿ ಇರಲಿಲ್ಲ. ಮುಘಲರಿಗೆ ನೀರು ಸಿಗಬಾರದೆಂದು ಕೋಟೆಯ ಹೊರಗಿದ್ದ ಬಾವಿಗಳಿಗೆ ವಿಷ ಹಾಕಿದ್ದರು. ಸಧೌರದ ನೆರೆಹೊರೆಯ ಹಳ್ಳಿಗಳ ಜನರು ಬಾವಿಗಳಿಗೆ ವಿಷ ಹಾಕಿ ಊರನ್ನು ಬಿಟ್ಟಿದ್ದರು. ನೀರಿನ ಬಳಕೆಯನ್ನು ಬಹದ್ದೂರ್ ಶಾ ನಿಷೇಧಿಸಿದ.[46] ಲೋಹಗಡ ಕೋಟೆಯ ಪ್ರತಿಯೊಂದು ಬತ್ತೇರಿಯು ಪರಸ್ಪರ ಹೊಂದಾಣಿಕೆಯಿಂದ ಕಾರ್ಯ ನಿರ್ವಹಿಸುತ್ತಿದ್ದರಿಂದ ಎಲ್ಲಾದರೂ ನೀರಿನ ಕೊರತೆಯುಂಟಾದರೆ ತಕ್ಷಣವೇ ಪೂರೈಕೆ ವ್ಯವಸ್ಥೆಯಾಗುತ್ತಿತ್ತು. ಬೆಟ್ಟ ಸಾಲಿನಲ್ಲಿ ಅಲ್ಲಲ್ಲಿ ಅಣೆಕಟ್ಟು ಕಟ್ಟಿದ್ದರು. ಆ ಪ್ರದೇಶದಲ್ಲಿ ಬಾರಿ ಮಳೆಯಾಗುತ್ತಿದ್ದರಿಂದ ಅಣೆಕಟ್ಟುಗಳಲ್ಲಿ ನೀರು ಸದಾ ತುಂಬಿರುತ್ತಿತ್ತು. ಸಿಕ್ಖರ ಈ ಸೂಕ್ತ ಹೊಂದಾಣಿಕೆ ವ್ಯವಸ್ಥೆ ಮುಘಲ್ ಸೇನಾ ನಾಯಕರಲ್ಲಿ ಅಚ್ಚರಿ ಮೂಡಿಸಿತು.

**ಲೋಹಗಡ ಕೋಟೆಯ ಮೇಲೆ ದಾಳಿ (ಇತಿಹಾಸಕಾರರು ನಿರೂಪಿಸಿರುವಂತೆ)**

ಮುಘಲ್ ಸೈನ್ಯವು 1710ರ ನವೆಂಬರ್ 30 ರಂದು ಲೋಹಗಡಕ್ಕೆ ಮುತ್ತಿಗೆ ಹಾಕಿತು; ಡಿಸೆಂಬರ್ ಒಂದರಂದು, ಅಂದರೆ ಮಾರನೆಯ ದಿನವೇ ಅದನ್ನು ಆಕ್ರಮಿಸಿಕೊಂಡರು. ಬಂದಾ ಸಿಂಗ್ ಬಹದ್ದೂರ್, ಕೆಲವು ಜೊತೆಗಾರರು ಜೊತೆ ಕೋಟೆಯಿಂದ ತಪ್ಪಿಸಿಕೊಂಡು ನಹನ್ ಬೆಟ್ಟಗಳ ಮೂಲಕ ಪರಾರಿಯಾದ. ಬಹುತೇಕ ಎಲ್ಲ ಚರಿತ್ರೆಕಾರರ ಗ್ರಂಥಗಳಲ್ಲಿಯೂ ಹೆಚ್ಚು ಕಡಿಮೆ ಇದೇ ವಿವರಗಳಿವೆ. ಹಾಗೆ ನೋಡಿದರೆ ಚರಿತ್ರೆಕಾರರು ತಮ್ಮ ಕೃತಿಗೆ ಈ ಯುದ್ಧವನ್ನು ಕಣ್ಣಾರೆ ಕಂಡೆವೆಂದು ಹೇಳಿಕೊಳ್ಳುವ ಪರ್ಶಿಯನ್ ಬರಹಗಾರರ ಬರಹಗಳನ್ನು ಆಧರಿಸಿವೆ. ಅವರು ವಿಶೇಷವಾಗಿ ಖಾಫಿ ಖಾನ್ ಮತ್ತು ಕಮ್ವರ್ ಖಾನ್ ತಾವು ಯುದ್ಧವನ್ನು ಕಣ್ಣಾರೆ ನೋಡಿದೆವೆಂದು ಹೇಳುತ್ತಾರೆ. ಈ ಯುದ್ಧದ ನಿರೂಪಣೆ ಹೀಗಿದೆ.

1710ರ ಡಿಸೆಂಬರ್ 30 ಬುಧವಾರದಂದು ಚಕ್ರವರ್ತಿ ಸೋಮ್ ನದಿಯ ತಟಾಕದಲ್ಲಿರುವ ಕಂಪೊ ತಲುಪಿದ. ಅದು ಲೋಹಗಡದಿಂದ ಕೆಲವು ಫರ್ಲಾಂಗ್ ದೂರದಲ್ಲಿರುವ ಸ್ಥಳ. ಪರಿಸ್ಥಿತಿಯನ್ನು ಅವಲೋಕಿಸಿದ ನಂತರ, ಆತ ಬೆಟ್ಟಗಳಲ್ಲಿ ಸಿಕ್ಖರು ಕೋಟೆಯಲ್ಲಿ ಸಿಪಾಯಿಗಳನ್ನು ನಿಲ್ಲಿಸಿರುವ ಪಾಳೆಯಗಳ ಸ್ಥಿತಿಯನ್ನು ಅಂದಾಜಿಸುವಂತೆ ಖಾನ್ ಖಾನನ್ ಮತ್ತು ಮಹಬ್ಬತ್ ಖಾನ್‌ಗೆ ಆಜ್ಞಾಪಿಸಿದ. ಅದೇ ಆದೇಶವನ್ನು ರಾಜಕುಮಾರ ರಫಿಯುಶಾನ್‌ಗೆ ನೀಡಲಾಯಿತು. ಪರಿಸ್ಥಿತಿಯನ್ನು ಸಂಪೂರ್ಣ ಅವಲೋಕಿಸಿದ ನಂತರ ಚಕ್ರವರ್ತಿಯ ಸೇನೆ ಮುಂದಿನಂತೆ ಲೋಹಗಡ ಕೋಟೆಯನ್ನು ಸುತ್ತುವರೆಯಿತು.

1. ರಫಿಯೂಶನ್ ಕೋಟೆಯಿಂದ ಒಂದು ಕಿ.ಮೀ. ದೂರದಲ್ಲಿ ತನ್ನ ತುಕಡಿಯೊಡನೆ ಯುದ್ಧಕ್ಕೆ ಸನ್ನದ್ಧವಾಗಿ ನಿಲ್ಲುವುದು. ಜುಲ್ಫಿಕರ್ ಖಾನ್ ಆತನಿಗೆ ಸಹಾಯಕನಾಗಿರುವುದು.

2. ಖಾನ್ ಖಾನನ್ ಮುನ್ನೈಯಮ್ ಖಾನ್ ಮತ್ತು ಅವನ ಇಬ್ಬರು ಮಕ್ಕಳು, ಭಕ್ಷಿ ಮಹಬತ್ ಖಾನ್ ಮತ್ತು ಖಾನ್ ಜಮಾನ್ ಬೆಟ್ಟಗಳ ಮಧ್ಯದಿಂದ ಮುನ್ನಡೆಯುವುದು.

3. ಚತ್ರಸಾಲ್ ಬುಂಡೇಲ[47] ಮತ್ತು ಇಸ್ಲಾಂ ಖಾನ್ ಮೀರ್ ಆತಿಶ್ ಅವರು ಖಾನ್ ಖಾನನ್‌ಗೆ ಮುನ್ನಡೆಯ ತಂಡವಾಗುವುದು.

4. ಹಮೀದ್-ಉದ್-ದೀನ್‌ಖಾನ್, ಅಜಿಮುಶಾನ್ ಶಾ ಮತ್ತವರ ಸಂಗಾತಿಗಳು ಹಾಗೂ ಜಹಾನ್ ಶಾನ ಸೈನಿಕರು ಯುದ್ಧದಲ್ಲಿ ತೊಡಗುವ ಮೂರು ತಂಡಗಳಿಗೆ ನೆರವಾಗುವುದು.[48]

ಇತಿಹಾಸಕಾರರ ಪ್ರಕಾರ, ಲೋಹಗಡ ಕೋಟೆಗೆ ಮುತ್ತಿಗೆ ಹಾಕಿದಾಗ, ಕೋಟೆಯಲ್ಲಿ ಹೆಚ್ಚು ಸಿಕ್ಖರು ಇರಲಿಲ್ಲ. ಹಾಗೆಯೇ ಹೆಚ್ಚು ದಿನ ಉಳಿಯಲು ಸಾಕಷ್ಟು ಆಹಾರ ಮತ್ತು ಶಸ್ತ್ರಾಸ್ತ್ರ ಇರಲಿಲ್ಲ. ಅವರ ಬಳಿ ಮೂರು ಫಿರಂಗಿಗಳಿದ್ದವು. ಜೊತೆಗೆ ಹುಣಿಸೆ ಮರದ ದಾರುವಿನಿಂದ ಮಾಡಿದ ಸುಧಾರಿತ ಫಿರಂಗಿಯೊಂದು ಇತ್ತು. ಈ ಫಿರಂಗಿಗಳಿಗೆ ತುಂಬಲು ಸಾಕಷ್ಟು ಮದ್ದುಗುಂಡು, ಪೆಟ್ಲುಪ್ಪು ಇರಲಿಲ್ಲ.

ಮಹಮ್ಮದ್ ಖಾಸಿಂ ಔರಂಬಾದಿಯ ನೀಡಿರುವ ವಿವರಗಳ ಪ್ರಕಾರ– "ಮುಘಲ್ ಸಾಮ್ರಾಜ್ಯದ ಕಿರೀಟದ ರತ್ನವಾದ, ರಾಜಕುಮಾರ ರಫಿ–ಉಶ್–ಶಾನ್ (ರಫಿಯುಶಾನ್) ಮತ್ತು ವಜೀರ್–ಉಲ್–ಮುಮಲಿಕ್ ಖಾನ್ ಖಾನನ್ (ಮುನ್ನೈಮ್ ಖಾನ್) ಅವರಿಗೆ ಕೋಟೆಗೆ ಮುತ್ತಿಗೆ ಹಾಕಲು ಆಜ್ಞಾಪಿಸಲಾಯಿತು. ಆಜ್ಞೆಯನ್ನು ಅನುಸರಿಸಿ ಕೋಟೆಯನ್ನು ಸುತ್ತುವರೆಯಲು ಸೈನ್ಯವನ್ನು ಸಜ್ಜುಗೊಳಿಸಿದರು. ಆ ಮೋಸಗಾರ (ಬಂದಾ ಸಿಂಗ್) ಕೋಟೆಯ ಗೋಪುರ, ಹೊರಗೋಡೆ, ದಿಬ್ಬ ಮತ್ತು ಬಾಗಿಲುಗಳನ್ನು ಭದ್ರಪಡಿಸುವ ಕೆಲಸದಲ್ಲಿ ನಿರತನಾದ. ಕುಲೀನ ವಂಶದಲ್ಲಿ ಹುಟ್ಟಿದ ರಾಜಕುಮಾರ ಮತ್ತು ಖಾನ್ ಖಾನನ್ ತಮ್ಮ ನೆಲೆಯನ್ನು ಬಲಪಡಿಸಿ ಯುದ್ಧಕ್ಕೆ ಸಿದ್ಧರಾದರು. ಅವರು ಫಿರಂಗಿಗಳು, ಬಂದೂಕು ಮತ್ತು ರಾಕೆಟ್‌ನಿಂದ ಗುಂಡು ಹಾರಿಸತೊಡಗಿದರು. ದೇವರ ಕೃಪೆಯಿಂದ, ರಾಜಕುಮಾರ ಹಾರಿಸಿದ ಒಂದು ರಾಕೆಟ್ ಸ್ಫೋಟಕಗಳನ್ನು ಸಂಗ್ರಹಿಸಿದ್ದ ಕೋಟೆಯ ಮೇಲೆ ಬಿದ್ದು ಅದು ಸ್ಫೋಟಿಸಿತು. ಆ ಒಬ್ಬ ಮನುಷ್ಯನ ಪ್ರಮಾದದಿಂದ ಅಸಂಖ್ಯಾತ ಜನರು ನರಕಕ್ಕೆ ಹೋದರು. ಮರದ ದಾರುವಿನಿಂದ ನಿರ್ಮಿಸಲಾಗಿದ್ದ ಸಿಕ್ಖರ ಎಲ್ಲ ಪಾಳಯಗಳು ಸುಟ್ಟು ಹೋದವು. ಬೆಂಕಿಯನ್ನು ಆರಿಸಿದ ನಂತರ ಗೌರವಾನ್ವಿತ ರಾಜಕುಮಾರ್ ತನ್ನ ಸೇನೆಯ ಹಿಡಿತವನ್ನು ಬಲಪಡಿಸಿ ಬೆಟ್ಟದ ತಪ್ಪಲಿಗೆ ಮುನ್ನಡೆಸಿದ. ಈಗ ಕೋಟೆಯ ಕಡೆಯಿಂದ ಯಾವ ಧ್ವನಿಯೂ ಕೇಳಿಬರುತ್ತಿರಲಿಲ್ಲ. ಯುದ್ಧದ ಭಯಾನಕತೆಯು ಎರಡೂ ಸೈನ್ಯದ ಮೇಲೆ ಪರಿಣಾಮ ಬೀರಿತ್ತು. ರಾಜಕುಮಾರ ಮತ್ತು ಖಾನ್ ಖಾನನ್‌ನ ವಿವೇಕಯುಕ್ತ ಸಲಹೆಗಾಗಿ ಮುಘಲ್ ಸೈನ್ಯದ ಪರಾಕ್ರಮಿ ಸೈನಿಕರು ನಿಶ್ಚಲರಾಗಿ ನಿಂತರು. ಈ ಹಿಂದೆ ಲೋಹಗಡ ಕೋಟೆಯ ಬಂಧನವನ್ನು ಕಳಚಲು ಒಂದು ವರ್ಷ ಸಮಯ ಹಿಡಿಯಬಹುದೆಂದು ರಾಜಕುಮಾರನ ಅಂದಾಜಾಗಿತ್ತು. ಆದರೆ, ದೈವೀಕವಾದ ಧೈರ್ಯವು ತನ್ನ ಪಾತ್ರವನ್ನು ನಿರ್ವಹಿಸಿತ್ತು. ದೀರ್ಘಕಾಲ ಹಿಡಿಯಬಹುದಾಗಿದ್ದ ಸಮಸ್ಯೆ ಕ್ಷಣಾರ್ಧದಲ್ಲಿ ಪರಿಹಾರವಾಗಿತ್ತು. ಈಗ ಅವಸರಿಸುವುದು ಸರಿಯಲ್ಲವೆಂದು ಅವರು ಭಾವಿಸಿದರು. ಸೈನಿಕರೂ ದಣಿದಿದ್ದರು. ಕೆಲ ಕಾಯಲು ನಿರ್ಧರಿಸಿದ್ದರು. ದೈವೇಚ್ಛೆ ಇದ್ದಲ್ಲಿ, ಬೆಳಿಗ್ಗೆ ತಡವಿಲ್ಲದೆ ಕೋಟೆಯನ್ನು ಆಕ್ರಮಿಸಿಕೊಳ್ಳಬಹುದೆಂದು ನಂಬಿದ್ದರು. ಅದೇ ದಿನ ದಾಳಿಯನ್ನು ಮುಂದುವರೆಸಿದರೆ, ಬಂದಾ

ಸಿಂಗ್ ಬೇರೊಂದು ಮಾರ್ಗದಲ್ಲಿ ತಪ್ಪಿಸಿಕೊಳ್ಳಬಹುದು; ತಮ್ಮೆಲ್ಲ ಶ್ರಮ ವ್ಯರ್ಥವಾಗಬಹುದೆಂದು ಯೋಚಿಸಿದರು. ಈಗ ಮಾಡಬೇಕಾದ ಸೂಕ್ತ ಕೆಲಸವೆಂದರೆ ಬಂದಾ ಸಿಂಗ್ ತಪ್ಪಿಸಿಕೊಳ್ಳಬಹುದಾದ ಮಾರ್ಗಗಳಿಗೆ ತಡೆಯೊಡ್ಡಲು ವ್ಯವಸ್ಥೆ ಮಾಡಿಕೊಳ್ಳುವುದು. ಆ ತಂತ್ರಗಾರ (ಬಂದಾ ಸಿಂಗ್) ಅಲ್ಲಿಂದ ತಪ್ಪಿಸಿಕೊಳ್ಳಲು ಎರಡು ಮಾರ್ಗಗಳಿವೆ; ಒಂದು ಬರ್ಫಿ ರಾಜ (ನಹನ್)ನ ಸಾಮ್ರಾಜ್ಯದ ಮೂಲಕ; ಮತ್ತೊಂದು ಜಮ್ಮುವಿನ ಆಫ್ಟನ್ ಗಡಿಯ ಮೂಲಕ. ಆತ ಅಲ್ಲಿನ ಗಡಿಗಳಿಂದ ತಪ್ಪಿಸಿಕೊಳ್ಳಲು ಬಿಡಬಾರದೆಂದು ಆ ಎರಡೂ ಸಾಮ್ರಾಜ್ಯಗಳ ರಾಜರಿಗೆ ಪತ್ರ ಬರೆಯಬೇಕು. ಎಲ್ಲ ಕಡೆಯಿಂದಲೂ ಸೈನ್ಯವನ್ನು ಬಲಪಡಿಸಿ ಒಬ್ಬನೂ ಜೀವಸಹಿತ ಉಳಿಯದ ರೀತಿಯಲ್ಲಿ ದಾಳಿ ಮಾಡಬೇಕು. ಇದರಿಂದ ಸಾಮ್ರಾಜ್ಯದ ವಿರುದ್ಧ ದಂಗೆಯೇಳುವಂತಹ ನೀಚ ಕೆಲಸಕ್ಕೆ ಯಾರೂ ಧೈರ್ಯ ತಾಳಬಾರದು. ಹೀಗೆ ಯೋಚಿಸಿ ಸಾಕಷ್ಟು ಸೈನಿಕರನ್ನು ಪಾಳಯದಲ್ಲಿ ನಿಲ್ಲಿಸಿ ಉಳಿದವರು ಶಿಬಿರಕ್ಕೆ ಹಿಂದಿರುಗುವ ಸಲಹೆಯನ್ನು ನೀಡಿದರು.

ಆದರೆ ರಾಜಕುಮಾರ್ ಮತ್ತು *ಖಾನ್ ಖಾನನ್‌*ನ ಆಲೋಚನೆಯಂತೆ ಕೋಟೆಯನ್ನು ವಶಪಡಿಸಿಕೊಳ್ಳಲಿಲ್ಲ. ಆ ಧರ್ಮವಿರೋಧಿಯ ಪ್ರಾಣ ಇನ್ನಷ್ಟು ದಿನ ಉಳಿಯಲು ದೇವರ ಸಂಕಲ್ಪವಾಗಿದ್ದರೆ ಈ ಆಲೋಚನೆ ನಿಜವಾಗುವುದಾದರೂ ಹೇಗೆ? ಗೌರವಾನ್ವಿತ ರಾಜಕುಮಾರ ಶಿಬಿರಕ್ಕೆ ಹಿಂದಿರುಗಿದ. ಅನುಭವಿ *ಖಾನ್ ಖಾನನ್‌*ನ ಹಂಚಿಕೆ ಫಲಿಸಲಿಲ್ಲ.

ಆ ಸಂಚುಗಾರ ಬಂದಾ ಸಿಂಗ್ ಇನ್ನೂರು ಜನರನ್ನು ಕೋಟೆಯಲ್ಲಿ ಉಳಿಸಿ ಬರ್ಫಿರಾಜ (ನಹನ್)ನ ರಾಜ್ಯದ ಮೂಲಕ ತಪ್ಪಿಸಿಕೊಂಡ. ಕೋಟೆಯ ರಕ್ಷಣೆಗಾಗಿ ಬಿಟ್ಟು ಹೋದ ಆ ನತದೃಷ್ಟ ಜನರು ಸಂಕಷ್ಟದಲ್ಲಿ ಸಿಲುಕಿದರು. ಮಾರನೆಯ ದಿನ ರಾಜಕುಮಾರ ದಾಳಿ ಮಾಡಲು ಆಜ್ಞೆ ನೀಡಿದ. ಭೀತಿಯೇ ಇಲ್ಲದ ಪರಾಕ್ರಮಿ ಸೈನಿಕರು, ಏಣಿಗಳನ್ನು ಬಳಸಿ ಕೋಟೆ ಗೋಡೆಯನ್ನೇರಿದರು. ಕೋಟೆಯಲ್ಲಿ ಬಲವಾದ ಪ್ರತಿರೋಧ ಎದುರಿಸುವ ನಿರೀಕ್ಷೆ ಹುಸಿಯಾಯಿತು. ಅವರ ಎದುರು ಕತ್ತಿ ಬೀಸಿ ಬಂದಾ ಸಿಖ್ ಸೈನಿಕರು ಹತರಾದರು. ಓಡಿಹೋಗುತ್ತಿದ್ದವರನ್ನು, ಕಲ್ಲು ಬೀರಿ ಹೊಡೆದು ಸಾಯಿಸಿದರು. ಹಾಗಾಗಿ ಕೋಟೆ ಆ ಮಹಿಮಾಪೂರ್ಣ ಸೈನ್ಯದ ವಶವಾಯಿತು. ಪ್ರತಿಯೊಬ್ಬರಿಗೂ ಸಾಕಷ್ಟು ಸರಕು ದೊರೆಯಿತು. ಒಂದು ವಾರ ಕಾಲ, ಸೈನಿಕರು ತಂಡ ತಂಡವಾಗಿ ಬೆಟ್ಟಗಳಿಗೆ ನುಗ್ಗಿ ಎದುರು ಬಂದಾವರನ್ನು ಕೊಂದು ಹಾಕಿದರು. ಅವರು ಲೂಟಿ ಮಾಡಿ ಸಾಕಷ್ಟು ವೆಲ್ವೆಟ್, ರೇಷ್ಮೆ ಬಟ್ಟೆ, ಜವಳಿ ಮತ್ತಿತರ ವಸ್ತುಗಳು, ಹೆಂಗಸರು ಮತ್ತು ಗುಲಾಮರನ್ನು ಹೊತ್ತು ತಂದರು. ಆಲಸಿಗಳು, ಕುಡುಕರು, ದುರ್ಬಲರು ಮತ್ತು ಕೈಲಾಗದವರು ಮಾತ್ರ ಬೆಟ್ಟಗಳಿಗೆ ಹೋಗಲಿಲ್ಲ. ಹಾಗಾಗಿ ಕೋಟೆಯಿಂದ ಅವರಿಗೇನೂ ಸಿಗಲಿಲ್ಲ."[(49)]

ಯುದ್ಧವನ್ನು ಕಣ್ಣಾರೆ ಕಂಡೆನೆಂದು ಹೇಳುವ ಕಮ್ವಾರ್‌ಖಾನ್ ಹೇಳುವುದು ಹೀಗೆ. "ರಾಜಕುಮಾರ ರಫಿ–ಉಶ್–ಶಾನ್‌ನ ಸೈನ್ಯದ ತುಕಡಿಯಲ್ಲಿದ್ದ ನಾನೊಬ್ಬ ಬಡಪಾಯಿ. ನಾನು ಇದೆಲ್ಲವನ್ನೂ ಕಣ್ಣಾರೆ ಕಂಡೆ; ಆ ದುಷ್ಟ ಮನುಷ್ಯರ ಗುಂಪಿನಿಂದ ಪ್ರತಿ ವ್ಯಕ್ತಿಯೂ ನೆಗೆದು ರಾಜ ಸೇನೆಯ ಜೊತೆ ಕಾದಾಡುತ್ತಿದ್ದ. ಪರಾಕ್ರಮ ಪ್ರದರ್ಶನದ ನಂತರ ಪವಿತ್ರ ಸೈನಿಕರ ಖಡ್ಗಕ್ಕೆ ಆಹುತಿಯಾಗುತ್ತಿದ್ದ. ಈ ಸಮಯದಲ್ಲಿ ಅರಸನ ಸೇನೆ ಮತ್ತು ಪ್ರಸಿದ್ಧ ಉಮ್ರಾ ಸೇನೆ ಅವರನ್ನು ಎಲ್ಲ ಕಡೆಯಿಂದ ಸುತ್ತುವರೆಯಿತು. ಆ ಅನೀತಿ ಪಂಥದ (ಸಿಖ್) ಎರಡೂವರೆ ಸಾವಿರ ವ್ಯಕ್ತಿಗಳು ಮತ್ತವರ ನಾಯಕರು ಪರಾಕ್ರಮ ಮುಸ್ಲಿಮರ ಖಡ್ಗಗಳಿಗೆ ಆಹಾರವಾದರು. ಗೆದ್ದ ಪಡೆಯ ಕಡೆಯಿಂದ ಫಿರೋಜ್‌ಶಾ ಮೆವಾಟಿಯ ಸೋದರನ ಮಗ ಸತ್ತ; ಅವನ ಮಗ ಗಾಯಗೊಂಡ."[(51)]

ಖಾಫಿ ಖಾನ್ ಹೇಳುತ್ತಾನೆ– "ಈ ಯುದ್ಧವನ್ನು ವರ್ಣಿಸುವುದು ಕಷ್ಟ. ಫಕೀರರಂತೆ ಉಡುಪು ತೊಟ್ಟ ಸಿಕ್ಖರು ರಾಜನ ಸೈನ್ಯದಲ್ಲಿ ಭೀತಿ ಹುಟ್ಟಿಸಿದ್ದರು. ಹಾಗಾಗಿ ಅರಸನ ಸೇನೆಯ ಹಲವರು ಸತ್ತರು. ನಾವೆಲ್ಲ ಸಾಯಬಹುದೆನಿಸಿತು. ಆಗ ಈ ಸಿಕ್ಖರ ಆಕ್ರಮಣದಲ್ಲಿ ಫಿರೋಜ್ ಖಾನ್ ಮೆವಾಟಿಯ ಮಗ ಮತ್ತು ಸೋದರನ ಮಗ ಸತ್ತರು."(52)

**ಲೋಹಗಡ ಕೋಟೆ ಪತನ(?) ತಪ್ಪಿಸಿಕೊಂಡ ಬಂದಾ ಸಿಂಗ್**

ಕಮ್ವಾರ್ ಬರೆಯುತ್ತಾನೆ– "ಸೂರ್ಯ ಆಗಷ್ಟೇ ಉದಯಿಸಿದ್ದ. ಐದು ಸಾವಿರ ಸೈನಿಕರ ಪಡೆಯೊಡನೆ ಖಾನ್ ಖಾನನು ಬೆಟ್ಟದ ಮೇಲಿದ್ದ ಸಿಖ್ ಪಾಳೆಯದ ಮೇಲೆ ದಾಳಿ ನಡೆಸಿದ. ಬಂದೂಕು ಮತ್ತು ಬಾಣಗಳ ತುರುಸಿನ ಕಾಳಗ ನಡೆಯಿತು. ಖಾನ್ ಖಾನನ್ ಕೋಟೆಯ ಕಂದಕದ ಹತ್ತಿರಕ್ಕೆ ಬಂದಾ. ಎರಡೂ ಪಕ್ಷದವರು ಜೀವದ ಹಂಗು ತೊರೆದು ಹೋರಾಡಿದರು. ಜೀವ ತೆಗೆಯುವ ವ್ಯಾಪಾರ ಶಿಖರ ಮುಟ್ಟಿತ್ತು."(51)

ಇರ್ವಿನ್ ಬರೆಯುತ್ತಾರೆ– "ಬಂದಾ ಸಿಂಗ್‌ನ (ಶಕ್ತಿಯ) ಬಗ್ಗೆ ಹಬ್ಬಿದ್ದ ಸುದ್ದಿಯಿಂದಾಗಿ ಮುಘಲರು ಮತ್ತು ಪಠಾಣರು ಭಯಗ್ರಸ್ತರಾಗಿದ್ದರು. ಬಂದಾ ಸಿಂಗ್‌ಗೆ ಮಾಂತ್ರಿಕ ಶಕ್ತಿಯಿದೆಯೆಂದು ಕೇಳಿದ್ದರು. ತನ್ನ ಶಕ್ತಿಯಿಂದ ಶತ್ರುಗಳ ಈಟಿ ಭರ್ಜಿಗಳು ನಿಷ್ಕ್ರಿಯವಾಗುವಂತೆ ಮಾಡುತ್ತಿದ್ದ. ಯುದ್ಧದಲ್ಲಿ ಸತ್ತವರೆಲ್ಲರೂ ಮರುಹುಟ್ಟು ಪಡೆದು ಬದುಕಿನಲ್ಲಿ ಉನ್ನತ ಸ್ಥಾನಕ್ಕೇರುವ 'ವರ' ಸಿಗುತ್ತದೆಂದು ಸೈನಿಕರನ್ನು ಬಂದಾ ಸಿಂಗ್ ಹುರುದುಂಬಿಸುತ್ತಾನೆ. ಇಂತಹ ಗಾಳಿ ಸುದ್ದಿಯಿಂದ ಮುಘಲ್ ಸೇನೆಯ ದಂಡನಾಯಕರು ಮತ್ತು ಚಕ್ರವರ್ತಿ ಗೊಂದಲಗೊಂಡು ನಿರುತ್ಸಾಹಿತರಾಗಿದ್ದರು."(54)

ಖಾನ್ ಖಾನನ್ ಕೋಟೆಯ ಕಂದಕದ ಹತ್ತಿರಕ್ಕೆ ಬಂದಾಗ, ಸಣ್ಣ ಪುಟ್ಟ ಸಂಘರ್ಷಗಳಾದವು. ಒಬ್ಬಬ್ಬರು ಸಿಖ್ ಸೈನಿಕರು ಹೊರಬಂದಾ ಅರಸನ ಸೈನಿಕರ ವಿರುದ್ಧ ಹೋರಾಡಿ, ಪ್ರತಿರೋಧ ಒಡ್ಡಿ ಹತರಾಗುತ್ತಿದ್ದರು. ಅರಸನ ಸೇನೆಯ ಸಾಕಷ್ಟು ಸೈನಿಕರು ಸಹ ಮಡಿದಿದ್ದರು.(55)

ಖಾನ್ ಖಾನನ್‌ನ ದೃಢ ಸಂಕಲ್ಪವನ್ನು ಕಂಡು, ರಾಜಕುಮಾರ ರಫಿ–ಉಶ್–ಶಾನ್ ಮತ್ತು ರುಸ್ತುಂ ದಿಲ್ ಖಾನ್ ಸಹ ಲೋಹಗಡ ಕೋಟೆಯ ಮೇಲೆ ದಾಳಿ ನಡೆಸಿದರು. ಖಾನ್ ಖಾನನ್‌ಗೆ ಜಯದ ಸಕಲ ಕೀರ್ತಿಯೂ ಹೋಗಬಾರದೆಂಬ ಉದ್ದೇಶದಿಂದ ಅವರು ಕ್ರಿಯಾಶೀಲರಾದರು. ಖಾನ್ ಖಾನನ್ ಮತ್ತು ಅವನನ್ನು ಅನುಸರಿಸಿದ ಇತರರ ಕಾರ್ಯವು ಚಕ್ರವರ್ತಿ ನೀಡಿದ ಆಜ್ಞೆಯ ಉಲ್ಲಂಘನೆಯಾಗಿತ್ತು. ಮುತ್ತಿಗೆಯನ್ನು ದೀರ್ಘಕಾಲ ಮುಂದುವರೆಸಲು ಚಕ್ರವರ್ತಿ ಆಜ್ಞಾಪಿಸಿದ್ದ. ಸಿಕ್ಖರ ಶಸ್ತ್ರಾಸ್ತ್ರ ಖಾಲಿಯಾದ ನಂತರ ಅವರನ್ನು ಹಿಡಿಯಬಹುದೆಂಬ ಆಲೋಚನೆಯಿಮದ ಚಕ್ರವರ್ತಿ ಆ ರೀತಿ ಆಜ್ಞಾಪಿಸಿದ್ದ. ಚಕ್ರವರ್ತಿಯ ಆದೇಶವನ್ನು ಉಲ್ಲಂಘಿಸಿ ಅವರು ಮುನ್ನಡೆದಿದ್ದರಿಂದ, ಅವರಿಗಿದ್ದ ಆಯ್ಕೆ ಒಂದೇ ಒಂದು. ಅದು, ಕೋಟೆಯನ್ನು ವಶಪಡಿಸಿಕೊಳ್ಳುವುದು ಇಲ್ಲವೇ ಸಾಯುವುದು. ಸೋತರೆ ತನ್ನ ಆಜ್ಞೆಯನ್ನು ಮೀರಿದವರಿಗೆ ಚಕ್ರವರ್ತಿ ಶಿಕ್ಷೆ ವಿಧಿಸುತ್ತಿದ್ದದ್ದು ನಿಶ್ಚಯ.

ಇನ್ನೊಂದೆಡೆ ಸಿಕ್ಖರು ಬಹಳ ದೀರ್ಘ ಕಾಲದ ನಂತರದಲ್ಲಿ ಫಿರಂಗಿಗಳನ್ನು ಹಾರಿಸುತ್ತಿದ್ದರು. ಅವರಲ್ಲಿ ಹೆಚ್ಚು ಪೆಟ್ಲುಪ್ಪು, ಮದ್ದು ಗುಂಡುಗಳು ಇಲ್ಲದಿರುವುದು ಮುಘಲ್ ಸೇನೆಯ ನಾಯಕರಿಗೆ ಮನನವಾಯಿತು. ಸಂಜೆಯ ವೇಳೆಗೆ ಸಿಖ್ ಫಿರಂಗಿಗಳ ಸದ್ದು ಅಡಗಿತು. ತಮ್ಮ ಕಂದಕದಿಂದ

ಹೊರಬಂದಾು ಮುಘಲ್ ಸೈನಿಕರ ಮೇಲೆ ಬಿದ್ದರು. ಈ ಹೋರಾಟದಲ್ಲಿ ಅನೇಕ ಸಿಕ್ಖರು ಮಡಿದರು.

ಆ ವೇಳೆಯಲ್ಲಿ ಬಂದಾ ಸಿಂಗ್, ಲೋಹಗಡ ಕೋಟೆಗೆ ಹೊಂದಿಕೊಂಡಂತಿದ್ದ ಇನ್ನೊಂದು ಬೆಟ್ಟದ ಸಿತಾರ್‌ಗಡ ಕೋಟೆಯಲ್ಲಿ ಕುಳಿತಿದ್ದ. ಈ ವೇಳೆಗೆ ಅರಸನ ಸೇನೆ ಲೋಹಗಡ ಕೋಟೆಯನ್ನು ಸುತ್ತುವರೆದಿತ್ತು. ಯಾವ ಕ್ಷಣದಲ್ಲಾದರೂ ಒಳಪ್ರವೇಶ ಮಾಡಬಹುದಿತ್ತು. ಹೋರಾಡಿ ಮಡಿಯುವುದು ಇಲ್ಲವೇ ತಪ್ಪಿಸಿಕೊಂಡು ಪಲಾಯನ ಮಾಡುವುದು–ಸಿಕ್ಖರ ಮುಂದೆ ಇದ್ದದ್ದು ಎರಡೇ ಆಯ್ಕೆಗಳು. ಆದುದರಿಂದ ರಾತ್ರಿಯಲ್ಲಿ ಇದ್ದ ಬದ್ದ ಪೆಟ್ಲುಪ್ಪನ್ನು ಹುಣಿಸೆ ಮರದ ಕಾಂಡದಲ್ಲಿ ಮಾಡಿದ್ದ ಫಿರಂಗಿ ನಳಿಕೆಗೆ ತುಂಬಿದರು. ರಾಜನ ಸೈನ್ಯದ ಕಡೆ ಹಾರಿಸಿದರು. ಇದು ರಾಜನ ಸೈನ್ಯದಲ್ಲಿ ಭೀತಿಯುಂಟು ಮಾಡಿತು. ಅವರು ಕಂದಕದಲ್ಲಿ ಅಡಗಿ ಕೂತರು. ಈ ಅವಕಾಶವನ್ನು ಬಳಸಿಕೊಂಡ ಸಿಕ್ಖರು ಶಿವಾಲಿಕ್ ಬೆಟ್ಟದತ್ತ ಪಲಾಯನ ಮಾಡಿದರು. ಹೀಗೆ ತಪ್ಪಿಸಿಕೊಂಡ ತಂಡದಲ್ಲಿ ಬಂದಾ ಸಿಂಗ್ ಕೂಡ ಇದ್ದ.

ಮಾರನೆಯ ಬೆಳಿಗ್ಗೆ, ಉದಿತ್ ಸಿಂಗ್ ಬುಂಡೇಲ ಮತ್ತು ರುಸ್ತುಂ ದಿಲ್ ಖಾನ್ ಕೋಟೆಯ ವಿರುದ್ಧ ತೀವ್ರ ದಾಳಿ ಆರಂಭಿಸಿದರು. ಹೆಚ್ಚು ಹೋರಾಟವಿಲ್ಲದೆ ಕೋಟೆಯನ್ನು ಪ್ರವೇಶಿಸಿದರು. ಬಂದಾ ಸಿಂಗ್‌ನ ಉಡುಪನ್ನು ಧರಿಸಿದ್ದ ಗುಲಾಬ್‌ಸಿಂಗ್ ಭಕ್ಷಿಯೂ ಸೇರಿದಂತೆ ಕೋಟೆಯಲ್ಲಿ ಐವತ್ತಕ್ಕಿಂತಲೂ ಹೆಚ್ಚಿನ ಮಂದಿ ಇರಲಿಲ್ಲ. ಬಂದಾ ಸಿಂಗ್‌ನ ಪಲಾಯನ ಮತ್ತು ಅವನಂತೆಯೇ ಕಾಣುತ್ತಿದ್ದ ಗುಲಾಬ್ ಸಿಂಗ್‌ನ ದಸ್ತಗಿರಿಯನ್ನು ಕುರಿತು ಖಾಫಿ ಖಾನ್ ಹೇಳಿದ್ದು ಹೀಗೆ– **"**ಡೇಗೆ ತಪ್ಪಿಸಿಕೊಂಡು ಹೋಯಿತು. ಗೂಬೆ ಸಿಕ್ಕಿ ಹಾಕಿಕೊಂಡಿತು.**"**[56]

ಬಂದಾ ಸಿಂಗ್ ತಪ್ಪಿಸಿಕೊಂಡ ಸುದ್ದಿಯ್ನನು ಬಹದ್ದೂರ್ ಶಾ ಕೇಳಿದಾಗ, ಆತ ಕೋಪಾವಿಷ್ಟನಾಗಿ **"**ಇಷ್ಟೊಂದು ನಾಯಿಗಳ ಮುತ್ತಿಗೆಯಲ್ಲಿ ಗುಳ್ಳೆ ನರಿ ತಪ್ಪಿಸಿಕೋಂಡದ್ದು ಹೇಗೆ?**"** ಎಂದು ಗುಡುಗಿದ. ತನ್ನ ಆಜ್ಞೆಯನ್ನು ಉಲ್ಲಂಘಿಸಿ, ಸ್ವಂತ ನಿರ್ಧಾರ ತಳೆದು ಕೋಟೆಯ ಮೇಲೆ ದಾಳಿ ಮಾಡಿದ ಖಾನ್ ಖಾನನ್ ಬಗ್ಗೆ ಚಕ್ರವರ್ತಿ ಬಹದ್ದೂರ್ ಶಾ ವ್ಯಗ್ರನಾದ.**"**[57]

ಆದರೆ ಮಹಮ್ಮದ್ ಕಾಸಿಂ ಔರಂಗಾಬಾದಿ ಮತ್ತೊಂದು ವಿವರ ನೀಡುತ್ತಾರೆ. ಆತ ಹೇಳುತ್ತಾನೆ– ಲೋಹಗಡ ಕೋಟೆಯನ್ನು 'ವಶಪಡಿಸಿಕೊಂಡ' ನಂತರ ರಾಜಕುಮಾರ ಮತ್ತು ಖಾನ್ ಖಾನನ್ ತಮ್ಮ ಜಯವನ್ನು ಚಕ್ರವರ್ತಿಗೆ ತಿಳಿಸಲು ಪತ್ರದೊಡನ ಚಾರನೊಬ್ಬನನ್ನು ಕಳುಹಿಸುತ್ತಾರೆ. ಈ ಪತ್ರವನ್ನು ಓದಿ ಸಂತುಷ್ಟನಾದ ಸಾಮ್ರಾಟನು, ಪವಿತ್ರ ಮೆಕ್ಕಾದಲ್ಲಿರುವ ಕಾಬಾದ ದಿಕ್ಕಿಗೆ ಅಡ್ಡ ಬಿದ್ದು ನಮಸ್ಕರಿಸುತ್ತಾನೆ. (ಸಜ್‌ದಾ ಮಾಡುವುದು) ಆದರೆ ಬಂದಾ ಸಿಂಗ್ ತಪ್ಪಿಸಿಕೊಂಡು ಹೋದದನ್ನು ತಿಳಿದು ಆತ ತಪ್ಪಿಸಿಕೊಂಡು ಹೋಗಿರುವ ದಿಕ್ಕನ್ನು ಕುರಿತು ಊಹಿಸಲಾರಂಭಿಸುತ್ತಾನೆ. ಆ ವೇಳೆಗೆ ಅಲ್ಲಿಗೆ ಬಂದಾ ರಾಜಕುಮಾರ ಮತ್ತು ಖಾನ್ ಖಾನನ್ ಅವರು, ಬಂದಾ ಸಿಂಗ್ ನಹನ್ ರಾಜ್ಯದ ಮೂಲಕ ತಪ್ಪಿಸಿಕೊಂಡ ಬಗೆಯನ್ನು ವಿವರಿಸುತ್ತಾರೆ. ಆಗ ನಹನ್ ರಾಜನನ್ನು ತನ್ನ ಸಮ್ಮುಖದಲ್ಲಿ ಹಾಜರುಪಡಿಸಲು ಚಕ್ರವರ್ತಿ ಆಜ್ಞೆ ಮಾಡುತ್ತಾನೆ. ಔರಂಗಬಾದಿಯ ಪ್ರಕಾರ ಚಕ್ರವರ್ತಿಯು ಖಾನ್ ಖಾನನ್ ಬಗ್ಗೆ ವ್ಯಗ್ರಗೊಳಲಿಲ್ಲ.[58] ಈ ರೀತಿ ದಾಖಲಿಸಲು ಬಹುಶಃ ಮಹಮದ್ ಔರಂಗಾಬಾದಿಗೆ, ಖಾನ್ ಖಾನನ್ ಬಗ್ಗೆ ಮೃದುಧೋರಣೆ ಇತ್ತೆಂದು ಕಾಣುತ್ತದೆ.

ಇದಕ್ಕೂ ಮೊದಲು ಲೋಹಗಡ ಕೋಟೆಗೆ ಸೈನ್ಯ ನುಗ್ಗಿರುವ ಸುದ್ದಿಯನ್ನು ಕೇಳಿದ ಕೂಡಲೇ ಚಕ್ರವರ್ತಿಯು ಸಂತುಷ್ಟನಾಗಿ ಭೇರಿಗಳನ್ನು ಬಾರಿಸಲು ಹೇಳುತ್ತಾನೆ. ಸೈನಿಕರೆಲ್ಲರು ವಿಜಯ ನರ್ತನ ಮಾಡತೊಡಗುತ್ತಾರೆ. ಆದರೆ ಬಂದಾ ಸಿಂಗ್ ತಪ್ಪಿಸಿಕೊಂಡ ವಿಷಯ ತಿಳಿದಾಗ ಎಲ್ಲ ಸಂಭ್ರಮಾಚರಣೆಯನ್ನು ನಿಲ್ಲಿಸುತ್ತಾನೆ. ದುಃಖಿತನಾಗುತ್ತಾನೆ. ಕೋಟೆಯನ್ನು ವಶಪಡಿಸಿಕೊಂಡಿದದ್ದು, 1500 ಸಿಖ್ ಸೈನಿಕರು ಹತರಾದದ್ದು ಆತನಿಗೆ ಸಂತೋಷ ತರುವ ವಿಚಾರವಾಗಿರಲಿಲ್ಲ. ಬಂದಾ ಸಿಂಗ್ ತಪ್ಪಿಸಿಕೊಂಡದ್ದು ಆತನಿಗೆ ಘಾಸಿ ಮಾಡಿತ್ತು.[59]

ರಾಜನ ಸೈನಿಕರು ಕೋಟೆಯನ್ನು ಆಕ್ರಮಿಸಿಕೊಂಡಾಗ, ಅಪಾರ ಸಂಖ್ಯೆಯಲ್ಲಿ ಸೈನಿಕರು ಅತ್ತ ನುಗ್ಗಿದರು. ಅಲ್ಲಿ ಹಾಜರಿದ್ದ ಕಮ್ವಾರ್ ವರದಿ ಮಾಡುತ್ತಾನೆ–

"ನಾವು ಕೋಟೆಯನ್ನು ಪ್ರವೇಶಿಸಿದೆವು. ಸೈನಿಕರು ಮಾಡುತ್ತಿದ್ದ ಲೂಟಿಯನ್ನು ನೋಡಿದೆವು. ಆಫ್ಘನ್ ಮತ್ತು ಬಲೂಚ್‌ನ ನೀಚ ಸೈನಿಕರು ಮಕ್ಕಳು, ಹೆಂಗಸರು ಮತ್ತು ಸಿಕ್ಕ ವಸ್ತುಗಳನ್ನು ಬಾಚಿಕೊಳ್ಳಲು ಪರಸ್ಪರ ಕಿತ್ತಾಡುತ್ತಿದ್ದರು. ಆ ಕೈ ಕೈ ಮಿಲಾಯಿಸುವ ಕ್ರಿಯೆಯ ನಡುವೆ ಅಲ್ಲಿ ಬಿದ್ದಿದ್ದ ಪೆಟ್ಲುಪ್ಪಿಗೆ ಬೆಂಕಿ ಕಿಡಿಯೊಂದು ತಾಕಿತು. ಅದರ ಸ್ಫೋಟ ಹಲವರ ಸಾವಿನಲ್ಲಿ ಅಂತ್ಯವಾಯಿತು. ಹಾಗೆ ಸತ್ತವರಲ್ಲಿ ಸಚ್ಚ ನಂದ ಮತ್ತು ಸಿಕ್ಖರು ಸೆರೆಯಲ್ಲಿಟ್ಟಿದ್ದ ಹಲವಾರು ಮುಸ್ಲಿಂ ಗಂಡಸರು ಮತ್ತು ಹೆಂಗಸರಿದ್ದರು. ಸ್ಫೋಟಗೊಂಡಾಗ ಉರುಳಿದ ಕಲ್ಲು ಮಣ್ಣಿನ ರಾಶಿಯಲ್ಲಿ ಸಿಲುಕಿ ಅವರೆಲ್ಲರ ಶವಗಳು ಹೂತು ಹೋದವು."

**ಲೋಹಗಡ ಕೋಟೆಯನ್ನು ವಶಪಡಿಸಿಕೊಳ್ಳಬಹುದೇ?**

ಲೋಹಗಡ ಕೋಟೆಯನ್ನು ವಶಪಡಿಸಿಕೊಂಡ ಬಗ್ಗೆ ಈಗ ಹೇಳಿದ ವೃತ್ತಾಂತಗಳು ಮುಘಲರು ಅಥವಾ ಅಕ್ಬರಾತ್–ಐ–ದರ್ಬಾರ್–ಮೌಲದ ಬರವಣಿಗೆಯನ್ನು ಆಧರಿಸಿದಂತಹವು. ಅಕ್ಬರಾತ್–ಐ–ದರ್ಬಾರ್–ಮೌಲ ಎಂದರೆ, ಮುಘಲರ ಆಸ್ಥಾನದಲ್ಲಿದ್ದ ಜೈಪುರ ರಾಜರ ನಿಯೋಗಿಗಳು. ಮುಘಲರ ಆಸ್ಥಾನದಲ್ಲಿ ಅವರು ಕಂಡ ಅಂಶಗಳನ್ನು ಆಧರಿಸಿದ ಮಾಹಿತಿಗಳಿವು. ಇದನ್ನು ಚಕ್ರವರ್ತಿಯ ಮನಸ್ಸಿಗೆ ಮುದ ನೀಡಲು, ಮುಘಲ್ ಸೇನೆಯನ್ನು ವೈಭವೀಕರಿಸಲು ಮತ್ತು ಸಿಖ್ ಸೇನೆ ದುರ್ಬಲ ಹಾಗೂ ಶಕ್ತಿ ಹೀನ ಎಂದು ಬಿಂಬಿಸಲು ಬರೆದ ಬರಹದಂತೆ ಕಾಣುತ್ತದೆ.

ಲೋಹಗಡ ಕೋಟೆಯು 50–60 ಕಿ.ಮೀ. ಉದ್ದ ಮತ್ತು 10–15 ಕಿ.ಮೀ. ಅಗಲವಿದ್ದದ್ದನ್ನು ನೋಡಿದ್ದೇವೆ. ಈ ಕೋಟೆಯ ಸುತ್ತಳತೆ 50 ಕಿ.ಮೀ. ಅದರಲ್ಲಿ 52 ಬತೇರಿಗಳು ಹಲವಾರು ಬೆಟ್ಟಗಳಿದ್ದವು. ಇಂಥ ಕೋಟೆಯನ್ನು ಒಂದೂವರೆ ದಿನದಲ್ಲಿ ಆಕ್ರಮಿಸಲು ಸಾಧ್ಯವೇ? ಅಸಾಧ್ಯ. ಒಂದು ದಿನದಲ್ಲಿ ಒಂದು ಕೋಟೆಯನ್ನು ವಶಪಡಿಸಿಕೊಳ್ಳಲಾಗದು. ಅಲ್ಲಿ ಹತ್ತಾರು ಬೆಟ್ಟಗಳಿದ್ದು, ಕೆಲವುಗಳಲ್ಲಿ ಗೋಪುರಗಳು, ಬತೇರಿಗಳು, ಕಂದಕಗಳು ಮತ್ತು ಗೋಡೆಗಳಿದ್ದು ಶತ್ರು ಸೈನ್ಯದ ಪಾಲಿಗೆ ತುಂಬ ದುರ್ಗಮವಾಗಿದ್ದವು.

ಮಹಮ್ಮದ್ ಕಾಸಿಂ ಔರಂಗಬಾದಿಯ ಪ್ರಕಾರ "ಕೋಟೆಯನ್ನು ವಶಪಡಿಸಿಕೊಳ್ಳುವಿಕೆ ಒಂದು ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ ಸಾಧ್ಯವಿಲ್ಲವೆಂದು ಯುವರಾಜ ಮತ್ತು ಖಾನ್ ಖಾನನ್ ಅಭಿಪ್ರಾಯಪಟ್ಟಿದ್ದರು."[60]

**ಲೋಹಗಡ ಕೋಟೆಯ ಆಕ್ರಮಣದ ಬಗೆಗಿನ ಪ್ರಚಾರ**

ಮುಘಲ್ ಸೈನ್ಯ ಲೋಹಗಡ ಕೋಟೆಯನ್ನು ಒಂದೂವರೆ ದಿನದಲ್ಲಿ ವಶಪಡಿಸಿಕೊಂಡಿತೆಂದು ಹೇಳುವುದು ಒಂದು ಹಾಸ್ಯ ಪ್ರಹಸನವಷ್ಟೆ. ನಿಜವೇನೆಂದರೆ, ಮುಘಲರು ಲೋಹಗಡದ ಒಂದು ಅಥವಾ ಎರಡು ಬೆಟ್ಟಗಳನ್ನು ವಶಪಡಿಸಿಕೊಂಡಿರಬಹುದು. ಚಕ್ರವರ್ತಿಯನ್ನು ಸಂತೋಷಪಡಿಸಲು ಲೋಹಗಡ ಕೋಟೆಯನ್ನು ವಶಪಡಿಸಿಕೊಂಡೆವೆಂಬ ಸುದ್ದಿ ಹಬ್ಬಿಸಿರಬಹುದು. ಈ ಯುದ್ಧವನ್ನು ಕಣ್ಣಾರೆ ಕಂಡೆವೆಂದು ವರ್ಣಿಸುವ ಖಾಫಿ ಖಾನ್, ಔರಂಗಾಬಾದಿ, ಕಮ್ವಾರ್‌ಖಾನ್–ಇವರೆಲ್ಲ ಮುಘಲ್ ಸೈನ್ಯದ ಸೈನಿಕರು 'ಅತುಲ ಪರಾಕ್ರಮಿಗಳು'; ಮುಘಲ್ ದಂಡನಾಯಕರು "ಶ್ರೇಷ್ಠ ಯೋಜಕರು" ಮತ್ತು ಸಿಕ್ಖರು "ಮುಘಲರ ಮುಂದೆ ಏನೂ ಅಲ್ಲ" ಎಂಬುದನ್ನು ಪ್ರಚಾರ ಮಾಡಲು ಬರೆದ ಬರಹ. ಹಾಗೆ ನೋಡಿದರೆ ಈ ಕೋಟೆ ಎಷ್ಟು ವಿಶಾಲ ಮತ್ತು ದುರ್ಗಮವಾಗಿದೆಯೆಂದರೆ, ಅದನ್ನು 6–7 ವರ್ಷಗಳಲ್ಲಿ ಸಹ ವಶಪಡಿಸಿಕೊಳ್ಳಲು ಸಾಧ್ಯವಾಗದು.

ಲೋಹಗಡ ಕೋಟೆಯನ್ನು ವಶಪಡಿಸಿಕೊಳ್ಳುವುದಿರಲಿ, ಸಧೌರ ಮತ್ತು ಲೋಹಗಡದ ನಡುವಿನ ಅಂತರವನ್ನು ಇಷ್ಟು ಕ್ಷಿಪ್ರ ಅವಧಿಯಲ್ಲಿ ಕ್ರಮಿಸುವುದು ಸಾಧ್ಯವಿಲ್ಲ. ಸಧೌರ ಮತ್ತು ಲೋಹಗಡದ ನಡುವೆ 52 ಕೋಟೆಗಳಿವೆ. ಬಲವಾದ ಪಾಳೆಯಗಳಿವೆ. ಪ್ರತಿ ಬತೇರಿಯಲ್ಲಿಯೂ ಮತ್ತು ಕಂದಕದಲ್ಲಿಯೂ ಫಿರಂಗಿಗಳು ಮತ್ತು ಮದ್ದು ಗುಂಡಿನ ಜೊತೆ ಸೈನಿಕರಿರುತ್ತಾರೆ. ಹಾಗಾಗಿ ಮುಘಲರು ಲೋಹಗಡ ಕೋಟೆಯ ತಪ್ಪಲನ್ನು ತಲುಪುವ ಮುನ್ನ 52 ಯುದ್ಧಗಳನ್ನು ಮಾಡಬೇಕಿತ್ತು.

**ಬಂದಾ ಸಿಂಗ್ ಲೋಹಗಡವನ್ನು ತೊರೆದದ್ದು ಏಕೆ?**

ಹಲವಾರು ತಿಂಗಳ ಕಾಲ ಮುಘಲರು ಮಾಡಿದ ಹೋರಾಟವನ್ನು ಕಂಡ ಬಂದಾ ಸಿಂಗ್‌ಗೆ ಒಂದು ವಿಷಯ ಮನನವಾಯಿತು. ಮುಘಲರ ಸೈನ್ಯ ಗೊಂದಲಕ್ಕೊಳಗಾಗಿದೆ; ಅವರಿಗೆ ಈಗ ಲೋಹಗಡ ಕೋಟೆಯನ್ನು ವಶಪಡಿಸಿಕೊಳ್ಳುವ ಗುರಿ ಇಲ್ಲ; ಇರುವ ಏಕೈಕ ಗುರಿ ಸಿಖ್ ನಾಯಕರನ್ನು ಬಂಧಿಸುವುದು. ಚದರಂಗದ ಆಟದಲ್ಲಿ, ಎದುರಾಳಿಯು ಒಂದು ಕಾಯಿಯ ಬಗ್ಗೆ ತಲ್ಲೀನನಾಗುವಂತೆ ಮಾಡಿ, ಇನ್ನೊಂದು ಪಾರ್ಶ್ವದಿಂದ ರಾಜನನ್ನು ಉರುಳಿಸಲು ತಂತ್ರ ಹೆಣೆಯುವ ಹಾಗೆ ಬಂದಾ ಸಿಂಗ್ ಮುಘಲರ ಜೊತೆ ಚದುರಂಗವಾಡಿದ. ಲೋಹಗಡ ಕೋಟೆಯ ಹತ್ತಿರ ಮುಘಲ ಸೇನೆ ಕೇಂದ್ರೀಕರಣಗೊಂಡಾಗ, ಲೋಹಗಡ ಕೋಟೆಯನ್ನು ವಶಪಡಿಸಿಕೊಂಡು ನಿಯಂತ್ರಿಸಲು ಮುಘಲ್ ಸೇನೆ ವಿಫಲವಾಯಿತು. ಬಂದಾ ಸಿಂಗ್ ತನ್ನ ತಂತ್ರಗಾರಿಕೆಯಿಂದ, ಯುದ್ಧದ ದೃಶ್ಯವನ್ನು ಲೋಹಗಡದಿಂದ ಲಾಹೋರ್‌ಗೆ ಬದಲಿಸಿದ. ನಹನ್ ರಾಜ್ಯದ ಮೂಲಕ ತಪ್ಪಿಸಿಕೊಂಡ ನಂತರ ಬಂದಾ ಸಿಂಗ್ ಬಹದ್ದೂರ್. ತನ್ನ 20 ಸಿಖ್ ದಂಡನಾಯಕರು ಮತ್ತು 40 ಸಾವಿರ ಶಸ್ತ್ರಸಜ್ಜಿತ ರಾವುತರ ಜೊತೆ ಲಾಹೋರ್ ಮೇಲೆ ದಾಳಿ ಮಾಡಲು ನಿರ್ಧರಿಸಿದ.[61]

**ಲೋಹಗಡದ ಒಂದೆರಡು ಬೆಟ್ಟಗಳನ್ನು ವಶಪಡಿಸಿಕೊಂಡ ನಂತರದ ಪರಿಸ್ಥಿತಿ**

ಈ ಸುಳ್ಳಿನ 'ಜಯದಲ್ಲಿ' ಚಕ್ರವರ್ತಿಯ ಸೈನ್ಯವು ಐದು ಆನೆಗಳನ್ನು, ಮೂರು ದೊಡ್ಡ ಫಿರಂಗಿಗಳನ್ನು, ಹದಿನೇಳು ಸಣ್ಣ ಫಿರಂಗಿಗಳನ್ನು, ಏಳು ಸಾಗಾಣಿಕೆ ಬಂಡಿಗಳನ್ನು, ಒಂದು ಗುಡಾರವನ್ನು ಮತ್ತು ಕೆಲವು ಬೆಳ್ಳಿ ಕಂಬಗಳನ್ನು ಲೋಹಗಡ ಕೋಟೆಯಿಂದ ವಶಪಡಿಸಿಕೊಂಡಿತು.[62] ಡಿಸೆಂಬರ್ ಒಂದರಂದು ಇವೆಲ್ಲವನ್ನು ಚಕ್ರವರ್ತಿಯ ಮುಂದೆ ಹಾಜರುಪಡಿಸಲು ಕಂಪೊ ಗ್ರಾಮಕ್ಕೆ ತರಲಾಯಿತು.[63]

ಜಮಾದತ್–ಉಲ್–ಮುಲ್ಕ್ ಮತ್ತು ಜಲ್ಫೀಕರ್ ಖಾನ್ ಅವರುಗಳು ಈ ಯುದ್ಧದಲ್ಲಿ ವಹಿಸಿದ ಪಾತ್ರದ ಬಗ್ಗೆ ಚಕ್ರವರ್ತಿ ಮೆಚ್ಚುಗೆ ವ್ಯಕ್ತಪಡಿಸಿದ. ಅದೇ ರೀತಿ ಜೊರವರ್ ಖಾನ್, ರಣ್‌ಬಾಜ್ ಖಾನ್ ಮತ್ತು ಶೇರ್ ಖಾನ್‌ನನ್ನು ಅಭಿನಂದಿಸಿ ಗೌರವ ವಸ್ತ್ರ ನೀಡಿ ಸನ್ಮಾನಿಸಿದ.

1710ರ ಡಿಸೆಂಬರ್ 3 ರಂದು ಭಾನುವಾರ ಚಕ್ರವರ್ತಿ ದರ್ಬಾರನ್ನು ನಡೆಸಿ, ಸಿಕ್ಖರ ವಿರುದ್ಧದ ಯುದ್ಧದಲ್ಲಿ ವಿಶೇಷ ಪಾತ್ರ ವಹಿಸಿದವರೆಲ್ಲರಿಗೂ ಪ್ರಶಸ್ತಿ ಪ್ರದಾನ ಮಾಡಿದ.(64) ಜಮಾದತ್–ಉಲ್–ಮುಲ್ಕ್ ಮತ್ತು ಭಕ್ಷಿ–ಉಲ್–ಮುಮಾಲಕ್ ಅವರಿಗೆ ಗೌರವವಸ್ತ್ರ ಮತ್ತು ಪೇಟ; ಮಹಬ್ಬತ್ ಖಾನ್, ಇಸ್ಲಾಂಖಾನ್ ಬಹದ್ದೂರ್ ಮತ್ತು ರಾಜ ಉದಿತ್‌ಸಿಂಗ್ ಅವರುಗಳಿಗೆ ವಿಶೇಷ ಗೌರವ ವಸ್ತ್ರ; ರಾಜ ಚತ್ರಸಾಲ್‌ಗೆ ರತ್ನ ಖಚಿತ ಶಿರೋಭರಣ ಮತ್ತು ಚುರಮಣಿ ಜಾಟ್‌ಗೆ ಆನೆಯನ್ನು ಕೊಡಲಾಯಿತು.(65)

ಲೋಹಗಡ ಕೋಟೆಯಲ್ಲಿ ಮುಘಲ್ ಸೈನಿಕರು ಅದೇ ದಿನ ಐದು ಸಹಸ್ರ ರೂಪಾಯಿಗಳನ್ನು ಮತ್ತು ಮೂರು ಸಾವಿರದ ನಾಲ್ಕು ನೂರ ಆಶ್ರಫಿಗಳನ್ನು ಅಗೆದು ತೆಗೆದ ಸುದ್ದಿಯನ್ನು ಚಕ್ರವರ್ತಿಗೆ ಅರುಹಲಾಯಿತು.(66)

### ಸಿಕ್ಖರ ಮಾರಣಹೋಮಕ್ಕೆ ಆಜ್ಞೆ ಮಾಡಿದ ಬಹದ್ದೂರ್ ಶಾ

1710ರ ಡಿಸೆಂಬರ್ 10 ರಂದು(67) ಸಿಕ್ಖರ ತಲೆ ಉರಳಿಸಲು ಬಹದ್ದೂರ್ ಶಾ ಆಜ್ಞೆ ಮಾಡಿದ. ಮಹಬ್ಬತ್ ಖಾನ್‌ಗೆ ನೀಡಿದ ಆಜ್ಞೆಯಲ್ಲಿ ಬಹದ್ದೂರ್ ಶಾ ಶಹಜಹಾನಾಬಾದ್ ಮತ್ತು ಇತರ ಪ್ರಾಂತ್ಯಗಳ ರಾಜ್ಯಪಾಲರಿಗೆ ತಮ್ಮ ನಾಡಿನಲ್ಲಿ ಎಲ್ಲಿಯಾದರೂ ನಾನಕ್‌ಪ್ರಸ್ತ್ (ಸಿಖ್) ಕಂಡುಬಂದಾರೆ ತಕ್ಷಣವೇ ಆತನನ್ನು ಕೊಲ್ಲುವಂತೆ ಆದೇಶ ಹೊರಡಿಸಲು ತಿಳಿಸಿದ್ದ. ತರುವಾಯ 1711 ರ ಮಾರ್ಚ್ 26 ರಂದು ಸಿಖ್ ಜನರನ್ನು ಮುಂದೆ ಸಿಖ್ ಎಂದು ಕರೆಯದೆ ಸಿಖ್‌ಚೇರ್(ಕಳ್ಳ) ಎಂದು ಉಲ್ಲೇಖಿಸಬೇಕೆಂಬ ಆಜ್ಞೆಯನ್ನು ಹೊರಡಿಸಿದ.(68)

### ನಹನ್ ರಾಜನಿಗಾದ ಗತಿ

1710ರ ಡಿಸೆಂಬರ್ 3 ರಂದು, ಮುಘಲ್ ಸಾಮ್ರಾಟನು ಕುಮೋನ್‌ನ ರಾಜ ಗ್ಯಾನ್ ಚಂದ್, ಗಡವಾಲದ ಫತೇಖಾನ್ ಮತ್ತು ನಹನ್‌ನ ಭೂಪ್ ಪ್ರಕಾಶ್ ಇವರುಗಳಿಗೆ 1710ರ ಡಿಸೆಂಬರ್ 3 ರಂದು ಆದೇಶ ಕಳುಹಿಸಿ ಬಂದಾ ಸಿಂಗ್ ತಪ್ಪಿಸಿಕೊಂಡು ಹೋಗಿರುವ ಮಾಹಿತಿ ತಿಳಿಸಿದ. ಅಲ್ಲದೆ ಅವನನ್ನು ಹುಡುಕಿ, ಬಂಧಿಸಿ ಚಕ್ರವರ್ತಿಯ ಮುಂದೆ ಹಾಜರುಪಡಿಸಲು ಆಜ್ಞಾಪಿಸಿದ ಬಂದಾ ಸಿಂಗ್‌ನನ್ನು ಬೆನ್ನಟ್ಟಲು ಚಕ್ರವರ್ತಿಯ ಹಮೀದ್ ಖಾನ್ ನನ್ನನ್ನು ನಿಯೋಜಿಸಿದ ಒಂದು ವೇಳೆ ಬಂದಾ ಸಿಂಗ್‌ನನ್ನು ಹಿಡಿಯಲು ನಹನ್‌ನ ರಾಜ ವಿಫಲನಾದರೆ, ಅವನನ್ನು ಹಿಡಿದು ತರಲು ತಿಳಿಸಿದ.

ಹಮೀದ್‌ಖಾನ್ ಹೊರಟು ನಹನ್ ತಲುಪಿದಾಗ, ಚಕ್ರವರ್ತಿಯ ಕೋಪವನ್ನು ಬಲ್ಲ ನಹನ್‌ರಾಜ ಆತನನ್ನು ಭೇಟಿಯಾಗಲಿಲ್ಲ. ಆ ಹಂತದಲ್ಲಿ ನಹನ್ ರಾಜ ಭೂಪ್ ಪ್ರಕಾಶ್‌ಗೆ ಏನೂ ಆಗದೆಂದು ಮಹಬ್ಬತ್ ಖಾನ್ ಭರವಸೆ ನೀಡಿರುವುದನ್ನು ನಹನ್‌ರಾಜನಿಗೆ ಹಮೀದ್ ಖಾನ್ ತಿಳಿಸಿದ.

1710ರ ಡಿಸೆಂಬರ್ 12 ರಂದು ನಹನ್ ರಾಜ್ಯದ ಚಿಕ್ಕ ಅರಸ ಭೂಪ್ ಪ್ರಕಾಶ್‌ನನ್ನು

ಚಕ್ರವರ್ತಿಯ ಮುಂದೆ ತಂದು ಹಮೀದ್‌ಖಾನ್ ಹಾಜರು ಪಡಿಸಿದ. ಅವನ ಜೊತೆ ಖ್ವಾಜಾ ಕುತುಬುದ್ದೀನ್. ದೀನಾನಾಥ್ ರಾವ್ ಮತ್ತು ಉಮಾ ಪಂಡಿತ್ ಇದ್ದರು. ಭೂಪ್ ಪ್ರಕಾಶ್ ನೂರೊಂದು ಚಿನ್ನದ ಮೊಹರು ಮತ್ತು ಹಲವಾರು ಇತರ ಉಡುಗೊರೆಗಳನ್ನು ಚಕ್ರವರ್ತಿಗೆ ಸಮರ್ಪಿಸಿದನು.[69] ಆತನಿಗೆ ವಸ್ತ್ರವೊಂದನ್ನು ನೀಡಿದ ಚಕ್ರವರ್ತಿ ಇನ್ನು ಮುಂದೆ ತನ್ನ ಆಸ್ಥಾನದಲ್ಲಿಯೇ ಇರಲು ಆಜ್ಞಾಪಿಸಿದ.[70]ಒಂದು ವೇಳೆ ಬಂದಾ ಸಿಂಗ್‌ನನ್ನು ಭೂಪ್ ಪ್ರಕಾಶ್ ಹಿಡಿದು ಕೊಟ್ಟರೆ ಬಿಡುಗಡೆ ಮಾಡುವುದಾಗಿ ಮಾರನೆಯ ದಿನ ಚಕ್ರವರ್ತಿ ತಿಳಿಸಿದನು.[71] ಚಕ್ರವರ್ತಿಯು ಆತನ ತಾಯಿಗೆ ಪತ್ರವನ್ನು ಬರೆದು ಬಂದಾ ಸಿಂಗ್‌ನನ್ನು ಕರೆತಂದು ತನ್ನ ಮಗನನ್ನು ಬಿಡಿಸಿಕೊಂಡು ಹೋಗಬಹುದೆಂದು ತಿಳಿಸಿದ. ಆಗ ಭೂಪ್ ಪ್ರಕಾಶನ ತಾಯಿ 35 ಸಿಖ್ ಯುವಕರನ್ನು ಬಂಧಿಸಿ ಚಕ್ರವರ್ತಿಗೆ ಕಳುಹಿಸಿದಳು. ಚಕ್ರವರ್ತಿಯು ಅವರಿಗೆ ತಕ್ಷಣವೇ ಮರಣ ದಂಡನೆ ವಿಧಿಸಿದ. ಆದರೆ ಬಂದಾ ಸಿಂಗ್ ಬಂಧನವಾಗುವವರೆಗೆ ಭೂಪ್ ಪ್ರಕಾಶ್‌ನನ್ನು ಕಳುಹಿಸಲು ನಿರಾಕರಿಸಿದ.

ಖಾಫಿ ಖಾನ್‌ನ ವರದಿ ಹೀಗಿದೆ– 1711ರ ಮಾರ್ಚ್ 13 ರಂದು ಚಕ್ರವರ್ತಿಯು ಭೂಪ್ ಪ್ರಕಾಶ್ ಮತ್ತು ಗುಲಾಬ್ ಸಿಂಗ್ ಭಕ್ಷಿಯನ್ನು (ಲೋಹಗಡದಲ್ಲಿ ಬಂಧಿತನಾದ ಬಂದಾ ಸಿಂಗ್‌ನ ಜೊತೆಗಾರ) ಒಂದು ಕಬ್ಬಿಣದ ಪಂಜರದಲ್ಲಿ ಹಾಕಿ ದೆಹಲಿಗೆ ಕಳುಹಿಸಿದ. ಅವರಿಬ್ಬರನ್ನೂ ಗಣ್ಯ ಖೈದಿಗಳಿಗೆ ಮೀಸಲಾದ, ಕೆಂಪು ಕೋಟೆಯ ಹಿಂಭಾಗದಲ್ಲಿರುವ ಸಲೀಂಗಡ ಕೋಟೆಯ ಸೆರೆಯಲ್ಲಿ ಬಂಧಿಸಿಡಲು ಮಾರ್ಚ್ 20 ರಂದು ಆಜ್ಞೆ ಕಳುಹಿಸಿದ. (ಇದನ್ನು ತಿಳಿದ ನಹನ್ ರಾಜನ ತಾಯಿ ಜೈಪುರ ಮತ್ತು ಜೋಧ್‌ಪುರದ ರಜಪೂತ ರಾಜರನ್ನು ಭೇಟಿಯಾಗಿ, ತನ್ನ ಮಗ ಭೂಪ್ ಪ್ರಕಾಶನ ಬಿಡುಗಡೆ ಮಾಡಿಸಲು ಸಾಮ್ರಾಟನನ್ನು ಮನವೊಲಿಸಲು ಪ್ರಭಾವವನ್ನು ಬೀರುವಂತೆ ಮನವಿ ಮಾಡಿದಳು. ಆದರೆ ಈ ವಿಚಾರದಲ್ಲಿ ಕೈಚೆಲ್ಲಿದ ಅವರು ಬಂದಾ ಸಿಂಗ್‌ನ ಬಂಧನವಾದ ನಂತರವೇ ಆತನ ಬಿಡುಗಡೆ ಸಾಧ್ಯ ಎಂದು ಹೇಳಿದರು)

1711ರ ಮಾರ್ಚ್ 17 ರಂದು ಚಕ್ರವರ್ತಿಯು ಮಹಬ್ಬತ್ ಖಾನ್‌ಗೆ ಆದೇಶವನ್ನು ಕಳುಹಿಸಿ, ಬಂದಾ ಸಿಂಗ್‌ನನ್ನು ಇರಿಸಲು ಮಾಡಿಸಿದ. ಮುಳ್ಳಿನ ಪಂಜರದಲ್ಲಿ ಭೂಪ್ ಪ್ರಕಾಶನನ್ನು ಹಾಕಲು ಆಜ್ಞೆ ಮಾಡಿದ. ಆದರೆ ಭೂಪ್ ಪ್ರಕಾಶ್ ನಿರಪರಾಧಿಯೆಂದು, ಬಂದಾ ಸಿಂಗ್ ಈಗಾಗಲೇ ನಹನ್ ಪ್ರಾಂತ್ಯ ತೊರೆದು ಹೋಗಿರುವನೆಂದು, ಮಹಬ್ಬತ್ ಖಾನ್ ದೊರೆಗೆ ಮನವರಿಕೆ ಮಾಡಿಕೊಡಲು ಯತ್ನಿಸಿದ. ಅದಕ್ಕೆ ಚಕ್ರವರ್ತಿ "ಅವನನ್ನು ಶಿಕ್ಷಿಸದಿದ್ದರೆ, ಬೆಟ್ಟಸಾಲಿನ ಎಲ್ಲ ರಾಜರೂ ಸಿಕ್ಖರಾಗುತ್ತಾರೆ. ನೀನವನನ್ನು ಶಿಕ್ಷಿಸಲೇಬೇಕು" ಎಂದು ಆಜ್ಞಾಪಿಸಿದ. ಮತ್ತೆ ಚಕ್ರವರ್ತಿಯನ್ನು ಒಲಿಸಲು ಮಹಬ್ಬತ್‌ಖಾನ್, ಪಂಜರದ ಮೊಳೆಗಳು ತುಂಬಾ ಗಡಸು ಮತ್ತು ಚೂಪಾಗಿದ್ದು, ಅಂಥ ಪಂಜರದೊಳಿಟ್ಟರೆ ಭೂಪ್ ಸಿಂಗ್ ಬೇಗನೆ ಸಾಯಬಹುದು ಎಂದು ಮನವಿ ಮಾಡಿದ. ಈ ಮನವಿಗೂ ಸೊಪ್ಪು ಹಾಕದ ಚಕ್ರವರ್ತಿ "ಒಂದು ವೇಳೆ ಆ ರಾಜ ಸತ್ತರೆ ಖಂಡಿತವಾಗಿಯೂ ನರಕಕ್ಕೇ ಹೋಗುತ್ತಾನೆ" ಎಂದು ಹೇಳಿ ತನ್ನ ನಿಲುವನ್ನು ಬದಲಿಸಲಿಲ್ಲ. ಮತ್ತೆ ವಾದಿಸಲು ಹೋಗದ ಮಹಬ್ಬತ್ ಖಾನ್ ಭೂಪ್ ಪ್ರಕಾಶ್‌ನನ್ನು ಮುಳ್ಳಿನ ಪಂಜರದಲ್ಲಿರಿಸುತ್ತಾನೆ. ಆದರೆ ಅವನನ್ನು ಪಂಜರದಲ್ಲಿಡುವ ಮುನ್ನ ಅವನಿಗೆ ಚುಚ್ಚಿ ಗಾಯವಾಗುವುದನ್ನು ತಡೆಯಲು ಮೊಳೆಗಳನ್ನು ಬಾಗಿಸಲು ತನ್ನ ಆಳುಗಳಿಗೆ ಹೇಳುತ್ತಾನೆ.

ಪಂಚೋಲಿ ಜಗಜೀವನದಾಸ್ ಇದಕ್ಕಿಂತ ಭಿನ್ನವಾದ ವಿಷಯ ನಿರೂಪಿಸುತ್ತಾನೆ. ಅವನ ಪ್ರಕಾರ ಭೂಪ್ ಪ್ರಕಾಶ್ ಮತ್ತು ಅವನ ದಿವಾನ, ಚಕ್ರವರ್ತಿಯ ಮುಂದೆ ಹಾಜರಾದಾಗ, ಖಾನ್

ಖಾನನ್ "ಎಲ್ಲಿ ಆ ಬಂದಾ ಸಿಂಗ್?" ಎಂದು ಕೇಳುತ್ತಾನೆ. ಆಗ ದಿವಾನನು ಬಂದಾ ಸಿಂಗ್ ತಮ್ಮ ರಾಜ್ಯದಿಂದ ಹೊರಹೋಗಿದ್ದಾನೆ ಎಂದು ತಿಳಿಸುತ್ತಾನೆ. ಇದನ್ನು ಕೇಳಿದ ಖಾನ್ ಖಾನನ್ ಸುಳ್ಳು ಹೇಳುತ್ತಿದ್ದೀರೆಂದು ಅವಮಾನಿಸುತ್ತಾನೆ. ದಿವಾನನಿಗೆ ಬೇಡಿ ಹಾಕಿ ಸರಪಳಿಯಿಂದ ಕಾಲನ್ನು ಕಟ್ಟುತ್ತಾರೆ. ಅವನ ಕುತ್ತಿಗೆಗೆ ಕಬ್ಬಿಣದ ಬಳೆ ತೊಡಿಸಿ ಪಂಜರವೊಂದಕ್ಕೆ ದೂಡುತ್ತಾರೆ. ರಾಜ ಭೂಪ್ ಪ್ರಕಾಶನನ್ನು ನಿರಾಯುಧಗೊಳಿಸಿ ಒಂದು ಸಣ್ಣ ಗುಡಾರದಲ್ಲಿರಿಸಿ ಸೈನಿಕರನ್ನು ಕಾವಲು ಹಾಕುತ್ತಾರೆ. ರಾಜ ಚತ್ರಸಾಲ್ ಸಹ ಭೂಪ್ ಪ್ರಕಾಶ್‌ಗೆ ಏನೂ ಆಗುವುದಿಲ್ಲವೆಂಬ ಭರವಸೆ ನೀಡಿರುತ್ತಾನೆ. ಆದರೆ ಚಕ್ರವರ್ತಿಯು ಭೂಪ್ ಪ್ರಕಾಶನನ್ನ ಬಂಧಿಸಿರುವುದನ್ನು ಕಂಡಾಗ ಆತ ಚಕ್ರವರ್ತಿಯ ಶಿಬಿರ ತೊರೆದು ತನ್ನ ರಾಜ್ಯಕ್ಕೆ ಮರಳುತ್ತಾನೆ."[73]

ದಿವಾನ್ ಭಿಕಾರಿ ದಾಸ್ ಪ್ರಕಾರ, ರಾಜ ಭೂಪ್ ಪ್ರಕಾಶ್ ಮುಘಲ್ ಚಕ್ರವರ್ತಿಯ ಶಿಬಿರ ತಲುಪಿದಾಗ ಖಾನ್ ಖಾನನ್ ಅವನನುದ್ದೇಶಿಸಿ ಬಂದಾ ಸಿಂಗ್ ಎಲ್ಲಿ ಎಂದು ಕೇಳುತ್ತಾನೆ. ಅದಕ್ಕೆ ರಾಜ "ನನಗೆ ಗೊತ್ತಿಲ್ಲ. ನನ್ನ ದಿವಾನ. ಗುರುವಿನ ಸಿಖ್ ಧರ್ಮೀಯ ಬಂದಾ ಸಿಂಗ್ ಎಲ್ಲಿರಬಹುದೆಂದು ಅವನಿಗೆ ಗೊತ್ತಿರಬಹುದು" ಎನ್ನುತ್ತಾನೆ. ಆಗ ದಿವಾನನ್ನು ಬಂಧಿಸಿ ಥಳಿಸುತ್ತಾರೆ. ಅವನು ಉಳಿಯುವುದೇ ಕಷ್ಟವಾಗುತ್ತದೆ. ಮಾರನೆಯ ದಿನ ಚಕ್ರವರ್ತಿ "ದಿವಾನನ್ನು ಹೊಡೆಯುವುದರಿಂದ ಪ್ರಯೋಜನವಿಲ್ಲ. ಬದಲು ನಹನ್‌ನ ರಾಜನನ್ನು ಬಂಧಿಸಿ ಬಂದಾ ಸಿಂಗ್‌ನನ್ನು ಹಾಜರುಪಡಿಸದಿದ್ದರೆ, ಅವನ ರಾಜ್ಯವನ್ನು ನಾಶಗೊಳಿಸುವುದಾಗಿ ಹೇಳಿ" ಎನ್ನುತ್ತಾನೆ.[74]

1711ರ ಜನವರಿ 22 ರಂದು ಚಕ್ರವರ್ತಿಯು ಹಮೀದ್‌ಖಾನ್ ಸಧೌರದ ಹತ್ತಿರವಿದ್ದಾಗ ಒಬ್ಬ ದೂತ ಆಗಮಿಸಿ ನಹನ್ ರಾಜನ ತಾಯಿ ಬಂದಾ ಸಿಂಗ್‌ನನ್ನು ದಸ್ತಗಿರಿ ಮಾಡಿಸಿ ಚಕ್ರವರ್ತಿಯ ಮುಂದೆ ಹಾಜರುಪಡಿಸಲು ತರುತ್ತಿದ್ದಾಳೆ ಎಂಬ ವಾರ್ತೆ ಹೇಳುತ್ತಾನೆ. ರಾಜನ ಸೇನಾ ಶಿಬಿರದಿಂದ ಆಕೆ 45 ಕಿ.ಮೀ. ದೂರದಲ್ಲಿದ್ದಳು, (12 ಕೋಸು). ಆಗ ಮಹಬ್ಬತ್ ಖಾನ್‌ನನ್ನು ಕರೆಸಿ ಆತನಿಗೆ ರಾಜನ ತಾಯಿಯನ್ನು ಮಾರ್ಗ ಮಧ್ಯದಲ್ಲಿ ರಾಜಮಾತೆಯನ್ನು ಸಂಧಿಸಿ ಸಕಲ ಮರ್ಯಾದೆಯಿಂದ ಕರೆತರಲು ಹಾಗು ಬಂದಾ ಸಿಂಗ್‌ನನ್ನು ಪಂಜರದಲ್ಲಿ ಕೂಡಿ ಎಳೆದುತರಲು ಆಜ್ಞಾಪಿಸುತ್ತಾನೆ. ಬಂದಾ ಸಿಂಗ್‌ನನ್ನು ಹಿಡಿದುಕೊಟ್ಟ ನಹನ್ ರಾಜನ ತಾಯಿಗೆ ಬಹುಮಾನ ರೂಪವಾಗಿ ಕೊಡಲು ಹಿಂದೂಗಳು ಧರಿಸುವ ಮಾದರಿಯ ಒಂದು ಲಕ್ಷ ರೂಪಾಯಿ ಮೌಲ್ಯದ ಚಿನ್ನದ ಆಭರಣಗಳನ್ನು ತಯಾರಿಸಲು ಚಕ್ರವರ್ತಿಯು ಜನವರಿ 24 ರಂದು ಆಜ್ಞಾಪಿಸುತ್ತಾನೆ.[75] ಆದರೆ ಅದು ಸುಳ್ಳು ಸುದ್ದಿ ಎಂಬುದು ಬಳಿಕ ತಿಳಿಯುತ್ತದೆ.

---

**ಅಡಿ ಟಿಪ್ಪಣಿಗಳು**

1. ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲದ ನಮೂದು.
2. ಪಲ್ಲಕ್ಕಿಯು ಶ್ರೀಮಂತಿಕೆಯ ಸಂಕೇತ.
3. ಅಕ್ಬರಾತ್–ಐ–ದಬಾರ್–ಐ–ಮೌಲ್ಲ. ನಮೂದು 25.02.1710
4. ಅಕ್ಬರಾತ್–ಐ–ದರ್ಬಾ–ಐ–ಮೌಲ್ಲ. ನಮೂದು 23.04.1710
5. ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲದ ನಮೂದು 05.05.1710

6. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 10.05.1710
7. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 12.05.1710
8. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 12.05.1710
9. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 20.05.1710
10. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 24.05.1710
11. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 27.05.1710
12. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 28.05.1710
13. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 05.06.1710
14. ಮುಂತ್‌ಖಾಬ್-ಉಲ್-ಲುಬಾಬ್
15. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 22.06.1710
16. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 01.07.1710
17. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 02.07.1710
18. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 08.07.1710
19. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 23.07.1710
20. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 25.07.1710
21. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 14.08.1710
22. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 14.08.1710
23. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 26.08.1710
24. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 28.08.1710
25. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 29.08.1710
26. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 29.09.1710
27. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 02.10.1710
28. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 14.10.1710
29. ಖಾಫಿ ಖಾನ್; ಮಂತಖಾಬ್-ಉಲ್-ಲುಬಾಬ್ ಸಂ. 2 ಪು. 658
30. ಈಗ ಈ ಕೋಟೆಯಂತಹ ಒಂದು ಇಟ್ಟಿಗೆಯೂ ದೊರೆಯುವುದಿಲ್ಲ.
31. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 15.10.1710
32. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ ಪು. 99

33. ಖಾಫಿ ಖಾನ್, ಕಮ್ವರ್‌ಖಾನ್ ಮತ್ತು ಅಕ್ಬರಾತ್–ಐ–ದರ್ಬಾರ್–3 ಮೌಲ ನಮೂದು 20.10.1710
34. ಗಂದ ಸಿಂಗ್, ಬಂದಾ ಸಿಂಗ್ ಬಹದ್ದೂರ್ ಪು 188.
35. ಮುಜಾಫರ್ ಅಲಂ, The Crisis of Empire in Mughal North India, P. 169
36. ಅಮರ್‌ಜಿತ್ ಸಿಂಗ್ (ಸಂ) Revisting Band Singh Bahaddur and his times, Key note by J.S. Grewal, P. XXXVI
37. ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ ನಮೂದು 16.11.1710
38. ಕಮ್ವಾರ್‌ಖಾನ್, ತಜ್‌ಕಿರ ಸಲಾತಿನ್ ಚಗ್ಟ. ಪು. 103
39. ದಿನಾಂಕ 26.12.1710 ರಂದು ಪಿಂಚೋರಿ ಜಗಜೀವನ್‌ದಾಸ್ ಜೈಪುರದ ರಾಜನಿಗೆ ಬರೆದ ಪತ್ರ.
40. ತಜ್‌ಕಿರ ಸಲಾತಿನ್ ಚುಗಟ್ಟದಲ್ಲಿ
41. ಮಹಮದ್ ಖಾಸಿಂಗ್ ಔರಂಗಬಾದಿಯ ಅಹವಾಲ್ ಉಲ್ ಕವಾಕಿನ್
42. ಮುಜಾಫರ್‌ಖಾನ್, The Crisis of Empire in Mughal North India ಪು. 163
43. ಬಲವಂತ ಸಿಂಗ್ ಧೀಲ್ಲೋನ್. (Rajasthan documents on Band Singh Bahadur, edited by Dr. Balawant Singh Dhillon).,Vakl Rep. No. 2 dated 19.01.1711
44. ಕಾಫಿಖಾನ್
45. ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ ನಮೂದು 28.10.1711
46. ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ ನಮೂದು 15.10.1710
47. ಚತ್ರಪಾಲ್ ರಾಜ ರುದರ್ ಪ್ರತಾಪ್ ದೇವನ ನೇರ ವಂಶಸ್ಥ. ರುದರ್ ಪ್ರತಾಪ್ ಅಕ್ಬರನ ಮಂತ್ರಿ ಅಬು ಫಜಲ್‌ನ ಕೊಲೆ ಮಾಡಿದ್ದ. ಚಕ್ರಪಾಲ್ ಪ್ರತಾಪ್‌ದೇವನ ಐದನೇ ತಲೆಮಾರಿನವನು. 1671ರಲ್ಲಿ ಚತ್ರಪಾಲ್ 25 ರಾವುತರ ದಂಡನಾಯಕ. ಆತ ಶ್ರಮವಹಿಸಿ ಹೋರಾಟಗಾರನಾಗಿ ಪ್ರಸಿದ್ಧಿ ಪಡೆದ. ಹಂತ ಹಂತವಾಗಿ ಮೇಲೇರಿದ ಆತ ಸಾಯುವ ವೇಳೆಗೆ ಪೂರ್ವ ಬುಂದೇಲ್ ಖಂಡದ ಅರ್ಧಭಾಗದ ಅಧಿನಾಯಕನಾಗಿದ್ದ.
48. ಖಾಫಿ ಖಾನ್, Op cit. Vol 2, PP. 671-77
49. ಮಹಮ್ಮದ್ ಕಾಸಿಂ ಔರಂಗಬಾದಿಯ ಗ್ರಂಥ ಪು. 40–43
50. ಚರಿತ್ರೆಯ ಅತ್ಯಂತ ಶ್ರೇಷ್ಠ ಹೋರಾಟಗಾರರು ಎಂದು ಪರಿಗಣಿತರಾದ ಇಬ್ಬರು
51. Elliot and Dowson Op. cit. Vol. 7, P. 423
52. ಖಾಫಿ ಖಾನ್, Op. Cit. Vol. 11. PP 669-670
53. ತಜ್‌ಕಿರಾ ಸಲಾತಿನ್ ಚುಗಟ್ಟ. ಪು. 153
54. ಇರ್ವಿನ್, Later Mughals Vol. 2, P 111 ಕಾಫಿಖಾನ್ Op. cit. Vol. 1 p 671

55. ಖಾಫಿ ಖಾನ್, ಎಲಿಯಟ್ ಮತ್ತು ಡಾಸನ್, ತಜ್‌ಕಿರ ಸಲಾತಿನ್ ಚುಗಟ್ಟ
56. Elliot and Dowson, Op. cit. Vol. 7 p 555-58
57. ಬಹದ್ದೂರ್ ಶಾ ಹಳಿದುದನ್ನು ಮನಸ್ಸಿಗೆ ಹಚ್ಚಿಕೊಂಡ ಖಾನ್ ಖಾನನ್ ವ್ಯಾಕುಲಗೊಂಡ. ಖಿನ್ನವಾಗಿ ಹಾಸಿಗೆ ಹಿಡಿದ. ಆದರೂ ಚಕ್ರವರ್ತಿಯ ಕಾರವಾನ್ ಜೊತೆ ಪ್ರಯಾಣ ಮಾಡಿದ. ಎರಡು ತಿಂಗಳ ಖಾಯಿಲೆಯ ನಂತರ ಸಧೌರದ ಹತ್ತಿರದ ಬಧೌಲಿಯೆಂಬ ಹಳ್ಳಿಯ ಹತ್ತಿರ ನಿಧನನಾದ.
58. ಮಹಮ್ಮದ್ ಖಾಸಿಂ ಔರಂಗಬಾದಿ, ಅಹ್‌ವಾಲ್-ಉಲ್-ಖವಾಕೀನ್
59. Elliot and Dowson, Op. cit. Vol 3., p 423
60. ಮಹಮ್ಮದ್ ಖಾಸಿ ಔರಂಗಾಬಾದಿ
61. Rajasthani documents on Banda Singh Bahadur., vakil report no. 351, dated 06.03.1711
62. ಖಾಫಿ ಖಾನ್, Op. cit. P 672-73
63. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 01.12.1710
64. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 03.12.1710
65. ಚುರಮಣಿ ಜಾಟ್ ಈ ಮೊದಲು ಬಹದ್ದೂರ್ ಶಾನ ಸೋದರ ತಾರ ಅಜಮ್‌ನ ಒಡನಾಡಿಯಾಗಿದ್ದ. ಆದರೆ ತಾರ ಅಜಮ್ ಸೋದರ ಬಹದ್ದೂರ್ ಶಾನಿಂದ ಹತನಾದಾಗ, ಆತ ತಾರ ಅಜಂನ ಸಂಪತ್ತನ್ನು ಕೊಳ್ಳೆ ಹೊಡೆದು ಬಹದ್ದೂರ್ ಶಾ ಪಕ್ಷ ಸೇರಿದ.
66. ಅಕ್ಬರಾತ್-ಐ-ದರ್ಬಾರ್-ಐ-ಮೌಲದ್ಲ ನಮೂದು 06.12.1710
67. ಕೆಲವು ಪತ್ರಗಳಲ್ಲಿ ದಿನಾಂಕವನ್ನು 30.11.1710 ಎಂದು ಉಲ್ಲೇಖಿಸಿದೆ. ಈ ವ್ಯತ್ಯಾಸಕ್ಕೆ ಜೂಲಿಯನ್ ಮತ್ತು ಗ್ರೆಗೋರಿಯನ್ ಕ್ಯಾಲೆಂಡರ್ ಬಳಸಿರುವುದು ಕಾರಣ.
68. ಅಕ್ಬರ್-ಐ-ದರ್ಬಾರ್-ಐ-ಮೌಲ್ಲದ ನಮೂದು 26.03.1711
69. ಜುರ್ರ, ಕಿತಶ್ ಮತ್ತು ಜಾಡ್ಡರ್ ಎಂಬ ಡೇಗೆ ಜಾತಿಯ ಹಕ್ಕಿಗಳನ್ನು ಉಡುಗೊರೆಯಾಗಿ ಚಕ್ರವರ್ತಿಗೆ ನೀಡಿದ.
70. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 12.12.1710
71. ಮಹಮ್ಮದ್ ಕಾಸಿಂ ಔರಂಗಬಾದಿ; ಅಹ್‌ವಾಲ್-ಉಲ್-ಖಾವಕೀನ್ ಪು. 37 (ಸಂ. ಬಲವಂತ್‌ಸಿಂಗ್ ಧಿಲ್ಲೋನ್)
72. ದಿನಾಂಕ 17.03.1711ರಲ್ಲಿ ಜೈಪುರ ರಾಜನಿಗೆ ಭಿಕಾರಿದಾಸ್ ಬರೆದ ಪತ್ರ (Rajasthan documents on Band Singh Bahadur, edited by Dr. Balawant Singh Dhillon)
73. ದಿನಾಂಕ 26.12.1711ರಂದು ಜೈಪುರದ ರಾಜರಿಗೆ ಪಂಚೋಲಿ ಜಗಜೀವನದಾಸ್ ಬರೆದ

ಪತ್ರ (Rajasthan documents on Band Singh Bahadur, edited by Dr. Balawant Singh Dhillon)

74. ದಿನಾಂಕ 10.01.1711ರಂದು ಜೈಪುರದ ರಾಜನಿಗೆ ದಿವಾನ್ ಭಿಕಾರಿದಾಸ್ ಬರೆದ ಪತ್ರ (Rajasthan documents on Band Singh Bahadur, edited by Dr. Balawant Singh Dhillon)

75. ದಿನಾಂಕ 27.01.1711ರಂದು ಜೈಪುರದ ರಾಜನಿಗೆ ದಿವಾನ್ ಭಿಕಾರಿದಾಸ್ ಬರೆದ ಪತ್ರ. (Rajasthan documents on Band Singh Bahadur, edited by Dr. Balawant Singh Dhillon)

# ಅಧ್ಯಾಯ 7

# ಸಿಕ್ಖರ ವಿರುದ್ಧ ದಂಡಯಾತ್ರೆ ಮುನ್ನಡೆಸಿದ ಸಾಮ್ರಾಟ

1711ರ ಜನವರಿ 1 ರಂದು ಸಧೌರವನ್ನು ತಲುಪಿದ ಮಹಮ್ಮದ್ ಅಮೀನ್ ಖಾನ್, ತಾನು ನಾಲ್ಕು ಗಾಡಿಗಳಲ್ಲಿ ಯುದ್ಧದಲ್ಲಿ ಕೊಲ್ಲಲಾದ ಸಿಖ್ ಸೈನಿಕರ ತಲೆಗಳನ್ನು ತುಂಬಿಸಿ ತಂದಿರುವುದಾಗಿ ಚಕ್ರವರ್ತಿಯ ಮುಂದೆ ಹಾಜರಾಗಿ ನಿವೇದಿಸಿಕೊಂಡ. ಹಾಗೆಯೇ ಆತ ಸುಲ್ತಾನ್‌ಪುರ್ ಲೋಧಿಯ ಶಮಸ್‌ಖಾನ್ ಬಗ್ಗೆ ದೂರೊಂದನ್ನು ಹೇಳಿದ. (ಶಮಸ್‌ಖಾನ್ ಸರ್ಹಿಂದ್ ಅನ್ನು ವಶಪಡಿಸಿಕೊಂಡ ಕೀರ್ತಿಗೆ ಭಾಜನನಾದ ಕಾರಣಕ್ಕೆ ಅವನ ಮೇಲೆ ಅಮೀನ್‌ಖಾನ್‌ಗೆ ಸಿಟ್ಟಿತ್ತು)[1]

ಒಂದು ದಿನ, ಬಂದಾ ಸಿಂಗ್ ಚಂಬದಲ್ಲಿ ತಂಗಿರುವ ಸುದ್ದಿ ಸಾಮ್ರಾಟನಿಗೆ ತಿಳಿಯಿತು. ಆಗ ಆ ಸುದ್ದಿಯನ್ನು ಖಚಿತಪಡಿಸಿಕೊಳ್ಳಲು ಮತ್ತು ಒಂದು ವೇಳೆ ನಿಜವೇ ಆಗಿದ್ದರೆ, ಚಂಬದ ಮೇಲೆ ದಾಳಿ ಮಾಡಲು ತನ್ನ ಸೈನ್ಯದ ಒಂದು ತುಕಡಿಯನ್ನು ಕಳುಹಿಸಲು ನಿರ್ಧರಿಸಿದ. 1711 ರ ಫೆಬ್ರವರಿ 9 ರಂದು ಹಮೀದ್ ಖಾನ್‌ನನ್ನು ಕರೆಸಿ ಗೌರವ ವಸ್ತ್ರ ನೀಡಿ ಸನ್ಮಾನಿಸಿದ. ಬಂದಾ ಸಿಂಗ್‌ನನ್ನು ಬೆನ್ನಟ್ಟಲು ಆತನನ್ನು ಐದು ಸಾವಿರ ಪರಾಕ್ರಮಿ ಸೈನಿಕರ ಸೈನ್ಯಕ್ಕೆ ದಂಡನಾಯಕನನ್ನಾಗಿ ನೇಮಿಸಿದ. ಸಿಖ್ ಸೈನ್ಯವನ್ನು ಬೆನ್ನತ್ತಿ ಹೋಗಲು ಮಹಬ್ಬತ್ ಖಾನ್‌ನನ್ನು ಮಾರ್ಚ್ ಆರರಂದು ಕಳುಹಿಸಿದ. ಅವನಿಗೆ 14 ಸಾವಿರ ಸೈನಿಕರ ಸೈನ್ಯದ ಅಧಿಪತ್ಯ ನೀಡಲಾಯಿತು.[2]

ಸಿಕ್ಖರ ವಿರುದ್ಧದ ಯುದ್ಧಕ್ಕೆಲ್ಲ ಹಲವಾರು ಸಾವಿರ ಸೈನಿಕರ ತಂಡವನ್ನು ಕಳುಹಿಸಿದರೂ ಸಾಮ್ರಾಟ ಬಹದ್ದೂರ್ ಶಾಗೆ ತೃಪ್ತಿಯಾಗಲಿಲ್ಲ. ತಾನು ಲಾಹೋರ್‌ನಲ್ಲಿ ಉಳಿಯುವುದಾಗಿಯೂ, ಅಲ್ಲಿಂದಲೇ ಸ್ವತಃ ತಾನೇ ಸಿಕ್ಖರ ವಿರುದ್ಧ ತೆಗೆದುಕೊಳ್ಳುವ ಕ್ರಮಗಳ ಉಸ್ತುವಾರಿ ವಹಿಸುವುದಾಗಿ ಆತ ಮಾರ್ಚ್ 14 ರಂದು ಘೋಷಿಸಿದ. ಸರ್ಕಾರದ ಎಲ್ಲ ವರದಿಗಾರರು ಮತ್ತು ಅಧಿಕಾರಿಗಳು ಪ್ರತಿ ದಿನವೂ ಸಿಕ್ಖರ ಚಲನವಲನಗಳನ್ನು ವರದಿ ಮಾಡುವಂತೆ ಸೂಚನೆ ಕಳುಹಿಸಿದ. ಸಾಮ್ರಾಟನಿಗೆ ನಿಯತವಾಗಿ ವರದಿ ಕಳಿಸಿದವರು ಎಂದರೆ, ಓಮ ಪಂಡಿತ್, ಅಸ್ಕರ್ ರಾವ್, ಅಬ್ದುಲ್ ರೆಹಮಾನ್, ಅಬ್ದುಲ್ ರಹೀಂ ಇತ್ಯಾದಿ. (ಈ ಎಲ್ಲಾ ಹೆಸರುಗಳು ಅಕ್ಬರಾತ್–ಐ–ದರ್ಬಾರಿ–ಐ–ಮೌಲ್ಲದಲ್ಲಿ ಪಟ್ಟಿಯಾಗಿವೆ). ಈ ಎಲ್ಲ ಅಧಿಕಾರಿಗಳು ನಿಯತವಾಗಿ ಲಾಹೋರ್ ಸರ್ಹಿಂದ್, ಗುಜರಾತ್, ದೆಹಲಿ, ಜಮ್ಮು, ಅಜ್ಮೀರ್ ಮತ್ತು ಇತರೆ ಸ್ಥಳಗಳಿಂದ ವರದಿ ಮಾಡುತ್ತಿದ್ದರು.[3] ಅಮೂಲ್ಯವಾದ ಮಾಹಿತಿ ಕೊಡುವವರಿಗೆ ಮತ್ತು ಸಿಕ್ಖರ ಸಾವು ಮತ್ತು ಹಾನಿಯನ್ನು ವರದಿ ಮಾಡುವವರಿಗೆ ಸಾಮ್ರಾಟ ಕಾಣಿಕೆಗಳನ್ನು ನೀಡುತ್ತಿದ್ದ. ಈ ವರದಿಗಳು ಸಾಮ್ರಾಟನಿಗೆ ಕ್ರಮವಹಿಸಲು ಅಥವಾ

ತನ್ನ ತಂತ್ರ ವಿಧಾನಗಳನ್ನು ಬದಲಿಸಲು ನೆರವಾಗುತ್ತಿದ್ದವು.

1711 ರ ಮಾರ್ಚ್ 20 ರಂದು, ಸಾಮ್ರಾಟನು, ಹಿಂದೂ ಪಾಳೆಯಗಾರರಾದ ಚುರಮಣಿ ಜಾಟ್ ಮತ್ತು ಕಿಷನ್ ಸಿಂಗ್ ನರೋಕ ಅವರನ್ನು ಕರೆಸಿ ಗೌರವ ವಸ್ತ್ರ ನೀಡಿ, ಸಿಕ್ಖರ ವಿರುದ್ಧದ ದಂಡಯಾತ್ರೆಯಲ್ಲಿದ್ದ ಮಹಬ್ಬತ್ ಖಾನ್ ಜೊತೆ ಸೇರಿಸಿದ. ಮಾರ್ಚ್ 22 ರಂದು ಸಾಮ್ರಾಟನು ಸಧೌರವನ್ನು ತೊರೆದು ಲಾಹೋರ್ ಸೇರಿದ. ಬಂದಾ ಸಿಂಗ್ ಈಗ ಗುರು–ಡ–ಚಕ್ (ಅಮೃತಸರ) ಮತ್ತು ಲಾಹೋರ್‌ನ ಹೊರವಲಯದಲ್ಲಿ, ರಾವಿ ನದಿಯ ಇನ್ನೊಂದು ದಂಡೆಯಲ್ಲಿರುವ ಶಹದರ ನಡುವಿನ ಪ್ರದೇಶವನ್ನು ಆಕ್ರಮಿಸಿಕೊಂಡಿರುವ ಸುದ್ದಿ ಸಾಮ್ರಾಟನಿಗೆ 24ನೇ ಮಾರ್ಚ್ ತಿಳಿಯಿತು.(4)

1711 ರ ಏಪ್ರಿಲ್ 18 ರಂದು ಮುಸಲ್ಮಾನರ ಜಾನುವಾರುಗಳನ್ನು ಸಿಕ್ಖರು ಕೊಂಡೊಯ್ದ ವಿಷಯ ಸಾಮ್ರಾಟನಿಗೆ ತಿಳಿಯಿತು. ಅಲ್ಲಿದ್ದ ಕೆಲವರು ಸಾಮ್ರಾಟನಿಗೆ ಈ ಕೃತ್ಯವನ್ನು ಬಂದಾ ಸಿಂಗ್‌ನ ಒಡನಾಡಿಗಳಾಗಿರುವ ವಂಜಾರರೇ ಮಾಡಿರುವರೆಂದು ಹೇಳಿದರು. ಇನ್ನು ಕೆಲವರು ಇದು ನಹನ್ ರಾಜ್ಯದ ಜನರ ಕೆಲಸವೇ ಇರಬೇಕೆಂದು ನಂಬಿದ್ದರು.(5)

**ರೋಪರ್‌ನಲ್ಲಿ ದಂಡು ತೆರೆಯುವ ಯೋಜನೆ**

1711 ರ ಏಪ್ರಿಲ್ 22 ರಿಂದ ಸಾಮ್ರಾಟನು ಸಟ್ಲೆಜ್ ನದಿಯ ಹತ್ತಿರವಿದ್ದು, ತಾನು ಪಟ್ಟಕ್ಕೆ ಬಂದ ಐದನೆಯ ವರ್ಷದ ಸಮಾರಂಭವನ್ನು ಆಚರಿಸುವ ಬಗ್ಗೆ ಇಂಗಿತ ವ್ಯಕ್ತಪಡಿಸಿದ. ಸಂಭ್ರಮಾಚರಣೆಗೆ ವಿಶಾಲವಾದ ವೇದಿಕೆಯನ್ನು ರೋಪರ್‌ನಲ್ಲಿ ಕಟ್ಟಿಸುವುದಾಗಿ ಘೋಷಿಸಿದ.

ಸಾಮ್ರಾಟನು ಈ ಆಜ್ಞೆಯನ್ನು ಹೊರಡಿಸಿದ್ದೇನೋ ಸರಿ! ಆದರೆ ಅವನ ಮನದಾಳದಲ್ಲಿ ಬಂದಾ ಸಿಂಗ್ ಬಗ್ಗೆ ನಿರಂತರವಾಗಿ ಭೀತಿ ಮನೆ ಮಾಡಿತ್ತು. ಮುಘಲರು ತಾಣೇಸರ್, ಕುಂಜಪುರ್, ಶಹಬಾದ್, ಸರ್ಹಿಂದ್ ಮೊದಲಾದ ಸ್ಥಳಗಳನ್ನು ಸಿಕ್ಖರಿಂದ ಬಿಡಿಸಿ ವಶಪಡಿಸಿಕೊಂಡಿದ್ದರೂ, ಸಾಮ್ರಾಟನಿಗೆ ಮನಶ್ಶಾಂತಿ ಇರಲಿಲ್ಲ. ಮುಘಲರು ಲೋಹಗಡ ಕೋಟೆಯನ್ನು ವಶಪಡಿಸಿಕೊಂಡಿದ್ದಾರೆಂದು ಸಾಮ್ರಾಟ ಭಾವಿಸಿದ್ದ. (ಆದರೆ ಅವರು ವಶಪಡಿಸಿಕೊಂಡಿದ್ದು ಲೋಹಗಡದ ಮೊದಲನೆಯ ಬೆಟ್ಟವನ್ನು ಮಾತ್ರ). ಆದರೆ ಲೋಹಗಡ ಕೋಟೆಯ ಇತರ ಬೆಟ್ಟಗಳಲ್ಲಿ, ಲೋಹಗಡ ಮತ್ತು ಸಧೌರ ಪ್ರದೇಶದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸಿಕ್ಖರು ಇನ್ನೂ ಅಂಕುಶವಿಲ್ಲದೆ ತಿರುಗಾಡುತ್ತಿರುವ ಸುದ್ದಿ ಸಾಮ್ರಾಟನಿಗೆ ತಲುಪಿತು. ಕೆಲವು ಹಿಂದೂಗಳು ಸಿಕ್ಖರಿಗೆ ಸಹಕಾರ ನೀಡುತ್ತಿದ್ದರು. ಮುಸಲ್ಮಾನರು ಭಯಗ್ರಸ್ತರಾಗಿದ್ದರು.

ಬಂದಾ ಸಿಂಗ್ ಬೆಟ್ಟ ಸಾಲಿನ ರಾಜರುಗಳನ್ನು ತನ್ನ ಹತೋಟಿಗೆ ತೆಗೆದುಕೊಂಡಿರುವ ಬಗ್ಗೆ ಸಾಮ್ರಾಟನಿಗೆ ವರದಿಗಳು ಬರಲಾರಂಭಿಸಿದವು. ಇವೆಲ್ಲವೂ ಸಾಮ್ರಾಟನೆದೆಯಲ್ಲಿ ಭೀತಿ ಹುಟ್ಟಲು ಕಾರಣವಾದವು.

1711 ರ ಏಪ್ರಿಲ್ 22 ರಂದು ಸಾಮ್ರಾಟನು ರಾಜಕುಮಾರರ ಸಭೆ ನಡೆಸಿದನು. ಅವನ ಜೊತೆಯಿದ್ದ ಶ್ರೀಮಂತ ಮುಸ್ಲಿಂ ಅಮೀರರಿಗೆ, ತಾನು ರೋಪರ್‌ನಲ್ಲಿ ದಂಡನ್ನು ಸ್ಥಾಪಿಸಲು ನಿರ್ಧರಿಸಿರುವುದಾಗಿ ತಿಳಿಸಿದನು. ತಮ್ಮ ಮಹಲುಗಳನ್ನು ಅಲ್ಲಿ ಕಟ್ಟಲು ಅಮೀರರಿಗೆ ಸೂಚಿಸಿದ. ರೋಪರ್ ನಗರಕ್ಕೆ ಸಾಮ್ರಾಟನು ಜಹಂಗೀರ್‌ನಗರ ಎಂದು ಹೆಸರಿಡುವ ಬಗ್ಗೆ ಸಹ ಹೇಳಿದ. ಲಾಹೋರ್ ಮತ್ತು ಶಹಜಹಾನ್‌ಪುರ (ದೆಹಲಿ)– ಇವು ರೋಪರ್‌ಗೆ ಸಮಾನ ದೂರದಲ್ಲಿರುವುದನ್ನು

ಸಾಮ್ರಾಟನು ಅವರ ಗಮನಕ್ಕೆ ತಂದನು. ಇಲ್ಲಿ ದಂಡನ್ನು ಸ್ಥಾಪಿಸುವುದರಿಂದ ಬೆಟ್ಟಗಳಿಗೆ ಹೋಗುವ ದಾರಿಗಳನ್ನೂ ಮುಚ್ಚಬಹುದು. ಅದರಿಂದ ಬೆಟ್ಟ ಸಾಲಿನ ರಾಜರು ಬಂದಾ ಸಿಂಗ್‌ಗೆ ನೆರವಾಗುವುದು ತಪ್ಪುತ್ತದೆ ಮತ್ತು ಬಂದಾ ಸಿಂಗ್ ಬೆಟ್ಟ ಸಾಲಿನ ಕಡೆ ತಪ್ಪಿಸಿಕೊಂಡು ಹೋಗುವುದೂ ಅಸಾಧ್ಯವಾಗುತ್ತದೆಂಬ ಉದ್ದೇಶ ಸಾಮ್ರಾಟನದ್ದಾಗಿತ್ತು.[6]

ಬಂದಾ ಸಿಂಗ್ ಸುಲಭವಾಗಿ ಸೋಲಿಸಲಾಗದ ಒಂದು ದೊಡ್ಡ ಶಕ್ತಿಯೆಂದು ಸಾಮ್ರಾಟ ನಂಬಿದ್ದನು ಎನ್ನುವುದನ್ನು ಅವನ ಈ ಹಂಚಿಕೆ ಸೂಚಿಸುತ್ತದೆ. ಬಂದಾ ಸಿಂಗ್ ಲೋಹಗಡವನ್ನು ತಾತ್ಕಾಲಿಕವಾಗಿ ತೊರೆದಿದ್ದು. ಮುಘಲ್ ಸೇನೆ ಡಾಬರ್ ಪ್ರದೇಶವನ್ನು ತೊರೆದ ನಂತರ ಮತ್ತೆ ಅವನು ಅಲ್ಲಿಗೆ ಆಗಮಿಸುತ್ತಾನೆ ಎಂಬುದು ಸಾಮ್ರಾಟನಿಗೆ ತಿಳಿದಿತ್ತು.

**ದೆಹಲಿಯನ್ನು ವಶಪಡಿಸಿಕೊಳ್ಳಲು ಬಂದಾ ಸಿಂಗ್ ಯೋಜಿಸುತ್ತಿದ್ದಾನೆಂಬ ಗುಮಾನಿ.**

1711 ರ ಮೇ 20 ರಂದು ಭಗವಾನ್ ದಾಸ್ ಎಂಬ ಸುದ್ದಿ ವರದಿಗಾರ ಚಕ್ರವರ್ತಿಗೆ ಒಂದು ಸುದ್ದಿ ಕಳುಹಿಸಿದ. ಅದರ ಪ್ರಕಾರ ಬಂದಾ ಸಿಂಗ್ ಬಟಲ ಪ್ರದೇಶಕ್ಕೆ ಹಿಂದಿರುಗಿದ್ದು, ಬಟಲ ಪಟ್ಟಣದಿಂದ ಆರು ಕಿ.ಮೀ ದೂರದ ಅಚಲ್ (ಅಚಲ್ ವಾಟಾಲ) ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದ. ರಾಮ್‌ಸಿಂಗ್ ಹೆಸರಿನ ಸಿಖ್ ವ್ಯಕ್ತಿ, ಜಮ್ಮುವಿನ ಬೆಟ್ಟಗಳಿಂದ ಬಂದಾ ಸಿಂಗ್‌ನನ್ನು ಕೂಡಿಕೊಳ್ಳಲು ತನ್ನ ಏಳು ಸಾವಿರ ಸೈನಿಕರೊಡನೆ ಆಗಮಿಸಿದ್ದಾನೆಂದು ಮತ್ತೊಬ್ಬ ಮಾಹಿತಿದಾರ ಸುದ್ದಿ ಕಳುಹಿಸಿದ. ಯಾವುದೇ ಹಿಂದು ಅಥವಾ ಮುಸಲ್ಮಾನನಾದರೂ ಸರಿಯೇ, ಬಂದಾ ಸಿಂಗ್‌ನನ್ನು ಭೇಟಿ ಮಾಡಿ ಸೈನ್ಯಕ್ಕೆ ಸೇರುವ ಇಂಗಿತ ವ್ಯಕ್ತಪಡಿಸಿದರೆ, ಅಂಥವರನ್ನು ಬಂದಾ ಸಿಂಗ್ ಸೈನ್ಯಕ್ಕೆ ಭರ್ತಿ ಮಾಡುತ್ತಿರುವನೆಂದೂ ಮತ್ತೊಬ್ಬ ವರದಿಗಾರ ಸಾಮ್ರಾಟ ಬಹದ್ದೂರ್ ಶಾ ಗೆ ಸುದ್ದಿ ರವಾನಿಸಿದ. ಮುಘಲ್ ಸೇನೆ ತಮ್ಮತ್ತ ನುಗ್ಗಿ ಬಂದಾರೆ. ನೀವು ಅವರ ವಿರುದ್ಧ ಹೋರಾಡಿ; ಇಲ್ಲದಿದ್ದರೆ, ಲಖಿ ಜಂಗಲ್ ಮತ್ತು ಅಜ್ಮೀರ್ ಮೂಲಕ ಶಹಜಹಾನ್‌ಬಾದ್ (ದೆಹಲಿ) ಕಡೆಗೆ ಮುನ್ನಡೆದು, ನಂತರ ರಾಜಧಾನಿಯನ್ನು ಆಕ್ರಮಿಸಿಕೊಳ್ಳಿ ಎಂದು ಬಂದಾ ಸಿಂಗ್ ಸಿಖ್ ಸೈನಿಕರಿಗೆ ಹೇಳಿರುವನೆಂಬ ವಿಷಯವೂ ಆ ಸುದ್ದಿಯಲ್ಲಿತ್ತು. ಈ ಸುದ್ದಿ ಸಾಮ್ರಾಟನನ್ನು ಮತ್ತಷ್ಟು ವ್ಯಾಕುಲಕ್ಕೆ ದೂಡಿತು.

ಮೇ 25 ರಂದು ಬಿಸ್ತ್–ದಾವೋಬ್‌ನ ಉಪ ಸೇನಾಧಿಪತಿಯಾಗಿ ಇಸ್ಸಾ ಖಾನ್‌ನನ್ನು ನೇಮಿಸಿ ಸಾಮ್ರಾಟ ಬಹದ್ದೂರ್ ಶಾ ಆಜ್ಞೆ ಹೊರಡಿಸಿದ. ಮೇ 30 ರಂದು ಹೋಶಿಯಾರ್ ಖಾನ್‌ನ ಕೇಂದ್ರ ಸ್ಥಾನವಾದ ಹೋಶಿಯಾರ್‌ಪುರಕ್ಕೆ ಬಹದ್ದೂರ್ ಶಾ ಭೇಟಿ ನೀಡಿದ. ಇಲ್ಲಿ ಕುಮೋನ್‌ನ ರಾಜ ಜಗತ್‌ಸಿಂಗ್, ತನ್ನ ಸೇನೆಯು ತರಿದ ಸಿಖ್ ಮಂದಿಯ 25 ತಲೆಗಳನ್ನು ಚಕ್ರವರ್ತಿಯ ಮುಂದೆ ಹಾಜರುಪಡಿಸಿದ. ಸಾಮ್ರಾಟನು ಆತನಿಗೆ ಪ್ರಶಸ್ತಿ ನೀಡಿ ಸತ್ಕರಿಸಿ, ತಲೆಗಳನ್ನು ಕೂಡು ರಸ್ತೆಯ ಹತ್ತಿರ ಎಸೆಯಲು ಆದೇಶಿಸಿದ.

**ಪಸ್ರೂರ್ ಹತ್ತಿರ ಮುಘಲ್ ಮತ್ತು ಸಿಖ್ ಸೈನ್ಯಗಳ ನಡುವಿನ ಯುದ್ಧ**

1711 ರ ಮೇ ತಿಂಗಳ ಕೊನೆಯ ವಾರದಲ್ಲಿ ಸಿಖ್ ಸೈನ್ಯವು ಪರ್ಸರೂರ್ (ಈಗಿನ ಪಸ್ರೂರು) ಹತ್ತಿರದ ಬೆಟ್ಟದಲ್ಲಿ ಬೀಡು ಬಿಟ್ಟಿತ್ತು. ಸಿಖ್ ಸೈನ್ಯವನ್ನು ಸಂಪೂರ್ಣವಾಗಿ ನಾಶಪಡಿಸಲು ಸಾಮ್ರಾಟನು ಮಹಮ್ಮದ್ ಅಮೀನ್ ಖಾನ್ ಮತ್ತು ಗಾಜಿ ಖಾನ್‌ಗೆ ಆದೇಶಿಸಿದ್ದನು. ಪಸ್ರೂರು ಹತ್ತಿರ ಸಿಖ್ ಸೇನೆ ಬೀಡುಬಿಟ್ಟಿರುವ ಸುದ್ದಿ ಅವರಿಗೆ ತಿಳಿಯಿತು.[7] ಅವರು ತಕ್ಷಣವೇ ಹೊರಟು

ಮೇ 31 ರಂದು ಸಾಯಂಕಾಲ ಪರ್ಸೂರು ತಲುಪಿದರು. ಮಾರನೆಯ ದಿನ ಮುಘಲರ ಮತ್ತು ಸಿಕ್ಖರ ಸೈನ್ಯದ ನಡುವೆ ಘೋರವಾದ ಯುದ್ಧ ನಡೆಯಿತು. ದೌಲತ್ ಮುಯಿನ್‌ನ ಮಗ ಇಸ್ಸಾಖಾನ್ ಸಹ ಮುಘಲರ ಪರವಾಗಿ ಯುದ್ಧಕ್ಕೆ ಸೇರಿಕೊಂಡ. ಹಲವಾರು ಗಂಟೆಗಳ ಕಾಲ ಯುದ್ಧ ನಡೆಯಿತು. ಮುಘಲರ ಸೇನೆಯ ದೊಡ್ಡ ಪ್ರಮಾಣವನ್ನು ಕಂಡ ಸಿಕ್ಖರು, ತಾವು ಅವರಿಗೆ ಸಾಟಿಯಿಲ್ಲವೆಂದು ಮನಗಂಡು ಜಮ್ಮುವಿನ ರಾಜ ಧ್ರುವ ದೇವ್‌ನ ಸಾಮ್ರಾಜ್ಯದೆಡೆಗೆ ಓಡಿಹೋದರು.

ಸಿಖ್ ಸೈನಿಕರು ತನ್ನ ಸಾಮ್ರಾಜ್ಯವನ್ನು ಪ್ರವೇಶಿಸಿರುವ ಸುದ್ದಿ ತಿಳಿದ ಧ್ರುವ ದೇವ್, ಸಿಕ್ಖರ ಮೇಲೆ ಆಕ್ರಮಣ ಮಾಡಲು ತನ್ನ ಸೈನ್ಯವನ್ನು ಅಟ್ಟಿದ. ರಾಜೌರಿಯ ದಂಡನಾಯಕ ಅಜ್ಮತುಲ್ಲಾಖಾನ್ ಸಹ ಸಿಕ್ಖರನ್ನು ಬಲಿ ಹಾಕಲು ತನ್ನ ಸೈನ್ಯವನ್ನು ಹೊರಡಿಸಿದ. ಎತ್ತರದ ಬೆಟ್ಟಗಳ ಕಡೆ ಓಡುವುದು ಬಿಟ್ಟರೆ ಸೈನ್ಯಕ್ಕೆ ಬೇರೆ ಆಯ್ಕೆ ಇರಲಿಲ್ಲ. ಸಿಕ್ಖರ ಮತ್ತೊಂದು ತಂಡ ಕತುವ ಮತ್ತು ಪರೋಲ್ ಹತ್ತಿರ ಕಾದಾಡಬೇಕಾಯಿತು. ಈ ಎಲ್ಲ ಕಾದಾಟಗಳಲ್ಲಿ ಸಿಖ್ ಪಡೆಯ 500 ಮಂದಿ ಹತರಾದರು. ಹತರಾದವರಲ್ಲಿ ಬಾಬಾ ಬಂದಾ ಸಿಂಗ್ ಸಹ ಸೇರಿದ್ದಾನೆಂಬ ಸುದ್ದಿ ಹಬ್ಬಿತು. ಆಗ ಹೆಣಕ್ಕಾಗಿ ಹುಡುಕಾಟ ನಡೆಸಿದರು. ಬಂದಾ ಸಿಂಗ್‌ನ ಶವ ಸಿಗಲಿಲ್ಲ. ಅವರಿಗೆ ತಲುಪಿದ್ದು ಸುಳ್ಳು ಸುದ್ದಿ ಎಂಬುದು ಸ್ಪಷ್ಟವಾಯಿತು.

ಈ ಯುದ್ಧಗಳ ಸುದ್ದಿಯು ಸಾಮ್ರಾಟನಿಗೆ ಜೂನ್ 4 ರಂದು ತಿಳಿಯಿತು. ಸಂತುಷ್ಟನಾದ ಸಾಮ್ರಾಟ, ಮಹಮ್ಮದ್ ಅಮೀನ್ ಖಾನ್‌ಗೆ ಉಡುಗೊರೆಗಳನ್ನು ಕಳುಹಿಸಿ ಪುರಸ್ಕರಿಸಿದ. ಗಾಜಿ ಖಾನ್ ಮತ್ತು ಇಸ್ಸಾಖಾನ್ ಅವರನ್ನು ಸಹ ಸಾಮ್ರಾಟ ಉಚಿತ ಬಹುಮಾನಗಳಿಂದ ಸನ್ಮಾನಿಸಿದ.(8)

1711 ರ ಜೂನ್ 7 ರಂದು ಜಮ್ಮುವಿನ ರಾಜ ಧ್ರುವ ದೇವ್ ಮತ್ತು ಸಯ್ಯದ್ ಅಜ್ಮತುಲ್ಲಾ ಖಾನ್, ಸಿಖ್ ಸೈನ್ಯವನ್ನು ಬೆನ್ನಟ್ಟುತ್ತಿರುವ ಸುದ್ದಿ ಸಾಮ್ರಾಟನಿಗೆ ತಲುಪಿತು. ಮಹಮ್ಮದ್ ಅಮೀನ್ ಖಾನ್ ಮತ್ತು ಗಾಜಿ ಖಾನ್ ಸಹ ಅವರೊಡನೆ ಇದ್ದರು. ಈ ನಾಲ್ವರ ಸೈನ್ಯವು ಸಿಖ್ ಸೈನ್ಯವನ್ನು ಮೂರು ಕಡೆಯಿಂದ ಸುತ್ತುವರೆಯಿತು. ಇದರಿಂದ ಬಂದಾ ಸಿಂಗ್‌ನನ್ನು ಬಹುಬೇಗ ಬಂಧಿಸಬಹುದೆಂಬ ಭರವಸೆ ಸಾಮ್ರಾಟನಲ್ಲಿ ಮೂಡಿತು. ಆದರೆ ಸಿಖ್ ಸೈನ್ಯ ಮತ್ತೊಮ್ಮೆ ತಪ್ಪಿಸಿಕೊಂಡು ವಜೀರಾಬಾದ್ ಕಡೆ ಓಡಿ ಹೋಯಿತೆಂಬ ಸುದ್ದಿ ಸಾಮ್ರಾಟನ ಆಸೆಗೆ ತಣ್ಣೀರೆರಚಿತು. ಅಲ್ಲಿಯೂ, ವಜೀರಾಬಾದ್‌ನ ದಂಡನಾಯಕ ಅಜರ್ ಖಾನ್ ತನ್ನೆಲ್ಲ ಪಡೆಯನ್ನು ಬಳಸಿ ಸಿಕ್ಖರು ತನ್ನ ಪ್ರದೇಶವನ್ನು ಬಿಟ್ಟು ಓಡುವಂತೆ ಮಾಡಿದ. ಅಜರ್ ಖಾನ್‌ನ ಕ್ರಮವನ್ನು ಕೇಳಿದ ಸಾಮ್ರಾಟ ಆತನಿಗೂ ಉಚಿತ ಉಡುಗೊರೆಗಳನ್ನು ಕಳುಹಿಸಿಕೊಟ್ಟ.(9)

ಆ ಸಮಯದಲ್ಲಿ ಬಹದ್ದೂರ್ ಶಾ ಲಾಹೋರ್ ಕಡೆ ಪ್ರಯಾಣ ಬೆಳೆಸಿದ್ದನು. ಜೂನ್ 9 ರಂದು ಬಜವಾಡ ಕೋಟೆಯಲ್ಲಿದ್ದ. (ಆಗ ಹೋಶಿಯಾರ್‌ಪುರ ಸಣ್ಣ ಗ್ರಾಮ, ಬಜವಾಡ ದೊಡ್ಡ ನಗರವಾಗಿತ್ತು). ಒಂದೆರಡು ದಿನ ಬಜವಾಡದಲ್ಲಿ ಕಳೆದು ನಂತರ ಸಾಮ್ರಾಟನು ಲಾಹೋರ್‌ನತ್ತ ಮತ್ತೆ ಪ್ರಯಾಣ ಮುಂದುವರೆಸಿದ. 1711 ರ ಜೂನ್ 13 ರಂದು ತಿಂಗಳಿಗೆ ನಾಲ್ಕು ರೂಪಾಯಿ ಸಂಬಳದ ಮೇಲೆ ಎರಡು ಸಾವಿರ ಕಾಲಾಳುಗಳನ್ನು, ತಿಂಗಳಿಗೆ 25 ರೂಪಾಯಿ ಸಂಬಳದ ಮೇಲೆ ಎರಡು ಸಾವಿರ ರಾವುತರನ್ನು ನೇಮಿಸಿ ಸೈನ್ಯವನ್ನು ಕಟ್ಟಿದ ಸಾಮ್ರಾಟನು ಈ ಸೈನ್ಯವನ್ನು ಸಿಕ್ಖರ ಸೈನ್ಯವನ್ನು ಬೆನ್ನಟ್ಟಲು ಕಳುಹಿಸಿಕೊಟ್ಟ.

1711 ರ ಜೂನ್ 16 ರಂದು, ಸಿಕ್ಖರು ಸಧೌರದ ಕಡೆ ಬರುತ್ತಿದ್ದಾರೆಂದು, ಅವರ

ಮುಖ್ಯಗುರಿ ಲೋಹಗಡವನ್ನು ಮರುವಶಮಾಡಿಕೊಳ್ಳುವುದಾಗಿದೆಯೆಂಬ ಸುದ್ದಿಯು ಸಾಮ್ರಾಟನಿಗೆ ತಲುಪಿತು. ಸಿಕ್ಖರು ಬೆಟ್ಟದ ಹಾದಿಗಳಲ್ಲಿ ಚಲಿಸುತ್ತಿರುವ ಸುದ್ದಿ ಸಹ ತಿಳಿಯಿತು. ಜಹಂದರ್ ಖಾನ್ ಮತ್ತು ಇಸ್ಲಾ ಖಾನ್ ಅವರುಗಳು ಸಧೌರ ಕಡೆ ಹೋಗಿ ಸಿಕ್ಖರನ್ನು ಬಗ್ಗು ಬಡಿಯಲು ಸಾಮ್ರಾಟ್ ಬಹದ್ದೂರ್ ಶಾ ಆದೇಶ ಕಳುಹಿಸಿದನು. ರಾಜ ಸೇನೆಯ ಎರಡೂ ತುಕಡಿಗಳು ಸಧೌರ ನಗರವನ್ನು ತಲುಪಿದಾಗ ಅಲ್ಲಿ ಯಾವೊಬ್ಬ ಸಿಖ್ ವ್ಯಕ್ತಿಯೂ ಇರಲಿಲ್ಲ. ಆ ಸಮಯದಲ್ಲಿ ಸಿಕ್ಖರು ಬೆಟ್ಟಗಳಲ್ಲಿ ತಂಗಿದ್ದರು. ಬಂದಾ ಸಿಂಗ್ ಸಹ ಅವರ ಜೊತೆಯಲ್ಲಿದ್ದನು. ಸಿಕ್ಖರು ಬೇಕೆಂದೇ ಈ ಸುಳ್ಳು ಸುದ್ದಿಗಳನ್ನು ಹರಿಬಿಟ್ಟಿದ್ದರು. ಮುಘಲರ ಸೈನ್ಯವನ್ನು ದಿಕ್ಕುದಿಕ್ಕಿಗೆ ಚದುರಿಸುವುದು ಬಂದಾ ಸಿಂಗ್‌ನ ತಂತ್ರವಾಗಿತ್ತು.

ಈ ಸುದ್ದಿಯನ್ನು ತಿಳಿದ ಸಾಮ್ರಾಟನು ಚಡಪಡಿಸುತ್ತಾ, ಸಿಖ್ ವಿರೋಧಿ ಆಂದೋಲನವನ್ನು ತಾನೇ ಮುನ್ನಡೆಸಲು ಲಾಹೋರ್‌ನಲ್ಲಿ ಉಳಿಯಲು ತೀರ್ಮಾನಿಸಿದನು. ಸಾಮ್ರಾಟನು ಬಹದ್ದೂರ್ ಶಾ ಮತ್ತು ಸಿಖ್ ಸೈನ್ಯದ ಬಗ್ಗೆ ಭಯಪಟ್ಟಿರುವುದನ್ನು ಕಂಡ ಮುಘಲ್ ಸೈನಿಕರೂ ನಿರುತ್ಸಾಹಗೊಂಡರು. 'ಬಂದಾ ಸಿಂಗ್ ಬಂದಾ, ಬಂದಾ ಸಿಂಗ್ ಬರುತ್ತಿದ್ದಾನೆ' ಎಂಬ ಸುದ್ದಿಗಳು ಸೈನಿಕರನ್ನು ಮತ್ತಷ್ಟು ಕುಸಿಯುವಂತೆ ಮಾಡಿದವು. ಬಂದಾ ಸಿಂಗ್‌ನ ಹೆಸರು ಕೇಳಿದರೇ ಬಿಳಿಚಿ ಹೋಗುವಷ್ಟು ಪರಿಸ್ಥಿತಿ ಭಯಾನಕವಾಗಿತ್ತು.

1711 ರ ಜುಲೈ 11 ರಂದು ಗಾಜಿಖಾನ್ ಸಂದೇಶವೊಂದನ್ನು ಸಾಮ್ರಾಟನಿಗೆ ಕಳುಹಿಸಿ, ಬಂದಾ ಸಿಂಗ್ ಈಗ ತನ್ನ ಕೈಗೆ ಸಿಗುವ ಸಾಧ್ಯತೆಯಿದ್ದು ಅವನನ್ನು ಕೊಲ್ಲಲು ಇಲ್ಲವೇ ಬಂಧಿಸಲು ತನ್ನ ಶಿಬಿರಕ್ಕೆ ಹೆಚ್ಚುವರಿ ಪಡೆಯನ್ನು ಕಳುಹಿಸಿಕೊಡಲು ಮನವಿ ಮಾಡಿದ. ಈ ಸಂದೇಶ ತಲುಪಿದಾಗ ಸಾಮ್ರಾಟನ ಹತ್ತಿರ ಮಹಮ್ಮದ್ ಅಮೀನ್ ಖಾನ್ ಉಪಸ್ಥಿತನಿದ್ದ. ಹಣ, ಆಯುಧ ಮತ್ತು ಮದ್ದು-ಗುಂಡುಗಳ ಹಿಂದೆ ಗಾಜಿಖಾನ್ ಬಿದ್ದಿದ್ದಾನೆಂದು ಆತ ಸಾಮ್ರಾಟನಿಗೆ ಮನವರಿಕೆ ಮಾಡಿದ.[10] ಗಾಜಿ ಖಾನ್ ಹತ್ತಿರ ಈಗಾಗಲೇ ಎರಡು ಸಾವಿರ ಸೈನಿಕರಿದ್ದರು. ಹಾಗಾಗಿ ಸಾಮ್ರಾಟನು ಅವನ ಸಂದೇಶಕ್ಕೆ ಪ್ರತಿಕ್ರಿಯಿಸಲಿಲ್ಲ.

ಬಹದ್ದೂರ್ ಶಾ ಲಾಹೋರ್‌ನತ್ತ ತನ್ನ ಪ್ರಯಾಣವನ್ನು ಮುಂದುವರೆಸಿದ. 1711 ರ ಜುಲೈ 19 ರಂದು ಕಹ್ನುವಾನ್ ತಲುಪಿದ. ಅಲ್ಲಿಗೆ ಹತ್ತಿರದ ಕಾಡುಗಳಲ್ಲಿ ಒಂದೆರಡು ದಿನ ಬೇಟೆಯಾಡಲು ನಿರ್ಧರಿಸಿದ. ಅವನ ಮುಂದಿನ ನಿಲುಗಡೆ ಕಲನೂರು.[11] ಜುಲೈ 30 ರಂದು ಕಲನೂರು ತಲುಪಿದ ಸಾಮ್ರಾಟನು ಸಿಖ್ ಸಮಸ್ಯೆ ಕುರಿತು ತನ್ನ ಸೇನಾಧಿಕಾರಿಗಳ ಜೊತೆ ಚರ್ಚಿಸಿ ಮಾರನೆಯ ದಿನ ಲಾಹೋರ್ ನತ್ತ ಪ್ರಯಾಣವನ್ನು ಮುಂದುವರೆಸಿದ.[12]

---

**ಅಡಿ ಟಿಪ್ಪಣಿಗಳು**

1. ಅಕ್ಬರತ್-ಐ-ದರ್ಬಾರ್-ಐ-ಮೌಲ ನಮೂದು 01.01.1711
2. ಅಕ್ಬರತ್-ಐ-ದರ್ಬಾರ್-ಐ-ಮೌಲ್ಲದ ನಮೂದು 06.03.1711
3. ಈ ಹೆಸರುಗಳು ಅಕ್ಬರತ್-ಐ-ದರ್ಬಾರ್-ಐ-ಮೌಲದ ಬೇರೆ ಬೇರೆ ನಮೂದುಗಳಲ್ಲಿ ಕಾಣಿಸಿಕೊಳ್ಳುತ್ತವೆ.

4. ದಿನಾಂಕ 24.03.1711 ರಂದು ಜೈಪುರದ ರಾಜನಿಗೆ ಪಂಚೋಲಿ ಜಗಜೀವನ್‌ದಾಸ್ ಬರೆದ ಪತ್ರ (Rajsthani Documents on Banda Singh Bahadur. Ed.Dr.Balwant Singh Dhallon).
5. 18.04.1711 ರಂದು ಜೈಪುರದ ರಾಜನಿಗೆ ಭಿಕಾರಿದಾಸ್ ಬರೆದ ಪತ್ರ (Rajsthani Documents on Banda Singh Bahadur. Ed.Dr.Balwant Singh Dhallon).
6. ಪುರಾತನ ಕಾಲದಲ್ಲಿ ಈ ಪಟ್ಟಣದ ಹೆಸರು ಪೋರಸ್-ಪುರ ಎಂದಾಗಿತ್ತು. ರಾಜ ಪೋರಸ್ (330 ಬಿ.ಸಿ) ನಿಂದ ಆ ಹೆಸರು ಮುಂದೆ ಪರ್ಸರೂರು ಆಗಿ ಈಗ ಪಸ್ರೂರ್ ಆಗಿದೆ.
7. ಅಕ್ಬರತ್-ಐ-ದರ್ಬಾರ್-ಐ-ಮೌಲ್ಲದ ನಮೂದು 04.06.1711
8. ಅಕ್ಬರತ್-ಐ-ದರ್ಬಾರ್-ಐ-ಮೌಲ್ಲದ ನಮೂದು 07.06.1711
9. ಅಕ್ಬರತ್-ಐ-ದರ್ಬಾರ್-ಐ-ಮೌಲ್ಲದ ನಮೂದು11.07.1711
10. ಅಕ್ಬರತ್-ಐ-ದರ್ಬಾರ್-ಐ-ಮೌಲ್ಲದ ನಮೂದು 19.07.1711
11. ಅಅಕ್ಬರತ್-ಐ-ದರ್ಬಾರ್-ಐ-ಮೌಲ್ಲದ ನಮೂದು 30.07.1711

# ಅಧ್ಯಾಯ 8

# ಲೋಹಗಡ ಕೋಟೆಯನ್ನು ತೊರೆದ ನಂತರ ಬಂದಾ ಸಿಂಗ್‌ನ ಸ್ಥಿತಿ

### ಬೆಟ್ಟ ಪ್ರದೇಶಗಳನ್ನು ನಿಯಂತ್ರಣಕ್ಕೆ ತೆಗೆದುಕೊಂಡ ಬಂದಾ ಸಿಂಗ್

ಲೋಹಗಡವನ್ನು ತೊರೆದ ನಂತರ ಬಂದಾ ಸಿಂಗ್ ವಿಶ್ರಮಿಸಲಿಲ್ಲ. ಹಿರಿಯ ನಾಯಕರೊಡನೆ ಸಮಾಲೋಚಿಸಿದ ನಂತರ ಪಂಜಾಬ್‌ನಲ್ಲಿ ಕೆಲವು ಕಾಲ ಯಾವುದೇ ಯುದ್ಧವನ್ನು ಆರಂಭಿಸದಿರಲು ನಿರ್ಧರಿಸಿದನು. ಅವರೆಲ್ಲ ಬೆಟ್ಟಗಳ ಕಡೆ ಪ್ರಯಾಣಿಸಲು ನಿರ್ಧರಿಸಿದರು. ಅವರು ಮೊದಲು ದಾಳಿ ಮಾಡಿದ್ದು, ಕೆಹ್ಲೂರು ರಾಜ್ಯದ ರಾಜಧಾನಿ ಬಿಲಾಸ್‌ಪುರದ ಮೇಲೆ. ಆ ರಾಜ್ಯದ ರಾಜ ಅಜ್ಮೀರ್ ಚಂದ್ 1700 ಮತ್ತು 1705 ರ ನಡುವೆ ಆನಂದಪುರ ಮತ್ತು ನಿರ್ಮೋಹಗಡದ ಹತ್ತಿರ ಹಲವಾರು ಬಾರಿ ಗುರು ಗೋವಿಂದ್ ಸಿಂಗ್ ವಿರುದ್ಧ ದಾಳಿ ಮಾಡಿದ್ದನು. ಆತ ಗುರು ಗೋವಿಂದ್ ಸಿಂಗ್ ಮೇಲೆ ದಾಳಿ ಮಾಡಲು ಮುಘಲರ ಸೈನ್ಯವನ್ನು ಪ್ರಚೋದಿಸಿದ್ದನು. ಅದಕ್ಕಾಗಿ ಹಣವನ್ನೂ ನೀಡಿದ್ದನು. 1705 ರಲ್ಲಿ ಗುರುವು ಆನಂದಪುರ ಸಾಹಿಬ್ ತೊರೆಯಲು ಅವನೇ ಕಾರಣ. ಹಾಗೆ ನೋಡಿದರೆ, ಸಿಕ್ಖರು ಅನುಭವಿಸಿದ ಅನೇಕ ಅವಗಡಗಳು ಅವನ ಕೃತ್ಯದಿಂದಾದದ್ದು. ಹಾಗಾಗಿ ವಜೀರ್ ಖಾನ್‌ನಂತೆ ಅವನೂ ಶಿಕ್ಷೆಗೆ ಅರ್ಹನಾಗಿದ್ದ.

ಬಿಲಾಸಪುರದ ಮೇಲೆ ದಾಳಿ ಮಾಡುವ ಮುನ್ನ ಸಿಕ್ಖರ ಅಧಿಪತ್ಯವನ್ನು ಒಪ್ಪಿಕೊಳ್ಳುವಂತೆ ಅಜ್ಮೀರ್ ಚಂದ್‌ಗೆ ಸಂದೇಶವನ್ನು ಕಳುಹಿಸಿದರು. ಆದರೆ ಇದಕ್ಕೆಲ್ಲ ಸೊಪ್ಪು ಹಾಕದ ಸೊಕ್ಕಿನ ಮನುಷ್ಯ ಅಜ್ಮೀರ್ ಚಂದ್ ತನ್ನ ಕೋಟೆಯನ್ನು ಭದ್ರಪಡಿಸಿದ. ಅಜ್ಮೀರ್ ಸಿಂಗ್ ನ ಯುದ್ಧ ಸಿದ್ಧತೆಯನ್ನು ತಿಳಿದ ಬಂದಾ ಸಿಂಗ್ ಅವನಿಗೆ ಪಾಠ ಕಲಿಸಲು ನಿರ್ಧರಿಸಿದನು. ಆಗ ಬಿಲಾಸಪುರ [1] ನಗರವು ಸರೋವರದಿಂದ ಸುತ್ತುವರೆದಿತ್ತು. ಆದರೂ ಸಧೌರ, ಸರ್ಹಿಂದ್‌ನಷ್ಟು ಪ್ರಬಲವಾಗಿರಲಿಲ್ಲ. ಅಲ್ಲದೆ ಸಿಕ್ಖರು ಬಾಡಿಗೆ ಬಂಟರಲ್ಲ. ಅವರು ತಮ್ಮ ಗುರುವಿಗಾಗಿ ಮತ್ತು ಶಿಷ್ಟರಕ್ಷಣೆಗಾಗಿ ಹೋರಾಡುತ್ತಿದ್ದರು.

ಸಿಖ್ ಸೈನ್ಯವು ಬಿಲಾಸಪುರವನ್ನು ತಲುಪಿದಾಗ, ಬೆಟ್ಟದ ಸೈನಿಕರು ಮೇಲಿನಿಂದ ಬಾಣ ಬಿಟ್ಟು, ಗುಂಡುಹಾರಿಸಿ ದಾಳಿ ಮಾಡಿದರು. ಸಿಕ್ಖರು ಅದೆನ್ನಲ್ಲ ಪರಾಕ್ರಮದಿಂದ ಎದುರಿಸಿ ದಿಟ್ಟ ಉತ್ತರ ನೀಡಿದರು. ಬೆಟ್ಟದ ಸೈನಿಕರಿಗೆ ಬಹುಬೇಗನೆ, ಸಿಖ್ ಸೈನಿಕರನ್ನು ಗೆಲ್ಲಲಾಗದೆಂಬ ವಾಸ್ತವ ಮನವರಿಕೆಯಾಗಿ ಅವರು ಶರಣಾಗಬಯಸಿದರು. ಈ ಯುದ್ಧದಲ್ಲಿ 1300 ಬೆಟ್ಟದ ಸೈನಿಕರು ಹತರಾದರು. ಅವರನ್ನು ದೊಡ್ಡ ಕಂದಕದಲ್ಲಿ ಹುಗಿಯಲಾಯಿತು. ಸಿಖ್ ಕಡೆಯೂ ಹಲವರು ಪ್ರಾಣ ತೆತ್ತರು.

ಮಹಾ ಪಾಪಿಷ್ಟನಾದ ಹಾಗೂ ದುಷ್ಕೃತ್ಯವೆಸಗಿದ, ಕ್ರೌರ್ಯದಲ್ಲೂ ವಜೀರ್ ಖಾನ್‌ಗೆ ಸಮನಾದ ಅಜ್ಮೀರ್ ಚಂದ್ ಕೊನೆಗೂ ಶರಣಾದ. ಅವನ ಶರಣಾಗತಿಯನ್ನು ಒಪ್ಪಿಕೊಂಡು ಕ್ಷಮಿಸಿದ ಬಂದಾ ಸಿಂಗ್‌ನ ನಿರ್ಧಾರವನ್ನು ಕೆಲವು ಇತಿಹಾಸಕಾರರು ಆಕ್ಷೇಪಿಸಿರುತ್ತಾರೆ. ಆತ ಮರಣದಂಡನೆಗೆ ಅರ್ಹನೆಂದು ವಾದಿಸುತ್ತಾರೆ. ಕೆಲವರ ಪ್ರಕಾರ ಅಜ್ಮೀರ್ ಚಂದ್ ದಾಳಿ ಮಾಡಿದ್ದು ಆನಂದಪುರ ಸಾಹಿಬ್ ನಗರವನ್ನು ಗುರುಗಳಿಂದ ತೆರವುಗೊಳಿಸಲು ಮಾತ್ರ. ಆದರೆ ಗುರುವಿನ ಕುಟುಂಬದ ಸದಸ್ಯರ ಸಾವಿಗೆ ಆತ ಕಾರಣನಲ್ಲ; ಗುರುವಿನ ಇಬ್ಬರು ಎಳೆಯ ಮಕ್ಕಳು ಮತ್ತು ತಾಯಿಯನ್ನು ಕೊಂದವನು ವಜೀರ್ ಖಾನ್ ಎಂಬುದು ಅವರ ವಾದ.

**ಮಂಡಿಯ ರಾಜನಿಗೆ ಗೌರವ ವಸ್ತ್ರ**

ಕೆಹ್ಲೂರು ರಾಜ್ಯವನ್ನು ಸೋಲಿಸಿದ ಮೇಲೆ ಬಂದಾ ಸಿಂಗ್ ಬೆಟ್ಟಗಳ ಇತರೆ ರಾಜರಿಗೆ ಸಂದೇಶ ಕಳುಹಿಸಿ, ಸಿಕ್ಖರಿಗೆ ನಿಷ್ಠೆಯನ್ನು ಘೋಷಿಸುವಂತೆ ಸೂಚಿಸಿದನು. ಒಬ್ಬರಾದ ನಂತರ ಒಬ್ಬರಂತೆ ಎಲ್ಲ ರಾಜರು ಶರಣಾದರು. ಮಂಡಿಯ ರಾಜ ಸಿದ್ಧಸೇನ್ ಶರಣಾದವರಲ್ಲಿ ಮೊದಲಿಗ. ಹಾಗೆ ನೋಡಿದರೆ, ಈ ರಾಜ್ಯವು ಗುರು ನಾನಕರ ಕಾಲದಿಂದಲೂ, ಸಿಖ್ ಜಗತ್ತಿನ ಭಾಗವಾಗಿತ್ತು. ಬಂದಾ ಸಿಂಗ್ ಮಂಡಿಗೆ ಆಗಮಿಸಿದಾಗ ಅವನಿಗೆ ವೈಭವದ ಸ್ವಾಗತ ಕೋರಲಾಯಿತು. ಪ್ರತಿಯಾಗಿ ಬಂದಾಸಿಂಗ್ ಗೌರವ ವಸ್ತ್ರವನ್ನು ರಾಜನಿಗೆ ನೀಡಿ, ರಾಜ್ಯದ ಯಾವುದೇ ಬಿಕ್ಕಟ್ಟು ಸಮಯದಲ್ಲಿ ನೆರವಾಗುವುದಾಗಿ ಭರವಸೆ ನೀಡಿದ.

ಅದೇ ರೀತಿ ಹರಿಪುರ ಮತ್ತು ಗೂಳೂರಿನ ರಾಜರು ಸಿಕ್ಖರ ಅಧಿಪತ್ಯಕ್ಕೆ ಶರಣಾದರು. ನಹನ್ ರಾಜ ಈಗಾಗಲೇ ಸಿಕ್ಖರಿಗೆ ನೆರವಾಗಿದ್ದ. ಆ ರಾಜ ಸಿಖ್ ಜನಾಂಗಕ್ಕೆ ತೋರಿದ ಸಹಾನುಭೂತಿಯಿಂದ ಕೆರಳಿದ ಬಹದ್ದೂರ್ ಶಾ ಆತನನ್ನು ಬಂದಿಸಿದ್ದ. (ಮುಂದೆ ಅವರು ಪಕ್ಷ ಬದಲಿಸಿ ಮುಘಲರ ಪರ ನಿಂತರು)

**ಕುಲ್ಲು ಬಳಿ ಬಂದಾ ಸಿಂಗ್‌ನ 'ಬಂಧನ'!?**

ಬಂದಾಸಿಂಗ್‌ನ ಮುಂದಿನ ಗುರಿ ಕುಲ್ಲು. ಒಂದು ಜನಪ್ರಿಯ ಕತೆಯ ಪ್ರಕಾರ ಕುಲ್ಲುವಿನ ರಾಜ ಮಾನ್‌ಸಿಂಗ್ ಬಂದಾ ಸಿಂಗ್‌ನನ್ನು ನಂಬಿಸಿ, ವಂಚಿಸಿ ಬಂಧಿಸಿದನು. ಸಾಮ್ರಾಟ ಬಹದ್ದೂರ್ ಶಾ ಮುಂದೆ ಹಾಜರುಪಡಿಸುವ ಉದ್ದೇಶದಿಂದ ಬಂದಾ ಸಿಂಗ್‌ನನ್ನು ಕಬ್ಬಿಣದ ಪಂಜರದಲ್ಲಿಡಿಸಿದನು. ಬಂದಾಸಿಂಗ್ ಬಿಡುಗಡೆಗೊಂಡ ಬಗ್ಗೆ ಎರಡು ಜನಪ್ರಿಯ ಕಥನಗಳಿವೆ. ಮೊದಲನೆಯ ಕಥನದ ಪ್ರಕಾರ ಬಂದಾ ಸಿಂಗ್‌ನ ಬಂಧನದ ಸುದ್ದಿ ಕೇಳಿದ ಕೂಡಲೇ ಮಂಡಿಯ ರಾಜ ಅವನ ಬಿಡುಗಡೆಗೆ ತನ್ನ ಸೇನೆಯನ್ನು ಕಳುಹಿಸಿದ. ಸೇನೆ ಬರುವ ಮೊದಲೇ ಸಿಖ್ ಸೈನ್ಯ ಮುಗಿಬಿದ್ದು ಬಂದಾ ಸಿಂಗ್‌ನನ್ನು ಬಿಡುಗಡೆ ಮಾಡಿತು. ಮತ್ತೊಂದು ಕಥನದ ಪ್ರಕಾರ ಬಂದಾ ಸಿಂಗ್ ತನ್ನ ಮಾಂತ್ರಿಕ ಶಕ್ತಿ ಬಳಸಿ ಪಂಜರದ ಸಮೇತ ಕುಲ್ಲುವಿನಿಂದ ಹಾರಿಬಂದಿದ್ದ.![2] ಪರ್ಶಿಯನ್ ಭಾಷೆಯ ಲಿಖಿತ ಮೂಲಗಳಲ್ಲಾಗಲೀ, ಮುಘಲರ ದಾಖಲೆಗಳಾಗಲೀ ಅಂಥದೊಂದು ಬಂಧನದ ಘಟನೆಯ ಉಲ್ಲೇಖವಿಲ್ಲ. ಅಂಥದ್ದೊಂದು ಸಂಭವಿಸಿದ್ದರೆ ಅದು ಮುಘಲರ ಸಂಭ್ರಮಾಚರಣೆಗೆ ತಕ್ಕ ಘಟನೆಯಾಗಿರುತ್ತಿತ್ತು. ಎಲ್ಲರ ಪಾಲಿಗೂ ದೊಡ್ಡ ದೊಡ್ಡ ಸುದ್ದಿಯಾಗುತ್ತಿತ್ತು.

**ಚಂಬದಲ್ಲಿ ಬಂದಾ ಸಿಂಗ್‌ನ ಮದುವೆ**

ಕುಲ್ಲುವನ್ನು ಗೆದ್ದನಂತರ ಬಂದಾಸಿಂಗ್ ಜಸ್ವನ್ ಸಿಬ ಮತ್ತು ನುರ್‌ಪುರ್ ಅವರುಗಳನ್ನು ತನಗೆ ಕಪ್ಪ ನೀಡುವಂತೆ ಬಂದಾ ಸಿಂಗ್ ಒತ್ತಾಯಿಸಿದ. ಆತನ ಮುಂದಿನ ದೊಡ್ಡ ಕಾರ್ಯವೆಂದರೆ ಚಂಬದ ಮೇಲಿನ ದಾಳಿ. ಚಂಬದ ರಾಜ ಉದಯ ಸಿಂಗ್ ಪ್ರತಿರೋಧಿಸದೆ ಬಂದಾ ಸಿಂಗ್‌ನನ್ನು ತನ್ನ **'ಒಡೆಯ'** ಎಂದು ಅಂಗೀಕರಿಸಿದ. ಬಂದಾಸಿಂಗ್‌ನ ಘನವ್ಯಕ್ತಿತ್ವಕ್ಕೆ ಮನಸೋತ ರಾಜ ಉದಯಸಿಂಗ್ ತನ್ನ ಮಗಳನ್ನು ಮದುವೆಯಾಗುವಂತೆ ಕೋರಿದನು. (1715 ರಲ್ಲಿ ಬಂದಾ ಸಿಂಗ್ ದಸ್ತಗಿರಿಯಾದಾಗ ಈತನ ರಜಪೂತ ಹೆಂಡತಿ ಸುಶೀಲ್‌ಕೌರ್ ಅವನ ಜೊತೆಯಲ್ಲಿಯೇ ಇದ್ದಳು. ಆಕೆ ಆ ವೇಳೆಗೆ ಅವನ ಮಗ ಅಜಯ್‌ಸಿಂಗ್‌ಗೆ ಜನ್ಮ ನೀಡಿದ್ದಳು. ಅವರ ಕಣ್ಣೆದುರೆಯೇ 1716 ಜೂನ್ 9 ರಂದು ದೆಹಲಿಯಲ್ಲಿ ಅಜಯ್‌ಸಿಂಗ್‌ನನ್ನು ಕೊಚ್ಚಿ ಹಾಕಲಾಯಿತು).

**ಜಮ್ಮು ಮತ್ತು ಸುಲ್ತಾನ್‌ಪುರ ಲೋಧಿಯ ದಂಡನಾಯಕನ್ನು ಕೊಂದದ್ದು.**

ಬಂದಾ ಸಿಂಗ್ ಲೋಹಗಡವನ್ನೂ 1710 ಡಿಸೆಂಬರ್ ಒಂದರಂದು ತೊರೆದರೂ, ಮುಂದಿನ ವರ್ಷದ ಮಾರ್ಚ್ ವೇಳೆಗೆ ತನ್ನ ಸಿಖ್ ಸೈನ್ಯವನ್ನು ಪುನಃ ಸಂಘಟಿಸಿದ. 1711 ರ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಜಮ್ಮು ಪ್ರಾಂತ್ಯದ ಗಡಿ ಪಟ್ಟಣವಾದ ರಾಯ್‌ಪುರ್ ಹತ್ತಿರಕ್ಕೆ ಆಗಮಿಸಿದ. ಆಗ ಸಿಖ್ ಸೈನ್ಯವು ರಾಯ್‌ಪುರ ಮತ್ತು ರಸೂಲ್‌ಪುರದ ನಡುವಿನ ಬೆಟ್ಟಗಳಲ್ಲಿ ವಿಶ್ರಮಿಸಿತ್ತು. ಆ ಕಾಲದಲ್ಲಿ ಸುಲ್ತಾನ್‌ಪುರ್ ಲೋಧಿಯು ಮಾಜಿ ಫೌಜುದಾರ ಶಮಸ್‌ಖಾನ್ ತನ್ನ ಚಿಕ್ಕಪ್ಪ ಜಮ್ಮುವಿನ ಫೌಜುದಾರ ಬೈಜಿದ್‌ಖಾನ್ ಭೇಟಿಗಾಗಿ ಆಗಮಿಸಿದ್ದ. (ಫೌಜುದಾರ ಎಂದರೆ ಒಂದು ನಿರ್ದಿಷ್ಟ ಭೂಪ್ರದೇಶದ ಕಾನೂನು ಮತ್ತು ಶಿಸ್ತು ಪಾಲನೆಯ ಹೊಣೆ ಹೊತ್ತ ಅಧಿಪತಿ). ಸಿಖ್ ಸೈನ್ಯ ಜಮ್ಮು ಪ್ರಾಂತ್ಯವನ್ನು ಪ್ರವೇಶಿಸುತ್ತಿರುವ ಸುದ್ದಿ ತಿಳಿದ ತಕ್ಷಣ ಅವರು ದಾಳಿ ನಡೆಸಲು ನಿರ್ಧರಿಸಿದರು. 1710 ರಲ್ಲಿ ಅವರು ಸಿಖ್ ಸೈನ್ಯವನ್ನು ಸರ್ಹಿಂದ್‌ನಲ್ಲಿ ಸೋಲಿಸಿದ್ದರು. ಹಾಗಾಗಿ ಈಗ ಬಹಳ ಹುರುಪಿನಲ್ಲಿದ್ದರು. ಸಿಖ್ ಸೈನ್ಯವನ್ನು ಹುಡುಕಿ ಹೊರಟರು. ಸಿಖ್ ಸೈನಿಕರು ವಿಶ್ರಮಿಸುತ್ತಿದ್ದ ಸ್ಥಳವನ್ನು ತಲುಪಿದ ತಕ್ಷಣವೇ ದಾಳಿ ಆರಂಭಿಸಿದರು. ಇಂಥದ್ದನ್ನು ನಿರೀಕ್ಷಿಸದ ಸಿಖ್ ಸೈನ್ಯ ತಮ್ಮ ಬಲವನ್ನು ವ್ಯರ್ಥಮಾಡಲು ಇಚ್ಛಿಸದೆ ಆ ಸ್ಥಳದಿಂದ ಕಾಲ್ತೆಗೆಯಿತು. ಬಹುಬೇಗನೆ ರಕ್ಷಣೆಯ ದೃಷ್ಟಿಯಿಂದ ಉತ್ತಮವಾಗಿದ್ದ ಮತ್ತೊಂದು ಸ್ಥಳಕ್ಕೆ ಬಂದರು. ಅದು ಪರಿಚಿತ ಪ್ರದೇಶವಾಗಿದ್ದರಿಂದ, ಶಮಸ್ ಖಾನ್ ಮತ್ತು ಬೈಜಿದ್‌ಖಾನ್ ಸಿಖ್ ಸೈನ್ಯವನ್ನು ಗುಡ್ಡಗಳಲ್ಲಿ ಬೆನ್ನಟ್ಟಲು ನಿರ್ಣಯಿಸಿದರು. ದೂರದ ಬೆಟ್ಟಸಾಲಿಗೆ ಬಂದು ತಲುಪಿದಾಗ ಅವರಲ್ಲಿ ಹೆಚ್ಚಿನ ಸೈನಿಕ ಬಲ ಇಲ್ಲದಿರುವುದನ್ನು ಸಿಖ್ ಸೈನ್ಯ ಗುರುತಿಸಿತು. ಸಿಖ್ ಸೈನಿಕರು ಹಠಾತ್ ದಾಳಿ ನಡೆಸಿ ಖಾನ್‌ದ್ವಯರ ಸೈನ್ಯ ಹಿಮ್ಮೆಟ್ಟುವಂತೆ ಮಾಡಿತು. ಈ ಹೋರಾಟದಲ್ಲಿ ಸಿಕ್ಖರು ಶಮಸ್ ಖಾನ್‌ನನ್ನು ಕೊಂದರು. ಬೈಜಿದ್‌ಖಾನ್ ತೀವ್ರವಾಗಿ ಗಾಯಗೊಂಡ.(3) (ಮೂರು ದಿನದ ನಂತರ ಆತನೂ ಸತ್ತನು) ಅವರ ಶವಗಳನ್ನು ಹುಗಿಯಲು ಕಸೂರ್‌ಗೆ ತೆಗೆದುಕೊಂಡು ಹೋದರು. ಈ ಯುದ್ಧದಲ್ಲಿ ಸಿಕ್ಖರು ಅಪಾರ ಸಂಖ್ಯೆಯ ಕುದುರೆಗಳನ್ನು ಮತ್ತು ಶಸ್ತ್ರಗಳನ್ನು ವಶಪಡಿಸಿಕೊಂಡರು. ಈ ಸುದ್ದಿಯು ರೂಪರ್(4) ನಲ್ಲಿದ್ದ ಸಾಮ್ರಾಟನಿಗೆ 1711 ರ ಏಪ್ರಿಲ್ 23 ರಂದು ತಲುಪಿತು.

ಸಿಕ್ಖರನ್ನು ಮಟ್ಟಹಾಕುವ ವಿಚಾರದಲ್ಲಿ ಸಾಮ್ರಾಟ್ ಬಹದ್ದೂರ್ ಶಾ ತೀವ್ರಾಸಕ್ತಿ ಬೆಳೆಸಿಕೊಂಡಿದ್ದನು. ಅದಕ್ಕಾಗಿ ಆತ ಸೇನಾಧಿಕಾರಿಗಳನ್ನು, ಅಧಿಕಾರಿಗಳನ್ನು, ಚೌಧರಿಗಳನ್ನು ಮತ್ತು ಇತರರನ್ನು ಸಿಕ್ಖರ ವಿರುದ್ಧದ ಯುದ್ಧದಲ್ಲಿ ಸೇರಲು ಪ್ರೋತ್ಸಾಹಿಸತೊಡಗಿದನು. ಸಿಕ್ಖರ ವಿರುದ್ಧದ ಯುದ್ಧದಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಯಶಸ್ಸು ಸಾಧಿಸುವವರಿಗೂ ಜಹಗೀರು,

ಮಾನ್‌ಸಾಬ್, ಪ್ರಶಸ್ತಿ, ಬಿರುದುಗಳನ್ನು ದಯಪಾಲಿಸತೊಡಗಿದನು. ಹಿಂದು ಪಾಳೆಯಗಾರರಾದ ಚುರಮಣಿ ಜಾಟ್ ಮತ್ತು ಕಿಶನ್ ಸಿಂಗ್ ನರೋಕ ಅವರಿಗೆ ಗೌರವ ವಸ್ತ್ರವನ್ನಿತ್ತು ಸತ್ಕರಿಸಿ ಸಿಖ್ ವಿರುದ್ಧದ ಹೋರಾಟದಲ್ಲಿ ಮಹಬತ್ ಖಾನ್ ಜೊತೆ ಸೇರಲು ಅವರಿಗೆ ಸೂಚಿಸಿದನು(20.02.1711). ಸೈಫ್‌ಖಾನ್‌ನನ್ನು ಸುಲ್ತಾನ್‌ಪುರ್ ಲೋಧಿಯ ಮುಖ್ಯಸ್ಥನಾಗಿ ಏಪ್ರಿಲ್ 2 ರಂದು ನೇಮಿಸಿದ. ಲಖಿ ಜಂಗಲ್ ಪ್ರದೇಶದ ಪ್ರಭಾರವನ್ನು ಸುಲ್ತಾನ್‌ಖಾನ್‌ಗೆ ವಹಿಸಿದ ಸಾಮ್ರಾಟನು ಸಿಖ್ ಸೈನ್ಯದ ವಿರುದ್ಧ ಹೋರಾಡಲು ಎಂಟು ನೂರು ಸಾವಿರ ರೂಪಾಯಿಗಳ ದೊಡ್ಡ ಮೊತ್ತವನ್ನು ನೀಡಿದನು.[5]

ಬಂದಾ ಸಿಂಗ್ ನೇತೃತ್ವದಲ್ಲಿ ಸಿಖ್ ಸೈನ್ಯವು ಲಾಹೋರ್ ಕಡೆ ಚಲಿಸುತ್ತಿದೆಯೆಂಬ ಗುಪ್ತಚರ ವರದಿ ಸಾಮ್ರಾಟನಿಗೆ 1711 ರ ಏಪ್ರಿಲ್ 6 ರಂದು ಬಂತು. ಸಿಖ್ ಸೈನ್ಯದ ಬೆನ್ನಟ್ಟಲು ಸಾಮ್ರಾಟನು ತಕ್ಷಣವೇ ಮಹಬತ್ ಖಾನ್‌ನನ್ನು ಕಳುಹಿಸಿದ. ಈ ಕಾರ್ಯಕ್ಕಾಗಿ ಹದಿನಾಲ್ಕು ಸಾವಿರ ಸೈನಿಕರೊಡನೆ ಮಹಬತ್ ಖಾನ್ ಹೊರಟ. ಈ ವೇಳೆಗೆ ಸಿಖ್ ಸೈನಿಕರ ಸಂಖ್ಯೆ ಇಪ್ಪತ್ತೈದು ಸಾವಿರಕ್ಕೆ ಹಿಗ್ಗಿರುವ ಸುದ್ದಿ ಸಾಮ್ರಾಟ್ ಬಹದ್ದೂರ್ ಶಾಗೆ ಅದೇ ವೇಳೆ ತಲುಪಿತು. ಸಾಮ್ರಾಟ್ ಬಹದ್ದೂರ್ ಶಾ 1711 ರ ಏಪ್ರಿಲ್ 7 ರಂದು ಬನೂರ್‌ಗೆ ಆಗಮಿಸಿದಾಗ ಲಾಹೋರ್‌ನಿಂದ 40 ಕಿ.ಮೀ ದೂರದ ಬೀಯಾಸ್ ನದಿಯ ಹತ್ತಿರ ಸಿಕ್ಖರು ಬೀಡುಬಿಟ್ಟಿರುವ ವಿಷಯ ತಿಳಿಯಿತು. "ಅಲ್ಲಿ ಅವರೆಲ್ಲ ಹೊಸ ಕೋಟೆಯನ್ನು ಕಟ್ಟಿದ್ದಾರೆ. ಬೀಯಾಸ್ ನದಿಯ ಸುತ್ತಮುತ್ತಲಿನ 25 ಕಿ.ಮೀ ಉದ್ದ ಮತ್ತು 10 ಕಿ.ಮೀ ಅಗಲದ ಫಾಸಲೆಯಲ್ಲಿ ಸಿಕ್ಖರು ಪೋಲೀಸ್ ಚೌಕಿಗಳನ್ನು ನಿರ್ಮಿಸಿದ್ದಾರೆ. ಭೂ ಮಾಲೀಕರು ಅವರಿಗೆ ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ"[6] ಎಂಬ ಮಾಹಿತಿಯನ್ನು ಸಾಮ್ರಾಟನಿಗೆ ವರದಿ ಒಪ್ಪಿಸಿದರು.

ಬಿಲಾಸ್‌ಪುರದ ರಾಜ ಸಿಖ್ ಸೈನ್ಯದ ಜೊತೆ ಗೆಳೆತನ ಬೆಳೆಸಿದ್ದು, ಮುಘಲರ ಸೈನ್ಯ ಅವರನ್ನು ಬೆನ್ನಟ್ಟಿದರೆ ತಾನು ತನ್ನ ರಾಜ್ಯವನ್ನು ಪ್ರವೇಶಿಸದಂತೆ ತಡೆದು ಅವರಿಗೆ ಸುರಕ್ಷ ತಾಣವನ್ನು ನೀಡುವ ಭರವಸೆ ನೀಡಿದ್ದಾನೆಂಬ ಸುದ್ದಿ ಸಾಮ್ರಾಟನಿಗೆ ಏಪ್ರಿಲ್ 15 ರಂದು ತಿಳಿಯಿತು.

### ಸಿಖ್ ಸೇನೆ ಮತ್ತೆ ಬಟಲ ಮತ್ತು ಕಲನೂರನ್ನು ವಶಪಡಿಸಿಕೊಂಡದ್ದು

1711 ರ ಮಾರ್ಚ್‌ನಲ್ಲಿ ಜಮ್ಮು ಮತ್ತು ಸುಲ್ತಾನ್‌ಪುರದ ದಂಡನಾಯಕರನ್ನು ಕೊಂದ ಸಿಖ್ ಸೈನ್ಯ ಕಲನೂರು ಮತ್ತು ಬಟಲ ಕಡೆ ಪ್ರಯಾಣ ಬೆಳೆಸಿತು. ಕಲನೂರು ಶ್ರೀಮಂತರ ನೆಲೆಯಾದರೆ ಬಟಲ ಪ್ರಮುಖ ವಾಣಿಜ್ಯ ಕೇಂದ್ರ. ಬಂದಾ ಸಿಂಗ್ ಬಟಲದ ಕಡೆ ಬರುತ್ತಿರುವ ಸುದ್ದಿ ತಿಳಿದ ತಕ್ಷಣ ಆ ಪಟ್ಟಣದ ಶ್ರೀಮಂತರು ತಮ್ಮ ಅಮೂಲ್ಯ ವಸ್ತುಗಳನ್ನು ಕಟ್ಟಿಕೊಂಡು, ಕುಟುಂಬದೊಡನೆ ಲಾಹೋರಿಗೆ ಪರಾರಿಯಾದರು.

ಆ ಕಾಲದಲ್ಲಿ ಬಟಲದಲ್ಲಿ ಸಯ್ಯದ್ ಮಹಮದ್ ಫಜಲ್ ಖಾದ್ರಿ ಮತ್ತು ಶೇಕ್ ಅಹಮದ್ ಎಂಬ ಇಬ್ಬರು ಗಣ್ಯ ಮುಸ್ಲಿಮರ ಮನೆಗಳಿದ್ದವು. ಖಾದ್ರಿಯು ಪಟ್ಟಣದಲ್ಲಿ ದೊಡ್ಡದೊಂದು ಮುಸ್ಲಿಂ ಧರ್ಮ ಸಂಸ್ಥೆಯೊಂದನ್ನು ಸ್ಥಾಪಿಸಿದ್ದನು. ತನ್ನ ಸಂಸ್ಥೆಯ ಚಟುವಟಿಕೆಗಳಿಗೆ ಕುತ್ತುಂಟಾಗಬಹುದೆಂದು ಖಾದ್ರಿಯು ಸಿಕ್ಖರ ವಿರುದ್ಧದ ಹೋರಾಟಕ್ಕೆ ಒಲವು ತೋರಲಿಲ್ಲ. ಆದರೆ ಶೇಖ್ ಅಹಮದ್ ಬಂದಾ ಸಿಂಗ್‌ಗೆ ಬಲವಾದ ಪ್ರತಿರೋಧ ಒಡ್ಡಲು ತಯಾರಾದ.

ಒಂದು ಸಂಜೆ ಬಂದಾ ಸಿಂಗ್, ಬಟಲದಿಂದ ಆರು ಕಿ.ಮೀ. ದೂರದಲ್ಲಿದ್ದ ಅಚಲ್ ತಲುಪಿದನು. ಕೆಲವು ಗಂಟೆ ಅಲ್ಲಿಯೇ ವಿಶ್ರಮಿಸಿದನು. ಮಾರನೆಯ ನಸುಕಿನಲ್ಲಿ ಸಿಖ್ ಸೈನ್ಯ

ಬಟಲದ ಹೆಬ್ಬಾಗಿಲು (ಆನೆ ಬಾಗಿಲು) ತಲುಪಿತು. ಅದೇ ವೇಳೆಗೆ ಶೇಖ್ ಅಹಮದ್ ಖಾನ್ ದೊಡ್ಡ ಸೇನೆ ಮತ್ತು ಜಿಹಾದ್ ಹೆಸರಿನಲ್ಲಿ ಪ್ರಚೋದಿಸಿ ಕರೆತಂದ ಮುಸ್ಲಿಂ ಯುವಕರೊಡನೆ ನಗರದ ಗೋಡೆಯ ಹತ್ತಿರ ನೆರೆದಿದ್ದ. ಎರಡೂ ಸೈನ್ಯದ ನಡುವೆ ತುರುಸಿನ ಯುದ್ಧ ಆರಂಭವಾಯಿತು. ಆದರೆ ಯುದ್ಧಾರಂಭವಾದ ಕೆಲವೇ ಗಂಟೆಗಳಲ್ಲಿ ಶೇಕ್ ಅಹಮದ್ ಮೃತನಾದ. ಅವನ ಅನುಯಾಯಿಗಳು ಕೂಡಲೇ ಯುದ್ಧ ಭೂಮಿಯಿಂದ ಪರಾರಿಯಾದರು. ಇದಾದ ನಂತರ ಸಿಕ್ಖರು ಬಾಗಿಲನ್ನು ಮುರಿದು ನಗರ ಪ್ರವೇಶ ಮಾಡಿದರು. ಸಿಖ್ ಸೈನ್ಯವು ರಾಜ್ಯದ ಕೋಶ, ಸರ್ಕಾರಿ ಕಚೇರಿಗಳು, ಸರ್ಕಾರಿ ಅಧಿಕಾರಿಗಳ ಮನೆ ಮತ್ತು ಸರ್ಕಾರದ ಪರವಿದ್ದ ಶ್ರೀಮಂತರ ಮನೆಗಳನ್ನು ದೋಚಿತು. ಜೊತೆಗೆ ಭ್ರಷ್ಠ ಮತ್ತು ಕ್ರೂರ ಕಾಜಿ ಅಬ್ದುಲ್ ಹಕ್‌ನ ಮನೆಯನ್ನು ಲೂಟಿ ಮಾಡಿತು. ಇಡೀ ಬೀದಿಯನ್ನು ಸುಟ್ಟು ಭಸ್ಮ ಮಾಡಿತು. ಬಂದಾ ಸಿಂಗ್ ನಗರದಲ್ಲಿ ಸಿಖ್ ಚೌಕಿಯನ್ನು ಸ್ಥಾಪಿಸಿ ಸರ್ಕಾರಿ ಹುದ್ದೆಗಳಿಗೆ ಹೊಸ ಅಧಿಕಾರಿಗಳನ್ನು ನೇಮಕ ಮಾಡಿದನು.

ಬಟಲವನ್ನು ವಶಪಡಿಸಿಕೊಂಡ ನಂತರ ಸಿಖ್ ಸೈನ್ಯ ಈಗ ಕಲನೂರು ಕಡೆ ಧಾವಿಸಿತು. ಸೈನ್ಯವು ಕಲನೂರು ಸಮೀಪಿಸಿದಾಗ ಅಲ್ಲಿನ ಮುಖ್ಯಸ್ಥರಾದ ಸೊಹ್ರಬ್ ಖಾನ್ ಮತ್ತು ಕನುಂಗೋ ಸಂತೊಕ್ ರಾಯ್ ಅವರು ಸಿಖ್ ಸೈನ್ಯವನ್ನು ಎದುರಿಸಲಾಗದು ಎಂದು ತಿಳಿದು ಹೋರಾಟ ಬಿಟ್ಟು ನಗರದಿಂದ ಪರಾರಿಯಾದರು. ಸಂತೊಕ್ ರೈನ ಸೋದರ ಅಂಖ್‌ರಾಯ್ ಸ್ವಲ್ಪ ಸಮಯ ಹೋರಾಡಿ ನಂತರ ಆತನೂ ಯುದ್ಧ ಭೂಮಿಯಿಂದ ಓಡಿಹೋದ. ಸಿಕ್ಖರು ಎರಡು ನಗರಗಳನ್ನು ವಶಪಡಿಸಿಕೊಂಡ ನಂತರ ಅಲ್ಲಿದ್ದ ಬಹುತೇಕ ಶ್ರೀಮಂತ ಮುಸ್ಲಿಮರು, ಲಾಹೋರ್‌ಗೆ ಪರಾರಿಯಾದರು.

ಕಲನೂರನ್ನು ವಶಮಾಡಿಕೊಂಡ ನಂತರ ಬಂದಾ ಸಿಂಗ್ ಅಧಿಕಾರಿಗಳ ಹುದ್ದೆಗಳಿಗೆ ಸಿಕ್ಖರನ್ನು ನೇಮಿಸಿದ. ನಗರದ ಸಾಮಾನ್ಯ ಜನರಿಗೆ ಏನೂ ಮಾಡದೆ– "ನನ್ನ ಯುದ್ಧ ಏನಿದ್ದರೂ ಅನ್ಯಾಯ ಮತ್ತು ಕ್ರೌರ್ಯದ ವಿರುದ್ಧ. ಯಾವುದೇ ನಿರಪರಾಧಿ ಸಾಮಾನ್ಯ ಮನುಷ್ಯನಿಗೆ ಯಾವ ತೊಂದರೆಯೂ ಆಗದು" ಎಂದು ಮಾಡಿದ ಘೋಷಣೆ ಅವರಲ್ಲಿ ಸಮಾಧಾನ ತಂದಿತು. ಅವರು ಸಿಕ್ಖರಿಗೆ ಸಹಕಾರ ನೀಡಿ, ಸಹಾನುಭೂತಿ ವ್ಯಕ್ತಪಡಿಸಿದರು. ಬಂದಾ ಸಿಂಗ್ ತನ್ನ ಸೈನ್ಯದಲ್ಲಿ ಮುಸ್ಲಿಮರಿಗೂ ನೌಕರಿ ನೀಡಿದ. ತಾವು ಕರ್ತವ್ಯ ನಿರತರಾಗಿರುವ ಸಮಯದಲ್ಲಿ ತಮ್ಮ ಧಾರ್ಮಿಕ ಆಚರಣೆ (ನಮಾಜು ಮತ್ತು ಅಜಾನ್) ಮಾಡಲು ಸಂಪೂರ್ಣ ಸ್ವಾತಂತ್ರ್ಯದ ಭರವಸೆ ನೀಡಿದ. ಕೆಲವೇ ದಿನಗಳಲ್ಲಿ ಬಂದಾ ಸಿಂಗ್ ಸೈನ್ಯಕ್ಕೆ ಐದು ಸಾವಿರ ಮುಸ್ಲಿಂ ಯುವಕರು ಭರ್ತಿಯಾದರು.

ಅತ್ತ 1711ರ ಏಪ್ರಿಲ್ 25ರಂದು ಬಹದ್ದೂರ್ ಶಾ ಹರಿಯಾಣ (ಹೋಶಿಯಾರ್‌ಪುರದ ಭಾಗವಾಗಿತ್ತು)ದ ಸೇನಾ ಮುಖ್ಯಸ್ಥನಾಗಿ ಅಶ್ರಫ್ ಖಾನ್‌ನನ್ನು ನೇಮಿಸಿ ಬಂದಾ ಸಿಂಗ್‌ನನ್ನು ಬಗ್ಗು ಬಡಿಯಲು ಆದೇಶಿಸಿದ. ಅದೇ ದಿನ ಆತ ಅತೀಶ್‌ಖಾನ್‌ಗೆ ಫಿರಂಗಿಗಳ ಹೊಣೆ ವಹಿಸಿ ಸಿಕ್ಖರನ್ನು ಬೆನ್ನತ್ತಲು ಸಿಸ್–ಸಟ್ಲೆಜ್ ಪ್ರದೇಶಕ್ಕೆ ಕಳುಹಿಸಿದನು.(8)

1711ರ ಫೆಬ್ರವರಿ 28ರಂದು, ರೂಪರ್ ತಲುಪಿದ ಸಾಮ್ರಾಟ್ ಬಹದ್ದೂರ್ ಶಾ, ಸಟ್ಲೆಜ್ ನದಿಯನ್ನು ದಾಟುವ ಮೊದಲು ಕೆಲ ಸಮಯ ರೂಪರ್‌ನಲ್ಲೇ ಉಳಿದನು. ಸುದ್ದಿ ವರದಿಗಾರ ಭಗವತಿ ದಾಸ್‌ನಿಂದ ಕಲನೂರಿನ ಸ್ಥಿತಿಯ ಬಗ್ಗೆ ಬಂದಾ ವರದಿ ಅಲ್ಲಿ ಆತನಿಗೆ ತಲುಪಿತು. ವರದಿಯಲ್ಲಿ ಹೀಗೆ ನಿರೂಪಣೆಯಾಗಿತ್ತು;

"ಇಸ್ಲಾಮಿಕ್ ತಿಂಗಳ 19ರಂದು (26.04.1711)ನಾನಕ್ ಆರಾಧಕ (ಬಂದಾ ಸಿಂಗ್) ಕಲನೂರು ಪಟ್ಟಣದಲ್ಲಿ ಬೀಡುಬಿಟ್ಟಿದ್ದಾನೆ. ಮುಸ್ಲಿಮರಿಗೆ ಯಾವುದೇ ತೊಂದರೆ ನೀಡುವುದಿಲ್ಲವೆಂದು ಆತ ಮಾತು ಕೊಟ್ಟಿದ್ದಾನೆ. ಇದರಿಂದಾಗಿ, ಅವನನ್ನು ಸೇರಿಕೊಂಡ ಯಾವುದೇ ಮುಸಲ್ಮಾನನಿಗೆ, ದಿನಗೂಲಿಯನ್ನು ನಿಗದಿಪಡಿಸಿ ಸಂಬಳ ಮತ್ತು ಆತನ ಬೇಕು ಬೇಡಗಳನ್ನು ನೋಡಿಕೊಳ್ಳುತ್ತಿದ್ದಾನೆ. ಆತ ಕುತಬ್ (ಧಾರ್ಮಿಕ ಉಪದೇಶ) ಮತ್ತು ನಮಾಜ್ (ಪ್ರಾರ್ಥನೆ)ಗಳಿಗೆ ಅವಕಾಶ ಕಲ್ಪಿಸಿದ್ದಾನೆ. ಇದರ ಪರಿಣಾಮವಾಗಿ ಆ ಬಂದಾಖೋರ (ಬಂದಾ ಸಿಂಗ್)ನ ಜೊತೆ ಐದು ಸಾವಿರ ಮುಸ್ಲಿಮರು ಸೇರಿದ್ದಾರೆ. ಅಜಾನ್ ಮತ್ತು ನಮಾಜ್‌ಗೆ ಅವಕಾಶವಿರುವುದರಿಂದ ಈ ಬಂಡುಕೋರರ ಜೊತೆ ಮುಸ್ಲಿಮರ ಸಂತುಷ್ಟರಾಗಿದ್ದಾರೆ"

ಸಿಕ್ಖರ ಸೋಲಿನ ಸುದ್ದಿಯನ್ನು ಚಕ್ರವರ್ತಿಯು ಕೇಳುತ್ತಿದ್ದರೂ ಭಯಗ್ರಸ್ತನಾಗಿದ್ದನು. ಸಿಕ್ಖರು ರಾವಿ ಮತ್ತು ಬೀಯಾಸ್ ನದಿಯ ಪ್ರದೇಶಗಳಲ್ಲಿ ಖಾಯಂ ಚೌಕಿಗಳನ್ನು ಸ್ಥಾಪಿಸಿರುವರೆಂದು, ಅಪಾರ ಸಂಖ್ಯೆಯ ಪಠಾಣರನ್ನು, ಪಾಳೆಯಗಾರರನ್ನು ಕೊಂದರೆಂದು ಕೇಶೋ ರಾವ್ ಕಳುಹಿಸಿದ ಸುದ್ದಿ ಚಕ್ರವರ್ತಿಗೆ 1711ರ ಮೇ 13ರಂದು ತಲುಪಿತು.

ತನ್ನ ಸೇನಾನಾಯಕರು ಸತ್ತ ಸುದ್ದಿಯಿಂದ ಬಹದ್ದೂರ್ ಶಾ ಜರ್ಜರಿತನಾದ. ಆ ಸಮಯದಲ್ಲಿ ಸಿಕ್ಖರ ವಿರುದ್ಧದ ಹೋರಾಟದಲ್ಲಿ ನೆರವು ನೀಡುವ ಸೇನಾನಾಯಕರು ಪಾಳೆಯಗಾರರು ಮತ್ತು ಇತರರನ್ನು ಪುರಸ್ಕರಿಸತೊಡಗಿದರು.

ಬೀಯಾಸ್ ನದಿಯಿಂದ 6 ಕಿ.ಮೀ. ದೂರದಲ್ಲಿರುವ ಫತೇಬಾದ್‌ನಲ್ಲಿ ಸಿಕ್ಖರು ಬೀಡುಬಿಟ್ಟಿರುವ ಸುದ್ದಿ 1711 ಏಪ್ರಿಲ್ 28ರಂದು ಸಾಮ್ರಾಟನಿಗೆ ಸಿಕ್ಕಿತು. ಅತ್ತ ಫತೇಬಾದ್‌ನ ಮುಖ್ಯಸ್ಥ ಮತ್ತು ಇಸಾ ಖಾನ್ ಸಿಕ್ಖರ ಮೇಲೆ ಮುಗಿಬಿದ್ದರು. ಎರಡೂ ಕಡೆ ಅಪಾರ ನಷ್ಟವುಂಟಾಯಿತು.[10]

ಮಹಮ್ಮದ್ ಅಮೀನ್ ಖಾನ್ ಸಲ್ಲಿಸಿದ ಸೇವೆಯನ್ನು ಕೊಂಡಾಡಿದ ಸಾಮ್ರಾಟನು 1711ರ ಮೇ 28ರಂದು ಅವನಿಗೆ ಗೌರವ ವಸ್ತ್ರ ನೀಡಿ ಸನ್ಮಾನಿಸಿದ. ಸಿಖ್ ಸೈನ್ಯದ ವಿರುದ್ಧ ಹೋರಾಡಲು ಒಂಬತ್ತು ಸಾವಿರ ಸೈನಿಕರಿಗೆ ದಂಡನಾಯಕನನ್ನಾಗಿಸಿದ[11] ಬೀಯಾಸ್ ನದಿಯ ಪೂರ್ವಭಾಗದಲ್ಲಿ ಬಂದಾ ಸಿಂಗ್ ಇರುವ ಸುದ್ದಿ ಚಕ್ರವರ್ತಿಗೆ ಮೇ 9 ರಂದು ತಿಳಿಯಿತು. ಅರಸನ ಸೇನೆಯು ತನ್ನತ್ತ ಬರುತ್ತಿರುವ ಸುದ್ದಿಯನ್ನು ತಿಳಿದ ಬಂದಾ ಸಿಂಗ್, ಸಟ್ಲೆಜ್ ನದಿಯನ್ನು ದಾಟಿ ಲಖಿ ಜಂಗಲ್ ಪ್ರದೇಶದತ್ತ ಪ್ರಯಾಣ ಬೆಳೆಸಿದ[12].

1711ರ ಮೇ 14ರಂದು ತಲ್ವಾನ್‌ನ ನಾಲ್ವರು ಜಮೀನುದಾರರಾದ ಮುಘಲ್ ಬೇಗ್ ಖಾನ್, ದುರ್ಲಬ್ ಖಾನ್, ಅಬ್ದುಲ್ ಸಮದ್‌ಖಾನ್ ಮತ್ತು ಇನಾಯತ್ ಖಾನ್ ಅವರುಗಳನ್ನು ಸಿಕ್ಖರ ವಿರುದ್ಧ ಹೋರಾಟಕ್ಕೆ ಕಳುಹಿಸಿದ. ಮಹಮದ್ ಅಮೀನ್ ಖಾನ್ ಸಿಕ್ಖರ ನಿರ್ಮೂಲನಕ್ಕೆ ಕೈಗೊಂಡಿರುವ ಯಾತ್ರೆಗೆ ಸೇರುವಂತೆ ಇನಾಂ ವಾಲಿ ಶಾಗೆ ಆದೇಶಿಸಿದ[13]. ಜಕಾರಿಯ ಖಾನ್‌ನ ತಂದೆ ಅಬ್ದುಸ್ ಸಮದ್ ಖಾನ್‌ನನ್ನು ಸಿಕ್ಖರ ಬೆನ್ನತ್ತಲು ಮೇ 15ರಂದು ನಿಯೋಜಿಸಿದ.[14]

ಬೀಯಾಸ್ ನದಿಯಿಂದ 7 ಕೋಸ್ (22 ಕಿ.ಮೀ) ದೂರದಲ್ಲಿ ಬಂದಾ ಸಿಂಗ್ ಇರುವ ಬಗ್ಗೆ ವರದಿಗಾರ ಭಗವಾನ್ ದಾಸ್ ಸುದ್ದಿಯೊಂದನ್ನು 1711ರ ಮೇ 18ರಂದು ಕಳುಹಿಸಿದ. ಅರಸನ ಸೇನೆಯು ನದಿ ದಾಟಲು ಸುಧಾರಿತ ದೋಣಿಗಳನ್ನು ನಿರ್ಮಿಸಲು ಮುಂದಾದಾಗ ಸಿಕ್ಖರು ಬಾಣಗಳ ಮಳೆ ಕರೆದರು. ಹಾಗಾಗಿ ಅವರು ನದಿಯನ್ನು ದಾಟಲು ಸಫಲರಾಗಲಿಲ್ಲ.

ಮಹಮದ್ ಅಮೀನ್ ಖಾನ್‌ನ ಸೈನ್ಯಕ್ಕೆ 10 ಬಂದಾೂಕು, 300 ಬಾಣ, 50 ಮುಂಡ (1800 ಕೆ.ಜಿ) ಮದ್ದು, ಏಳು ರೈಫಲ್ ಮತ್ತು ಸಾವಿರ ಸೈನಿಕರನ್ನು ಕಳುಹಿಸಲು ಸಾಮ್ರಾಟನು 1711 ಮೇ 19ರಂದು ಆದೇಶ ಕಳುಹಿಸಿದ. ಜೊತೆಗೆ ಒಂದು ಸಾವಿರ ರೂಪಾಯಿಗಳನ್ನು ಕಳುಹಿಸಿದ.[15] ಮಹಮದ್ ಅಮೀನ್ ಖಾನ್‌ನ ಸೈನ್ಯವನ್ನು ಕೂಡಿಕೊಳ್ಳಲು ದೌಲತ್‌ಬೇಗ್ ಖಾನ್, ಸಲೇಹ್‌ಖಾನ್ ಮತ್ತು ಫತೇಉಲ್ಲಾ ಖಾನ್ ಅವರುಗಳಿಗೆ ಆಜ್ಞಾಪಿಸಿದ. ಅದೇ ದಿನ ಸರ್‌ಬ್ರಹ್ ಖಾನ್, ಇಸ್ಲಾಂ ಖಾನ್ ಬಹದ್ದೂರ್, ಕುಲಿಚ್ ಮಹಮ್ಮದ್ ಖಾನ್, ಅಜನಬಿ ಖಾನ್ ಬಹದ್ದೂರ್, ಭಕ್ಷಿ–ಉಲ್–ಮುಲ್ಕ್ ಮತ್ತು ಮಿರ್ಜಾ ಶಾ ನಿವಾಜ್ ಖಾನ್‌ರವರನ್ನು ಸಿಖ್ ಸೈನ್ಯದ ವಿರುದ್ಧ ಹೋರಾಡಲು ಹೊರಡಿಸಿದ.

---

**ಅಡಿ ಟಿಪ್ಪಣಿಗಳು**

1. ಹಿಂದಿನ ಬಿಲಾಸ್‌ಪುರದ ಸ್ಥಳದಲ್ಲಿ ಈಗ ಗೋವಿಂದ ಸಾಗರ ಎದ್ದು ಅದರ ಹತ್ತಿರ ಹೊಸದೊಂದು ಪಟ್ಟಣ ನಿರ್ಮಾಣವಾಗಿದೆ.
2. ಸಿಖ್ ಚರಿತ್ರೆಯು ಸಹ ಇಂತಹ ಸಾಧು ಸಂತರ ಪವಾಡಗಳ ಕಥನಗಳಿಂದ ತುಂಬಿದೆ. ಇದನ್ನು ಹೆಚ್ಚು ತುಂಬಿದವರ ಭಾಯ್ ಸಂತೋಶ್ ಸಿಂಗ್ ಮತ್ತು ಗ್ಯಾನಿ ಗ್ಯಾನ್ ಸಿಂಗ್.
3. ಸುಲ್ತಾನ್ ಅಹ್ಮದ್ ಖಾನ್‌ನ ಮಗ ಬೈಜಿದ್ ಖಾನ್ ಮತ್ತು ಅವನ ಸೋದರ ಪೀರ್‌ಖಾನ್‌ನ ಮಗ ಶಮಸ್ ಖಾನ್ ಮನಸಾಬ್‌ದಾರರಾಗಿದ್ದರು.
4. ಅಕ್ಬರಾತ್–ಐ–ದರ್ಬಾರಿ–ಐ–ಮೌಲ ನಮೂದು 23.04.1711
5. ಅಕ್ಬರಾತ್–ಐ–ದರ್ಬಾರಿ–ಐ–ಮೌಲ ನಮೂದು 02.04.1711
6. ಅಕ್ಬರಾತ್–ಐ–ದರ್ಬಾರಿ–ಐ–ಮೌಲ ನಮೂದು 07.04.1711
7. ಅಕ್ಬರಾತ್–ಐ–ದರ್ಬಾರಿ–ಐ–ಮೌಲ ನಮೂದು 15.04.1711
8. ಅಕ್ಬರಾತ್–ಐ–ದರ್ಬಾರಿ–ಐ–ಮೌಲ ನಮೂದು 25.04.1711
9. ಅಕ್ಬರಾತ್–ಐ–ದರ್ಬಾರಿ–ಐ–ಮೌಲ ನಮೂದು 28.04.1711
10. ಅಕ್ಬರಾತ್–ಐ–ದರ್ಬಾರಿ–ಐ–ಮೌಲ ನಮೂದು 28.04.1711
11. ಅಕ್ಬರಾತ್–ಐ–ದರ್ಬಾರಿ–ಐ–ಮೌಲ ನಮೂದು 05.05.1711
12. ಅಕ್ಬರಾತ್–ಐ–ದರ್ಬಾರಿ–ಐ–ಮೌಲ ನಮೂದು 09.05.1711
13. ಅಕ್ಬರಾತ್–ಐ–ದರ್ಬಾರಿ–ಐ–ಮೌಲ ನಮೂದು 14.05.1711
14. ಅಕ್ಬರಾತ್–ಐ–ದರ್ಬಾರಿ–ಐ–ಮೌಲ ನಮೂದು 15.05.1711
15. ಅಕ್ಬರಾತ್–ಐ–ದರ್ಬಾರಿ–ಐ–ಮೌಲ ನಮೂದು 19.05.1711

# ಅಧ್ಯಾಯ-9

# ಬಹದ್ದೂರ್ ಶಾ ಸಾಮ್ರಾಟನ ನಿಧನ

## ಲಾಹೋರ್‌ನಲ್ಲಿ ಉಳಿಯಲು ಬಹದ್ದೂರ್ ಶಾ ನಿರ್ಧಾರ

ಮುಘಲ್ ಸಾಮ್ರಾಟ ಬಹದ್ದೂರ್‌ಶಾ 1711ರ ಆಗಸ್ಟ್ ಒಂದರಂದು, ಲಾಹೋರ್ ತಲುಪಿದನು. ಆತ ಬಹುಒಡ್ಡ ಪರಿವಾರದೊಡನೇ ಆಗಮಿಸಿದ್ದ ಕಾರಣ ಲಾಹೋರ್ ಕೋಟೆಯಲ್ಲಿ ಉಳಿಯದೆ ಹತ್ತಿರದ ಅಲೋವಲ್ ಗ್ರಾಮದಲ್ಲಿ ಬೀಡುಬಿಡಲು ನಿರ್ಧರಿಸಿದ. ಎಲ್ಲರಿಗಿಂತ ಹಿರಿಯ ಮಗ ಅಜಿಮ್-ಉಸ್-ಶಾನ್ ಅವಾನ್ ಗ್ರಾಮದಲ್ಲಿ ತನ್ನ ಶಿಬಿರವನ್ನು ಸ್ಥಾಪಿಸಿದ. ತನ್ನ ಸ್ವಂತ ಗುಡಾರದ ಸುತ್ತಲೂ ಖಜಾನೆ ಮತ್ತು ಶಸ್ತ್ರಾಸ್ತ್ರಗಳ ಗಾಡಿಗಳನ್ನು ನಿಲ್ಲಿಸಿ ಸುರಕ್ಷಿತ ತಾಣವನ್ನು ರೂಪಿಸಿಕೊಂಡ. ಎರಡನೇ ಮಗ ಮೌಜ್-ಉದ್-ದೀನ್ ಪರ್ವೇಜಾಬಾದ್‌ನಲ್ಲಿ ತನ್ನ ಶಿಬಿರವನ್ನು ಸ್ಥಾಪಿಸಿದರೆ, ಯುವರಾಜ ರಫಿ-ಉಸ್-ಶಾನ್ ಧರ್ಮುಬಾಗ್ ಪ್ರದೇಶದಲ್ಲಿ ನೆಲೆಯಾದ ಮಹಮದ ಜಹಾನ್ ಶಹ ಶಮೀರ್ ಖುಷ್‌ನ ಬಯಲನ್ನು ಆಯ್ಕೆ ಮಾಡಿಕೊಂಡ. ಹಿರಿಯ ರಾಜಕುಮಾರನ ಹತ್ತಿರ 11 ಸಾವಿರ ಸೈನಿಕರಿದ್ದರೆ, ಉಳಿದ ಮೂವರು ಮಕ್ಕಳ ಹತ್ತಿರ ತಲಾ ಮೂರು ಸಾವಿರ ಸೈನಿಕರು ಶಿಬಿರಗಳಲ್ಲಿದ್ದರು.

ಈ ಹಂತದಲ್ಲಿ ಲಾಹೋರಿನ ಮುಸ್ಲಿಮರ ಸಿಕ್ಖರ ಭಯದಲ್ಲಿ ಬದುಕಿದ್ದರು. ಇದಕ್ಕೂ ಮುನ್ನ ಸಿಕ್ಖರ ಬಂಡಾಯವನ್ನು ಶಮನ ಮಾಡಲು ಮುಸ್ಲಿಂ ಪೂಜಾರಿಗಳು ಹೂಡಿದ ಧರ್ಮಯುದ್ಧಕ್ಕೆ ಬಾರಿ ಸೋಲುಂಟಾಗಿತ್ತು. ಸಿಕ್ಖರ ವಿರುದ್ಧದ ಹೋರಾಟದಲ್ಲಿ ಅವರ ಅನೇಕ ಮಂದಿ ನಾಯಕರು ತಮ್ಮ ಪ್ರಾಣ ತೆತ್ತಿದ್ದರು. ಇದು ಮುಸ್ಲಿಮರ ಮನದಲ್ಲಿ ಭಯ ಮೂಡಿಸಿತ್ತು. ಸಿಕ್ಖರ ದಾಳಿಯ ಸಾಧ್ಯತೆಯ ಸುದ್ದಿಯೆತ್ತಿದರೇ ಭಯ ಕವಿಯುತ್ತಿತ್ತು. ಆದರೆ ಸ್ವತಃ ಸಾಮ್ರಾಟನ ನೇತೃತ್ವದಲ್ಲಿ ಒಂದು ಲಕ್ಷ ಸೈನ್ಯ ಲಾಹರ್ ತಲುಪಿದಾಗ ಲಾಹೋರ್‌ನ ಮೌಲ್ವಿಗಳು ಸಮಾಧಾನದ ನಿಟ್ಟುಸಿರು ಬಿಟ್ಟರು. ಒಂದು ದಿನ ಪವಿತ್ರ ಯುದ್ಧದ ನೇತೃತ್ವ ವಹಿಸಿದ್ದ ಸಯ್ಯದ್ ಇನಾಯತ್‌ಉಲ್ಲಾ, ಸಯ್ಯದ್ ಅತಾವುಲ್ಲಾ, ಮಹಮ್ಮದ್ ತಾಕಿ ಮೊದಲಾದವರು ಸಾಮ್ರಾಟನನ್ನು ಭೇಟಿಯಾಗಿ ಸಿಕ್ಖರ ವಿರುದ್ಧದ ಹೋರಾಟದಲ್ಲಿ ತಮ್ಮ ಸಂಪೂರ್ಣ ಸಹಾಯ ಸಹಕಾರದ ಭರವಸೆಯನ್ನು ನೀಡಿದರು. ಅವರ ಸಂಕಷ್ಟಗಳ ಬಗ್ಗೆ ಸಾಮ್ರಾಟನಿಗೆ ಈಗಾಗಲೇ ತಿಳಿದಿತ್ತು. ಆತ ಅವರನ್ನು ಸಮಾಧಾನಪಡಿಸಿ, ತಾನೇ ಲಾಹೋರ್‌ನಲ್ಲಿ ಉಳಿಯುವುದಾಗಿಯೂ, ಇನ್ನು ಮುಂದೆ ಅವರು ಸುರಕ್ಷಿತವಾಗಿರಬಹುದೆಮದು ಹೇಳಿದನು. ಸಾಮ್ರಾಟನಿಂದಲೇ ಭರವಸೆಯನ್ನು ಪಡೆದ ಈ ಮುಸ್ಲಿಂ ಮೌಲ್ವಿಗಳು ಸಿಕ್ಖರು ಮತ್ತು ಅವರ ಪರ ಸಹಾನುಭೂತಿ ವ್ಯಕ್ತಪಡಿಸುವವರ ವಿರುದ್ಧ ಹೋರಾಟ

ಮಾಡುವ ತಮ್ಮ ಗುರಿಯನ್ನು ಮತ್ತೆ ಹಮ್ಮಿಕೊಂಡರು. ಸಿಕ್ಖರ ಹೋರಾಟದೊಡನೆ ಯಾವ ಸಂಬಂಧವೂ ಇಲ್ಲದ ಹಲವು ಸಿಕ್ಖರನ್ನು ಈ ಪೂಜಾರಿಗಳು ಕೊಂದುಹಾಕಿದ್ದರು. ಅದೇ ರೀತಿ ಸಿಖ್ ಬಗ್ಗೆ ಸಹಾನುಭೂತಿಯನ್ನು ಹಲವು ಹಿಂದೂ ವ್ಯಕ್ತಿಗಳನ್ನು ಕೊಂದರು.

ಲಾಹೋರ್‌ನಲ್ಲಿದ್ದ ಸಾಮ್ರಾಟನು ಪ್ರತಿದಿನವೂ ಬಂದಾ ಸಿಂಗ್ ಮತ್ತು ಸಿಖ್ ಸೈನ್ಯದ ಬಗ್ಗೆ ಅನುದಿನದ ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದನು. ಬಂದಾ ಸಿಂಗ್ ಬೀಯಾಸ್ ನದಿಯ ಬಂಡೆಯನ್ನು ತಲುಪಿದ್ದ. ಮಾಜಾ ವಲಯವನ್ನು ದಾಟಬಹುದೆಂಬ ಸುದ್ದಿ ಸಾಮ್ರಾಟನನ್ನು 1711ರ ಆಗಸ್ಟ್ 6 ರಂದು ತಲುಪಿತು. ಆ ಸಮಯದಲ್ಲಿ ಮಹಮದ್ ಅಮೀನ್‌ಖಾನ್ ಕಲನೂರಿನಲ್ಲಿದ್ದನು. ಬಹದ್ದೂರ್ ಶಾ ಆತನಿಗೊಂದು ಸಂದೇಶ ಕಳುಹಿಸಿ, ನದಿಯನ್ನು ದಾಟಿ ಸಿಕ್ಖರ ಪಡೆಯ ಮೇಲೆ ದಾಳಿ ಮಾಡಲು ಆಜ್ಞಾಪಿಸಿದ. ಖಾನ್ ಸಿಕ್ಖರ ಮೇಲೆ ದಾಳಿ ಮಾಡಲು ಅವರಿದ್ದಲ್ಲಿಗೆ ತಲುಪುವ ಮುಂಚೆಯೇ ಬಂದಾ ಸಿಂಗ್ ತನ್ನ ಆರು ಸಾವಿರ ಅನುಚರರೊಡನೆ ಬೆಟ್ಟಗಳ ಕಡೆಗೆ ತಪ್ಪಿಸಿಕೊಂಡು ಹೋಗಿದ್ದ ಸುದ್ದಿ ಸಾಮ್ರಾಟನನ್ನು 1711 ಆಗಸ್ಟ್ 11ರಂದು ತಲುಪಿತು.

ಈಗ ಸೈನಿಕರಲ್ಲದ ಸಾಮಾನ್ಯ ಜೀವನ ನಡೆಸುತ್ತಿದ್ದ ಸಿಕ್ಖರ ವಿರುದ್ಧ ಬಹದ್ದೂರ್ ಶಾ ಕಾರ್ಯಾಚರಣೆ ಆರಂಭಿಸಿದ. ಅಂತಹ ಸಿಕ್ಖರ ಕುಟುಂಬಗಳ ಸದಸ್ಯರು, ಅವರ ಬಂಧುಗಳನ್ನು ಬಂಧಿಸಿ ಕೊಲ್ಲಲಾಯಿತು. ಅನೇಕರ ಮನೆಗಳನ್ನು ದೋಚಲಾಯಿತು. ಈ ಹಿಂದೆ ಸಿಕ್ಖರ ವಿರುದ್ಧ ನಡೆಸಿದ ಪವಿತ್ರ ಯುದ್ಧದಲ್ಲಿ ಮಡಿದ ಮುಸಲ್ಮಾನರ ಬಂಧುಳು ಈಗ ಸಿಕ್ಖರನ್ನು ಹುಡುಕಿ, ಬಂಧಿಸಿ ಮತ್ತು ಕೊಲ್ಲುವಲ್ಲಿ ಮುಖ್ಯವಾದ ಪಾತ್ರ ವಹಿಸಿದರು. ಅದೇ ರೀತಿ ಸಾಮ್ರಾಟ ಮತ್ತು ರಾಜರುಗಳಿಂದ ಪುರಸ್ಕಾರ ಮತ್ತು ಅಭಿನಂದನೆಯನ್ನು ಪಡೆಯಲು ಅನೇಕ ಮುಸಲ್ಮಾನರು ಈ ಹೋರಾಟಕ್ಕೆ ಸೇರಿಕೊಂಡರು. ಮುಸ್ಲಿಮರಿಗೆ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸಲು ಲಾಹೋರ್ ಮತ್ತು ಇತರ ಪ್ರದೇಶಗಳಲ್ಲಿನ ಹಿಂದೂಗಳ ಸಹ ಅನೇಕ ಸಿಕ್ಖರ ಬಂಧನಕ್ಕೆ ಕಾರಣರಾದರು.

ಸಿಕ್ಖರನ್ನು ವಧಿಸಲು ಬಹದ್ದೂರ್ ಶಾ ಒಂದು ಸರ್ವ ಸಾಮಾನ್ಯವಾದ ಆಜ್ಞೆಯನ್ನು ಹೊರಡಿಸಿದ್ದ. ಈ ಪರಿಸ್ಥಿತಿಯನ್ನು ಕೆಲವು ದುರಭಿಮಾನದ ಮುಸ್ಲಿಮರು ಹಿಂದೂಗಳ ವಿರುದ್ಧವೂ ದುರ್ಬಳಕೆ ಮಾಡಿಕೊಂಡರು. ಹಿಂದೂಗಳ ವಿರುದ್ಧ ಇದ್ದ ತಮ್ಮ ವೈಯಕ್ತಿಕ ಹಗೆತನವನ್ನು ತೀರಿಸಿಕೊಳ್ಳಲು ಕೆಲವು ಮುಸಲ್ಮಾನರು ಅವರನ್ನು ಸಿಕ್ಖರ ಬೆಂಬಲಿಗರು ಅಥವಾ ಅವರ ಸಹಾನುಭೂತಿಪರರು ಎಂದು ಬಿಂಬಿಸಿ, ಅವರನ್ನು ಬಂಧಿಸಲು ಯಶಸ್ವಿಯಾದರು. ಕೆಲವು ಮುಸಲ್ಮಾನ ಪುರೋಹಿತರು ಹಿಂದೂಗಳ ಹಬ್ಬಗಳು ಮತ್ತು ಆಚರಣೆಗಳನ್ನು ವಿರೋಧಿಸಿ ಕಿರುಕುಳ ನೀಡಲಾರಂಭಿಸಿದರು. ಖಾನ್ ಖಾನ ಎಂಬಾತನಲ್ಲಿ ಉದ್ಯೋಗದಲ್ಲಿದ ಶಿವಸಿಂಗ್ ಎಂಬಾತನ ಮಗನಿಗೆ ಸಿಡುಬು ರೋಗ ಬಂದಿತ್ತು.(2) ಅದರ ನಿವಾರಣೆಗಾಗಿ ಒಂದು ದಿನ ಹಿಂದೂಗಳು ಸ್ಥಳೀಯ ದೇವಿಯ ಮಂದಿರಕ್ಕೆ ಪೂಜಾಚರಣೆಯನ್ನು ಕೈಗೊಳ್ಳಲು ವಾದ್ಯ ತಂಡದೊಡನೆ ಮೆರವಣಿಗೆಯಲ್ಲಿ ಹೊರಟಿದ್ದರು. ಇದನ್ನು ನೋಡಿದ ವಿರ್ದಿ ಬೇಗ್ ಎಂಬ ಮುಸ್ಲಿಂ ಅಂಧಾಭಿಮಾನಿ ಹಿಂದೂಗಳ ಇಂತಹ ಇಸ್ಲಾಂ ವಿರೋಧಿ ಪ್ರದರ್ಶನ ಮಾಡುವ ಮೂಲಕ ಕುಫರ್ (ಪಾಷಂಡಿ) ಅನ್ನು ಹರಡುತ್ತಿದ್ದಾರೆಂದು ಕೂಗಾಡಿ ಗಲಾಟೆಯೆಬ್ಬಿಸಿದ.

ಮುಗ್ಧ ಮನಸ್ಸಿನ ಮುಸಲ್ಮಾನರನ್ನು ಪ್ರಚೋದಿಸುವಲ್ಲಿ ವಿರ್ದಿಬೇಗ್ ಯಶಸ್ವಿಯಾದ. ಅವರು ಹಿಂದೂಗಳನ್ನು ವಿರೋಧಿಸಲು ಸಾವಿರಾರು ಸಂಖ್ಯೆಯಲ್ಲಿ ಒಗ್ಗೂಡಿ ಅವರ ಮೇಲೆ

ಬಿದ್ದರು. ಕೆಲವರು ಈ ಗಲಭೆಯಲ್ಲಿ ಸತ್ತರು. ಸಿಕ್ಖರ ವಿರುದ್ಧ ಯುದ್ಧ ಮಾಡುವ ಬಹದ್ದೂರ್ ಶಾನ ಸೇನೆಯನ್ನು ಕೂಡಿಕೊಳ್ಳಲು ಲಾಹೋರ್‌ಗೆ ಬಂದಿದ್ದ ಉದಾರವಾದಿ ಮುಸ್ಲಿಂ ದಂಡನಾಯಕನೊಬ್ಬ ಈ ಘಟನೆಯನ್ನು ಇದೇ ರೀತಿಯ ಯುದ್ಧಕ್ಕೆ ಬಂದಿದ್ದ ಇಬ್ಬರು ಹಿಂದೂ ದಂಡನಾಯಕರಾದ ಬಚನ್ ಸಿಂಗ್ ಕಛ್‌ವಾಹ ಮತ್ತು ಬದನ್‌ಸಿಂಗ್ ಬುಂಡೇಲ ಅವರಿಗೆ ವರದಿ ಮಾಡಿದ. ಈ ಇಬ್ಬರು ದಂಡನಾಯಕರು ಸಾಮ್ರಾಟನನ್ನು ಭೇಟಿಯಾಗಿ ಹಿಂದೂಗಳ ವಿರುದ್ಧ ನಡೆಯುತ್ತಿರುವ ಇಂತಹ ಆಕ್ರಮಣಗಳನ್ನು ನಿಲ್ಲಿಸಲು ರಾಜಾದೇಶವನ್ನು ಹೊರಡಿಸುವಲ್ಲಿ ಸಫಲರಾದರು.

ಹಿಂದೂಗಳ ವಿರುದ್ಧ ಆಕ್ರಮಣವೇನೋ ನಿಂತಿತು. ಆದರೆ ಸಿಕ್ಖರು ಧರ್ಮಾಂಧ ಮುಸ್ಲಿಮರ ಕೆಂಗಣ್ಣಿಗೆ ಗುರಿಯಾಗುವುದು ಮುಂದುವರೆಯಿತು. ಈಗ ಈ ಧರ್ಮಾಂಧರು ಲಾಹೋರ್‌ನಲ್ಲಿ ನಡೆದ ಗಲಭೆಗಳಿಗೆ ಉದ್ದವಾದ ಗಡ್ಡ ಬಿಟ್ಟ ಕಾರಣ ಎಂದು ಮತ್ತೊಂದು ಅಪಪ್ರಚಾರ ಮಾಡತೊಡಗಿದರು.

ಸಿಕ್ಖರು ತಮ್ಮ ಗಡ್ಡದ ಕೂದಲನ್ನು ಕತ್ತರಿಸದ ವಿಷಯ ಬಹದ್ದೂರ್ ಶಾಗೆ ತಿಳಿದಿತ್ತು. ಆ ಕಾರಣ ಹಿಂದೂಗಳನ್ನು ಸಿಕ್ಖರು ಎಂದು ಅಪಾರ್ಥ ಮಾಡಿಕೊಳ್ಳದಿರಲು, ಹಿಂದೂಗಳು ತಮ್ಮ ಗಡ್ಡವನ್ನು ಬೋಳಿಸಿಕೊಳ್ಳಲು ಆಜ್ಞೆ ಮಾಡಿದ. ಹಿಂದೂಗಳು ಈ ಆಜ್ಞೆಯನ್ನು ಪಾಲಿಸಿದರು. ಆಜ್ಞೆ ಹೊರಡಿಸಿದ ಮಾರನೆಯ ದಿನವೇ ಬಹುತೇಕ ಹಿಂದೂಗಳು ತಮ್ಮ ಗಡ್ಡವನ್ನು ಬೋಳಿಸಿಕೊಂಡರು. ಈ ಬಗ್ಗೆ ದೆಹಲಿ ಪ್ರಾಂತದ ಫೌಜುದಾರ ಯಾರ್ ಮಹಮದ್ ಖಾನ್ ಕಲಂದರಿ ಬೇರೆಯ ವಿವರ ನೀಡುತ್ತಾನೆ. ಅವನ ಪ್ರಕಾರ ಹಿಂದೂಗಳು ಸ್ವ ಇಚ್ಛೆಯಿಂದ ಗಡ್ಡ ಬೋಳಿಸಿಕೊಳ್ಳಲಿಲ್ಲ; ಬದಲು ಗಡ್ಡ ಬೋಳಿಸಿಕೊಳ್ಳಬೇಕೆಂಬ ರಾಜಾಜ್ಞೆಯನ್ನು ಒತ್ತಾಯದಿಂದ ಜಾರಿಗೆ ತರಲಾಯಿತು.

"...... ಅರಸನ ಸೇನೆಯ ಎಲ್ಲ ಹಿಂದೂಗಳ ಗಡ್ಡಗಳನ್ನು ಕಡ್ಡಾಯವಾಗಿ ಬೋಳಿಸಬೇಕೆಂದು ರಾಜಾಜ್ಞೆಯು ಹುಕುಂ ಮಾಡಿತ್ತು. ಮುಸ್ಲಿಂ ಅಲ್ಲದ ಯಾವೊಬ್ಬ (ಬೆದೀನ್) ಸಹ ಉದ್ದನೆಯ ಗಡ್ಡವನು ಬಿಡಬಾರದು; ಅಂತಹ ವ್ಯಕ್ತಿಯನ್ನು ಕಂಡರೆ ಅವನ ಗಡ್ಡವನ್ನು ಕೀಳಬೇಕು ಎಂಬ ಆದೇಶವನ್ನು ಎಲ್ಲ ಪ್ರಾಂತ್ಯಗಳಿಗೂ ರವಾನಿಸಲಾಯಿತು. ಹಾಗಾಗಿ ಈ ಆದೇಶವನ್ನು ಎಲ್ಲ ಪ್ರಾಂತ್ಯಗಳಲ್ಲೂ ಘೋಷಿಸಲಾಯಿತು. ರಾಜನ ಶಿಬಿರದಲ್ಲಿ ಈ ಆಜ್ಞೆಯನ್ನು ಯಾವ ರೀತಿ ಜಾರಿಗೆ ತರಲಾಯಿತೆಂದರೆ, ರಾಕ್ಷಸರಂತೆ ಕಾಣುವ ಸೇನಾ ಮುಖ್ಯಸ್ಥರು, ನಗರಗಳ ಬೀದಿ ಮತ್ತು ಬಜಾರುಗಳಲ್ಲಿ ಅಲೆದಾಡುತ್ತಾ ಗಡ್ಡ ಬಿಟ್ಟ ವ್ಯಕ್ತಿ ಕಂಡರೆ ಅವನನ್ನು ಹಿಡಿತು ಅಪಮಾನಗೊಳಿಸುತ್ತಿದ್ದರು. ಪೇಟ ಕೀಳುತ್ತಿದ್ದರು. ಸಾಮ್ರಾಟ ಮತ್ತು ಯುವರಾಜನ ಹತ್ತಿರ ಊಳಿಗೆ ಮಾಡುತ್ತಿದ್ದ ಹಿಂದೂಗಳು ತಮ್ಮ ಗಡ್ಡ ಬೋಳಿಸಿಕೊಂಡು ಅವರ ಎದುರು ನಿಲ್ಲುತ್ತಿದ್ದರು."

ಬಂದಾ ಸಿಂಗ್ ರಾವಿ ಮತ್ತು ಬೀಯಾಸ್ ನದಿಗಳನ್ನು ದಾರಿ ರೂಪರ್ ಕಡೆ ಬರುತ್ತಿದ್ದಾನೆಂದು ಅಲ್ಲಿಂದ ಲೋಹಗಡ ಕಡೆ ಪ್ರಯಾಣಿಸಿ ಅಲ್ಲಿಯ ಕೋಟೆಯಲ್ಲಿ ನೆಲೆಯಾಗಲಿದ್ದಾನೆಂಬ ಸುದ್ದಿ 1711ರ ಆಗಸ್ಟ್ 27 ರಂದು ಸಾಮ್ರಾಟನಿಗೆ ತಿಳಿಯಿತು.

ಬಂದಾ ಸಿಂಗ್ ತನ್ನ ನಾಲ್ಕು ಸಾವಿರ ಸಿಖ್ ಸೈನಿಕರೊಡನೆ 1711ರ ಸೆಪ್ಟೆಂಬರ್ 11 ರಂದು ಸಟ್ಲಜ್ ನದಿಯನ್ನು ಈಗಾಗಲೇ ದಾಟಿರುವ ಸುದ್ದಿಯು ಸಾಮ್ರಾಟನನ್ನು 1711ರ ಸೆಪ್ಟೆಂಬರ್ 14ರಂದು ಮುಟ್ಟಿತು. ಕೀರತ್‌ಪುರದೆಡೆಗೆ ತೆರಳಲು ಸಾಮ್ರಾಟನು ಮಹಮ್ಮದ್ ಅಮೀನ್ ಖಾನ್‌ಗೆ

ಸಂದೇಶ ಕಳುಹಿಸಿದನು. ಆದರೆ ನದಿಯಲ್ಲಿ ಪ್ರವಾಹ ಉಕ್ಕಿದ ಕಾರಣ ಖಾನ್ ದಂಡೆಯಲ್ಲೇ ನಿಲ್ಲಬೇಕಾಯಿತು. ಕೊನೆಗೆ ಅಕ್ಟೋಬರ್ 5 ರಂದು ಆತ ನದಿಯನ್ನು ದಾಟಿದ. ಈ ಸುದ್ದಿಯನ್ನು ತಿಳಿದ ತಕ್ಷಣವೇ ಬಂದಾ ಸಿಂಗ್ ಪರ್ವತಗಳತ್ತ ಪ್ರಯಾಣಿಸಿ ಕುಲ್ಲು ರಾಜ್ಯವನ್ನು ಸೇರಿಕೊಂಡ.

ಸಾಮ್ರಾಟ ಬಹದ್ದೂರ್ ಶಾ ನವೆಂಬರ್ 2 ರಂದು ಇರದತ್ ಖಾನ್‌ನ ಮಗ ಹೋಶಿಯಾರ್ ಖಾನ್‌ನನ್ನು ಜಲಂಧರ್ ದಾವೋಬ್‌ನ ಸೇನಾ ನಾಯಕನನ್ನಾಗಿ ನೇಮಕಾತಿ ಮಾಡಿ, ಸಿಕ್ಖರ ವಿರುದ್ಧದ ಹೋರಾಟಕ್ಕೆ ಕಳುಹಿಸಿದ. ಸಾಮ್ರಾಟನನ್ನು ನವೆಂಬರ್ 5 ರಂದು ತಲುಪಿದ ಪತ್ರದಲ್ಲಿ ಮಹಮದ್ ಅಮೀನ್ ಖಾನ್ ಮುಂದಿನಂತೆ ಅಳಲು ತೋಡಿಕೊಂಡಿದ್ದ. "ಸಿಕ್ಖರು ನಮ್ಮ ಶಿಬಿರದ ಮೇಲೆ ರಾತ್ರಿ ವೇಳೆ ದಾಳಿ ಮಾಡುತ್ತಾರೆ. ಅವರನ್ನು ಓಡಿಸಲು ಐದು ಸಾವಿರ ಸೈನಿಕರನ್ನು ದಯವಿಟ್ಟು ಕಳುಹಿಸಿಕೊಡಿ" ಮಾರನೆಯ ದಿನವೇ ಬಹದ್ದೂರ್ ಶಾ ಐದು ಸಾವಿರ ಸೈನಿಕರನ್ನು, ಮೂರು ಸಆವಿರ ತರಬೇತು ನೀಡಿದ ಬಂದಾೂಕುಧಾರಿಗಳನ್ನು ಜಲಂಧರ್‌ನ ಸೇನಾಧಿಪತಿ ಹೋಶಿಯಾರ್ ಖಾನ್ ನೇತೃತ್ವದಲ್ಲಿ ರೂಪರ್ ಕಡೆ ರವಾನಿಸಿದ.

1711ರ ನವೆಂಬರ್ 12ರಂದು ಸರ್ಹಿಂದ್‌ನ ಹೊಸ ರಾಜ್ಯಪಾಲ ಜೈನುದ್ದೀನ್ ಅಹಮದ್ ಖಾನ್ ಉತ್ತಮ ತರಬೇತಿ ಪಡೆದ ಒಂದು ಸಾವಿರ ಸೈನಿಕರೊಡನೆ ಮಹಮ್ಮದ್ ಖಾನ್‌ನನ್ನು ಸೇರಿಕೊಂಡ. ಹರಿ ಜಂಗಲ್ ಬಳಿ ಸಿಖ್ ಸೈನಿಕರ ವಿರುದ್ಧ ಅರಸನ ಸೈನಿಕರು ನಾಲ್ಕು ಗಂಟೆಗಳ ಕಾಲ ತುರಸಿನ ಕಾಳ ನಡೆಸಿದ ಸುದ್ದಿ ಸಾಮ್ರಾಟನನ್ನು 14ನೇ ನವೆಂಬರ್ ತಲುಪಿತು. ಈ ಕಾಳಗದಲ್ಲಿ ಅರಸನ ಸೇನೆಯ ಹಲವರು ಪ್ರಾಣ ಕಳೆದುಕೊಂಡರು.

### ನಲವತ್ತು ಸಿಕ್ಖರನ್ನು (ವಂಜಾರ ಮತ್ತು ಇತರರು) ಕೊಂದದ್ದು

ಸಿಕ್ಖರನ್ನು ನಿರ್ಮೂಲಗೊಳಿಸಲು ಸಾಮ್ರಾಟ ಹೊರಡಿಸಿದ ಆದೇಶವನ್ನು ಕಾರ್ಯರೂಪಕ್ಕೆ ತರಲು ಮುಸ್ಲಿಂ ಅಧಿಕಾರಿಗಳು, ಮೌಲ್ವಿಗಳು, ಪಾಳೆಯಗಾರರು, ಹಿಂದೂ ಶ್ರೀಮಂತರು ಕ್ರಿಯಾಶೀಲರಾದರು. ಈ ಆಜ್ಞೆಯ ಅನುಷ್ಠಾನದ ಅಂಗವಾಗಿ ಮುಲ್ತಾನ್‌ನ ನಾಯಕ ತನ್ನ ಪ್ರಾಂತ್ಯದ ವಿವಿಧ ಸ್ಥಳಗಳಿಂದ 40 ಸಿಕ್ಖರನ್ನು ಬಂಧಿಸಿದ. ಬಂಧಿತರಲ್ಲಿ ಬಹುತೇಕರು ವಂಜಾರರು ಮತ್ತು ಭಟ್ಟರು, ಅವರೆಲ್ಲರನ್ನು ಸಾಮ್ರಾಟನ ಮುಂದೆ ಹಾಜರುಪಡಿಸಲು ಲಾಹೋರ್‌ಗೆ ರವಾನಿಸಿದ. 1711ರ ಅಕ್ಟೋಬರ್ 11 ರಂದು ಅವರ ವಿಚಾರಣೆ ನಡೆಸಿದ ಸಾಮ್ರಾಟ, ಇಸ್ಲಾಂಗೆ ಮತಾಂತರವಾಗುವಂತೆ, ತಪ್ಪಿದಲ್ಲಿ ಜೀವಂತ ಹೂಳುವುದಾಗಿ ಬೆದರಿಕೆ ಹಾಕಿದ. ತಮ್ಮ ಧರ್ಮವನ್ನು ತೊರೆಯಲು ಯಾರೂ ಒಪ್ಪಲಿಲ್ಲ. ಹಾಗಾಗಿ ಅವರೆಲ್ಲರನ್ನು ಚಕ್ರವರ್ತಿಯ ಶಿಬಿರದ ಹತ್ತಿರದ ಅಲೋವಲ್ ಗ್ರಾಮದ ಬಳಿ ಗುಂಡಿ ತೆಗೆದು ಜೀವಂತ ಸಮಾಧಿ ಮಾಡಲಾಯಿತು.(4) ಹಾಗೆ ಸಮಾಧಿಯಾದವರಲ್ಲಿ ಕೆಲವರು–ಸಜ್ಜಿ ಸಿಂಗ್ ಚೌಹಾಣ್, ಡೋಗರ್ ಸಿಂಗ್, ಹೀರಾ ಸಿಂಗ್, ದ್ಯಾಲ್ ಸಿಂಗ್, ಕೇತೋ ಸಿಖ್ ಭಟ್, ದೇಸ ಸಿಂಗ್ ಭಟ್, ನರ್ಬುಡ್ ಸಿಂಗ್ ಭಟ್, ತಾರಾಸಿಂಗ್ ಭಟ್, ಸೇವಾಸಿಂಗ್ ಭಟ್, ದೇವ ಸಿಂಗ್ ಭಟ್, ಜೇತಸಿಂಗ್ ಚೌಹಾಣ್, ಜೇತ ಸಿಂಗ್ ಪರ್ಮರ್, ಹರಿ ಸಿಂಗ್, ರೂಪ್‌ಸಿಂಗ್, ಪರ್ಸನ್‌ಸಿಂಗ್ ರಾಥೋಡ್, ಅನೂಪ್ ಸಿಂಗ್, ಕೇಹರ್ ಸಿಂಗ್, ಚನ್ನನ್ ಸಿಂಗ್, ಧರಂ ಸಿಂಗ್ ಇತ್ಯಾದಿ.(5)

### ಬಿಲಾಸ್‌ಪುರ ಯುದ್ಧ

1711ರ ಡಿಸೆಂಬರ್ ತಿಂಗಳಲ್ಲಿ ಸಿಕ್ಖರ ಸೈನ್ಯ ಬಿಲಾಸ್‌ಪುರ್ ರಾಜ್ಯದ ಗಡಿ ಪ್ರವೇಶಿಸಿತು. ಆ

ಸೈನ್ಯದಲ್ಲಿ ಬಂದಾ ಸಿಂಗ್ ಇರಲಿಲ್ಲ. ಸಿಕ್ಖರು ಬಿಲಾಸ್‌ಪುರದ ಕಡೆಗೆ ಹೋಗುತ್ತಿರುವ ಸುದ್ದಿಯನ್ನು ತಿಳಿದ ಮಹಮ್ಮದ್ ಅಮೀದ್ ಖಾನ್ ಬಿಲಾಸಪುರದ ಕಡೆಗೆ ದೊಡ್ಡದೊಂದು ಸೇನೆಯನ್ನು ಮುನ್ನಡೆಸಿದ. ಡಿಸೆಂಬರ್ 27ರಂದು ಅವನ ಸೇನೆ ಬರ್ಸನ ನದಿಯ ದಡವನ್ನು ತಲುಪಿ ಅಲ್ಲಿ ಶಿಬಿರವನ್ನು ಹೂಡಿತು.

ಮಾರನೆಯ ದಿನ ಆ ಸೈನ್ಯದ ಮೇಲೆ ಸಿಕ್ಖರು ಹಠಾತ್ ದಾಳಿ ನಡೆಸಿದರು. ಅರಸನ ಸೇನೆ ಮತ್ತು ಸಿಕ್ಖರ ಸೇನೆಯ ನಡುವೆ ಬಂದೂಕಿನ ಗುಂಡಿನ ಮತ್ತು ಬಾಣಗಳ ತೀವ್ರ ವಿನಿಮಯದ ಯುದ್ಧ ಜರುಗಿತು. ಈ ಯುದ್ಧದಲ್ಲಿ ಹಲವರು ಮುಘಲರು ಮತ್ತು ಸುಮಾರು 500 ಸಿಖ್ ಸೈನಿಕರು ಮಡಿದರು. ಸತ್ತ ಪ್ರಮುಖರಲ್ಲಿ ಚಿತರ್ ಸಿಂಗ್‌ನ ಮಗ ಕೇಸೋ ಸಿಂಗ್ ಮತ್ತು ಉದೇ ಸಿಂಗ್‌ನ ಮಗ ಬಾಗ್ ಸಿಂಗ್ ಸೇರಿದ್ದರು. ಇವರಿಬ್ಬರೂ ಭಾಯ್ ಮಾನ್‌ಸಿಂಗನ ಮೊಮ್ಮಕ್ಕಳು. ಸಂಜೆಯಾದ ನಂತರ ಸಿಕ್ಖರು ಯುದ್ಧಭೂಮಿ ತೊರೆದು ನದಿಯನ್ನು ದಾಟಿ ಬಿಲಾಸ್‌ಪುರ್ ಕಡೆ ಪ್ರಯಾಣ ಮುಂದುವರೆಸಿದರು.

ಈ ಯುದ್ಧದಲ್ಲಿ ಉಭಯ ಪಕ್ಷದವರಿಗೂ ಸಮ್ಮಾನ ಪ್ರಮಾಣದ ಹಾನಿ ಸಂಭವಿಸಿತು. ಆದರೆ ವರದಿಗಾರರು ಮುಘಲ್ ಸೇನೆ ಯುದ್ಧದಲ್ಲಿ ಜಯಗಳಿಸಿತೆಂದು ತಪ್ಪು ಸಂದೇಶವನ್ನು ಸಾಮ್ರಾಟನಿಗೆ ರವಾನೆ ಮಾಡಿದರು. ಸಾಮ್ರಾಟನ ಶಹಬ್ಬಾಸ್‌ಗಿರಿ ಪಡೆಯಲು ಸತ್ತ ಸಿಖ್ ಸೈನಿಕರ ತಲೆ ತರಿದು ಅವನ ಮುಂದೆ ಪ್ರದರ್ಶಿಸಲು ನಿರ್ಧರಿಸಿದ.

ಜನವರಿ 12, 1712ರಂದು ಈ ತಲೆಗಳನ್ನು ಪರಿಶೀಲಿಸಿದ ಸಾಮ್ರಾಟ ಬಹದ್ದೂರ್ ಶಾ, ಸಿಖ್‌ಪರ ಸಹಾನುಭೂತಿ ಹೊಂದಿರುವವರಲ್ಲಿ ಭೀತಿ ಹುಟ್ಟಿಸಲು ಅವುಗಳನ್ನು ಬಯಲಿನಲ್ಲಿ ನೇತು ಹಾಕಲು ಆಜ್ಞಾಪಿಸಿದ.

1712ರ ಜನವರಿ 18 ರಂದು ಸಾಮ್ರಾಟ ಬಹದ್ದೂರ್ ಶಾ ಈ ತಲೆಗಳ ಮಿನಾರನ್ನು (ಗೋಪುರ) ನಿರ್ಮಿಸಲು ಆಜ್ಞೆ ಮಾಡಿದ. ಮುಘಲರ ಗೆಲುವನ್ನು ಸಂಭ್ರಮಿಸಲು ಮುಜ್ರಾ ಏರ್ಪಡಿಸಿದ. ಜೋತಿಷಿಗಳ ಸಲಹೆಯಂತೆ ಒಂದು ಕುದುರೆ, ಒಂದು ಎತ್ತು, ಒಬ್ಬ ಗುಲಾಮ ಕೆಲವು ಚಿನ್ನದ ವಸ್ತುಗಳನ್ನು ದಾನ ಮಾಡಿದ. ಆದರೂ ಸಿಕ್ಖರ ಬಗೆಗಿನ ಭಯ ದೂರವಾಗಿರಲಿಲ್ಲ. (ಇದೇ ಚಿಂತೆಯಲ್ಲಿ ಖಿನ್ನವಾಗಿ ಕೊನೆಗೆ ಹಾಸಿಗೆ ಹಿಡಿದ)[6]

ಬಂದಾ ಸಿಂಗ್ ಕೀರತ್‌ಪುರದಿಂದ ಬಿಲಾಸ್‌ಪುರ್‌ಗೆ ಹೊರಟಿರುವ ಸುದ್ದಿಯನ್ನು ಸಾಮ್ರಾಟನಿಗೆ 1712ರ ಜನವರಿ 22 ರಂದು ತಿಳಿಸಲಾಯಿತು. ಮುಘಲ್ ಆಸ್ಥಾನದ ಮಾಹಿತಿದಾರರು ತಾವು ಆತನನ್ನು ಕೀರತ್‌ಪುರದಿಂದ 25 ಕಿ.ಮೀ. ದೂರದಲ್ಲಿರುವ ಬಸ್ಸಿ ಆಫ್ಘಾನ ಗ್ರಾಮದಲ್ಲಿ ನೋಡಿದ್ದಾಗಿ ತಿಳಿಸಿದರು. ಅಲ್ಲದೆ ಬಿಲಾಸ್‌ಪುರದ ರಾಜ ಸಿಕ್ಖರಿಗೆ ಸುರಕ್ಷವಾದ ಆಶ್ರಯ ನೀಡಿದ್ದಾನೆಂದು ಸಹ ತಿಳಿಸಿದರು. ಸಿಖ್ ಸೈನಿಕರಿಗೆ ಸಹಾಯ ಮಾಡಿದ ಅಲ್ಲಿನ ನಿವಾಸಿಗಳ ಅಪರಾಧಕ್ಕೆ ಶಿಕ್ಷೆ ವಿಧಿಸಲು ಮುಘಲ್ ದಂಡನಾಯಕ ಫಿರೋಜ್ ಜಂಗ್ ಖಾನ್ ಕೀರತ್‌ಪುರ ಮತ್ತು ಕಲ್ಯಾಣ್‌ಪುರಗಳನ್ನು ಸುಟ್ಟು ಭಸ್ಮ ಮಾಡಿದ ವಿಷಯ ಸಹ ತಿಳಿಸಿದರು. ಕೀರತ್‌ಪುರದಿಂದ 5 ಕಿ.ಮೀ. ದೂರದ ನಿರ್ಮೋಹ ಗ್ರಾಮದಲ್ಲಿ ತಾನೇ ನಿಂತು ಫಿರೋಜ್ ಜಂಗ್ ಖಾನ್ ಸಿಕ್ಖರ ಯುದ್ಧದ ಉಸ್ತುವಾರಿ ವಹಿಸಿರುವ ಸುದ್ದಿಯನ್ನು ಸಹ ಸಾಮ್ರಾಟನಿಗೆ ಹೇಳಿದರು.[7]

**ಹಾತಿಮ್ ಖಾನ್‌ನ ಕೊಲೆ**

ಇದೇ ದಿನಮಾನದಲ್ಲಿ ಜೋಧಪುರ ಮತ್ತು ಜಯಪುರದ ಹಿಂದೂ ರಾಜರು ತಮ್ಮ ತಮ್ಮ ರಾಜ್ಯಗಳಿಗೆ ತೆರಳಿದರು. ಅವರು ತೆರಳಿದ ನಂತರ ಸಿಕ್ಖರ ವಿರುದ್ಧದ ಆಂದೋಲನದಲ್ಲಿ ಅವರು ನೀಡಿದ ಸಹಾಯಕ್ಕಾಗಿ ಅವರನ್ನು ಪುರಸ್ಕರಿಸಲು ಸಾಮ್ರಾಟ್ ಬಹದ್ದೂರ್ ಶಾ ನಿರ್ಧರಿಸಿದ. ಅದರಂತೆ, ಇಬ್ಬರು ರಾಜರಿಗೆ ಉಚಿತ ಉಡುಗೊರೆಗಳನ್ನು ಖುದ್ದಾಗಿ ತಲುಪಿಸಲು ಹಿರಿಯ ಅಧಿಕಾರಿ ಹಾಥಿಮ್ ಖಾನ್‌ನನ್ನು ರಾಜಕುಮಾರ ಅಜಿಮುಶಾನ್ ಕಳುಹಿಸಿದ. ಈ ಇಬ್ಬರು ರಾಜರು ರಜಪೂತ ಸಾಮ್ರಾಜ್ಯದ ವಲಯಕ್ಕೆ ಹತ್ತಿರವಿರುವಾಗ ಹಾಥೀಮ್ ಖಾನ್ ಅವರನ್ನು ಭೇಟಿಯಾಗಿ ಸಾಮ್ರಾಟ ಅವರಿಗೆ ಕಳುಹಿಸಿದ ಉಡುಗೊರೆ ಮತ್ತು ಹೆಚ್ಚಿಸಿದ ಮನ್ಸಾಬ್‌ಗೆ ಸಂಬಂಧಿಸಿದ ಆದೇಶ ಪತ್ರಗಳನ್ನು ತಲುಪಿಸಿದ. ಆದರೆ ಅವರಿಗೆ ಉಡುಗೊರೆ ತಲುಪಿಸಿದ ಸುದ್ದಿಯನ್ನು ಸಾಮ್ರಾಟನಿಗೆ ತಿಳಿಸಲು ಲಾಹೋರ್‌ಗೆ ಹಿಂದಿರುಗಿ ಹೊರಟ ಹಾಥಿಮ್ ಖಾನ್‌ನನ್ನು ಜಜ್ಜರ್ ಪಟ್ಟಣದ ಬಳಿ ಸಿಖ್ ಸೈನಿಕರು ಹಿಡಿದು ಕೊಂದು ಹಾಕಿದರು. ಆತನ ಸಾವಿನ ವರದಿಯು ಬಹದ್ದೂರ್ ಶಾನಿಗೆ 1712ರ ಫೆಬ್ರುವರಿ 1 ರಂದು ತಲುಪಿತು.(8)

1712 ರ ಜನವರಿಯಲ್ಲಿ ಬಂದಾ ಸಿಂಗ್ ಬಿಲಾಸ್‌ಪುರದಲ್ಲಿ ಹಾಜರಿದ್ದ. ಆ ಸಮಯದಲ್ಲಿ ದೊಡ್ಡ ಪರಗಣವಾಗಿದ್ದ ಜಿಂದ್‌ಬಾರಿಯಲ್ಲಿ ಹೋಶಿಯರ್‌ಖಾನ್‌ನ ಸೈನ್ಯದ ಮೇಲೆ ಸಿಖ್ ತುಕಡಿಯೊಂದು ಮುಗಿಬಿತ್ತು. ಇದರಿಂದ ಹಲವಾರು ಮುಘಲ್ ಸೈನಿಕರು ಹತರಾದರು.

ಸಿಕ್ಖರ ವಿರುದ್ಧ ಹೋರಾಡಲು ಸಾಮ್ರಾಟ ಬಹದ್ದೂರ್ ಶಾ 1712 ಜನವರಿ 23 ರಂದು ಜಮ್ಮು ಪ್ರಾಂತ್ಯದ ಫೌಜಿದಾರ ಫಿರೋಜ್‌ಖಾನ್‌ನನ್ನು ರವಾನಿಸಿದ. ಅದಾಗಲೇ ಮಹಮದ್ ಅಮೀನ್ ಖಾನ್ ಮತ್ತು ಹೋಷಿಯಾರ್ ಖಾನ್ ದೊಡ್ಡ ಸೇನೆಯೊಡನೆ ಸಿಕ್ಖರ ಬೆನ್ನಟ್ಟಿದ್ದರು. ಅಮೀನ್‌ಖಾನ್ ತನ್ನ ಶಿಬಿರವನ್ನು ಬಲೋವರ್ ಗ್ರಾಮದಲ್ಲಿ ಸ್ಥಾಪಿಸಿದ್ದರೆ, ಹೋಶಿಯಾರ್‌ಖಾನ್ ಜೈಜಾನ್ ಪಟ್ಟಣದ ಹತ್ತಿರ ಶಿಬಿರವನ್ನು ಹೂಡಿದ್ದ. ಜಜ್ಜರ್ ಮತ್ತು ಜಿಂದ್ ಬರಿಯಲ್ಲೂ ಮುಘಲರ ಸೇನಾ ನೆಲೆಗಳಿದ್ದವು. ನಾಲ್ಕು ಕಡೆಗಳ ಶಿಬಿರದ ನಾಲ್ಕು ದಂಡನಾಯಕರು ಬಂದಾ ಸಿಂಗ್‌ನ ಚಲನವಲನದ ಮೇಲೆ ನಿಗಾವಹಿಸಿದ್ದರು. ಆತ ಆಗ ಬಿಲಾಸ್‌ಪುರದಲ್ಲಿದ್ದ. ಆದರೆ ಮುಘಲ್ ಸೇನೆ ಬಿಲಾಸ್‌ಪುರದ ಕಡೆ ತೆರಳಲಿಲ್ಲ. ಅವರು ಬಂದಾ ಸಿಂಗ್ ಬಯಲಿಗೆ ಇಳಿಯಲೆಂದು ಕಾಯುತ್ತಿದ್ದರು. ಮುಘಲರಿಗೆ ಯಾವುದೇ ಫಲವಿಲ್ಲದ ಅವಧಿ ಇದಾಗಿತ್ತು.

ಲಕ್ಷಾಂತರ ರೂಪಾಯಿ ವೆಚ್ಚ ಮಾಡಿದ್ದರು. ಅಪಾರ ಶಸ್ತ್ರಾಸ್ತ್ರ ಬಳಸಿದರೂ ಬಹುದ್ದೂರ್ ಶಾಗೆ ಸಿಖ್ ಬಂಡಾಯವನ್ನು ಸಂಪೂರ್ಣ ಹತೋಟಿಗೆ ತರಲು ಆಗಿರಲಿಲ್ಲ. ಬಂದಾ ಸಿಂಗ್‌ನನ್ನು ಕೊಲ್ಲುವುದು ಮತ್ತು ಸಿಕ್ಖರನ್ನು ದಮನ ಮಾಡುವುದು ಬಹದ್ದೂರ್ ಶಾ ಪಾಲಿಗೆ ಸಾವು ಬದುಕಿನ ಪ್ರಶ್ನೆಯಾಯಿತು. ಇದಕ್ಕೂ ಮುನ್ನ ಆತ ತನ್ನ ಎಲ್ಲ ಸೋದರರನ್ನು ಸೋಲಿಸಿ ಕೊಂದು ಹಾಕುವುದರಲ್ಲಿ ಯಶಸ್ವಿಯಾಗಿದ್ದ. ದಕ್ಷಿಣದಲ್ಲಿ ಎದ್ದ ಬಂಡಾಯವನ್ನು ಅಡಗಿಸಿದ್ದ. ಹಿಂದೂ ರಜಪೂತ ರಾಜರು ತನಗೆ ಅಧೀನವಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದ. ಸಾಮ್ರಾಟನ ಈ ಎಲ್ಲ ಶತ್ರು ರಾಜರ ಹತ್ತಿರ ಅಪಾರವಾದ ಶಸ್ತ್ರಾಸ್ತ್ರ, ಸಂಪನ್ಮೂಲ ಅಧಿಕಾರ ಮತ್ತು ಸೈನ್ಯ ಪಡೆಯಿತ್ತು. ಆದರೂ ಬಂದಾ ಸಿಂಗ್ ಬಂಧನವನ್ನು ತಪ್ಪಿಸಿಕೊಳ್ಳುತ್ತಲೇ ಇದ್ದ. ಆದರೆ ಸಿಕ್ಖರ ಸಂಖ್ಯೆ ಕಡಿಮೆಯಿತ್ತು; ಹಣವಿರಲಿಲ್ಲ. ಕುದುರೆ, ಶಸ್ತ್ರಾಸ್ತ್ರ, ಕೋಟೆ ಇತ್ಯಾದಿಗಳಿರಲಿಲ್ಲ. ಆದರೂ ಬಂದಾ ಸಿಂಗ್ ಇನ್ನೂ ಕೈಗೆ ಸಿಗದೆ ತಪ್ಪಿಕೊಂಡಿದ್ದ. ಸಿಕ್ಖರ ವಿರುದ್ಧ ತನ್ನ ಹೋರಾಟವನ್ನು ಆರಂಭಿಸಿದಾಗ ಅವರ ಸಂಖ್ಯೆ, ಸ್ಥಿತಿಗತಿ, ಶಕ್ತಿ ಎಲ್ಲದರ ಬಗ್ಗೆ ಬಹದ್ದೂರ್ ಶಾಗೆ ಅರಿವಿತ್ತು. ಹಾಗಾಗಿ ಸಿಕ್ಖರನ್ನು ಅಲ್ಪಾವಧಿಯಲ್ಲಿಯೇ

ನಿರ್ಮೂಲ ಮಾಡುವ ವಿಶ್ವಾಸವಿತ್ತು. ಆದರೆ ತಾನು ಮಾಡಿದ ತಪ್ಪು ಲೆಕ್ಕಾಚಾರದಿಂದ ದಿಗ್ಭ್ರಮೆಯಾಗಿತ್ತು.

ಬಹದ್ದೂರ್ ಶಾಗೆ ಬಹುಬೇಗನೆ ಆಶಾಭಂಗವಾಯಿತು. ಬಂದಾ ಸಿಂಗ್ ಅನ್ನು ಬಂಧಿಸಿ ಕೊಲ್ಲುವುದಿರಲಿ, ಅವನ ಸಮೀಪಕ್ಕೆ ಹೋಗಲು ಆಗಲಿಲ್ಲ. ಹತ್ತಾರು ಯುದ್ಧ ಮತ್ತು ಸಂಘರ್ಷಗಳಲ್ಲಿ ಸಾವಿರಾರು ಸಿಕ್ಖರು ಕೊಲೆಯಾದರು. ಆದರೂ ಅವನ ಸಂಖ್ಯೆ ಕಡಿಮೆಯಾಗಲಿಲ್ಲ. ಬಹುತೇಕ ಎಲ್ಲ ದೊಡ್ಡ ನಾಯಕರು ಇನ್ನೂ ಸಕ್ರಿಯರಾಗಿದ್ದರು. ಇದೆಲ್ಲವೂ ಬಹದ್ದೂರ್ ಶಾನ ವ್ಯಾಕುಲ ಹೆಚ್ಚಿಸಿದವು. ಒಂದು ರಈತಿಯ ಮನೋರೋಗಿಯಾದ. ಅರೆಹುಚ್ಚನಂತೆ ಸಿಕ್ಖರನ್ನು ನೆನೆದು ಗದ್ಗದಿಸುತ್ತಿದ್ದ; ಪಿಸುಗುಡುತ್ತಿದ್ದ. ಅನೇಕ ಬಾರಿ ಬಂದಾ ಸಿಂಗ್‌ನ ಹೆಸರು ಹೇಳಿ ಭಯವಿಹ್ವಲನಾಗುತ್ತಿದ್ದ. ಬಹದ್ದೂರ್ ಶಾನ ಹುಚ್ಚು ದಿನೇ ದಿನೇ ಹೆಚ್ಚಿತು. ಬಹುಬೇಗನೆ ಆತ ಸಂಪೂರ್ಣ ಹುಚ್ಚನಾದ.

ಈಗ ಆತ ವಿಚಿತ್ರ ಹೇಳಿಕೆಗಳನ್ನು ನೀಡುತ್ತಿದ್ದ. ತಿಕ್ಕಲು ಆದೇಶಗಳನ್ನು ನೀಡುತ್ತಿದ್ದ. ಮುಘಲ್ ಸೇನೆಯ ಶಿಬಿರದ ಸುತ್ತ ಅಲೆದಾಡುವ ಜೋಗಿಗಳು ಮತ್ತು ಸನ್ಯಾಸಿಗಳು ಬಂದಾ ಸಿಂಗ್‌ಗೆ ಮಾಹಿತಿ ನೀಡುತ್ತಿರಬಹುದೇನೋ ಎಂದು ಒಂದು ದಿನ ಯಾವನೋ ಒಬ್ಬ ಗುಮಾನಿ ವ್ಯಕ್ತಪಡಿಸಿದ. ಆ ಕೂಡಲೇ ಬಹದ್ದೂರ್ ಶಾ, ಎಲ್ಲ ಸಂನ್ಯಾಸಿಗಳನ್ನು ಲಾಹೋರ್‌ನಿಂದ ಆಚೆಗೆ ಅಟ್ಟಲು ಆಜ್ಞೆ ಮಾಡಿದ. ಒಂದು ವೇಳೆ ನಗರದಲ್ಲಿ ಸನ್ಯಾಸಿಯೊಬ್ಬ ಕಾಣಿಸಿಕೊಂಡ ತಕ್ಷಣವೇ ಕೊಲ್ಲಲು ಆಜ್ಞೆ ಮಾಡಿದ. ಇಂಥದ್ದೆ ಆಜ್ಞೆಯನ್ನು ಆತ ಈ ಹಿಂದೆ 1711ರ ಅಕ್ಟೋಬರ್ 26ರಂದು ಹೊರಡಿಸಿದ್ದ.

**ಬಹುದ್ದೂರ್ ಶಾನ ಸಾವು**

ಸಿಕ್ಖರ ನಿರ್ಮೂಲನಕ್ಕೆ ತೆಗೆದುಕೊಂಡ ಕ್ರಮಗಳೆಲ್ಲವೂ ನಿಷ್ಫಲವಾದುದನ್ನು ಕಂಡ ಬಹದ್ದೂರ್ ಶಾ ವಿಚಿತ್ರವಾಗಿ ವರ್ತಿಸಲು ಆರಂಭಿಸಿದ. ಒಬ್ಬ ಕೋಪಿಷ್ಠನಾಗಿ ವರ್ತಿಸುತ್ತಿದ್ದ. ವಿಚಿತ್ರ ಹೇಳಿಕೆ ನೀಡುತ್ತಿದ್ದ. ತಿಕ್ಕಲು ಆಜ್ಞೆಗಳನ್ನು ಹೊರಡಿಸುತ್ತಿದ್ದ. ಬೃಹತ್ ಮುಘಲ್ ಸೇನೆಯು ಮುತ್ತಿಗೆ ಹಾಕಿದ್ದರೂ ಬಂದಾ ಸಿಂಗ್ ಲೋಹಗಡದಿಂದ ತಪ್ಪಿಸಿಕೊಂಡ (30.11.1710) ದಿನದಿಂದ ಸಿಕ್ಖರ ವಿರುದ್ಧದ ಆಂದೋಲನಗಳ ಫಲಿತಾಂಶಗಳು ಅವನ ಮೇಲೆ ಕೆಟ್ಟ ಪರಿಣಾಮ ಬೀರಲಾರಂಭಿಸಿದವು. ಬಂದಾ ಸಿಂಗ್ ತಪ್ಪಿಸಿಕೊಂಡದ್ದನ್ನು ಕೇಳಿದ ಸಾಮ್ರಾಟ ಕೆರಳಿದ. ತನ್ನ ನಿಷ್ಠಾವಂತ ಅನುಯಾಯಿ ಮನೈಮ್ ಖಾನ್ ಖಾನ ಖಾನನ್ ಅನ್ನು ಪರೋಕ್ಷವಾಗಿ **'ನಾಯಿ'** ಎಂದು ಜರೆದ. ಖಾನ್ ಖಾನ ಈ ಅಪಮಾನವನ್ನು ಸಹಿಸದೆ ಕುಸಿದ (ಮತ್ತು ನಿಧನನಾದ)[10] ಇದೇ ಖಾನ್ ಖಾನನ ಕಾರ್ಯವನ್ನು ಮೆಚ್ಚಿ ಅನೇಕ ಬಿರುದುಗಳನ್ನು, ಗೌರವ ವಸ್ತ್ರಗಳನ್ನು ಸಾಮ್ರಾಟನು ಹಿಂದೆ ದಯಪಾಲಿಸಿದ್ದನು. ಬಹದ್ದೂರ್ ಶಾನ ಮತ್ತೊಂದು ವಿಚಿತ್ರ ಆಜ್ಞೆ 1711ರ ಆಗಸ್ಟ್ 22 ರಂದು ಹೊರಬಿತ್ತು. ಆ ಆಜ್ಞೆಯಲ್ಲಿ ಸರ್ಹಿಂದ್‌ನ ಹಿಂದಿನ ರಾಜ್ಯಪಾಲ ಗಾಜಿಖಾನ್‌ನನ್ನು ಸರಪಳಿಯಲ್ಲಿ ಬಂಧಿಸಿ ಸೆರೆಯಲ್ಲಿಡಬೇಕೆಂಬ ಆದೇಶವಿತ್ತು. ಅಲ್ಲದೆ ಯಾರಾದರೂ ಗಾಜಿಖಾನ್‌ನನ್ನು ಕ್ಷಮಿಸುವಂತೆ ಕೋರಲು ಬಂದಾರೆ, ಅಂತಹವರನ್ನೂ ತಕ್ಷಣ ಸೆರೆಯಲ್ಲಿಡಬೇಕು ಎಂದಿತ್ತು. ಈಗೀಗ ಅಂಥ ಹಲವಾರು ವಿಲಕ್ಷಣ ನಿರ್ಧಾರಗಳನ್ನು ತೆಗೆದುಕೊಂಡಿದ್ದ ಚಕ್ರವರ್ತಿ ತಿಕ್ಕಲು ಆದೇಶಗಳನ್ನು ಹೊರಡಿಸಿದ್ದ.

ಬಹುಬೇಗನೆ ಸಾಮ್ರಾಟ ಬಹದ್ದೂರ್ ಶಾ ಹಾಸಿಗೆ ಬಿಟ್ಟು ಏಳಲಾರದಂತಹ ಸ್ಥಿತಿ ತಲುಪಿದ. 1712ರ ಜನವರಿ ವೇಳೆಗೆ ಸಂಪೂರ್ಣ ಹುಚ್ಚನಾದ. ಆತ ತನ್ನ ಕೊನೆಯ ರಾಜಾಜ್ಞೆಯನ್ನು ಹೊರಡಿಸಿದ್ದು 1712ರ ಫೆಬ್ರುವರಿ 12 ರಂದು. ಅದರಲ್ಲಿ ಲಾಹೋರ್‌ನ ಎಲ್ಲ ನಾಯಿಗಳನ್ನು

ಸಾಯಿಸುವಂತೆ ಸೈನ್ಯಕ್ಕೆ ಆದೇಶ ನೀಡಲಾಗಿತ್ತು. ಆತ ಸಿಕ್ಖರನ್ನು **'ಸಾಗ್'** (ಪರ್ಸಿಯನ್ ಭಾಷೆಯಲ್ಲಿ ನಾಯಿ ಎಂದರ್ಥ)ಎಂದು ಕರೆಯುತ್ತಿದ್ದ. ಬಹುಶಃ ತನ್ನ ಆಜ್ಞೆಯ ಅರ್ಥ ಎಲ್ಲ ಸಿಕ್ಖರನ್ನು ಸಾಯಿಸಿ ಎಂಬ ಅರ್ಥದಲ್ಲಿ ಹೊರಡಿಸಿರಬಹುದು. ಆದರೆ ಅವನ ಆಜ್ಞೆಯನ್ನು ಎರಡು ದಿನದಲ್ಲಿ ಕಾರ್ಯರೂಪಕ್ಕೆ ತಂದು ನಗರದ ಎಲ್ಲ ನಾಯಿಗಳನ್ನು ಕೊಲ್ಲಲಾಯಿತು. ನಗರದಿಂದ ತಪ್ಪಿಸಿಕೊಂಡು ಓಡಿದ ನಾಯಿಗಳು ಮಾತ್ರ ಉಳಿದವು.

ಮುಂದಿನ ಎರಡು ವಾರಗಳಲ್ಲಿ ಕಾಯಿಲೆ ಉಲ್ಬಣವಾಯಿತು. ಸಾಮ್ರಾಟನು ಕೊನೆಯ ದರ್ಬಾರ್ ನಡೆಸಿದ್ದು 1712ರ ಫೆಬ್ರುವರಿ 25ರಂದು. ಅಂದು ಆತ ಏನನ್ನೂ ಹೇಳಲಿಲ್ಲ. ಮುಂದಿನ ಮೂರು ದಿನ ಹಾಸಿಗೆ ಬಿಟ್ಟು ಏಳಲಿಲ್ಲ. ಮುಖ ಮತ್ತು ಹಣೆ ಊದಿತು. ಮೂರು ಜನ ಹಕೀಮರು ನಿರಂತರವಾಗಿ ಚಿಕಿತ್ಸೆ ನೀಡಿದರೂ, ಅವನ ಪರಿಸ್ಥಿತಿಯನ್ನು ಬದಲಾವಣೆ ಕಾಣಲಿಲ್ಲ. 1712ರ ಫೆಬ್ರುವರಿ 27 ಮತ್ತು 28ನೇ ದಿನದ ಮಧ್ಯದಲ್ಲಿ ಸಾವನ್ನಪ್ಪಿದ.

ಬಹದ್ದೂರ್ ಶವವನ್ನು ಶವ ಪೆಟ್ಟಿಗೆಯೊಂದರಲ್ಲಿ ಸುತ್ತಿ ಇಡಿಸಿ ಅದನ್ನು ದೆಹಲಿಯಲ್ಲಿ ಹೂಳಲು ನಿರ್ಧರಿಸಲಾಯಿತು. ಶವವನ್ನು ಮೌಲ್ವಿ ಮರುದುಲ್ಲಾ, ಅಬ್ದುಲ್ ಕಾದಿರ್ ಮತ್ತು ಮೆಹ್‌ಫೂಜ್ ಖಾನ್‌ರವರ ಸುಪರ್ದಿಗೆ ಒಪ್ಪಿಸಲಾಯಿತು. ಆದರೆ ಶವವನ್ನು ದೆಹಲಿಗೆ ತಕ್ಷಣ ಒಯ್ಯಲಾಗಲಿಲ್ಲ. ಬಹದ್ದೂರ್ ಶಾನ ಮಕ್ಕಳ ನಡುವೆ ಈಗಾಗಲೇ ಉತ್ತರಾಧಿಕಾರಕ್ಕಾಗಿ ಕದನ ಆರಂಭವಾಗಿತ್ತು. ಅಂತಿಮವಾಗಿ 43 ದಿನಗಳ ತರುವಾಯ ಬಹದ್ದೂರ್ ಶಾನ ಶವವನ್ನು 1712ರ ಏಪ್ರಿಲ್ 12 ರಂದು ಆತನ ವಿಧವೆ ಮೆಹರ್ ಪರ್ವರ್ ಮತ್ತು ಮಹಮ್ಮದ್ ಖಾನ್ ಹೆಸರಿನ ವ್ಯಕ್ತಿಯ ಮೈಗಾವಲಿನಲ್ಲಿ ದೆಹಲಿಗೆ ಹೊರಡಿಸಲಾಯಿತು.(11) ಕೊನೆಗೆ ಅದು ಮೇ 16 ರಂದು ದೆಹಲಿಯನ್ನು ತಲುಪಿತು. ಸತ್ತ ಅರವತ್ತೇಳು ದಿನಗಳ ನಂತರ ಔರಂಗಜೇಬ್ ನಿರ್ಮಿಸಿದ. ಮಸೀದಿಯೊಂದರ ಆವರಣದಲ್ಲಿ ಅದನ್ನು ಹೂಳಲಾಯಿತು. ಇದು ಭಕ್ತಿಯಾರ್ ಕಾಕಿಯ ಸಮಾಧಿ ಭವನ ಮತ್ತು ಕುತುಬ್ ಮಿನಾರ್‌ಗೆ ಹತ್ತಿರದಲ್ಲಿದೆ.

### ಉತ್ತರಾಧಿಕಾರಕ್ಕಾಗಿ ಕದನ

ಬಹದ್ದೂರ್ ಶಾನ ನಿಧನದ ನಂತರ ಮಹಮದ್ ಅಮೀನ್‌ಖಾನ್ ಸೇರಿದಂತೆ ಸಿಖ್ ವಿರುದ್ಧ ಹೋರಾಟ ಮಾಡುತ್ತಿದ್ದ ಎಲ್ಲ ದಂಡನಾಯಕರು ಲಾಹೋರ್‌ಗೆ ಹಿಂದಿರುಗಿದರು. ಇದರಿಂದ ಸಿಕ್ಖರಿಗೆ ನಿಟ್ಟುಸಿರು ಬಿಡುವಂತಾಯಿತು.

ದೆಹಲಿಯ ಸಿಂಹಾಸನಕ್ಕಾಗಿ ಬಹದ್ದೂರ್ ಶಾನ ನಾಲ್ವರು ಮಕ್ಕಳು ಲಾಹೋರ್‌ನಲ್ಲಿ ಪರಸ್ಪರ ಹೊಡೆದಾಡಿಕೊಂಡರು. 1712 ಮಾರ್ಚ್ 3 ರಂದು ಜಹಂದರ್ ಶಾ ಮತ್ತು ಅಜಿಮುಶಾನ್ ಸೈನ್ಯದ ನಡುವೆ ಭೀಕರ ಕಾಳಗ ನಡೆಯಿತು.(12) ಈ ರಾಜ ಸಮರದಲ್ಲಿ ಮೊದಲ ಸಂಭವಿಸಿದ ಮೊದಲ ದುರಂತವೆಂದರೆ, ಅಜಿಮುಶಾನ್‌ನ ಸಾವು. ಜಹಂದರ್ ಶಾನ ನಿಷ್ಠಾವಂತ ಅನುಯಾಯಿಯಾಗಿದ್ದ ಅಬ್ದುಸ್ ಸಮದ್‌ಖಾನ್ ಕಾಳಗದಲ್ಲಿ ಅಜುಮುಶಾನ್‌ನನ್ನು ಕೊಂದು ಹಾಕಿದ. ಅವನ ಶವವನ್ನು ಹೊತ್ತು ತಂದು ಜಹಂದರ್ ಶಾ ಮುಂದೆ ಹಾಕಿದ.

ಎರಡನೇ ಕದನ ಜಹಂದರ್ ಶಾನ ಸೈನ್ಯ ಮತ್ತು ರಫಿಯುಶಾನ್ ಹಾಗೂ ಜಹನ್‌ಶಾ ಅವರ ಸಂಯುಕ್ತ ಸೈನ್ಯದೊಡನೆ ನಡೆಯಿತು. ಆರಂಭದಲ್ಲಿ ಜಹನ್ ಶಾ ಪಡೆ ಮೇಲುಗೈ ಸಾಧಿಸಿತ್ತು. ಅವನ ಅನುಯಾಯಿಗಳಾದ ರುಸ್ತುಮ್ ದಿಲ್ ಖಾನ್, ಜಾನಿ ಖಾನ್ ಮತ್ತು ಮುಖ್ಲಿಸ್ ಖಾನ್

ಜಹಂದರ್ ಶಾನ ಪಡೆಯನ್ನು ಸೋಲಿಸಿ ಜಹಂದರ್ ಖಾನ್ ಮಗ ಅಜ್-ಉದ್-ದೀನ್‌ನನ್ನು ಸೆರೆ ಹಿಡಿದರು. ಮಾರನೆಯ ದಿನ ತನ್ನ ಮಗ ಫರ್ಕಂದ ಅಖ್ತರ್ ಜೊತೆ ಜಹಾನ್ ಶಾ ತನ್ನ ಶಿಬಿರದೆಡೆಗೆ ತೆರಳುತ್ತಿರುವ ಸಮಯದಲ್ಲಿ, ಅಬ್ದುಸ್ ಸಮದ್ ಖಾನ್ ಫಿರಂಗಿಯನ್ನು ಹಾರಿಸಿ ಇಬ್ಬರನ್ನೂ ಕೊಂದ. ಇದಾದ ನಂತರ ಜಹಾನ್ ಶಾನ ಅನುಯಾಯಿಗಳು ಶರಣರಾದರು. ಜಹಂದರ್ ಶಾನ ಮಗ ಅಜ್-ಉದ್-ದೀನ್ ಅನ್ನು ಬಂಧ ಮುಕ್ತಗೊಳಿಸಿದರು.

ಅಜಿಮುಶಾನ್ ಮತ್ತು ಜಹಾನ್ ಶಾನ ಸಾವಿನ ನಂತರ ಜಹಂದರ್ ಶಾ ಮತ್ತು ರಫಿಯುಶಾನ್ ಪರಸ್ಪರ ಕಾದಾಡಿದರು. ರಫಿಯುಶಾನ್ ತನ್ನ ಸೈನ್ಯದೊಡನೆ ಜಹಂದರ್ ಶಾನ ಸೈನ್ಯದ ಮೇಲೆ ತೀವ್ರ ಆಕ್ರಮಣ ಮಾಡಿದ. ರಫಿಯುಶಾನ್ ಸೈನ್ಯದಲ್ಲಿ ಹೊಸದಾಗಿ ಭರ್ತಿಯಾಗಿದ್ದ ಸೈನಿಕರು, ಉತ್ತಮ ತರಬೇತಿ ಪಡೆದಿದ್ದ ಜಹಂದರ್ ಶಾನ ಸೈನ್ಯದೆದರು ನಿಲ್ಲಲಾಗದೆ ಯುದ್ಧಭೂಮಿ ಬಿಟ್ಟು ಪಲಾಯನ ಮಾಡಲಾರಂಭಿಸಿದರು. ಇದನ್ನು ಕಂಡ ರಫಿಯುಶಾನ್ ತನ್ನ ಸೈನಿಕರನ್ನು ಹುರಿದುಂಬಿಸಲು ಯುದ್ಧದ ಮುಂಚೂಣಿಗೆ ಬಂದಾ ಬೇಗನೆ ಆತನೂ ಆಹುತಿಯಾದ. ಹೀಗೆ ಬಹದ್ದೂರ್ ಶಾನ ನಾಲ್ವರು ಮಕ್ಕಳಲ್ಲಿ ಮೂವರು ಹತರಾದರು. ಆದರೆ ಸೋದರರ ನಡುವಿನ ಶತ್ರುತ್ವ ಅಲ್ಲಿಗೆ ಕೊನೆಯಾಗಲಿಲ್ಲ. ಜಹಂದರ್ ಶಾ ಮತ್ತು ಅವನ ಅನುಯಾಯಿಗಳು ಸತ್ತ ರಾಜನ ಮಕ್ಕಳ ಶವ ಸಂಸ್ಕಾರದ ಬಗ್ಗೆ ಗಮನ ಹರಿಸಲಿಲ್ಲ. ಈ ರಾಜಕುಮಾರರ ಶವಗಳು ರಾವಿ ನದಿಯ ಹತ್ತಿರ ಕಾದ ಹೆಂಚಿನಂತಹ ಮರಳಿನಲ್ಲಿ ಅನಾಥವಾಗಿ ಬಿದ್ದಿದ್ದವು. ನಾಲ್ಕು ದಿನಗಳ ನಂತರ ಅವುಗಳ ಸಂಸ್ಕಾರಕ್ಕೆ ಜಹಂದರ್ ಶಾ ಆಜ್ಞೆ ಮಾಡಿದ.(13)

ಸೋದರರನ್ನು, ಸೋದರ ಮಕ್ಕಳನ್ನು ಕೊಂದ ನಂತರ ಜಹಂದರ್ ಶಾ ಮಾಡಿದ ಮೊದಲ ಕೆಲಸವೆಂದರೆ ತನ್ನ ಶತ್ರುಗಳ ಅಧಿಕಾರಿಗಳು, ಸೇನಾ ನಾಯಕರು, ದಂಡಾಧಿಪತಿಗಳು ಮತ್ತು ಸೋದದರಿಗೆ ನೆರವಾದವರಿಗೆ ಶಿಕ್ಷೆ ವಿಧಿಸಿದ್ದು. ತನ್ನ ನಿಷ್ಠಾವಂತ ಅನುಯಾಯಿಗಳನ್ನು ಪುರಸ್ಕರಿಸಲು ಸಹ ನಿರ್ಧರಿಸಿದ. ಅವರೆಲ್ಲರಿಗೂ, ಬಿರುದು ಬಾವಲಿಗಳಲ್ಲಿ, ಗೌರವ ವಸ್ತ್ರಗಳನ್ನು, ಉಡುಗೊರೆಗಳನ್ನು ಧಾರಾಳವಾಗಿ ನೀಡಿದ.

1712ರ ಮಾರ್ಚ್ 20ರಮದು ಆತ ಮಹಮದ್ ರುಸ್ತುಂಖಾನ್, ಗಾಜಿ ಖಾನ್ ಮತ್ತು ಮುಖ್ಲಿಸ್ ಖಾನ್‌ರವರನ್ನು ಕೊಲ್ಲಲು ಆಜ್ಞೆ ಮಾಡಿದ.(14) ಅಲ್ಲದೆ ಹಮೀದುದ್ದೀನ್ ಖಾನ್ ಬಹದ್ದೂರ್ ಅಲಂಗಿರಿ, ಸರ್‌ಫ್ರಾಜ್ ಖಾನ್ ಬಹದ್ದೂರ್ ಮತ್ತು ಅವನ ಮಕ್ಕಳು, ಸೈಫುಲ್ಲಾ ಖಾನ್, ರೆಹಮಾನ್ ಯಾರ್ ಖಾನ್, ಅತಾವುಲ್ಲ ಖಾನ್, ಫತೇಉಲ್ಲಾ ಖಾನ್ ಮುಂತಾದವರನ್ನು ತಕ್ಷಣವೇ ಬಂಧಿಸಿ ಲಾಹೋರ್ ಕೋಟೆಯ ಸೆರೆಮನೆಯಲ್ಲಿರಿಸಿದ. ಮಾರನೆಯ ದಿನ ಲುತ್‌ಫಲ್ಲಾಖಾನ್, ರೈ ರೈಯಾನ್ ಮತ್ತು ಜಾನಿ ಖಾನ್‌ರವರಿಗೆ ಕ್ಷಮಾದಾನ ಮಾಡಿದ.

1712ರ ಮಾರ್ಚ್ 21ರಂದು ಮುಖ್ಲಿಸ್ ಖಾನ್ ಮತ್ತು ಹಕೀಂ ಮೊಯಿತ್‌ಮದ್-ಉಲ್-ಮುಲ್ಕ್ ಅವರ ಅಂಗಾಂಗ ಛೇಧಿಸಿ ಸಾಯಿಸಲು ಜಹಂದರ್ ಶಾ ಆಜ್ಞೆ ಮಾಡಿದ.(15) ಈ 1712 ಮಾರ್ಚ್ 23ರಂದು ಜಹಂದರ್ ಶಾ ಅಧಿಕೃತವಾಗಿ ಲಾಹೋರ್ ಕೋಟೆಯಲ್ಲಿ ಸಿಂಹಾಸನವನ್ನೇರಿ ಮೊದಲ ದರ್ಬಾರ್ ನಡೆಸಿದ.

---

**ಅಡಿ ಟಿಪ್ಪಣಿಗಳು**

1. ಅಕ್ಬರಾತ್–ಐ–ದರ್ಬಾರ್–ಐ–ಮೌಲ ನಮೂದು 01.08.1711
2. ದೈಹಿಕ ಕಾಯಿಲೆಗಳನ್ನು ಕೆಲವು ಆಚರಣೆ ಮೂಲಕ ಗುಣಪಡಿಸಬಹುದೆಂದು ಹಿಂದೂಗಳು ಜನರನ್ನು ನಂಬಿಸಿದ್ದಾರೆ. ಸೀತಾಳೆ ಸಿಡುಬನ್ನು ಗುಣಪಡಿಸಬಹುದೆಂಬ ನಂಬಿಕೆ ಅಂತಹವುಗಳಲ್ಲೊಂದು. ಸಿಖ್ ಧರ್ಮ ಇಂತಹದನ್ನು ಮೋಸ ಎಂದು ಭಾವಿಸುತ್ತದೆ.
3. ಅಕ್ಬರಾತ್–ಐ–ದರ್ಬಾರ್–ಐ–ಮೌಲ ನಮೂದು 05.11.1711
4. ಅಕ್ಬರಾತ್–ಐ–ದರ್ಬಾರ್–ಐ–ಮೌಲ ನಮೂದು 11.11.1711
5. **ಭಟ್‌ವಾಹಿ ತಾಲಂಡ, ಫರಗಣ ಜಿಂದ್**‌ನಲ್ಲಿರುವ ಒಂದು ನಮೂದು ಕೆಲವು ಹೆಸರುಗಳನ್ನು ಉಲ್ಲೇಖಿಸುತ್ತದೆ. ಎಲ್ಲ ನಲವತ್ತು ಸಿಖ್‌ಗಳ ಹೆಸರು ಲಭ್ಯವಾಗದು.
6. ಅಕ್ಬರಾತ್–ಐ–ದರ್ಬಾರ್–ಐ–ಮೌಲ ನಮೂದು 01.08.1712
7. ಇದು 1700 ರ ಅಕ್ಟೋಬರ್‌ನಲ್ಲಿ ಗುರುಗೋವಿಂದ್ ಸಿಂಗ್ ಅವರು ಕೆಲಕಾಲ ತಂಗಿದ್ದ ಅದೇ ಬೆಟ್ಟ.
8. ಅಕ್ಬರಾತ್–ಐ–ದರ್ಬಾರ್–ಐ–ಮೌಲ ನಮೂದು 01.02.1772.
9. ಅಕ್ಬರಾತ್–ಐ–ದರ್ಬಾರ್–ಐ–ಮೌಲ ನಮೂದು 23.01.1772.
10. ಆತ ಈ ಘಟನೆ ನಡೆದ 80 ದಿನಗಳ ನಂತರ ನಿಧನನಾದ. ಅದು ಆತ ಸಾಮ್ರಾಟನ ಕಾರವಾನ್ ಜೊತೆಯಲ್ಲಿ ಸಾಗುತ್ತಿರುವಾಗಲೇ ಸಂಭವಿಸಿತು.
11. ಅಕ್ಬರಾತ್–ಐ–ದರ್ಬಾರ್–ಐ–ಮೌಲ ನಮೂದು 12.04.1772.
12. ಆ ಸಮಯದಲ್ಲಿ ರಾವಿ ನದಿಯು ಲಾಹೋರ್ ಕೋಟೆಯ ಹತ್ತಿರ ಹರಿಯುತ್ತಿತ್ತು.
13. ತನ್ನ ಸತ್ತ ಸೋದರರ ಶವಗಳಿಗೆ ಜಹಂದರ್ ಶಾ ತೋರಿದ ವರ್ತನೆಯಿದು. ಆತ ಎದುರಾಳಿಗೆ ನೀಡಬೇಕಾದ ಸಾಂಪ್ರದಾಯಿಕ ಗೌರವವನ್ನೂ ತೋರಿಸಲಿಲ್ಲ. ಇದು ಕ್ರೌರ್ಯದ ಪರಮಾವಧಿ. ಇಂತಹುದೇ ಕ್ರೌರ್ಯವನ್ನು 1984ರ ಜೂನ್‌ನಲ್ಲಿ ದರ್ಬಾರ್ ಸಾಹಿಬ್ ಅಮೃತಸರದಲ್ಲಿ ಸಂಭವಿಸಿದ ಘಟನೆಯಲ್ಲಿ ಭಾರತೀಯ ಸೇನೆ ವ್ಯಕ್ತಪಡಿಸಿತು.
14. ಅಕ್ಬರಾತ್–ಐ–ದರ್ಬಾರ್–ಐ–ಮೌಲ ನಮೂದು 20.03.1712.
15. ಅಕ್ಬರಾತ್–ಐ–ದರ್ಬಾರ್–ಐ–ಮೌಲ ನಮೂದು 21.03.1712.

# ಅಧ್ಯಾಯ–10

# ಲೋಹಗಡದಿಂದ ಸಧೌರಗೆ ಹಿಂದಿರುಗಿದ ಬಂದಾ ಸಿಂಗ್

ಮುಘಲ್ ದೊರೆ ಬಹದ್ದೂರ್ ಶಾನ ಸಾವಿನ ಸುದ್ದಿ ಬಂದಾ ಸಿಂಗ್‌ಗೆ ತಲುಪಿದಾಗ ಆತ ರಾಜೌರಿಯಲ್ಲಿದ್ದ. ಇದೊಂದು ಉತ್ತಮ ಅವಕಾಶವೆಂದು (ತನ್ನ ಗುರಿಸಾಧನೆಗೆ) ಭಾವಿಸಿದ ಆತ ಪಂಜಾಬ್‌ಗೆ ಹಿಂದಿರುಗಲು ನಿರ್ಧರಿಸಿದ. ಲಾಹೋರ್‌ನ ರಾಜ್ಯಪಾಲ ಇಸ್ಲಾಂ ಖಾನ್ ಆತನನ್ನು ದಾರಿಯಲ್ಲಿ ತಡೆಯಲು ವಿಫಲ ಯತ್ನ ನಡೆಸಿದ. 1712ರ ಮಾರ್ಚ್ ಆರಂಭದಲ್ಲಿ ಬಂದಾ ಸಿಂಗ್ ಸಧೌರ ಮತ್ತು ಲೋಹಗಡವನ್ನು ತಲುಪಿದ. ಆತ ನಾಲ್ಕರಿಂದ ಐದು ಸಾವಿರ ಸೈನಿಕರನ್ನು ಹೊಂದಿದ್ದ.[(1)] ಕೆಲವು ದಿನಗಳ ನಂತರ ಸರ್ಹಿಂದ್‌ನ ಉಪ ಸೇನಾಧಿಪತಿ ಲೋಹಗಡದ ಮೇಲೆ ಆಕ್ರಮಣ ಮಾಡಿದ. ಆದರೆ ಅಪಮಾನಕರವಾಗಿ ಸೋತ. ಸೋಲಿನ ನಂತರವೂ ಆತ ಸರ್ಹಿಂದ್‌ಗೆ ಹಿಂದಿರುಗದೆ ಸಧೌರ ಮತ್ತು ಸರ್ಹಿಂದ್ ನಡುವೆ ಶಿಬಿರ ಹೂಡಿದ. ಒಂದು ರಾತ್ರಿ ಸಿಕ್ಖರ ಒಂದು ತಂಡ ಈ ಶಿಬಿರಕ್ಕೆ ಮುತ್ತಿಗೆ ಹಾಕಿ ಅವನ ಗುಡಾರಕ್ಕೆ ನುಗ್ಗಿ ತಲೆಯನ್ನು ತಂದು ಹಾಕಿತು.

ಬಂದಾ ಸಿಂಗ್ ಲೋಹಗಡಕ್ಕೆ ಹಿಂದಿರುಗಿರುವ ಸುದ್ದಿ ತಿಳಿದ ಸಿಕ್ಖರು ಅಲ್ಲಿಗೆ ತೆರಳಲಾರಂಭಿಸಿದರು. ಸಧೌರ ಮತ್ತು ಲೋಹಗಡದ ನಡುವಿನ ಪ್ರದೇಶದ ಗ್ರಾಮಗಳಲ್ಲಿ ವಂಜಾರರು ಮಾತ್ರವಲ್ಲ ಅನೇಕ ಸಿಕ್ಖರು ವಾಸಿಸುತ್ತಿದ್ದರು. ಬಂದಾ ಸಿಂಗ್‌ನ ಸೇನೆಯಲ್ಲಿ ಸೇರಿಕೊಳ್ಳಲು ಎಲ್ಲ ಯುವಕರು ಸಧೌರ ಮತ್ತು ಲೋಹಗಡಕ್ಕೆ ನುಗ್ಗಿ ಬಂದರು. ಈ ಸುದ್ದಿ ಮಹಮ್ಮದ್ ಅಮೀನ್ ಖಾನ್‌ನನ್ನು ತಲುಪಿತು. ಆಗ ಆತ ಸಧೌರ ಕಡೆ ಮುನ್ನಡೆಯಲು ತನ್ನ ಸೈನ್ಯಕ್ಕೆ ಆದೇಶ ನೀಡಿದ.[(2)]

ಸಾಮ್ರಾಟ ಬಹದ್ದೂರ್ ಶಾ ಸತ್ತ ನಂತರ ಮಹಮ್ಮದ್ ಅಮೀನ್ ಖಾನ್ ಲಾಹೋರ್‌ಗೆ ಬರಬೇಕಾಯಿತು. ಉತ್ತರಾಧಿಕಾರಕ್ಕಾಗಿ ಸೋದರರ ನಡುವೆ ಕದನ ಆರಂಭವಾದುದರ ಪರಿಣಾಮ, ಸಿಕ್ಖರ ವಿರುದ್ಧದ ಹೋರಾಟ ಸ್ಥಗಿತಗೊಂಡಿತ್ತು.

ಉತ್ತರಾಧಿಕಾರದ ಕದನದಲ್ಲಿ ಮಹಮ್ಮದ್ ಅಮೀನ್ ಖಾನ ಯಾವುದೇ ಸೋದರನ ಪರ ಸೇರಿಕೊಳ್ಳದೇ ಅಲಿಪ್ತವಾಗಿ ಉಳಿದ. ಉತ್ತರಾಧಿಕಾರದ ಕದನದಲ್ಲಿ ಜಹಂದರ್ ಶಾ ವಿಜಯಿಯಾಗಿ ಸಾಮ್ರಾಜ್ಯದ ನಿಯಂತ್ರಣವನ್ನು ಸಾಧಿಸಿರುವುದನ್ನು ಮನಗಂಡ ಮಹಮದ್ ಅಮೀನ್ ಖಾನ್ 1712 ಮಾರ್ಚ್ 12 ರಂದು ಜಹಂದರ್ ಶಾ ಮುಂದೆ ಹಾಜರಾಗಿ ಸಾಮ್ರಾಜ್ಯದ ಹೊಸ ಸಾಮ್ರಾಟನಿಗೆ ತನ್ನ ಸಂಪೂರ್ಣ ನಿಷ್ಠೆಯನ್ನು ಘೋಷಿಸಿದ.[(3)] ಜಹಂದರ್ ಶಾ ಅವನ ಮಾನ್‌ಸಾಬ್ ಅನ್ನು ಏಳು ಸಾವಿರ ಜಾಟ್‌ಗೆ ಹೆಚ್ಚಿಸಿದ. ಜೊತೆಗೆ ಏಳು ಸಾವಿರ ಕುದುರೆ ಸೈನ್ಯವನ್ನು ಸಹ. ಈ ಏಳು ಸಾವಿರ ಕುದುರೆ ಸೈನ್ಯದಲ್ಲಿ ಐದು ಸಾವಿರ ದೊ ಅಸ್ಪ (ಜೋಡಿಕುದುರೆ) ಸೇರಿತ್ತು. ಆ

ಕಾಲಕ್ಕೆ ಅದು ಮುಘಲರ ದೊರೆಗಳು ನೀಡಿದ್ದ ಅತಿ ದೊಡ್ಡ ಮಾನ್‌ಸಾಬ್. ಅದೇ ದಿನ ಸಿಕ್ಖರನ್ನು ಬೆನ್ನಟ್ಟಲು ಮಹಮ್ಮದ್ ಅಮೀನ್ ಖಾನ್‌ಗೆ ದೊರೆ ಜಹಂದರ್ ಶಾ ಆಜ್ಞಾಪಿಸಿದ. ಜೊತೆಗೆ ಒಂಬತ್ತು ಸಾವಿರ ಸೈನಿಕರ ತಂಡವನ್ನು ನೀಡಿದ. ಬಂದಾ ಸಿಂಗ್ ವಿರುದ್ಧ ಹೋರಾಡಲು ಹೊರಟಿರುವ ಅಮೀನ್ ಖಾನ್ ಜೊತೆಯಲ್ಲಿ ಸೇರಲು ಮೌರಫ್ ಖಾನ್‌ಗೂ ಆಜ್ಞಾಪಿಸಿದ.(5) ಆತನಿಗೆ ಸಾಕಷ್ಟು ಸಂಖ್ಯೆಯಲ್ಲಿ ಸೈನಿಕರನ್ನು ಮತ್ತು ಅಪಾರ ಶಸ್ತ್ರಾಸ್ತ್ರಗಳನ್ನು ನೀಡಿದ.

1712ರಲ್ಲಿ ಮಹಮ್ಮದ್ ಅಮೀನ್ ಖಾನ್ ಚಕ್ರವರ್ತಿಯನ್ನು ಮತ್ತೆ ಭೇಟಿ ಮಾಡಿ ಸಿಕ್ಖರ ವಿರುದ್ಧದ ದಂಡಯಾತ್ರೆಗೆ ಎರಡು ಸಾವಿರ ಸೈನಿಕರನ್ನು ಸಜ್ಜುಗೊಳಿಸಿರುವುದಾಗಿ ತಿಳಿಸಿದ. ಆತ ಎರಡು ಸಾವಿರ ರಾವುತರ ದಳ ಹಾಗೂ ಮೂರು ಸಾವಿರ ಸೈನಿಕರ ದಳವನ್ನು ಹೆಚ್ಚುವರಿಯಾಗಿ ಒದಗಿಸಲು ಕೋರಿದ. ಆಗ ಚಕ್ರವರ್ತಿಯು ಮಾಸಿಕ ತಲಾ 25 ರೂಪಾಯಿ ವೇತನ ಮೇಲೆ ಒಂದೂವರೆ ಸಾವಿರ ರಾವುತರನ್ನು ತಲಾ 4 ರೂಪಾಯಿ ಮಾಸಿಕ ವೇತನದ ಮೇಲೆ ಎರಡು ಸಾವಿರ ಪದಾತಿ ಸೈನಿಕರನ್ನು ನೇಮಿಸಿಕೊಳ್ಳಲು ಆದೇಶ ಮಾಡಿದ.

1712ರ ಮೇ ತಿಂಗಳ ಆರಂಭದ ದಿನಗಳಲ್ಲಿ ನೂತನ ಮುಘಲ್ ದೊರೆ ಜಲಂಧರ್ ಶಾ ಲಾಹೋರಿನಿಂದ ದೆಹಲಿಗೆ ಹೊರಟ. 1712ರ ಮೇ 7 ರಂದು ಸುಲ್ತಾನ್‌ಪುರ್ ಲೋಧಿಯನ್ನು ತಲುಪಿದ. ಒಂದು ದಿನ ವಿಶ್ರಮಿಸಿ ಸರ್ಹಿಂದ್ ಮಾರ್ಗವಾಗಿ ದೆಹಲಿಗೆ ಪ್ರಯಾಣ ಬೆಳೆಸಿದ. 1712ರ ಮೇ 20ರಂದು ಸರ್ಹಿಂದ್ ತಲುಪಿದ. ಮಾರ್ಗಮಧ್ಯದಲ್ಲಿ ದಖನಿ ಸರನ್ (ನಾಕೋಡರ್ ಬಳಿ), ನೂರ್‌ಮಹರ್, ಫಿಲ್ಲಾರ್, ಸುನೆತ್ (ಲೂಧಿಯಾನ), ದೊರಹ ಮತ್ತು ಖೇರಗಳಲ್ಲಿ ವಿಶ್ರಮಿಸಿದ. ಸರ್ಹಿಂದ್‌ನ ಜನರು ಬಂದಾ ಸಿಂಗ್ ಲೋಹಗಡದಲ್ಲಿ ಇರುವುದಾಗಿಯೂ,ಸಾಮ್ರಾಟ ಬಹದ್ದೂರ್ ಶಾನ ಆಳ್ವಿಕೆಯಲ್ಲಿ ಬಂದಾ ಸಿಂಗ್‌ನ ಸೈನ್ಯ ತಮ್ಮ ಮೇಲೆ ದೌರ್ಜನ್ಯ ನಡೆಸಿತೆಂದು ಹೊಸ ದೊರೆಗೆ ದೂರು ಹೇಳಿದರು. ಸಾಮ್ರಾಟರು ಅಕ್ಬರಾಬಾದ್ (ಆಗ್ರ)ಗೆ ಹೋದರೆ, ಬಂಡುಕೂರರು ಮರಳಿ ಬಂದು ಸರ್ಹಿಂದ್ ಜಿಲ್ಲೆಯುಲ್ಲಿ ಅಲೆದಾಡುತ್ತಾರೆ; ಅದರಿಂದ ಜನರಿಗೆ ರಕ್ಷಣೆಯಿಲ್ಲದಂತಾಗುತ್ತದೆಂದು ಹೇಳಿದರು. ತಮ್ಮ ರಕ್ಷಣೆಗೆ ಸೂಕ್ತ ಕ್ರಮ ತೆಗೆದುಕೊಂಡರೆ ತಾವು ದೃಢವಾಗಿ ಇಲ್ಲಿಯೇ ಉಳಿಯುತ್ತೇವೆ; ಇಲ್ಲದಿದ್ದರೆ ಸಾಮ್ರಾಟನ ಜೊತೆಯಲ್ಲಿ ನಡೆಯುತ್ತೇವೆ ಎಂದು ಜನರು ಹೇಳಿದರು. ಆಗ ಮುಘಲ್ ದೊರೆ ಜಹಂದರ್ ಶಾ ಅವರ ಭದ್ರತೆಗೆ ಸೂಕ್ತ ಗಮನ ಹರಿಸುವುದಾಗಿ ಅಭಯ ನೀಡಿ ಚಿಂತಿತರಾಗದೆ ನೆಮ್ಮದಿಯಿಂದ ಇರಲು ಹೇಳಿದ.(6) ಮೇ 22 ರಂದು ಸರ್ಹಿಂದ್‌ನ ಫೌಜುದಾರ ಜಿಯಾವುದ್ದೀನ್ ಅಹ್ಮದ್ ಖಾನ್‌ನನ್ನು ಕರೆಸಿ ಸಿಕ್ಖರನ್ನು ಬಗ್ಗು ಬಡಿಯಲು ಎಂಟು ಸಾವಿರ ಸೈನಿಕರ ಪಡೆಯನ್ನು ಕಟ್ಟಿಕೊಂಡು ಲೋಹಗಡಕ್ಕೆ ತೆರಳಲು ಆಜ್ಞಾಪಿಸಿದ.(7)

ಮೇ 22 ರಂದು ಸಾಮ್ರಾಟನು ತಾಣೆಸರ(ಕುರುಕ್ಷೇತ್ರ) ತಲುಪಿದ. ಇಲ್ಲಿನ ಪಟ್ಟಣದ ಕುಲೀನರು ಮತ್ತು ಶ್ರೀಮಂತರ ಚಕ್ರವರ್ತಿಯನ್ನು ಭೇಟಿಯಾಗಿ, ತಮ್ಮ ಪಟ್ಟಣದ ಬಂದಾ ಸಿಂಗ್ ದಾಳಿ ಮಾಡಿದಾಗ, ಪಟ್ಟಣದ ಅಪಾಪೋಲಿಗಳು ಸಿಕ್ಖರ ಜೊತೆ ಸೇರಿಕೊಂಡು ಬಂದಾ ಸಿಂಗ್‌ಗೆ ಅಗತ್ಯ ವಸ್ತುಗಳನ್ನು ಪೂರೈಸಿದರೆಂದು ದೂರಿದರು. ಅವರು ಪಟ್ಟಣದ ಬಹುತೇಕ ಮಸೀದಿ, ಸಮಾಧಿ ಮತ್ತು ಮಹಲುಗಳನ್ನು ಕೆಡವಿದರು ಎಂದು ಅಳಲು ತೋಡಿಕೊಂಡರು. ಅವರೆಲ್ಲ ಇನ್ನೂ ಪಟ್ಟಣದಲ್ಲಿಯೇ ಇದ್ದು, ಸಾಮ್ರಾಟರು ಅಕ್ಬರಾಬಾದ್‌ಗೆ ತೆರಳಿದ ನಂತರ ತಮ್ಮ ಮೇಲೆ ಸೇಡು ತೀರಿಸಿಕೊಳ್ಳಬಹುದೆಂಬ ಆತಂಕ ವ್ಯಕ್ತಪಡಿಸಿದರು. ಅವರ ಮಾತನ್ನು ಕೇಳಿ ಕೆರಳಿದ

ದೊರೆ ಜಲಂದರ್ ಶಾ ಒಂದು ಸೈನಿಕಪಡೆಯ ಜೊತೆ ಸರ್‌ಬ್ರಾಹ್ ಖಾನ್ ಕೊತ್ವಾಲನನ್ನು ಬರಲು ತನ್ನ ಸೇವಕ ರೈ ಮನ್‌ಗೆ ಆಜ್ಞಾಪಿಸಿದ. ಯಾರು ನಾನಾಕ್ ಆರಾಧಕರೆಂದು ಹೇಳಿಕೊಳ್ಳುತ್ತಾರೋ ಅಂಥವರನ್ನು ಹಿಡಿದು ತನ್ನ ಮುಂದೆ ಹಾಜರುಪಡಿಸಬೇಕೆಂದು ಅವರಿಗೆ ಸೂಚಿಸಿದ. ಅವರು ಇಸ್ಲಾಂಗೆ ಮತಾಂತರವಾದರೆ ಸರಿ, ಇಲ್ಲದಿದ್ದರೆ ಅವರನ್ನು ಕೊಲ್ಲಿಸಬೇಕು; ಇದರಿಂದ ಮುಂದೆ ಯಾರಿಗೂ ತೊಂದರೆಯಾಗದು ಎಂದು ಸಾಮ್ರಾಟ ಚಿಂತಿಸಿದ. ಹದಿನೇಳು ಜನರನ್ನು ಆ ದಿನ ಬಂಧಿಸಿ ಕರೆತರಲಾಯಿತು. ಅವರಲ್ಲಿ ಹದಿನಾಲ್ಕು ಮಂದಿ ಇಸ್ಲಾಂ ಮತ ಸ್ವೀಕರಿಸಲು ಒಪ್ಪಲಿಲ್ಲ. ಆಗ ಸಾಮ್ರಾಟನು ಇಸ್ಲಾಂ ಧರ್ಮ ಸ್ವೀಕರಿಸಲು ಒಪ್ಪಿದವರಿಗೆ ಗೌರವ ವಸ್ತ್ರಗಳನ್ನಿತ್ತು ಸತ್ಕರಿಸಿದ. ಒಪ್ಪದ ಬಂಡುಕೋರರನ್ನು ಕೊಂದು ಅವರ ಶವಗಳನ್ನು ಮಿನಾರ್‌ನ ಹತ್ತಿರ (ನಗರದ ಹೆದ್ದಾರಿಯ ಬಳಿಯ ಗೋಪುರ) ನೇತಹಾಕಲು ಆಜ್ಞಾಪಿಸಿದ. ಸಾಮ್ರಾಟನ ಆಜ್ಞೆಯನ್ನು ಅನುಚರರು ಪಾಲಿಸಿದರು.(8)

ಸಾಮ್ರಾಟನು ದೆಹಲಿಯನ್ನು 1712ರ ಜೂನ್ 8 ರಂದು ತಲುಪಿದನು. ಜೂನ್ 11 ರಂದು ಕೆಂಪುಕೋಟೆಯನ್ನು ಪ್ರವೇಶಿಸಿ ಸಿಂಹಾಸನದ ಮೇಲೆ ಕೂತನು. ಜೂನ್ 12ರಂದು ಸರ್ಹಿಂದ್‌ನಲ್ಲಿ ಬಂದಾ ಸಿಂಗ್ ಪೊಲೀಸ್ ಚೌಕಿಯನ್ನು ಸ್ಥಾಪಿಸಿರುವ ವಿಷಯ ಸಾಮ್ರಾಟನಿಗೆ ತಿಳಿಯಿತು.(9)

ಬೆಟ್ಟಸಾಲಿನ ಪ್ರದೇಶದ ಕುಮೋನ್‌ನ ದಂಡನಾಯಕ ಜಗತ್‌ಚಂದ್, ಬಂದಾ ಸಿಂಗ್ ವಿರುದ್ಧ ಕೈಗೊಂಡ ದಂಡಯಾತ್ರೆಯಲ್ಲಿ ಪರಿಣಾಮಕಾರಿಯಾದ ಪಾತ್ರವಹಿಸಿದನೆಂಬ ಸುದ್ದಿ ಸಾಮ್ರಾಟನಿಗೆ 1712 ಜೂನ್ 13ರಂದು ತಲುಪಿತು. ಆದರೆ ಗಡವಾಲದ(10) ಫತೇಹ್‌ಖಾನ್ ಬಂದಾ ಸಿಂಗ್‌ಗೆ ನೆರವು ನೀಡಿದ ಸುದ್ದಿಯನ್ನು ಕೇಳಿದ. ಭಂದಾ ಸಿಂಗ್ ವಿರುದ್ಧ ಕ್ರಮವಹಿಸಿದ ಜಗತ್ ಚಂದ್‌ಗೆ ಸಾಮ್ರಾಟನು ಅಭಿನಂದನಾ ಪತ್ರ, ಅಮೂಲ್ಯವಾದ ಗೌರವ ವಸ್ತ್ರ ಕಳುಹಿಸುವಂತೆ ಮತ್ತು ಬಂಡುಕೋರರಿಗೆ ನೆರವು ನೀಡಿದ ಫತೇಖಾನ್‌ನ್ನು ಶಿಕ್ಷಿಸಲು ಆದೇಶ ನೀಡಿದ.

ಮುಘಲ್ ಸಾಮ್ರಾಟ್ ಈಗ ಆಡಳಿತದಲ್ಲಿದ್ದ ಹಲವರ ಹುದ್ದೆಗಳನ್ನು ಬದಲಿಸಿದನು. ಮಹಮ್ಮದ್ ಅಮೀನ್ ಖಾನ್‌ನ ಸುಪರ್ದಿಯಲ್ಲಿದ್ದ ಸೈನ್ಯಕ್ಕೆ ಸರ್ಹಿಂದ್‌ನ ಫೌಜುದಾರ ಜೈನುದ್ದೀನ್ ಅಹ್ಮದ್ ಖಾನ್‌ನನ್ನು ದಿವಾನ (ಕಂದಾಯ ವಿಭಾಗದ ಮುಖ್ಯ ಅಧಿಕಾರಿ)ನನ್ನಾಗಿ ನೇಮಿಸಿದ. ಅವನ ಸೋದರನ ಮಗ ಅಬು–ಉಲ್–ಕಾಸಿಂನನ್ನು ಸರ್‌ಹಿಂದ್‌ನ ಉಪ ಫೌಜುದಾರನನ್ನಾಗಿ ನೇಮಿಸಿದ.(11) ಜುಲೈ 24 ರಂದು ಸಾಮ್ರಾಟನು ಜಲಾಲಾಬಾದ್‌ನ ಜಲಾಲ್‌ಖಾನ್, ರಾಜೋರಿಯ ಮಹಮ್ಮದ್ ಅಮೀನ್ ಮತ್ತು ಫತೇಹಬಾದ್‌ನ ಮಹಮ್ಮದ್ ಬಾಕ ಅವರುಗಳನ್ನು ಹೊಸ ಸೈನ್ಯಾಧಿಕಾರಿಗಳಾಗಿ ನೇಮಿಸಿದನು.

### ಸಧೌರ ವಿರುದ್ಧ ಮುಘಲ್ ಸೇನೆಯ ಎರಡನೇ ಆಕ್ರಮಣ

1712ರ ಆಗಸ್ಟ್‌ನಲ್ಲಿ ಬಂದಾ ಸಿಂಗ್ ಬಹದ್ದೂರ್ ಲೋಹಗಡದಲ್ಲಿದ್ದ ಈ ಸುದ್ದಿಯು ಮಹಮದ್ ಅಮೀನ್ ಖಾನ್‌ಗೆ ತಿಳಿಯಿತು. ಕೂಡಲೇ ಆತ ತನ್ನ ಸೇನೆಯನ್ನು ಲೋಹಗಡದ ಕಡೆ ಮುನ್ನಡೆಸಿದ. ಲೋಗಹಡದ ತಪ್ಪಲು ಪ್ರದೇಶ ತಲುಪುವ ಮೊದಲು ಆತ ಐವತ್ತಕ್ಕೂ ಹೆಚ್ಚು ಕೋಟೆ ಮತ್ತು ಕಂದಕಗಳಲ್ಲಿ ಯುದ್ಧ ಮಾಡಬೇಕಾಯಿತು.

1712ರ ಸೆಪ್ಟೆಂಬರ್ 1 ರಂದು ಜಲಂದರ್ ಶಾಗೆ ಮಹಮ್ಮದ್ ಅಮೀರ್ ಖಾನ್‌ನಿಂದ ಪತ್ರವೊಂದು ತಲುಪಿತು. ಅದರ ಒಕ್ಕಣೆ ಹೀಗಿತ್ತು. "ಸಿಕ್ಬರು ಸಧೌರಗೆ ಬಂದು ಅಲ್ಲಿನ ಕೋಟೆಯಲ್ಲಿ

ಬೀಡುಬಿಟ್ಟಿದ್ದಾರೆ. ಮುಘಲ್ ಸೇನೆ ಕೋಟೆಯನ್ನು ಸುತ್ತುವರೆದಿದೆ. ಸಿಕ್ಖರು ಕೋಟೆಯಿಂದ ಹೊರಬಂದೂ ಯುದ್ಧ ಮಾಡುತ್ತಿದ್ದಾರೆ. ಎರಡೂ ಕಡೆ ಅಪಾರ ಜೀವಹಾನಿ ಆಗಿದೆ." ಅದೇ ಪತ್ರದಲ್ಲಿ ಮಹಮ್ಮದ್ ಅಮೀನ್ ಖಾನನು ಕೋಟೆಯ ಗೋಡೆಯನ್ನು ಒಡೆದು ಒಳ ಪ್ರವೇಶಿಸಲು ಎರಡು ಫಿರಂಗಿಗಳನ್ನು ಕಳುಹಿಸಿಕೊಡುವಂತೆ ಮನವಿ ಮಾಡಿದ್ದನು.(13) ಸೆಪ್ಟೆಂಬರ್ 8 ರಂದು ಸಾಮ್ರಾಟನು ಎರಡು ಫಿರಂಗಿಗಳನ್ನು ರವಾನಿಸಿದ. ಈ ಫಿರಂಗಿಗಳಿಗೂ ಸಧೌರ ಕೋಟೆಯ ಗೋಡೆಯನ್ನು ಛಿದ್ರಗೊಳಿಸಲು ಆಗಲಿಲ್ಲ. ಅತ್ತ ಕೋಟೆಯ ಒಳಗಿದ್ದ ಸಿಕ್ಖರಿಗೂ ಸಾಕಷ್ಟು ಆಹಾರ ಮತ್ತು ಶಸ್ತ್ರಾಸ್ತ್ರ ದಾಸ್ತಾನು ಇರಲಿಲ್ಲ. ಅವರ ಆಹಾರ ದಾಸ್ತಾನು ಬರಿದಾದ ಮೇಲೆ ಚಳಿಗಾಲದ ಒಂದು ಗಾಢಕತ್ತಲೆಯ ರಾತ್ರಿಯಲ್ಲಿ ಕೋಟೆಯಿಂದ ಹೊರಬಂದು ಮುಘಲರ ಸೈನ್ಯವನ್ನು ಸೀಳಿ ಲೋಹಗಡ ಮತ್ತು ನಹನ್ ಕಡೆ ಪರಾರಿಯಾದರು. 1712ರ ಸೆಪ್ಟೆಂಬರ್ ತಿಂಗಳ ಕೊನೆಯ ದಿನಗಳಲ್ಲಿ ಕೆಲವು ಸಿಖ್ ಸೈನಿಕರು ಸಧೌರದಿಂದ ನಹನ್ ರಾಜ್ಯದ ಕಡೆ ಹೋದರು. ಬೆಟ್ಟಗಳಲ್ಲಿನ ಸೈನಿಕರು ಇವರ ಆಗಮನವನ್ನು ಹಾಗೂ ಅಡಗುದಾಣವನ್ನು ಸೇನಾಧಿಪತಿ ಫಿರೋಜ್ ಜಂಗ್ ಖಾನ್‌ಗೆ ತಿಳಿಸಿದರು. ಅದೇ ಸೈನಿಕರು ಅವರ ಮೇಲೆ ಹಠಾತ್ ದಾಳಿ ನಡೆಸಿದರು. ಆ ವೇಳೆಗೆ ನಹನ್‌ನ ರಾಜ ಮುಘಲ್ ಸಾಮ್ರಾಟನಿಗೆ ನಿಷ್ಠೆ ಬದಲಿಸಿದ್ದ. ನಹನ್‌ರಾಜ ದ್ರೋಹವೆಸಗಿರುವುದು ಸಿಖ್ ಸೈನಿಕರಿಗೆ ತಿಳಿದಿರಲಿಲ್ಲ. ಸೈನಿಕರ ಹಠಾತ್ ದಾಳಿಯಿಂದ ಸಿಕ್ಖರಿಗೆ ಹಾನಿಯಾಯಿತು. ಸಿಕ್ಖರು ನಹನ್ ರಾಜ್ಯದಿಂದ ಹೊರಟರು. ಆದರೆ ಆ ವೇಳೆಗೆ ಫಿರೋಜ್ ಜಂಗ್ ಖಾನ್‌ನ ಸೈನಿಕರು ಬಂದರು. ಆ ವೇಳೆಗೆ ಸಿಕ್ಖರು ಬಹುದೂರ ಹೋಗಿದ್ದರು.(14)

1712ರ ಅಕ್ಟೋಬರ್ ತಿಂಗಳ ಆರಂಭದಲ್ಲಿ ಸಿಖ್ ಸೈನಿಕರು ಬನೂರ್ ಬಳಿಯ ಛಾಟ್ ಮೇಲೆ ಆಕ್ರಮಣ ಮಾಡಿ ಅನೇಕ ಮಂದಿ ಸರ್ಕಾರಿ ಅಧಿಕಾರಿಗಳು ಮತ್ತು ಕಾಜಿಗಳನ್ನು ಕೊಂದರು. ಅಲ್ಲಿದ್ದ ಸರ್ಹಿಂದ್‌ನ ಉಪ ರಾಜ್ಯಪಾಲ ಹೋರಾಡುವ ಬದಲು, ಪಲಾಯನ ಮಾಡಿದ. ಸರ್ಹಿಂದ್ ತಲುಪಿ ಅಲ್ಲಿನ ರಾಜ್ಯಪಾಲನಿಗೆ ಮಾಹಿತಿ ನೀಡಿದ. ರಾಜ್ಯಪಾಲ ಸಹ ಸಿಕ್ಖರ ಬಗ್ಗೆ ಭಯಗೊಂಡು ಅವರ ಮೇಲೆ ದಾಳಿ ಮಾಡಲಿಲ್ಲ. ಇದರಿಂದಾಗಿ ಸಿಕ್ಖರು ಸರ್ಹಿಂದ್‌ನಿಂದ ಲೋಹಗಡದವರೆಗಿನ ಪ್ರದೇಶಗಳ ಮೇಲೆ ನಿಯಂತ್ರಣ ಸಾಧಿಸಿದರು.(15) ಮುಘಲ್ ಸಾಮ್ರಾಟ ಬಹದ್ದೂರ್ ಶಾ ನಿಧನನಾದ ಎಂಟು ತಿಂಗಳಲ್ಲಿ ಸಿಕ್ಖರು ಮತ್ತೆ ಲೋಹಗಡ–ಸಧೌರ–ಸರ್ಹಿಂದ್ ಪ್ರಾಂತ್ಯದ ಅನಧಿಕೃತ ಒಡೆಯರಾದರು.

---

**ಅಡಿ ಟಿಪ್ಪಣಿಗಳು**

1. ಮುಘಲ್ ಸಾಮ್ರಾಟನ ಆಸ್ಥಾನದಲ್ಲಿ ರಾಜ ಜೈಪುರನ ದೂತನಾಗಿದ್ದ ಭಂಡಾರಿ ಖಿವ್ಸಿ ಜೈಪುರದ ಅರಸನಿಗೆ 10ನೇ ಮಾರ್ಚ್ 1712ರಂದು ಬರೆದ ಪತ್ರ. Serial No57, Vakil Report No 266. (*Rajasthani Documents on Banda Singh Bahadur*, edited by Dr Balwant Singh Dhillon).

2. 1712ರ ಮಾರ್ಚ್ 10 ರಂದು ರಾಜನಿಗೆ ಕಳುಹಿಸಿದ *ಅಜಾರ್‌ದಸ್ತ್* (ಪತ್ರ)

3. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ನಮೂದು 21.03.1712

4. *ಮಾನ್ಸಾಬ್* ಎಂದರೆ ಸೈನ್ಯದ ಅಧಿಕಾರದ ಒಂದು ಅಂತಸ್ತು (ಶ್ರೇಣಿ) ಉದಾ: ಮಾನ್ಸಾಬ್ ಏಳು ಸಾವಿರ ಎಂದರೆ ಆತ ಏಳು ಸಾವಿರ ಸೈನಿಕರನ್ನು ಇಟ್ಟುಕೊಳ್ಳಲು ಅವನಿಗೆ ಅಧಿಕಾರವಿತ್ತು.

5. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ* ನಮೂದು 29 ಮಾರ್ಚ್, 5 ಮತ್ತು 9.04.1712.
6. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ* ನಮೂದು 20.05.1712.
7. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ* ನಮೂದು 25.05.1712.
8. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ* ನಮೂದು 29.05.1712.
9. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ* ನಮೂದು 12.06.1712
10. ಫತೇಖಾನ್ ಗಡವಾಲದ ಸೇನಾನಾಯಕ. ಆತ 18.09.1688ರಂದು ಭಂಗನಿಯ ಬಳಿ ಗುರುಗೋವಿಂದ್ ಸಿಂಗ್ ಮೇ ಆಕ್ರಮಣ ಮಾಡಿದ್ದು. ಆ ಯುದ್ಧದಲ್ಲಿ ಆತನಿಗೆ ಅಪಾರ ಹಾನಿಯಾಯಿತು. ಆತ ಯುದ್ಧಭೂಮಿ ತೊರೆದು ಗಡವಾಲಕ್ಕೆ ಬಂದ. ಆತನಿಗೆ ಮುಘಲರ ಮೇಲೆ ಸೇಡಿತ್ತು. ಹಾಗಾಗಿ ಬಂದಾ ಸಿಂಗ್‌ಗೆ ನೆರವಾದ.
11. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ* ನಮೂದು 12.07.1712.
12. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ* ನಮೂದು 24.07.1712.
13. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ* ನಮೂದು 08.09.1712.
14. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ* ನಮೂದು 02.10.1712.
15. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ* ನಮೂದು 15.10.1712.

# ಅಧ್ಯಾಯ–11

# ಸಿಕ್ಖರ ವಿರುದ್ಧ ಮುಘಲರ ಮೂರನೇ ದಂಡಯಾತ್ರೆ

**ಜಲಂಧರ್ ಶಾನ ಕೊಲೆ; ಸಾಮ್ರಾಟನಾದ ಫರೂಕ್ ಸಿಯಾರ್**

ಜಲಂಧರ್ ಶಾ ತನ್ನ ಸೋದರರೆಲ್ಲರನ್ನು ಅವರ ಮಕ್ಕಳನ್ನು ಸಿಂಹಾಸನಕ್ಕೇರುವ ಮೊದಲೇ ಕೊಂದು ಹಾಕಿದರೂ, ಒಬ್ಬ ಸೋದರ ಅಜಿಮುಶಾನ್‌ನ ಮಗ ಫರೂಕ್ ಸಿಯಾರ್ ಮಾತ್ರ ಜೀವಂತ ಉಳಿದಿದ್ದ. ಈ ಸಮಯದಲ್ಲಿ ಆತ ಪಾಟ್ನಾದಲ್ಲಿದ್ದ. 1712ರ ಮಾರ್ಚ್ 27ರಿಂದ ಆತ ತಾನೇ ಸಾಮ್ರಾಟನೆಂದು ಘೋಷಿಸಿಕೊಂಡ. ಆಗ ಸಯ್ಯದ್ ಹುಸೇನ್ ಆಲಿಖಾನ್ ಬಿಹಾರ ಪ್ರಾಂತ್ಯದ ಉಪ ರಾಜ್ಯಪಾಲನಾಗಿದ್ದ. ಫರೂಕ್ ಸಿಯಾರ್ ತಾನೇ 'ಸಾಮ್ರಾಟ'ನೆಂದು ಘೋಷಿಸಿಕೊಂಡ ಸಮಯದಲ್ಲಿ ಸಯ್ಯದ್ ಹುಸೇನ್ ಪಾಟ್ನಾ ನಗರದಲ್ಲಿರಲಿಲ್ಲ. ಫರೂಕ್ ಸಿಯಾರ್‌ನ ತಾಯಿ ಹುಸೇನ್ ಆಲಿ ಖಾನ್‌ನ ತಾಯಿಯ ಬಳಿಗೆ ಹೋಗಿ ಅವಳಿಗೆ ತನ್ನ ಗಂಡ ಅಜಿಮುಶಾನ್ ಹುಸೇನ್ ಆಲಿಖಾನ್ ಮತ್ತು ಅವನ ತಮ್ಮ ಸಯ್ಯದ್ ಅಬ್ದುಲ್ ಖಾನ್ (ಕುತುಬ್–ಉಲ್–ಮುಲ್ಕ್) ಅವರಗಳು ಅಧಿಕಾರಪಡೆಯಲು ವಹಿಸಿದ ಪಾತ್ರವನ್ನು ನೆನಪು ಮಾಡಿಕೊಟ್ಟಳು. ಆ ಉಪಕಾರ ಸ್ಮರಣೆಯಾಗಿ ಈಗ ಹುಸೇನ್ ಆಲಿ ಖಾನ್ ದೆಹಲಿಯ ಸಿಂಹಾಸನವನ್ನು ವಶಪಡಿಸಿಕೊಳ್ಳಲು ತನ್ನ ಮಗನಿಗೆ ನೆರವಾಗುವಂತೆ ಪ್ರಭಾವ ಬೀರಲು ಮನವಿ ಮಾಡಿಕೊಂಡಳು. ಹುಸೇನ್ ಆಲಿ ಖಾನ್‌ನ ತಾಯಿ ಈ ಮನವಿಯ ಬಗ್ಗೆ ವಾಗ್ದಾನ ನೀಡಲಿಲ್ಲ. ಆಗ ಫರೂಕ್ ಸಿಯಾರ್‌ನ ತಾಯಿ ರೋದಿಸತೊಡಗಿದಳು. ಆಲಿ ಹುಸೇನ್ ಖಾನ್‌ನ ತಾಯಿಯು ಇದರಿಂದ ಮರುಕಗೊಂಡು ಆಕೆಗೆ ಸಹಾಯ ಮಾಡಲು ಒಪ್ಪಿಕೊಂಡಳು.(1)

ಕೆಲಕಾಲದ ನಂತರ ಹುಸೇನ್ ಆಲಿ ಖಾನ್ ಪಾಟ್ನಾಗೆ ಆಗಮಿಸಿದ. ಆಗ ಫರೂಕ್ ಸಿಯಾರ್ ಮತ್ತು ತನ್ನ ತಾಯಿ ಜೊತೆ ಅವನನ್ನು ಭೇಟಿಯಾಗಿ– "ಈಗ ನಿನ್ನ ಮುಂದೆ ಎರಡು ಆಯ್ಕೆಗಳಿವೆ. ಒಂದು, ನನ್ನನ್ನು ಬಂಧಿಸಿ ಖೈದಿಯಾಗಿ ಜಲಂಧರ್ ಶಾಗೆ ಕಳುಹಿಸು, ಇಲ್ಲವೇ ಮುಘಲ್ ಸಾಮ್ರಾಜ್ಯದ ಪ್ರಭುತ್ವವನ್ನು ಪಡೆಯಲು ನೆರವಾಗು. ನಾನು ದೆಹಲಿಯ ಮೇಲೆ ನಿಯಂತ್ರಣ ಸಾಧಿಸಿದ ಕೂಡಲೇ ನಿನಗೆ ಮತ್ತು ನಿನ್ನ ಸೋದರನಿಗೆ ಎರಡು ಪ್ರಮುಖ ಹುದ್ದೆಗಳಾದ ದಿವಾನ ಮತ್ತು *ಅಮೀರ್–ಉಲ್–ಉಮ್ರಾ* (ಮೊದಲ ಆಸ್ಥಾನಿಕರ) ಪದವಿಯನ್ನು ನೀಡುತ್ತೇನೆ. ಈ ರೀತಿಯಿಂದ ಮುಘಲ್ ಸಾಮ್ರಾಜ್ಯದ ನಿಜವಾದ ಆಡಳಿತಗಾರರು ನೀವೇ ಆಗುತ್ತೀರಿ"(2) ಎಂದನು.

ಆರಂಭದಲ್ಲಿ ಹುಸೇನ್ ಆಲಿ ಖಾನ್ ಈ ಪ್ರಸ್ತಾವನೆಗೆ ಹಿಂಜರಿಕೆ ವ್ಯಕ್ತಪಡಿಸಿದರೂ, ಆತನ ತಾಯಿ ತಾನು ವಾಗ್ದಾನ ಮಾಡಿರುವುದನ್ನು ಹೇಳಿದ ನಂತರ ಫರೂಕ್ ಸಿಯಾರ್‌ಗೆ ನೆರವಾಗಲು

ಒಪ್ಪಿಕೊಂಡ. ಅನಂತರ ಅಲಹಾಬಾದ್‌ನ ಉಪನಾಯಕ ಅಬ್ದುಲ್ಲಾ ಸಹ ಫರೂಕ್ ಸಿಯಾರ್‌ಗೆ ನೆರವಾಗಲು ಒಪ್ಪಿಕೊಂಡ. ತನ್ನ ನಿಷ್ಠೆಯ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದ ಜಲಂದರ್ ಶಾ ಬಗ್ಗೆ ಅಬ್ದುಲ್ಲಾನಿಗೂ ಕೋಪವಿತ್ತು. ಈ ವಿಷಯವನ್ನು ತಿಳಿದ ಜಲಂದರ್ ಶಾ ಆತಂಕಗೊಂಡು ಸಯ್ಯದ್ ಅಬ್ದುಲ್ಲಾನ ನಿಷ್ಠೆಯನ್ನು ಮರಳಿ ಪಡೆಯಲು ಪ್ರಯತ್ನಿಸಿದ. ಆತನ ಮಾನ್ಸಾಬ್ ಅನ್ನು ನಾಲ್ಕು ಸಾವಿರದಿಂದ ಆರು ಸಾವಿರಕ್ಕೇರಿಸಿದ. ಆದರೆ ಆ ವೇಳೆಗೆ ಅಬ್ದುಲ್ಲಾ ಫರೂಕ್ ಸಿಯಾರ್ ಪಕ್ಷವನ್ನು ಸೇರಿಕೊಂಡಾಗಿತ್ತು. ಜಲಂದರ್ ಶಾ ಇತರ ಅಧಿಕಾರಿಗಳನ್ನು ಸಂತೋಷಪಡಿಸಲು ಯತ್ನಿಸಿದ. ಆತ ಮಹಮ್ಮದ್ ಅಮೀನ್ ಖಾನ್ (ಅನಂತರ 27.01.1721ರಲ್ಲಿ ಸತ್ತ) ಅನ್ನು ಎರಡನೇ ಭಕ್ಷಿಯಾಗಿ, ಆಫ್ರಸಿಯಾಬ್ ಖಾನ್‌ನನ್ನು (ಅನಂತರ 21.08.1718 ರಲ್ಲಿ ಸತ್ತ) ಮೂರನೇ ಭಕ್ಷಿಯಾಗಿ ನೇಮಿಸಿದ.(3)

ತನ್ನ ಸೋದರನ ಮಗ ಫರೂಕ್ ಸಿಯಾರ್ ತಾನೇ ಮುಘಲ್ ಸಾಮ್ರಾಜ್ಯದ ಹೊಸ ಸಾಮ್ರಾಟನೆಂದು ಘೋಷಿಸಿಕೊಂಡ ಸುದ್ದಿಯು ದೆಹಲಿಯಲ್ಲಿದ್ದ ಜಲಂದರ್ ಶಾಗೆ 1712ರ ಅಕ್ಟೋಬರ್ 20ರಂದು ತಿಳಿಯಿತು. ಆಗ ಈ ಬಂಡಾಯವನ್ನು ಸದೆ ಬಡೆಯಲುತನ್ನ ಮಗ ಅಜ್-ಉದ್-ದೀನ್‌ನ ನೇತೃತ್ವದಲ್ಲಿ ಒಂದು ದೊಡ್ಡ ಸೈನ್ಯವನ್ನು ಕಳುಹಿಸಿಕೊಟ್ಟ.(4)

ಈಗ ಫರೂಕ್ ಸಿಯಾರ್‌ಗೆ ತಮ್ಮ ಬೆಂಬಲವನ್ನು ಬಹಿರಂಗವಾಗಿಯೇ ಘೋಷಿಸಿಕೊಂಡ ಹುಸೇನ್ ಆಲಿ ಖಾನ್ ಮತ್ತು ಅಬ್ದುಲ್ಲಾ ಖಾನ್ ಸೋದರರು ದೆಹಲಿಯನ್ನು ವಶಪಡಿಸಿಕೊಳ್ಳಲು ಸೇನೆಯೊಡನೆ ಹೊರಟರು. 1712ರ ನವೆಂಬರ್ 17ರಂದು ಅವರು ಆಗ್ರಾ ಬಳಿಯಿರುವ ಶಮುಗಡವನ್ನು ತಲುಪಿದರು. ಈ ಸುದ್ದಿ ತಿಳಿದ ತಕ್ಷಣ ಜಲಂದರ್ ಶಾನ ಸೈನ್ಯದ ಕೆಲವು ಸೇನಾಧಿಪತಿಗಳು ತಮ್ಮ ನಿಷ್ಠೆಯನ್ನು ಬದಲಿಸಲು ನಿರ್ಧರಿಸಿದರು. ಅವರು ಯಾರಿಗೂ ತಿಳಿಯದಂತೆ ದೆಹಲಿಯನ್ನು ತೊರೆದು ಫರೂಕ್ ಸಿಯಾರ್ ಪಕ್ಷವನ್ನು ಸೇರಿಕೊಳ್ಳಲು ಶಮುಗಡಕ್ಕೆ ಬಂದರು. ಈಗ ಫರೂಕ್ ಸಿಯಾರ್‌ನ ಸೈನ್ಯದ ದಾಳಿಯನ್ನು ಎದುರಿಸುವಷ್ಟು ಸೈನ್ಯ ಬಲ ಜಲಂದರ್ ಶಾನಲ್ಲಿ ಉಳಿದಿರಲಿಲ್ಲ. ಆತ ಇಪ್ಪತ್ತೆರಡು ಸಾವಿರ ಹೊಸ ಸೈನಿಕರನ್ನು ನೇಮಕ ಮಾಡಿಕೊಂಡು ಆಗ್ರಾದ ಕಡೆ ದಂಡಯಾತ್ರೆ ಆರಂಭಿಸಿದ.

ಈ ವೇಳೆಗೆ ಫರೂಕ್ ಸಿಯಾರ್ ಸೈನ್ಯದಲ್ಲಿ ನಲವತ್ತರಿಂದ ಐವತ್ತು ಸಾವಿರ ಸೈನಿಕರಿದ್ದರು. ಜೊತೆಗೆ ಅಪಾರವಾದ ಶಸ್ತ್ರಾಸ್ತ್ರಗಳಿದ್ದವು. ಡಿಸೆಂಬರ್ 31ರಂದು ಮಳೆ ನಿಂತ ಕೂಡಲೇ ತೀವ್ರ ದಾಳಿ ಮಾಡಲು ಫರೂಕ್ ಸಿಯಾರ್ ತನ್ನ ಸೈನ್ಯಕ್ಕೆ ಆಜ್ಞೆ ಮಾಡಿದ. ಜಲಂದರ್ ಶಾನ ಸೇನಾಧಿಪತಿ ಕೊಕಲ್‌ತಾಶ್ ಯುದ್ಧ ಪ್ರಾರಂಭವಾದ ಸ್ವಲ್ಪ ಸಮಯದಲ್ಲಿಯೇ ಮಡಿದ. ಮತ್ತೊಬ್ಬ ಸೇನಾಧಿಪತಿ ರುಸ್ತುಂ-ಐ-ಹಿಂದ್ ತೀವ್ರವಾಗಿ ಗಾಯಗೊಂಡ. ಸಾಯಂಕಾಲದ ವೇಳೆಗೆ ಜಲಂದರ್ ಶಾ ಸಹ ಯುದ್ಧ ಭೂಮಿಯಿಂದ ಓಡಿಹೋದ. ಈಗ ಜುಲ್ಫೀಕರ್ ಖಾನ್ ಮಾತ್ರ ಸೇನೆಯನ್ನು ಮುನ್ನಡೆಸುತ್ತಿದ್ದ. ಆತ ಕೂಡ ಹೆಚ್ಚು ಸಮಯದ ಹೋರಡಲಾರದೆ, ದೆಹಲಿಯ ಕಡೆ ಪಲಾಯನ ಮಾಡಿದ. ಈಗ ಫರೂಕ್ ಸಿಯಾರ್‌ನ ಸೈನ್ಯ ದೆಹಲಿಯನ್ನು ತಲುಪುವುದನ್ನು ತಡೆಯಲು ಯಾರೂ ಇರಲಿಲ್ಲ.

ದೆಹಲಿಯಲ್ಲಿ ಜಲಂದರ್ ಶಾ ತನ್ನ ಅನುಚರರೊಡನೆ ಕೋಟೆಯಂತೆ ಭದ್ರವಾಗಿದ್ದ ಅಸದ್ ಖಾನ್‌ನ ಬಂಗಲೆಯಲ್ಲಿ ಆಶ್ರಯಪಡೆದ. ಬಹುಬೇಗನೆ ಜಲ್ಫೀಕರ್ ಖಾನ್ ಸಹ ಅವನನ್ನು ಬಂದು ಸೇರಿದ. ಫರೂಕ್ ಸಿಯಾರ್ ದೆಹಲಿಯನ್ನು ತಲುಪಿದಾಗ, ಅಸದ್ ಖಾನ್ ಅವನನ್ನು

ಭೇಟಿಯಾಗಿ ಜಲಂದರ್ ಶಾ ಇರುವ ತಾಣದ ಬಗ್ಗೆ ಮಾಹಿತಿ ನೀಡಿದ. ಜಲಂದರ್ ಶಾ ಮತ್ತು ಜಲ್ಫೀಕರ್ ಖಾನ್‌ರನ್ನು ಕೊಂದು ಅವರ ಕತ್ತರಿಸಿದ ರುಂಡಗಳನ್ನು ತನ್ನ ಮುಂದಿರಿಸಬೇಕೆಂದು ಫರೂಕ್ ಸಿಯಾರ್ ಆಜ್ಞಾಪಿಸಿದ. ಹಾಗಾಗಿ 1713ರ ಜನವರಿ 18ರಂದು ಮತ್ತೊಬ್ಬ ಮುಘಲ್ ದೊರೆ ಸತ್ತ. ಆತನ ಸ್ಥಾನದಲ್ಲಿ ಇನ್ನೊಬ್ಬ ಪ್ರತಿಷ್ಠಾಪನೆಗೊಂಡು ದೆಹಲಿ ಸಿಂಹಾಸನವನ್ನೇರಿದ.

**ಬಂದಾ ಸಿಂಗ್ ಬಹದ್ದೂರ್ ವಿರುದ್ಧ ಮುಘಲರ ಮತ್ತೊಂದು ದಂಡಯಾತ್ರೆ**

ರಾಜ್ಯದ ಆಡಳಿತದ ಮೇಲೆ ಹತೋಟಿ ಸಾಧಿಸಿದ ನಂತರ ಫರೂಕ್ ಸಿಯಾರ್ ಮೊದಲು ತನ್ನ ಶತ್ರುಗಳನ್ನೂ ಶಿಕ್ಷಿಸುವ ಕಾರ್ಯವನ್ನು ಆರಂಭಿಸಿದ. ಅನಂತರ ಅವನ ಗಮನ ಸಿಕ್ಖರ ಕಡೆ ಹರಿಯಿತು. ಸಿಕ್ಖರ ವಿರುದ್ಧದ ದಂಡಯಾತ್ರೆಯಲ್ಲಿ ಸುಮಾರು ಎರಡು ವರ್ಷಗಳ ಕಾಲ ಸೈನ್ಯವನ್ನು ಮುನ್ನಡೆಸಿದ್ದ ಮಹಮ್ಮದ್ ಅಮೀನ್ ಖಾನ್ ಜನವರಿ ಮೂರನೇ ವಾರದಲ್ಲಿ ಸಾಮ್ರಾಟ ಫರೂಕ್ ಸಿಯಾರ್ ಮುಂದೆ ಹಾಜರಾಗಿ, ಹೊಸ ಸಾಮ್ರಾಟಗೆ ಹಾಗೂ ದೆಹಲಿಯ ಸಿಂಹಾಸನಕ್ಕೆ ತನ್ನ ನಿಷ್ಠೆಯನ್ನು ಅಭಿವ್ಯಕ್ತಿಸಿದ.

ಉತ್ತರಾಧಿಕಾರಕ್ಕಾಗಿ ನಡೆದ ಎರಡೂ ಕದನಗಳಲ್ಲಿ ಮಹಮ್ಮದ್ ಅಮೀನ್ ಖಾನ್ ಯಾರ ಪಕ್ಷವನ್ನೂ ವಹಿಸಿರಲಿಲ್ಲ. ಹಾಗಾಗಿ ಅವನ ಬಗ್ಗೆ ಯಾರಿಗೂ ದ್ವೇಷವಿರಲಿಲ್ಲ. 1713ರ ಫೆಬ್ರುವರಿ 13ರಂದು ಮಹಮ್ಮದ್ ಅಮೀನ್ ಖಾನ್‌ನನ್ನು ಎರಡನೇ ಭಕ್ಷಿಯಾಗಿ ಫರೂಕ್ ಸಿಯಾರ್ ನೇಮಿಸಿದ.

**ಅಬ್ದುಸ್ ಸಮದ್ ಖಾನ್‌ಗೆ ಫರೂಕ್ ಸಿಯಾರ್‌ನಿಂದ ಕ್ಷಮೆ: ಬಂದಾ ಸಿಂಗ್ ಬೆನ್ನಟ್ಟಲು ಹೊಣೆ**

ಅಬ್ದುಸ್ ಸಮದ್ ಖಾನ್ ಹಿಂದಿನ ಸಾಮ್ರಾಟ ಜಲಂದರ್ ಶಾಗೆ ನಿಷ್ಠಾವಂತ ಅನುಚರನಾಗಿದ್ದ. ಫರೂಕ್ ಸಿಯಾರ್‌ನ ತಂದೆ ಅಜುಮುಶನ್‌ನನ್ನು ಕೊಂದು ಹಾಕಿದ್ದು ಆತನೇ. ಅವನ ಈ ಸೇವೆಗೆ ಜಲಂದರ್ ಶಾ ಆರು ಸಾವಿರದ ಮಾನ್ಸಾಬ್ ಅನ್ನು ಪುರಸ್ಕಾರವಾಗಿ ನೀಡಿದ್ದ. ಆ ಕಾಲಕ್ಕೆ ಅದು ಅತ್ಯಂತ ದೊಡ್ಡ ಪ್ರಮಾಣದ ಮಾನ್ಸಾಬ್. ಹಾಗಾಗಿ ಫರೂಕ್ ಸಿಯಾರ್ ಪಾಲಿಗೆ ಅಬ್ದುಸ್ ಸಮದ್‌ಖಾನ್. 'ಮೊದಲ ಶತ್ರು'ವಾಗಿದ್ದ. ಅದೇ ವೇಳೆ ಆತ ಮಹಮದ್ ಅಮೀನ್ ಖಾನ್‌ನ ಅಳಿಯನಾದ ಜಕಾರಿಯ ಖಾನ್‌ಗೆ ತಂದೆಯೂ ಆಗಿದ್ದ.

1713ರ ಜನವರಿ 26ರಂದು ಮಹಮದ್ ಅಮೀನ್ ಖಾನ್ ಸಾಮ್ರಾಟನನ್ನು ಭೇಟಿ ಮಾಡಿ, ಅಬ್ದುಸ್ ಸಮದ್ ಖಾನ್ ತಾನು ಮಾಡಿದ ಅಪರಾಧ ಮತ್ತು ಪಾಪಗಳಿಗೆ ಕ್ಷಮೆಯಾಚಿಸಲು ಬಯಸಿದ್ದಾನೆಂದು, ಇನ್ನು ಮುಂದೆ ಸಾಮ್ರಾಟನಿಗೆ ಶಾಶ್ವತವಾಗಿ ನಿಷ್ಠೆಯಾಗಿರಲು ಇಚ್ಛಿಸಿದಾನೆಂದು ತಿಳಿಸಿದ. ಮಹಮದ್ ಅಮೀನ್ ಖಾನ್ ಬಗ್ಗೆ ಫರೂಕ್ ಸಿಯಾರ್‌ಗೆ ಸಂಪೂರ್ಣ ವಿಶ್ವಾಸವಿತ್ತು. ಹಾಗಾಗಿ ಅಬ್ದುಸ್ ಸಮದ್ ಖಾನ್‌ನನ್ನು ಕ್ಷಮಿಸುವುದಾಗಿ ತಿಳಿಸಿ ಮಾರನೆಯ ದಿನ ಅವನನ್ನು ತನ್ನ ಮುಂದೆ ಹಾಜರುಪಡಿಸಲು ತಿಳಿಸಿದ. ಮಾರನೆಯ ದಿನ ಸಾಮ್ರಾಟನ ಮುಂದೆ ಹಾಜರಾದ ಅಬ್ದುಸ್ ಸಮದ್ ಖಾನ್, ಬೇಷರತ್ತಾಗಿ ಕ್ಷಮೆಯಾಚಿಸಿದ. ತನ್ನ ತಪ್ಪುಗಳನ್ನು ಮನ್ನಿಸಲು ಮನವಿ ಮಾಡಿದ. ಫರೂಕ್ ಸಿಯಾರ್ ಅವನ ಬಗ್ಗೆ ಕರುಣೆ ತಾಳಿ ಕ್ಷಮಿಸಿದ. ಗೌರವ ವಸ್ತ್ರವನ್ನು ನೀಡಿದ.[(5)]

1713ರ ಫೆಬ್ರುವರಿ 11ರಂದು ಅಬ್ದುಸ್ ಸಮದ್ ಖಾನ್‌ನನ್ನು ಜಮ್ಮು ಪ್ರಾಂತ್ಯದ

ರಾಜ್ಯಪಾಲನನ್ನಾಗಿ ನೇಮಕ ಮಾಡಿ, ಸಿಕ್ಖರ ವಿರುದ್ಧ ಕ್ರಮ ಕೈಗೊಳ್ಳಲು ಸೂಚನೆಗಳನ್ನು ನೀಡಿದ. ಫೆಬ್ರುವರಿ 12ರಂದು ಆತನನ್ನು ದಾವೋಬ್ ಪ್ರದೇಶದ ಫೌಜುದಾರನನ್ನಾಗಿಯೂ ನೇಮಿಸಲಾಯಿತು. ಅದೇ ದಿನ ಅಬ್ದುಸ್ ಸಮದ್ ಖಾನ್‌ನನ್ನು ಲಾಹೋರ್ ಪ್ರಾಂತ್ಯದ ರಾಜ್ಯಪಾಲನನ್ನಾಗಿ ನೇಮಿಸುವ ವಾಗ್ದಾನ ನೀಡಿದ. ಆದರೆ ಸಿಕ್ಖರ ವಶದಿಂದ ಲೋಹಗಡ ಮತ್ತು ಸಧೌರ ಕೋಟೆಗಳನ್ನು ಬಿಡಿಸಬೇಕೆಂಬ ಷರತ್ತನ್ನು ಸಾಮ್ರಾಟನು ವಿಧಿಸಿದನು. ಸಿಕ್ಖರ ವಿರುದ್ಧ ಕ್ರಮವಹಿಸುವ ನಿಟ್ಟಿನಲ್ಲಿ ಅಬ್ದುಸ್ ಸಮದ್ ಖಾನ್ ತಕ್ಷಣವೇ ಕಾರ್ಯೋನ್ಮುಖನಾದ.

ಈಗ ಫರೂಕ್ ಸಿಯಾರ್ ಹೊಸ ಅಧಿಕಾರಿಗಳನ್ನು ನೇಮಿಸಲಾರಂಭಿಸಿದ. ಇನಾಯನ್ ಉಲ್ಲಾ ಖಾನ್‌ನ ಸ್ಥಾನದಲ್ಲಿ ಜಬರ್‌ದಸ್ತ್ ಖಾನ್‌ನನ್ನು ಲಾಹೋರ್‌ನ ರಾಜ್ಯಪಾಲನನ್ನಾಗಿ ನೇಮಿಸಿದ. ಇರಾದತ್‌ಮಂದ್ ಖಾನ್‌ನನ್ನು ಇಮಾನಾಬಾದ್‌ನ ರಾಜ್ಯಪಾಲನಾಗಿ, ಅಹಮದ್ ಖಾನ್‌ನನ್ನು ಗುಜರಾತಿನ ರಾಜ್ಯಪಾಲನಾಗಿ ಸಾದತ್ ಖಾನ್‌ನನ್ನು ಕಾಶ್ಮೀರದ ರಾಜ್ಯಪಾಲನನ್ನಾಗಿ ನೇಮಿಸಿದ. ಜೈಪುರ ಮತ್ತು ಜೋಧಪುರದ ಅರಸರ ಜೊತೆ ಮೈತ್ರಿ ಮಾಡಿಕೊಳ್ಳಲು ಸಹ ಫರೂಕ್ ಸಿಯಾರ್ ನಿರ್ಧರಿಸಿದ. 1713ರ ಮಾರ್ಚ್ 2ರಂದು ಫರೂಕ್ ಸಿಯಾರ್ ರಜಪೂತ ಅರಸರಾದ ಜೋಧಪುರದ ಅಜಿತ್ ಸಿಂಗ್ ಮತ್ತು ಜೈಪುರ / ಅಂಬರದ ಜೈ ಸಿಂಗ್ ಸವಾಯಿ ಅವರುಗಳಿಗೆ ಪತ್ರ ಬರೆದು ಇಬ್ಬರಿಗೂ ತಲಾ ಆರು ಸಾವಿರ ಸೈನಿಕರು ಮತ್ತು ಐದು ಸಾವಿರ ಕುದುರೆಗಳ ಮಾನ್ಸಾಬ್ ಮಂಜೂರು ಮಾಡಿರುವುದಾಗಿ ತಿಳಿಸಿದ.

*ಹಾಗೆ ನೋಡಿದರೆ ರಾಜ ಅಜಿತ್ ಸಿಂಗ್ ತನ್ನ ಮಗಳು ರಾಜ್ ಇಂದರ್ ಕನ್ವರಳನ್ನು ಫರುಷಿರಾಗೆ ಮದುವೆ ಮಾಡಿಕೊಡುವ ಪ್ರಸ್ತಾಪ ಮುಂದಿಟ್ಟಿದ್ದ. ಜುಲೈ ಆರರಂದು ಸಯ್ಯದ್ ಹುಸೇನ್ ಆಲಿ ಖಾನ್ ಈ ಹುಡುಗಿಯನ್ನು ಜೋಧ್‌ಪುರದಿಂದ ಆಲಿ ವರ್ದಿ-ಖಾನ್‌ನ ಸರ್ರೈಗೆ ತಂದಿಟ್ಟ. ಆಕೆ 13ನೇ ಸೆಪ್ಟೆಂಬರ್ ದೆಹಲಿಯನ್ನು ತಲುಪಿದಳು. 27ನೇ ಸೆಪ್ಟೆಂಬರ್ ಇಸ್ಲಾಂ ಧರ್ಮ ಸ್ವೀಕರಿಸಿದಳು. ಫರೂಕ್ ಸಿಯಾರ್ ಮತ್ತು ಅವಳ ಮದುವೆ ನಿಶ್ಚಯವಾಯಿತು. ಫರೂಕ್ ಸಿಯಾರ್ ಮೂಲವ್ಯಾಧಿಯಿಂದ ಬಳಲುತ್ತಿದ್ದ ಹಾಗಾಗಿ ಮದುವೆಯನ್ನು ಎರಡು ತಿಂಗಳು ಮುಂದೂಡಲಾಯಿತು. ಇಂಗ್ಲಿಷ್ ವೈದ್ಯನಾದ ವಿಲಿಯಂ ಹ್ಯಾಮಿಲ್ಟನ್ ಮೂಲವ್ಯಾಧಿಗೆ ಚಿಕಿತ್ಸೆ ನೀಡಿದ. ಉಪಕಾರ ಸ್ಮರಣೆಯಾಗಿ ಫರೂಕ್ ಸಿಯಾರ್ ಆತನಿಗೆ ಬಂಗಾಳದಲ್ಲಿ ತೆರಿಗೆ ವಿನಾಯಿತಿಯನ್ನು ಘೋಷಿಸಿದ.*[8]

ಜಲಂದಾರ್ ಶಾ ಅಪಾರವಾದ ಪಿಟ್ಟಿದ್ದ ಫರೂಕ್ ಸಿಯಾರ್ "ಚರಿತ್ರೆಯಿಂದ ಜಲಂದರ್ ಶಾನ ಆಳ್ವಿಕೆಯನ್ನು ತೆಗೆದುಹಾಕಲು ಹಾಗೂ ತನ್ನ ಆಳ್ವಿಕೆಯನ್ನು ತಾನು ಮುಘಲರ ಸಾಮ್ರಾಟನೆಂದು ಘೋಷಿಸಿಕೊಂಡ ದಿನದಿಂದ ಆರಂಭಿಸಬೇಕು" ಎಂದು ರಾಜಾಜ್ಞೆ ಹೊರಡಿಸಿದ.

### ಸಿಕ್ಖರ ಬಗ್ಗೆ ವರದಿ ಪಡೆದ ಫರೂಕ್ ಸಿಯಾರ್

"ಸಿಖ್ ಬಂಡಾಯಗಾರರು ಸರ್ಹಿಂದ್ ರಾಜ್ಯದ ಚಕ್ಲ ಪರಗಣಗಳಲ್ಲಿ ಮತ್ತೆ ತಲೆ ಎತ್ತಿದ್ದಾರೆ" ಎಂಬ ಸುದ್ದಿಯು 1713ರ ಮಾರ್ಚ್ 10ರಂದು ಫರೂಕ್ ಸಿಯಾರ್‌ನನ್ನು ತಲುಪಿತು. "ಫೌಜುದಾರನಿಗೆ ಅವರನ್ನು ಶಿಕ್ಷಿಸಲು ಸಾಧ್ಯವಾಗಿಲ್ಲ. ಅದರ ಬದಲು ಫೌಜುದಾರನ ರಾವುತರು ಹಳ್ಳಿಗಳಿಗೆ ದಾಳಿ ಮಾಡಿ ಅವರ ದವಸಧಾನ್ಯಗಳನ್ನು ಎಮ್ಮೆಗಳನ್ನು ಓಯ್ದಿದ್ದಾರೆ. ಈ ಕೃತ್ಯದಿಂದ ಚಕ್ಲದ ಜನರು ಅಲ್ಲಿಂದ ಹೊರಹೋಗುತ್ತಿದ್ದಾರೆ" ಎಂಬ ಅಂಶ ಪತ್ರದಲ್ಲಿತ್ತು.

ಬಂದಾ ಸಿಂಗ್ ಬೆಟ್ಟಗಳ ಗುಹೆಗಳಿಂದ ಹೊರಬಂದು ಲೋಹಗಡ ಕೋಟೆಯನ್ನು

ಬಲಗೊಳಿಸುತ್ತಿರುವ ಸುದ್ದಿಯನ್ನು ಸಾಮ್ರಾಟನಿಗೆ ಹೇಳಲಾಯಿತು. ಆತ ಕೋಟೆಯನ್ನು ಬಲಪಡಿಸುವ ಜೊತೆಗೆ ಅದರ ಸುತ್ತಮುತ್ತಲ ನಗರ / ಪಟ್ಟಣಗಳು ಮತ್ತು ಭೂಮಿಯನ್ನು ಆಕ್ರಮಿಸಿಕೊಂಡಿದ್ದಾನೆ; ಅವನ ಸೈನಿಕರು ರಾತ್ರಿಯಲ್ಲಿ ದಾಳಿ ಮಾಡಿ ಮುಸ್ಲಿಮರನ್ನು ಲೂಟಿ ಕೊಂದು ಹಾಕುತ್ತಿದ್ದಾರೆ ಎಂಬ ಸುದ್ದಿ ಕೇಳಿದ ಸಾಮ್ರಾಟ ವ್ಯಾಕುಲನಾದ. ಈ ಸುದ್ದಿಯನ್ನು ಹೇಳುವ ಕಾಲದಲ್ಲಿ ಸಯ್ಯದ್ ಹುಸೇನ್ ಆಲಿ, ಅಬ್ದುಲ್ಲಾ ಖಾನ್, ಮೊದಲಾದ ಹಿರಿಯ ಅಧಿಕಾರಿಗಳಿದ್ದರು. ಈಗ ಫರೂಕ್ ಸಿಯಾರ್ ಬಂಡುಕೋರ ಬಂದಾ ಸಿಂಗ್‌ನನ್ನು ಮಟ್ಟಹಾಕಲು ಲಾಹೋರ್‌ನ ರಾಜ್ಯಪಾಲ ಅಬ್ದುಸ್ ಸಮದ್ ಖಾನ್‌ನನ್ನು ಕಳುಹಿಸಲು ತೀರ್ಮಾನಿಸಿದ.[10] ಅಬ್ದುಸ್ ಸಮದ್ ಖಾನ್ ಈಗ ಸರ್ಹಿಂದ್‌ನ ಫೌಜುದಾರ ಜೈನುದ್ದೀನ್ ಖಾನ್‌ನನ್ನು ಸಂಪರ್ಕಿಸಿ, ಬಂದಾ ಸಿಂಗ್ ವಿರುದ್ಧ ಜಂಟಿಯಾಗಿ ಹೋರಾಡಲು ತಿಳಿಸುವಂತೆ ಸಾಮ್ರಾಟನು ಅಬ್ದುಸ್ ಸಮದ್ ಖಾನ್‌ಗೆ 1713ರ ಮಾರ್ಚ್ 21ರಂದು ಆಜ್ಞೆ ಮಾಡಿದ.[11]

ಅಬ್ದುಸ್ ಸಮದ್ ಖಾನ್‌ಗೆ ಬರೆದ ಪತ್ರದಲ್ಲಿ ಫರೂಕ್ ಸಿಯಾರ್ ಆತನನ್ನು **"**ಸರ್ಕಾರದ ನೆರವಿಗೆ ಬಂದವನು, ಬೃಹತ್ ಸಾಮ್ರಾಜ್ಯದ ಶ್ರೇಷ್ಠ ವ್ಯಕ್ತಿ, ನಾಯಕರ ನಾಯಕ; ಪರಿಪೂರ್ಣ ವಿವೇಕಿ ಮತ್ತು ಸುಂದರ ವದನದ ವ್ಯಕ್ತಿ**"** ಎಂದು ಬಣ್ಣಿಸಿ ತಕ್ಷಣವೇ ಲೋಹಗಡದಿಂದ ಸಿಕ್ಖರನ್ನು ಓಡಿಸಲು ಹೊರಡಬೇಕೆಂದು ತಿಳಿಸಿದ್ದ. ಅದೇ ಪತ್ರದಲ್ಲಿ ತಾನು ಏಳು ಸಾವಿರ ರಾವುತರನ್ನು ಮತ್ತು ಹತ್ತು ಮಂದಿ ಸೇನಾಧಿಕಾರಿಗಳನ್ನು ಇನಾಮ್ ಖಾನ್‌ನ ನೇತೃತ್ವದಲ್ಲಿ ಕಳುಹಿಸುವುದಾಗಿ ತಿಳಿಸಿದ್ದ.[12]

**ನಹನ್ ಮೇಲೆ ಬಂದಾ ಸಿಂಗ್ ಮಾಡಿದ ದಾಳಿ**

1713ರ ಮಾರ್ಚ್ ತಿಂಗಳಲ್ಲಿ ಬಂದಾ ಸಿಂಗ್ ಲೋಹಗಡದಲ್ಲಿ ಉಳಿದಿದ್ದ. ಸಿಕ್ಖರ ವಿರುದ್ಧದ ಮುಘಲರ ಹೋರಾಟದಲ್ಲಿ, ಮುಘಲರಿಗೆ ನೆರವಾಗುವುದಾಗಿ ನಹನ್ ರಾಜ ಭೂಪ್ ಪ್ರಕಾಶ್ ಸಾಮ್ರಾಟ ಫರೂಕ್ ಸಿಯಾರ್‌ಗೆ ಮಾತುಕೊಟ್ಟ ಕಾರಣ ಸಾಮ್ರಾಟ ಅವನನ್ನೂ ಸೆರೆಮನೆಯಿಂದ ಬಿಡುಗಡೆ ಮಾಡಿದ. ಈ ಮಾಹಿತಿ ಬಂದಾ ಸಿಂಗ್‌ಗೆ ತಿಳಿಯಿತು. ಭೂಪ್ ಪ್ರಕಾಶ್ ಬಿಡುಗಡೆಯಾದ ಕೂಡಲೇ ಸಿಕ್ಖರ ವಿರುದ್ಧ ಕ್ರಮ ಜರುಗಿಸಲು ಆರಂಭಿಸಿರುವ ವಿಷಯ ಸಹ ಬಂದಾ ಸಿಂಗ್‌ಗೆ ತಿಳಿಯಿತು. ಕೆರಳಿದ ಬಂದಾ ಸಿಂಗ್ ಈಗ ಭೂಪ್ ಪ್ರಕಾಶನನ್ನು ಶಿಕ್ಷಿಸಲು ನಿರ್ಧರಿಸಿದ ಆತ 5–6 ಸಾವಿರ ಸೈನಿಕರಿದ್ದ ಸೇನೆಯನ್ನು ನಹನ್ ಕಡೆಗೆ ಮುನ್ನಡೆಸಿದ. ಬಂದಾ ಸಿಂಗ್ ಸೇನೆಯೊಡನೆ ನಹನ್ ಕಡೆ ಬರುತ್ತಿರುವ ವಿಷಯ ತಿಳಿದ ಭೂಪ್ ಪ್ರಕಾಶ್, ನಹನ್ ಪಟ್ಟಣವನ್ನು ತೊರೆದು ಎತ್ತರದ ಬೆಟ್ಟಗಳಲ್ಲಿ ಆಶ್ರಯಪಡೆದ.[13] ಬಂದಾ ಸಿಂಗ್ ತನ್ನ ಶಿಬಿರವನ್ನು ನಹನ್ ಹತ್ತಿರ ಹೂಡಿದ. ಒಂದೆರಡು ದಿನಗಳ ನಂತರ ನಹನ್‌ನ ಶ್ರೀಮಂತರು ಮತ್ತು ವರ್ತಕರು ಬಂದಾ ಸಿಂಗ್‌ನ್ನು ಭೇಟಿಯಾಗಿ ದೊಡ್ಡ ಮೊತ್ತದ ಒತ್ತೆ ಹಣವನ್ನು ನೀಡುವುದಾಗಿ ಹೇಳಿದರು. ಬಂದಾ ಸಿಂಗ್ ಹಣವನ್ನು ಸ್ವೀಕರಿಸಿ ಒಂದು ವಾರದ ನಂತರ ನಹನ್ ಬಿಟ್ಟು ಮತ್ತೆ ಲೋಹಗಡ ತಲುಪಿದ. ಅಲ್ಲಿಗೆ ಬಂದಾಗ ಮುಘಲರು ಸಧೌರ ಕೋಟೆಯ ಮೇಲೆ ದಾಳಿ ಮಾಡಲಿದ್ದಾರೆಂಬ ಮಾಹಿತಿ ಗುಪ್ತಚರರಿಂದ ಬಂತು. ಆಗ ಬಂದಾ ಸಿಂಗ್ ಸಧೌರ ಕೋಟೆಯನ್ನು ರಕ್ಷಿಸಲು ಒಂದು ಸಾವಿರ ಸೈನಿಕರನ್ನು ಕಳುಹಿಸಿದ.[14]

**ಸಧೌರ ಕೋಟೆಯ ಮೇಲೆ ಮುಘಲರ ಮೂರನೆಯ ದಾಳಿ**

ಮುಘಲರು ಸಧೌರ ಕೋಟೆಯ ಮೇಲೆ ದಾಳಿ ಮಾಡಲಿರುವ ಮಾಹಿತಿ ತಿಳಿದ ಬಂದಾ ಸಿಂಗ್ ಈಗ ಎರಡೂ ಕೋಟೆಗಳನ್ನು ಬಲಪಡಿಸಿದ. ಇದರಿಂದಾಗಿ ಸಿಖ್ ಸೈನಿಕರು ಲೋಹಗಡ ಮತ್ತು ಸರ್ಹಿಂದ್ ನಡುವಣ ಸಂಪೂರ್ಣ ಪ್ರದೇಶವನ್ನು ತಮ್ಮ ಹತೋಟಿಗೆ ತೆಗೆದುಕೊಂಡರು. ಸರ್ಹಿಂದ್‌ನ ಫೌಜುದಾರ ಜೈನುದ್ದೀನ್ ಸಿಕ್ಖರ ಆಕ್ರಮಣದಿಂದ ತನ್ನ ರಾಜ್ಯವನ್ನು ರಕ್ಷಿಸುವ ಪ್ರಯತ್ನ ಮಾಡಿದರೂ ಫಲಕಾರಿಯಾಗಲಿಲ್ಲ. ಅವನ ಅಧಿಕಾರವೇನಿದ್ದರೂ ಅವನ ಕೋಟೆಯ ವ್ಯಾಪ್ತಿಗೆ ಸೀಮಿತವಾಯಿತು.

1713ರ ಏಪ್ರಿಲ್‌ನಲ್ಲಿ ಮುಘಲರ ಸೇನೆಯ ಏಳು ಸಾವಿರ ಸೈನಿಕರು ಸಧೌರದ ಹತ್ತಿರಕ್ಕೆ ಬಂದರು. ಸಿಕ್ಖರ ವಿರುದ್ಧ ಹೋರಾಡಲು ಈಗಿರುವ ಸೈನ್ಯ ಸಾಲದೆಂದು ಸೇನಾಧಿಪತಿಗಳು ಭಾವಿಸಿದರು. ಹೆಚ್ಚಿನ ಪಡೆ ಕಳುಹಿಸುವಂತೆ ಕೋರಿ ಅವರು ಸಾಮ್ರಾಟನಿಗೆ ಪತ್ರ ಬರೆದರು.[15]

ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡ ನಂತರ, ಜಮ್ಮುವಿನ ರಾಜ್ಯಪಾಲ ಅಬ್ದುಸ್ ಸಮದ್ ಖಾನ್, ಸರ್ಹಿಂದ್‌ನ ರಾಜ್ಯಪಾಲ ಜೈನುದ್ದೀನ್ ಅಹ್ಮದ್ ಖಾನ್ ಮತ್ತು ಜನರಲ್ ಇಮಾಮ್ ಖಾನ್ ಸಧೌರದ ಕಡೆ ದೊಡ್ಡ ಸೇನೆಯನ್ನು ಮುನ್ನಡೆಸಿ ಅದರ ಕೋಟೆಗೆ ಮುತ್ತಿಗೆ ಹಾಕಿದರು. ನಗರದ ಸುತ್ತಲೂ ಸೇನೆ ಕಂದಕವನ್ನು ತೋಡಿತು.[16] ಇರ್ವಿನ್‌ನ ಪ್ರಕಾರ ಸಧೌರದ ಕೋಟೆಯ ಗೋಡೆಗಳು ದಪ್ಪ ಹಾಗೂ ಎತ್ತರವಾಗಿದ್ದ ಕಾರಣ ಮುಘಲರ ಫಿರಂಗಿಗಳು ಮತ್ತು ಬಂದೂಕುಗಳು ಅವುಗಳನ್ನು ಭೇದಿಸಲು ಆಗಲಿಲ್ಲ.[17]

ಒಂದು ಪಾರ್ಶ್ವದಲ್ಲಿ ಅಬ್ದುಸ್ ಸಮದ್‌ಖಾನ್ ಬೀಡುಬಿಟ್ಟಿದ್ದ. ಎರಡನೇ ಪಾರ್ಶ್ವದಲ್ಲಿ ಜೈನುದ್ದೀನ್ ಖಾನ್ ಮತ್ತು ಮೂರನೆಯ ಪಾರ್ಶ್ವದಲ್ಲಿ ಮುಘಲ್ ಸೇನೆಯ ಮತ್ತೊಂದು ಭಾಗ ರಕ್ಷಣೆಗೆ ನಿಂತಿತ್ತು.[18] ಮಹಮದ್ ಕಾಸಿಂ ಔರಂಗಬಾದಿಯ ಪ್ರಕಾರ ಸಧೌರ ನಗರದಲ್ಲಿ ಸುಟ್ಟ ಇಟ್ಟಿಗೆಗಳನ್ನು ಬಳಸಿ ಕಟ್ಟಲಾಗಿದ್ದ ಅಸಂಖ್ಯಾತ ಮನೆಗಳಿದ್ದವು. ಬಂದಾ ಸಿಂಗ್ ಬಹದ್ದೂರ್ ಈ ಪ್ರದೇಶವನ್ನು ನಾಶಪಡಿಸಿದ್ದ. ಕೆಡವಿದ ಕಟ್ಟಡಗಳಿಂದ ಹೆಕ್ಕಿದ ಮರದ ತೊಲೆ, ಹಲಗೆಗಳನ್ನು ಕೋಟೆಗೆ ಅಳವಡಿಸಿ ಅದನ್ನು ಬಿಗಿಗೊಳಿಸಿದ್ದ. ಕೋಟೆಯ ಗೋಡೆಗೆ ಇದರಿಂದಾಗಿ ಫಿರಂಗಿ ದಾಳಿ ಮತ್ತು ಬಂದೂಕಿನ ಗುಂಡಿನ ಸಿಡಿತದಿಂದ ಸಂಕರಕ್ಷಣೆಯಾಗುತ್ತದೆಂದು ಆತ ಭಾವಿಸಿದ್ದ.[19]

1713ರ ಜೂನ್ 22ರಂದು ಮೊದಲ ಬಾರಿಗೆ ರಾತ್ರಿಯ ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಸಿಖ್ ಸೈನಿಕರು ಹೊರಬಂದು ಮುಘಲ್ ಸೈನಿಕರ ಮೇಲೆ ಬಿದ್ದರು. ಬಿರುಸಿನ ಕಾಳಗ ಆರಂಭವಾಯಿತು. ಎರಡೂ ಕಡೆ ಸಾಕಷ್ಟು ಸೈನಿಕರು ಹತರಾದರು. ಮಹಮದ್ ಕಾಸಿಂ ಔರಂಗಬಾದಿಯ ಪ್ರಕಾರ 157 ಸಿಖ್ ಸೈನಿಕರು ಕಾದಾಟದಲ್ಲಿ ಸತ್ತರು. ಸತ್ತ ಪ್ರಮುಖರು–ಸಿಖ್ ಕಡೆಯವರು–ಅಲ್ಬೇಲ್ ಸಿಂಗ್. ಭಾಯ್ ಉದೇ ಸಿಂಗ್‌ನ ತಮ್ಮ ಮೋಹರ್ ಸಿಂಗ್ ಮತ್ತು ಸೈನಾಸಿಂಗ್. ಇವರೆಲ್ಲ ಭಾಯ್ ಮಾನ್‌ಸಿಂಗ್‌ನ ಮೊಮ್ಮಕ್ಕಳು. ಮುಘಲರ ಕಡೆಯ ಪ್ರಮುಖರೆಂದರೆ ಇನಾಂ ಖಾನ್‌ನ ತಮ್ಮ ಬಾಕ ಬೇಗ್ ಖಾನ್. ಮಹಮದ್ ಕಾಸಿಂ ಔರಂಗಾಬಾದಿಯು ಈ ಯುದ್ಧದ ವಿವರಣೆ ನೀಡುತ್ತಾ ಅದು ಲೋಹಗಡದಲ್ಲಿ ನಡೆಯಿತೆಂದು ತಪ್ಪಾಗಿ ಉಲ್ಲೇಖಿಸಿದ್ದಾನೆ. ಲೋಹಗಡ ಮೇಲೆ ದಾಳಿ ನಡೆದದ್ದು 1713ರ ನವೆಂಬರ್ 13ರಂದು.[20]

ಜುಲೈ 15ರಂದು ಸಧೌರ ಕೋಟೆಯನ್ನು ಏರಲು ಮುಘಲ್ ಸೇನೆ 700 ಮರದ ಏಣಿಗಳನ್ನು ತಂದು ಪ್ರಯತ್ನಿಸಿತು. ಆದರೆ ಸಿಖ್ ಸೈನಿಕರ ಜಾಗರೂಕತೆಯಿಂದ ವಿಫಲವಾಯಿತು.

ಇಷ್ಟೆಲ್ಲ ಆದರೂ ಉಭಯ ಪಕ್ಷದವರು ಯುದ್ಧವನ್ನು ಬಿಟ್ಟುಕೊಡಲಿಲ್ಲ.

ಮಹಮದ್ ಕಾಸಿಂ ಔರಂಗಬಾದಿಯು ತನ್ನ ಕೃತಿಯಲ್ಲಿ ಹೀಗೆ ವರ್ಣಿಸುತ್ತಾನೆ–ಒಂದು ದಿನ ಮುಘಲ್ ಸೈನ್ಯದ ಪರಾಕ್ರಮಿ ಸೈನಿಕರು ಸಧೌರ ಕೋಟೆ ಒಡ್ಡಿದ ಬಲವಾದ ಪ್ರತಿರೋಧವನ್ನು ಲೆಕ್ಕಿಸದೆ ಅದರ ಮೇಲೆ ದಾಳಿ ನಡೆಸಿದರು. ಆ ವೇಳೆ ಕೋಟೆಯಿಂದ ಹೊರಬಂದ ಸಿಖ್ ಸೈನಿಕರು ಮುಘಲ್ ಸೈನಿಕರ ಮೇಲೆ ಮುಗಿಬಿದ್ದರು. ಯುದ್ಧ ಸುಮಾರು ಮೂರು ಗಂಟೆ ಕಾಲ ನಡೆಯಿತು. ಮುಘಲ್ ಸೈನಿಕರು ಸಹ ಧೈರ್ಯದಿಂದ ಹೋರಾಡಿದರು. ಈ ಯುದ್ಧದಲ್ಲಿ 691 ಸಿಖ್ ಸೈನಿಕರು ಸತ್ತರು. (ಆತ ಮುಘಲರ ಕಡೆ ಸಂಭವಿಸಿದ ಸಾವುಗಳ ಸಂಖ್ಯೆ ನೀಡುವುದಿಲ್ಲ. ಬದಲು ಮೀರ್ ಬಜುರ್ಗ್, ಮಿರ್ಜಾ ಅಬ್ದುಲ್ ಭಕ್ಷಿ, ಅಬ್ದುಸ್ ಸಮದ್ ಖಾನ್‌ನ ನಿಕಟವರ್ತಿ ಸಯ್ಯದ್ ಹಶಿಂ ಖಾನ್ ಇವರು ಸತ್ತರೆಂದು ಉಲ್ಲೇಖಿಸುತ್ತಾನೆ)[21]

ಆದರೆ, ಅನೇಕ ದಿನಗಳ ಕಾಲ ನಡೆಸಿದ ಮದ್ದು ಗುಂಡಿನ ದಾಳಿಯಿಂದ ಸಿಕ್ಖರು ರಕ್ಷಣಾತ್ಮಕ ಯುದ್ಧಕ್ಕೆ ಹೋಗುವಂತೆ ಮಾಡುವಲ್ಲಿ ಮುಘಲ್ ಸೇನೆ ಯಶಸ್ವಿಯಾಯಿತು. ಈ ವೇಳೆಗೆ ಮುಘಲ್ ಸೇನೆ ಕೋಟೆಯ ಸುತ್ತಲಿನ ಪ್ರದೇಶವನ್ನು ತನ್ನ ಹತೋಟಿಗೆ ತೆಗೆದುಕೊಂಡಿತ್ತು. ಸಿಕ್ಖರು ಕೋಟೆಯಿಂದ ಹೊರಹೋಗುವುದನ್ನು ತಡೆಯಲು ಮುಘಲ್ ಸೇನೆ ಈಗ ಕೋಟೆಯ ಸುತ್ತಲೂ ಆಳವಾದ ಕಂದಕವನ್ನು ತೋಡಿತು. ಅದೇ ವೇಳೆಗೆ ಒಂದು ದೊಡ್ಡ ಫಿರಂಗಿಯೂ ಸೈನ್ಯವನ್ನು ಬಂದು ತಲುಪಿತು. ಇದನ್ನು ಬಳಸಿ ಕೋಟೆಯ ಮೇಲಕ್ಕೆ ಗುಂಡನ್ನು ಹಾರಿಸಿ ಕೋಟೆಯ ಗೋಡೆಗೆ ಅಪಾಯ ಮಾಡಬಹುದಿತ್ತು. ಆ ಫಿರಂಗಿಯನ್ನು ನಿರುಪಯುಕ್ತಗೊಳಿಸದಿದ್ದರೆ ಮುಘಲರು ಕೋಟೆಯ ಗೋಡೆಯನ್ನು ಭೇದಿಸುವುದು ನಿಶ್ಚಯವೆಂಬುದನ್ನು ಮನಗಂಡ ಸಿಕ್ಖರು ಕಾರ್ಯಾಚರಣೆ ರೂಪಿಸಿದರು. 1713ರ ಜುಲೈ 31ರಂದು ರಾತ್ರಿ ಬಿರುಸಿನ ಮಳೆ ಬರುತ್ತಿತ್ತು. ಮುಘಲ್ ಸೇನೆ ಗುಡಾರವನ್ನು ಸೇರಿಕೊಂಡಿತ್ತು. ಕೆಲವು ಧೈರ್ಯಶಾಲಿ ಸಿಖ್ ಸೈನಿಕರು ಕೋಟೆಯಿಂದ ಹೊರಬಂದು ಫಿರಂಗಿಯನ್ನು ಕೋಟೆಯ ಕಡೆ ಸಾಗಿಸುತ್ತಾ ಅದನ್ನು ಕಂದಕದವರೆಗೆ ಎಳೆದುಕೊಂಡು ಹೋಗುವುದರಲ್ಲಿ ಯಶಸ್ವಿಯಾದರು. ಆದರೆ ಅವರು ಕಟ್ಟಿದ್ದ ಹಗ್ಗ ತುಂಡಾಗಿ ಫಿರಂಗಿಯು ಕಂದಕದ ಕೆಸರಿಗೆ ಬಿತ್ತು. ಫಿರಂಗಿ ಬಿದ್ದು ಮಾಡಿದ ಸದ್ದಿನಿಂದ ಎಚ್ಚರವಾದ ಮುಘಲ್ ಸೈನಿಕರು ಡೇರೆ ಬಿಟ್ಟು ಹೊರಬಂದರು. ಕಣ್ಮರೆಯಾದ ಫಿರಂಗಿಯನ್ನು ಹುಡುಕುತ್ತಾ ಕೆಸರಿನಲ್ಲಿ ಹೂತಿರುವುದನ್ನು ಗುರುತಿಸಿದರು. ನೂರು ಜನ ಸೈನಿಕರಿಗೆ ತಲಾ 50 ರೂಪಾಯಿಗಳನ್ನು ನೀಡಿದ ಸೇನಾಧಿಕಾರಿಗಳು ಅದನ್ನು ಹೊರತೆಗೆಸುವಲ್ಲಿ ಯಶಸ್ಸು ಕಂಡರು.[22]

ಈ ಫಿರಂಗಿ ಕಾರ್ಯಾಚರಣೆಯಲ್ಲಿ ವಿಫಲರಾದ ಸಿಖ್ ಸೈನಿಕರು, ಯುದ್ಧವನ್ನು ಹೆಚ್ಚು ಕಾಲ ಮುಂದುವರಿಸಲಾಗದೆಂಬ ವಾಸ್ತವವನ್ನು ಮನಗಂಡರು. ಕೋಟೆಯಲ್ಲಿ ಈಗ ಸಾಕಷ್ಟು ಆಹಾರ ಮತ್ತು ಶಸ್ತ್ರಾಸ್ತ್ರ ಉಳಿದಿರಲಿಲ್ಲ. ಜೊತೆಗೆ ಮುಘಲ್ ಸೈನಿಕರ ಸಂಖ್ಯೆ ಸಾಕಷ್ಟು ಹೆಚ್ಚಿತ್ತು. ಆದುದರಿಂದ ನೇರ ಯುದ್ಧ ಬಿಟ್ಟು ಕೂಟ ಯುದ್ಧ (ಗೆರಿಲ್ಲ ಯುದ್ಧ ತಂತ್ರ) ಮಾಡಲು ಅಣಿಯಾದರು.

ಮಹಮದ್ ಕಾಸಿಂ ಔರಂಗಾಬಾದಿಯ ಪ್ರಕಾರ "ಸಿಖ್ ಸೈನಿಕರು ರಾತ್ರಿ ವೇಳೆ ನುಸುಳಿ ಮುಘಲ್ ಸೈನಿಕರ ಮೇಲೆ ಮುಗಿಬೀಳದಿದ್ದ ದಿನವೇ ಇರಲಿಲ್ಲ. ಒಂದು ರಾತ್ರಿ ಅವರು ಹೊರಬಂದು ಅಬ್ದುಸ್ ಸಮದ್‌ಖಾನ್ ಇದ್ದ ಕಂದಕದ ಹತ್ತಿರ ಸೈನಿಕರ ಮೇಲೆ ಕತ್ತಿಯಿಂದ ಕಾಳಗ ಮಾಡಲಾರಂಭಿಸಿದರು. ಎಲ್ಲ ಕಡೆ ಹಾಹಾಕಾರ. ಫಿರಂಗಿಯ ಗುಂಡಿನ ದಾಳಿ, ಬಂದೂಕಿನ ಸಿಡಿತ

ರಾತ್ರಿಯ ಆಗಸದಲ್ಲಿ ಗುಡುಗು–ಮಿಂಚಿನ ರೌದ್ರಾವತಾರವನ್ನು ಸೃಷ್ಟಿಸಿದವು. ಆರಂಭದಲ್ಲಿ ಸಿಕ್ಖರ ಕೈ ಮೇಲಾದಂತೆ ಕಂಡಿತು. ಆಗ ಸಯ್ಯದ್ ಖಾಸಿಂ ಖಾನ್, ಮೀರ್‌ಬಾಬಾ ಖಾನ್ ಮತ್ತು ಅವರ ಮಕ್ಕಳು, ಸೋದರರು, ಒಡನಾಡಿಗಳೆಲ್ಲ ಅಲ್ಲಿಗೆ ಬಂದು ವೀರಾವೇಶದಿಂದ ಹೋರಾಡಿದರು. ಈ ಆಕ್ರಮಣದಲ್ಲಿ 200 ಮಂದಿ ಸಿಖ್ ಸೈನಿಕರು ಸತ್ತರು". (ಕೃತಿಕಾರನು ಮುಘಲ್ ಸೇನೆಗಾದ ನಷ್ಟದ ಬಗ್ಗೆ ಉಲ್ಲೇಖಿಸುವುದಿಲ್ಲ. ಆ ಕಡೆಯೂ ಹೆಚ್ಚಿನ ಸಂಖ್ಯೆಯಲ್ಲಿ ಸೈನಿಕರು ಸತ್ತಿರಬಹುದು)[(23)]

ಮುಘಲ್ ಸೈನ್ಯವು ಕೋಟೆಯನ್ನು ಮೂರು ಕಡೆಯಿಂದ ಸುತ್ತುವರೆಯಿತು. ಒಂದು ಪಾರ್ಶ್ವ ಮಾತ್ರ ಮುಕ್ತವಾಗಿತ್ತು. ಆಗಸ್ಟ್ ತಿಂಗಳ ಆರಂಭದಲ್ಲಿ ಇಸಾಖಾನ್‌ನ ನೇತೃತ್ವದಲ್ಲಿ ಬಂದ ಹೊಸ ಸೇನಾ ತುಕಡಿಯೊಂದು ಕೋಟೆಯ ನಾಲ್ಕನೇ ಪಾರ್ಶ್ವವನ್ನು ಮುಚ್ಚಿತು. ಈಗ ಮುಘಲ ಸೈನಿಕರು ಕೋಟೆಯ ಎಲ್ಲಾ ಕಡೆ ಸಂಚರಿಸಿ ದಿಗ್ಬಂಧನ ಹಾಕಿದರು.[(24)]

ಸಧೌರ ಕೋಟೆಯ ಮುತ್ತಿಗೆ ಮತ್ತೆ ಎರಡು ತಿಂಗಳು ಮುಂದುವರೆಯಿತು. ಅಂತಿಮವಾಗಿ ಕೋಟೆಯನ್ನು ತೊರೆಯಲು ಸಿಖ್ ಸೈನಿಕರು ನಿರ್ಧರಿಸಿದರು. ಒಂದು ರಾತ್ರಿ ಅವರು ಕೋಟೆಯಿಂದ ಹೊರಬಂದು ಲೋಹಗಡದ ಕಡೆ ತೆರಳಲಾರಂಭಿಸಿದರು. ಮುಘಲರ ಸೇನೆ ಅವರನ್ನು ಬೆನ್ನಟ್ಟಿತು. ಈ ಸಂಘರ್ಷದಲ್ಲಿ ಹಲವಾರು ಸಿಖ್ ಸೈನಿಕರು ಹತರಾದರು.

ಔರಂಗಾಬಾದಿಯ ಪ್ರಕಾರ ಸಧೌರ ಕೋಟೆಯ ಆಕ್ರಮಣವು ಏಳೂವರೆ ತಿಂಗಳ ಕಾಲ ನಡೆಯಿತು. ಆದರೆ ಇದು ನಿಜವಲ್ಲ. ಮುಘಲ್ ಸೈನ್ಯವು 27ನೇ ಜೂನ್ ಸಧೌರ ತಲುಪಿತ್ತು. ಅದು ಸೆಪ್ಟೆಂಬರ್ ಮೂರನೇ ವಾರದಲ್ಲಿ ಕೋಟೆಯನ್ನು ಆಕ್ರಮಿಸಿಕೊಂಡಿತು. ಹಾಗಾಗಿ ಆಕ್ರಮಣದ ಅವಧಿ ಸುಮಾರು ಮೂರು ತಿಂಗಳು ದೀರ್ಘವಾಗಿತ್ತು.

### ಈ ಯುದ್ಧದಲ್ಲಿ ಹತರಾದ ಸಿಕ್ಖರ ಸಂಖ್ಯೆ

1713ರ ಮಾರ್ಚ್ ತಿಂಗಳಲ್ಲಿ ಕೋಟೆಯಲ್ಲಿ ಇದ್ದ ಸಿಕ್ಖರ ಸಂಖ್ಯೆ ಒಂದು ಸಾವಿರ. ಔರಂಗಾಬಾದಿಯ ಪ್ರಕಾರ ಒಂದು ದಿನ 691, ಮತ್ತೊಂದು ದಿನ 157, ಇನ್ನೊಂದು ದಿನ 200 ಮಂದಿ ಸಿಖ್ ಸೈನಿಕರು ಕೊಲ್ಲಲ್ಪಟ್ಟರು.[(25)] ಈ ಲೆಕ್ಕಾಚಾರದ ಪ್ರಕಾರ ಮೂರು ದಿನದಲ್ಲಿಯೇ 1043 ಸಿಖ್ ಸೈನಿಕರು ಹತರಾಗಿದ್ದಾರೆ. 1713ರ ಜುಲೈ ತಿಂಗಳಲ್ಲಿ, ಬಿರುಸಿನ ಮಳೆಯ ರಾತ್ರಿ 500 ಜನ ಸಿಖ್ ರಾವುತರು ಮತ್ತು 500 ಮಂದಿ ಕಾಲಾಳು ಕೋಟೆಯನ್ನು ಪ್ರವೇಶಿಸಿದ್ದಾರೆ. ಕಾದಾಟ ಎರಡು ತಿಂಗಳು ಮುಂದುವರೆದಿದೆ. ಈ ಯುದ್ಧದ ಕಾಲದಲ್ಲಿಯೂ ಹಲವಾರು ಸಿಖ್ ಸೈನಿಕರು ಮೃತರಾಗಿದ್ದಾರೆ. ಈ ಸಂಖ್ಯೆ ಸರಿಯಿದ್ದರೆ, ಎರಡು ಸಾವಿರ ಸೈನಿಕರಲ್ಲಿ ಕೋಟೆಯ ಒಂದು ಗೋಡೆಯನ್ನು ಒಡೆದು ಇನ್ನೂರು ಅಥವಾ ಮುನ್ನೂರು ಸಿಖ್ ಸೈನಿಕರು ಪರಾರಿಯಾಗಲು ಸಾಧ್ಯ. ಇನ್ನೊಂದು ವರದಿಯ ಪ್ರಕಾರ ಅಬ್ದುಸ್ ಸಮದ್‌ಖಾನ್ ಯುದ್ಧದಲ್ಲಿ ಸತ್ತ 600 ಸಿಖ್ ಸೈನಿಕರ ರುಂಡವನ್ನು ಕತ್ತರಿಸಿ ಸಾಮ್ರಾಟನ ಅಭಿಮಾನ ಗಳಿಸಲು ಸಧೌರದಿಮದ ದೆಹಲಿಗೆ ಕಳುಹಿಸಿದ. ಸೆಪ್ಟೆಂಬರ್ 27ರಂದು ಈ ರುಂಡಗಳನ್ನು ಪರಿಶೀಲಿಸಿದ ಸಾಮ್ರಾಟನು ಅಬ್ದುಸ್ ಸಮದ್‌ಖಾನ್‌ಗೆ ವಿಶೇಷ ಗೌರವ ವಸ್ತ್ರವನ್ನು ಕಳಿಸಿಕೊಟ್ಟ.[(26)]

ಸಧೌರ ಕೋಟೆಯನ್ನು ವಶಪಡಿಸಿಕೊಂಡ ನಂತರ ಅದನ್ನು ಕೆಡವಿಹಾಕಲು ಅಬ್ದುಸ್ ಸಮದ್ ನಿರ್ಧರಿಸಿದ. ಸಿಕ್ಖರು ಇದನ್ನು ತಮ್ಮ ರಕ್ಷಣಾ ಕೋಟೆಯಾಗಿ ಬಳಸುವುದನ್ನು ತಪ್ಪಿಸುವುದು ಅವನ ಉದ್ದೇಶವಾಗಿತ್ತು. ಈ ಕೋಟೆಯನ್ನು ಕೆಡವಿ, ಅಲ್ಲಿಯ ಕಲ್ಲುಗಳು ಮತ್ತಿತರ ವಸ್ತುಗಳನ್ನು

ದೂರದ ಪ್ರದೇಶಗಳಿಗೆ ಸಾಗಿಸುವ ಕಾರ್ಯವನ್ನು ಎಲ್ಲ ಸೈನಿಕರಿಗೂ ವಹಿಸಿದ. ಸಿಕ್ಖರ ಈ ಕೋಟೆಯನ್ನು ಮತ್ತೆ ದುರಸ್ತಿ ಮಾಡುವುದು ಅಥವಾ ಮರು ನಿರ್ಮಾಣ ಮಾಡುವುದನ್ನು ತಡೆಯುವ ಉದ್ದೇಶ ಅವನದಾಗಿತ್ತು.[27] ಕೋಟೆಯನ್ನು ಕೆಡಹುವ ಮತ್ತು ತ್ಯಾಜ್ಯವನ್ನು ಸಾಗಿಸುವ ಕಾರ್ಯ ಹಲವಾರು ದಿನ ಹಿಡಿಯಿತು. ಇದಾದ ನಂತರ ಅಬ್ದುಸ್ ಸಮದ್ ಖಾನ್ ಲೋಹಗಡ ಕಡೆಗೆ ಹೊರಟ.

**ಹುತಾತ್ಮನಾದ ಭಾಯ್ ಫತೇ ಸಿಂಗ್**

ಸಢೌರ ಯುದ್ಧ ನಡೆಯುತ್ತಿರುವಾಗ ಭಾಯ್ ಫತೇ ಸಿಂಗ್ ಜಮ್ಮು–ಕಾಶ್ಮೀರ ಪ್ರದೇಶದಲ್ಲಿದ್ದ. 1713ರ ಅಕ್ಟೋಬರ್ ತಿಂಗಳ ಎರಡನೇ ವಾರದಂದು ಕಾಶ್ಮೀರದ ಬಾಲೋಹ್‌ನಲ್ಲಿದ್ದ. ಹಠಾತ್ತನೆ ಬಾಲೋಹ್‌ನ ರಾಜ ಒಂದು ಕಡೆಯಿಂದ ಮತ್ತು ಕಾಶ್ಮೀರದ ರಾಜ ಮತ್ತೊಂದು ಕಡೆಯಿಂದ ಸಿಖ್ ಸೈನ್ಯವನ್ನು ಸುತ್ತುವರೆದರು. ಸಿಖ್ ಸೈನಿಕರು ಹತ್ತಿರದ ಕಾಡುಗಳಲ್ಲಿ ಅಡಗಿಕೊಳ್ಳಲು ಪ್ರಯತ್ನಿಸಿದರು. ಆದರೆ ಅಪಾರ ಸಂಖ್ಯೆಯ ಮುಘಲ್ ಸೈನಿಕರಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸಿಖ್ ಸೈನಿಕರಿಗೆ ಸಾಧ್ಯವಾಗಲಿಲ್ಲ. ಒಟ್ಟಾರೆ ಒಂದು ಸಾವಿರ ಸಿಕ್ಖರು ಮತ್ತ ಅಷ್ಟೇ ಸಂಖ್ಯೆಯ ಮುಘಲ್ ಸೈನಿಕರು ಈ ಯುದ್ಧದಲ್ಲಿ ಸತ್ತರು. ಸತ್ತವರಲ್ಲಿ ಭಾಯ್ ಫತೇ ಸಿಂಗ್ ಕೂಡ ಒಬ್ಬ. ಅವನ ರುಂಡವನ್ನು ಕತ್ತರಿಸಿ ಕಾಶ್ಮೀರದ ಉಪ ರಾಜ್ಯಪಾಲ ಮಹಮದ್ ಆಲಿ ಖಾನ್‌ಗೆ ಕಳುಹಿಸಿಕೊಡಲಾಯಿತು. ಆಲಿ ಖಾನ್ ಈ ಸುದ್ದಿಯನ್ನು ಸಾಮ್ರಾಟ ಫರೂಕ್ ಸಿಯಾರ್‌ಗೆ ರವಾನಿಸಿದ. ಮುಘಲ್ ಸೈನಿಕರ ಸಾಹಸವನ್ನು ಕೊಂಡಾಡಿದ ಸಾಮ್ರಾಟನು ಮಹಮದ್ ಆಲಿ ಖಾನ್‌ನ ಮಾನ್ಸಾಬನ್ನು ಹೆಚ್ಚಿಸಿದ.[28]

---

**ಅಡಿ ಟಿಪ್ಪಣಿಗಳು**

1. ಇರ್ವಿನ್, Later Mughals, Vol. 1. P. 206
2. ಇರ್ವಿನ್, Later Mughals, Vol. 1. P. 206
3. ಇರ್ವಿನ್, Later Mughals, Vol. 1. P. 206
4. ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲದ ನಮೂದು 20.10.1712
5. ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲದ ನಮೂದು 26 ಮತ್ತು 27.01.1773
6. ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲದ ನಮೂದು 26 ಮತ್ತು 27.01.1773
7. 1719ರಲ್ಲಿ ಫುರಷಿಯಾರ್ ಕೊಲೆಯಾದ ನಂತರ ಕುನ್ವರಳ ತಂದೆ ರಾಜ ಅಜಿತ್‌ಸಿಂಗ್ ಆಕೆಯನ್ನು ವಿಧವೆಯರ ಅರಮನೆಯಿಂದ 'ಬಿಡುಗಡೆ' ಮಾಡಿಸಿ (16.07.1719) ಆಕೆಯನ್ನು ಜೈಪುರಕ್ಕೆ ಕರೆದುಕೊಂಡು ಹೋದ. ಆತ ಅವಳ ಎಲ್ಲ ಸಂಪತ್ತು ಮತ್ತು ಅಮೂಲ್ಯ ವಸ್ತುಗಳನ್ನು ಜೊತೆಯಲ್ಲಿ ಓಯ್ದು ಮುಸ್ಲಿಂ ಧಾರ್ಮಿಕ ನಾಯಕರು ಮತ್ತು ಕುಲೀನರು ಇದನ್ನು ವಿರೋಧಿಸಿ, ರಾಜ್ ಇಂದರ್ ಕುನ್ವರ್ ಹೋಗುವುದನ್ನು ತಪ್ಪಿಸಲು ಯತ್ನಿಸಿದರು. ಆದರೆ ಅಬ್ದುಲ್ಲಾ ಖಾನ್ ರಾಜ ಸುರಕ್ಷಿತವಾಗಿ ದೆಹಲಿಯಿಂದ ಹೊರಹೋಗಲು ನೆರವು ನೀಡಿದ.(Irvine, Late Mughals, P. 401)

8. ಇರ್ವಿನ್, Later Mughals Vol. 1, P. 305
9. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 10.03.1713
10. ಮಹಮದ್ ಕಾಸಿಂ ಔರಂಗಬಾದಿ. ಅಹ್ವಾಲ್-ಉಲ್-ಖ್ವಾಕೀನ್ ಪು. 64–67
11. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು ನಮೂದು 21.03.1713
12. ಔರಂಗಾಬಾದಿ, ಅಹ್ವಾಲ್-ಉಲ್-ಖ್ವಾಕೀನ್ ಪು. 64–67
13. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 16.03.1713
14. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 02.04.1713
15. ಜೈಪುರರಾಜನಿಗೆ ಜೇತ್‌ಮಲ್ ಬರೆದ ಪತ್ರ ಸಂ. 62 (Rajasthani Documnets of Banda Singh Bahadur)
16. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 27 ಮತ್ತು 28.06.1713
17. ಇರ್ವಿನ್, Later Mughals Vol. 1, P. 305
18. ಇರ್ವಿನ್, Later Mughals Vol. 1, P. 309
19. ಔರಂಗಾಬಾದಿ, ಅಹ್ವಾಲ್-ಉಲ್-ಖ್ವಾಕೀನ್, ಪುಟ 64–67
20. ಔರಂಗಾಬಾದಿ, ಅಹ್ವಾಲ್-ಉಲ್-ಖ್ವಾಕೀನ್, ಪುಟ 68
21. ಔರಂಗಾಬಾದಿ, ಅಹ್ವಾಲ್-ಉಲ್-ಖ್ವಾಕೀನ್, ಪುಟ 64–67
22. ಇರ್ವಿನ್, Later Mughals Vol. 1, P. 308-09
23. ಔರಂಗಾಬಾದಿ, ಅಹ್ವಾಲ್-ಉಲ್-ಖ್ವಾಕೀನ್,ಪುಟ 64–67
24. ಜೈಪುರದ ರಾಜನಿಗೆ ಜೇತ್‌ಮಲ್ ಬರೆದ ಪತ್ರ ಸಂ. 63 (Rajasthani Documents on Banda Singh Bahadur, Ed. by Dr. Balwanth Singh Dhillon)
25. ಔರಂಗಾಬಾದಿ, ಅಹ್ವಾಲ್-ಉಲ್-ಖ್ವಾಕೀನ್,ಪುಟ 64–67
26. ಸಧೌರದಲ್ಲಿ ಒಟ್ಟು 600 ಸಿಖ್ ಸೈನಿಕರು ಸತ್ತಿರುವ ಸಾಧ್ಯತೆಯಿದೆ. ಮಹಮದ್ ಖಾಸಿಂ ಔರಂಗಾಬಾದಿಯು ಒಂದೇ ದಿನದ ಯುದ್ಧದಲ್ಲಿ 681 ಸೈನಿಕರು ಸತ್ತರೆಂದು ಉಲ್ಲೇಖಿಸಿರುವುದು. ಪ್ರಾಯಶಃ ಇಡೀ ಯುದ್ಧದಲ್ಲಿ ಸತ್ತವರ ಒಟ್ಟು ಸಂಖ್ಯೆಯಿರಬಹುದು.
27. ಔರಂಗಾಬಾದಿ, ಅಹ್ವಾಲ್-ಉಲ್-ಖ್ವಾಕೀನ್,ಪುಟ 68–69
28. ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲದ ನಮೂದು 16.08.1713

## ಅಧ್ಯಾಯ 12

# ಲೋಹಗಡದ ಮೇಲೆ ಮುಘಲರ ಮೂರನೇ ಆಕ್ರಮಣ

ಸಧೌರ ಕೋಟೆಯನ್ನು ವಶಪಡಿಸಿಕೊಂಡ ನಂತರ ಮುಘಲರು ಲೋಹಗಡ ಕೋಟೆಯ ಮೇಲೆ ಆಕ್ರಮಣ ಮಾಡುವುದು ಖಂಡಿತ ಎಂದು ಭಾವಿಸಿದ ಬಂದಾಸಿಂಗ್ ಬಹದ್ದೂರ್ ಶಸ್ತ್ರಾಸ್ತ್ರಗಳನ್ನು ಹೊರತುಪಡಿಸಿ ಎಲ್ಲ ಸರಕನ್ನು ಲೋಹಗಡದಿಂದ 12 ಕೋಸು ಅಂದರೆ 43 ಕಿ.ಮೀ ದೂರದ ಪಾವೂಂತ್ ಸಾಹಿಬ್‌ಗೆ ರವಾನಿಸಿದ.(1)

ಸಧೌರವನ್ನು ವಶಪಡಿಸಿಕೊಂಡ ನಂತರ ಲೋಹಗಡ ಕೋಟೆಯ ಮೇಲೆ ಆಕ್ರಮಣ ಮಾಡಲು ಅಬ್ದುಸ್ ಸಮುದ್ ಖಾನ್ ಬಯಸಿದ. ಆದರೆ ಈಗ ಯುದ್ಧವನ್ನು ಗೆಲ್ಲಲಾಗದೆಂದು ಅವನ ಅನುಯಾಯಿಗಳು ತಡೆದರು. ತನ್ನ ನಿರ್ಧಾರವನ್ನು ಆತ ಮುಂದೂಡಿದ. ಈ ವಿಳಂಬದಿಂದ ಬಂದಾ ಸಿಂಗ್‌ಗೆ ಲೋಹಗಡ ಕೋಟೆಯನ್ನು ಬಲಪಡಿಸಲು ಅವಕಾಶ ಸಿಕ್ಕಂತಾಯಿತು. ಆತ ಗೋಡೆಗಳ್ನು ಭದ್ರಪಡಿಸಿದ. ಕೊತ್ತಲಗಳನ್ನು ನಿರ್ಮಿಸಿದ. ಕಂದಕಗಳನ್ನು ತೋಡಿಸಿದ.

1713 ರ ಆಗಸ್ಟ್ 21 ರಂದು ಮುಘಲ್ ಸೇನೆಯ ಒಂದು ತುಕಡಿಯು ಲೋಹಗಡದ ಕಡೆ ತೆರಳಿತು. ಈ ತುಕಡಿಯು ಸಿಖ್ ಸೈನಿಕರ ದಾಳಿಗೆ ತುತ್ತಾಯಿತು. ಮುಘಲರ ತುಕಡಿಯ ಕನಿಷ್ಠ 40 ಮಂದಿ ಹತರಾದರು. 20 ಮಂದಿ ಗಾಯಗೊಂಡರು. 35 ಮಂದಿ ಮುಘಲ್ ಸೈನಿಕರು ಸಿಕ್ಖರಿಗೆ ಸೆರೆಯಾದರು. ಇದಲ್ಲದೆ ಸಿಕ್ಖರು 100 ಕುದುರೆಗಳನ್ನು, 30 ಒಂಟೆಗಳನ್ನು, 40 ಎಮ್ಮೆಗಳನ್ನು ಮತ್ತು 200 ಇತರೆ ಪ್ರಾಣಿಗಳನ್ನು ವಶಪಡಿಸಿಕೊಂಡರು. ಅದೇ ದಿನ ಮುಘಲ್ ಸೇನೆಯ ದಂಡನಾಯಕರಲ್ಲೊಬ್ಬನಾದ ಮೊಖಂ ಖಾನ್ ಸತ್ತಿದ್ದು, ಮುಘಲ್ ಸೈನಿಕರಲ್ಲಿ ಮತ್ತಷ್ಟು ನಿರುತ್ಸಾಹ ಮೂಡಿಸಿತು. ಬಂದಾ ಸಿಂಗ್‌ನ ಅನುಯಾಯಿಗಳು ಹೆಚ್ಚು ಸಾಹಸಿಗಳು, ಧೈರ್ಯಶಾಲಿಗಳೂ ಆದರು.(2)

1713 ರ ಆಗಸ್ಟ್ 29 ರಂದು ಮುಘಲ್ ಸೇನೆಯ 200 ಸೈನಿಕರು ಸಧೌರ ಮತ್ತು ಲೋಹಗಡ ಕೋಟೆಯ ನಡುವೆ ಓಡಾಡುತ್ತಿದ್ದರು. ಅವರು ಒಂದು ಸಣ್ಣ ಸಿಖ್ ತುಕಡಿಯನ್ನು ಕಂಡ ಕೂಡಲೇ ಓಡಿ ಹೋದರು. ಆದರೆ ಅವರ ನಾಯಕ ಜಮಾಂದರ್ ಬಲೋಚ್ ಖಾನ್‌ನನ್ನು ಸಿಕ್ಖರು ಕೊಂದು ಹಾಕಿದರು. ಇದರ ಜೊತೆಗೆ ನಾಲ್ವರು ಮುಘಲರ ಸೈನಿಕರೂ ಹತರಾದರು. ಸಿಕ್ಖರು ಅವರ ತಲೆಗಳನ್ನು ಕತ್ತರಿಸಿ ಬೆಟ್ಟಗಳ ಕಡೆ ಕೊಂಡೊಯ್ದರು. ಈ ಹಾನಿಯು ಮುಘಲ್ ಸೇನೆಯನ್ನು ಘಾಸಿಗೊಳಿಸಿತು. ಅವರು ಲೋಹಗಡದ ಮೇಲೆ ತಕ್ಷಣವೇ ಯುದ್ಧ ಸಾರುವುದನ್ನು ಮುಂದೂಡಿದರು.(3)

ಲೋಹಗಡ ಕೋಟೆಯಲ್ಲಿರುವ ಬಂದಾಸಿಂಗ್ ಅದನ್ನು ಮತ್ತಷ್ಟು ಬಲಪಡಿಸುತ್ತಿದ್ದಾನೆಂದು ಮತ್ತು ಕೋಟೆಯ ಹೊರಗೆ ಕಂದಕವನ್ನು ನಿರ್ಮಿಸುತ್ತ ಮುಘಲರ ವಿರುದ್ಧ ಹೋರಾಟಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾನೆಂದೂ ಸಾಮ್ರಾಟನಿಗೆ 1713 ರ ಅಕ್ಟೋಬರ್ 12 ರಂದು ಸುದ್ದಿ ತಂದರು.[4] ಲೋಹಗಡ ಕೋಟೆಯ ಮೇಲೆ ಅವಸರವಾಗಿ ಆಕ್ರಮಣ ಮಾಡದಿರಲು ಇದು ಸೂಚನೆಯಾಗಿತ್ತು. ಇಲ್ಲದಿದ್ದರೆ ಮುಘಲ್ ಸೇನೆ ಅಪಾರ ನಷ್ಟ ಅನುಭವಿಸುತ್ತಿದ್ದದ್ದು ಖಂಡಿತ.

ಇರ್ವಿನ್ ಪ್ರಕಾರ ಮೊದಲ ದಿಬ್ಬದಿಂದ ಲೋಹಗಡ ಕೋಟೆಯವರೆಗೆ, ಸಿಕ್ಖರು ಐವತ್ತೆರಡು ರಕ್ಷಣಾ ಚೌಕಿ ನಿರ್ಮಿಸಿದರು. ಅವುಗಳ ಓರಣ ಹೇಗಿತ್ತೆಂದರೆ ಒಂದು ಚೌಕಿಯನ್ನು ಮತ್ತೊಂದು ಚೌಕಿ ರಕ್ಷಿಸುವ ವಿನ್ಯಾಸದಲ್ಲಿತ್ತು. ಹಾಗಾಗಿ ಯಾವುದೇ ಆಕ್ರಮಣಕಾರ ಮುನ್ನಡೆಯಬೇಕಾದರೂ ಎಲ್ಲ ಕಡೆಯಿಂದ ತೀವ್ರ ಪ್ರತಿರೋಧ ಎದುರಿಸಬೇಕಿತ್ತು. ಕೋಟೆಯು ಹನ್ನೆರಡಕ್ಕೂ ಅಧಿಕ ಸಂಖ್ಯೆಯ ಬೆಟ್ಟಗಳಲ್ಲಿ ಹರಡಿಕೊಂಡಿತ್ತು. ಅದರ ಸುತ್ತಲೂ ಮರಗಳು, ಬಳ್ಳಿಗಳು, ಗುಡ್ಡಗಳು, ಕಂದಕಗಳು, ಕಣಿವೆಗಳು ಎಲ್ಲೆಡೆ ತುಂಬಿದ್ದವು. ರೆಕ್ಕೆಯಿರುವ ದೇವತೆಗಳಿಗೂ ಅದನ್ನು ತಲುಪಲು ಸಾಧ್ಯವಾಗದಷ್ಟು ದುರ್ಗಮವಾಗಿತ್ತು. ಸೈನಿಕರ ಪಾಲಿಗೆ ಅದನ್ನು ತಲುಪುವುದು ಕಡುಸಾಹಸವಾಗಿತ್ತು.[5]

ಕೆಲವು ಕಾಲ ಕಾಯ್ದ ನಂತರ ಅಬ್ದುಸ್ ಸಮದ್ ಖಾನ್ ಲೋಹಗಡದ ಕಡೆಗೆ ತನ್ನ ಪ್ರಯಾಣ ಆರಂಭಿಸಿದ. ಆ ದೂರವನ್ನು 14 ದಿನಗಳಲ್ಲಿ ಕ್ರಮಿಸಿದ. ಲೋಹಗಡದ ಕೋಟೆಯ ಹತ್ತಿರಕ್ಕೆ ಬಂದಾಗ ಅಲ್ಲಿ ಆತ ತನ್ನ ಶಿಬಿರವನ್ನು ಸ್ಥಾಪಿಸಿದ. ಆದರೆ ತಕ್ಷಣವೇ ದಾಳಿಯನ್ನು ಆರಂಭಿಸಲಿಲ್ಲ. ಕೆಲಕಾಲದ ನಂತರ ಜೈನುದ್ದೀನ್ ಅಹ್ಮದ್ ಖಾನ್ (ಸರ್ಹಿಂದ್ ಫೌಜುದಾರ) ಮತ್ತು ಜಕಾರಿಯ ಖಾನ್ ಅಲ್ಲಿಗೆ ಬಂದು ಸೇರಿಕೊಂಡರು.

1713 ರ ನವೆಂಬರ್ 13 ರಂದು ಮೂರು ಸೈನ್ಯವು ಬಾರಿ ಫಿರಂಗಿದಾಳಿಯನ್ನು ನಡೆಸಿತು. ಮುಂದಿನ ನಾಲ್ಕು ದಿನ ಬಂದೂಕು ಮತ್ತು ಫಿರಂಗಿಗಳು ಲೋಹಗಡ ಕೋಟೆಯ ಮೇಲೆ ಗುಂಡಿನ ಮಳೆ ಕರೆದವು. ದಾಳಿ ಅದೆಷ್ಟು ತೀವ್ರವಾಗಿತ್ತೆಂದರೆ, ಮಹಮದ್ ಕಾಸಿಂ ಔರಂಗಾಬಾದಿಯ ಮಾತುಗಳಲ್ಲಿ ಹೇಳುವುದಾದರೆ "ದೇವರ ರೆಕ್ಕೆಗಳೂ ಉರಿದು ಭಸ್ಮವಾಗುತ್ತಿದ್ದವು".[6] ಬಂದಾ ಸಿಂಗ್ ಶತ್ರು ಸೈನಿಕರ ಚಲನವಲನಗಳನ್ನು ಬೆಟ್ಟದ ತುದಿಯಲ್ಲಿ ಕೂತು ವೀಕ್ಷಿಸುತ್ತಿದ್ದ. ಆಗ ಅವನ ಕಣ್ಣಿಗೆ ಇಡೀ ಕೋಟೆಯನ್ನು ಮುಘಲರ ಬೃಹತ್ ಸೇನೆ ಮುತ್ತಿಗೆ ಹಾಕಿರುವುದು ಗೋಚರಿಸಿತು.

ಕಂದಕದ ಮುಂದಿದ್ದವರು ಮತ್ತು ಕೋಟೆಯ ಹತ್ತಿರ ಮೊದಲ ಸಾಲಲ್ಲಿದ್ದವರು ಧೈರ್ಯದಿಂದ ಹೋರಾಡಿದರು. ಆದರೆ ಗುಂಡಿನ ಕಾಳಗ ಅವರನ್ನು ಹತ್ತಿಕ್ಕಿತ್ತು. ಹಾಗಾಗಿ ಅನೇಕರು ಸತ್ತರು. ಹಲವಾರು ಮಂದಿ ಸೆರೆಯಾದರು. ಮುಘಲರ ಆಕ್ರಮಣ ಹಲವಾರು ದಿನಗಳ ಕಾಲ ಮುಂದುವರೆಯಿತು. ಸಿಕ್ಖರ ವತಿಯಿಂದ ಯಾವುದೇ ಹೋರಾಟ ಕಂಡುಬರಲಿಲ್ಲ. ಮೇಲಿನ ಕಂದಕದಲ್ಲಿ ಮತ್ತು ಬೆಟ್ಟಗಳಲ್ಲಿ ಅಡಗಿರುವ ಸಿಕ್ಖರು ಪರಾರಿಯಾಗಿರಬಹುದೆಂದು ಮುಘಲ್ ಸೇನೆ ಭಾವಿಸಿತು. ಬಂದಾ ಸಿಂಗ್ ಮತ್ತು ಸಿಖ್ ದಂಡನಾಯಕರು ಯಾವುದೇ ಪ್ರತಿರೋಧ ಒಡ್ಡದೆ ತಪ್ಪಿಸಿಕೊಂಡು ಹೋಗಿದ್ದರು. ಕೇವಲ ಒಂದು ಸಾವಿರ ಸಿಕ್ಖರು ಮಾತ್ರ ಯುದ್ಧದಲ್ಲಿ ಭಾಗವಹಿಸಿದಂತೆ ಕಾಣುತ್ತದೆ. ಬಂದಾ ಸಿಂಗ್‌ನನ್ನು ಬಂಧಿಸುವ ಅಥವಾ ಕೊಲ್ಲುವ ಕಾರ್ಯದಲ್ಲಿ ಅಬ್ದುಸ್ ಸಮದ್ ಖಾನ್ ಮತ್ತೆ ವಿಫಲನಾಗಿದ್ದ. ಮುಘಲರ ಉದ್ದೇಶ ಕೋಟೆಯನ್ನು ವಶಪಡಿಸಿಕೊಳ್ಳುವುದಾಗಿರಲಿಲ್ಲ. ಬಂದಾ ಸಿಂಗ್ ಬಹದ್ದೂರ್‌ನನ್ನು ಬಂಧಿಸುವುದೇ ಅವರ ಗುರಿಯಾಗಿತ್ತು. ಆ ದೃಷ್ಟಿಯಿಂದ ಮುಘಲರು ಈ ಯುದ್ಧವನ್ನು ಸೋತಿದ್ದರು. ಬೆಟ್ಟದಿಂದ

ತಪ್ಪಿಸಿಕೊಂಡ ಬಂದಾ ಸಿಂಗ್ ನಿಜಕ್ಕೂ ಮುಘಲರನ್ನು ಸೋಲಿಸಿದ್ದನು.

**ಬಂದಾ ಸಿಂಗ್ ಲೋಹಗಡವನ್ನು 1713 ರಲ್ಲಿ ಏಕೆ ತೊರೆದ?**

ಮುಘಲರು ಆಕ್ರಮಣ ನಡೆಸಿದಾಗ, ಆಹಾರ ಧಾನ್ಯದ ಕೊರತೆ ಅಥವಾ ಶಸ್ತ್ರಾಸ್ತ್ರಗಳ ಅಭಾವ ಇರಲಿಲ್ಲ. ಆದರೂ ಯಾವ ಪ್ರತಿರೋಧವನ್ನು ನೀಡದೆ ಬಂದಾ ಸಿಂಗ್ ಲೋಹಗಡ ಕೋಟೆಯನ್ನು ಯಾಕೆ ತೊರೆದ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಬಂದಾ ಸಿಂಗ್‌ಗೆ ದೂರಗಾಮಿ ತಂತ್ರವನ್ನು ಹೊಂದಿದ್ದ ಎಂಬುದೇ ಇದಕ್ಕೆ ಉತ್ತರ. ಲೋಹಗಡ ಯುದ್ಧವನ್ನು ಗೆದ್ದು ಒಂದು ಸಣ್ಣ ಲಾಭ ಮಾಡಿಕೊಳ್ಳುವುದು ಅವನ ಉದ್ದೇಶ ಆಗಿರಲಿಲ್ಲ. ಮುಘಲ್ ಸೈನಿಕರನ್ನು ನಿರಂತರವಾಗಿ ಯುದ್ಧದಲ್ಲಿ ತೊಡಗಿಸಿ ಅವರನ್ನು ನಿಶ್ಯಕ್ತಿಗೊಳಿಸುವುದು; ಸೈನಿಕರಿಗೆ ವೇತನ ನೀಡುತ್ತಾ, ಶಸ್ತ್ರಾಸ್ತ್ರಗಳ ಮೇಲೆ ವೆಚ್ಚ ಮಾಡಿಸುತ್ತಾ ಮುಘಲರ ಕೋಶವನ್ನು ಬರಿದುಮಾಡವುದು; ಸಾಮ್ರಾಟನ ಮನಸ್ಸಿನಲ್ಲಿ ನಿರಂತರ ಭೀತಿ ಹುಟ್ಟುಹಾಕುವುದು; ಮುಘಲರ ಆಳ್ವಿಕೆಯಲ್ಲಿ ಜನಜೀವನದಲ್ಲಿ ಅರಾಜಕತೆ ಸೃಷ್ಟಿಮಾಡುವುದು ಅವನ ಗುರಿಯಾಗಿತ್ತು.

ಆತ 1710 ರ ನವೆಂಬರ್ 30 ರಂದು ಲೋಹಗಡ ಬಿಡುವುದಕ್ಕೂ ಇದೇ ಕಾರಣ. ಆತ ಅನೇಕ ತಿಂಗಳ ಕಾಲ ಯುದ್ಧ ಮಾಡಬಹುದಿತ್ತು. ಆದರೆ ಆತ ಲೋಹಗಡವನ್ನು ತೊರೆದ ಅನೇಕ ದಿನಗಳ ಕಾಲ ಮುಘಲರ ಸೈನಿಕರು ಮತ್ತು ದಂಡನಾಯಕರು ಯುದ್ಧವನ್ನು ಮೈಮೇಲೆ ಎಳೆದುಕೊಂಡರು. ಮುಘಲರ ಪ್ರಭುತ್ವ ಈ ಯುದ್ಧಗಳಿಗೆ ಸಾಕಷ್ಟು ಸಂಪತ್ತನ್ನು ವ್ಯಯಿಸಿತು. ಸಾಮ್ರಾಟ ಬೇರೆ ಕಾರ್ಯಗಳತ್ತ ಗಮನಹರಿಸಲಿಲ್ಲ. ಬಂದಾ ಸಿಂಗ್ ಸೃಷ್ಟಿಸಿದ ಭೀತಿ ಮತ್ತು ಅರಾಜಕತೆಯಿಂದ ಸಾಮ್ರಾಟ ಹುಚ್ಚನಾದ. ಇದು ಮುಘಲ್ ಸಾಮ್ರಾಜ್ಯದ ಪತನಕ್ಕೆ ನಾಂದಿ ಹಾಡಿತು. ಎರಡನೆ ಬಾರಿಯು ಸಹ 1712 ರ ಸೆಪ್ಟೆಂಬರ್‌ನಲ್ಲಿ ಬಂದಾ ಸಿಂಗ್ ಲೋಹಗಡವನ್ನು ತೊರೆದ. ಆ ಸಮಯದಲ್ಲಿ ಸಹ ಮಹಮ್ಮದ್ ಅಮೀನ್ ಖಾನ್, ನೂರಾರು ದಂಡನಾಯಕ, ಸಾವಿರಾರು ಸೈನಿಕರು, ಸ್ವತಃ ರಾಜ ಮತ್ತು ಜೈಪುರ ಹಾಗೂ ಜೋಧ್‌ಪುರದ ರಾಜರು ಈ ಯುದ್ಧಕ್ಕೆ ದಂಡೆತ್ತಿ ಬಂದರು. ಈ ಬಾರಿಯೂ ರಾಜ ಸಾಕಷ್ಟು ಸಂಪತ್ತನ್ನು ವೆಚ್ಚ ಮಾಡಬೇಕಾಯಿತು. ಪೂರ್ವ ರಾಜ್ಯ ಮತ್ತು ಗುಜರಾತಿನ ಕಂದಾಯ ಹಕ್ಕುಗಳನ್ನು ಜೈಪುರ ಮತ್ತು ಜೋಧಪುರ ರಾಜರಿಗೆ ನೀಡಬೇಕಾಯಿತು. ಹೀಗಾಗಿ ರಾಜ ಪ್ರಭುತ್ವಕ್ಕೆ ಬರಬೇಕಾದ ಆದಾಯದಲ್ಲಿ ಖೋತಾ ಉಂಟಾಯಿರು. ಮೂರನೇ ಬಾರಿಯೂ ಮುಘಲ್ ಸಾಮ್ರಾಟನ ಬೊಕ್ಕಸಕ್ಕೆ ಅಪಾರ ನಷ್ಟವಾಯಿತು. ಬಂದಾ ಸಿಂಗ್ ಬಹದ್ದೂರ್ 1715 ರ ಮಾರ್ಚ್‌ನಲ್ಲಿ ಗುರುದಾಸ್ ನಂಗಲ್‌ನಲ್ಲಿ ಉಳಿಯುವ ತಪ್ಪು ಮಾಡದಿದ್ದರೆ, ಮುಘಲರ ಆಳ್ವಿಕೆಯನ್ನು ಕನಿಷ್ಟ ಪಂಜಾಬ್‌ನಲ್ಲಿ 1720 ರಲ್ಲಿಯೇ ಕೊನೆಗಾಣಿಸಬಹುದಿತ್ತು. ಉದಯಪುರ, ಜೈಪುರ ಮತ್ತು ಜೋಧ್‌ಪುರದ ರಜಪೂತ ಅರಸರು ಮುಘಲರ ವಿರುದ್ಧ ಬಂಡಾಯ ಘೋಷಿಸಿದ್ದರೆ, ದಕ್ಷಿಣ ಏಷ್ಯಾದಲ್ಲಿ ಮುಘಲರ ಆಳ್ವಿಕೆ ಪೂರ್ಣ ಸಮಾಪ್ತಿಯಾಗುತ್ತಿತ್ತು. ಬಂದಾ ಸಿಂಗ್‌ನ ಹೋರಾಟ ಅವನ ಬಂಧನದ ನಂತರ ಮತ್ತು ಕೊಲೆಯ ನಂತರ ನಿಂತುಹೋಗಲಿಲ್ಲ. ಬಂದಾ ಸಿಂಗ್ ಯುಗದ ನಂತರದಲ್ಲಿ ಮುಂದುವರೆದ ಸಿಖ್ ಸಮುದಾಯದ ಹೋರಾಟದ ಫಲವಾಗಿ **'ವಿಶಾಲ ಪಂಜಾಬ್'** ಪ್ರಾಂತ್ಯವನ್ನು ಮುಘಲರ ಆಳ್ವಿಕೆಯಿಂದ ಬಿಡುಗಡೆಯಾಯಿತು. ಇದು ಬಂದಾ ಸಿಂಗ್‌ನ ಹೋರಾಟದಿಂದ ಸ್ಫೂರ್ತಿ ಪಡೆದ ಸಿಖ್ ಹೋರಾಟದ ಯಶೋಗಾಥೆಯಾಗಿತ್ತು.

ಲೋಹಗಡ ಕೋಟೆಯ ತಳಭಾಗವನ್ನು ವಶಪಡಿಸಿಕೊಂಡ ಮುಘಲ್ ಸೈನಿಕರು ಕೋಟೆಯ

ಕೆಲವು ಮೇಲಿನ ಹಂತಗಳಿಗೆ ಹೋದರು. ಅಲ್ಲಿ ಅವರು ರೇಷ್ಮೆ ವಸ್ತ್ರವೂ ಸೇರಿದಂತೆ, ಬೆಲೆಬಾಳುವ ಇತರೆ ಬಟ್ಟೆಗಳು, ಚಿನ್ನಾಭರಣಗಳು, ಬೆಳ್ಳಿಯ ಪಾತ್ರೆಗಳು, ಏಲಕ್ಕಿ, ಲವಂಗದಂತಹ ಸಾಂಬಾರ ಜಿನಿಸು, ಎಮ್ಮೆ ಎತ್ತು ಇತ್ಯಾದಿಗಳನ್ನು ಕಂಡರು. ಅನೇಕ ಸೈನಿಕರು ಕಂಡದ್ದೆಲ್ಲವನ್ನೂ ಲೂಟಿ ಮಾಡಿದರು.(7)

ಇದು ಲೋಹಗಡದ ಕೊನೆಯ ಯುದ್ಧ. ಲೋಹಗಡ ಯುದ್ಧ 1710 ರ ನವೆಂಬರ್‌ನಿಂದ 1713 ರ ನವೆಂಬರ್‌ವರೆಗೆ ಮೂರು ವರ್ಷಕಾಲ ಮುಂದುವರೆಯಿತು. ಈ ಅವಧಿಯಲ್ಲಿ ಮೂರು ದೊಡ್ಡ ಯುದ್ಧಗಳಾದವು. 1710 ರ ನವೆಂಬರ್‌ನಲ್ಲಿ ನಡೆದ ಮೊದಲ ಯುದ್ಧದಲ್ಲಿ, ಮುಘಲ್ ಸಾಮ್ರಾಟನೇ ಮುನ್ನಡೆಸಿದ ಒಂದು ಲಕ್ಷಕ್ಕೂ ಅಧಿಕ ಸೈನಿಕರಿದ್ದ ಬೃಹತ್ ಸೇನೆ ಭಾಗವಹಿಸಿತ್ತು. ಜೊತೆಗೆ ಸಾಮ್ರಾಟನ ನಾಲ್ವರು ಮಕ್ಕಳು, ನೂರಾರು ಮುಘಲ್ ಜನರಲ್‌ಗಳು, ಕೆಲವು ಹಿಂದೂ ರಾಜರು ಪಾಲ್ಗೊಂಡಿದ್ದರು. 1712 ರ ಸೆಪ್ಟೆಂಬರ್ ತಿಂಗಳಲ್ಲಿ ಮುಘಲ್ ಸೇನೆಯ ದಂಡನಾಯಕ ಮಹಮ್ಮದ್ ಅಮೀನ್ ಖಾನ್ ನೇತೃತ್ವದಲ್ಲಿ ಎರಡನೆಯ ಯುದ್ದ ನಡೆಯಿತು. ಮೂರನೆಯ ಯುದ್ಧ 1713 ರ ಅಕ್ಟೋಬರ್–ನವೆಂಬರ್ ತಿಂಗಳಿನಲ್ಲಿ ಅಬ್ದುಸ್ ಸಮದ್ ಖಾನ್, ಜೈನುದ್ದೀನ್ ಖಾನ್ ಮತ್ತು ಇನಾಂ ಖಾನ್ ನೇತೃತ್ವದಲ್ಲಿ ನಡೆಯಿತು. ಮೂರನೇ ಯುದ್ಧದ ತರುವಾಯ ಬಂದಾ ಸಿಂಗ್ ಜಮ್ಮುವಿನ ಕಡೆ ಹೋದ. ಆದರೆ ಇನ್ನೂ ಸಾವಿರಾರು ಸಿಖ್ ಸೈನಿಕರು ಸಧೌರ–ಲೋಹಗಡ ವಲಯದಲ್ಲಿಯೇ ಇದ್ದರು. ಅವರು ಮುಘಲ್ ಚೌಕಿಗಳ ಮೇಲೆ ದಾಳಿ ಮಾಡುವುದನ್ನು, ಮುಘಲ್ ಶ್ರೀಮಂತರ ಮನೆಗಳನ್ನು ಲೂಟಿ ಮಾಡುವುದನ್ನು ಮುಂದುವರೆಸಿದರು. ಇಂಥ ದಾಳಿಗಳ ಬಗ್ಗೆ ಬಂದಾ ಸಿಂಗ್ ದಸ್ತಗಿರಿಯಾಗುವವರೆಗೆ ಸಾಮ್ರಾಟನಿಗೆ ವರದಿಗಳು ಹೋಗುತ್ತಿದ್ದವು. ಬಂದಾ ಸಿಂಗ್‌ಗೆ ಮರಣದಂಡನೆ ವಿಧಿಸಿದ ಮೇಲೆ ಮುಘಲ್ ಸೇನೆ ಲೋಹಗಡವನ್ನು ಆಕ್ರಮಿಸಿಕೊಂಡಿತು. ಅನಂತರ ಅದನ್ನು ಕೆಡಹುವ ಕಾರ್ಯವನ್ನು ವಹಿಸಿಕೊಂಡಿತು.

ಒಂದು ವರದಿಯ ಪ್ರಕಾರ 1713 ರ ನವೆಂಬರ್ 29 ರಂದು ಈ ಯುದ್ಧದಲ್ಲಿ 900 ಸಿಕ್ಖರು ಕೊಲ್ಲಲ್ಪಟ್ಟರು.(9) ಸತ್ತ ಸಿಖ್‌ಗಳ ತಲೆಗಳನ್ನು ತರಿದು ಹಾಕಿದ ಅಬ್ದುಸ್ ಸಮದ್ ಖಾನ್ ಅವುಗಳನ್ನು ಚಕ್ರವರ್ತಿಯ ಮುಂದೆ ಹಾಜರುಪಡಿಸುವಂತೆ ಸೂಚಿಸಿ ಜಕಾರಿಯಾ ಖಾನ್ ಮೂಲಕ ಕಳುಹಿಸಿಕೊಟ್ಟನು.

1713 ರ ನವೆಂಬರ್ 29 ರಂದು ದೆಹಲಿಯನ್ನು ತಲುಪಿದ ಜಕಾರಿಯಾ ಖಾನ್ ಸಿಕ್ಖರ ತರಿದ ತಲೆಗಳನ್ನು ಚಕ್ರವರ್ತಿಯ ಮುಂದೆ ಹಾಜರುಪಡಿಸಿದನು. ಅವುಗಳನ್ನು ಪರಿಶೀಲಿಸಿದ ಸಾಮ್ರಾಟ. ಅವುಗಳನ್ನು ಭರ್ಜಿಗೆ ಚುಚ್ಚಿ ದೆಹಲಿಯ ಚಾಂದ್ನಿ ಚೌಕ್‌ನಲ್ಲಿ ಪ್ರದರ್ಶಿಸಲು ಸೂಚಿಸಿದನು. ಜಕಾರಿಯಾ ಖಾನ್‌ಗೆ ಉಚಿತ ಉಡುಗೊರೆಗಳನ್ನು ಕೊಟ್ಟು ಸತ್ಕರಿಸಿದ ಸಾಮ್ರಾಟ ಫರೂಕ್ ಸಿಯಾರ್‌ಮತ್ತೆ ಅಬ್ದುಸ್ ಸಮದ್ ಖಾನ್‌ನ ಮಾನ್ಸಾಬ್‌ಅನ್ನು ಹೆಚ್ಚಿಸಿದನು.(10)

**'ಸರ್ವೋತ್ತಮ ವಿಜಯಿ' ಎಂದು ಅಬ್ದುಸ್ ಸಮದ್ ಖಾನ್‌ಗೆ ಗೌರವ**

ಬಹದ್ದೂರ್ ಶಾ ಮತ್ತು ಜಹಂದರ್ ಶಾ ಅವರಂತೆಯೇ ಫರೂಕ್ ಸಿಯಾರ್ ಸಹ ಸಿಕ್ಖರ ವಿಷಯವನ್ನು ಬಹಳ ಮಹತ್ವದ್ದೆಂದು ಪರಿಗಣಿಸಿ ಸದಾ ವಿಶೇಷ ಗಮನ ನೀಡುತ್ತಿದ್ದ. ಇದರಿಂದಾಗಿ ಸಿಕ್ಖರ ವಿರುದ್ಧ ಯಶಸ್ವಿಯಾಗಿ ಯುದ್ಧ ಮಾಡಿ ಜಯ ಸಾಧಿಸಿದ ಮಹಮದ್ ಅಮೀನ್ ಖಾನ್ ಮತ್ತು ಅಬ್ದುಸ್ ಖಾನ್ ಬಗ್ಗೆ ಸಾಮ್ರಾಟನಿಗೆ ವಿಶೇಷ ಪ್ರೀತಿಯಿತ್ತು. 1714ರ ಫೆಬ್ರುವರಿ ಕೊನೆಯ ವಾರದಲ್ಲಿ ಸಾಮ್ರಾಟನನ್ನು ಭೇಟಿ ಮಾಡಲು ಅಬ್ದುಸ್ ಸಮದ್ ಆಗಮಿಸುತ್ತಿರುವ ಸುದ್ದಿ

ಸಾಮ್ರಾಟನಿಗೆ ತಲುಪಿತು. ಸಾಮ್ರಾಟನು ಆಗ ಒಬ್ಬ ಶ್ರೇಷ್ಠ ಜಯಶಾಲಿ ದಂಡನಾಯಕನನ್ನು ಆಸ್ಥಾನ ಹೇಗೆ ಸ್ವಾಗತಿಸಬೇಕು ಎಂಬ ಬಗ್ಗೆ ಸಾಮ್ರಾಟ ಫರೂಕ್ ಸಿಯಾರ್ ತನ್ನ ಸಲಹೆಗಾರರಲ್ಲಿ ವಿಚಾರಿಸಿದ. ಜಿಂಜಿಯ ಯುದ್ಧದಲ್ಲಿ ಗೆಲುವು ಪಡೆದ ತರುವಾಯ ಅಂದಿನ ಸಾಮ್ರಾಟರ ಆಸ್ಥಾನವು ಅಸದ್ ಖಾನ್ ಜಹಾನ್ ಬಹದ್ದೂರ್‌ನನ್ನು ಬರಮಾಡಿಕೊಂಡ ರೀತಿಯ ಬಗ್ಗೆ ವಿವರಗಳನ್ನು ನೀಡಲು ಸಾಮ್ರಾಟ ಕೋರಿದ.(11)

ಅಬ್ದುಸ್ ಸಮದ್ ಆಗಮಿಸುತ್ತಿರುವ ಮಾಹಿತಿ ತಿಳಿದ ತಕ್ಷಣ ಸಾಮ್ರಾಟನು ತನ್ನ ಆಸ್ಥಾನಿಕರಿಗೆ ಸೂಚನೆ ನೀಡಿ ವೀರನಿಗೆ ತಕ್ಕದಾದ ರೀತಿಯಲ್ಲಿ ಸ್ವಾಗತಿಸಲು ಸೂಚಿಸಿದ. ಸಾಮ್ರಾಟನು ಅಬ್ದುಸ್ ಸಮದ್ ಖಾನ್‌ನನ್ನು ದಿವಾನ್ –ಐ–ಖಾಸ್ ಬಾಗಿಲಿನಲ್ಲಿ ನಿಂತು ಸ್ವಾಗತಿಸುವ ಮತ್ತು ಸಾಮ್ರಾಟನ ಆಸ್ಥಾನಕ್ಕೆ ಕರೆತರುವ ಕಾರ್ಯವನ್ನು ಮೀರ್ ಜುಮ್ಲಾಗೆ ವಹಿಸಿದ. ಅಲ್ಲದೆ ಆತನಿಗೆ ಲಖಿ ಜಂಗಲ್‌ಅನ್ನು ಜಹಂಗೀರಾಗಿ (ಈಗೀನ ಪಂಜಾಬ್‌ನ ಮಾಳ್ವ ಪ್ರದೇಶ) ನೀಡಲು ಮತ್ತು ಅದರ ಫೌಜುದಾರನಾಗಿ ಕಾರ್ಯನಿರ್ವಹಿಸಲು ಸಾಮ್ರಾಟ ಒಪ್ಪಿಸಿದ. ಅವನ ಮಾನ್ಸಾಬ್ ಅನ್ನು ಹನ್ನೊಂದು ಸಾವಿರ ಸೈನಿಕರಿಗೆ ವಿಸ್ತರಿಸಿದ.(13) ಇತರ ಅಧಿಕಾರಿಗಳನ್ನು ಸಹ ಸಾಮ್ರಾಟ ಸತ್ಕರಿಸಿದ.

**ಅಡಿ ಟಿಪ್ಪಣಿಗಳು:**

1. ಜೈಪುರದ ಅರಸನಿಗೆ ದಿನಾಂಕ 27 ಮತ್ತು 29ನೇ ಆಗಸ್ಟ್ 1713ರಲ್ಲಿ ಚೌಬೆ ಜೇತ್ ಮಲ್ ಬರೆದ ಪತ್ರ ಸಂಖ್ಯೆ 64, *ಅಜಾರ್ದಸ್ಟ್* ಸಂ. 161 (*Rajasthani Documents on Banda Sish Bahaddur. Ed by Dr Balwant Singh Dhillon)*
2. ಅದೇ
3. ಅದೇ
4. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ನಮೂದು 12.10.1713
5. ಮಹಮ್ಮದ್ ಕಾಸಿಂ ಔರಂಗಬಾದಿ. *ಅಹ್ವಾಲ್–ಉಲ್–ಖ್ವಾಕೀನ್* ಪು. 68–69
6. ಮಹಮ್ಮದ್ ಕಾಸಿಂ ಔರಂಗಬಾದಿ. *ಅಹ್ವಾಲ್–ಉಲ್–ಖ್ವಾಕೀನ* ಪು. 68–69
7. ಮಹಮ್ಮದ್ ಕಾಸಿಂ ಔರಂಗಬಾದಿ. *ಅಹ್ವಾಲ್–ಉಲ್–ಖ್ವಾಕೀನ* ಪು. 68–69
8. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ನಮೂದು 17.04.1714
9. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ,* ನಮೂದು 29.11.1713
10. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ,* ನಮೂದು 03.12.1713
11. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ,* ನಮೂದು 01.02.1714
12. *ಅಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ,* ನಮೂದು 24.02.1714
13. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ,* ನಮೂದು 03.03.1714

## ಅಧ್ಯಾಯ 13

# ಬಂದಾ ಸಿಂಗ್ ಬಹದ್ದೂರನ ಕೊನೆಯ ಯುದ್ಧ

ಲೋಹಗಡವನ್ನು ತೊರೆದ ನಂತರ ಬಂದಾಸಿಂಗ್ ಬಹದ್ದೂರ್ ಚಂಬವನ್ನು ಸೇರಿಕೊಂಡನೆಂದು ಹೇಳುತ್ತಿದ್ದರು. ಆದರೆ *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ*ದಲ್ಲಿರುವ ನಮೂದಿನ ಪ್ರಕಾರ ಬಂದಾ ಸಿಂಗ್ ಉತ್ತರ ಪ್ರದೇಶದ ಮುರದಾಬಾದ್ ಜಿಲ್ಲೆಯ ಜಲ್ಲಾಪುರವನ್ನು ತಲುಪಿದ. ದೆಹಲಿಯ ಸಾಮ್ರಾಟ ಬಂದಾ ಸಿಂಗ್ ವಿರುದ್ಧ ಕ್ರಮ ವಹಿಸುವಂತೆ ಮುರದಬಾದ್‌ನ ಫೌಜುದಾರನಿಗೆ ಸೂಚನೆ ಕಳುಹಿಸಿದ. ಆದರೆ ಇದು ವಾಸ್ತವದ ಅಂಶದಂತೆ ಕಾಣುತ್ತಿಲ್ಲ. ಮೊದಲನೆಯದಾಗಿ ಮುರದಬಾದ್ ಜಿಲ್ಲೆಯಲ್ಲಿ ಜಲ್ಲಪುರ ಎಂಬ ಹೆಸರಿನ ಯಾವುದೇ ಹಳ್ಳಿ ಇಲ್ಲ. ಆದರೆ ಜಲಾಲ್‌ಪುರ್ ಎಂಬ ಹೆಸರಿನ ಹಳ್ಳಿಯು ಮುರದಬಾದ್ ಜಿಲ್ಲೆಯ ದಿಲಾರಿ ತೆಹಸಿಲ್‌ನಲ್ಲಿ ಇದ್ದು. ಅದು ಲೋಹಗಡದಿಂದ ಸುಮಾರು 300 ಕಿ.ಮೀ ದೂರದಲ್ಲಿದೆ. ಎರಡನೆಯದಾಗಿ *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ದಲ್ಲಿ 1713ರ ಡಿಸೆಂಬರ್ 14 ರಲ್ಲಿ ನಮೂದಾಗಿರುವ ಪ್ರಕಾರ ಸಾಮ್ರಾಟನು ಬಂಡುಕೋರರಿಗೆ ಶಿಕ್ಷೆ ವಿಧಿಸಲು ಮುರದಾಬಾದ್‌ಗೆ ತೆರಳಲು ಹಮೀದ್ *ಖಾನ್*ಗೆ ಆಜ್ಞೆ ಮಾಡುತ್ತಾನೆ. ಅಲ್ಲದೆ ಅದೇ ದಿನ *ಖಾನ್* ಬಹದ್ದೂರ್ ಮುಜಾಫರ್ ಜಂಗ್‌ಗೆ ಲೋಹಗಡಕ್ಕೆ ತೆರಳಿ ಬಂದಾ ಸಿಂಗ್‌ನನ್ನು ಶಿಕ್ಷಿಸಲು ಆದೇಶಿಸುತ್ತಾನೆ. ಮುರದಾಬಾದ್‌ನಲ್ಲಿ ಒಂದು ಸಿಕ್ಖರ ತಂಡ ಸಕ್ರಿಯವಾಗಿತ್ತೆಂಬುದು ಸರಿಯಾಗಿರಬಹುದು. ಆದರೆ ಅಧಿಕಾರಿಗಳು ಅಲ್ಲಿ ಬಂದಾ ಸಿಂಗ್ ಇದ್ದಿರಬಹುದೆಂದು ತಪ್ಪಾಗಿ ಊಹಿಸಿರಬಹುದು.

ಸಿ*ಖ್* ಸೈನಿಕರು ಸರ್ಹಿಂದ್ ಪ್ರದೇಶವನ್ನು ಲೂಟಿ ಮಾಡಿದ ಮಾಹಿತಿ 1714 ರ ಮಾರ್ಚ್ ಒಂದರಂದು ಸಾಮ್ರಾಟನಿಗೆ ತಲುಪಿತು. ಸಿ*ಖ್* ಸೈನಿಕರನ್ನು ಬೆನ್ನತ್ತಲು ಸರ್ಹಿಂದ್‌ನ ಫೌಜುದಾರ ಜೈನುದ್ದೀನ್ *ಖಾನ್* ತನ್ನ ಸೈನಿಕರನ್ನು ಈ ಪ್ರದೇಶಕ್ಕೆ ಕಳುಹಿಸಿದ. ಒಂದು ಯುದ್ಧವಾದ ನಂತರ ಸಿ*ಖ್* ಸೈನಿಕರು ಆ ಪ್ರದೇಶವನ್ನು ಬಿಟ್ಟುಹೋದರು.(1)

1714 ರ ಮಾರ್ಚ್ ಹನ್ನೊಂದರಂದು ಜಮ್ಮುವಿನ ಇಫ್ಸಂದ್ಯಾರ್‌ನಿಂದ ಸಾಮ್ರಾಟನಿಗೆ ಪತ್ರವೊಂದು ತಲುಪಿತು. ಅದರಲ್ಲಿ ಚಂಬ ರಾಜ್ಯದ ರಾಜನ ಲೆಕ್ಕಾಧಿಕಾರಿ ಮತ್ತು ನುರ್ಪುರದ ರಾಜನ ವಕೀಲರಾದ ಉಪಫೌಜುದಾರ ಅಬ್ದುಲ್ ಅಜಿಮ್‌ಗೆ ವಾನ್ ಎಂಬ ಹಳ್ಳಿಯಲ್ಲಿ ಬಂದಾ ಸಿಂಗ್ ತಂಗಿದ್ದು, ಅವನು ಅಲ್ಲಿಂದ ಬಹಿಲ್‌ವಾಲ್ ಮೂಲಕ ಬಟಲಗೆ ತಲುಪಲಿದ್ದಾನೆ ಎಂದು ತಿಳಿಸಲಾಗಿತ್ತು. ಉಪ ಫೌಜುದಾರ ಅಜಿಮ್ ಹತ್ತಿರ ಹೆಚ್ಚು ಸೈನಿಕರಿಲ್ಲದಿರುವ ಕಾರಣ ಆತ ಬಂದಾ ಸಿಂಗ್ ವಿರುದ್ಧ ಹೋರಾಡಲಿಲ್ಲವೆಂದೂ, ಬೆಟ್ಟ ಸಾಲಿನ ಯಾವೊಬ್ಬ ರಾಜನೂ ಬಂದಾ ಸಿಂಗ್ ವಿರುದ್ಧ ಕ್ರಮ ಕೈಗೊಳ್ಳಲು ಅವನಿಗೆ ನೆರವಾಗಲಿಲ್ಲವೆಂದೂ ಪತ್ರದಲ್ಲಿ ಹೇಳಲಾಗಿತ್ತು.(2)

ಈ ಅವಧಿಯಲ್ಲಿ ಇಮಾನಾಬಾದ್‌ನ ಸೇನಾಧಿಕಾರಿ ಇರದತ್‌ಮಂದ್, ಸಿಕ್ಖರ ಜೊತೆ ರಹಸ್ಯ ಒಪ್ಪಂದವನ್ನು ಮಾಡಿಕೊಂಡಿರುವುದು ಸಾಮ್ರಾಟನಿಗೆ ತಿಳಿಯಿತು. ಕಾಬೂಲ್–ಕಾಶ್ಮೀರ್ ಮತ್ತು ಲಾಹೋರ್–ಗುಜರಾತ್ ನಡುವಿನ ಪ್ರದೇಶಗಳಲ್ಲಿ ವಾಸವಾಗಿರುವ ಶ್ರೀಮಂತರ ಮೇಲೆ ದಾಳಿ ಮಾಡಿದ ಸಿಕ್ಖರು ಹಣ ಮತ್ತು ಅಮೂಲ್ಯ ವಸ್ತುಗಳನ್ನು ಕೊಳ್ಳೆಹೊಡೆದು, ಅದನ್ನು ಇರದತ್‌ಮಂದ್ ಖಾನ್ ಜೊತೆಯಲ್ಲಿ ಹಂಚಿಕೊಳ್ಳುತ್ತಾರೆಂಬ ಸಹ ಮಾಹಿತಿ ತಲುಪಿತು. ಅಲ್ಲದೆ ಇರದತ್‌ಮಂದ್ ನಕಲಿ ದಾಖಲೆಗಳನ್ನು ಸೃಷ್ಟಿಸಿ ರಾಜನ ಆಸ್ಥಾನಕ್ಕೆ ಸೇರಬೇಕಾದ ತೆರಿಗೆ ಆದಾಯವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಸಂಗತಿಯನ್ನು ಸಾಮ್ರಾಟನಿಗೆ ಹೇಳಲಾಯಿತು. ಇಮಾನಾಬಾದ್‌ಗೆ ಬದಲಿ ಸೇನಾಧಿಕಾರಿಯನ್ನು ನೇಮಿಸಲು ವ್ಯಕ್ತಿಯನ್ನು ಸೂಚಿಸಲು ಸಾಮ್ರಾಟನು ಲಾಹೋರ್‌ನ ರಾಜ್ಯಪಾಲನಿಗೆ ಪತ್ರ ಬರೆದ.(3)

**ಲೋಹಗಡ, ಬದ್ದಿ, ಪಿಂಜೋರ್ ಮತ್ತು ಮೋರ್ನಿ ಬೆಟ್ಟಗಳಲ್ಲಿ ಸಿಖ್ ಸೈನಿಕರು**

ಸಧೌರ ಕೋಟೆಯನ್ನು ಕೆಡವಿಹಾಕಿದ ಮುಘಲರು ಲೋಹಗಡ ಕೋಟೆಯನ್ನು ವಶಪಡಿಸಿಕೊಳ್ಳಲಿಲ್ಲ. ಸಾವಿರಾರು ಸಂಖ್ಯೆಯಲ್ಲಿ ಸಿಖ್ ಸೈನಿಕರು ಇನ್ನೂ ಲೋಹಗಡ, ರಾಯ್‌ಪುರ್ ರಾಣಿ, ತೋಶ, ಚೌಕಿ ಹಳ್ಳಿಗಳಲ್ಲಿ ಬದ್ದಿ, ಪಿಂಜೋರ್ ಮತ್ತು ಮೋರ್ನಿ ಬೆಟ್ಟಗಳಲ್ಲಿ ಉಳಿದಿದ್ದರು. ಅವರೆಲ್ಲ ಸರ್ಹಿಂದ್ ಪ್ರದೇಶದಲ್ಲಿ ದಾಳಿ ಮಾಡುತ್ತಿದ್ದರು. ವಂಜಾರ ಸಿಕ್ಖರು ಈ ಪ್ರದೇಶಗಳಿಂದ ಹೊರಬಂದು ರೋಪರ್ ಮತ್ತು ಪಿಂಜೋರ್‌ವರೆಗೂ ಸಂಚರಿಸುತ್ತಿದ್ದರು.

1714 ರ ಏಪ್ರಿಲ್ ಎರಡನೇ ವಾರದಲ್ಲಿ ಐದು ಸಾವಿರ ಸಿಖ್ ಸೈನಿಕರು ಮೆಘ್ಲುಕ್ ಗ್ರಾಮದ ಬಳಿ ಶಿಬಿರ ಹೂಡಿ ಪಠಾಣರ ಮತ್ತು ಪಾಳೆಯಗಾರರ ಹೊಲಗಳ ಬೆಳಸನ್ನು ಒತ್ತಾಯದಿಂದ ಕೊಯ್ಲುಮಾಡಿಕೊಂಡರು. ಈ ಸುದ್ದಿ ತಿಳಿದ ಸರ್ಹಿಂದ್‌ನ ಫೌಜುದಾರ ದೊಡ್ಡ ಸೈನ್ಯವನ್ನು ಸಿಕ್ಖರ ವಿರುದ್ಧ ಹೋರಾಡಲು ತೆಗೆದುಕೊಂಡು ಹೋದ. ಸಿಕ್ಖರು ಅವರನ್ನು ಧೈರ್ಯವಾಗಿ ಎದುರಿಸಿದರು. ಸರ್ಹಿಂದ್‌ನ ಹಲವಾರು ಸೈನಿಕರು ಮಡಿದರು. ಮಾರನೆಯ ದಿನ ಏಳು ನೂರು ಮಂದಿ ಕಾಲಾಳುಗಳು, ಒಂದು ಸಾವಿರ ರಾವುತರು ಮುಗಿಬಿದ್ದರು. ಒಂಬತ್ತು ಗಂಟೆ ದೀರ್ಘಕಾಲ ನಡೆದ ಹೋರಾಟದಲ್ಲಿ ಎರಡೂ ಪಕ್ಷದವರಿಗೂ ಜೀವಹಾನಿಯಾಯಿತು. ಕತ್ತಲು ಆವರಿಸಿಕೊಂಡಾಗ ಸಿಖ್ ಸೈನಿಕರು ಬೆಟ್ಟಗಳಿಗೆ ಹಿಂದಿರುಗಿ ಅಡಗಿಕೊಂಡರು.(4)

ಸಾಮ್ರಾಟನಿಗೆ ಕಳುಹಿಸಿದ ಮಾಹಿತಿ ಪ್ರಕಾರ 1714 ರ ಏಪ್ರಿಲ್ 30 ರಲ್ಲಿ, ರೋಪಾರ್ ಹತ್ತಿರದ ಬೆಟ್ಟಗುಡ್ಡಗಳಲ್ಲಿ ಐದು ಸಾವಿರ ಸಿಖ್ ಸೈನಿಕರು ಉಳಿದುಕೊಂಡಿದ್ದರು. ಸರ್ಹಿಂದ್‌ನ ಫೌಜುದಾರ ಜೈನುದ್ದೀನ್ ಅಹಮದ್‌ಖಾನ್ ತನ್ನ ಸೋದರನ ಮಗ ಮೀರ್ ಅಬು ಮಕರ್‌ಂನ ನೇತೃತ್ವದಲ್ಲಿ ಸಿಕ್ಖರನ್ನು ಸದೆಬಡಿಯಲು ಎರಡು ಸಾವಿರ ಸೈನಿಕರನ್ನು ಕಳುಹಿಸಿದ. ಮುಘಲರ ಸೈನಿಕರ ಸಂಖ್ಯೆಯು ಪ್ರಮಾಣದಲ್ಲಿ ತಮಗಿಂತಲೂ ಕಡಿಮೆಯಿರುವುದನ್ನು ಅರಿತ ಸಿಖ್ ಸೈನಿಕರು ಬೆಟ್ಟಗಳಿಂದ ಇಳಿದು ಬಂದರು. ರೋಪರ್ ಹತ್ತಿರಕ್ಕೆ ಸಿಖ್ ಸೈನಿಕರು ಆಗಮಿಸಿದ ಸುದ್ದಿ ತಿಳಿದ ತಕ್ಷಣ ಮೀರ್ ಅಬು ಮುಕರ್‌ಂ ತಾನೂ ಅಲ್ಲಿಗೆ ಬೊದು ಸೇರಿಕೊಂಡ. ತೀವ್ರವಾದ ಕದನ ಆರಂಭವಾಯಿತು. ಬಂದೂಕಿನ ಗುಂಡು ವಿನಿಮಯವಾಯಿತು. ಕತ್ತಿ ಕಾಳಗ ಏರ್ಪಟ್ಟಿತ್ತು. ಕದನ ಆರು ಗಂಟೆ ವಿಸ್ತರಿಸಿತು. ಕತ್ತಲಾದ ನಂತರ ನಿಂತಿತು. ಸಿಖ್ ಸೈನಿಕರು ಮತ್ತು 300 ಮಂದಿ ಸಿಖ್ ಸೈನಿಕರು ಹತರಾದರು. ಸತ್ತ ಸಿಖ್ ಸೈನಿಕರ ತಲೆ ತರಿದು ದೆಹಲಿಯಲ್ಲಿರುವ ಸಾಮ್ರಾಟನಿಗೆ ಜೈನುದ್ದೀನ್ ಕಳುಹಿಸಿಕೊಟ್ಟ.(5)

1714 ರ ಮೇ ತಿಂಗಳ ಮೂರನೇ ವಾರದಲ್ಲಿ ಇಂತಹದೇ ಯುದ್ಧ ಜರುಗಿತು. ಒಂದು ದಿನ ಸಿಕ್ಖರ ಐದು ಸಾವಿರ ಕುದುರೆ ಸೈನ್ಯ, ಏಳು ಸಾವಿರ ಪದಾತಿ ಸೈನ್ಯ ಶಿವಾಲಿಕ್ ಬೆಟ್ಟಗಳಿಂದ ಇಳಿದು ಬವಸ[6] ಗ್ರಾಮದ ಹತ್ತಿರ ಬಂತು. ಆ ಸಮಯದಲ್ಲಿ ಸರ್ಹಿಂದ್‌ನ ಫೌಜುದಾರ ಜೈನುದ್ದೀನ್ ಅಹ್ಮದ್ ಖಾನ್ ಸುದ್ದಿ ತಿಳಿದ ತಕ್ಷಣ ಸಿಖ್ ಸೇನೆಯನ್ನು ಸುತ್ತುವರೆದ. ಮುಘಲ್ ಸೇನೆಯ ಬೇರೆ ಬೇರೆ ಪ್ರದೇಶದ ಸೈನಿಕರು ಮತ್ತು ಸ್ಥಳೀಯ ಪಾಳೆಯಗಾರರು ಕಳುಹಿಸಿದ ಸೈನಿಕರು ಜೈನುದ್ದೀನ್ ಸೈನ್ಯದ ಜೊತೆಗೂಡಿದರು. ಒಂದು ವರದಿಯ ಪ್ರಕಾರ ಮುಘಲ್ ಸೈನ್ಯ ಒಟ್ಟಾರೆ ಐದು ಸಾವಿರ ಕುದುರೆ ಸೈನ್ಯ ಮತ್ತು ಏಳು ಸಾವಿರ ಪದಾತಿಯನ್ನು ಹೊಂದಿತ್ತು. ಮುಘಲ್ ಸೇನಾಬಲವನ್ನು ಅರಿತ ಸಿಖ್ ಸೈನಿಕರು ಯುದ್ಧ ಮಾಡದಿರಲು ನಿರ್ಧರಿಸಿ ಬೆಟ್ಟಗಳಿಗೆ ತಪ್ಪಿಸಿಕೊಂಡು ಹೋಗುವವರೆಗೆ ಕೂಟಯುದ್ಧ ಆರಂಭಿಸಿದರು. ಈ ಹೊಡೆದಾಟದಲ್ಲಿ ಮೂವತ್ತು ಮುಘಲ್ ಸೈನಿಕರು ಸತ್ತು ಐವತ್ತು ಮಂದಿ ಗಾಯಗೊಂಡರು. ಸಿಖ್ ಪಕ್ಷಕ್ಕೆ ಆದ ಹಾನಿಯೂ ಅದಕ್ಕೆ ಸಮಾನವಾಗಿತ್ತು.[7]

ಯುದ್ಧದಲ್ಲಾದ ಜೀವಹಾನಿಯ ಬಗ್ಗೆ ಸಾಮ್ರಾಟನಿಗೆ ಜೂನ್ 12ರಂದು ವರದಿ ಮಾಡಲಾಯಿತು. ಈ ವರದಿಯ ಪ್ರಕಾರ 1714 ಮೇ 13 ರಂದು ಸಿಖ್ ಸೈನ್ಯದ ದೊಡ್ಡ ಪಡೆಯೊಂದು ದಹೋನ[8] ಪರಗಣದ ಮಣಶಪುರ ಮತ್ತು ಇತರೆ ಹಳ್ಳಿಗಳಿಗೆ ಪ್ರವೇಶಿಸಿತು. ಸದರಿ ಗ್ರಾಮದ ಜಮೀನುದಾರ ಮತ್ತು ಪೊಲೀಸ್ ಠಾಣಾದ ಮಂದಿ, ಹಳ್ಳಿಯ ಜಾನುವಾರನ್ನು ಕೊಂಡೊಯ್ಯಲು ಹವಣಿಸಿದ ಸಿಖ್ ಸೈನ್ಯದ ವಿರುದ್ಧ ಹೋರಾಡಿದರು. ಇದೇ ವೇಳೆ ಸರ್ಹಿಂದ್ ಫೌಜುದಾರ ಜೈನುದ್ದೀನ್‌ನ ಸೈನ್ಯ ಬಂದಿಳಿಯಿತು. ಈ ಯುದ್ಧದಲ್ಲಿ ಮುಘಲ್ ಸೈನ್ಯದ 11 ರಾವುತರು ಮತ್ತು 40 ಕಾಲಾಳುಗಳು ಮಡಿದರು. ಹಲವಾರು ಸಿಖ್ ಸೈನಿಕರೂ ಮೃತರಾದರು.[9] ನುರ್ಪುರದ ಸುತ್ತಮುತ್ತಲ ಪ್ರದೇಶಗಳಲ್ಲಿ ವಂಜಾರರು ಉಳಿದಿದ್ದು, ಅವರು ಸಿಖ್ ಸೈನಿಕರಿಗೆ ಆಹಾರ ಧಾನ್ಯ, ಬಾಣ ಮತ್ತು ರೈಫಲ್‌ಗಳನ್ನು ಸರಬರಾಜು ಮಾಡುತ್ತಿರುವುದು ಜುಲೈ 3 ರಂದು ವರದಿಯಾಯಿತು.[10] ಮುಘಲ್ ಮತ್ತು ಸಿಖ್ ಸೈನಿಕರ ನಡುವೆ ನಿಲ್ಲದ ಯುದ್ಧ ನಡೆಯಿತು.[11] ಮಡಿದ ಯೋಧರ ಕೊಳೆತ ಶವ ಹಾಗೂ ಸತ್ತ ಜಾನುವಾರಿನ ಶವದಿಂದ ದುರ್ವಾಸನೆ ಎಲ್ಲ ಪ್ರದೇಶವನ್ನು ಹರಡಿತು. ಈ ಸುದ್ದಿಯನ್ನು ತಿಳಿದ ಮುಘಲ್ ಸಾಮ್ರಾಟನಿಗೆ ಬುದ್ಧಿ ಭ್ರಮಣೆಯಾದಂತಾಯಿತು.[12]

ಫರೂಕ್ ಸಿಯಾರ್‌ನ ಆಳ್ವಿಕೆಯ ನಾಲ್ಕನೇ ವರ್ಷದಲ್ಲಿ ವಂಜಾರರು ವಹಿಸಿದ ಪಾತ್ರ ಕುತೂಹಲಕಾರಿಯಾಗಿದೆ. ಈ ಬಗ್ಗೆ ಕಂಗ್ರಾದ ಚಕ್ಲಾದಿಂದ ಸಾಮ್ರಾಟನಿಗೆ ವರದಿ ಹೋಯಿತು. ಆ ವರದಿಯ ಪ್ರಕಾರ ಬಹುತೇಕ ವಂಜಾರರು ನಾನಕ್ ಆರಾಧಕರು; ಅವರು ಹೀರ್‌ಚಂದ್ ಮತ್ತು ದಯಾಧರ್ಮ ತಾಲೂಕುಗಳಲ್ಲಿ ಮತ್ತು ಜಮೀನುದಾರ ಖಲ್ಸಾಮಹಲ್(ರಾಜನಿಗೆ ಸೇರಿದ ಭೂಮಿ)ಗಳಲ್ಲಿ ಉಳಿದುಕೊಂಡಿದ್ದಾರೆ: ಅವರು ಸಿಖ್ ಬಂಡುಕೋರರಿಗೆ ಗುಪ್ತಚರರಾಗಿ ಕಾರ್ಯನಿರ್ವಹಿಸುತ್ತಾ ನೆರವಾಗುವುದರ ಜೊತೆಗೆ ಸಿಖ್ ಸೈನ್ಯಕ್ಕೆ ಆಹಾರಧಾನ್ಯ, ಬಾಣಗಳು ಮತ್ತು ರೈಫಲ್‌ಗಳನ್ನು ಒದಗಿಸುತ್ತಿದ್ದಾರೆ; ಈ ವಂಜಾರರನ್ನು ಬಂದಿಸಿದರೆ, ತೀವ್ರವಾಗಿ ಶಿಕ್ಷಿಸಬೇಕು; ಈ ಕ್ರಮದಿಂದ ಬಂಡುಕೋರರ ಚಲನೆ ನಿಲುಗಡೆಯಾಗುತ್ತದೆ. ಅವರಿಗೆ ಆಗುತ್ತಿರುವ ಆಹಾರಧಾನ್ಯ ಪೂರೈಕೆ ನಿಲ್ಲುತ್ತದೆ. (ಇದು ಸಾಮ್ರಾಟನಿಗೆ ನೀಡಿದ ವರದಿ ಮತ್ತು ಮತ್ತು ಬೇಡಿಕೆ). ಈ ಬಗ್ಗೆ ಸಾಮ್ರಾಟನು ಅಗತ್ಯವಾದ ಆಜ್ಞೆಗಳನ್ನು ಹೊರಡಿಸಿದ.[13] ಬಂದಾ ಸಿಂಗ್ ಪರ್ವತಗಳಿಗೆ ಹೋದ ಹಿನ್ನೆಲೆಯಲ್ಲಿ ಪ್ರಭುತ್ವವು ಈಗ ವಂಜಾರರ ತೀವ್ರ ಪ್ರತಿರೋಧವನ್ನು ಎದುರಿಸಬೇಕಾಯಿತು.

ವಂಜಾರರು ಅನೇಕ ಹಳ್ಳಿಗಳನ್ನು ನೆಲಸಮ ಮಾಡಿದ ಘಟನೆಗಳು ಅನಂತರ ವರದಿಯಾದವು.

**ಬಂದಾ ಸಿಂಗ್‌ನಿಂದ ಬೇರೆಯಾದ ಬಜ್ ಸಿಂಗ್**

ರತನ್ ಸಿಂಗ್ ಬಂಗು ಮತ್ತು ಗ್ಯಾನಿ ಗ್ಯಾನ್ ಸಿಂಗ್‌ನಂತಹ ಲೇಖಕರು, 1715 ರ ಏಪ್ರಿಲ್ ಮತ್ತು ಡಿಸೆಂಬರ್ ಅವಧಿಯಲ್ಲಿ ಬಂದಾ ಸಿಂಗ್ ಮತ್ತು ಬಿನೋದ್ ಸಿಂಗ್ ನಡುವೆ ಗುರುದಾಸ್ ನಂಗಲ್‌ನ ಕೋಟೆಯಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿತೆಂದು ಬಿನೋದ್ ಸಿಂಗ್ ಕೋಟೆಯನ್ನು ಬಿಟ್ಟುಹೋದನೆಂದು ಬರೆಯುತ್ತಾರೆ. ಆದರೆ ಇದು ನಿಜವಲ್ಲ. ಅಂತಹ ಘಟನೆಯನ್ನು ದೃಢೀಕರಿಸಲು ಸಾಕ್ಷ್ಯಗಳಿಲ್ಲ.[14] ಆದರೆ ಬಜ್ ಸಿಂಗ್ ಒಂದು ಭಾರಿ ಬಂದಾ ಸಿಂಗ್‌ನನ್ನು ತೊರೆದು ಹೋಗಿರುವುದಕ್ಕೆ ಸಾಕ್ಷ್ಯಗಳಿವೆ. ಒಂದು ವರದಿಯ ಪ್ರಕಾರ ಬಂದಾ ಸಿಂಗ್‌ನಿಂದ ಬೇರೆಯಾದ ಬಜ್ ಸಿಂಗ್ 14 ರಿಂದ 15 ಸಾವಿರ ಸೈನಿಕರೊಡನೆ ಮಖೋವಲ್(ಆನಂದಪುರ್) ಹತ್ತಿರ ಶಿಬಿರ ಹೂಡಿದ್ದನೆಂದು ಆನಂದ್‌ರಾವ್ ಎಂಬ ವರದಿಗಾರ ಸಾಮ್ರಾಟನಿಗೆ ವರದಿ ಕಳುಹಿಸಿದ್ದ. ಬಜ್ ಸಿಂಗ್ ಗೆ ಬಿಲಾಸ್ ಪುರದ ರಾಜನ ಬೆಂಬಲವಿತ್ತು. ಆ ಪ್ರದೇಶದ ಶ್ರೀಮಂತ ಮುಘಲರ ಮಹಲುಗಳ ಮತ್ತು ಪಠಾಣರ ಮನೆಗಳ ಮೇಲೆ ದಾಳಿ ಮಾಡಿದ ಬಜ್ ಸಿಂಗ್ ಅಪಾರ ಸಂಪತ್ತನ್ನು ಕೊಳ್ಳೆಹೊಡೆದ. ಹತ್ತಿರದ ಶಿಬಿರಗಳಲ್ಲಿ [15] ರಾಜನ ಸೈನ್ಯವಿದ್ದರೂ, ಆತ ಶ್ರೀಮಂತರ ಮಹಲುಗಳಿಗೆ ನುಗ್ಗಿ ಹಣ, ಶಸ್ತ್ರಾಸ್ತ್ರ ಮತ್ತು ಜಾನುವಾರುಗಳನ್ನು ಒಯ್ಯುತ್ತಿದ್ದ.[16] ಬಜ್ ಸಿಂಗ್ ಬಂದಾಸಿಂಗ್‌ನಿಂದ ಬೇರೆಯಾದದ್ದು ಯಾವುದೇ ಭಿನ್ನಾಭಿಪ್ರಾಯದಿಂದಲ್ಲ. ಬದಲು ಮುಘಲರಲ್ಲಿ ಗೊಂದಲವುಂಟು ಮಾಡಲು. ಆ ಮೂಲಕ ಮುಘಲರ ಸೇನೆಯನ್ನು ಎರಡು ವಿಭಿನ್ನ ಹೋರಾಟಗಳಿಗೆ ಹಂಚುವ ಮೂಲಕ ಬಲವನ್ನು ಕುಗ್ಗಿಸುವುದಾಗಿತ್ತು.

1777 ರ ಜುಲೈ ತಿಂಗಳ ಮೂರನೇ ವಾರದಲ್ಲಿ, ಶಿವಾಲಿಕ್ ಪರ್ವತಗಳ ಕೆಳಹಂತದಲ್ಲಿರುವ ಅರ್ದುನ್, ಮೆಹ್ಲುಕ್ ಮತ್ತು ಮಾಲ್ಕಿಯಾತ್ ಗ್ರಾಮಗಳಲ್ಲಿ ಸಿಖ್ ಸೈನಿಕರು ತಮ್ಮ ಶಿಬಿರಗಳನ್ನು ಹೂಡಿದರು. ಸುದ್ದಿ ತಿಳಿದ ಮುಘಲ್ ಸೈನ್ಯವು ಸಿಖ್ ಶಿಬಿರಗಳ ಮೇಲೆ ಮುಗಿಬಿದ್ದಿತು. ಈ ಕಾದಾಟದಲ್ಲಿ ಎಪ್ಪತ್ತು ಮಂದಿ ಸಿಕ್ಖರು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಮುಘಲ್ ಸೈನಿಕರು ಸತ್ತರು. 1714 ರ ಮೂರನೇ ವಾರದಲ್ಲಿ ಸರ್ಹಿಂದ್‌ನ ರಾಜ್ಯಪಾಲನ ಸೈನ್ಯವು ಬಜ್ ಸಿಂಗ್ ಮೇಲೆ ದಾಳಿ ಮಾಡಿತು. ಹೋರಾಟಕ್ಕೆ ಎದುರಾಗುವ ಬದಲು ಸಿಖ್ ಸೈನಿಕರು ಬೆಟ್ಟಗುಡ್ಡಗಳ ಕಡೆ ಓಡಿದರು.

ಈ ದಾಳಿಗಳು ಬಜ್ ಸಿಂಗ್ ನೇತೃತ್ವದಲ್ಲಿ ನಡೆದಿರುವ ಸಾಧ್ಯತೆಯಿದೆ. ಬಜ್ ಸಿಂಗ್ 1716 ರ ಜೂನ್ 9 ರಂದು ಬಂದಾ ಸಿಂಗ್ ನ ಜೊತೆಯಲ್ಲಿ ಕೊಲ್ಲಲ್ಪಟ್ಟ ಎಂಬ ವರದಿ ಹೊರತುಪಡಿಸಿದರೆ, ಬಜ್ ಸಿಂಗ್ ನ ಸೇನೆಯನ್ನು ಉಲ್ಲೇಖಿಸಿದ ಆಕರಗಳು ದೊರೆಯುವುದಿಲ್ಲ. ಮುಘಲ್ ಕಾಲದ ದಾಖಲೆ *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ*ವು ಬಜ್ ಸಿಂಗ್ ಹೆಸರನ್ನು ತಪ್ಪಾಗಿ ಬಿನೋದ್ ಸಿಂಗ್ ಎಂದು ದಾಖಲಿಸಿದೆ ಎಂಬುದು ಸಹ ಸರಿಯಲ್ಲ. ಅಲ್ಲದೆ ಬಜ್ ಸಿಂಗ್ ಯಾವಾಗಲೂ ಮುಘಲ್ ಸೈನ್ಯದ ವಿರುದ್ಧವೇ ಹೋರಾಡಿರುವುದನ್ನು ಮೂಲಗಳು ಹೇಳುತ್ತವೆ. ಹಾಗಾಗಿ ಇವೆಲ್ಲವೂ ಬಜ್ ಸಿಂಗ್ ಭಿನ್ನಾಭಿಪ್ರಾಯಗಳ ಕಾರಣದಿಂದ ಬಂದಾ ಸಿಂಗ್ ನಿಂದ ಬೇರೆಯಾಗದಿರುವುದನ್ನು ರುಜುವಾತುಪಡಿಸುತ್ತವೆ. ಈ ಇಬ್ಬರೂ ನಾಯಕರು ಒಂದು ಯುದ್ಧ ತಂತ್ರವಾಗಿ ಸೈನ್ಯವನ್ನು ವಿಭಜಿಸಿ ಎರಡು ಭಿನ್ನ ಗುಂಪುಗಳಾಗಿ ರಚಿಸಿಕೊಂಡಿರಬಹುದು. ಬಿನೋದ್ ಸಿಂಗ್‌ನ ಹೆಸರು ಸಹ ಮುಘಲರ ಯಾವುದೇ ದಾಖಲೆಯಲ್ಲಿ ಉಲ್ಲೇಖಗೊಂಡಿಲ್ಲ.

**ಉತ್ತರಕಾಂಡ–ಕುಮೋನ್‌ನಲ್ಲಿ ಬಂದಾ ಸಿಂಗ್**

1714 ರ ಆಗಸ್ಟ್ ಆರಂಭದಲ್ಲಿ ಈಗಿನ ಉತ್ತರಕಾಂಡದ ಬೆಟ್ಟಗಳಲ್ಲಿ ಬಂದಾ ಸಿಂಗ್ ಉಳಿದಿದ್ದ. 10ನೇ ಆಗಸ್ಟ್ ವರದಿಯಂತೆ, ಶ್ರೀನಗರದ ರಾಜನು ಬಂದಾಸಿಂಗ್ ಜೊತೆ ಮೈತ್ರಿಯಿಂದಿದ್ದ. ಹಾಗೆಯೇ ವಂಜಾರರ [17] ಜೊತೆ ಮಾಡಿಕೊಂಡ ಒಪ್ಪಂದದಂತೆ ಬಂದಾ ಸಿಂಗ್ ಬರೇಲಿ ಮತ್ತು ಮೊರದಾಬಾದ್ ಗೂ ಹೋಗಿದ್ದ. ಈ ಮಾಹಿತಿ ತಿಳಿದ ಕುಮೋನ್ ನ ರಾಜ ಬಜ್ ಬಹದ್ದೂರ್ ಚಂದ್ ಸಿಖ್ ಸೈನಿಕರ ಮೇಲೆ ದಾಳಿ ಮಾಡಲು ತನ್ನ ಸೇನೆಯನ್ನು ಕಳುಹಿಸಿದ. ಈ ಯುದ್ಧ ಮೂರು ದಿನ ನಡೆದು ಎರಡೂ ಕಡೆ ಜೀವಹಾನಿಯಾಯಿತು. ಈ ಕಾದಾಟದಲ್ಲಿ ಸತ್ತ 19 ಸಿಖ್ ಸೈನಿಕರ ತಲೆಗಳನ್ನು ತರಿದು ಬಜ್ ಸಿಂಗ್ ಸಾಮ್ರಾಟನಿಗೆ ಕಳುಹಿಸಿದ. ಸಾಮ್ರಾಟನು ತನಗೊಂದು ಪ್ರಶಂಸಾಪತ್ರ, ಮತ್ತೊ ಶಿರೋವಸ್ತ್ರ ನೀಡಿ ಗೌರವಿಸಬೇಕೆಂದು ಕೋರಿಕೊಂಡ. ಸಾಮ್ರಾಟನು ಕುಮೋನ್ ರಾಜನ ಕೋರಿಕೆಯಂತೆ ಉಡುಗೊರೆ ಕಳುಹಿಸಿದ.[18] ಆಗಸ್ಟ್ 12 ರ ವರದಿಯೊಂದು ಈ ಕಾದಾಟದಲ್ಲಿ ಸತ್ತ ಸಿಖ್ ಸೈನಿಕರ ಸಂಖ್ಯೆ 20 ಎಂದು ದಾಖಲಿಸಿದೆ.[19]

**ಮತ್ತೆ ಪಂಜಾಬ್‌ಗೆ ಹಿಂದಿರುಗಿದ ಬಂದಾ ಸಿಂಗ್**

1714ರ ಆಗಸ್ಟ್ ಮಧ್ಯಭಾಗದಲ್ಲಿ ಬಂದಾ ಸಿಂಗ್ ಹಿಂದೂಸ್ತಾನದಿಂದ ಮತ್ತೆ ಪಂಜಾಬ್‌ನ ಬಯಲಿಗೆ ಹಿಂದಿರುಗಿ ಬಂದ. ಇರ್ವಿನ್‌ನ ಪ್ರಕಾರ 1714ರ ಆಗಸ್ಟ್ 16ರಂದು[20] ಏಳು ಸಾವಿರ ಸೈನಿಕರಿದ್ದ ಸಿಖ್ ಪಡೆಯು ರೋಪರ್ ಮೇಲೆ ದಾಳಿ ಮಾಡಿತು. ಖ್ವಾಜಾ ಮುಕರ್‍ರಂ (ಜೈನುದ್ದೀನ್ ಅಹ್ಮದ್‌ಖಾನ್‌ನ ಅಧೀನ ಅಧಿಕಾರಿ) ಸಿಖ್‌ರನ್ನು ಬಲವಾಗಿ ಪ್ರತಿರೋಧಿಸಿದ. ಇದರಿಂದಾಗಿ ಸಿಕ್ಖರು ಬೆಟ್ಟಗಳ ಮೇಲು ಪ್ರಾಂತಕ್ಕೆ ಪಲಾಯನ ಮಾಡಿದರು. ಈ ಕಾದಾಟದಲ್ಲಿ 200 ಸಿಖ್ ಸೈನಿಕರು ಮಡಿದರು.[21]

1714ರ ಡಿಸೆಂಬರ್‌ನಲ್ಲಿ ಬಂದಾ ಸಿಂಗ್ ತನ್ನ ಶಿಬಿರವನ್ನು ಪಿಂಜೋರ್ ಮತ್ತು ಲಖತ್ ಗ್ರಾಮಗಳಲ್ಲಿ ಹೂಡಿದ. ಡಿಸೆಂಬರ್ 5ರಂದು ಪಿಂಜೋರ್‌ಗೆ ಹತ್ತಿರವಿರುವ ಅಂಬೋಹ್ ಊರನ್ನು ತಲುಪಿದ.[22] ಆ ಸಮಯದಲ್ಲಿ ಪತ್ನಿ ಸಾಹಿಬ್ ಕೌರ್ ಮತ್ತು ಮಗ ರಣಜಿತ್ ಸಿಂಗ್ ಬಂದಾ ಸಿಂಗ್‌ನ ಜೊತೆಯಲ್ಲಿದ್ದರು. ಬಟಲ ಮತ್ತು ಕಲನೂರ್ ಮೇಲೆ ದಾಳಿ ಮಾಡಲು ಯೋಜಿಸಿದ ಬಂದಾ ಸಿಂಗ್ ತನ್ನ ಹೆಂಡತಿ ಮಗನನ್ನು ಸುರಕ್ಷಿತ ತಾಣವೊಂದಕ್ಕೆ ಕಳುಹಿಸಲು ನಿರ್ದರಿಸಿದ. ಆತ ಧೋತೆ–ದ–ತಾಂಡ ಅಥವಾ ತಾಂಡ ಧೋತ ಎಂಬ ಹಳ್ಳಿಗೆ (ಇದು ಜಮ್ಮು ವಲಯದ ರೈಸಿ ಹತ್ತಿರವಿದೆ) ಹೋಗಿ ಭಾಯ್ ಮೆಹರ್ ಸಿಂಗ್ ದೂತನ ಆಶ್ರಯದಲ್ಲಿ ಕುಟುಂಬವನ್ನು ಬಿಟ್ಟ. ಅಲ್ಲದೆ ಗುರುಗ್ರಂಥ ಸಾಹಿಬ್[23] ಹಾಗೂ ಗುರು ಗೋವಿಂದ್ ಸಿಂಗ್ ಅವರ ಕಿರ್ಪಾನ್[24] ಅನ್ನು ತನ್ನ ಪತ್ನಿಗೆ ನೀಡಿ, ಆ ಪುಜನೀಯ ವಸ್ತುಗಳನ್ನು ಜಾಗ್ರತಯಿಂದೆ ಕಾಪಾಡಲು ತಿಳಿಸಿದ. ಇದಾದ ನಂತರ ಆತ ಗುರುದಾಸ್‌ಪುರದ ಕಡೆಗೆ ನಡೆದ.[25]

1715ರ ಫೆಬ್ರುವರಿ 5 ರಂದು ಸರ್ಹಿಂದ್‌ನಿಂದ ಮೂರು ಕೋಸು (ಸುಮಾರು 10 ಕಿ.ಮೀ) ದೂರದಲ್ಲಿರುವ ಲಖತ್ ಗ್ರಾಮದಲ್ಲಿ ಸಿಖ್ ಸೈನಿಕರು ಬೀಡುಬಿಟ್ಟಿರುವುದನ್ನು ಸಾಮ್ರಾಟನಿಗೆ ತಿಳಿಸಲಾಯಿತು. ಈ ಮಾಹಿತಿಯನ್ನು ಫೌಜುದಾರ ಖಿದ್ಮತ್ ತಲಬ್ ಖಾನ್[26] ತಿಳಿದ ತಕ್ಷಣ ಸಿಕ್ಖರನ್ನು ಬೆನ್ನತ್ತಲು ಐದು ಐದು ಸಾವಿರ ಬಂದೂಕುಧಾರಿ ಸೈನಿಕರು ಮತ್ತು ಬಿಲ್ಲಾಳುಗಳನ್ನು ತನ್ನ ಭಕ್ಷಿಯ ಜೊತೆ ಕಳುಹಿಸಿದ. ಬೆಟ್ಟಗುಡ್ಡಗಳಿಗೆ ಬಂಡುಕೋರರ ಪ್ರವೇಶವನ್ನು ನಿರಾಕರಿಸಬೇಕೆಂದು

ಆಜ್ಞೆಮಾಡಿ ಬೆಟ್ಟ ಸಾಲಿನ ರಾಜರುಗಳಿಗೆ ಪತ್ರ ಬರೆದ.(27)

1715ರ ಮಾರ್ಚ್ ತಿಂಗಳ ಮೂರನೇ ವಾರದಲ್ಲಿ ಸಿಕ್ಖರು ಸರ್ಹಿಂದ್‌ನಿಂದ ಸುಕೇತ್ ಮತ್ತು ಮಂಡಿ ಬೆಟ್ಟಗಳ ಕಡೆ ಹೋದರು. ಅವರಲ್ಲಿ ಏಳು ಸಾವಿರ ರಾವುತರ ಮತ್ತು ಎಂಟು ಸಾವಿರ ಪದಾತಿ ಸೈನ್ಯವಿತ್ತು. ಅವರಿಗೆ ಕೆಹ್ಲೂರು (ಬಿಲಾಸ್‌ಪುರ) ರಾಜನ ಬೆಂಬಲವಿತ್ತು. ಈ ಅವಧಿಯಲ್ಲಿ ಸಿಖ್ ಸೈನಿಕರು ಡನ್ ಪ್ರದೇಶದಲ್ಲಿ ಬೀಡು ಬಿಟ್ಟಾಗ ಅವರು ಫತಾ-ಉಲ್ಲಾ-ಖಾನ್‌ನ *ಅಮಿಲ್* (ಉದ್ಯೋಗಿ) ರಮಜಾನ ಬೇಗನ ನೇತೃತ್ವದಲ್ಲಿ ಮುಘಲರ ಸೈನ್ಯದೊಡನೆ ಕಾದಾಡಬೇಕಾಯಿತು. ಈ ಯುದ್ಧದಲ್ಲಿ ಮುಘಲರು ಅಪಾರ ಹಾನಿ ಅನುಭವಿಸಿದರು.(28)

**ಪಂಜಾಬ್‌ನಲ್ಲಿ ಬಂದಾ ಸಿಂಗ್**

1715ರ ಫೆಬ್ರುವರಿ ಅಂತ್ಯದಲ್ಲಿ ಬಂದಾ ಸಿಂಗ್ ತಾನೇ ಬೆಟ್ಟದ ತಪ್ಪಲಿಗೆ ಇಳಿದುಬಂದು ಪಂಜಾಬ್ ಪ್ರವೇಶಿಸಿದನು. ಆತ ಮುಘಲ್ ಚೌಕಿಗಳ ಮತ್ತು ದಂಡು ಪ್ರದೇಶಗಳ ಮೇಲೆ ದಾಳಿ ಮಾಡಿ ಹಣ, ಆಯುಧ ಮತ್ತು ಆಹಾರವನ್ನು ಲೂಟಿ ಮಾಡಿದ. ಈ ಸುದ್ದಿ ಸಾಮ್ರಾಟನಿಗೆ ತಿಳಿದ ಕೂಡಲೇ, ಬಂದಾ ಸಿಂಗ್‌ನ ಮೇಲೆ ಕ್ರಮ ತೆಗೆದುಕೊಳ್ಳವಂತೆ ವಿಶೇಷ ಸಂದೇಶಕರ ಮೂಲಕ ಅಬ್ದುಸ್ ಸಮದ್ *ಖಾನ್*ಗೆ ತಿಳಿಸಿದ.(29)

1715ರ ಮಾರ್ಚ್ ತಿಂಗಳ ಆರಂಭದಲ್ಲಿ ಬಂದಾ ಸಿಂಗ್ ಕಲನೂರು ಮೇಲೆ ದಾಳಿ ಮಾಡಿ ಸೊಹ್ರಬ್ *ಖಾನ್*ನನ್ನು ಸೋಲಿಸಿ ಪಟ್ಟಣವನ್ನು ಆಕ್ರಮಿಸಿಕೊಂಡ. ಅನಂತರ ಬಟಲ ಮತ್ತು ರಾಯ್‌ಪುರ ಪತನವಾದವು. ಲಾಹೋರ್‌ನ ಫೌಜುದಾರನಾಗಲೀ ಅಥವಾ ಬಟಲ-ಕಲನೂರಿನ ಅಧಿಕಾರಿಗಳಾಗಲಿ ಬಂದಾ ಸಿಂಗ್ ಅನ್ನು ಎದುರಿಸಲು ಮುಂದೆ ಬರಲಿಲ್ಲ.(30)

ಆ ಸಮಯದಲ್ಲಿ ಲಾಹೋರ್‌ನ ರಾಜ್ಯಪಾಲ ಅಬ್ದುಸ್ ಸಮದ್‌ಖಾನ್, ಆ ಪ್ರಾಂತ್ಯದಲ್ಲಿ ಇರಲಿಲ್ಲ. ಹುಸೇನ್ *ಖಾನ್ ಖೇಷ್ಗಿ*ಯು ಹೂಡಿದ್ದ ಬಂಡಾಯವನ್ನು ಉಪಶಮನ ಮಾಡಲು ಹೋಗಿದ್ದ. (1715ರ ಆರಂಭದಲ್ಲಿ *ಖೇಷ್ಗಿ*ಯು ಮುಘಲ್ ಆಳ್ವಿಕೆಯ ವಿರುದ್ಧ ಬಂಡಾಯದ ಬಾವುಟ ಹಾರಿಸಿದ್ದ. ಅವನ ವಿರುದ್ಧ ಅಬ್ದುಸ್ ಸಮದ್ *ಖಾನ್* ತಾನೇ ಸೇನೆಯನ್ನು ತೆಗೆದುಕೊಂಡು ಹೋಗಿದ್ದ. ಈ ಯುದ್ಧ ಒಂದೆರಡು ತಿಂಗಳು ನಡೆಯಿತು. ಸಾಮ್ರಾಟನು ಅಬ್ದುಸ್ ಸಮದ್ *ಖಾನ್*ಗೆ *ಸೈಯದ್-ಉದ್-ದೌಲ* (ರಾಜ್ಯದ ಖಡ್ಗ) ಎಂಬ ಬಿರುದನ್ನಿತ್ತು ಸನ್ಮಾನಿಸಿದ)(31)

---

**ಅಡಿ ಟಿಪ್ಪಣಿಗಳು**

1. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ,* ನಮೂದು 01.03.1714
2. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ,* ನಮೂದು 11.03.1714
3. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ,* ನಮೂದು 08.03.1714
4. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ,* ನಮೂದು 17.04.1714
5. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ,* ನಮೂದು 07.05.1714

6. ವರದಿಯು ಈ ಗ್ರಾಮ / ಪಟ್ಟಣವನ್ನು ಪರಗಣ ಎಂದು ಉಲ್ಲೇಖಿಸುತ್ತದೆ. ಈಗ ಈ ಪ್ರದೇಶದಲ್ಲಿ ಆ ಹೆಸರಿನ ಯಾವ ಊರೂ ಇಲ್ಲ.
7. *ಕ್ಬರಾತ್-ಐ-ದರ್ಬಾರ್-ಐ-ಮೌಲ್ಲ,* ನಮೂದು 29.05.1714
8. ಈ ಪ್ರದೇಶದಲ್ಲಿ ದಹೋನ ಎಂಬ ಹೆಸರಿನ ಗ್ರಾಮ ಇಲ್ಲ. ಮಣಕಪುರ ಎಂಬ ಗ್ರಾಮವು ಮೊಹಾಲಿ ಮತ್ತು ತಂಗೋರಿ ನಡುವೆ ಸರ್ಹಿಂದ್‌ನಿಂದ 35 ಕಿ.ಮೀ. ದೂರದಲ್ಲಿದೆ.
9. *ಕ್ಬರಾತ್-ಐ-ದರ್ಬಾರ್-ಐ-ಮೌಲ್ಲ,* ನಮೂದು 12.06.1714
10. ಗುಲಾಂ, ಮೊಹಿಯುದ್ದೀನ್, *ಫತುಹತ್ ನಾಮಾ-ಐ-ಸಮಾದಿ,* ಪು 156
11. ಗುಲಾಂ, ಮೊಹಿಯುದ್ದೀನ್, *ಫತುಹತ್ ನಾಮಾ-ಐ-ಸಮಾದಿ,* ಪು 129
12. ಗುಲಾಂ, ಮೊಹಿಯುದ್ದೀನ್, *ಫತುಹತ್ ನಾಮಾ-ಐ-ಸಮಾದಿ,* ಪು 97
13. *ಅಕ್ಬರಾತ್-ಐ-ದರ್ಬಾರ್-ಐ-ಮೌಲ್ಲ* ನಮೂದು 03.07.1715
14. ಈ ಕತೆಯನ್ನು ರತನ್‌ಸಿಂಗ್ ಭಂಗು ತನ್ನ ಕೃತಿ 'ಪ್ರಾಚೀನ್ ಪಂಥ ಪ್ರಕಾಶ್'ನಲ್ಲಿ ಸೃಷ್ಟಿಸಿದ್ದಾನೆ.
15. ಆ ವಲಯದಲ್ಲಿ ಮುಘಲ್ ಸೇನೆಯ ಎರಡು ಶಿಬಿರಗಳಿದ್ದವು. ಒಂದು ಜಿನ್‌ಬಾರ್ಡಿಯಲ್ಲಿ ಮತ್ತೊಂದು ರೋಪರ್ ಬಳಿಯಲ್ಲಿ.
16. ಅಕ್ಬರಾತ್*-ಐ-ದರ್ಬಾರ್-ಐ-ಮೌಲ್ಲ,* ನಮೂದು 9 ಮತ್ತು 10.07.1714
17. ಭಾಯ್ ಲಖಿ ರಾಯ್ ವಂಜಾರನ ಜೊತೆಗಾರರು ಗಡವಾಲ ಮತ್ತು ಕುಮೋನ್ ವಲಯದಲ್ಲಿ ಹಾಗೂ ಮೊರದಾಬಾದ್ ಮತ್ತು ಬರೇಲಿಯಲ್ಲಿ ಇದ್ದರೆಂಬುದನ್ನು ಇದು ಸೂಚಿಸುತ್ತದೆ.
18. *ಕ್ಬರಾತ್-ಐ-ದರ್ಬಾರ್-ಐ-ಮೌಲ್ಲ,* ನಮೂದು 10.08.1714
19. *ಕ್ಬರಾತ್-ಐ-ದರ್ಬಾರ್-ಐ-ಮೌಲ್ಲ,* ನಮೂದು 12.08.1714
20. ಇರ್ವಿನ್ ಈ ದಿನವನ್ನು ಹಿಜ್ರಿ ಶಕೆ. 1126ರ ಶಬನ್ 16 ಎಂದು ನಮೂದಿಸಿ, ಗ್ರೆಗೋರಿಯನ್ ಪಂಚಾಂಗದ ಪ್ರಕಾರ 26ನೇ ಆಗಸ್ಟ್ ಎಂದು ನಮೂದಿಸುತ್ತಾನೆ. ಆದರೆ ಆಗ ಇದ್ದ ಜೂಲಿಯನ್ ಕ್ಯಾಲೆಂಡರ್ ಪ್ರಕಾರ ಆಗಸ್ಟ್ 16 ಎಂದಿರಬೇಕಿತ್ತು.
21. ಇರ್ವಿನ್, *Later Mughals* Vol. 1. PP. 311
22. ವೀಣಾ ಸಚ್‌ದೇವ್, *Revisiting Baba Banda Singh Bahadur and his time; an Article on Historical Geography of Baba Singh Bahadur,* edited by Amarjeet Singh. P. 34.
23. ಗುರುಗ್ರಂಥ ಸಾಹಿಬ್‌ನ ಈ ಸಂಪುಟವನ್ನು ಗುರುಗಳು ದಯಪಾಲಿಸಿದ್ದು, ಸರ್ಹಿಂದ್‌ನ ವಿಜಯದ ನಂತರ, ಸಿಕ್ಖರು ಅದನ್ನು ನಾಂದೇಡ್‌ನಿಂದ ಸರ್ಹಿಂದ್‌ಗೆ ತಂದರು. ಅಲ್ಲಿಂದ ಅದು ಬಂದಾ ಸಿಂಗ್‌ನ ವಶದಲ್ಲಿತ್ತು.
24. ಈ ಖಡ್ಗವನ್ನು ಗುರುಗೋವಿಂದ್ ಸಿಂಗ್ ಅವರು ಬಂದಾ ಸಿಂಗ್‌ಗೆ 1708ರ ಅಕ್ಟೋಬರ್

5 ರಂದು ತಾವು ಪಂಜಾಬ್‌ಗೆ ನಿರ್ಗಮಿಸುವ ಸಮಯದಲ್ಲಿ ನೀಡಿದ್ದರು.

25. ದೇಸ ಸಿಂಗ್ ಮುಲ್ತಾನಿ, ಅಹ್ವಾಲ್ *ಮುತಲ್ಲಕ ಖಾಂದಾನ್ ಬಂದಾ ಸಿಂಗ್ ಬಹದ್ದೂರ್* (1800) ಪುಟ 22. *ಗುರು ಕಿಯಾನ್ ಸಖಿಯಾನ್* ಪು. 27.

26. 1714ರ ಕೊನೆಯ ತಿಂಗಳುಗಳಲ್ಲಿ ಸರ್ಹಿಂದ್‌ನ ಫೌಜುದಾರ ಜೈನುದ್ದೀನ್ ಅಹ್ಮದ್ ಖಾನ್‌ನ್ನನು ಪದಚ್ಯುತಿಗೊಳಿಸಿ ಖಿದ್ಮತ್ ತಲಬ್ ಖಾನ್‌ನನ್ನು ನೇಮಿಸಲಾಯಿತು.

27. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲದ* ನಮೂದು 05.02.1715

28. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲದ* ನಮೂದು 23, 24.02.1715

29. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲದ* ನಮೂದು 02.03.1715

30. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲದ* ನಮೂದು 14.03.1715

31. ಖಾಫಿ ಖಾನ್, *op. cit.* P. 861

# ಅಧ್ಯಾಯ 14

# ಗುರುದಾಸ್ ನಂಗಲ್ ಯುದ್ಧ ಮತ್ತು ಬಂದಾ ಸಿಂಗ್ ಬಹದ್ದೂರ್‌ನ ಬಂಧನ

1715ರ ಮಾರ್ಚ್ 14ರಂದು ಕಲನೂರು ಮತ್ತು ಬಟಲ ಪತನವಾದ ಸುದ್ದಿ ಸಾಮ್ರಾಟನನ್ನು ತಲುಪಿತು. ಕೆರಳಿದ ಸಾಮ್ರಾಟ ಮಾರನೆಯ ದಿನವೇ ಮಹಮ್ಮದ್ ಅಮೀನ್ ಖಾನ್‌ನ ಮಗ ಕಮರುದ್ದೀನ್ ನೇತೃತ್ವದಲ್ಲಿ ಸಿಕ್ಖರ ಮೇಲೆ ಯುದ್ಧ ಮಾಡಲು ದೊಡ್ಡ ಸೇನೆಯನ್ನು ಕಳುಹಿಸಿದ. ಕಮರುದ್ದೀನ್ ಮಾರ್ಚ್ 15ರಂದು ದೆಹಲಿಯನ್ನು ಬಿಟ್ಟ. ಸಾಮ್ರಾಟನು ಅಫ್ರಸಿಯಾಬ್‌ಖಾನ್ ಬಹದ್ದೂರ್, ಆರ್ಖಾದ ರಾಜ ಉದೀಪ್ ಸಿಂಗ್, ರಾಜ್‌ಗೋಪಾಲ್ ಸಿಂಗ್ ಬಡೇರಿಯಾ, ಪ್ರೀತಿ ಚಂದ್ ಮತ್ತು 300 ಕ್ಕೂ ಹೆಚ್ಚು *ಮಾನ್ಸಾಬದಾರರನ್ನು* ಕಳುಹಿಸಿದ. ಇದರ ಜೊತೆಗೆ ತನ್ನ ಅಧಿಪತ್ಯದಲ್ಲಿದ್ದ ಹನ್ನೆರಡು ಸಾವಿರದ ಐದು ನೂರ ಐವತ್ತು ರಾವುತರನ್ನು ಸಿಖ್ ವಿರುದ್ಧದ ಆಂದೋಲನದಲ್ಲಿ ಜೊತೆಯಾಗಲು ಕಳುಹಿಸಿದ.[(1)]

**ಗುರುದಾಸ್ ನಂಗಲ್‌ಗೆ ಮುತ್ತಿಗೆ**

1715ರ ಮಾರ್ಚ್ 19ರಂದು ಬಂದಾ ಸಿಂಗ್‌ನ ಸೈನ್ಯವು ಲಾಹೋರ್‌ನಿಂದ ಸುಮಾರು 125 ಕಿ.ಮೀ. ದೂರದಲ್ಲಿರುವ *ಮಾಜ್ಹಾ* ಪ್ರದೇಶದಲ್ಲಿ ಬೀಡು ಬಿಟ್ಟಿರುವ ಸುದ್ದಿ ಸಾಮ್ರಾಟನಿಗೆ ಬಂತು. ಬಂದಾ ಸಿಂಗ್‌ನ ಭಯದಿಂದ ಆ ಪ್ರದೇಶದ ಎಲ್ಲ ಅಧಿಕಾರಿಗಳು ಮತ್ತು ಗಣ್ಯ ವ್ಯಕ್ತಿಗಳು ಅಲ್ಲಿಂದ ಕಾಲ್ತೆಗೆದಿದ್ದರು. ಆ ಪ್ರದೇಶದಲ್ಲಿ ಸಿಕ್ಖರು ತಮ್ಮದೇ ಆದ ಅಧಿಕಾರಿಗಳನ್ನು ನೇಮಿಸಿದ್ದರು. ಈ ಸುದ್ದಿ ತಿಳಿದ ಕೂಡಲೇ ಅಬ್ದುಸ್ ಸಮದ್ ಖಾನ್ ಸಿಖ್ ಆಕ್ರಮಿತ ಎಲ್ಲ ಪ್ರದೇಶಗಳಿಗೂ ತೆರಳು ತನ್ನ ಸೈನ್ಯಕ್ಕೆ ಆಜ್ಞೆ ಮಾಡಿದ. ಈ ಪ್ರದೇಶದಲ್ಲಿ ಬಂದಾ ಸಿಂಗ್ ಸಹ ಅವರ ಜೊತೆಯಲ್ಲಿ ಇರಬಹುದೆಂಬ ಭರವಸೆಯನ್ನು ಆತ ತಾಳಿದ್ದ.

ಆ ಸಮಯದಲ್ಲಿ ಬಂದಾ ಸಿಂಗ್ ಕೋಟ್ ಮಿರ್ಜಾ ಜಾನ್ ದುರ್ಗದಲ್ಲಿ ಉಳಿದು ಕೋಟೆಯನ್ನು ಭದ್ರಪಡಿಸಿದ್ದ. ಕೋಟ್ ಮಿರ್ಜಾ ಜಾನ್ ಬಟಲ ಮತ್ತು ಕಲನೂರು ನಡುವಿನ ಒಂದು ಹಳ್ಳಿ. ಇತಿಹಾಸಕಾರ ಕರಮ್ ಸಿಂಗ್ "ಬಂದಾ ಸಿಂಗ್ ಈ ಪ್ರದೇಶವನ್ನು ಸಮರ ತಂತ್ರದ ದೃಷ್ಟಿಯಿಂದ ಆರಿಸಿಕೊಂಡಿದ್ದ. ಮುಘಲ್ ಸೇನೆಯನ್ನು ಎದುರಿಸಲು ಬಟಲ ಮತ್ತು ಕಲನೂರುಗಳನ್ನು ಆಯ್ಕೆ ಮಾಡಿಕೊಂಡಿದ್ದರೆ, ಸೋಲು ಅನಿವಾರ್ಯವಾದ ಸಂದರ್ಭಗಳಲ್ಲಿ, ಈ ಎರಡೂ ಪಟ್ಟಣಗಳ ನಿವಾಸಿಗಳು ತಪ್ಪಿಸಿಕೊಳ್ಳಲು ಅಡ್ಡಿಯಾಗುತ್ತಾರೆಂಬುದು ಆತನಿಗೆ ತಿಳಿದಿತ್ತು. ಒಂದು ವೇಳೆ ಮುಘಲರು ಸೋತರೆ, ಪಲಾಯನ ಮಾಡುವ ಸೈನಿಕರು ಈ ಎರಡೂ ಪಟ್ಟಣಗಳಲ್ಲಿಯೇ ಉಳಿಯುತ್ತಾರೆ. ಹಾಗಾಗಿ ಬಂದಾ ಸಿಂಗ್ ರಕ್ಷಣೆಯ ದೃಷ್ಟಿಯಿಂದ ಸುರಕ್ಷೆಗಾಗಿ ಕೋಟ್ ಮಿರ್ಜಾ ಜಾನ್ ಅನ್ನು

ಆಯ್ಕೆ ಮಾಡಿಕೊಂಡಿದ್ದ" ಎಂದು ಅಭಿಪ್ರಾಯಪಡುತ್ತಾರೆ. ಮುಂದುವರೆದು ಬಂದಾ ಸಿಂಗ್ ಗೆಲುವಿಗಿಂತಲೂ ಸೋಲಿನ ಸಾಧ್ಯತೆಯೇ ಹೆಚ್ಚು ಎಂಬುದನ್ನು ಮನಗಂಡಿದ್ದ ಎಂದು ಕರಮ್ ಸಿಂಗ್ ಹೇಳುತ್ತಾರೆ. ಹಾಗಾಗಿಯೇ ಅವನು ಕೋಟೆಯ ಒಳಭಾಗದಲ್ಲಿ ಹೆಚ್ಚಿನ ಪ್ರಮಾಣದ ಗೋಡೆಗಳನ್ನು ದುರಸ್ತಿಗೊಳಿಸಿದ್ದ. ಆದರೆ ಹೊರಗೋಡೆ ಹಾಗೂ ಕಂದಕಗಳು ಇನ್ನೂ ಸಿದ್ಧಗೊಂಡಿರಲಿಲ್ಲ.

ಚರಿತ್ರೆಕಾರ ಕರಮ್‌ಸಿಂಗ್ ಪರಿಸ್ಥಿತಿಯನ್ನು ಸರಿಯಾಗಿ ಅಳತೆ ಮಾಡಿಲ್ಲವೆನಿಸುತ್ತದೆ. ಮಿರ್ಜಾ ಜಾನ್ ಹಳ್ಳಿಯು ಬಟಲದಿಂದ 8 ಕಿ.ಮೀ. ದೂರದಲ್ಲಿತ್ತು. ಕಲನೂರಿನಿಂದ 15 ಕಿ.ಮೀ. ದೂರದಲ್ಲಿತ್ತು. ಮಿರ್ಜಾ ಜಾನ್ ಸುತ್ತಮುತ್ತಲಿದ್ದ ಎಲ್ಲ ಗ್ರಾಮಗಳಲ್ಲಿ – ಒಂದೆಡೆ ಆಕಾರ್‌ಪುರ, ಮುರಿದ್ಕೆ, ಕಾಲಾ ಅಫ್ಘಾನ ಮತ್ತು ಫತೇಗಡ ಚುರಿಯಾ; ಮತ್ತೊಂದೆಡೆ ಸತ್ಕೊಹ, ಮತ್ತು ದರಿವಾಲ್–ಸಂಪೂರ್ಣ ಮುಸ್ಲಿಮ್ ಜನಸಮುದಾಯವಿತ್ತು. ಹಾಗಾಗಿ ಅವರು ಬಂದಾ ಸಿಂಗ್‌ಗೆ ಸಹಾಯ ಮಾಡುವಂತಿರಲಿಲ್ಲ. ಆದರೆ ವಾಸ್ತವದ ಸ್ಥಿತಿ ಏನೆಂದರೆ, ಪಂಜಾಬಿನ ಮುಸಲ್ಮಾನರೆಲ್ಲರೂ ಬಂದಾ ಸಿಂಗ್ ಬಗ್ಗೆ ಭಯಗ್ರಸ್ತರಾಗಿದ್ದರು. ಹಾಗಾಗಿ ಹೊರಹೋಗುವ ಸಿಖ್ ಸೈನಿಕರ ದಾರಿಗೆ ಅಡ್ಡಬರುವ ಧೈರ್ಯ ಅವರಾರಿಗೂ ಇರುತ್ತಿರಲಿಲ್ಲ.

ಮುಘಲರ ಬೃಹತ್ ಸೇನೆಯು ಆರಿಫ್ ಖಾನನ ಅಧಿಪತ್ಯದಲ್ಲಿ ಬರುತ್ತಿರುವ ಸುದ್ದಿ ಕೇಳಿದ ನಂತರ ಬಂದಾ ಸಿಂಗ್ ಮಿರ್ಜಾ ಜಾನ್ ಅನ್ನು ತೊರೆದು ಸುರಕ್ಷವಾದ ನೆಲೆಗೆ ಹೋಗಲು ನಿರ್ಧರಿಸಿದ. ಅಲ್ಲಿಂದ ದಾಳಿಗೆ ಬರುತ್ತಿರುವ ಮುಘಲರನ್ನು ಎದುರಿಸುವ ತಂತ್ರ ಅವನದಾಗಿತ್ತು. ಬಂದಾ ಸಿಂಗ್ ಗುರುದಾಸ್ ನಂಗಲ್ ತಲುಪಿ ಅಲ್ಲಿನ ದುನಿ ಚಂದ್ ದರ್ವೇಶರ (ಅನಂತರ ಗುರುದಾಸ್ ನಂಗಲ್ ದಿ ಗರ್ಡಿ ಎಂಬ ಹೆಸರು ಬಂತು) ಕೋಟೆಯಂತಹ ಬಂಗಲೆಯಲ್ಲಿ ಆಶ್ರಯಪಡೆದ. ಗುರುದಾಸ್ ನಂಗಲ್ ಈಗಿನ ಗುರುದಾಸ್‌ಪುರದಿಂದ 6 ಕಿ.ಮೀ. ದೂರದಲ್ಲಿದೆ. ಬಹುಬೇಗನೆ ಮುಘಲ್ ಸೇನೆಯು ಸಹ ಆ ಸ್ಥಳವನ್ನು ತಲುಪಿ ಕೋಟೆಯನ್ನು ಸುತ್ತುವರೆಯಿತು.

ಆ ಸಮಯದಲ್ಲಿ ಬಂದಾ ಸಿಂಗ್ ಬಳಿ ಐದು ಸಾವಿರಕ್ಕೂ ಹೆಚ್ಚು ಸೈನಿಕರಿರಲಿಲ್ಲ. ಆ ಭವನದಲ್ಲಿ ಒಂದು ಸಾವಿರ ಸೈನಿಕರು ಉಳಿಯಬಹುದಿತ್ತು. ಹಾಗಾಗಿ ಉಳಿದವರಿಗೆ ಮುಘಲರ ಸೈನ್ಯದ ನಡುವೆ ನುಗ್ಗಿ ತಪ್ಪಿಸಿಕೊಳ್ಳದೆ ಬೇರೆ ದಾರಿ ಇರಲಿಲ್ಲ. ಆದರೆ ಮುಘಲರ ಸೇನೆ ಬಲವಾಗಿ ಮುತ್ತಿಗೆ ಹಾಕಿದ್ದರಿಂದ ಪರಾರಿಯಾಗಲು ಯತ್ನಿಸಿದ ಬಹುತೇಕ ಸೈನಿಕರು ಹತರಾದರು. ಜೀವ ಉಳಿಸಿಕೊಂಡವರು ಕೆಲವೇ ಮಂದಿ. ಔರಂಗಾಬಾದಿ(2)ಯ ಪ್ರಕಾರ ಎರಡು ಸಾವಿರ ಸೈನಿಕರು ಸತ್ತು ಸುಮಾರು ಐದು ನೂರು ಬಂಧಿಯಾದರು. ಸತ್ತ ಎರಡು ಸಾವಿರ ಸಿಖ್ ಸೈಬಿಕರ ಶಿರಗಳನ್ನು ಕತ್ತರಿಸಿ ಸಾಮ್ರಾಟನ ಮುಂದೆ ಪ್ರದರ್ಶಿಸಲು ರವಾನಿಸಿದರು. ಇಲ್ಲಿ ಬಂಧಿಯಾದ ಐದು ನೂರು ಮಂದಿಯ ಜೊತೆಗೆ ಬೇರೆ ಸ್ಥಳಗಳಲ್ಲಿ ದಸ್ತಗಿರಿಯಾದವರನ್ನೂ ಸೇರಿಸಿ ಸುಮಾರು ಒಂದು ಸಾವಿರ ಸಿಕ್ಖರಿಗೆ ಕೈಕೋಳ ತೊಡಿಸಿ, ಸರಪಳಿಯಲ್ಲಿ ಬಂಧಿಸಿ ಸಾಮ್ರಾಟನ ಮುಂದೆ ಪ್ರದರ್ಶಿಸಲು ದೆಹಲಿಗೆ ಎಳೆದೊಯ್ದರು.(3)

ಈಗ ಬಂದಾ ಸಿಂಗ್ ಗುರುದಾಸ್ ನಂಗಲ್‌ನ ಕೋಟೆಯಲ್ಲಿ ಉಳಿದ. ಅಬ್ದುಸ್ ಸಮದ್‌ನ ಒಂದು ಸಾವಿರ ಸೈನಿಕರ ಸೈನ್ಯ ಕೋಟೆಯನ್ನು ದಿಗ್ಬಂಧಿಸಿತು. ಅಬ್ದುಸ್ ಸಮದ್ ಖಾನ್‌ಗೆ ಬೆಂಬಲ ನೀಡಲು ಸರ್ಹಿಂದ್‌ನ ಉಪರಾಜ್ಯಪಾಲ ಅಜ್‌ಖಾನ್‌ಗೆ ಸಾಮ್ರಾಟ ಸಂದೇಶ ಕಳುಹಿಸಿದ.

ಅದೇ ವೇಳೆಗೆ ಸುಲ್ತಾನ್‌ಪುರದ ದೌಲತ್‌ಖಾನ್ ಮುಯೀನ್ ತನ್ನ ಐನೂರು ಜನ ಸೈನಿಕರೊಡನೆ ಗೋಯಿಂದ್‌ವಲ್ ತಲುಪಿ ಬೀಯಾಸ್ ನದಿಯ ದಂಡೆಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದ್ದ. ಆ ಕಡೆಯಿಂದ ತಪ್ಪಿಸಿಕೊಂಡು ಹೋಗುವ ಸಿಕ್ಖರನ್ನು ತಡೆದು, ಬಂಧಿಸಲು ಇಲ್ಲವೇ ಕೊಲ್ಲಲು ಮುಘಲ್ ಸಾಮ್ರಾಟ ಸೂಚನೆಯನ್ನು ಅವನಿಗೆ ಕಳುಹಿಸಿದ.(4)

ಬಂದಾ ಸಿಂಗ್‌ನ ಪತ್ನಿ ಮತ್ತು ಮಗನನ್ನು ಬಂಧಿಸಲಾದ ಸುದ್ದಿ ಜಮ್ಮುವಿನಿಂದ 1715ರ ಏಪ್ರಿಲ್ 10ರಂದು ಸಾಮ್ರಾಟನನ್ನು ತಲುಪಿತು. ಆದರೆ ಅದು ಸುಳ್ಳು ಸುದ್ದಿಯಾಗಿತ್ತು. ಅವರಿಬ್ಬರೂ ಮುಘಲ್ ಸೈನ್ಯ ಸುತ್ತುವರಿದ ಗುರುದಾಸ್ ನಂಗಲ್ ಕೋಟೆಯ ಒಳಗಡೆಯೇ ಇದ್ದರು.(5)

ಈ ಸಮಯದಲ್ಲಿ ಅಬ್ದುಸ್ ಸಮದ್ ಖಾನ್ ಸಹ ಲಾಹೋರ್‌ಗೆ ಹಿಂದಿರುಗಿದ್ದ. ಮುಸ್ಲಿಂ ಸೈನ್ಯವು ಬಂದಾ ಸಿಂಗ್ ಇದ್ದ ಗುರುದಾಸ್ ನಂಗಲ್ ಕೋಟೆಯನ್ನು ಸುತ್ತುವರೆದ ಸುದ್ದಿಯನ್ನು ಕೇಳಿದ ಕೂಡಲೇ ತಡಮಾಡದೆ ಆತ ತಲಾ 12 ಸಾವಿರ ಕುದುರೆ ಸೈನ್ಯ ಮತ್ತು ಪದಾತಿಯೊಡನೆ ಗುರುದಾಸ್ ನಂಗಲ್‌ಗೆ ಧಾವಿಸಿ ಬಂದು ಪರಿಸ್ಥಿತಿಯನ್ನು ತನ್ನ ಹತೋಟಿಗೆ ತೆಗೆದುಕೊಂಡಿದ್ದ. ಲಾಹೋರ್‌ನಿಂದ ಬರುವ ಹಾದಿಯಲ್ಲಿ ಬಟಲ ಮತ್ತು ಕಲನೂರ ಮೇಲೆ ದಾಳಿ ಮಾಡಿ ಪಟ್ಟಣಗಳನ್ನು ಸಿಕ್ಖರ ಹಿಡಿತದಿಂದ ಮುಕ್ತಗೊಳಿಸಿದ್ದ. ಅಲ್ಲಿ ಆತ ಬಾಣ ಮತ್ತು ಬಂದೂಕಿನ ಕಾಳಗ ಮಾಡಿದ ಸಿಕ್ಖರ ಪ್ರತಿರೋಧ ಎದುರಿಸಬೇಕಾಯಿತು.(6)

ಈ ವೇಳೆಗೆ ಗುರುದಾಸ್ ನಂಗಲ್ ಪ್ರದೇಶವನ್ನು ಸುತ್ತುವರೆದ ಮುಘಲ್ ಸೈನ್ಯದ ಸಂಖ್ಯಾ ಬಲ ವೃದ್ಧಿಸತೊಡಗಿತ್ತು. ಅನೇಕ ದಂಡನಾಯಕರು ತಮ್ಮ ಅಧಿಪತ್ಯದ ಸೈನ್ಯದೊಡನೆ ಬಂದು ಸೇರಿಕೊಂಡರು. ಗುಜರಾತಿನ ಫೌಜುದಾರ ಸೈಫುದ್ದೀನ್ ಅಹ್ಮದ್ ಖಾನ್, ಔರಂಗಾಬಾದ್ ಮತ್ತು ಪರ್ಸ್ರೂರಿನ ಫೌಜುದಾರ ನೂರ್ ಮಹ್ಮದ್ ಖಾನ್, ಬತಲದ ಫೌಜುದಾರ ಮಹ್ಮದ್ ದಯಮ್, ಕಲನೂರಿನ ಫೌಜುದಾರ ಸೊಹ್ರಮ್ ಖಾನ್ ಕಂಗ್ರದ ರಾಜ ಹೀರ್ ಚಂದ್, ಲಾಹೋರ್‌ನ ಉಪಸೇನಾಧಿಪತಿ ಅರೀಫ್ ಬೇಗ್ ಸಹ ಅಬ್ದುಸ್ ಸಮದ್‌ನ ಜೊತೆಗೂಡಿದರು. ಮುಘಲ್ ಸೈನಿಕರು ಗುರುದಾಸ್ ನಂಗಲ್ ಕೋಟೆಯ ಸುತ್ತ ಆಳವಾದ ಕಂದಕ ತೆಗೆದರು.(7)

ಕೋಟೆಯ ಉತ್ತರದ ಕಡೆಯಿಂದ ಜಕಾರಿಯ ಖಾನ್ ಮತ್ತು ಜೈನುದ್ದೀನ್ ಅಹ್ಮದ್ ಖಾನ್, ದಕ್ಷಿಣದ ಕಡೆಯಿಂದ ಪಟ್ಟಿ, ಇಮಾನಬಾದ್, ಬಟಲ, ಕಲನೂರು, ಔರಂಗಾಬಾದ್, ಪರ್ಸೂರ್, ಗುಜರಾತ್‌ನ ಫೌಜುದಾರರು ಮತ್ತು ಕಂಗಾ ಮತ್ತು ಜರ್ಸೋಟದ ರಜಪೂತ ರಾಜರು ಸೈನ್ಯವನ್ನು ಮುನ್ನಡೆಸುತ್ತಿದ್ದರು.(8)

ಸಿಖ್ ಮತ್ತು ಮುಘಲರ ಸೈನ್ಯ ಅಸಮಬಲದ್ದಾಗಿತ್ತು. ಸಿಕ್ಖರು ಈಗ ತಮ್ಮ ಉಳಿವಿಗಾಗಿ ಹೋರಾಡಬೇಕಿತ್ತು. ಕೋಟೆಯ ಒಳಗೆ ಅವರಿಗೆ ಆಹಾರಧಾನ್ಯದ ಅಭಾವ ತಲೆದೋರಿತು. ಕೆಲವು ದಿನಗಳ ಕಾಲ ಕೆಲವು ಸೈನಿಕರು ಧೈರ್ಯ ಮಾಡಿ ಕೋಟೆಯಿಂದ ಹೊರಬಂದು ಗ್ರಾಮಗಳಿಗೆ ಹೋಗಿ ಆಹಾರ ಮತ್ತು ಜಾನುವಾರು ಲೂಟಿ ಮಾಡಲು ಪ್ರಯತ್ನಿಸಿದರು. ಮುಘಲ್ ಸೈನಿಕರು ಅವರು ಕೋಟೆಯಿಂದ ಹೋಗುವುದನ್ನು ತಡೆಯಲು ಯತ್ನಿಸಿದಾಗ ಉಂಟಾದ ಕಾದಾಟದಲ್ಲಿ ಎರಡೂ ಕಡೆ ಜೀವಹಾನಿಯಾಯಿತು. ಒಂದು ದಿನ ಸಿಕ್ಖರ ಒಂದು ತಂಡ ಉರುವಲು ಸಂಗ್ರಹಿಸಲು ಹೊರಬಂದಾಗ ಮುಘಲ್ ದಾಳಿಗೆ ಸಿಲುಕಿತು. ಹಲವರು ಸಿಖ್ ಸೈನಿಕರು ಮೃತರಾದರು. ಕೆಲವರು ತಪ್ಪಿಸಿಕೊಂಡು ಕಾಡಿನಲ್ಲಿ ಕಣ್ಮರೆಯಾದರು. ಮುಘಲ್ ಸೇನೆ ಈಗ ಸಿಕ್ಖರು ಹೊರಬರುವ

ಸಾಧ್ಯತೆಯಿರುವ ಎಲ್ಲ ದ್ವಾರಗಳನ್ನು ಬಂದ್ ಮಾಡಿತು. ಆಹಾರ ಅಥವಾ ಯಾವುದೇ ಸರಕು ಪಡೆಯಲು ಪ್ರಯತ್ನಿಸುವ ಸಿಖ್ ಸೈನಿಕರ ಯತ್ನ ವಿಫಲವಾಯಿತು. ಶತ್ರು ಸೇನೆಯ ದಾಳಿಗೆ ಸಿಖ್ಖರು ಆಹುತಿಯಾಗ ತೊಡಗಿದರು.

ಮುಘಲರ ಸೇನೆ ಬೃಹತ್ ಪ್ರಮಾಣದಲ್ಲಿದ್ದರೂ ಕೋಟೆಯನ್ನು ಪ್ರವೇಶಿಸಲು ಯತ್ನಿಸಲಿಲ್ಲ. ಕೋಟೆಯಲ್ಲಿ ಫಿರಂಗಿಗಳು ಹಾಗೂ ಬಂದೂಕಗಳಿರಬಹುದೆಂಬ ಅಂಜಿಕೆಯಿತ್ತು. ಈ ಮೊದಲು ಅಂದರೆ ಕೋಟೆಗೆ ಮುತ್ತಿಗೆ ಹಾಕುವ ಮುನ್ನ ಹಳ್ಳಿಗಳಿಂದ ಕಬ್ಬಿಣವನ್ನು ಸಂಗ್ರಹಿಸಿದ್ದ ಸಿಖ್ ಸೈನಿಕರು ಕೋಟೆಯೊಳಗೆ ಮೂರು ಹೊಸ ಫಿರಂಗಿಗಳನ್ನು ಮಾಡಿಕೊಂಡಿರುವ ವರ್ತಮಾನ ಮುಘಲ್ ದಂಡನಾಯಕರಿಗೆ ಬಂದಿತ್ತು. ಈ ಬಗ್ಗೆ ವರದಿ ಮಾಡಿದ ಅಬ್ದುಸ್ ಸಮದ್ ಖಾನ್, ಗುರುದಾಸ್ ನಂಗಲ್ ಕೋಟೆಯನ್ನು ಒಡೆಯಲು ದೊಡ್ಡ ಫಿರಂಗಿಯನ್ನು ಕಳುಹಿಸಿಕೊಡಲು ಸಾಮ್ರಾಟನಿಗೆ ಮನವಿ ಕಳುಹಿಸಿದ. ಸಾಮ್ರಾಟನು ತಕ್ಷಣವೇ ಒಂದು ಶಕ್ತಿಶಾಲಿ ಫಿರಂಗಿಯನ್ನು ರವಾನಿಸಲು ಆಜ್ಞೆ ಮಾಡಿದ.[(9)]

ಯುದ್ಧ ಆರಂಭವಾಗಿ ಒಂದೂವರೆ ತಿಂಗಳು ಕಳೆಯಿತು. ಆದರೆ ಸಿಕ್ಖರು ಜಗ್ಗಲಿಲ್ಲ. ಶರಣಾಗಲಿಲ್ಲ. ಕೋಟೆಯಿಂದ ಪಲಾಯನವಾಗುವ ಪ್ರಯತ್ನವನ್ನೂ ಮಾಡಲಿಲ್ಲ. ಸಾಮ್ರಾಟನು ಮೇ 14 ರಂದು ಲಖಿ ಜಂಗಲ್‌ನ ನಾಯಕ ಖಾನ್ ಮಾಂಜ್‌ಗೆ ತನ್ನ ಸೇನೆಯ ಜೊತೆ ಗುರುದಾಸ್ ನಂಗಲ್‌ಗೆ ತೆರಳಲು ಆದೇಶ ನೀಡಿದ. ಹಾಗೆಯೇ ಲಾಹೋರ್ ಪ್ರಾಂತ್ಯದ ಎಲ್ಲ ಮಾನ್ಸಾಬ್‌ದಾರರಿಗೆ ಮತ್ತು ಜಾಗೀರುದಾರರಿಗೆ ಅಬ್ದುಸ್ ಸಮದ್ ಖಾನ್‌ನನ್ನು ಕೂಡಿಕೊಳ್ಳಲು ಆದೇಶ ಹೊರಡಿಸಲು ಸಫ್ಜಿ ಖಾನ್‌ಗೆ ಸಾಮ್ರಾಟನು ಮೇ 21 ರಂದು ಸೂಚಿಸಿದ. ಯಾರಾದರೂ ನಿರಾಕರಿಸಿದರೆ ಅಂತಹವರ ಆಸ್ತಿಯನ್ನು ಮುಟ್ಟುಗೋಲು ಹಾಕಲು ಆಜ್ಞಾಪಿಸಿದ.[(10)] ಸಿಕ್ಖರ ವಿರುದ್ಧ ಹೋರಾಡಲು ಆಜ್ಞೆ ಮಾಡದೇ ಇದ್ದ ಒಬ್ಬ ಅಧಿಕಾರಿಯೂ ಇರಲಿಲ್ಲ. ಮೇ 24ರ ವೇಳೆಗೆ ಗುರುದಾಸ್ ನಂಗಲ್‌ನಲ್ಲಿ ಸೇರಿದ ಸೈನ್ಯದ ವಿವರ ಹೀಗಿತ್ತು– ಅಬ್ದುಸ್ ಸಮದ್ ಖಾನ್‌ನ 24 ಸಾವಿರ ಸೈನಿಕರು, ಸರ್ಹಿಂದ್ ನಿಂದ 5 ಸಾವಿರ ಸೈನಿಕರು, ಲಾಹೋರ್‌ನಿಂದ 10ಸಾವಿರ ಸೈನಿಕರು, ಜಮ್ಮುವಿನಿಂದ 5ಸಾವಿರ ಸೈನಿಕರು, ಪಂಜಾಬಿನ ಬೇರೆ ಬೇರೆ ಫೌಜುದಾರರ ಒಟ್ಟು 20 ಸಾವಿರ ಸೈನಿಕರು– ಇವರೆಲ್ಲ ಕೋಟೆಗೆ ಮುತ್ತಿಗೆ ಹಾಕಿದ್ದರು. ಇದಲ್ಲದೆ ಕಮರುದ್ದೀನ್ ನೇತೃತ್ವದಲ್ಲಿ ಗುರುದಾಸ್ ನಂಗಲ್‌ಗೆ ಹೊರಡಲು ಒಂದು ಸಾವಿರ ಸೈನಿಕರ ಪಡೆ ದೆಹಲಿಯಲ್ಲಿ ಸಜ್ಜುಗೊಂಡಿತ್ತು.

ಈಗ ಮುಘಲ್ ಸೇನೆಯು ಕಾಡನ್ನು ತೆರವುಗೊಳಿಸಲು ಒಂದು ಸಾವಿರ ಮರಕಡಿಯುವವರನ್ನು, ಅಷ್ಟೇ ಸಂಖ್ಯೆಯ ಬಡಗಿಗಳನ್ನು ಕೆಲಸಕ್ಕೆ ಹಚ್ಚಿತು. ಅಪಾರ ಸಂಖ್ಯೆಯ ಮರ ಕಡಿಯಲಾಯಿತು. ಅವುಗಳನ್ನು ಸಾಗಿಸಲು ಒಂಟೆಗಳು ಎಳೆಯುವ 200 ಗಾಡಿಗಳನ್ನು ತರಿಸಲಾಯಿತು. ಕಾಡನ್ನು ತೆರವುಗೊಳಿಸಿದ ನಂತರ ಸಿಕ್ಖರು ತಪ್ಪಿಸಿಕೊಳ್ಳದಂತೆ ಕೋಟೆಯ ಸುತ್ತಲೂ ಕಂದಕವನ್ನು ತೋಡಲಾಯಿತು.[(11)]

ಈಗ ಜೂನ್ ತಿಂಗಳ ಮಧ್ಯಭಾಗ. ಎರಡೂವರೆ ತಿಂಗಳಿನಿಂದ ಸಿಕ್ಖರು ಕೋಟೆಯಲ್ಲಿ ಬಂಧಿಯಾಗಿದ್ದರು. ಆ ಸಮಯದಲ್ಲಿ ಆರಿಫ಼ ಖಾನನ ಶಿಬಿರದಲ್ಲಿದ್ದ, ಇಬ್ರತ್‌ನಾಮ ಬರೆದಿರುವ ಮಹಮದ್ ಕಾಸಿಂ ಅಲ್ಲಿನ ಪರಿಸ್ಥಿತಿಯನ್ನು ಹೀಗೆ ವರ್ಣಿಸಿದ್ದಾನೆ– "ಸುಮಾರು 40–50 ಸಿಕ್ಖರು ತಂಡಗಳಲ್ಲಿ ಆಹಾರ ಮತ್ತು ನೀರನ್ನು ತೆಗೆದುಕೊಂಡು ಹೋಗಲು ಕೋಟೆಯಿಂದ ಹೊರಬರುತ್ತಿದ್ದರು.

ಮುಘಲ್ ಸೈನಿಕರು ಅವರನ್ನು ತಡೆಯಲು ಯತ್ನಿಸುತ್ತಿದ್ದರು. ಆಗ ಕೋಟೆಯ ಒಳಗಡೆಯಿಂದ ನುಗ್ಗಿ ಬರುತ್ತಿದ್ದ ಬಾಣ ಮತ್ತು ಗುಂಡುಗಳ ಹೆಚ್ಚಿನ ಸಂಖ್ಯೆಯಲ್ಲಿ ಮುಘಲ್ ಸೈನಿಕರನ್ನು ಕೊಲ್ಲುತ್ತಿದ್ದವು. ಸಿಕ್ಖರ ಸನಿಹಕ್ಕೆ ಹೋದ ಮುಘಲ್ ಸೈನಿಕರು ಸಿಕ್ಖರ ಖಡ್ಗಗಳಿಗೆ ಆಹುತಿಯಾಗುತ್ತಿದ್ದರು."[12] ಮುಂದುವರೆದು ಮಹಮದ್ ಕಾಸಿಂ ಹೀಗೆ ಬರೆಯುತ್ತಾನೆ– " ಈ ದೇವರೆ ಹೇಗಾದರೂ ಬಂದಾ ಸಿಂಗ್ ತಪ್ಪಿಸಿಕೊಂಡು ಹೋಗಲಿ, ನಮ್ಮ ಜೀವಗಳಾದರೂ ಉಳಿದಾವು" ಎಂದು ಮುಘಲ್ ಸೈನಿಕರು ಮೊರೆಯಿಡುತ್ತಿದ್ದರು.

ಮುಘಲ್ ಸೈನಿಕರ ಭಯ ಭೀತಿಯನ್ನು ಖಾಫಿ ಖಾನ್ ವಿವರಿಸಿರುವುದು ಹೀಗೆ– "ಕೋಟೆಯಿಂದ ಒಂದು ಬೆಕ್ಕು ಅಥವಾ ನಾಯಿ ಹೊರಬಂದರೆ ಅದು ಯಕ್ಷಿಣಿಯ ಒಂದು ರೀತಿಯೇ ಇರಬೇಕೆಂದು ಮುಘಲ್ ಸೈನಿಕರು ಬಾಣ ಅಥವಾ ಗುಂಡಿನಿಂದ ಸಾಯಿಸುತ್ತಿದ್ದರು." (ಬಂದಾ ಸಿಂಗ್‌ಗೆ ಯಕ್ಷಿಣಿ ವಿದ್ಯೆ ತಿಳಿದಿದೆಯೆಂದು ನಂಬಿದ್ದ ಮುಘಲರು ಅವನು ಬೆಕ್ಕು ಅಥವಾ ನಾಯಿ ವೇಶದಲ್ಲಿ ಬರಬಹುದೆಂದು ಭಾವಿಸಿದ್ದರು)

ಕೋಟೆಗೆ ಮುತ್ತಿಗೆ ಹಾಕಿ ಎರಡು ತಿಂಗಳು ಕಳೆದರೂ ಬಂದಾ ಸಿಂಗ್ ಬಹದ್ದೂರನನ್ನು ಬಂಧಿಸಲು ವಿಫಲವಾಗಿರುವುದಕ್ಕೆ ಸಾಮ್ರಾಟನು ತನ್ನ ಸಿಟ್ಟನ್ನು ತೋಡಿಕೊಂಡು ಅಬ್ದುಸ್ ಸಮದ್ ಖಾನ್‌ಗೆ ಪತ್ರ ಬರೆದ. ಗುರುದಾಸ್ ನಂಗಲ್‌ಗೆ ತಕ್ಷಣವೇ ತನ್ನ ಸೇನೆಯೊಡನೆ ಹೊರಡಲು ಕಮರುದ್ದೀನ್‌ಗೆ ಅಪ್ಪಣೆ ಮಾಡಿದ. ಕೆಲವೇ ದಿನಗಳಲ್ಲಿ ಅಲ್ಲಿಗೆ ತಲುಪಿದ ಕಮರುದ್ದೀನ್ ಕೋಟೆಯ ಪೂರ್ವಭಾಗದಲ್ಲಿ ತನ್ನ ಶಿಬಿರವನ್ನು ಸ್ಥಾಪಿಸಿದ.

ಈಗ ಸಿಕ್ಖರು ಬಹುದೊಡ್ಡ ಬಿಕ್ಕಟ್ಟಿಗೆ ಸಿಲುಕಿದ್ದರು. ಬೃಹತ್ ಸೇನೆ ತಮ್ಮನ್ನು ಸುತ್ತುವರೆದಿದ್ದರಿಂದ ಅವರು ಅಸಹಾಯಕರಾದರು. ನಿರುತ್ಸಾಹಿಗಳಾದರು. ತಮಗೆ ಆಹಾರ ಮತ್ತು ನೀರು ಹಾಗೂ ಕುದುರೆಗಳಿಗೆ ಮೇವು ತಾರದಂತಹ ಸ್ಥಿತಿ ತಲುಪಿದರು. ಹೊರಹೋಗಲು ಮಾಡುವ ಪ್ರಯತ್ನ ಸಾವಿನಲ್ಲಿ ಅಂತ್ಯವಾಗುತ್ತಿತ್ತು. ಹೊರಹೋಗುವ ವಿಫಲ ಪ್ರಯತ್ನದಲ್ಲಿ ಸುಮಾರು ಇನ್ನೂರು ಸಿಕ್ಖರು ಬಲಿಯಾದರು. ಹೀಗಾಗಿ ಕೋಟೆಯ ಒಳಗಡೆ ಅವರ ಸಂಖ್ಯೆ ಐದುನೂರನ್ನು ಮೀರದಂತಾಯಿತು.

ಸಿಕ್ಖರ ತಲೆಯನ್ನು ತಂದೊಪ್ಪಿಸಿದವರಿಗೆ, ತಲೆಗೆ ಹತ್ತು ರೂಪಾಯಿ ಇನಾಮು ಕೊಡುವುದಾಗಿ 1715ರ ಜೂನ್‌ನಲ್ಲಿ ಅಬ್ದುಸ್ ಸಮದ್ ಖಾನ್ ಘೋಷಿಸಿದ. ಹತ್ತು ರೂಪಾಯಿ ಆ ಕಾಲಕ್ಕೆ ಸೈನಿಕನೊಬ್ಬನ ಎರಡೂವರೆ ತಿಂಗಳ ವೇತನ. ಇದು ಕೆಲವು ಮುಘಲ್ ಸೈನಿಕರನ್ನು ತಮ್ಮ ಅದೃಷ್ಟ ಪರೀಕ್ಷೆ ಮಾಡಲು ಪ್ರೇರೇಪಿಸಿತು. ಅವರು ಅಪಾಯ ಎದುರು ಹಾಕಿಕೊಂಡು ಸಿಕ್ಖರ ಬೇಟೆಯಾಡಿದರು. ಕೆಲವರು ಯಶಸ್ಸು ಕಂಡರು. ಹಲವರು ಜೀವತೆತ್ತರು.

ನಾನಕ್ ಆರಾಧಕರಾದ ವಂಜಾರರು[13], ರಾಜ ದಯಾ ಧಮ್ಮ[14] ಮತ್ತು ರಾಜ ಹೀರ್ ಚಂದ್[15]ನ ಸಾಮ್ರಾಜ್ಯದಲ್ಲಿ ಅಂದರೆ ಕಂಗ್ರ ಮತ್ತು ನುರ್ಪುರ್ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆಂಬ ಸುದ್ದಿಯನ್ನು ಜುಲೈ 3ರಂದು ಸಾಮ್ರಾಟನಿಗೆ ತಿಳಿಸಿದರು. ವಂಜಾರರು ಬಂದಾ ಸಿಂಗ್‌ಗೆ ಆಹಾರ ಧಾನ್ಯ, ಬಾಣ, ರೈಫಲ್‌ಗಳನ್ನು ನೀಡುತ್ತಾ ಗುಪ್ತ ಮಾಹಿತಿಯನ್ನು ರವಾನಿಸುತ್ತಿದ್ದಾರೆಂದು ತಿಳಿಸಿದರು. ವಂಜಾರರು ತಮ್ಮ ಕ್ಷೇತ್ರವನ್ನು ಪ್ರವೇಶಿಸದಂತೆ ಬೆಟ್ಟ ಸಾಲಿನ ರಾಜರುಗಳಿಗೆ ಪತ್ರ ಬರೆಯಲು ಸಾಮ್ರಾಟನನ್ನು ಕೋರಲಾಯಿತು. ಈ ಕ್ರಮದಿಂದ ಬಂಡುಕೋರರ ಸಂಚಾರ ನಿಂತು ಅವರಿಗೆ

ಪೂರೈಕೆಯಾಗುವ ಆಹಾರ ಧಾನ್ಯ ನಿಲ್ಲುತ್ತದೆ[16] ಎಂಬುದು ಕೋರಿಕೆಯ ಹಿಂದಿನ ಉದ್ದೇಶ.

ಬಂದಾ ಸಿಂಗ್ ವಿರುದ್ಧದ ಆಂದೋಲನದಲ್ಲಿ ಕಟೋಚ್ ರಾಜ ಹಮೀರ್ ಚಂದ್ ಕಾಂಬೋಜ್, ನುರ್ಪುರದ ದಯಾಧಮ್ಮ, ರಾಮ್ ಸಿಂಗ್ ಜಾಮ್ವಾಲ್, ದೇಬ್ ಚಂದ್ ದೆಹ್ಲುವಾಲ ತಮ್ಮ ಸೇನೆಯೊಡನೆ ಅಬ್ದುಸ್ ಸಮದ್ ಖಾನ್ ಬಳಿ ಬಂದರು. ಅದೇ ರೀತಿ, ಸಿಬಿಯಾದ ಉದಯ ಸಿಂಗ್, ಲೋಕದ ದಲೀಪ್ ಸಿಂಗ್ ತಮ್ಮ ಸೇನೆಯನ್ನು ಕಳುಹಿಸಿದರು. ಆದರೆ ಮಂಡಿಯ ಮದನ್ ಸೇನ್ ಕುಲ್ಲುವಿನ ಮಾನ್‌ಸಿಂಗ್ ಮತ್ತೆ ಮಲಬಾರ್‌ನ ಹೀರಜ್‌ಪಾಲ್[17] ತಮ್ಮ ಸೇನೆಯನ್ನು ಕಳುಹಿಸಲಿಲ್ಲ. ಈ ಕೊನೆಯ ಮೂವರು ಬಾಬಾ ಬಂದಾ ಸಿಂಗ್ ಜೊತೆ ಮೈತ್ರಿಯಿಂದಿದ್ದರು. ಇವರ ಮೇಲೆ ಕ್ರಮ ತೆಗೆದುಕೊಳ್ಳಲು ಸಾಮ್ರಾಟನು ಇತ್ಮದ್–ಉಲ್–ದೌಲಗೆ ಸೂಚನೆ ನೀಡಿದ.

**ಕೋಟೆಯ ಒಳಗಡೆ ಬಂದಾ ಸಿಂಗ್ ಮತ್ತು ಸಿಕ್ಖರು:** 1715ರ ಜುಲೈನಲ್ಲಿ ಮುಂಗಾರು ಮಳೆಯು ಮುಘಲರ ಚಟುವಟಿಕೆಗಳಿಗೆ ತಡೆಯೊಡ್ಡಿತು. ಆದರೂ ಮುಘಲ್ ಸೇನೆ ತನ್ನ ಮುತ್ತಿಗೆಯನ್ನು ಸಡಿಲಿಸಲಿಲ್ಲ. ಅದೇ ರೀತಿ ಈ ಮುತ್ತಿಗೆಯಿಂದ ಪಾರಾಗಲು ಸಿಖ್ ಸೈನಿಕರು ಸಹ ಪ್ರಯತ್ನಿಸಲಿಲ್ಲ. ಬೇಸಗೆಯಿದ ಮಳೆಗಾಲದವರೆಗೆ ನಾಲ್ಕು ತಿಂಗಳ ಕಾಲ ತಪ್ಪಿಸಿಕೊಳ್ಳುವ ಯಾವ ಉಪಾಯವನ್ನೂ ಮಾಡಲಿಲ್ಲ. ಸುಮ್ಮನೆ ಕುಳಿತರು. ಮುತಿಗೆಯನ್ನು ಶತ್ರು ಸೈನಿಕರು ಸಡಿಸುವದಿಲ್ಲ ಮತ್ತು ತಮಗೆ ಆಹಾರ ನೀರಿನ ಅಭಾವ ಎದುರಾಗುತ್ತದೆಂಉದನ್ನು ಮನಗಂಡಿದ್ದರು.

ಕೋಟೆಯ ಒಳಗಡೆ, ಆಹಾರದ ಅಭಾವ ಇದ್ದುದರಿಂದ, ಸಿಕ್ಖರು ಎಲ್ಲ ಹುಲ್ಲನ್ನು, ಒಣ ಎಲೆಗಳನ್ನು ತಿಂದರು. ಅನೇಕರು ಅತಿಸಾರ ಮತ್ತು ಇತರ ರೋಗಗಳಿಗೆ ಬಲಿಯಾದರು. ಕೆಲವರು ಮರದ ತೊಗಟೆಯನ್ನು ಪುಡಿಮಾಡಿ ಬೇಯಿಸಿ ತಿಂದರು. ಹಸಿವಿನಿಂದ ಪಾರಾಗಲು ಕೆಲವರು ತಮ್ಮ ತೊಡೆಯ ಮಾಂಸವನ್ನೇ ಕತ್ತರಿಸಿ ಬೇಯಿಸಿ ತಿಂದರು.

ಚಳಿಗಾಲ ಆರಂಭವಾದ ಸಮಯದಲ್ಲೂ ಈ ದಿಗ್ಬಂಧನದಿಂದ ಪಾರಾಗಲು ಸಿಕ್ಖರು ಪ್ರಯತ್ನಿಸಲಿಲ್ಲ. ಅವರಿಗೆ ಎರಡು ಆಯ್ಕೆಗಳಿದ್ದವು. ಒಂದು ಕೋಟೆಯಿಂದ ಹೊರಹೋಗಿ ಮುಘಲರ ಸೈನ್ಯವನ್ನು ಸೇಳಿ ತಪ್ಪಿಸಿಕೊಳ್ಳುವುದು ಇಲ್ಲವೇ ಹುತಾತ್ಮರಾಗುವುದು ಎರಡನೆಯದು ಕೋಟೆಯಲ್ಲಿಯೇ ಉಳಿದು ಹಸಿವಿನಿಂದ ಸಾಯುವುದು ಇಲ್ಲ ಸೆರೆಯಾಗಿ ನಂತರ ಸಾಯುವುದು. ಹೀಗೆ ಬಂದಾ ಸಿಂಗ್ ಸುಮ್ಮನೆ ಎಂಟು ತಿಂಗಳು ಕಾಯ್ದ. ದುರಂತದ ಸಮಯ ಬಂದೇ ಬಂತು.

**ಬಂದಾ ಸಿಂಗ್ ಮತ್ತವನ ಸಂಗಾತಿಗಳ ಸೆರೆ**

ಡಿಸೆಂಬರ್ ಮೊದಲ ವಾರದಲ್ಲಿ ಕೋಟೆಯಿಂದ ಹೊರಬರಲು ಒಬ್ಬ ಸಿಖ್ ಸೈನಿಕನೂ ಪ್ರಯತ್ನಪಡಲಿಲ್ಲ. ಅಥವಾ ಕೋಟೆಯ ಗೋಡೆಯಿಂದ ಯಾವ ಆಯುಧ ಪ್ರಯೋಗವೂ ನಡೆಯಲಿಲ್ಲ. ಉಳಿದಿರುವ ಸಿಕ್ಖರು ಕೋಟೆಯನ್ನು ತೊರೆದಿರಬೇಕು ಇಲ್ಲವೇ ಎಲ್ಲರೂ ಸತ್ತು ಹೋಗಿರಬೇಕೆಂದು ಮುಘಲ್ ಸೇನೆ ಭಾವಿಸಿತು; ಆದರೂ ಕೋಟೆಯ ಪ್ರವೇಶಕ್ಕೆ ಹಿಂದೆಗೆಯಿತು. 1715ರ ಡಿಸೆಂಬರ್ 7ರಂದು ಮುಘಲ್ ಸೇನೆಯ ಕೆಲವು ಅತುಲ ಪರಾಕ್ರಮಿ ಸೈನಿಕರನ್ನು ಕೋಟೆಯ ಬಾಗಿಲಿನ ಹತ್ತಿರಕ್ಕೆ ಕಳುಹಿಸಿತು. ಯಾವುದೇ ವಿರೋಧ ಎದುರಿಸದೆಯೇ ಸೈನಿಕರು ಕೋಟೆಯ ಬಾಗಿಲಿಗೆ ಬಂದರು. ಸನ್ನಿವೇಶವು ಸಿಕ್ಖರು ಸತ್ತಿರಬೇಕು ಇಲ್ಲವೇ ಪರಾರಿಯಾಗಿರಬೇಕು ಎಂಬ ಅವರ ಆಲೋಚನೆಗೆ ತಕ್ಕಂತಿತ್ತು. ಸೈನಿಕರು ಪ್ರತಿರೋಧವಿಲ್ಲದೆ ಕೋಟೆಯ ಬಾಗಿಲನ್ನು ಸಮೀಪಿಸಿದ

ತಕ್ಷಣವೇ ಹಿಂದಿದ್ದ ಮುಘಲ್ ಸೇನೆ ಹುರುಪಿನಿಂದ ಮುನ್ನುಗ್ಗಿ ಬಾಗಿಲುಗಳನ್ನು ಮುರಿದು ಕೋಟೆಯನ್ನು ಪ್ರವೇಶಿಸಿತು.

ಅಲ್ಲಿ ಪ್ರತಿರೋಧಿಸುವವರು ಇರಲಿಲ್ಲ. ಕೋಟೆಯಲ್ಲಿ ಮೂರರಿಂದ ನಾಲ್ಕು ನೂರು ಕೃಶರಾದ, ಹಸಿವಿನಿಂದ ಕಂಗೆಟ್ಟ ಸಿಖ್ ಯೋಧರು ಕಂಡರು. ಅವರನ್ನು ತಕ್ಷಣವೇ ಮುಘಲ್ ಸೈನಿಕರು ಬಂಧಿಸತೊಡಗಿದರು. ಸ್ವಲ್ಪ ವಿರೋಧ ತೋರಿದರೂ, ಸಂಹರಿಸುತ್ತಿದ್ದರು. ಸುಮಾರು ಅರ್ಧದಷ್ಟು ಸಿಕ್ಖರು ಹಾಗೆ ಹತರಾದರು. ಸತ್ತ ಸಿಖ್ ಸೈನಿಕರ ಸುತ್ತ ರಕ್ತದ ಮಡು ಹೆಪ್ಪುಗಟ್ಟಿತು.

ಆದರೆ ಮಹಮ್ಮದ್ ಕಾಸಿಂ ತನ್ನ *ಇಬ್ರತ್‌ನಾಮಾದಲ್ಲಿ* ಬೇರೊಂದು ವಿವರವನ್ನು ಕೊಡುತ್ತಾನೆ– "ದುರ್ವಾಸನೆ ಮತ್ತು ಹಸಿವಿನಿಂದಾಗಿ ಕಂಗೆಟ್ಟ ಸಿಕ್ಖರು (ಎದುರು ಬಂದು ಮುಘಲ್ ಸೈನಿಕರಿಂದ)ತಮ್ಮನ್ನು ಸಾಯಿಸುವುದಿಲ್ಲವೆಂಬ ಅಭಯ ಪಡೆದು ಸ್ವಯಂ ಪ್ರೇರಣೆಯಿಂದ ಬಂಧನಕ್ಕೊಳಗಾದರು." ಇದನ್ನೇ ಮಿರ್ಜಾ ಮಹಮ್ಮದ್ ಸಹ ಒಪ್ಪುತ್ತಾನೆ. ಅತ ಬರೆಯುತ್ತಾನೆ– "ತಮ್ಮನ್ನು ಮುಕ್ತವಾಗಿ ಹೊರಹೋಗಲು ಬಿಟ್ಟರೆ ದೊಡ್ಡ ಮೊತ್ತವನ್ನು ರುಷುವತ್ತಾಗಿ ಮಹಮ್ಮದ್ ಅಮೀನ್ ಖಾನ್‌ಗೆ ನೀಡಲು ಸಿಕ್ಖರು ಮುಂದೆ ಬಂದರು. ಆದರೆ ಖಾನ್ ಅದಕ್ಕೆ ಒಪ್ಪದಿದ್ದಾಗ ಅವರು ತಮ್ಮನ್ನು ಕೊಲ್ಲದೆ ಸಾಮ್ರಾಟನ ಮುಂದೆ ಹಾಜರುಪಡಿಸುವಂತೆ ಮತ್ತು ಸಾಮ್ರಾಟ ನೀಡುವ ಶಿಕ್ಷೆಯನ್ನು ಅಂಗೀಕರಿಸುವ ಷರತ್ತಿನ ಮೇಲೆ ಬಂಧಿಸುವಂತೆ ಕೋರಿದರು.[19]

ಇವೆರಡೂ ಕಟ್ಟುಕತೆಗಳೇ! ಯಾವುದೇ ಸಿಖ್ ಸೈನಿಕ ಕೋಟೆಯ ಬಾಗಿಲಿನಿಂದ ಆಚೆಗೆ ತನ್ನ ತಲೆಯನ್ನು ತೋರಿಸಿದರೆ, ಬಾಣವೋ, ಗುಂಡೋ ನಿಶ್ಚಯವಾಗಿ ತಗಲುವುದು ಅವರಿಗೆ ತಿಳಿದಿತ್ತು. ಹಾಗಾಗಿ ಬಂಧನಕ್ಕೊಳಗಾಗುವ ಪ್ರಶ್ನೆಯೇ ಏಳುವುದಿಲ್ಲ. ಎರಡನೆಯದಾಗಿ ಸಿಕ್ಖರ ಬಳಿ ರುಷುವತ್ತು ನೀಡಲು ಹಣವೇ ಇರಲಿಲ್ಲ. ಅವರ ಬಳಿ ಇದ್ದದ್ದು 600 ರೂಪಾಯಿ 23 ಮೊಹರು[20] ಮಾತ್ರ. ಮೂರನೆಯದಾಗಿ ಸಿಕ್ಖರು ಶರಣಾಗಬಯಸಿದ್ದರೆ, ಅವರು ಕೈ ಮೇಲೆತ್ತಿ ಅಥವಾ ಬಿಳಿಯ ಬಾವುಟ ತೋರಿ ಅಥವಾ ಶರಣಾಗತಿಯ ಯಾವುದಾದರೊಂದು ವಿಧಾನದಲ್ಲಿ ಬರುತ್ತಿದ್ದರು. ನಾಲ್ಕನೆಯದಾಗಿ ಮುಘಲರು ಸಿಕ್ಖರ ಪ್ರಸ್ತಾವವನ್ನು ಅಂಗೀಕರಿಸಿದ್ದರೆ ಅರ್ಧದಷ್ಟು ಸಿಕ್ಖರನ್ನು ಕೊಲ್ಲುತ್ತಿರಲಿಲ್ಲ. ಅದೂ ಅವರು ಶರಣಾದ ನಂತರ? ಐದನೆಯದಾಗಿ ತಮ್ಮನ್ನು ನಾಶಪಡಿಸಲು ಪಣ ತೊಟ್ಟಿರುವ ಸಾಮ್ರಾಟನ ಹತ್ತಿರ ಯಾವ ಗತಿ ಬರಬಹುದೆಂಬ ಕಲ್ಪನೆಯಿದ್ದ ಸಿಕ್ಖರು, ತಮ್ಮ ಅದೃಷ್ಟ ಪರೀಕ್ಷೆಗೆ ಆತನ ಮುಂದೆ ಹಾಜರಪಡಿಸಲು ಕೋರಿಕೊಳ್ಳುವುದಾದರೂ ಹೇಗೆ? ಹಾಗಾಗಿ ಇದು ಮುಘಲರ ಅಪಪ್ರಚಾರ. ನಿಜ ಏನೆಂದರೆ, ಕೋಟೆಯಲ್ಲಿದ್ದ ಸಿಕ್ಖರು ದೀರ್ಘಕಾಲದ ಹಸಿವೆಯಿಂದ ದುರ್ಬಲವಾಗಿ ನಡೆಯಲೂ ನಿತ್ರಾಣರಾಗಿದ್ದರು. ಸಿಕ್ಖರ ಯಾವ ಚಲನವಲನವೂ ಬಹಳಷ್ಟು ದಿನ ಕಾಣಿಸಿಕೊಳ್ಳದ ಕಾರಣ ಒಳ ನುಗ್ಗಿದ ಮುಘಲರು ನಿತ್ರಾಣರಾದ, ಅರೆಸತ್ತ ಸಿಕ್ಖರನ್ನು ಬಂಧಿಸಿದರು.

ಮಹಮ್ಮದ್ ಔರಂಗಾಬಾದಿಯು ಬಾಬಾ ಬಂದಾ ಸಿಂಗ್ ಮತ್ತು ಇತರರ ಬಂಧನದ ಸತ್ಯವಾದ ವಿವರಗಳನ್ನು ನೀಡುತ್ತಾನೆ. ಆತ ಹೇಳುತ್ತಾನೆ "ಅನೇಕ ದಿನಗಳ ಕಾಲ ಕೋಟೆಯ ಒಳಗಡೆ ಯಾವುದೇ ಚಲನವಲನವನ್ನು ಕಾಣದ ಮುಘಲರ ಸೇನೆಯು ಕೆಲವು ಸೈನಿಕರು ಏಣಿಯನ್ನು ಬಳಸಿ ಗೋಡೆಯನ್ನು ಹತ್ತಿ, ಕೋಟೆಯ ಮೇಲ್ಭಾಗ ಏರಿದರು. ಕೋಟೆಗೆ ನುಗ್ಗಿದರು. ಕೋಟೆಯ ಒಳಗಡೆ ಹಸಿವು ಮತ್ತು ಇತರೆ ಸಂಕಷ್ಟಗಳಿಂದ ಸಿಕ್ಖರ ಅಂಗಗಳು ಕೆಲಸ ಮಾಡದಷ್ಟು

ಶಕ್ತಿಹೀನವಾಗಿದ್ದವು. ಅಂಗಗಳ ಚಲನೆಯೇ ನಿಂತು ಹೋಗಿತ್ತು. ಅವರಿಗೆ ಹೋರಾಡುವ ಶಕ್ತಿ ಇರಲಿ, ಖಡ್ಗವನ್ನು ಹಿಡಿಯಲು ಸಹ ತ್ರಾಣವಿರಲಿಲ್ಲ. ಒಂದು ಪದವನ್ನು ಉಚ್ಚರಿಸದಷ್ಟು ಅವರು ನಿಶ್ಯಕ್ತರಾಗಿದ್ದರು." ಹಾಗಾಗಿ ಬಂದಾ ಸಿಂಗ್ ಮತ್ತು ಸಿಕ್ಖರು ಶರಣಾಗತರಾದರು ಎಂದು ಹೇಳುವುದು ನಿರಾಧಾರವಾದುದು.

**ಬಂದಾ ಸಿಂಗ್‌ಗೆ ತಕ್ಷಣವೇ ಸಂಕೋಲೆ ತೊಡಿಸಿದ್ದು**

ಬಹುತೇಕ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಬಂದಾ ಸಿಂಗ್‌ನನ್ನು ಗುರುತಿಸಿದ ತಕ್ಷಣವೇ ಸೈನಿಕರು ಅವನನ್ನು ಕಬ್ಬಿಣದ ಸಂಕೋಲೆಯಿಂದ ಬಿಗಿದರು. ಇತರರನ್ನು ಹಗ್ಗದಲ್ಲಿ ಕಟ್ಟಿದರು. ಮುಘಲ್ ಸೇನೆಯ ಬಿಗಿಕಾವಲಿನಲ್ಲಿ ಎಲ್ಲ ಸಿಕ್ಖರನ್ನು ಲಾಹೋರ್‌ಗೆ ಕರೆತರಲಾಯಿತು. ಲಾಹೋರ್‌ನ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಸ್ಥಳೀಯ ಮುಸ್ಲಿಂ ನಿವಾಸಿಗಳು ಕಲ್ಲು, ಇಟ್ಟಿಗೆ, ಕೈಗೆ ಸಿಕ್ಕ ವಸ್ತುಗಳನ್ನು ಅವರತ್ತ ತೂರಿದರು. ಇದರಿಂದ ಹಲವರು ಗಾಯಗೊಂಡರು. ಖೈದಿಗಳ ಮೆರವಣಿಗೆ ಬೈಜಿದ್ ಖಾನ್ ಮನೆಯ ಮುಂದೆ ಹಾದು ಹೋಗುವಾಗ, ಆತನ ತಾಯಿ ದೊಡ್ಡದೊಂದು ಕಲ್ಲನ್ನು ಎತ್ತಿ ಹಾಕಿದಳು. ಇದರಿಂದ ಖೈದಿಗಳಲ್ಲಿ ಒಬ್ಬ ಸತ್ತ.[21] ಈ ಘಟನೆಯ ನಂತರ ನಂತರ ಖೈದಿಗಳ ಮುಖವನ್ನು ಚೀಲದಲ್ಲಿ ಮುಚ್ಚುವಂತೆ ಲಾಹೋರ್‌ನ ರಾಜ್ಯಪಾಲ ಆಜ್ಞಾಪಿಸಿದ.

ಮೆರವಣಿಗೆಯ ನಂತರ ಈ ಖೈದಿಗಳಿಗೆ ಮೂಘಲರ ಸೇನೆಯ ಬಿಗಿ ಉಸ್ತುವಾರಿಯಲ್ಲಿ ಕಬ್ಬಿಣದ ಬಳೆಗಳನ್ನು ತೊಡಿಸಿದರು. ಅವರ ಕಾಲುಗಳಿಗೂ ಸಂಕೋಲೆ ಹಾಕಿದರು. ನಡುವನ್ನು ಹಗ್ಗದಲ್ಲಿ ಬಿಗಿದರು. ಇಬ್ಬರು ಅಥವಾ ಮೂರು ಮಂದಿಯನ್ನು ಒಟ್ಟಿಗೆ ಸೇರಿಸಿ ಕಟ್ಟಿದರು. . ತಂಡದಲ್ಲಿ ಕಟ್ಟಿದ ಅವರುಗಳನ್ನು ಮತ್ತೊಮ್ಮೆ ಬಿಗಿದು ಗಾಡಿಗಳಿಗೆ ಕಟ್ಟಿದರು. ಅಂತಿಮವಾಗಿ ದೊಡ್ಡ ಸೇನೆಯ ಬೆಂಗಾವಲಿನಲ್ಲಿ ಸರ್ಹಿಂದ್ ಮಾರ್ಗವಾಗಿ ಅವರನ್ನು ದೆಹಲಿಗೆ ರವಾನಿಸಲು ನಿರ್ಧರಿಸಲಾಯಿತು. ಇವರ ಬಂಧನದ ಸುದ್ದಿ ಸಾಮ್ರಾಟನನ್ನು 1715ರ ಡಿಸೆಂಬರ್ 12 ರಂದು ತಲುಪಿತ್ತು.

ಗುರುದಾಸ್ ನಂಗಲ್‌ನಲ್ಲಿ ಬಂಧಿಸಲಾದ ಸಿಕ್ಖರ ಸಂಖ್ಯೆ 300 ಮಾತ್ರ. ಬೇರೆ ಬೇರೆ ಸ್ಥಳಗಳಲ್ಲಿ ಬಂಧಿಸಿದ್ದವರನ್ನು ಇವರೊಟ್ಟಿಗೆ ಸೇರಿಸಲಾಯಿತು. ಅದೇ ರೀತಿ ಗುರುದಾಸ್ ನಂಗಲ್‌ನಲ್ಲಿ ಕೊಂದು ಹಾಕಿದ ಸಿಕ್ಖರ ಸಂಖ್ಯೆ ಒಂದೆರಡು ನೂರು. ಈ ಅವಧಿಯಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಸಿಖ್ ಸೈನಿಕರು, ಸಾಮಾನ್ಯ ಸಿಖ್ ಜನರನ್ನು ಕೊಲ್ಲಲಾಗಿತ್ತು. ಗುರುದಾಸ್ ನಂಗಲ್‌ನಲ್ಲಿ ಸತ್ತ ಸೈನಿಕರ ತಲೆಯ ಜೊತೆಯಲ್ಲಿ ಇತರ ಸ್ಥಳಗಳಲ್ಲಿ ಸತ್ತವರ ತಲೆಗಳನ್ನು ಒಟ್ಟಲಾಯಿತು. ಹಾಗಾಗಿ ದೆಹಲಿಯನ್ನು ತಲುಪುವ ವೇಳೆಗೆ ಬಂಧಿತರಾದ ಸಿಕ್ಖರ ಸಂಖ್ಯೆ ಏಳುನೂರಕ್ಕೂ ಹೆಚ್ಚಾದರೆ, ಕತ್ತರಿಸಿದ ತಲೆಗಳ ಸಂಖ್ಯೆ ಎರಡು ಸಾವಿರವನ್ನು ಮೀರಿತ್ತು. ಇವೆಲ್ಲವೂ ಗುರುದಾಸ್ ನಂಗಲ್ ಕೋಟೆಯ ಆಕ್ರಮಣದ ಖಾತೆಗೆ ಜಮಾ ಆದವು. ಸಾಮ್ರಾಟನಿಗೆ ಮತ್ತು ದೆಹಲಿಯ ಜನರಿಗೆ ಅಬ್ದುಸ್ ಸಮದ್ ಖಾನ್ ಅಪಾರ ಪ್ರಮಾಣದ ಸಾಧನೆ ಮಾಡಿದ್ದಾನೆಂದು ಬಿಂಬಿಸಲು ಇದೆಲ್ಲವನ್ನೂ ಮಾಡಲಾಯಿತು.[22]

ಗುರುದಾಸ್ ನಂಗಲ್‌ನಲ್ಲಿ ಮುಘಲರ ಸೇನೆ ಒಂದು ಸಾವಿರ ಖಡ್ಗಗಳನ್ನು, 278 ಗುರಾಣಿಗಳನ್ನು, 173 ಬಿಲ್ಲುಗಳು ಮತ್ತು ಕೆಲವು ಬಾಣಗಳು, 180 ಬಂದೂಕುಗಳು, 114

ಕಠಾರಿಗಳು, 217 ಪಟ್ಟಿಯಿರುವ ಸಿಕ್ಖರ ಖಡ್ಗಗಳು (*ಗಾತ್ರಾ*) ಕೆಲವು ಚಿನ್ನದ ಆಭರಣಗಳು, 23 ಮೊಹರು ಮತ್ತು ಕೇವಲ 600 ರೂಪಾಯಿಗಳನ್ನು ವಶಪಡಿಸಿಕೊಳ್ಳಲಾಯಿತು. ಇವೆಲ್ಲವನ್ನೂ ನಂತರ ದೆಹಲಿಯ ರಾಜಕೋಶಕ್ಕೆ ಸಲ್ಲಿಸಲಾಯಿತು. ಇಷ್ಟೊಂದು ಸಣ್ಣ ಪ್ರಮಾಣದ ಆಯುಧಗಳೊಡನೆ ಸಿಕ್ಖರ ಮುಘಲರ ಬೃಹತ್ ಸೇನೆಯನ್ನು ಎಂಟು ತಿಂಗಳ ಕಾಲ ಎದುರಿಸಿದ್ದು ನಿಜಕ್ಕೂ ಅದ್ಭುತ.

**ಬಂದಾ ಸಿಂಗ್ ಬಂಧನದ ಸಂಭ್ರಮವನ್ನು ಆಚರಿಸಿದ ಫರೂಕ್ ಸಿಯಾರ್**

ಬಂದಾ ಸಿಂಗ್ ಸೆರೆಯಾದ ಸುದ್ದಿಯನ್ನು ಕೇಳಿದ ಸಾಮ್ರಾಟನು ಎರಡು ಬಾರಿ ನಮಾಜು ಮಾಡಿದ. ದೆಹಲಿಯಲ್ಲಿ ಬಂದಾ ಸಿಂಗ್‌ನ ಬಂಧನದ ಸುದ್ದಿಯನ್ನು ಘೋಷಿಸಿದ. ಜನರೆಲ್ಲ ಸಂಭ್ರಮವನ್ನು ಆಚರಿಸಲು ಆನೆಯ ಮೇಲೆ ನಾಲ್ಕು ಚೀಲ ನಾಣ್ಯಗಳನ್ನು ತುಂಬಿ ದೆಹಲಿಯ ಬೀದಿಗಳಲ್ಲಿ ಚೆಲ್ಲಿಸಿದ.(23)

ಬಂದಾ ಸಿಂಗ್, ಅವನ ಪತ್ನಿ ಸುಶಿಲ್ ಕೌರ್, ಅವನ ನಾಲ್ಕೂವರೆ ವರ್ಷದ ಮಗ ಅಜಯ್ ಸಿಂಗ್, ಏಳುನೂರು ಜನ ಸಿಖ್ ಖೈದಿಗಳು ಮತ್ತು ಎರಡು ಸಾವಿರ ತರಿದ ತಲೆಗಳ ಮೆರವಣಿಗೆಯನ್ನು, ಅಬ್ದುಸ್ ಸಮದ್ ಖಾನ್‌ನ ಮಗ ಜಕಾರಿಯ ಖಾನ್ ದೆಹಲಿಗೆ ಮುನ್ನಡೆಸಿಕೊಂಡು ಬಂದ. ಸತ್ತ ಸಿಕ್ಖರ ಶವಗಳಿಂದ ಬೇರ್ಪಡಿಸಿದ ತಲೆಗಳನ್ನು ಗಾಡಿಗಳಲ್ಲಿ ಪೇರಿಸಿಡಲಾಗಿತ್ತು. ಎರಡು ಮೂರರಂತೆ, ಖೈದಿಗಳನ್ನು ಕಟ್ಟಿ ಒಂಟೆಯ ಬೆನ್ನ ಮೇಲೆ ಏರಿಸಲಾಗಿತ್ತು. ಸಂಕೋಲೆಯೊಳಗಿದ್ದ ಬಂದಾ ಸಿಂಗ್‌ನನ್ನು ಆನೆಯ ಮೇಲಿರಿಸಿದ್ದ ಪಂಜರದಲ್ಲಿ ಇರಿಸಲಾಗಿತ್ತು. ಪಂಜರದ ಹಿಂದೆ ಬಿಚ್ಚುಗತ್ತಿಯ ಸೈನಿಕನೊಬ್ಬ ಕಾವಲು ಕಾಯುತ್ತಿದ್ದ.(24)

1716ರ ಫೆಬ್ರುವರಿ 27ರಂದದ್ದಿಖ್ ಖೈದಿಗಳ ಈ ಮೆರವಣಿಗೆ ಮೊದಲು ದೆಹಲಿಯ ಹೊರವಲಯದ ಆಗರಾಬಾದ್ ತಲುಪಿತು. ಈ ಖೈದಿಗಳನ್ನು ಕೆಂಪುಕೋಟೆಯ ಹಿಂಭಾಗದಲ್ಲಿರುವ ಸಲೀಂಗಡ ಕೋಟೆಯ ಸೆರೆಮನೆಯಲ್ಲಿ ಇರಿಸುವ ಮೊದಲು ಫೆಬ್ರುವರಿ 29ರಂದು ದೆಹಲಿಯ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.(25)

**ಸಿಖ್ ಖೈದಿಗಳ ಮೆರವಣಿಗೆಯ ದೃಶ್ಯ**

ಸಿಖ್ ಖೈದಿಗಳ ಮೆರವಣಿಗೆಯು ಅಗರಬಾದ್‌ನಿಂದ ಆರಂಭವಾಯಿತು. ಹತ್ತು ಕಿ.ಮೀ. ಸಾಗಿ ಲಾಲ್ ಕಿಲಾ (ಕೆಂಪು ಕೋಟೆ) ತಲುಪಿತು. ಮೆರವಣಿಗೆಯ ಮುಂದೆ ಸಂಗೀತ ತಂಡ ವಾದ್ಯ ನುಡಿಸುತ್ತಾ ಸಾಗಿತ್ತು. ತಂಡದ ಹಿಂದೆ ಸಿಕ್ಖರ ರುಂಡಗಳಿದ್ದ ಗಾಡಿಗಳು. ಹೊಟ್ಟನ್ನು ತುಂಬಿದ್ದ ತಲೆಗಳನ್ನು ಬಿದಿರಿನ ಕೋಲಿಗೆ ಸಿಕ್ಕಿಸಲಾಗಿತ್ತು. ಅವರು ಸಿಕ್ಖರೇ ಎಂದು ಜನರಿಗೆ ಖಚಿತವಾಗಲು ತಲೆಯಲ್ಲಿನ ನೀಳ ಕೂದಲನ್ನು ಹಾರಿ ಬಿಡಲಾಗಿತ್ತು.

ಈ ತಲೆಗಳ ಹಿಂದೆ ಉದ್ದನೆಯ ಗಳುವಿನ ತುದಿಯಲ್ಲಿ ಸಿಕ್ಕಿಸಿದ ಸತ್ತ ಬೆಕ್ಕನ್ನು ಹಿಡಿದು ಸೈನಿಕನೊಬ್ಬ ನಡೆಯುತ್ತಿದ್ದ. ಸಿಕ್ಖರ ಮನೆಗಳಲ್ಲಿರುವ ಮನುಷ್ಯರನ್ನು ಮಾತ್ರವಲ್ಲ ಯಾವುದೇ ಪ್ರಾಣಿಉನ್ನೂ ಜೀವಂತ ಉಳಿಯಲು ಬಿಟ್ಟಿಲ್ಲವೆಂದು ಬಿಂಬಿಸಲು ಈ ವ್ಯವಸ್ಥೆ ಮಾಡಲಾಗಿತ್ತು.

ಅವನ ಹಿಂದೆ ತನ್ನ ಬೆನ್ನ ಮೇಲಿರಿಸಿದ ಪಂಜರದಲ್ಲಿದ್ದ ಬಂದಾ ಸಿಂಗ್‌ನನ್ನು ಹೊತ್ತು ಆನೆ ಸಾಗುತ್ತಿತ್ತು. ಬಂದಾ ಸಿಂಗ್‌ಗೆ ಅಪಮಾನ ಮಾಡಲು ವಧುವಿನಂತೆ ಆತನನ್ನು ಸಿಂಗರಿಸಲಾಗಿತ್ತು. ದಾಳಿಂಬೆ ಹೂಗಳ ಕಸೂತಿಯಿದ್ದ ರಾಜಕುವರಿಯ ಪೋಷಾಕನ್ನು ತೊಡಿಸಲಾಗಿತ್ತು. 3–4 ಕೆಜಿ

ಮಣ್ಣನ್ನು ತುಂಬಿದ ದೊಡ್ಡ ಮರದ ಪೆಟ್ಟಿಗೆಯನ್ನು ಅವನ ತಲೆಯ ಮೇಲೆ ಹೊರಿಸಲಾಗಿತ್ತು. ಅದರ ಭಾರದಿಂದ ಕುಸಿದ ಆತ ಒಂದು ಪಾರ್ಶ್ವಕ್ಕೆ ಒರಗಿ ನಿಂತ ಭಂಗಿಯಲ್ಲಿದ್ದ.

ಮೆರವಣಿಗೆಯ ಕೊನೆಯಲ್ಲಿದ್ದವರು 740 ಮಂದಿ ಸೆರೆಯಾಳುಗಳು. ಅವರ ಮುಖಕ್ಕೆ ಮಸಿ ಬಳಿಯಲಾಗಿತ್ತು. ಅವರ ಕೈಗಳನ್ನು ಬಿಗಿಯಾಗಿ ಕಟ್ಟಿದ್ದರು. ಕುತ್ತಿಗೆಗೆ ಕಬ್ಬಿಣದ ಬಳೆ ತೊಡಿಸಿದ್ದರು. ಅವರನ್ನು ಅಪಮಾನಗೊಳಿಸಲು ಕಾಗದದ ಕಮಂಗಿ ಟೋಪಿಗಳನ್ನು ತಲೆಗೆ ತೊಡಿಸಿದ್ದರು. ಕುರಿಯ ಚರ್ಮವನ್ನು ಹೊದ್ದಿಸಿದ್ದರು.

ಈ ಮೆರವಣಿಗೆಯು ಲಾಹೋರಿ ಬಾಗಿಲು ಮೂಲಕ ದೆಹಲಿಯನ್ನು ಪ್ರವೇಶಿಸಿತು.[26] ಇದನ್ನು ನೋಡಲು ಇಡೀ ದೆಹಲಿಯ ಜನತೆ ಆಗಮಿಸಿತ್ತು. ಅಂದು ಈ ಮೆರವಣಿಗೆಯನ್ನು ನೋಡದ ಪುರುಷ ವ್ಯಕ್ತಿ ದೆಹಲಿಯಲ್ಲಿರಲಿಲ್ಲ. ಜನರು ನಿಂದಿಸುತ್ತಿದ್ದರು. ಕೆಲವರು ಸಿಳ್ಳೆ ಹಾಕಿ ಗದ್ದಲವೆಬ್ಬಿಸುತ್ತಿದ್ದರು. ಕೆಲವರಂತೂ ತಾವೇ ಯುದ್ಧ ಗೆದ್ದವರ ರೀತಿಯಲ್ಲಿ ಚಪ್ಪಾಳೆ ತಟ್ಟುತ್ತಾ ನರ್ತನ ಮಾಡುತ್ತಿದ್ದರು.

ಆದರೆ ಇತ್ತ ಸಿಕ್ಖರ ಮುಖದಲ್ಲಿ ವಿಷಾದವಾಗಲೀ, ವ್ಯಾಕುಲವಾಗಲೀ ಇರಲಿಲ್ಲ. ಅವರು ಸೋತ ಅಥವಾ ಪತನಗೊಂಡ ಸೈನಿಕರಂತೆ ಕಾಣುತ್ತಿರಲಿಲ್ಲ. ಅವರು ಸ್ತೋತ್ರಗಳನ್ನು ಪಠಿಸುತ್ತಾ, ತಮಗೇನೂ ಆಗಿಯೇ ಇಲ್ಲವೆನ್ನುವ ರೀತಿಯಲ್ಲಿ ವರ್ತಿಸುತ್ತಿದ್ದರು.[27]

ಬಂದಾ ಸಿಂಗ್‌ನನ್ನು ಫರೂಕ್ ಸಿಯಾರ್ ಮುಂದೆ ಹಾಜರುಪಡಿಸಿದಾಗ, ಸಾಮ್ರಾಟ ಬಂದಾ ಸಿಂಗ್‌ನನ್ನು ಉದ್ದೇಶಿಸಿ **"ಯಾವ ರೀತಿಯ ಸಾವನ್ನು ನೀನು ಆಯ್ಕೆ ಮಾಡಿಕೊಳ್ಳುವ"**[28] ಎಂದು ಪ್ರಶ್ನಿಸಿದ. ಅದಕ್ಕೆ ಬಂದಾ ಸಿಂಗ್ **"ಸಾಮ್ರಾಟನು ತನಗೆ ಆಯ್ಕೆ ಮಾಡಿಕೊಳ್ಳುವಂತಹ ಸಾವೇ ನನ್ನದೂ ಸಹ"** ಎಂದನಂತೆ.[29]

ಸಿಕ್ಖರ ಮುಖಗಳನ್ನು ನೋಡಿದಾಗ ಫರೂಕ್ ಸಿಯಾರ್ ಭಯವಿಹ್ವಲಗೊಂಡನೆಂದು ಔರಂಗಾಬಾದಿ ಬರೆಯುತ್ತಾನೆ. ಸಿಕ್ಖರ ಮುಖದಲ್ಲಿ ಭಯಪಡಿಸುವ, ಸಿಡಿಲಿನಂತಹ ನೋಟವಿತ್ತು. ಇನ್ನಷ್ಟು ದಿನಗಳ ಕಾಲ ಅವರು ಬದುಕಿದ್ದರೆ, ಅವರನ್ನು ನಿರ್ಮೂಲನ ಮಾಡುವುದು ಸುಲಭದ ಕೆಲಸವಾಗಿರಲಿಲ್ಲ[30] ಎಂದು ಔರಂಗಾಬಾದಿ ಹೇಳುತ್ತಾನೆ.

ಮಾರ್ಚ್ 7ರಂದು ಸಾಮ್ರಾಟನಿಗೆ 16 ಕುದುರೆಗಳನ್ನು ಮುಮ್ತಾಜ್‌ಖಾನ್ ಅಖ್ತರ ಬೇಗಿ ಉಡುಗೊರೆಯಾಗಿ ನೀಡುತ್ತಾನೆ. ಇವುಗಳನ್ನು ಅಬ್ದುಸ್ ಸಮದ್ ಖಾನ್ ಕಳುಹಿಸಿರುತ್ತಾನೆ. ಹದಿನಾರು ಕುದುರೆಗಳಲ್ಲಿ ಒಂಬತ್ತು (ಆರು ಹೆಣ್ಣು ಮೂರು ಗಂಡು) ಕುದುರೆಗಳು ಬಾಬಾ ಬಂದಾ ಸಿಂಗ್‌ಗೆ ಸೇರಿದಂತಹವು.

**ಸಿಖ್ ಖೈದಿಗಳ ಮರಣದಂಡನೆ**

ಸಿಖ್ ಸೈನ್ಯದ ಹದಿನೇಳು ಹಿರಿಯ ನಾಯಕರನ್ನು ಹೊರತುಪಡಿಸಿ ಉಳಿದೆಲ್ಲ ಸಿಖ್ ಖೈದಿಗಳನ್ನು ವಧಿಸಲು[31] 1716ರ ಮಾರ್ಚ್ 5 ರಿಂದ ಸಾಮ್ರಾಟನು ದೆಹಲಿಯ ಪೋಲೀಸ್ ಮುಖ್ಯಸ್ಥ ಸರ್‌ಬ್ರಹ್ ಖಾನ್‌ಗೆ ಆದೇಶ ನೀಡಿದ. ಮುಂದಿನ ಏಳು ದಿನ ಪ್ರತಿದಿನ ನೂರು ಮಂದಿಯಂತೆ ವಧಿಸಲಾಗುತ್ತದೆ. ಅವರನ್ನು ವಧಿಸುವ ಮೊದಲು ಇಸ್ಲಾಂ ಧರ್ಮ ಸ್ವೀಕರಿಸಿದರೆ ಕ್ಷಮಾದಾನ ಇರುವುದನ್ನು ತಿಳಿಸಿರುತ್ತಾರೆ. ಆದರೆ ಯಾರೊಬ್ಬರೂ ಅದನ್ನು ಸ್ವೀಕರಿಸಲು ಒಪ್ಪುವುದಿಲ್ಲ

ಅವರ ತಲೆಯನ್ನು ಕತ್ತರಿಸುವಗ **"ವಾಹೆಗುರು! ವಾಹೇಗುರು!"** ಎಂದು ದೈವಸ್ಮರಣೆ ಮಾಡುತ್ತಾರೆ. ಅಲ್ಲದೆ ತಮ್ಮ ವಧಾಕಾರರನ್ನು **'ಮುಕ್ತ'** (ಭವಬಂಧನದಿಂದ ಬಿಡುಗಡೆ ಮಾಡಿದವರು) ಎಂದು ಸಂಬೋಧಿಸುತ್ತಾರೆ.(32) ಈ ಶಿಕ್ಷೆಯನ್ನು ದೆಹಲಿಯ ಚಾಂದ್ನಿ ಚೌಕದಲ್ಲಿನ ಕೊತ್ವಾಲಿ (ಪೊಲೀಸ್ ಠಾಣೆ) ಮುಂದೆ ಅನುಷ್ಠಾನಗೊಳಿಸಲಾಯಿತು.

ಕಲ್ಕತ್ತಾದ ಫೋರ್ಟ್ ವಿಲಿಯಂನಲ್ಲಿದ್ದ ಬ್ರಿಟಿಷ್ ರಾಜ್ಯಪಾಲರ ದೆಹಲಿಯ ಪ್ರತಿನಿಧಿಗಳಾದ ಜಾನ್ ಸರ್ಮನ್ ಮತ್ತು ಎಡ್ವರ್ಡ್ಸ್, ಸ್ಟೀಫನ್ ಅವರು 1716 ಮಾರ್ಚ್ 16ರಂದು ಬರೆದ ಪತ್ರವೊಂದರಲ್ಲಿ ತಾವು ಈ ಮರಣದಂಡನೆಯನ್ನು ಕಣ್ಣಾರೆ ಕಂಡ ವಿವರಗಳನ್ನು ಹೀಗೆ ಬರೆಯುತ್ತಾರೆ.

ಲಾಹೋರ್ 'ಸುಬಾದಾರರಿಗೆ' ಇಪ್ಪತ್ತು ವರ್ಷಗಳಿಂದ ತಲೆನೋವಾಗಿದ್ದ ಆ ಮಹಾನ್ ಬಂಡಾಯ ಗುರುವನ್ನು ಅವನ ಕುಟುಂಬದೊಡನೆ ಆ ಪ್ರಾಂತ್ಯದ *ಸುಭ* (ಸುಬೇದಾರ ಇರಬಹುದು?) ಆಗಿದ್ದ ಅಬ್ದ್–ಉಸ್–ಸಮದ್ *ಖಾನ್‌*ನ ಉಪಸ್ಥಿತಿಯಲ್ಲಿ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಿದ್ದರು. ಸಂಕೋಲೆ ತೊಡಿಸಿಕೊಂಡಿದ್ದ ಸುಮಾರು 780 ಸಂಖ್ಯೆಯಷ್ಟಿದ್ದ ಅವನ ಎಲ್ಲ ಅನುಯಾಯಿಗಳನ್ನು ಒಂಟೆಗಳ ಬೆನ್ನಿನ ಮೇಲೆ ಹೆಡೆಮುರಿ ಕಟ್ಟಿ ಹಾಕಿದ್ದರು. ಅವರು ಕೆಲ ದಿನಗಳ ಹಿಂದೆ ನಗರ ಪ್ರವೇಶ ಮಾಡಿದ್ದರು. ಅಲ್ಲದೆ ಯುದ್ಧದಲ್ಲಿ ಖಡ್ಗಕ್ಕೆ ಬಲಿಯಾದವರ ಸುಮಾರು ಎರಡು ಸಾವಿರ ತಲೆಗಳನ್ನು ಕೋಲುಗಳಿಗೆ ಚುಚ್ಚಿ ಮೆರವಣಿಗೆಯಲ್ಲಿ ತರುತ್ತಿದ್ದರು. ಬಂಡುಕೋರರನ್ನು ಮೊದಲು ರಾಜನ ಬಳಿಗೆ ಕರೆತರಲಾಯಿತು. ನಂತರ ಅಲ್ಲಿಂದ ಸೆರೆಮನೆಗೆ ಕಳುಹಿಸಿದರು. ಬಂಡಾಯ ಗುರು ತನ್ನ ಸಾಮ್ರಾಜ್ಯದ ಹಲವಾರು ಸ್ಥಳಗಳಲ್ಲಿ ಇಟ್ಟಿರುವ ನಿಧಿಯ ಬಗ್ಗೆ ವಿವರ ಪಡೆದುಕೊಳ್ಳುವ ಉದ್ದೇಶದಿಂದ ಅವನ ಮತ್ತು ಅವನಿಗೆ ನೆರವಾದವರ ಜೀವ ಸ್ವಲ್ಪ ಕಾಲ ಉಳಿಯಲಿದೆ. ಅನಂತರ ಅವರನ್ನು ವಧಿಸುತ್ತಾರೆ. ಈಗ ದಿನಕ್ಕೆ ನೂರ ಮಂದಿಯಂತೆ ವಧಿಸುತ್ತಾರೆ. ತಮ್ಮ ಅಂತ್ಯವನ್ನು ತಾಳ್ಮೆಯಿಂದ ಸ್ವೀಕರಿಸಿರುವ ಮತ್ತು ಯಾರೊಬ್ಬರೂ ತಮ್ಮ ಹೊಸ ಧರ್ಮದಿಂದ ಕೊನೆಯವರೆಗೂ ವಿಮುಖರಾಗದ ಅವರ ಗುಣ ಸಾಮಾನ್ಯವಾದುದಲ್ಲ."

ತನ್ನ 'ಮಹಿಮ ಪ್ರಕಾಶ'ದಲ್ಲಿ ಸರೂಪ್ ದಾಸ್ ಭಲ್ಲ ಬರೆಯುತ್ತಾರೆ. "ಗುರುದಾಸ್‌ನ ವಂಶಸ್ಥ ಕಹನ್ ಸಿಂಗ್ ಟ್ರೆಹನ್ ಅಲ್ಲಿನ ಸಿಖ್ ಬಂಧಿಗಳಲ್ಲಿ ಒಬ್ಬ. ಗುರುವಿನ ವಂಶಸ್ಥನಾದ ಆತನನ್ನು ಉಳಿಸಲು ಅವನ ಬದಲಾಗಿ ಮತ್ತೊಬ್ಬ ಸಿಖ್ ವ್ಯಕ್ತಿಯನ್ನು ಅದುಲು ಬದಲು ಮಾಡಲಾಯಿತು."

ಇದು ಮತ್ತೊಂದು ಕಟ್ಟುಕತೆ. ಮೊದಲನೆಯದಾಗಿ ಅವನನ್ನು ಬಿಡುಗಡೆ ಮಾಡಲು ಮತ್ತೊಬ್ಬನನ್ನು ಕರೆದುಕೊಂಡು ಖೈದಿಗಳ ಹತ್ತಿರ ಹೋಗುವುದು ಅಸಾಧ್ಯದ ಕಾರ್ಯ. ಎರಡನೆಯದಾಗಿ ಒಬ್ಬ ಸಿಖ್‌ನ ಬಿಡುಗಡೆಗೆ ಮತ್ತೊಬ್ಬ ಸಿಖ್ ಅನ್ನು ಕೊಲ್ಲುವುದು ಸಿಖ್ ಧರ್ಮೀಯರು ಒಪ್ಪುವಂತಹ ಕಾರ್ಯವಲ್ಲ. ಚಮ್‌ಕಾರ್ ಯುದ್ಧದಲ್ಲಿ ಗುರುಗೋವಿಂದ್ ಸಿಂಗ್ ಸಹ ತನ್ನ ಮಕ್ಕಳನ್ನು ಕಾಪಾಡಲು ಪ್ರಯತ್ನಿಸಲಿಲ್ಲ. ತನ್ನ ಮಕ್ಕಳನ್ನು ಹೋರಾಡಿ ಮಡಿಯಲು ಯುದ್ಧಕ್ಕೆ ಕಳುಹಿಸಿದರು. (07.12.1705) ತನ್ನ ಮಕ್ಕಳಿಗೆ ಬದಲಾಗಿ 1705ರ ಡಿಸೆಂಬರ್ 7 ಮತ್ತು 8ರ ಮಧ್ಯರಾತ್ರಿ ಚಮ್‌ಕಾರ್ ಕೋಟೆಯಿಂದ ತಪ್ಪಿಸಿಕೊಂಡ ಕೆಲವು ಸಿಕ್ಖರನ್ನು ಅವರು ಕಾಪಾಡಿದರು.

1716ರ ಮಾರ್ಚ್ 12ರಂದು ಏಳನೂರಕ್ಕೂ ಹೆಚ್ಚು ಸಿಖ್ ಸೆರೆಯಾಳುಗಳನ್ನು ವಧಿಸಲಾಯಿತು. ಅವರ ದೇಹಗಳನ್ನು ಛಿದ್ರಿಸಿ ಶಹಜಹಾನ್‌ಬಾದ್ (ದೆಹಲಿ) ನಗರದ ಬೇರೆ ಬೇರೆ ಸ್ಥಳಗಳಲ್ಲಿ

ತಲೆಕೆಳಗಾಗಿ ಮರಗಳಿಗೆ ನೇತು ಹಾಕಲಾಯಿತು. ಈ ಶವಗಳನ್ನು ರಣಹದ್ದುಗಳು ಕುಕ್ಕಿ ತಿಂದವು. ಆದರೆ ಅಸ್ಥಿಪಂಜರಗಳು ಹಾಗೆ ನೇತಾಡುತ್ತಿದ್ದವು. ಸಿಕ್ಖರ ವಿರುದ್ಧ ಇದ್ದ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಲು ಸ್ವೇಚ್ಛಾಚಾರಿ ಮುಸ್ಲಿಂ ಯುವಕರು ಈ ಅಸ್ಥಿಪಂಜರಗಳಿಗೆ ಇಟ್ಟಿಗೆ ಮತ್ತು ಕಲ್ಲುಗಳಿಂದ ಹೊಡೆಯುತ್ತಿದ್ದರು.(34)

ಏಳು ನೂರಕ್ಕೂ ಹೆಚ್ಚು ಸಿಕ್ಖರನ್ನು ವಧಿಸಿದ ಮೇಲೆ ಫರೂಕ್ ಸಿಯಾರ್ ಈಗ ಬಂದಾ ಸಿಂಗ್ ಮತ್ತು ಇತರ ಹದಿನೆಂಟು ಸಿಕ್ಖರನ್ನು(35)ತ್ರಿಪೋಲಿಯ ಕೋಟೆಯ ಸೆರೆಯಲ್ಲಿ ಬಂಧಿಸಿಡಲು ಟಿಕ್ಕರಾಮ್ ಎಂಬಾತನಿಗೆ ಹಸ್ತಾಂತರಿಸಿದ. ಬಂದಾ ಸಿಂಗ್‌ನ ಹೆಂಡತಿ ಸುಶೀಲ್ ಕೌರ್ ಮತ್ತು ಮಗ ಅಜಯ್ ಸಿಂಗ್‌ನನ್ನು ದರ್ಬಾರ್ ಖಾನ್ ನಜೀರ್‌ನ ವಶಕ್ಕೆ ಒಪ್ಪಿಸಿದರು.

ಬಂದಾ ಸಿಂಗ್‌ನ ಬಿಡುಗಡೆಗೆ ಮಹಮ್ಮದ್ ಅಮೀನ್ ಖಾನ್‌ಗೆ ದೊಡ್ಡ ಮೊತ್ತದ ರುಷವತ್ತನ್ನು ನೀಡಲು ಕೆಲವು ಶ್ರೀಮಂತ ವ್ಯಕ್ತಿಗಳು ಮುಂದೆ ಬಂದರು. ಆದರೆ ಆತ ಈ ಬಗ್ಗೆ ಮಾತನಾಡಲು ಇಚ್ಛಿಸದೆ ಅವರ ಭೇಟಿಯನ್ನು ನಿರಾಕರಿಸಿದ ಎಂದು ಖಾಫಿ ಖಾನ್ ಬರೆಯುತ್ತಾನೆ. ಇದೂ ಸಹ ಒಂದು ಕಟ್ಟುಕತೆಯೇ! ಯಾಕೆಂದರೆ ಆ ಪ್ರಕ್ಷುಬ್ಧದ ಸಮಯದಲ್ಲಿ ಬಂದಾ ಸಿಂಗ್‌ನ ಪರವಾಗಿ ಮಾತನಾಡಲು ಅಥವಾ ಸಿಖ್ ಸೈನಿಕರ ಪರ ಸಹಾನುಭೂತಿ ಇರುವವರೆಂದು ಹೇಳಿಕೊಳ್ಳುವ ಧೈರ್ಯ ಯಾರಲ್ಲಿಯೂ ಇರಲಿಲ್ಲ.

ಮುಂದಿನ ಮೂರು ತಿಂಗಳ ಕಾಲ ಬಂದಾ ಸಿಂಗ್ ಮತ್ತು ಅವನ ಸಂಗಾತಿಗಳಿಗೆ ಹಿಂಸೆ ನೀಡಿದರು. ಇಸ್ಲಾಂ ಧರ್ಮವನ್ನು ಸ್ವೀಕರಿಸಿದರೆ ಸ್ವತಂತ್ರಗೊಳಿಸುವ ಆಮಿಷವನ್ನು ಅವರಿಗೂ ಒಡ್ಡಲಾಯಿತು. ಆದರೆ ಯಾರೂ ಆಮಿಷಕ್ಕೆ ಬಲಿಯಾಗಲಿಲ್ಲ. ಅಂತಿಮವಾಗಿ ಬಂದಾ ಸಿಂಗ್ ಮತ್ತು ಅವನ ಸಂಗಾತಿಗಳಿಗೆ ಮರಣ ದಂಡನೆಯ ಆದೇಶವನ್ನು ಸಾಮ್ರಾಟನು ಜೂನ್ 9 ರಂದು ನೀಡಿದ. ಬಂದಾ ಸಿಂಗ್‌ನನ್ನು ಮೊದಲು ಹಿಂಸಿಸಿ ನಂತರ ಕೊಲ್ಲಬೇಕೆಂದು ಸಾಮ್ರಾಟನು ಇಬ್ರಾಹಿಂ–ಉದ್–ದೀನ್ ಮತ್ತು ಕೊತ್ವಾಲ ಸರ್‌ಬ್ರಹ್ ಖಾನ್‌ಗೆ ಸೂಚನೆಗಳನ್ನು ನೀಡಿದ.(36) ಆತನ ಆದೇಶದಲ್ಲಿ ನಾಲಿಗೆಯನ್ನು ಕತ್ತರಿಸಿ, ಕಣ್ಣನ್ನು ಕಿತ್ತು, ಚರ್ಮವನ್ನು ಸುಲಿದು, ಮೂಳೆಯಿಂದ ಮಾಂಸವನ್ನು ಕಿತ್ತು ಸಾಯಿಸುವ ವಿವರಗಳಿದ್ದವು. ಅಲ್ಲದೆ ಅವನ ಕಣ್ಣ ಮುಂದೆಯೇ ಅವನ ಮಗನನ್ನು ಸಾಯಿಸಬೇಕೆಂಬ ವಿಷಯವೂ ಆದೇಶದ ಭಾಗವಾಗಿತ್ತು. ಖಾಫಿ ಖಾನ್ ಪ್ರಕಾರ ಬಂದಾ ಸಿಂಗ್ ತನ್ನ ಕೈಯಾರೆ ತನ್ನ ಮಗನನ್ನು ಸಾಯಿಸಲು ಬಂದಾ ಸಿಂಗ್‌ಗೆ ಒತ್ತಾಯಿಸಬೇಕೆಂದು ಸಾಮ್ರಾಟ ಆಜ್ಞೆ ಮಾಡಿದ್ದ.

ಈ ಶಿಕ್ಷೆಯನ್ನು ಮೆಹ್ರೂಲಿಯ ಹತ್ತಿರದ ಕುತುಬ್ ಮಿನಾರ್ ಸಮೀಪ ವಿಧಿಸಬೇಕೆಂದು ಆದೇಶಿಸಲಾಗಿತ್ತು. ಸಾಮ್ರಾಟನ ಆಜ್ಞೆಯನ್ನು ತಕ್ಷಣವೇ ಕ್ರಿಯೆಗೆ ಇಳಿಸಿ ಬಂದಾ ಸಿಂಗ್‌ನನ್ನು ಶಿಕ್ಷೆ ವಿಧಿಸಬೇಕಾದ ಸ್ಥಳಕ್ಕೆ ಒಯ್ದರು.

ಮೆಹ್ರೂಲಿಯಲ್ಲಿ ಬಂದಾ ಸಿಂಗ್ ಅನ್ನು ಖ್ವಾಜಾ ಕುತುಬುದ್ದೀನ್‌ನ ಗೋರಿ (ಕುತುಬ್ ಮಿನಾರ್)ಯ ಸುತ್ತಲೂ ಕರೆದೊಯ್ದು ಶಿಕ್ಷೆ ಜಾರಿ ಮಾಡುವ ಸ್ಥಳಕ್ಕೆ ಕರೆತಂದರು. ಆತನ ಜೊತೆ ಅವನ ಮಗ ಮತ್ತು 26 ಸಿಕ್ಖರನ್ನು ಕರೆತಂದರು.(37) ಈ 20 ಸಿಕ್ಖರಿಗೂ ಮಾಮೂಲಿನಂತೆ ಇಸ್ಲಾಂ ಧರ್ಮಕ್ಕೆ ಮತಾಂತರವಾಗಲು ಆಮಿಷ ತೋರಿಸಿದರು. ಅವರು ಅದನ್ನು ನಿರಾಕರಿಸಿದರು. "ಎಲ್ಲರೂ ತಮ್ಮ ಶಿರವನ್ನು ಕತ್ತರಿಸಲು ವಧಾಕಾರನ ಮುಂದೆ ಮುಂಚಾಚಿ ನಿಂತರು. ವಾಹೇಗುರು ಎಂದು

ಗುರುವನ್ನು ನೆನೆದು ಹುತಾತ್ಮ ಪಟ್ಟವನ್ನು ಅಲಂಕರಿಸಿದರು."[38]

**ಬಂದಾ ಸಿಂಗ್‌ನನ್ನು ವಧಿಸಿದ ದೃಶ್ಯ**

ಬಂದಾ ಸಿಂಗ್‌ನನ್ನು ವಧಿಸಲು ಅವನನ್ನು ಪಂಜರದಿಂದ ಹೊರತಂದರು. ಅವನ ಬಲಗೈಯನ್ನು ಕಟ್ಟಿದ್ದ ಸರಪಳಿಯಿಂದ ಬಿಡಿಸಿ ತನ್ನ ನಾಲ್ಕೂವರೆ ವರ್ಷ ಮಗನನ್ನು ಕೊಲ್ಲಲು ಆ ಕೈಗೆ ಕಠಾರಿಯನ್ನು ಕೊಟ್ಟರು. (ಖಾಫಿ ಖಾನ್ ಮಗನಿಗೆ ಏಳೆಂಟು ವರ್ಷವಾಗಿತ್ತೆಂದು ಸೋಹನ್‌ಲಾಲ್ ಸೂರು ಆರು ವರ್ಷದವನೆಂದು ಬರೆಯುತ್ತಾರೆ)[29] ಬಂದಾ ಸಿಂಗ್ ನಿಶ್ಚಲನಾಗಿ ನಿಂತ. ವಧಾಕಾರನೇ ಅವನ ಹೊಟ್ಟೆಯನ್ನು ಸೀಳಿ ಹೃದಯವನ್ನು ಕಿತ್ತು ಬಂದಾ ಸಿಂಗ್‌ನ ಬಾಯಿಗಿಡಲು ಹೋದ. ಆದರೆ ಬಂಧ ಸಿಂಗ್ ತನ್ನ ಬಾಯನ್ನು ಭದ್ರವಾಗಿ ಮುಚ್ಚಿದ್ದ. ಹೀಗೆ ಬಂದಾ ಸಿಂಗ್‌ನ ಮಗ ಜಗತ್ತಿನ ಅತ್ಯಂತ ಕಿರಿಯ ಹುತಾತ್ಮನೆನಿಸಿದ. ವಧಾಕಾರ ಈಗ ಬಂದಾ ಸಿಂಗ್‌ನ ಬಲಗಣ್ಣನ್ನು ನಂತರ ಎಡಗಣ್ಣನ್ನು ಕಿತ್ತು ಹಾಕಿದ. ನಂತರ ಎಡಪಾದ ಮತ್ತು ಬಲಪಾದವನ್ನು ಛೇದಿಸಿದ. ಮುಂದಿನ ಗುರಿ ಹಸ್ತಗಳದು. ಈ ಎಲ್ಲ ಹಿಂಸೆಯನ್ನು ರೋಧಿಸದೆ ಬಂದಾ ಸಿಂಗ್ ಸಹಿಸಿದ. ವಧಾಕಾರ ಈಗ ಚಿಮುಟದಿಂದ ಅವನ ದೇಹ ಮಾಂಸವನ್ನು ಕಿತ್ತ. ಅನಂತರ ಸುತ್ತಿಗೆಯಿಂದ ತಲೆಗೆ ಹೊಡೆದ. ಬಂದಾ ಸಿಂಗ್ ಅಸುನೀಗಿದ ನಂತರವೂ ವಧಾಕಾರ ಅವನ ದೇಹವನ್ನು ಚೂರುಚೂರಾಗಿ ಕತ್ತರಿಸಿ ಎಸೆದ.

ಬಂದಾ ಸಿಂಗ್ ತನ್ನ ಕಣ್ಣ ಮುಂದೆಯೇ ಮಗನ ದೇಹವನ್ನು ಛಿದ್ರಿಸುವುದನ್ನು ಕಂಡರೂ ಒಂದು ಮಾತನ್ನೂ ಆಡಲಿಲ್ಲ; ಕಣ್ಣಿನಿಂದ ಒಂದು ಹನಿಯು ಸಹ ಒಸರಲಿಲ್ಲ. ಆತ ತನ್ನ ಮುಖದಲ್ಲಿ ಮಂದಹಾಸವನ್ನು ಹಾಗೆಯೇ ಉಳಿಸಿಕೊಂಡಿದ್ದ ಎಂದು ಔರಂಗಾಬಾದಿ ದಾಖಲಿಸಿದ್ದಾನೆ.[40]

ಈ ಶಿಕ್ಷೆಯನ್ನು ಇಬ್ರಾಹಿಂ–ಉದ್–ದೀನ್ ಮತ್ತು ಸರ್‌ಬ್ರಹ್ ಖಾನ್‌ನ ಉಪಸ್ಥಿತಿಯಲ್ಲಿ ಜಾರಿ ಮಾಡಿದರು.[41] ಛಿದ್ರಗೊಂಡ ಬಂದಾ ಖಾನ್‌ನ ದೇಹವನ್ನು ಮರಗಳಲ್ಲಿ ತೂಗು ಹಾಕಲು ಸಾಮ್ರಾಟ ಆಜ್ಞೆ ಮಾಡಿದ್ದ. ಆದರೆ ಆ ವೇಳೆಗೆ ಕತ್ತಲಾದುದರಿಂದ ಸರ್ಕಾರದ ಅಧಿಕಾರಿಗಳು ಸ್ಥಳದಿಂದ ಹೊರಟುಹೋದರು. ಆ ಸ್ಥಳದಲ್ಲಿ ವೇಶ ಮರೆಸಿಕೊಂಡು ನಿಂತಿದ್ದ ಖೇಮ್‌ಕರಣ್‌ನ ಅಮರ್‌ಸಿಂಗ್ ಕಾಂಬೋಜ್[42] ಮಧ್ಯರಾತ್ರಿ ಶವದ ಹತ್ತಿರ ಬಳಿ ಸಾರಿ ಬಂದಾ ಸಿಂಗ್ ತೊಟ್ಟಿದ್ದ[43] ಕೆಂಪು ಪೇಟದಲ್ಲಿ ಆತನ ದೇಹದ ಚೂರುಗಳನ್ನು ಸಂಗ್ರಹಿಸಿ ಜಮ್ಮುವಿನ ಧೋತೆ–ದ–ತಾಂಡಕ್ಕೆ ಒಯ್ದು ಬಂದಾ ಸಿಂಗ್‌ನ ಪತ್ನಿ ಸಾಹಿಬ್ ಕೌರ್ ಮುಂದಿರಿಸಿದನು. ಪತ್ನಿಯು ಅಲ್ಲಿಯೇ ಸಂಸ್ಕಾರ ನಡೆಸಿದಳು.[44]

ಆದರೆ ಗ್ಯಾನಿ ಗ್ಯಾನ್ ಸಿಂಗ್ ಪ್ರಕಾರ ಬಂದಾ ಸಿಂಗ್‌ನನ್ನು ಆನೆಗೆ ಕಟ್ಟಿ ದರದರ ಎಳೆಸಿಕೊಂಡು ಇಡೀ ದಿನ ಸುತ್ತಾಡಿದರು. ಸಂಜೆಯ ಹೊತ್ತಿಗೆ ಅವನು ಸತ್ತಿದ್ದಾನೆಂದು ತಿಳಿದು ಕಾಗೆ–ನಾಯಿಗಳಿಗೆ ಆಹಾರವಾಗಲೆಂದು ಯಮುನಾ ನದಿಯ ತೀರಕ್ಕೆ ಎಸೆದು ಹೋದರು. ಆ ಪ್ರದೇಶದಲ್ಲಿ ಹಾದುಹೋಗುತ್ತಿದ್ದ ಫಕೀರನೊಬ್ಬ ಅವನನ್ನು ನೋಡಿ ಪ್ರಾಣ ಉಳಿಸಿದ. ಗುಣ ಮುಖನಾದ ನಂತರ ಬಂದಾ ಸಿಂಗ್ ಕಾಶ್ಮೀರದ ಕಡೆ ಹೋಗಿ ತನ್ನ ಬದುಕನ್ನು ಅಲ್ಲಿ ಕಳೆದ. ಗ್ಯಾನಿ ಗ್ಯಾನ್ ಸಿಂಗ್ ಪ್ರಕಾರ ಬಂದಾ ಸಿಂಗ್ 1741ರಲ್ಲಿ ಸಹಜ ಸಾವನ್ನಪ್ಪಿದ.[45]

ಬಂದಾ ಸಿಂಗ್ ಉಳಿದ ಸಂಗಾತಿಗಳನ್ನು ಮಾರನೆಯ ದಿನ ಕೊಲ್ಲಲಾಯಿತು. (ಸೇವಾ

ಸಿಂಗ್[46] ಪ್ರಕಾರ ಅವರೆಲ್ಲರನ್ನೂ ಬಂದಾ ಸಿಂಗ್‌ನನ್ನು ವಧಿಸಿದ ದಿನವೇ ಕೊಲ್ಲಲಾಯಿತು) ಅಂದು ವಧೆಯಾದವರ ಪಟ್ಟಿಯಲ್ಲಿ ಗುಲಾಬ್ ಸಿಂಗ್ ಭಕ್ಷಿ, ಭಗವಂತ್ ಸಿಂಗ್, ಬಜ್‌ಸಿಂಗ್, ಕುಯಿರ್ ಸಿಂಗ್, ಶಾಂ ಸಿಂಗ್, ನಹರ್ ಸಿಂಗ್, ಶೇರ್ ಸಿಂಗ್, ಅಲ್ಬೇಲ್ ಸಿಂಗ್, ರಾಮ್ ಸಿಂಗ್, ಪರ್ಮರ್, ಆಲಿ ಸಿಂಗ್, ಮಾಲಿಸಿಂಗ್, ರಾಯ್ ಸಿಂಗ್ ಹಜೂರಿ ಮುಂತಾದವರಿದ್ದರು. ವಿವರಗಳಿಗೆ ನೋಡಿ: ಡಾ. ಹರ್ಜಿಂದರ್ ಸಿಂಗ್ ದಿಲ್‌ಗೀರ್ ಅವರ ಕೃತಿ 'ಗುರುದೇಶೇರ್'

**ಬಂದಾ ಸಿಂಗ್ ಮತ್ತು ಸಿಖ್ ಬಂಧಿಗಳ ಹೇಳಿಕೆಗಳು**

ಬಂದಾ ಸಿಂಗ್ ದೆಹಲಿಗೆ ಬಂದಾಗ ಕೆಲವು ಹೇಳಿಕೆಗಳನ್ನು ನೀಡಿದ. ಅವುಗಳನ್ನು ಅಂದಿನ ಮುಸ್ಲಿಂ ಬರಹಗಾರರು ದಾಖಲಿಸಿದ್ದಾರೆ. ಖಾಫಿ ಖಾನ್ ಪ್ರಕಾರ ಮಹಮ್ಮದ್ ಅಮೀನ್ ಖಾನ್ ಕೇಳಿದ– "ಈ ಯುದ್ಧವನ್ನು ಕೈಗೊಳ್ಳಲು ನಿನಗಾದ ಪ್ರೇರಣೆ ಏನು?". ಈ ಪ್ರಶ್ನೆಗೆ ಬಂದಾ ಸಿಂಗ್ ಉತ್ತರಿಸಿದ್ದು "ಅಧರ್ಮ ಮತ್ತು ಪಾಪ ತನ್ನ ಮಿತಿಯನ್ನು ಮೀರಿದಾಗ, ಆ ಸಮುದಾಯದ ಕೃತ್ಯಗಳಿಗೆ ಶಿಕ್ಷೆ ವಿಧಿಸಲು ನಿಜವಾದ ದೇವರು ನನ್ನಂಥ ವ್ಯಕ್ತಿಯನ್ನು ನೇಮಿಸುತ್ತಾನೆ. ದೇವರು ಈ ಜಗತ್ತನ್ನು ನಾಶ ಮಾಡಲು ಇಚ್ಛಿಸಿದರೆ, ಆಗ ಸಾಮ್ರಾಜ್ಯದ ಅಧಿಕಾರವನ್ನು ಪ್ರಜಾ ಪೀಡಕನ ಕೈಯಲ್ಲಿ ಇರಿಸುತ್ತಾನೆ"[47] ಮಹಮದ್ ಹರ್ಸಿ ತನ್ನ '*ಇಬ್ರತ್‌ನಾಮ್*'ದಲ್ಲಿ ಹೀಗೆ ಬರೆಯುತ್ತಾನೆ. ಯಾರಾದರೂ ಸಿಖ್ ಒಬ್ಬನಿಗೆ "ನಿನಗೆ ಗೊತ್ತಾ ನಿನ್ನನ್ನು ಕೊಲ್ಲುತ್ತಾರೆ ಎಂಬುದು" ಎಂದು ಪ್ರಶ್ನಿಸಿದರೆ, ಅವನ ಉತ್ತರ ಹೀಗಿರುತ್ತದೆ.

"ನೀವು ಕೊಲ್ಲುವುದು ಖಂಡಿತ. ಸಾಯಲು ನಮಗೆ ಭಯವಿಲ್ಲ. ನಮಗೆ ಸಾವಿನ ಭಯವಿದ್ದರೆ ನಿಮ್ಮ ವಿರುದ್ಧ ಯಾಕಿಷ್ಟು ದೊಡ್ಡ ಯುದ್ಧವನ್ನು ಕೈಗೆತ್ತಿಕೊಳ್ಳಬೇಕಿತ್ತು? ಹಸಿವು ಮತ್ತು ಆಹಾರದ ಕೊರತೆ ಏರ್ಪಟ್ಟ ಕಾರಣಕ್ಕಾಗಿ ನೀವು ನಮ್ಮನ್ನು ಬಂಧಿಸಿದ್ದೀರಿ. ಇಲ್ಲದಿದ್ದರೆ ನೀವು ನೋಡಿದ್ದಕ್ಕಿಂತಲೂ ಹೆಚ್ಚಿನ ಶೌರ್ಯವನ್ನು ನೋಡುತ್ತಿದ್ದಿರಿ."

**"ಆಕೆ ನನ್ನ ತಾಯಿಯಲ್ಲ!" –ಬಂಧಿತ ಸಿಖ್ ಯುವಕನ ಘೋಷಣೆ**

ಸಿಕ್ಖರಿಗೆ ಶಿಕ್ಷೆ ವಿಧಿಸುವ ಕಾಲದಲ್ಲಿ ಮತ್ತೊಂದು ಪವಾಡ ಜರುಗಿತು. ಒಬ್ಬ ಸಿಖ್ ಯುವಕನ ತಾಯಿಯೊಬ್ಬಳು ಪ್ರಧಾನಿ ಸಯ್ಯದ್ ಅಬ್ದುಲ್ಲಾ ಖಾನ್‌ನನ್ನು ಭೇಟಿಯಾದಳು. ದಿವಾನ್ ರತನ್ ಚಂದ್‌ನ ನೆರವಿನೊಡನೆ ತನ್ನ ಮಗ ಸಿಖ್ ಅಲ್ಲ ಎಂದು ಅಧಿಕಾರಿಗಳಿಗೆ ಮನವರಿಕೆ ಮಾಡಿದಳು. ಅವನ ಬಿಡುಗಡೆಗೆ ಪತ್ರವನ್ನು ತಂದಳು. ನಂತರ, ಯುವಕನ ಹೆಂಡತಿ ಮತ್ತು ತನ್ನ ಸೊಸೆಯೊಡನೆ ವಧಾಕಾರನನ್ನು ಸಮೀಪಿಸಿ ತನ್ನ ಮಗನ ಬಿಡುಗಡೆಯನ್ನು ಕೋರಿದಳು. ಆಕೆ ಹೇಳಿದಳು– "ನನ್ನ ಮಗ ಸಿಖ್ ಅಲ್ಲ. ಅವನನ್ನು ಬಿಡುಗಡೆ ಮಾಡಬೇಕು. ಪ್ರಧಾನಿಯಿಂದ ಆದೇಶ ತಂದಿದ್ದೇನೆ" ಅದನ್ನು ಕೇಳಿದ ಸಿಖ್ ಯುವಕ ಕೂಗಿ ಹೇಳಿದ.

"ಆಕೆ ಯಾರ ತಾಯಿಯೋ ನನಗೆ ತಿಳಿಯದು. ಆ ವಧುವನ್ನು ಅದೆಲ್ಲಿಂದ ತಂದಳೋ ಕಾಣೆ! ಎಂಥ ಮಾತನಾಡುತ್ತಾಳೆ ಆಕೆ! ನನ್ನ ಜೊತೆಗಾರರು ಮುಂದೆ ಹೋದರು. ನಾನು ಹೊರಡುವ ಸಮಯ ಇದು. ಇದು ನನಗೆ ನೋವಿನ ಸಮಯ" ಎಂದ.

'*ಮುಂತಖಬುಲ್–ಲುಬಾಬ್*' ಬರೆದ ಲೇಖಕನ ಪ್ರಕಾರ ಈ ಯುವಕ ಬಂದಾ ಸಿಂಗ್‌ನ ಸಂಗಾತಿ. ಆದರೆ ಪಾರಿಖ್–ಇ–ಮಹಮದ್ ಶಾಹಿ ಬರೆದ ಲೇಖಕನ ಪ್ರಕಾರ ಈ ಯುವಕನನ್ನು

ಬೇರೆ ಯಾವುದೋ ಸ್ಥಳದಲ್ಲಿ ಬಂಧಿಸಲಾಗಿತ್ತು. ಇತ್ತೀಚೆಗೆ ಮದುವೆಯಾಗಿದ್ದ. ಸಿಖ್ ಯುವಕನಾಗಿದ್ದ ಕಾರಣದಿಂದ ಬಂದಾ ಸಿಂಗ್‌ನ ಸಂಗಾತಿಗಳ ಗುಂಪಿನಲ್ಲಿ ಆತನನ್ನು ಬಂಧಿಸಿ ಇಟ್ಟಿದ್ದರು. ಆತನ ತಾಯಿ ಮತ್ತು ಹೆಂಡತಿ ಫೌಜುದಾರನಗೆ ಫಿರ್ಯಾದು ನೀಡಿದ್ದರು. ಆದರೆ ಇಬ್ಬರೂ ಲೇಖಕರು ಒಂದು ವಿಷಯದಲ್ಲಿ –ಅಂದರೆ ತಾಯಿ ಮತ್ತು ಸೊಸೆ ರಾಜನ ಅನುಮತಿ ಪತ್ರವನ್ನು ಹಿಡಿದು ಬರುವುದು ಮತ್ತು ಯುವಕ ತಾಯಿಯನ್ನು ನಿರಾಕರಿಸುವುದು–ಒಮ್ಮತ ತೋರಿದ್ದಾರೆ.

**ಬಂದಾ ಸಿಂಗ್‌ನನ್ನು ಬಂಧಿಸಿದವರಿಗೆ ರಾಜ ಪ್ರಶಸ್ತಿಗಳು**

ಬಂದಾ ಸಿಂಗ್‌ನನ್ನು ಬಂಧಿಸಿದ ಕಾರಣಕ್ಕೆ ಸಾಮ್ರಾಟ ಫರೂಕ್ ಸಿಯಾರ್ ಅಬ್ದುಸ್ ಸಮದ್ ಖಾನ್‌ಗೆ ಅನೇಕ ಉಡುಗೊರೆಗಳನ್ನು ನೀಡಿದ. ಅವನ *ಮಾನ್ಸಾಬ್* ಅನ್ನು ಆರು ಸಾವಿರಕ್ಕೆ ಏರಿಸಲಾಯಿತು. ಅವನಿಗೆ ಒಂದು ಅಲಂಕೃತ ಪಲ್ಲಕ್ಕಿ, ಅನೇಕ ಆನೆ ಮತ್ತು ಕುದುರೆ, ಅಪಾರ ಮೊತ್ತದ ಆಭರಣಗಳು, ರತ್ನ ಖಚಿತ ಪೇಟ, ಕಸೂತಿ ಹಾಕಿದ ವಸ್ತ್ರ, ಚಿನ್ನದ ಕಂಠೀಹಾರ ಮತ್ತು ಅನೇಕ ಪರಗಣಗಳ ಉಂಬಳಿಯನ್ನು ಅನುಗ್ರಹಿಸಿದ.(48)

---

**ಅಡಿ ಟಿಪ್ಪಣಿಗಳು**

1. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ನಮೂದು 15.03.1715
2. ಅಹ್ವಾಲ್–ಉಲ್–ಖ್ವಾಕೀನ್. ಪು 221–224
3. ಎಲಿಯಟ್ ಮತ್ತು ಡಾಸನ್ ಸಂ. ಏಳು. ಪು 457
4. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ನಮೂದು 30.03.1715
5. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ನಮೂದು 10.04.1715
6. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ನಮೂದು 04.04.1715
7. ಇರ್ವಿನ್, *Later Mughals.* Part I P. 313
8. ಇರ್ವಿನ್, *Later Mughals.* Part I P. 313
9. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ನಮೂದು 28.04.1715
10. ಅಕ್ಬರಾತ್–ಐ–ದರ್ಬಾರ್–ಐ–ಮೌಲ ನಮೂದು 21.05.1715
11. ಇರ್ವಿನ್, ಸಂ. ಏಳು. ಪು. 314
12. ಮಹಮ್ಮದ್ ಕಾಸಿಂ, *ಇಬ್ರತ್‌ನಾಮ.* ಪುಟ 57ಬಿ
13. ಅವರು ಭಾಯ್ ಲಖಿ ರಾಯ್ ವಂಜಾರನ ನೌಕರರು. ಲಖಿ ರಾಯ್ ವಂಜಾರ ನಿಧನನಾದ ಮೇಲೆ ಅವನ ಮಕ್ಕಳು ಮತ್ತು ಮೊಮ್ಮಕ್ಕಳು ಬಂದಾ ಸಿಂಗ್‌ನ ಸೈನ್ಯದ ಭಾಗವಾದ ಕಾರಣ ವ್ಯಾಪಾರ ಚಟುವಟಿಕೆಗಳು ನಿಂತುಹೋದವು.
14. ಮುಘಲರ ದಾಖಲೆಗಳಲ್ಲಿ ದಯಾ ಧರ್ಮ ಮತ್ತು ದಯಾ ಧಾತ ಎಂಬ ಅವನ ಎರಡು ಹೆಸರುಗಳಿವೆ.

15. ಅದು ಹಮೀರ್ ಚಂದ್ ಕಟೋಚ್, ಅವನ ಹೆಸರು. ಹಮೀರ್ ಚಂದ್ ಕಾಂಬೋಜ್ ಎಂದೂ ಉಲ್ಲೇಖವಿದೆ. ಆತ 1700–1747ರವರೆಗೆ ಕಂಗ್ರಾವನ್ನು ಆಳಿದ. ಮುಘಲರ ಅನೇಕ ದಾಖಲೆಗಳು ಹಿಂದೂಗಳ ಸರಿಯಾದ ಹೆಸರುಗಳನ್ನು ದಾಖಲಿಸಿಲ್ಲ.
16. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ನಮೂದು 03.07.1715
17. ಬಹುಶಃ ಧೀರಜ್‌ಪಾಲ್ ಇರಬಹುದು.
18. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ*ನಮೂದು 26.09.1715
19. *ಇಬ್ರತ್‌ನಾಮ.* 39ಎ ಯಿಂದ 52ಬಿ ಮತತು 54ಎ. ಮಿರ್ಜಾ ಮಹಮ್ಮದ್ ಮತ್ತು ಮಹಮ್ಮದ್ ಖಾಸಿಂ, ಇಬ್ಬರೂ ಬರೆದ ಕೃತಿಯ ಹೆಸರು ಒಂದೇ–ಇಬ್ರತ್‌ನಾಮ
20. ಬಂಧಿಸಿದ ಕಾಲದಲ್ಲಿ ಅವರು ವಶಪಡಿಸಿಕೊಂಡ ಮೊತ್ತ ಇದು
21. ಈ ಕತೆಯನ್ನು ಸಿಯಾರುಲ್ ಮುತಾಖ್ರಿನ್‌ನ ಕೃತಿಕಾರ ಮಾತ್ರ ನೀಡಿದ್ದಾನೆ
22. ಕೇಸರ್ ಸಿಂಗ್ ಛಿಬ್ಬರ್, 'ಬಣಸವಲಿನಾವು ದಸನ್ ಪತಾಸಿಯಾನ್ ದ'; ಪು. 294
23. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ನಮೂದು 12.12.1715
24. ಮಹಮ್ಮದ್ *ಖಾಸಿಂ* Op. cit, PP 86-87; ಕಮ್ವಾರ್ Op. cit. ಪು 460
25. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ನಮೂದು 29.02.1716
26. ಇರ್ವಿನ್ The late Mughals. Vol. II P. 316
27. ಸಿ.ಆರ್. ವಿಲ್ಸನ್. *ಅರ್ಲಿ ಆನಲ್ಸ್ ಆಫ್ ಇಂಗ್ಲಿಷ್ ಇನ್ ಬೆಂಗಾಲ್.* ಪುಟ 96–98
28. *ಅಹ್ವಾಯ್–ಐ–ಅದೀನ ಬೇಗ್,* ಪು. 20
29. ಮುಂದೆ ಫರೂಕ್ ಸಿಯಾರ್ ಸಹ ಇದೇ ರೀತಿ ಸತ್ತ
30. *ಅಹ್ವಾಲ್–ಉಲ್–ಖ್ವಾಕೀನ್.* ಪು 121–24
31. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ನಮೂದು 05.03.1716
32. *ಖಾಫಿ ಖಾನ್, ಮುಂತಖಾಬ್–ಉಲ್–ಲುಬುಬ್,* ಸಂ. 2; ಪುಟ 766
33. ಸಿ.ಆರ್. ವಿಲ್ಸನ್, *ಅರ್ಲಿ ಆನಲ್ಸ್ ಆಫ್ ಇಂಗ್ಲಿಷ್ ಇನ್ ಬೆಂಗಾಲ್*, ಪು. 96–98; ಮಿರ್ಜಾ ಮಹಮ್ಮದ್ ಹರ್ಸಿ, *ಇಬ್ರತ್‌ನಾಮ,* ಪು. 52ಬಿ, 53ಎ
34. *ತಾರೀಖ್–ಐ–ಮಹಮ್ಮದ್ ಶಾಹಿ*
35. ಮೊದಲು ಅವರ ಸಂಖ್ಯೆ ಹದಿನೇಳಿತ್ತು. ಈ ನಡುವೆ ಮತ್ತೆ ಇಬ್ಬರನ್ನು ಬಂಧಿಸಿ ಅವರೊಡನೆ ಸೇರಿಸಲಾಯಿತು.
36. *ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ* ನಮೂದು 09.06.1716
37. ಬಂದಾ ಸಿಂಗ್ ಜೊತೆ 17 ಸಂಗಾತಿಗಳಿದ್ದರೆಂದು ಕಮ್ವಾಲ್ ಉಲ್ಲೇಖಿಸುತ್ತಾನೆ. ಸ್ವಲ್ಪ ದಿನಗಳ ನಂತರ ಇಬ್ಬರನ್ನು ಬಂಧಿಸಿ ಇವರ ಜೊತೆ ಸೇರಿಸಿದರು. ಶಿಕ್ಷೆ ವಿಧಿಸುವ ಸಮಯಕ್ಕೆ

ಅವರ ಸಂಖ್ಯೆ 26ಕ್ಕೇರಿತ್ತು. ಅಂದರೆ ಇನ್ನು ಹಲವಾರು ಸಿಕ್ಖರನ್ನು ಬಂಧಿಸಿ ಇವರೊಟ್ಟಿಗೆ ಸೇರಿಸಿರಬೇಕು.

38. ಗಣೇಶ್ ದಾಸ್ ವಡೇರ, *ರಿಸಾಲ ಸಾಹಿಬ್ ನುಮ*, ಪು. 197

39. ಅಜಯ್‌ಸಿಂಗ್ ಚಂಬಾದ ಸುಶಿಲ್ ಕೌರಳಲ್ಲಿ ಜನಿಸಿದ. ಬಂದಾ ಸಿಂಗ್ ಆಕೆಯನ್ನು 1710ರ ಕೊನೆಯ ದಿನಗಳಲ್ಲಿ ಮದುವೆಯಾದ. ವಿವಾಹದ ಮೊದಲನೇ ದಿನವೇ ಗರ್ಭವತಿಯಾದರೂ ಆಕೆ 1711ರಲ್ಲಿ ಅಜಯಸಿಂಗ್‌ನನ್ನು ಹೆತ್ತಿರಬೇಕು. ಹಾಗಾಗಿ ಆತ ಹುತಾತ್ಮನಾದ ಕಾಲದಲ್ಲಿ ಐದು ವರ್ಷಕ್ಕಿಂತ ದೊಡ್ಡವನಾಗಿರಲಿಲ್ಲ.

40. ಔರಂಗಬಾದಿ, *ಅಹ್ವಾಲ್-ಉಲ್-ಖ್ವಾಕೀನ್* ಪು. 121–124

41. *ಖಾಫಿ ಖಾನ್*, Op. cit. ಅಧ್ಯಾಯ 2. ಪು. 766–67

42. ಅಮರ್ ಸಿಂಗ್ ಕಾಂಬೋಜ್, *ಖೇಮ್* ಕರಣ್‌ನ ಜಮೀನುದಾರ ರಘುಪತಿ ಸಹಾಯ ಕಾಂಬೋಜ್‌ನ ಮಗ. ಆತ ಮತ್ತು ಅವನ ತಮ್ಮ ಗುರು ಗೋವಿಂದ್ ಸಿಂಗ್‌ನ ಸೇನಯಲ್ಲಿದ್ದರು. ಆತ ಬಂದಾ ಸಿಂಗ್‌ನ ಎಲ್ಲ ಯುದ್ಧಗಳಲ್ಲಿಯೂ ಭಾಗವಹಿಸಿದ್ದ. ಬಂದಾ ಸಿಂಗ್‌ನನ್ನು ಗುರುದಾಸ್ ನಂಗಲ್‌ನಲ್ಲಿ ಬಂಧಿಸಿದಾಗ ಆತ ತನ್ನ ಹಳ್ಳಿಗೆ ಹಿಂದಿರುಗಿದ್ದ.

43. ಸಾಹಿಬ್‌ಕೌರ್ ಈ ಪೇಟವನ್ನು ಅಮರ್‌ಸಿಂಗ್‌ಗೆ ನೀಡಿದ್ದು, ಆತ ಅದನ್ನು ಸಿರೋಪಾವೋ ಅಂದರೆ ಗೌರವವಸ್ತ್ರವಾಗಿ ಇಟ್ಟುಕೊಂಡಿದ್ದ. ಆತ ಎಲ್ಲ ಸ್ಮರಣಿಕೆಗಳನ್ನು ಸಂರಕ್ಷಿಸಿದ್ದ. ಅಮರ್‌ಸಿಂಗ್‌ನ ಈ ಪೇಟದಿಂದಾಗಿ ಅನುಯಾಯಿಗಳು ಅವನನ್ನು ಸಿಖ್ ಪಂಥದ ಮುಖ್ಯಸ್ಥನೆಂದು ಪರಿಗಣಿಸಿದರು. ಹಾಗಾಗಿ ಅಮರ್‌ಸಿಂಗ್‌ನ ಅನುಯಾಯಿಗಳು ಕೆಂಪು ಪೇಟವನ್ನು ಧರಿಸಲು ಆರಂಭಿಸಿದರು.

44. ಲಾಲ್‌ಗಂಡ ಮಲ್ ವಾಧ್‌ವಾನ್, ತ್ವಾರೀಖ್-ಐ-ಸೋಹ್‌ದ,– 'ಶಹೀದ್ ಬಿಲಾಸ್'ನಲ್ಲಿ ಗ್ಯಾನಿ ಗರ್ಜಸಿಂಗ್ ಉಲ್ಲೇಖಿಸಿದಂತೆ.

45. ಗ್ಯಾನಿ ಗ್ಯಾನ್ ಸಿಂಗ್‌ನ ಹೇಳಿಕೆಯ ಬಗ್ಗೆ ಅಭಿಪ್ರಾಯಪಡುತ್ತಾ ಕರಂಸಿಂಗ್ ಹೇಳುತ್ತಾನೆ– "ಸಿಕ್ಖರ ಚರಿತ್ರೆಕಾರರು, ಗ್ಯಾನಿ ಗ್ಯಾನ್ ಸಿಂಗ್‌ನಂತೆ ಇರುವುದು ಸಿಕ್ಖರ ದುರಾದೃಷ್ಟ" ಮತ್ತೊಂದು ಲೇಖನದಲ್ಲಿ ಆತ "ಗ್ಯಾನಿ ಗ್ಯಾನ್ ಸಿಂಗ್‌ಗೆ ವದಂತಿಗಳೆಂದರೆ ಬಹಳ ಇಷ್ಟ" ಎಂದು ಟೀಕಿಸಿದ್ದಾನೆ.

46. ಸೇವಾ ಸಿಂಗ್, *ಶಹೀದ್ ಬಿಲಾಸ್*, 1790ರಲ್ಲಿ ಬರೆದದ್ದು.

47. *ಖಾಫಿಖಾನ್*, '*ಮುಂತ್‌ಖಬ್-ಉಲ್'-ಲುಬುಬ್* ಪು. 765–67

48. *ಹಕೀಕತ್-ಬಿನ-ವ-ಅರುಜ್-ಐ-ಸಿಂಗಂ*; ಇಂಡಿಯಾ ಹಿಸ್ಟರಿ ಪತ್ರಿಕೆಯಲ್ಲಿ 1942ರಲ್ಲಿ ಪ್ರಕಟ.

# ಅಧ್ಯಾಯ 15

# ಲೋಹಗಡದ ನೆಲಸಮ

**ಲೋಹಗಡವನ್ನು ಯಾರು ನೆಲಸಮ ಮಾಡಿದರು? ಎಷ್ಟು ಸಮಯ ಹಿಡಿಯಿತು?**

ಬಂದಾ ಸಿಂಗ್, ಸಧೌರ ಮತ್ತು ಲೋಹಗಡ ಕೋಟೆಗಳು ಮುಘಲ್ ಸಾಮ್ರಾಟರು ಮತ್ತು ಅವರ ದಂಡನಾಯಕರುಗಳು ಪಾಲಿಗೆ ಭೀತಿ ಹುಟ್ಟಿಸಿದ್ದವು. ಅವುಗಳಲ್ಲಿ ಲೋಹಗಡ ಕೋಟೆ ಅವರ ದೊಡ್ಡ ಕಾಳಜಿಯಾಗಿತ್ತು. **ಬಂದಾ ಸಿಂಗ್ ಹುತಾತ್ಮನಾದ ನಂತರವು ವಂಜಾರರು ಮುಘಲರ ವಿರುದ್ಧದ ಹೋರಾಟವನ್ನು ಮುಂದುವರೆಸಿದರು. ಆದರೆ ನಾಯಕನಿಲ್ಲದ ಕಾರಣ ಬಹುಬೇಗ ಅವರು ಸೆರೆಯಾದರು.** ವಂಜಾರರು, ಸಿಕ್ಖರು ಮತ್ತೆ ಲೋಹಗಡವನ್ನು ಆಕ್ರಮಿಸಿಕೊಂಡು ಹೋರಾಟ ಮುಂದುವರೆಸಿದರೆ, ಮುಘಲರು ಮತ್ತೆ ಯುದ್ಧ ಹೂಡಬೇಕಾಗುತ್ತದೆ; ಅನವಶ್ಯಕ ವೆಚ್ಚಗಳಿಗೆ ಅವಕಾಶವಾಗುತ್ತದೆ; ಸೈನಿಕರ ಜೀವಹಾನಿಯಾಗುತ್ತದೆ; ಆದುದರಿಂದ ಇದನ್ನೆಲ್ಲ ತಡೆಯಲು ಮತ್ತು ಸಿಖ್ ಹೋರಾಟವನ್ನು ಕುಂದಿಸಲು ದಂಡನಾಯಕರ ಸಲಹೆಯಂತೆ ಲೋಹಗಡವನ್ನು ನೆಲಸಮ ಮಾಡಲು ಮುಘಲ್ ಸಾಮ್ರಾಟ ಆದೇಶ ನೀಡಿದ.

ಅಮೃತಸರ ಮತ್ತು ಜಬಾಲ್ ಕಲನ್‌ನಿಂದ 13 ಕಿ.ಮೀ. ಸಮಾನ ದೂರದಲ್ಲಿರುವ ಮಂಡಿಯಾಳ ಗ್ರಾಮದ ಮಸ್ಸ ರಣಗಾರ್ ಎಂದು ಖ್ಯಾತನಾಗಿದ್ದ. ಚೌಧುರಿ ಮೂಸ–ಉಲ್–ಖಾನ್‌ಗೆ[(1)] ನೆಲಸಮ ಮಾಡುವ ಕಾರ್ಯವನ್ನು ವಹಿಸಲಾಯಿತು. ಬಂದಾಸಿಂಗ್‌ಗೆ ಶಿಕ್ಷೆ ನೀಡಿ ಕೊಂದು ಹಾಕಿದ ನಂತರ ಕೋಟೆಯನ್ನು ನೆಲಸಮ ಮಾಡುವ ಕಾರ್ಯವನ್ನು ಆರಂಭಿಸಿದರು. ಈ ಉದ್ದೇಶಕ್ಕಾಗಿ ನೂರು ಮುಘಲ್ ಸೈನಿಕರು ಮತ್ತು ಒಂದು ಸಾವಿರ ಕೂಲಿಯಾಳುಗಳನ್ನು ನೇಮಿಸಿಕೊಂಡರು. ಪ್ರತಿ ಬೆಟ್ಟವನ್ನು ಒಂದು ಘಟಕ ಎಂದು ಪರಿಗಣಿಸಿ, ಗೋಡೆಗಳು, ಕಂದಕಗಳು, ಅಸ್ತಿಭಾರಗಳು ಮತ್ತು ದಾರಿಗಳನ್ನು ನೆಲಸಮಗೊಳಿಸಲು ಆರಂಭಿಸಿದರು. ಒಂದು ಬೆಟ್ಟದ ಈ ರಚನೆಗಳನ್ನು ನೆಲಸಮ ಮಾಡಿದ ನಂತರ ಈ ಪಡೆ ಮತ್ತೊಂದು ಬೆಟ್ಟಕ್ಕೆ ಮುಂದುವರಿಯುತ್ತಿತ್ತು. ಕೋಟೆಯನ್ನು ನೆಲಸಮ ಮಾಡಲು ಮತ್ತು ಸಿಕ್ಖರನ್ನು ತರಿದುಹಾಕಲು ಕರೆತಂದ ರಣಗಾರರು ಮುಂದೆ ಅಂಬಾಲದ ಹಳೆ ಜಿಲ್ಲೆ 85 ಗ್ರಾಮಗಳಲ್ಲಿ ನೆಲೆಗೊಂಡರು.

ಆ ಸಮಯದಲ್ಲಿ ಲಖಿ ಭಾಯ್ ವಂಜಾರನ ವ್ಯಾಪಾರಿ ತಾಂಡಾ (ಕಾರವಾನ್)ಗಳಲ್ಲಿ ಉದ್ಯೋಗಸ್ಥರಾಗಿದ್ದವರು ಮತ್ತು ಅವರ ಕುಟುಂಬಗಳು ಮತ್ತು ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದ ಸಿಕ್ಲಿಗಾರರ ಕುಟುಂಬಗಳು ಈ ಬೆಟ್ಟಗಳಲ್ಲಿ ಮತ್ತು ಕೋಟೆಯ ತಪ್ಪಲಿನಲ್ಲಿದ್ದ ಗ್ರಾಮಗಳಲ್ಲಿ ವಾಸಿಸುತ್ತಿದ್ದವು. ಈ ಕೋಟೆಯನ್ನು ಈ ವಂಜಾರರು, ಸಿಕ್ಲಿಗಾರರು ಮತ್ತು ಅವರ

ವಂಶಸ್ಥರು ಶ್ರಮವಹಿಸಿ ಕಟ್ಟಿದ್ದರು.

ಮುಘಲರು ಕೋಟೆಯನ್ನು ನಾಶಪಡಿಸುವ ಜೊತೆಗೆ ಈ ಗ್ರಾಮಗಳನ್ನು ಸಹ ಆಕ್ರಮಿಸಿಕೊಂಡಂತೆ ಕಾಣುತ್ತದೆ. ಈ ಹಳ್ಳಿಗಳಲ್ಲಿ ವಾಸಿಸುತ್ತಿದ್ದ ಅವರು ವಂಜಾರ ಮತ್ತು ಸಿಕ್ಲಿಗಾರರ ಕುಟುಂಬಗಳನ್ನು ಹೊರದೂಡಿರಬಹುದು ಇಲ್ಲವೆ ಕುಟುಂಬಗಳ ಸದಸ್ಯರನ್ನು ಕೊಂದಿರಬಹುದು. ಮುಘಲ್ ಸೈನಿಕರ ದೌರ್ಜನ್ಯದಿಂದ ಪಾರಾಗಲು ಕೆಲವರು ಹಳ್ಳಿಗಳನ್ನು ತೊರೆದುಹೋಗಿರಬಹುದು. ಕೋಟೆಯನ್ನು ನೆಲಸಮ ಮಾಡಲು ಬಂದ ಕೂಲಿಯಾಳುಗಳಿಗೆ ವಂಜಾರ ಮತ್ತು ಸಿಕ್ಲಿಗರು ವಾಸಿಸುತ್ತಿದ್ದ ಮನೆಗಳನ್ನು ವಾಸಿಸಲು ನೀಡಿರಬಹುದು. ಹಾಗೆಯೇ ಭೂಮಿಯನ್ನು ಕೊಟ್ಟಿರಬಹುದು. 1716ಕ್ಕೂ ಮೊದಲು ಇಲ್ಲಿ ಒಬ್ಬ ಮುಸ್ಲಿಂ ವ್ಯಕ್ತಿಯೂ ಇರಲಿಲ್ಲ. ಇಲ್ಲಿನ ಎಲ್ಲ ಭೂಮಿಯ ಒಡೆತನ ಲಖಿ ರಾಯ್ ವಂಜಾರ, ಅವನ ನೌಕರರು ಮತ್ತು ಸಿಖ್‌ಗಳಿಗೆ ಸೇರಿತ್ತು.

ಎಪ್ಪತ್ತು ಎಂಬತ್ತು ವರ್ಷಗಳಲ್ಲಿ ಕಟ್ಟಿದ ಕೋಟೆಯನ್ನು ನೆಲಸಮಗೊಳಿಸಲು ಕನಿಷ್ಠ 20 ವರ್ಷವಾದರೂ ತೆಗೆದುಕೊಂಡಿರಬಹುದು. ಈ ಕೋಟೆಯನ್ನು ನೆಲಸಮ ಮಾಡುವ ಉಸ್ತುವಾರಿಯನ್ನು ಮೂಸ ರಣಗಾರ್ ಹೊತ್ತಿದ್ದರಿಂದ ಆತ ತನ್ನ ಅರಮನೆಯನ್ನು ಇಲ್ಲಿ ಕಟ್ಟಿಸಿಕೊಂಡಿದ್ದ. ಮೂಸ ಬದುಕಿದ್ದ ಅರಮನೆಯ ಅವಶೇಷಗಳು ಈಗಲೂ ಮಷ್ರೂಲಿ ಗ್ರಾಮದಲ್ಲಿ ಕಾಣಬಹುದು. ಅಲ್ಲಿಯೇ ಹತ್ತಿರದಲ್ಲಿ ಮುಘಳವಳಿ ಎಂಬ ಹೆಸರಿನ ಹಳ್ಳಿಯಿದೆ. ಪ್ರಾಯಶಃ ನೆಲಸಮ ಕಾರ್ಯಕ್ಕೆ ಬಂದಾ ಕೂಲಿಯಾಳುಗಳು ಅಲ್ಲಿ ವಾಸಿಸಿರಬಹುದು. ಇಲ್ಲಿ ಈಗ ವಾಸಿಸಿರುವ ಮುಸ್ಲಿಮರೆಲ್ಲರೂ 1716 ರಿಂದ 1740ರ ಅವಧಿಯಲ್ಲಿ ನೆಲೆಗೊಂಡವರ ಕುಟುಂಬಗಳ ವಂಶಸ್ಥರು.

ಸಧೌರ ಮತ್ತು ಲೋಹಗಡದ ನಡುವೆ ವಂಜಾರರು ವಾಸಿಸುತ್ತಿದ್ದ ಹಳ್ಳಿಗಳಿವೆ. ಇಲ್ಲಿನ ಭೂಮಿಯೆಲ್ಲವೂ ಭಾಯ್ ಲಖಿ ವಂಜಾರನ ಆಸ್ತಿ. ಇಲ್ಲಿ ವಾಸಿಸುತ್ತಿದ್ದವರು ಅವನ ನೌಕರರು. ಮುಘಲರು ಬಹುತೇಕ ಅವರನ್ನು ಕೊಂದು, ಅವರ ಜಮೀನನ್ನು ಕೋಟೆಯ ನೆಲಸಮ ಕಾರ್ಯದಲ್ಲಿ ತೊಡಗಿಸಿಕೊಂಡ ಕೂಲಿಯಾಗಳುಗಳಿಗೆ ಕೊಟ್ಟಿರಬಹುದು. ಇದೆಲ್ಲದರ ನಡುವೆಯೂ ಕೆಲ ವಂಜಾರರು ಅದೇ ಗ್ರಾಮಗಳಲ್ಲಿ ಉಳಿದರು. ಈ ವಂಜಾರರು ಮುಘಲರಿಗೆ ಸಹಕಾರ ನೀಡಿರುವ ಇಲ್ಲವೇ ಶರಣಾಗಿರುವ ಸಾಧ್ಯತೆ ಇದೆ. ಅಥವಾ ಕೋಟೆಯನ್ನು ನೆಲಸಮ ಮಾಡಿದ ನಂತರ ಮೂಸ ರಣಗಾರ್ ಅಮೃತಸರ ಜಿಲ್ಲೆಯ ತನ್ನ ಹುಟ್ಟೂರಿಗೆ ಹಿಂದಿರುಗಿದ ಮೇಲೆ 1740ರ ನಂತರ ಊರು ಬಿಟ್ಟ ವಂಜಾರರು ಮತ್ತೆ ಸೇರಿಕೊಂಡ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಈಗಲೂ ಈ ಪ್ರದೇಶದಲ್ಲಿ ಹಲವಾರು ವಂಜಾರರು ಮತ್ತು ಸಿಕ್ಲಿಗಾರರು ವಾಸಿಸುತ್ತಿರುವುದನ್ನು ಕಾಣಬಹುದು. ಅವರೆಲ್ಲ ಸಿಕ್ಖರು. ಸಿಖ್ ಧರ್ಮದ ರೀತಿಯಲ್ಲಿಯೇ ಆಚರಣೆಗಳನ್ನು ಅನುಸರಿಸುತ್ತಾರೆ. ಈ ಪ್ರದೇಶ ಮತ್ತು ಹತ್ತಿರದ ಜಿಲ್ಲೆಗಳ ಅನೇಕ ಹಳ್ಳಿಗಳನ್ನು ಈಗಲೂ ವಂಜಾರರ ಹಳ್ಳಿಗಳು ಎಂದೇ ಕರೆಯುತ್ತಾರೆ. ಹರಿಯಾಣದ ಯಮುನಾನಗರ, ಕುರುಕ್ಷೇತ್ರ, ಫತೇಬಾದ್, ಅಂಬಾಲ ಮತ್ತು ಪಂಚಕುಲ ಜಿಲ್ಲೆಗಳ ಅನೇಕ ಹಳ್ಳಿಗಳಲ್ಲಿ ವಂಜಾರರು ವಾಸಿಸುತ್ತಾರೆ. ಅಲ್ಲದೆ ಹಿಮಾಚಲ ಪ್ರದೇಶದ ಹಲವೆಡೆ ಕಂಡುಬರುತ್ತಾರೆ. ಪಂಜಾಬ್ ರಾಜ್ಯದಲ್ಲೂ ವಂಜಾರರು ಅನೇಕ ಹಳ್ಳಿಗಳಲ್ಲಿ ನೆಲೆಯಾಗಿದ್ದಾರೆ. ಉದಾಃ ತಂಡಿ, ನವನ್ ಗೋವನ್ (ಖರರ್ ತಾಲೂಕು) ಮಚ್ಚಿವಾರ ತಾಲೂಕಿನ ಹಲವಾರು ಹಳ್ಳಿಗಳು ರೋಪರ್ ಮತ್ತು ಲೂಧಿಯಾನ ವ್ಯಾಪ್ತಿಯ ಹಳ್ಳಿಗಳಲ್ಲೂ ವಾಸಿಸುತ್ತಿದ್ದಾರೆ. ಹಾಗೆಯೇ ಉತ್ತರ ಪ್ರದೇಶ ಮತ್ತು ಉತ್ತರಕಾಂಡದಲ್ಲಿಯೂ ತಾಂಡಾ ಹಳ್ಳಿಗಳಿವೆ. ಅಲ್ಲಿ ಪ್ರಮುಖವಾಗಿ ವಂಜಾರರು ವಾಸಿಸುತ್ತಿದ್ದಾರೆ. ಈ ಎಲ್ಲ ಕುಟುಂಬಗಳು ಹುಟ್ಟು, ಮದುವೆ, ಸಾವು ಮತ್ತು

ಹಬ್ಬಗಳಿಗೆ ಸಂಬಂಧಿಸಿದಂತೆ ಸಿಖ್ ಧರ್ಮದ ಸಂಪ್ರದಾಯದ ಆಚರಣೆಗಳನ್ನೇ ಪಾಲಿಸುತ್ತಾರೆ.

---

**ಅಡಿ ಟಿಪ್ಪಣಿ**

1. ಮುಂದೆ 1740ರ ಆಗಸ್ಟ್ ಒಂದರಂದು ಆತ ಸುಖಸಿಂಗ್ ಮತ್ತು ಮಹ್‌ತಾನ್ ಸಿಂಗ್‌ನಿಂದ ಹತ್ಯೆಯಾದ.

# ಅಧ್ಯಾಯ 16

# ಲೋಹಗಡ ಕೋಟೆಯು ನೆಲಸಮವಾದ ನಂತರದ ಪರಿಸ್ಥಿತಿ

ವರ್ತಕ ಲಖಿ ರಾಯ್ ವಂಜಾರಾಗೆ ಮುಘಲ್ ಸಾಮ್ರಾಟ ಶಹಜಹಾನ್, ನಾಲ್ಕು ಸಾವಿರದ ಮಾನ್ಸಾಬ್ ಅನುಗ್ರಹಿಸಿದ್ದನೆಂದು ಹೇಳಲಾಗುತ್ತದೆ. ಅಥಾರ್ ಆಲಿಯ **"ಮುಘಲ್ ನೊಬಲಿಟಿ ಅಂಡರ್ ಔರಂಗಜೇಬ್"** ಕೃತಿಯಲ್ಲಿ ಮುಸ್ಲಿಂ, ಹಿಂದು ರಜಪೂತ, ಮರಾಠ ಮತ್ತು ಇತರ ಮಾನ್ಸಾಬುದಾರರ ಪಟ್ಟಿಯನ್ನು ನೀಡಲಾಗಿದೆ.. ಅದರಲ್ಲಿ ಸಿಖ್ ಸಮುದಾಯದ ಒಬ್ಬ ವ್ಯಕ್ತಿಯ ಹೆಸರೂ ಇಲ್ಲ. ಆದರೂ ಲಖಿ ರಾಯ್ ವಂಜಾರ ಬಹಳ ಶ್ರೀಮಂತ ವರ್ತಕನಾಗಿದ್ದ ಎಂಬುದರಲ್ಲಿ ಸಂಶಯವಿಲ್ಲ. ಆತ ಮಧ್ಯ ಏಷ್ಯಾದಿಂದ ಶ್ರೀಲಂಕಾದವರೆಗೆ ವ್ಯಾಪಾರ ನಡೆಸುತ್ತಿದ್ದ ವಿವರಗಳು, ಅವನ ಬಳಿಯಿದ್ದ ನೌಕರ ಪಡೆ, ಜಾನುವಾರು ಸಂಪತ್ತು ಮತ್ತು ವಹಿವಾಟಿನ ಸ್ವರೂಪಗಳು ಹಿಂದಿನ ಅಧ್ಯಾಯಗಳ್ಲಲಿ ವಿವರವಾಗಿ ಬಂದಿವೆ.

ಸಿಖ್ ಸೈನಿಕರು, ಲಖಿ ರಾಯ್ ವಂಜಾರನ ಮಕ್ಕಳು ಮತ್ತು ಮೊಮ್ಮಕ್ಕಳ ಮಾರಣ ಹೋಮವಾದ ನಂತರ ಹಾಗೂ ಲೋಹಗಡ ಕೋಟೆ ಪತನವಾದ ತರುವಾಯದಲ್ಲಿ ಅವನ ವ್ಯಾಪಾರಿ ತಾಂಡಗಳಲ್ಲಿ ಕೆಲಸ ಮಾಡುತ್ತಿದ್ದವನು ನಿರುದ್ಯೋಗಿಗಳಾದರು. ಈಗ ಅವರು ಕೆಲಸ ಹುಡುಕಿಕೊಂಡು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಲೆಯಲಾರಂಭಿಸಿದರು.

ಅದೇ ರೀತಿ ಲಖಿ ರಾಯ್ ವಂಜಾರ, ಗುರುಸಾಹಿಬ್, ಬಂದಾ ಸಿಂಗ್ ಮೊದಲಾದವರುಗಳಿಗೆ ಆಯುಧ ಮಾಡಿಕೊಡುತ್ತಿದ್ದವರೂ ನಿರುದ್ಯೋಗಿಗಳಾದರು. ಮುಘಲರು ಅವರಿಗೆ ಉದ್ಯೋಗ ನೀಡಲಿಲ್ಲ.

ವ್ಯಾಪಾರ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದವರು ಊರಿಂದ ಊರಿಗೆ, ಮನೆಯಿಂದ ಮನೆಗೆ ಸರಕು ಮಾರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಯಾವ ಸ್ಥಳಗಳಲ್ಲಿ ಯಾವ ಸರಕಿಗೆ ಬೇಡಿಕೆ ಇದೆಯೆಂಬ ತಿಳುವಳಿಕೆ ಅವರಿಗಿತ್ತು. ಆದರೆ ಬಂಡವಾಳದ ಅಭಾವದಿಂದ ದೊಡ್ಡ ಮಟ್ಟದಲ್ಲಿ ವ್ಯಾಪಾರ ಮಾಡುವುದು ಅವರಿಗೆ ಸಾಧ್ಯವಿರಲಿಲ್ಲ. ಅವರು ಅಲ್ಪ ಬಂಡವಾಳ ಹಾಕಿ ಅಗ್ಗದ ಬೆಲೆಯ ವಸ್ತುಗಳನ್ನು ಊರಿಂದ ಊರಿಗೆ ಓಯ್ದು ಬಿಕರಿ ಮಾಡಿ ಜೀವಿಸುತ್ತಿದ್ದರು. ಹಾಗಾಗಿ ಅವರು ಸಣ್ಣ ವ್ಯಾಪಾರಿಗಳಾದರು. ನೂರಾರು ವಂಜಾರರು ಇಂಥ ಸಣ್ಣ ಪುಟ್ಟ ವ್ಯಾಪಾರಗಳಲ್ಲಿ ನಿರತರಾದರು. ಸಂಪರ್ಕವಿಲ್ಲದ ಹಳ್ಳಿಗಳಿಗೆ ಅನಿವಾರ್ಯವಾದರು. ದೊಡ್ಡ ಕಾರಾವಾನ್‌ಗಳಲ್ಲಿ ಅವರು ಈಗ ವ್ಯಾಪಾರ ಮಾಡದೇ ಹೋದರೂ ಜನರು ಅವರನ್ನು ವಂಜಾರರು ಎಂದೇ ಕರೆಯುತ್ತಿದ್ದರು. ಇವರಲ್ಲಿ ಬಹುತೇಕ ಮಂದಿ ರಜಪೂತ ಮತ್ತು ಕ್ಷತ್ರಿಯ ಮೂಲದವರು.

ಕಾಲ ಸರಿಯುತ್ತಾ, ಸರಿಯುತ್ತಾ, ಈ ವಂಜಾರರ ಬದುಕಿನೊಡನೆ ಅನೇಕ ನುಡಿಗಟ್ಟುಗಳು, ಗಾದೆಗಳು ಸೇರಿಹೋದವು.

ವಂಜಾರರ ರೀತಿಯೇ ನಿರುದ್ಯೋಗಿಗಳಾದ, ಆಯುಧ ತಯಾರಿಕೆಯಲ್ಲಿ ನಿಪುಣರಾದ ಸಿಕ್ಲಿಗರೂ ಒಂದೇ ಸ್ಥಳದಲ್ಲಿ ಕೆಲಸ ಪಡೆಯುವ ಅವಕಾಶದಿಂದ ವಂಚಿತರಾಗಿದ್ದರು. ಅವರೂ ಸಹ ಬದುಕು ನಡೆಸಲು ಉದ್ಯೋಗಕ್ಕಾಗಿ ಊರಿಂದ ಊರಿಗೆ ಅಲೆದರು. ಅವರಲ್ಲಿ ಅನೇಕರು ಆಯುಧ ತಯಾರಿಸುವ ಉದ್ಯೋಗ ದೊರೆಯಬಹುದೆಂಬ ಆಸೆಯಿಂದ ಕುಮೋನ್, ರಾಜಪುತಾಣ (ರಾಜಸ್ತಾನ್) ಮತ್ತು ಮರಾಠ ಪ್ರದೇಶದವರೆಗೂ ಹೋದರು. ಆದರೆ ಅವರಿಗೆ ಯಾವ ರಾಜ, ಚೌಧುರಿ ಅಥವಾ ಜಮೀನುದಾರನಾಗಲಿ ಆಯುಧ ತಯಾರಿಕೆಯ ಉದ್ದಿಮೆಯನ್ನು ಸ್ಥಾಪಿಸಿಕೊಡಲಿಲ್ಲ. ಇದಕ್ಕೆ ಅವರು ಪೇಟಧಾರಿ ಸಿಖ್‌ಗಳಾಗಿದ್ದ ಒಂದು ಕಾರಣ. ಅವರು ಕೂದಲು ಕತ್ತರಿಸಲು ನಿರಾಕರಿಸುತ್ತಿದ್ದರು. ಊರಿನ ಹೊರಗಡೆ ಬದುಕುತ್ತಾ ತಮ್ಮ ಕೌಶಲ್ಯವನ್ನು ಕತ್ತಿ, ಚಾಕು, ಕುಡುಗೋಲು, ಬಟ್ಟಲು, ಪಾತ್ರೆಗಳಂತಹ ಮನೆ ಬಳಕೆಯ ವಸ್ತುಗಳನ್ನು ಮಾಡಿ, ಮಾರಿ ಜೀವನ ಯಾಪನೆ ಮಾಡಿದರು. ಅವರು ಒಂದು ಹಳ್ಳಿಯ ಅಥವಾ ಪಟ್ಟಣದ ಹತ್ತಿರ ತಾತ್ಕಾಲಿಕವಾಗಿ ನೆಲೆ ನಿಂತು ಸ್ಥಳೀಯರ ಬೇಡಿಕೆಗಳನ್ನು ಪೂರೈಸಿ ಮುಂದೆ ಸಾಗುತ್ತಿದ್ದರು. ಒಂದು ವೇಳೆ ಹೆಚ್ಚು ಗ್ರಾಹಕರು ಸಿಗದಿದ್ದರೆ ತಕ್ಷಣ ಮುಂದಿನ ಊರಿಗೆ ಹೊರಡುತ್ತಿದ್ದರು. ಹೀಗಾಗಿ ಜಿಪ್ಸಿಗಳಂತೆ ಅಲೆಮಾರಿ ಬದುಕನ್ನು ಅಪ್ಪಿಕೊಂಡರು.

ಪಂಜಾಬ್, ಹರಿಯಾಣ, ರಾಜಸ್ತಾನ್, ಮಹಾರಾಷ್ಟ್ರ, ಜಾರ್ಖಂಡ್ ಮತ್ತು ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ವಂಜಾರರು ಮತ್ತು ಸಿಕ್ಲಿಗಾರರು ಕಂಡುಬರುವುದಕ್ಕೆ ಇದೇ ಕಾರಣ.

# ಅಧ್ಯಾಯ 17

# ಬಂದಾ ಸಿಂಗ್‌ನ ಕೊಡುಗೆ

ಬಂದಾ ಸಿಂಗ್ ಒಂದು ಸೈನ್ಯದ ಶ್ರೇಷ್ಠ ದಂಡನಾಯಕ ಮಾತ್ರವಲ್ಲ. ತನ್ನ ಅದ್ಭುತ ಕಾರ್ಯಗಳಿಂದಾಗಿ ಪವಾಡ ಮಾಡಿದವನು. ಐದು ನದಿಗಳ ಸಂಗಮದ ಪಂಜಾಬ್ ನಾಡಿನಲ್ಲಿ ಆತ ಜನಮುಖಿಯಾದ ಕ್ರಾಂತಿಯೊಂದನ್ನು ಸೃಷ್ಟಿಸಿದ. ಆತ ಪಂಜಾಬ್‌ನ ಸ್ವಾತಂತ್ರ್ಯಕ್ಕಾಗಿ ಮಾತ್ರವಲ್ಲ. ಏಳು ನೂರು ವರ್ಷಗಳಿಂದ ವಿದೇಶಿ ಆಳ್ವಿಕೆಯ ದಾಸ್ಯಕ್ಕೆ ತುತ್ತಾಗಿದ್ದ ಅಖಂಡ ಭಾರತದ ವಿಮೋಚನೆಗೆ ಅಸ್ತಿಭಾರ ಹಾಕಿದ್ದ. ಮುಘಲರ ಸೈನ್ಯವು ಸರ್ವಶಕ್ತವಾದದ್ದು. ಶಾಶ್ವತವಾಗಿ ಇರುವಂಥದ್ದು ಮತ್ತು ಅಜೇಯವಾದದ್ದು ಎಂಬ ಹುಸಿ ನಂಬಿಕೆಯನ್ನು ಸ್ಫೋಟಗೊಳಿಸಿದ. ಆತ ಬದುಕಿರುವವರೆಗೂ ಮೂವರು ಸಾಮ್ರಾಟರು, ಹತ್ತಾರು ರಾಜ್ಯಪಾಲರು, ಎರಡನೂರಕ್ಕೂ ಹೆಚ್ಚು ಸಣ್ಣ ರಾಜರು, ದಂಡನಾಯಕರು, ಪಾಳೆಯಗಾರರು ಮತ್ತು ಅಸಂಖ್ಯಾತ ಜಿಹಾದಿಗಳು ಆತನ ಭಯದಿಂದ ಒಂದು ದಿನವೂ ನೆಮ್ಮದಿಯಿಂದ ನಿದ್ರೆ ಮಾಡಲಿಲ್ಲ.[1] ತನ್ನನ್ನು ಸೋಲಿಸಲು ಒಂದು ಲಕ್ಷಕ್ಕು ಮೀರಿದ ಸೈನ್ಯವು ನಿರಂತರವಾಗಿ ಹೋರಾಡಬೇಕಾದ ಅನಿವಾರ್ಯವನ್ನು ಸೃಷ್ಟಿಸಿದ್ದ.

ಆತನ ಹೋರಾಟದಲ್ಲಿ ಮೂವತ್ತರಿಂದ ನಲವತ್ತು ಸಿಖ್ ಸೈನಿಕರು ಮಡಿದರು. ಅಂಥ ದೊಡ್ಡ ಜೀವಹಾನಿಯ ನಡುವೆಯೂ ಸಿಕ್ಖರು ಸ್ವಾತಂತ್ರ್ಯಕ್ಕಾಗಿ ತಮ್ಮ ಹೋರಾಟವನ್ನು ಮುಂದುವರೆಸಿದರು. ಬಂದಾ ಸಿಂಗ್ ಹುತಾತ್ಮನಾದ ನಂತರವು ಪಂಜಬ್‌ನಲ್ಲಿ ಶಾಂತಿಯುತ ಆಳ್ವಿಕೆ ನಡೆಸಲು ಮುಘಲರಿಗೆ ಸಾಧ್ಯವಾಗಲಿಲ್ಲ. ಮುಘಲರ ಅಧಿಪತ್ಯದ ಪತನ ಪಂಜಾಬ್‌ನಿಂದ ಆರಂಭವಾಗಿ ನಿಧಾನವಾಗಿ ಇತರ ಕಡೆಗೆ ಹಬ್ಬಿತು. ಕಾಲಾನಂತರದಲ್ಲಿ ಸಿಕ್ಖರು ಪಂಜಾಬ್ ಪ್ರಾಂತ್ಯದಲ್ಲಿ ಮಾತ್ರ ತಮ್ಮ ಪಾರಮ್ಯವನ್ನು ಸಾಧಿಸಲಿಲ್ಲ. ಅವರ ಪ್ರಭಾವ ರಾಜಪುತಾಣ ಮತ್ತು ಹಿಂದೂಸ್ತಾನದ ಬೇರೆ ಬೇರೆ ಭಾಗಗಳಿಗೂ ವಿಸ್ತರಿಸಿತು. ಇವೆಲ್ಲವೂ ಬಂದಾ ಸಿಂಗ್‌ನ ಸಾಧನೆಗಳ ವಿಸ್ತರಣೆಗಳು.

ಮುಘಲರ ಅಧಿಪತ್ಯವನ್ನು ಕಿತ್ತೊಗೆಯಲು ಬಂದಾ ಸಿಂಗ್ ಆರಂಭಿಸಿದ ಹೋರಾಟದ ಸನ್ನಿವೇಶವನ್ನು ಪರಿಗಣಿಸಿದಾಗ ಆತನ ಸಾಧನೆ ಮತ್ತಷ್ಟು ವೇದ್ಯವಾಗುತ್ತದೆ. ಗುರುಗಳ ಪತ್ನಿಯರು ಬಂದಾ ಸಿಂಗ್ ಸೇರುವುದನ್ನು ವಿರೋಧಿಸಿದರೆಂದು ರತನ್ ಸಿಂಗ್ ಭಂಗು ಹೇಳುತ್ತಾರೆ. ಅಜಿತ್ ಸಿಂಗ್ ಪಲಿತ್ ಮುಘಲರ ಪರ ಸೇರಿಕೊಂಡರು. ತತ್ ಖಲ್ಸಾ ಎಂಬುದು ಮುಘಲರ ಪರವಾಗಿ ನಿಂತಿತು. ಇಂಥ ಹಿನ್ನೆಲೆಯಲ್ಲಿ ಬಂದಾ ಸಿಂಗ್ ಮಾಡಿದ ಸಾಧನೆ ಅಮೋಘ. ಆತನ ಕಾಲಾವಧಿ, ಸಿಖ್ ಚರಿತ್ರೆಯಲ್ಲಿ ಅತ್ಯಂತ ಜನಮುಖಿಯಾದ ಕ್ರಾಂತಿಕಾರಿ ಯುಗ ಎನ್ನಬಹುದು.

ಬಂದಾ ಸಿಂಗ್ ಸ್ವಾತಂತ್ರ್ಯದ ಪಾಠಗಳನ್ನು ತನ್ನ ರಕ್ತದಿಂದ ಬರೆದ. ಆದರೆ ದಾಸ್ಯ

ಮನೋಭಾವದ, ಹೇಡಿ ಜನರು ಅದನ್ನು ಸೂಕ್ತವಾಗಿ ಗ್ರಹಿಸಲಿಲ್ಲ. ಆತನನ್ನು ಪ್ರೀತಿಯಿಂದ ಅರ್ಥಮಾಡಿಕೊಂಡದ್ದು ಸಿಖ್ ಸಮುದಾಯ ಮಾತ್ರ. ಸಾವಿರಾರು ತ್ಯಾಗಗಳನ್ನು ಮಾಡಿದ ನಂತರ ಸಿಕ್ಖರು ತಮ್ಮ ಸ್ವಾತಂತ್ರ್ಯಗಳಿಸಿ ತಮ್ಮದೇ ರಾಷ್ಟ್ರವನ್ನು ಸ್ಥಾಪಿಸಿಕೊಂಡರು.

ಸಿಕ್ಖರಿಗೆ ಸ್ವಾತಂತ್ರ್ಯದ ಮೌಲ್ಯಗಳನ್ನು ಬಂದಾ ಸಿಂಗ್ ಬೋಧಿಸಿದ. ಆಳುವವನನ್ನು ಮತ್ತು ಆಳಿಸಿಕೊಳ್ಳುವವನ ನಡುವಿನ ವ್ಯತ್ಯಾಸವನ್ನು ಅರಿತ ಸಿಖ್ ರಾಷ್ಟ್ರವು ದಾಸ್ಯವನ್ನು ಅಂಗೀಕರಿಸಲು ಅಥವಾ ಇನ್ನೊಬ್ಬರ ಅಧಿಪತ್ಯವನ್ನು ಒಪ್ಪಿಕೊಳ್ಳಲು ನಿರಾಕರಿಸಿತು. ಬಂದಾ ಸಿಂಗ್ ಸಿಕ್ಖರಿಗೆ ಒಂದು ನಾಣ್ಯ ಪದ್ಧತಿಯನ್ನು ಜಾರಿಗೆ ತಂದ, ಮೊಹರು ಮತ್ತು ಪಂಚಾಂಗವನ್ನು ನೀಡಿದ. ಊಳಿಗಮಾನ್ಯ ಪದ್ಧತಿಯನ್ನು ಅಂತ್ಯಗೊಳಿಸಿ, ಸಮಾನತಾ ಪದ್ಧತಿಯನ್ನು ಜಾರಿಗೊಳಿಸಿದ ವಿಶ್ವದ ನಾಯಕರಲ್ಲಿ ಬಂದಾ ಸಿಂಗ್ ಮೊದಲಿಗ.

ಸಂಘಟನೆಯ ಶಕ್ತಿ ಮತ್ತು ನಾಯಕತ್ವದ ಬಗೆಗೆ ಬಂದಾ ಸಿಂಗ್ ಸಿಕ್ಖರಿಗೆ ಅರಿವು ಮೂಡಿಸಿದ. ಆತ ತಾನೇ ನಾಯಕನಾಗಿ ಕಾರ್ಯ ನಿರ್ವಹಿಸಿದ . ಅದರಂತೆ ಇತರರೂ ನಾಯಕರಾಗಲು ಬೋಧಿಸಿದ. ಅತ್ಯಂತ ರಾಕ್ಷಸೀತನದ ಹಿಂಸೆಯನ್ನು ಸಹಿಸಿ ತಾನು ನಂಬಿದ ತತ್ವಗಳಿಗೆ ಹುತಾತ್ಮನಾಗುವ ಬಗ್ಗೆ ಒಬ್ಬ ಎಷ್ಟು ಸಮರ್ಥನಾಗಿರಬಹುದು ಎಂಬುದನ್ನು ತೋರಿಸಿಕೊಟ್ಟ. ಬಹುಶಃ ಜಗತ್ತಿನ ಚರಿತ್ರೆಯಲ್ಲಿ ಬೇರೊಬ್ಬ ಸೇನಾಧಿಪತಿ ಅಂತಹ ಕ್ರೂರ ಶಿಕ್ಷೆಗೆ ಒಳಗಾಗಿರುವ ಸಾಧ್ಯತೆ ಇಲ್ಲ.

ಬಂದಾ ಸಿಂಗ್ ಒಬ್ಬ ನಿಜವಾದ ಸಿಖ್ ಬದುಕುವ ಮಾರ್ಗಗಳನ್ನು ಹೇಳಿಕೊಟ್ಟ. ತನ್ನ ಜೀವನುದ್ದಕ್ಕೂ ಸಿಖ್ ಧರ್ಮ ಪ್ರತಿನಿಧಿಸಿದ ಮೌಲ್ಯಗಳಿಗೆ ಅಂಟಿಕೊಂಡು ಬದುಕಿದ. ತನ್ನ 45 ವರ್ಷಗಳ ಜೀವಿತಾವಧಿಯಲ್ಲಿ ಆತ ಬಾಲ್ಯದ ಏಳೆಂಟು ವರ್ಷಕಾಲ ಮಾತ್ರ ಸಿಖ್ ಅಲ್ಲದೆ ಬದುಕಿದ. ಸಿಖ್ ಧರ್ಮ ಸ್ವೀಕರಿಸಿದಸ ನಂತರ ಒಬ್ಬ ಮಾದರಿ ಹಾಗು ನಿಜವಾದ ಸಿಕ್ಖನಂತೆ ಬದುಕಿದ. ಹಾಗೆಯೇ ಒಬ್ಬ ನಿಷ್ಠಾವಂತ ಸಿಕ್ಖನಂತೆ ಹುತಾತ್ಮ ಪಟ್ಟವನ್ನಲಂಕರಿಸಿದ.

ಆತ ಈ ಭೂಮಿಯಲ್ಲಿನ ಒಂದು ಪವಾಡ. ಆತ ಚರಿತ್ರೆಯಲ್ಲಿ ಹೊಸ ಸಂಚಲನವನ್ನೇ ಸೃಷ್ಟಿಸಿದ.

ಸಿಕ್ಖರ ಚರಿತ್ರೆಯಲ್ಲಿ ಗುರುಗಳ ನಂತರದ ವೈಭವದ ಸ್ಥಾನ ಬಂದಾ ಸಿಂಗ್‌ನದು. ಬಂದಾ ಸಿಂಗ್ ನಂತರ ಬಂದ ಗುರುಗಳೆಲ್ಲರೂ ಆತನ ಕಾಣಿಕೆಯನ್ನು ಸ್ಮರಿಸಿದ್ದಾರೆ. ಸಿಖ್ ರಾಷ್ಟ್ರದ ಉಳಿವಿಗೆ ಪುನಶ್ಚೇತನಕ್ಕೆ ಚೈತನ್ಯ ಸ್ಫೂರ್ತಿಯನ್ನು ಹುತಾತ್ಮನಾಗುವ ಮೂಲಕ ತುಂಬಿದವನು ಬಂದಾ ಸಿಂಗ್ ಮಾತ್ರ.

**ಬಂದಾ ಸಿಂಗ್ ಮತ್ತು ಇಸ್ಲಾಂ**

ಬಂದಾ ಸಿಂಗ್‌ನನ್ನು ಒಬ್ಬ ಕ್ರೂರ ದಂಡನಾಯಕ ಮತ್ತು ಇಸ್ಲಾಂ ವಿರೋಧಿಯ ಹಾಗೆ ಕೆಲವು ಮುಸ್ಲಿಂ ಲೇಖಕರು ಚಿತ್ರಿಸಲು ಪ್ರಯತ್ನಿಸಿದ್ದಾರೆ. ಇದೊಂದು ಹಸಿಸುಳ್ಳು; ಕಟ್ಟುಕತೆ. ಬಂದಾ ಸಿಂಗ್ ಎಂದೂ ಒಬ್ಬ ಮುಗ್ಧ, ನಿರಪರಾಧಿ ಮುಸ್ಲಿಂ ವ್ಯಕ್ತಿಯನ್ನು ಕೊಲ್ಲದಿರುವುದು ಚರಿತ್ರೆಯಲ್ಲಿ ಸಿಗುತ್ತದೆ. ತನ್ನ ವಿರುದ್ಧ ಹೋರಾಡಿದ ಮತ್ತು ಪ್ರಜಾಪೀಡಕರನ್ನು ಮಾತ್ರವೇ ಆತ ಶಿಕ್ಷಿಸಿದ್ದು. ಸಾಮಾನ್ಯ ಮುಸ್ಲಿಮ್ ಜನರ ಸಹ ಮುಸ್ಲಿಂ ರಾಜರ, ಅಧಿಕಾರಗಳ ಕ್ರೂರ ಕೃತ್ಯಗಳಿಗೆ ಬಲಿಯಾಗಿರುವುದನ್ನು ನೆನೆಯಬೇಕು. ಸಯ್ಯದ್‌ಗಳು, ಪಠಾಣರು ಮತ್ತು ಮುಘಲರು ಮತ್ತು

ಶ್ರೀಮಂತ ಮುಸ್ಲಿಮರು ಸಾಮಾನ್ಯ ಮುಸ್ಲಿಂ ಜನರಿಗೆ ಹಿಂಸೆ ನೀಡಿದ್ದಾರೆ, ದೌರ್ಜನ್ಯ ಎಸಗಿದ್ದಾರೆ. ಬಂದಾ ಸಿಂಗ್‌ಗೆ ಮುಸ್ಲಿಮರು ಬೆಂಬಲ ನೀಡಿದ ಅನೇಕ ಉದಾಹರಣೆಗಳಿವೆ. ಸಮನ, ಸಧೌರ, ಬುರಿಯ, ಕಲಂದರ್ ಮತ್ತು ಅನೇಕ ಇತರೆ ಪ್ರದೇಶಗಳಲ್ಲಿ ಸ್ಥಳೀಯ ಮುಸ್ಲಿಮರು ಬಂದಾ ಸಿಂಗ್‌ಗೆ ನೆರವು ನೀಡಿದ್ದರು. ಸೇನೆಯಲ್ಲೂ ಬೆರೆತಿದ್ದರು.

ಎರಡನೆಯದಾಗಿ ಬಂದಾ ಸಿಂಗ್ ಯಾವುದೇ ಪ್ರದೇಶವನ್ನು ಮುಸ್ಲಿಂ ಆಡಳಿತದಿಂದ ಮುಕ್ತಗೊಳಿಸಿದಾಗ, ಆತ ಎಂದೂ ಮುಸ್ಲಿಂ ಧಾರ್ಮಿಕ ಸ್ಥಳಗಳನ್ನು ಅಪವಿತ್ರಗೊಳಿಸಲಿಲ್ಲ. ಆ ಕಾಲದ ಅನೇಕ ಮಸೀದಿಗಳು, ಗೋರಿಗಳು, ಮಹಲುಗಳು ಈಗಲೂ ಅದೇ ಸ್ಥಿತಿಯಲ್ಲಿ ಉಳಿದಿರುವುದನ್ನು ನೋಡಬಹುದು.

ಅಕ್ಬರಾತ್–ಐ–ದರ್ಬಾರ್–ಐ–ಮೂಲ ದಾಖಲೆಗಳಲ್ಲಿ ದಿನಾಂಕ 28.04.1711ರಲ್ಲಿನ ನಮೂದಿನಲ್ಲಿ ಕಲನೂರಿನಲ್ಲಿ ಐದು ಸಾವಿರ ಮುಸ್ಲಿಮರು ಬಂದಾ ಸಿಂಗ್‌ನ ಸೈನ್ಯಕ್ಕೆ ಭರ್ತಿಯಾದ ಕುತೂಹಲಕಾರಿ ಮಾಹಿತಿಯಿದೆ. ಬಾಬಾ ಬಂದಾ ಸಿಂಗ್ ಎಲ್ಲ ಮುಸಲ್ಮಾನರನ್ನು, ಸಿಕ್ಖರನ್ನು ಕರೆಯುವಾಗ ಅವರ ಹೆಸರಿನ ಮುಂದೆ **'ಜಿ'** ಸೇರಿಸಿ ಗೌರವದಿಂದ ಸಂಬೋಧಿಸುತ್ತಿದ್ದ. ಆತ ಇಸ್ಲಾಂ ಬಗ್ಗೆಯಾಗಲೀ, ಮುಸ್ಲಿಂ ಧಾರ್ಮಿಕ ನಾಯಕರ ಬಗ್ಗೆಯಾಗಲಿ ಎಂದು ಅಪಮಾನಗೊಳಿಸಲಿಲ್ಲ.

ಮುಸ್ಲಿಂ ಮತ್ತು ಸಿಕ್ಖರಿಗೆ ಬಂದಾ ಸಿಂಗ್ ನ್ಯಾಯ ನೀಡುವಾಗ ಪಕ್ಷಪಾತ ತೋರುತ್ತಿರಲಿಲ್ಲ. ಒಂದು ಸಾರಿ ಸಿಖ್ ಅಧಿಕಾರಿಯು ಮುಸ್ಲಿಂಮನೊಬ್ಬನ ಆಸ್ತಿಯನ್ನು ಅನ್ಯಾಯದಿಂದ ಕಿತ್ತುಕೊಂಡ ಪ್ರಕರಣದಲ್ಲಿ ಬಂದಾ ಸಿಂಗ್ ಸಿಖ್ ಅಧಿಕಾರಿಯನ್ನು ಶಿಕ್ಷಿಸಿದ.(1) ಅನ್ಯಾಯದ ವಿರುದ್ಧ ಬಂದಾ ಸಿಂಗ್ ಕರಾರುವಕ್ಕಾದ ಸೂಚನೆಗಳನ್ನು ನೀಡಿದ. ಆದರೆ ಮುಸ್ಲಿಂ ಆಡಳಿತದಾರರು ಸಿಕ್ಖರ ಮೇಲೆ ಸದಾ ದೌರ್ಜನ್ಯವೆಸಗುತ್ತಿದ್ದರು. ಸಿಕ್ಖರ ವಿರುದ್ಧ ಅನೇಕ ಸಾರಿ ಜಿಹಾದ್ ಸಾರಿದ್ದರು. ಅವರನ್ನು ನಿರ್ಮೂಲನ ಮಾಡಲು ಸಂಕಲ್ಪಿಸಿದ್ದರು. ಸಿಕ್ಖರನ್ನು ಪೂರ್ವಾಪರ ವಿಮೋಚಿಸದೆ ಕೊಲ್ಲಲು ಬಹದ್ದೂರ್ ಶಾ ಆದೇಶವೊಂದನ್ನು 1710ರ ಡಿಸೆಂಬರ್ 10ರಂದು ಜಾರಿಗೊಳಿಸಿದ್ದ. ಅದನ್ನು ಆಗಾಗ್ಗೆ ಮತ್ತೆ ಹೊರಡಿಸಿದ. ಆದುದರಿಂದ ಬಂದಾ ಸಿಂಗ್‌ನನ್ನೂ ಇಸ್ಲಾಂ ವಿರೋಧಿ ಎಂದು ಕರೆಯುವುದು ಆತನ ವ್ಯಕ್ತಿತ್ವಕ್ಕೆ ಮಾಡುವ ಅಪಚಾರ.

---

**ಅಡಿ ಟಿಪ್ಪಣಿ**

1. ಬಂದಾ ಸಿಂಗ್‌ನ ನ್ಯಾಯಪರ ಮನೋಭಾವನೆಯನ್ನು ಕೇಹರ್ ಸಿಂಗ್ ಛಬ್ಬರ್ ತನ್ನ ಗ್ರಂಥ 'ಬಣಸವಲಿನಾಮ ದಸನ್ ಪಾಟ್ಸಾಹಿಯಾನ್ ದ' ದಲ್ಲಿ ಉಲ್ಲೇಖಿಸಿದ್ದಾನೆ. ಚರಣ 43–45

# ಅನುಬಂಧಗಳು

## ಅನುಬಂಧ-1

### ಉಪಸಂಹಾರ

**ಮುಘಲ್ ಸಾಮ್ರಾಜ್ಯದ ಮೇಲೆ ಬಂದಾ ಸಿಂಗ್‌ನ ಪರಿಣಾಮ**

ಮುಘಲರು ಸಧೌರ ಮತ್ತು ಲೋಹಗಡಗಳನ್ನು ವಶಪಡಿಸಿಕೊಂಡು ನೆಲಸಮ ಮಾಡಿರುವುದು ನಿಸ್ಸಂಶಯ. ಅವರು ಬಾಬಾ ಬಂದಾ ಸಿಂಗ್ ಮತ್ತು ಸಾವಿರಾರು ಸಿಕ್ಖರನ್ನು ಕೊಂದರು. ಆದರೆ ಇದರ ಜೊತೆಯಲ್ಲಿಯೇ ಬೃಹತ್ ಮುಘಲ್ ಸಾಮ್ರಾಜ್ಯದ ಪತನವೂ ಆರಂಭವಾಯಿತು. ಐದಾರು ವರ್ಷಗಳ ಅವಧಿಯಲ್ಲಿ ಬಂದಾ ಸಿಂಗ್ ಮುಘಲ್ ಸಾಮ್ರಾಜ್ಯದ ಪತನಕ್ಕೆ ನಾಂದಿ ಹಾಡಿದ. ರಾಜಭಂಡಾರ ಖಾಲಿಯಾಯಿತು. ಐವತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಮುಘಲ್ ಸೈನಿಕರು ಮಡಿದರು. ಅವರಲ್ಲಿ ಹಲವರು ವೀರಾಗ್ರಣಿ ದಂಡನಾಯಕರೂ ಸೇರಿದ್ದರು. ಮುಘಲರ ದೊರೆಗಳ ಬಗ್ಗೆ ಜನರಲ್ಲಿದ್ದ ಭೀತಿಯನ್ನು ಬಂದಾ ಸಿಂಗ್ ತನ್ನ ಕೃತ್ಯಗಳಿಂದ ಹೋಗಲಾಡಿಸಿದ್ದ. ಜಮ್ಮುವಿನಿಂದ ದೆಹಲಿಯವರೆಗೆ ಮತ್ತು ಯಮುನಾ ನದಿಯ ಪೂರ್ವ ದಿಕ್ಕಿಗಿರುವ ಸಹರಾಣ್‌ಪುರದ ವರೆಗಿನ ಪ್ರದೇಶ ಧ್ವಂಸವಾಯಿತು. ಬಂದಾ ಸಿಂಗ್ ಸಾವಿನ ನಂತರವೂ, ಸಿಕ್ಖರು ಅಧಿಕಾರದಲ್ಲಿ ಇರದಿದ್ದರೂ, ಸಿಕ್ಖರ ವಿರುದ್ಧದ ಹೋರಾಟದಲ್ಲಿ ಮುಘಲರ ಸಂಪತ್ತು, ಅಧಿಕಾರ ವ್ಯಯವಾಯಿತು. ಅವರ ಗಮನವೆಲ್ಲ ಸಿಕ್ಕರತ್ತಲೇ ಕೇಂದ್ರೀಕೃತವಾಯಿತು. ಇವೆಲ್ಲ 'ಬಲಿಷ್ಠ' ಮುಘಲ್ ಸಾಮ್ರಾಜ್ಯವನ್ನು ಅಲ್ಲಾಡಿಸಿದವು.

## ಅನುಬಂಧ-2

### ಲೋಹಗಡದಲ್ಲಿರುವ 52 ಬತೇರಿಗಳ ಪಟ್ಟಿ

| ಕ್ರ. ಸಂ. | ಜಿಲ್ಲೆ | ತಾಲೂಕು | ಗ್ರಾಮ | ಲಭ್ಯವಿದೆ / ಲಭ್ಯವಿಲ್ಲ |
|---|---|---|---|---|
| 1 | ಯಮುನಾನಗರ | ಸಧೌರ | ಲಧರ್‌ಪುರ್ | ಲಭ್ಯವಿದೆ |
| 2 | ಯಮುನಾನಗರ | ಸಧೌರ | ಸರವನ್ | ಲಭ್ಯವಿದೆ |
| 3 | ಯಮುನಾನಗರ | ಬಿಲಾಸ್‌ಪುರ | ಅಜೀಜ್‌ಪುರ್ | ಲಭ್ಯವಿದೆ |
| 4 | ಯಮುನಾನಗರ | ಚಚ್ರೋಲಿ | ಲೆಡಖಾಸ್ | ಲಭ್ಯವಿದೆ |
| 5 | ಯಮುನಾನಗರ | ಜಗಾಧ್ರಿ | ಮೆಹ್ಲವಾಲಿ | ಲಭ್ಯವಿಲ್ಲ |
| 6 | ಯಮುನಾನಗರ | ಸಧೌರ | ಫತೇಗಢ ತಂಬ | ಲಭ್ಯವಿಲ್ಲ |
| 7 | ಯಮುನಾನಗರ | ಬಿಲಾಸ್‌ಪುರ | ಸಂಧಯ | ಲಭ್ಯವಿದೆ |
| 8 | ಯಮುನಾನಗರ | ಬಿಲಾಸ್‌ಪುರ | ಮಷ್ರೂಲಿ | ಲಭ್ಯವಿಲ್ಲ |
| 9 | ಯಮುನಾನಗರ | ಚಚ್ರೋಲಿ | ಚಂಚ್ರೋಲಿ | ಲಭ್ಯವಿಲ್ಲ |
| 10 | ಯಮುನಾನಗರ | ಜಗಾಧ್ರಿ | ಗರ್ಡಿ ಬಂಜಾರ | ಲಭ್ಯವಿಲ್ಲ |
| 11 | ಯಮುನಾನಗರ | ಜಗಾಧ್ರಿ | ಕಾರವನ್ | ಲಭ್ಯವಿಲ್ಲ |
| 12 | ಯಮುನಾನಗರ | ಜಗಾಧ್ರಿ | ದಯಾಲಗಡ | ಲಭ್ಯವಿಲ್ಲ |
| 13 | ಯಮುನಾನಗರ | ರಾದೂರ್ | ರಾದೂರ್ | ಲಭ್ಯವಿಲ್ಲ |
| 14 | ಯಮುನಾನಗರ | ರಾದೂರ್ | ಹರ್ತಾನ್ | ಲಭ್ಯವಿಲ್ಲ |
| 15 | ಯಮುನಾನಗರ | ರಾದೂರ್ | ಜಟ್ಲಾನ | ಲಭ್ಯವಿಲ್ಲ |

| ಕ್ರ. ಸಂ. | ಜಿಲ್ಲೆ | ತಾಲೂಕು | ಗ್ರಾಮ | ಲಭ್ಯವಿದೆ / ಲಭ್ಯವಿಲ್ಲ |
|---|---|---|---|---|
| 16 | ಯಮುನಾನಗರ | ಮುಸ್ತಫಾಬಾದ್ | ಕುಲ್‌ಚಂದು | ಲಭ್ಯವಿಲ್ಲ |
| 17 | ಯಮುನಾನಗರ | ಮುಸ್ತಫಾಬಾದ್ | ಸರಣ್ | ಲಭ್ಯವಿಲ್ಲ |
| 18 | ಯಮುನಾನಗರ | ಚಚ್ರೋಲಿ | ಯಾಕೂಬ್‌ಪುರ | ಲಭ್ಯವಿಲ್ಲ |
| 19 | ಅಂಬಾಲ | ಬರಾರ | ಬರಾರ | ಲಭ್ಯವಿಲ್ಲ |
| 20 | ಅಂಬಾಲ | ಬರಾರ | ಉಗ್ಲ | ಲಭ್ಯವಿಲ್ಲ |
| 21 | ಅಂಬಾಲ | ಬರಾರ | ಅದೋಯ | ಲಭ್ಯವಿಲ್ಲ |
| 22 | ಅಂಬಾಲ | ಬರಾರ | ತಂಬರ್ | ಲಭ್ಯವಿಲ್ಲ |
| 23 | ಅಂಬಾಲ | ಬರಾರ | ನಹರಡೇರ | ಲಭ್ಯವಿಲ್ಲ |
| 24 | ಅಂಬಾಲ | ಬರಾರ | ತಂಡ್‌ವಾಲ್ | ಲಭ್ಯವಿಲ್ಲ |
| 25 | ಅಂಬಾಲ | ಬರಾರ | ಧಿನ್ | ಲಭ್ಯವಿದೆ |
| 26 | ಅಂಬಾಲ | ಸಹ | ನಗ್ಲ | ಲಭ್ಯವಿದೆ |
| 27 | ಅಂಬಾಲ | ಸಹ | ಭಿಟ | ಲಭ್ಯವಿದೆ |
| 28 | ಅಂಬಾಲ | ಸಹ | ಲಂಡ | ಲಭ್ಯವಿದೆ |
| 29 | ಅಂಬಾಲ | ಸಹ | ಖೆಸ್ರಿ | ಲಭ್ಯವಿಲ್ಲ |
| 30 | ಅಂಬಾಲ | ಸಹ | ದುಕಲ | ಲಭ್ಯವಿಲ್ಲ |
| 31 | ಅಂಬಾಲ | ಸಹ | ಸಮ್ಲ್‌ಹೆರಿ | ಲಭ್ಯವಿಲ್ಲ |
| 32 | ಅಂಬಾಲ | ಸಹ | ನೊಹ್ನಿ | ಲಭ್ಯವಿಲ್ಲ |
| 33 | ಅಂಬಾಲ | ಶಹಜಾದ್‌ಪುರ್ | ಕೊರ್ವ್ವ | ಲಭ್ಯವಿದೆ |
| 34 | ಅಂಬಾಲ | ಶಹಜಾದ್‌ಪುರ್ | ಕರ್ಸನ್ | ಲಭ್ಯವಿದೆ |
| 35 | ಅಂಬಾಲ | ಶಹಜಾದ್‌ಪುರ್ | ಕದೋಲಿ | ಲಭ್ಯವಿದೆ |
| 36 | ಅಂಬಾಲ | ನರಾಯಣ್‌ಗಡ | ತಂಡ್‌ವಾಲ್ | ಲಭ್ಯವಿಲ್ಲ |
| 37 | ಅಂಬಾಲ | ನರಾಯಣ್‌ಗಡ | ಭದ್ರಗಡ | ಲಭ್ಯವಿಲ್ಲ |
| 38 | ಅಂಬಾಲ | ನರಾಯಣ್‌ಗಡ | – | ಲಭ್ಯವಿದೆ |
| 39 | ಪಂಚಕುಲ | ರಾಯ್‌ಪುರ್ ರಾಣಿ | ರಾತೂರ್ | ಲಭ್ಯವಿದೆ |
| 40 | ಪಂಚಕುಲ | ರಾಯ್‌ಪುರ್ ರಾಣಿ | ಹಂಗೊಲಿ | ಲಭ್ಯವಿದೆ |

| ಕ್ರ. ಸಂ. | ಜಿಲ್ಲೆ | ತಾಲೂಕು | ಗ್ರಾಮ | ಲಭ್ಯವಿದೆ / ಲಭ್ಯವಿಲ್ಲ |
|---|---|---|---|---|
| 41 | ಪಂಚಕುಲ | ರಾಯ್‌ಪುರ್ ರಾಣಿ | ಕೋಟ್‌ಗಂಗೆಶರ | ಲಭ್ಯವಿಲ್ಲ |
| 42 | ಕುರಕ್ಷೇತ್ರ | ಬಬಿಯಾನ್ | ಬಬಿಯಾನ್ | ಲಭ್ಯವಿದೆ |
| 43 | ಕುರಕ್ಷೇತ್ರ | ಬಬಿಯಾನ್ | ಲಖ್ಮರಿ | ಲಭ್ಯವಿಲ್ಲ |
| 44 | ಕುರಕ್ಷೇತ್ರ | ಬಬಿಯಾನ್ | ಬುಹವಿ | ಲಭ್ಯವಿಲ್ಲ |
| 45 | ಕುರಕ್ಷೇತ್ರ | ಬಬಿಯಾನ್ | ಸಂಗೊರ್ | ಲಭ್ಯವಿಲ್ಲ |
| 46 | ಕುರಕ್ಷೇತ್ರ | ಲಡ್ವ | ಲಡ್ವ | ಲಭ್ಯವಿದೆ |
| 47 | ಕುರಕ್ಷೇತ್ರ | ಲಡ್ವ | ನಿವಾರ್ಸಿ | ಲಭ್ಯವಿಲ್ಲ |
| 48 | ಕುರಕ್ಷೇತ್ರ | ಶಹಬಾದ್ | ಕರಿಂದ್ವ | ಲಭ್ಯವಿಲ್ಲ |
| 49 | ಕರ್ನಲ್ | ಇಂದ್ರಿ | ಸಂಗೊಹ | ಲಭ್ಯವಿಲ್ಲ |
| 50 | ಕರ್ನಲ್ | ಇಂದ್ರಿ | ಬೈಸ್ರಾಲ್ | ಲಭ್ಯವಿದೆ |
| 51 | ಕರ್ನಲ್ | ಇಂದ್ರಿ | ಬೈನ | ಲಭ್ಯವಿದೆ |
| 52 | ಕರ್ನಲ್ | ಇಂದ್ರಿ | ಗರ್‌ಪುರ್ ಖಲ್ಸಾ | ಲಭ್ಯವಿಲ್ಲ |

# ಅನುಬಂಧ-3

## ಬಂದಾ ಸಿಂಗ್ ಮತ್ತು ಅವನ ಸಂಗಾತಿಗಳಿಗೆ ಸಂಬಂಧಿಸಿದ ಸ್ಥಳಗಳು

**1. ಕುತುಬ್ ಮಿನಾರ್**

ಬಂದಾ ಸಿಂಗ್ ಬಹದ್ದೂರ್‌ನ ಮಗ ಮತ್ತು ಅವನನ್ನು ಮುಘಲರು ವಧಿಸಿದ್ದು ಇದೇ ಸ್ಥಳದ ಹತ್ತಿರ (09.06.1716). ಸಿಕ್ಖರು ಒಂದು ಗುರುದ್ವಾರವನ್ನು ಇಲ್ಲಿ ನಿರ್ಮಿಸಿದ್ದಾರೆ.

**2. ಖಂಡ / ಸೆಹ್ರಿ**

ಬಂದಾ ಸಿಂಗ್ ತನ್ನ ಮೊದಲ ಕೇಂದ್ರ ಸ್ಥಾನವನ್ನು ಈ ಎರಡು ಗ್ರಾಮಗಳ ನಡುವೆ ಇದ್ದ ಕಾಡಿನಲ್ಲಿ ಸ್ಥಾಪಿಸಿದ. ಸಿಖ್ ರಾಜ್ಯಕ್ಕಾಗಿ ಸ್ವಾತಂತ್ರ್ಯ ಯುದ್ಧವನ್ನೂ ಆರಂಭಿಸುವ ಮುನ್ನ ಸೈನ್ಯವನ್ನು ಸಿದ್ಧತೆಗೊಳಿಸಲು ಹಾಗೂ ಸಂಘಟಿಸಲು ಅನೇಕ ವಾರಗಳ ಕಾಲ ಇಲ್ಲಿ ಉಳಿದಿದ್ದು.

**3. ಗುರುದಾಸ್-ನಂಗಲ್**

ಬಂದಾ ಸಿಂಗ್ ಮತ್ತು ಅವನ ಸಂಗಾತಿಗಳು ಎಂಟು ತಿಂಗಳ ಕಾಲ ಇದ್ದ ಕೋಟೆ. ಇಲ್ಲಿ ಸುಮಾರು ಎರಡು ಸಾವಿರ ಸಿಖ್ ಯೋಧರು ಹುತಾತ್ಮ ಪಟ್ಟವನ್ನು ಅಪ್ಪಿಕೊಂಡರು.

**4. ಚಪ್ಪರ್ ಚಿರಿ**

ಇದು ನೆಪೋಲಿಯನ್‌ಗೆ ವಾಟರ್ಲೂನಷ್ಟೇ ಮುಖ್ಯವಾದ ಸ್ಥಳ. ಇಲ್ಲಿ ಸಿಕ್ಖರು ತಮ್ಮ ರಕ್ತ ಹರಿಸಿ ಸಿಖ್ ಚರಿತ್ರೆಯ ಉಜ್ವಲ ಅಧ್ಯಾಯ ಬರೆದರು. ಸಾವಿರಾರು ಸಿಕ್ಖರು ಹುತಾತ್ಮರಾದ ಸ್ಥಳ.

**5. ಚಾಂದ್ನಿ ಚೌಕ**

1716 ರ ಮಾರ್ಚ್ ತಿಂಗಳಲ್ಲಿ ಏಳು ನೂರಕ್ಕೂ ಅಧಿಕ ಸಿಖ್ ಸೆರೆಯಾಳುಗಳನ್ನು ದಿನಕ್ಕೆ ನೂರರಂತೆ ವಧಿಸಿದ ಸ್ಥಳ.

**6. ಧೋತ ತಾಂಡ**

ಬಂದಾ ಸಿಂಗ್ ಬಹದ್ದೂರನ ಛಿದ್ರಗೊಂಡ ದೇಹವನ್ನು ಸಮಾಧಿ ಮಾಡಿದ ಸ್ಥಳ.

**7. ನಾಂದೇಡ್**

ಬಂದಾ ಸಿಂಗ್ ಇಲ್ಲಿ ಹಲವಾರು ವರ್ಷಗಳನ್ನು ಕಳೆದ. ಇಲ್ಲಿಯೇ ಆತ ಸಿಖ್ ಧರ್ಮದ

ದೀಕ್ಷೆ ಪಡೆದು ಗುರುಗೋವಿಂದ್ ಸಿಂಗ್ ಅವರ ಆಶೀರ್ವಾದ ಪಡೆದಿದ್ದು. ಅವನು ಹಾಕಿದ್ದ ಡೇರೆಯ ಹತ್ತಿರ ಗುಡಿಯೊಂದನ್ನು ಕಟ್ಟಿದ್ದಾರೆ.

**8. ಬಿಶ್ರಂಪುರ (ವಿಶ್ರಾಮಪುರ)**

ಜೇಮ್ಸ್ ಬ್ರೌನ್ ಅವರು ಬಂದಾ ಸಿಂಗ್ ಬಿಶ್ರಂಪುರ್ ಗ್ರಾಮ (ಜಲಂಧರ್ ಜಿಲ್ಲೆ) ದಲ್ಲಿ ಜನಿಸಿದನೆಂದು ಉಲ್ಲೇಖಿಸುತ್ತಾರೆ. ಬೇರೆ ಯಾವ ಆಕರವೂ ಇದನ್ನು ಒಪ್ಪುವುದಿಲ್ಲ. ಬಹುಶಃ ಜನರ ಬಾಯಿ ಹೇಳಿಕೆಯನ್ನು ಕೇಳಿ ದಾಖಲಿಸಿರಬಹುದು. ಅದೇನೆ ಇರಲಿ ಮಾಸ್ಟರ್ ಮೋಟ ಸಿಂಗ್ ಎಂಬ ವ್ಯಕ್ತಿಯು ಬಿಶ್ರಂಪುರ್ ಹತ್ತಿರದ ಪತರ ಎಂಬ ಗ್ರಾಮದಲ್ಲಿ ಬಂದಾ ಸಿಂಗ್‌ನ ಸ್ಮರಣಾರ್ಥ ಒಂದು ಗುಡಿಯನ್ನು ನಿರ್ಮಿಸಿದ್ದಾನೆ.

**9. ಮೆಹ್ರೂಲಿ**

ನೋಡಿ ಕುತುಬ್ ಮಿನಾರ್

**10. ರಾಜೂರಿ**

ಬಹುತೇಕ ಚರಿತ್ರೆಕಾರರು ಬಂದಾ ಸಿಂಗ್ ಕಾಶ್ಮೀರದ ರಾಜೂರ್‌ನಲ್ಲಿ ಲಚ್ಮಣ್ ದೇವ್ ಹೆಸರಿನಿಂದ ಜನಿಸಿದ್ದನ್ನು ಒಪ್ಪುತ್ತಾರೆ.ಬಂದಾ ಸಿಂಗ್‌ನ ಜನ್ಮಕ್ಕೆ ಸಂಬಂಧಿಸಿದಂತೆ ಇದೇ ಮೊದಲ ಸ್ಥಳ.

**11. ರಿಯಾಸಿ**

ಬಂದಾ ಸಿಂಗ್ ಇಲ್ಲಿ ಕೆಲಕಾಲ ತಂಗಿದ್ದ. ಆತನ ಹೆಂಡತಿ ಸಾಹಿಬ್ ಕೌರ್ ಮತ್ತು ಇತರರು ಇಲ್ಲಿ ದೀರ್ಘಕಾಲ ಬಾಳಿದರು.

**12. ಲಾಲ್ ಕಿಲ್ಲಾ (ಕೆಂಪುಕೋಟೆ–ದೆಹಲಿ)**

ಬಂದ ಸಿಂಗ್ ಮತ್ತು ಅವನ ಅನೇಕ ಸಂಗಾತಿಗಳನ್ನು (700 ಕ್ಕೂ ಅಧಿಕ) ಇಲ್ಲಿನ ಸೆರೆಮನೆಯಲ್ಲಿ ಅನೇಕ ದಿನಗಳವರೆಗೆ ಇರಿಸಲಾಗಿತ್ತು.

**13. ಲೋಹಗಡ**

ಪಂಜಾಬ್ ರಾಜ್ಯದ ಮೊದಲ ರಾಜಧಾನಿ. ಇದು ಹರಿಯಾಣ ಮತ್ತು ಹಿಮಾಚಲ ಪ್ರದೇಶದ ಗಡಿಯಲ್ಲಿದೆ. ಈ ಹಳ್ಳಿಯಲ್ಲಿ ಕೆಲವು ಸಿಕ್ಖರು ಸಣ್ಣ ಗುಡಿಯನ್ನು ಕಟ್ಟಿಸಿದ್ದಾರೆ. ಹರಿಯಾಣ ಸರ್ಕಾರವು ಲೋಹಗಡದಲ್ಲಿ ಬೃಹತ್ ಸ್ಮಾರಕವನ್ನು ನಿರ್ಮಿಸಲು ನಿರ್ಧರಿಸಿದೆ.

**14. ಸಢೌರ**

ಇಲ್ಲಿ ನೂರಾರು ಸಿಕ್ಖರು ಬಲಿದಾನ ಮಾಡಿದರು.

**15. ಸಮನ**

ಸಿಕ್ಖರು ಮುಘಲ್ ಹಿಡಿತದಿಂದ 1709 ರ ನವೆಂಬರ್ 26 ರಂದು ಬಿಡುಗಡೆಗೊಳಿಸಿದ ಮೊದಲ ಪಟ್ಟಣ. ಇದು ಮುಘಲರ ಮೇಲೆ ಸಾಧಿಸಿದ ಮೊದಲ ವಿಜಯ.

*ಲೋಹಗಡ*

**16. ಸರ್ಹಿಂದ್ (ಈಗ ಫತೇಗಡ ಸಾಹಿಬ್)**

ಬಂದಾ ಸಿಂಗ್ 1710 ಮೇ 27 ರಂದು ಪಾಳೆಯಗಾರ ಪದ್ದತಿಯನ್ನು ನಿಷೇಧಿಸಿ ಸಮಾನತಾ ಸಮಾಜದ ಘೋಷಣೆಯನ್ನು ಘೋಷಿಸಿದ ಸ್ಥಳ.

**17. ಸಲೀಂಗಡ (ದೆಹಲಿ)**

ಬಂದಾ ಸಿಂಗ್ ಮತ್ತು ಅವನ ಸಂಗಾತಿಗಳನ್ನು ಇಲ್ಲಿನ ಸೆರೆಯಲ್ಲಿ, ಅವರನ್ನು ಶಿಕ್ಷಿಸುವ ಮೊದಲು ಕೆಲಕಾಲ ಇಡಲಾಗಿತ್ತು.

## ಅನುಬಂಧ–4

# ಗಡವಾಲ ಮತ್ತು ಸಿಕ್ಖರು

ಗುರುಹರ್ ಗೋವಿಂದ್ ಸಿಂಗ್ ಅವರು ಗೋರಕ್ ಮಟ (ಈಗ ನಾನಕ್ ಮಟ) ಕ್ಕೆ ಹೋಗುವ ಹಾದಿಯಲ್ಲಿ 1634 ರ ಜೂನ್ ನಲ್ಲಿ ಗಡವಾಲಕ್ಕೆ ಭೇಟಿ ನೀಡಿದರು. ಅಲ್ಲಿ ಆ ವೇಳೆಗೆ ಗಡವಾಲದ ರಾಜ ಮಹಿಪತ್ ಶಾ ನಿಧನನಾಗಿದ್ದ(1622–1633). ಆತನ ವಿಧವೆ ರಾಣಿ ಕರ್ಣಾವತಿಯನ್ನು ಮತ್ತು ಸಮರ್ಥ ರಾಮದಾಸ್ ಅವರನ್ನು ಭೇಟಿ ಮಾಡಿದರು. (ಸಮರ್ಥ ರಾಮದಾಸ್ ಅವರು ರಾಜಕೀಯ ವಿಷಯಗಳನ್ನು ಗುರುವಿನಿಂದ ಕಲಿತು ನಂತರ ಅದನ್ನು ಶಿಷ್ಯ ಶಿವಾಜಿಗೆ ಬೋಧಿಸಿದರು)

ಗುರು ಹರ್ ಗೋವಿಂದ್ ಗಡವಾಲಕ್ಕೆ ಭೇಟಿ ನೀಡಿದಾಗ ಮಹಿಪತ್ ಶಾನ ಮಗ ಪೃಥ್ವಿ ಶಾ ಕೇವಲ ಎಂಟು ವರ್ಷದ ಬಾಲಕ. ರಾಣಿ ಕರ್ಣಾವತಿಯೇ ಗಡವಾಲದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಳು. ಗುರು ಸಾಹಿಬ್ ಭೇಟಿ ನೀಡಿದ್ದು ಅವಳಲ್ಲಿ ನೈತಿಕ ಸ್ಥೈರ್ಯ ಹೆಚ್ಚಲು ಕಾರಣವಾಯಿತು. ಸಂಕಷ್ಟಗಳನ್ನು ಎದುರಿಸುವ ಮನೋಬಲ ಹೆಚ್ಚಿತು. ರಾಣಿ ಕರ್ಣಾವತಿ ಆಕ್ರಮಣಕಾರರ ವಿರುದ್ಧ ಹೋರಾಡಿ ಯಶಸ್ವಿಯಾಗಿ ತನ್ನ ರಾಜ್ಯವನ್ನು ರಕ್ಷಿಸಿದ್ದಳು. ಮುಘಲ್ ಸೇನೆಯನ್ನು ಸಮರ್ಥವಾಗಿ ಪ್ರತಿರೋಧಿಸಿದ್ದಳು. (1640 ರಲ್ಲಿ ಶಹಜಹಾನ್ ನಜಬತ್ ಖಾನ್‌ನ ನೇತೃತ್ವದಲ್ಲಿ ಸೇನೆಯನ್ನು ದಾಳಿ ಮಾಡಲು ನಿಯೋಜಿಸಿದ್ದ). ಆಕೆ ತನ್ನ ಸಾಮ್ರಾಜ್ಯದ ಮೇಲೆ ದಂಡೆತ್ತಿ ಬಂದವರ ಮೂಗು ಕೊಯ್ಯುಸುತ್ತಿದ್ದಳು. ಹಾಗಾಗಿ **'ನಾಕ್ತಿ ರಾಣಿ'** ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದಳು. 1654 ರಲ್ಲಿ ಶಹಜಹಾನ್ ರಾಜ ಪೃಥ್ವಿ ಶಾ ಗೆ ಕಿರುಕುಳ ನೀಡಲು ಸೇನೆಯನ್ನು ಕಳುಹಿಸಿದ್ದ. ಇದರಿಂದ ಡೆಹ್ರಾಡೂನ್ ಪ್ರದೇಶವು ಗಡವಾಲದಿಂದ ಬೇರೆಯಾಯಿತು. ಈ ನಡುವೆ ದೆಹಲಿಯ ದಾರಾ ಶಿಕೋ ಮತ್ತು ಔರಂಗಜೇಬನ ಸೈನ್ಯಗಳ ನಡುವೆ ಶಮುಗಡದಲ್ಲಿ ದೊಡ್ಡ ಯುದ್ಧ ನಡೆಯಿತು (1657 ಮೇ). ಅದು ಔರಂಗಜೇಬನ ವಿಜಯದಲ್ಲಿ ಕೊನೆಗೊಂಡಿತು. 1658ರ ಮೇ 29 ರಂದು ದಾರಾ ಶಿಕೋನ ಮಗ ಸುಲೇಮಾನ್ ಶಿಕೋ ಗಡವಾಲದಲ್ಲಿ ಆಶ್ರಯ ಪಡೆದ. ಔರಂಗಜೇಬ್ ಆಗ ತನ್ನ ತಂದೆ ಶಹಜಹಾನ್‌ನನ್ನು ಸೆರೆಯಲ್ಲಿಟ್ಟು ಸೋದರರ ಮೇಲೆ ಯುದ್ಧ ಆರಂಭಿಸಿದ್ದ. ಗುರು ಹರ್ ರಾಯ್ ಬಳಿ ಸಿಖ್ ಸೈನಿಕರ ದೊಡ್ಡ ಪಡೆಯಿತ್ತು. ದಾರ ಶಿಕೋ ಮತ್ತು ಔರಂಗಜೇಬ್–ಇಬ್ಬರು ಸೋದರರು ಯುದ್ಧಕ್ಕೆ ನಿಂತಾಗ ಗುರು ಹರ್ ರಾಯ್ ಅವರು ಸೂಫಿ ಪರಂಪರೆಯಿಂದ ಪ್ರಭಾವಿತನಾಗಿದ್ದ ದಾರಾ ಶಿಕೋ ಪರ ನಿಂತರು.

ಸುಲೇಮಾನ್ ಶಿಕೋ ಗಡವಾಲ್‌ನಲ್ಲಿ ಆಶ್ರಯ ಪಡೆದಾಗ ಗುರು ಹರ್ ರಾಯ್ ಅವರು

ಗಡವಾಲಕ್ಕೆ ಹತ್ತಿರವಿರುವ ಹಿಂದಿನ ನಹನ್/ಸಿರಮೂರ್ ರಾಜ್ಯಕ್ಕೆ ಸೇರಿದ ತಪಲ್ ಎಂಬ ಸ್ಥಳದಲ್ಲಿದ್ದರು. 1658ರಲ್ಲಿ ದಾರಾ ಶಿಕೋಗೆ ನೆರವು ನೀಡಲು ಗುರು ತಪಲ್ ಬಿಟ್ಟು ಗಡವಾಲಕ್ಕೆ ಬಂದರು. ಅವರ ಜೊತೆ 2200 ರಾವುತರಿದ್ದ ಸೈನ್ಯವಿತ್ತು. ನುರ್ಪುರ್ ನ ರಾಜ ರಾಜ್ ರೂಪ್ ಸಹ ಯುವರಾಜನಿಗೆ ನೆರವಾಗಲು ಬಂದ. ಆದರೆ ರಾಜಕುಮಾರ ತೀರಾ ನಿರುತ್ಸಾಹಿಯಾಗಿದ್ದರಿಂದ ಅವರು ಹಿಂದಿರುಗಿದರು. 1659 ರಲ್ಲಿ ದಾರಾ ಶಿಕೋನನ್ನು ಸೆರೆಹಿಡಿದರು. ಔರಂಗಜೇಬ್ ಆತನ ತಲೆಕತ್ತರಿಸಿದ.

ಗಡವಾಲದ ಪೃಥ್ವಿ ಶಾ, ಸುಲೇಮಾನ್ ಶಿಕೋಗೆ ಆಶ್ರಯ ನೀಡುವುದನ್ನು ಮುಂದುವರೆಸಿದ. ಔರಂಗಜೇಬ್ ಸುಲೇಮಾನ್ ಶಾನನ್ನು ಪಡೆಯಲು ಶತ ಪ್ರಯತ್ನ ಮಾಡಿದರೂ ಪೃಥ್ವಿ ಶಾಮಾತ್ರ ಸುಲೇಮಾನ್ ಶಿಕೋನನ್ನು ಬಿಟ್ಟುಕೊಡಲಿಲ್ಲ. ಅನೇಕ ಪ್ರಯತ್ನಗಳ ನಂತರ, ಗಡವಾಲದ ರಾಜನ ಮಾತನ್ನು ನಿರಾಕರಿಸಿ, ಸುಲೇಮಾನ್ ಶಿಕೋ 1661ರಲ್ಲಿ ಔರಂಗಜೇಬ್‌ಗೆ ಶರಣಾದ.

1661–1662 ರ ಅವಧಿಯಲ್ಲಿ ಗಡವಾಲದ ರಾಜ (40 ವರ್ಷ) ನಿಧನನಾದ. ಸುಲೇಮಾನ್ ಶಿಕೋ (28 ವರ್ಷ), ಗುರುಹರ್ ರಾಯ್ (32 ವರ್ಷ) ಮತ್ತು ನುರ್ಪುರ್‌ನ ರಾಜ (40 ವರ್ಷ) ಕೂಡ ಸತ್ತರು. ಇವರೆಲ್ಲರೂ ಸರಿಸುಮಾರು ಒಂದೇ ವರ್ಷದಲ್ಲಿ ಮತ್ತು ನಡುವಯಸ್ಸಿನಲ್ಲಿ ಸತ್ತದ್ದು ನಿಗೂಢವಾಗಿದೆ. ಇದು ಔರಂಗಜೇಬನ ಸಂಚಿನಿಂದ ಘಟಿಸಿರಬಹುದೆಂದು ಕೆಲವರ ಊಹೆ.

**ಉತ್ತರಕಾಂಡ ಮತ್ತು ವಂಜಾರರು**

ಈಗಿನ ಡೆಹರಾಡೂನ್ ಜಿಲ್ಲೆಯ ಪ್ರದೇಶದಲ್ಲಿ ಇದ್ದ ಹಳ್ಳಿಗಳ ಬಗ್ಗೆ ಹ್ಯೂಯೆನ್ ತ್ಸಾಂಗ್ ತನ್ನ ಪ್ರವಾಸ ಕಥನದಲ್ಲಿ ಯಾವುದೇ ಉಲ್ಲೇಖ ಮಾಡಿಲ್ಲ. ಹನ್ನೊಂದನೇ ಶತಮಾನದಲ್ಲಿ ಈ ಪ್ರದೇಶದಲ್ಲಿ ಸಾಗುತ್ತಿದ್ದ ತಾಂಡವೊಂದು ಆ ಮನಮೋಹಕ ಸ್ಥಳಕ್ಕೆ ಆಕರ್ಷಗೊಂಡು, ಆ ಸ್ಥಳದಲ್ಲಿ ನೆಲೆಯಾಗುವವರೆಗೆ ಈ ಪ್ರದೇಶ ನಿರ್ಜನವಾಗಿಯೇ ಇತ್ತು. ಸಿಖ್ ಚರಿತ್ರೆಯನ್ನು ಅವಲೋಕಿಸಿದಾಗ, ಗುರು ನಾನಕರು ದಕ್ಷಿಣದ ಕಡೆ ಗೋರಕ್ ಮಟದಿಂದ ಮೊದಲ ಉಡಾಸಿಯಲ್ಲಿ ಹೊರಟಾಗ ವಂಜಾರ ವರ್ತಕರ ಮೂಲ ನೆಲೆಯಾಗಿದ್ದ ಮೊರದಾಬಾದ್ ನ ಬರೇಲಿ ವಿಭಾಗದ ತಾಂಡಾಕ್ಕೆ ಬಂದರು. ಈ ವಂಜಾರರು ಸಿಖ್ ಧರ್ಮವನ್ನು ಸ್ವೀಕರಿಸಿ, ಸತ್ಯದ ಹಾದಿಯನ್ನು ಅನುಸರಿಸಿದರು. ಗುರು ಹರ್ ರಾಯ್ ಅವರು ಸಿಖ್ ಉಪದೇಶ ಕೇಂದ್ರಗಳನ್ನು 22 ರಿಂದ 360 ಕ್ಕೆ ಹೆಚ್ಚಿಸಿದರು. ಅಲ್ಲದೆ ನಹನ್, ಗಡವಾಲ್, ಸಹರಾಣ್‌ಪುರ ಮತ್ತು ಮೊರದಾಬಾದ್‌ನಲ್ಲಿ ಹೊಸ ಕೇಂದ್ರಗಳು ಆರಂಭವಾದವು. ಸಿಕ್ಖರು ಯಮುನಾ ನದಿಯಿಂದ ಗಂಗಾನದಿ (ಡೆಹ್ರಾಡೂನ್–ಹರಿದ್ವಾರ್ ಮೂಲಕ) ವರೆಗಿನ ದಿಬ್ಬಗಳಲ್ಲಿ ಕೋಟೆಗಳನ್ನು ಸ್ಥಾಪಿಸಿದರು. ಮುಘಲರ ಆಳ್ವಿಕೆಯನ್ನು ಕೊನೆಗಾಣಿಸಲು ಸಿಖ್ ಪಂಥದ ಬೇರೆ ಬೇರೆ ಗುರುಗಳು ವಂಜಾರರನ್ನು ಯುದ್ಧ ಕಲೆಯಲ್ಲಿ ಸಜ್ಜುಗೊಳಿಸುತ್ತಿದ್ದರಿಂದ ಸಿಖ್ ಇತಿಹಾಸವನ್ನು ನೆನೆಯುವುದು ಸೂಕ್ತ. ಶ್ರೀನಗರ –ಗಡವಾಲದ ರಾಜರು ಮತ್ತು ವಂಜಾರರ ನೆರವಿನಿಂದ ಬಂದಾ ಸಿಂಗ್ ಹೋರಾಟ ಆರಂಭಿಸಿದ. ದೆಹಲಿಯ ಸಾಮ್ರಾಟರಿಂದ ಸರಕಾರ್ ಮೊರದಾಬಾದ್ ಮತ್ತು ಚಲ್ಯ ಬರೇಲಿವರೆಗೂ ದಾಳಿ ಮಾಡಿ ವಶಪಡಿಸಿಕೊಳ್ಳಲು ಹಂಬಲಿಸಿದ. 1712 ರಲ್ಲಿ ಗಡವಾಲದ ಮುಖ್ಯಸ್ಥ ಫತೇ ಶಾ ಆಗಿದ್ದ. 1688 ರ ಸೆಪ್ಟೆಂಬರ್ 18 ರಂದು ಭಂಗನಿಯಲ್ಲಿ ಗುರು ಗೋವಿಂದ್ ಸಿಂಗ್ ಮೇಲೆ ಆಕ್ರಮಣ ಮಾಡಿದ್ದು ಇದೇ ಫತೇ ಶಾ. ಅದು ತಪ್ಪು ಕಲ್ಪನೆಯಿಂದ ನಡೆದ ದಾಳಿ. ಆದರೆ ತನ್ನ ತಪ್ಪನ್ನು ತಿದ್ದಿಕೊಂಡ ಫತೇ ಶಾ ಮುಘಲರನ್ನು

ಸೋಲಿಸಲು ಬಂದಾ ಸಿಂಗ್ ಜೊತೆ ಕೈಜೋಡಿಸಿದ. ಗಡವಾಲದ ಬೆಟ್ಟಗಳಲ್ಲಿ 40,000 ಸಿಕ್ಖರು ಸಂಚರಿಸುತ್ತಿದ್ದರೆಂಬ ವದಂತಿಯಿತ್ತು. ಈ ಬೆಟ್ಟಗಳ ಬಗ್ಗೆ ಸಾಕಷ್ಟು ಪರಿಚಯವಿದ್ದ ಬಂದ ಸಿಂಗ್, ಬೆಟ್ಟಗಳಲ್ಲಿ ವೇಗವಾಗಿ ಸಂಚರಿಸುತ್ತ ಪಶ್ಚಿಮ ಉತ್ತರ ಪ್ರದೇಶದ ಪ್ರದೇಶಗಳಿಗೆ ದಾಳಿ ಮಾಡಿದ್ದ.

## ಅನುಬಂಧ-5

# ಗ್ರಂಥಋಣ

ಇದು ಬಂದಾ ಸಿಂಗ್‌ನ ಬದುಕು ಮತ್ತು ಸಾಧನೆಯನ್ನು ಕುರಿತ ಕೃತಿಯಾಗಿದೆ. 1708ರಿಂದ 1716ರವರೆಗಿನ ಎಂಟು ವರ್ಷಗಳ ಅವಧಿಯಲ್ಲಿ ಬಂದಾ ಸಿಂಗ್ ತನ್ನ ಅಸೀಮ ಸಾಧನೆಗಳಿಂದ ಮತ್ತು ತ್ಯಾಗದಿಂದ ಸಿಖ್ ಚರಿತ್ರೆಯ ಬಹು ದೊಡ್ಡನಾಯಕನಾಗಿ ಬೆಳಗಿದ್ದಾನೆ. ಅದೃಷ್ಟವಶಾತ್ ಈ ಅವಧಿಗೆ ಸಂಬಂಧಿಸಿದಂತೆ ಅನೇಕ ಅಮೂಲ್ಯ ಪರ್ಶಿಯನ್ ದಾಖಲೆಗಳು ಸಂರಕ್ಷಣೆಗೊಂಡಿವೆ. ಇವು ಸಿಖ್ ಚರಿತ್ರೆಯ ಮತ್ತು ಬಂದಾ ಸಿಂಗ್ ಬದುಕಿನ ಆಕರಗಳಾಗಿ ಈ ಕೃತಿಯ ರಚನೆಗೆ ಒದಗಿಬಂದಿವೆ.
ಈ ಕೃತಿಯ ರಚನೆಯಲ್ಲಿ ನೆರವಾದ ಗ್ರಂಥಗಳು ಮತ್ತು ಅವುಗಳ ಸಂಕ್ಷಿಪ್ತ ಪರಿಚಯವನ್ನು ನೀಡಿದೆ.

**ಗುರುಮುಖಿ ಮತ್ತು ಪಂಜಾಬಿ ಮೂಲ**

1. **ಭಟ್ ವಹಿಗಳು:** ಗಣ್ಯ ಸಿಖ್ ವಂಶಗಳ ವಂಶಾವಳಿಯ ದಾಖಲೆಗಳು. ಸಾಮಾನ್ಯವಾಗಿ ಕುಟುಂಬದ ಪುರೋಹಿತರು ಬರೆಯುವ ಜಾತಕ ಮಾದರಿಯ ಈ ದಾಖಲೆಗಳಲ್ಲಿ ಉತ್ಪ್ರೇಕ್ಷೆಯಿದ್ದರೂ ಒಂದು ವಂಶದಲ್ಲಿ ಹುಟ್ಟಿದವರ ಹೆಸರು, ದಿನಾಂಕ, ಸ್ಥಳಗಳು ಅಮೂಲ್ಯವಾದ ಮಾಹಿತಿಗಳಾಗಿ ಈ ದಾಖಲೆಗಳು ಮಹತ್ವ ಪಡೆದಿವೆ.
2. **ಗುರುಶೋಭಾ**. ಲೇ. ಸೈನಾಪತಿ., 1711–ಈ ಕೃತಿಯು 1701–1709ರ ಅವಧಿಯ ಸಿಖ್ ಚರಿತ್ರೆಯ ದಾಖಲೆ. ಹಾಗಾಗಿ ಬಂದಾ ಸಿಂಗ್ ಬಗ್ಗೆ ಉಲ್ಲೇಖವಿಲ್ಲ.
3. **ಗುರುಬಿಲಾಸ್‌ಗಳು** (ಗುರುವಿಲಾಸಗಳು): ಇವು ಸಿಖ್ ಗುರುಗಳ ಜೀವನಚರಿತ್ರೆಗಳು. ಹದಿನೆಂಟನೆಯ ಶತಮಾನದ ಉತ್ತರಾರ್ಧ ಮತ್ತು ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ರಚಿತವಾದವುಗಳು. ಬಹಳಷ್ಟು ಉತ್ಪ್ರೇಕ್ಷೆಯಿಂದ ಕೂಡಿದ ಗುರುಗಳ ಪವಾಡಗಳನ್ನು ಸಾರುವ ಕಥನಗಳು. ಮುಖ್ಯವಾದವು ಇಂತಿವೆ:
   - **ಗುರುಬಿಲಾಸ ಪತಸಿ.,** ಲೇ. ಕೋಯೇರಿ ಸಿಂಗ್., 1751
   - **ಗುರುಬಿಲಾಸ ಪತಸಿ ದಸ್ವಿನ್.,** ಲೇ. ಸುಖಾಸಿಂಗ್., 1797
   - **ಗುರುಬಿಲಾಸ ಪತಸಿ ಚೆವ್ವಿನ್.,** ಅನಾಮಧೇಯ ಲೇಖಕ., 1835–40

   ಸಿಖ್ ಗುರುಪರಂಪರೆಯಲ್ಲಿ ಬರುವ ವಿವಿಧ ಸಿಖ್ ಗುರುಗಳ ಜೀವನ ಕತೆಯ ವಿವರ ಒಳಗೊಂಡಿವೆ. ಇವುಗಳಲ್ಲಿ ಬಂದಾ ಸಿಂಗ್ ಬಗ್ಗೆ ಹೆಚ್ಚಿನ ಮಾಹಿತಿಯಿಲ್ಲ.

**4. ಬನಸವಲಿನಾಮ ದಸನ್ ಪಥಸಿಯಾನ್**. ಕೇಸರ್ ಸಿಂಗ್ ಛಿಬ್ಬರ್., 1769
**5. ಗುರು ಕಿಯಾನ್ ಸಖಿಯಾನ್**, ಸ್ವರೂಪ್ ಸಿಂಗ್ ಕೌಶಿಕ್., 1790
**6. ಗುರು ಪ್ರತಾಪ್ ಸೂರಜ್ ಗ್ರಂಥ್**., ಸಂತೋಖ್ ಸಿಂಗ್., 1839
**7. ಪ್ರಾಚೀನ್ ಪಂಥ್ ಪ್ರಕಾಶ್**., ರತನ್ ಸಿಂಗ್ ಭಂಗು., 1814
**8. ಪಂಥ್ ಪ್ರಕಾಶ್**., ಗ್ಯಾನಿ ಗ್ಯಾನ್ ಸಿಂಗ್., 1890
**9. ಶಾಹಿ ಬನ್ಸ್ ಬಿನೋದ್**., ಗಣೇಶ್ ಸಿಂಗ್ ಬೇಡಿ., 1879
**10. ಫತೇ ಸಿಂಗ್ ಪರ್ಬ್ಹಕರ್**., ರಾಮಸ ಸುಖ್ ರಾವ್ (ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ)
**11. ಜಸ ಸಿಂಗ್ ಬಿನೋದ್**., ರಾಮಸ ಸುಖ್ ರಾವ್ (ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ)

**ಪರ್ಶಿಯನ್ ಮೂಲಗಳು:**

***ಅಕ್ಬರ್ ನಾಮ,*** ಅಬು ಫಜಲ್., 1601–ಅಕ್ಬರನ ಆಸ್ಥಾನದಲ್ಲಿದ್ದ ಚರಿತ್ರೆಕಾರನ ಈ ಕೃತಿ ಮುಘಲರ ಸಾಮ್ರಾಜ್ಯದ ಆಡಳಿತ ಮತ್ತು ಇತರ ವಿವರಗಳನ್ನು ನೀಡುತ್ತದೆ.

**ಖುಲಾಸ್ತುತ್ ತಾರೀಖ್**, ಸುಜನ್ ರಾಯ್, 1696

**ಅಕ್ಬರಾತ್–ಐ–ದರ್ಬಾರ್–ಐ–ಮೌಲ್ಲ**– ಇದರ ಅರ್ಥ ಸಾಮ್ರಾಟನ ಆಸ್ಥಾನದ ಸುದ್ದಿಗಳು ಎಂದು.

ದೆಹಲಿ ದರ್ಬಾರಿನಲ್ಲಿ ಮತ್ತು ಸೇನಾ ತುಕಡಿಯ ಜೊತೆ ಇರುತ್ತಿದ್ದ ಜೈಪುರ ರಾಜ್ಯದ ಲೇಖಕರು ವರದಿ ರೂಪದಲ್ಲಿ ಕಳುಹಿಸುತ್ತಿದ್ದ ನಡವಳಿಗಳು. ಈ ಮೂಲದಿಂದ 1707ರಿಂದ 1750ರವರೆಗೆ ಮುಘಲ್ ಸಾಮ್ರಾಜ್ಯದ ಆಡಳಿತದಲ್ಲಿ ದಾಖಲಿಸಿರುವ ದಿನನಿತ್ಯದ ಘಟನೆಗಳನ್ನು ಓದಬಹುದು.

**ತಜ್ಕಿರಾತು–ಐ–ಚುಗಟ್ಟ**, ಮಹಮದ್ ಹಾದಿ ಕಮ್ವರ್, 1724–ರಫಿಯುಲ್ ಶಾನ್‌ನ ಅಧಿಕಾರಿಯಾಗಿದ್ದ ಈತ 1707ರಿಂದ 1724ರವರೆಗಿನ ಘಟನೆಗಳನ್ನು ದಾಖಲಿಸಿದ್ದಾನೆ.

**ತಾರೀಖ್–ಈ–ಇರಾದತ್ಖಾನಿ**., ಇರಾದತ್ ಖಾನ್., 1710–1720

**ಇಬ್ರತ್ನಾಮ**., ಮಹಮದ್ ಕಾಸಿಂ., 1723–ಎರಡು ದಶಕಗಳ ಮುಘಲರ ಆಳ್ವಿಕೆಯ ಪ್ರತ್ಯಕ್ಷ ಸಾಕ್ಷಿ.

**ದಸ್ತೂರ್–ಉಲ್–ನಿಶಾ**., ಯಾರ್ ಮಹಮದ್., 1720

**ಇಬ್ರತ್‌ನಾಮ**., ಮಿರ್ಜಾ ಮಹಮದ್ ಹರ್ಸಿ., 1720

**ಶಾನಾಮ**., ಮೀರ್ ಮಹಮದ್ ಅಶನ್ ಸಜದ್, 1718

**ಮುನಾವರ್–ಉಲ್–ಕಲಂ**., ಶಿವದಾಸ್, 1722–ಬಂದಾ ಸಿಂಗ್‌ಗೆ ಗುರು ಗೋವಿಂದ ಸಿಂಗ್ ದೀಕ್ಷೆ ನೀಡಿದ ಪ್ರಸಂಗದ ಉಲ್ಲೇಖಿಸಿದೆ.

**ಫತನಾಮ ಸಮ್ಮಡಿ**., ಗುಲಾಂ ಮೊಹಿಯುದ್ದೀನ್., 1723– ಗುರುದಾಸ್ ನಂಗಲ್ ಯುದ್ಧ ಮತ್ತು ಬಂದಾ ಸಿಂಗ್‌ನ ದಸ್ತಗಿರಿ ಬಗ್ಗೆ ಲೇಖಕ ಪ್ರತ್ಯಕ್ಷದರ್ಶಿಯಾಗಿ ವಿವರ ನೀಡಿದ್ದಾನೆ.

**ಮುಂತ್‌ಖಬ್–ಉಲ್–ಲುಬುಬ್**., ಖಾಫಿಖಾನ್ 1731– ಇದು 1730ರವರೆಗಿನ ಚರಿತ್ರೆಯನ್ನು ದಾಖಲಿಸಿದೆ.

**ಮೀರತ್–ಐ–ವರ್ದಾತ್.,** ಮಹಮದ್ ಸೂಫಿ ವಾರಿದ್., 1734–ನಾಂದೇಡ್‌ನಿಂದ ಬಂದಾ ಸಿಂಗ್ ಖಿರ್ಖೌಡಗೆ ಹೊರಟಿದ್ದು, ಚಪ್ಪರ್ ಚಿರಿಯ ಯುದ್ಧ, ವಜೀರ್ ಖಾನ್‌ನ ಸಾವು ಮತ್ತು ನಂತರದ ಘಟನೆಗಳ ವಿವರವನ್ನೊಳಗೊಂಡಿದೆ. ಈ ಕೃತಿಯು ಸರ್ಹಿಂದ್ ಮೇಲೆ ಸಾಧಿಸಿದ ವಿಜಯದ ನಂತರ ಬಂದಾ ಸಿಂಗ್ ಜಮೀನುದಾರಿ ಪದ್ಧತಿಯನ್ನು ನಿಷೇಧಿಸಿದ ವಿವರಗಳನ್ನು ನೀಡುವುದರಿಂದ ಮಹತ್ವದ್ದಾಗಿದೆ.

**ತಾರೀಖ್–ಐ–ಮೊಹಮ್ಮದ್‌ಶಾಹಿ.,** ಕುಶಾಲ್ ಚಂದ್–ಈ ಕೃತಿಯಲ್ಲಿ ಬಂದಾ ಸಿಂಗ್ ಸಿಖ್ ದೀಕ್ಷೆಯನ್ನು ಪಡೆದ ವಿವರ, ಹೊಸದಾಗಿ ಮದುವೆಯಾದ ಸಿಖ್ ಹುಡುಗ ತನ್ನ ತಾಯಿಯನ್ನು ಗುರುತಿಸಲು ನಿರಾಕರಿಸಿದ (ಆತನನ್ನು ವಧಿಸುವ ಸಮಯದಲ್ಲಿ) ವಿವರಗಳ ಉಲ್ಲೇಖವಿದೆ.

**ಮೌಸರ್–ಉಲ್–ಉಮ್ರಾ,** ಶಾ ನವಾಜ್ ಖಾನ್ 1757–58. ಈ ಕೃತಿಯು ಮುಘಲ್ ದರ್ಬಾರ್‌ನಲ್ಲಿ ಅಕ್ಬರನ ಕಾಲದಿಂದ ಇದ್ದ ಅಧಿಕಾರಿಗಳ ವಿವರಗಳನ್ನು ಒದಗಿಸುತ್ತದೆ. ಕೃತಿಕಾರನು ರಾಜ್ಯಪಾಲರು, ಪೌಜುದಾರರು, ದಿವಾನರು ಮತ್ತು ಲಾಹೋರ್ ಹಾಗೂ ಸರ್ಹಿಂದ್‌ನ ಇತರ ಅಧಿಕಾರಿಗಳ ಪಾತ್ರ ಮತ್ತು ಇತರೆ ಪ್ರಕಾರ್ಯಗಳ ವಿವರಗಳನ್ನು ನೀಡಿದ್ದಾನೆ.

**ಇಂಗ್ಲಿಷ್ ಮೂಲಗಳು**

ಆರಂಭದ ಇಂಗ್ಲಿಷ್ ಆಕರಗಳು ಬಂದಾ ಸಿಂಗ್ ಬಗ್ಗೆ ಹೆಚ್ಚು ವಿವರ ನೀಡುವುದಿಲ್ಲ. ಕಲ್ಕತ್ತಾದ ಪೋರ್ಟ್ ವಿಲಿಯಮ್ಸ್‌ನಲ್ಲಿದ್ದ ಬ್ರಿಟಿಷ್ ಗೌರ್ನರ್‌ಗೆ ದೆಹಲಿಯಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ಪ್ರತಿನಿಧಿಗಳಾದ ಜಾನ್ಸ್ ಸರ್ಮನ್ ಮತ್ತು ಎಡ್ವರ್ಡ್ ಸ್ಟೀಫನ್ 10.03.1716ರಲ್ಲಿ ಬರೆದ ಪತ್ರದಲ್ಲಿ ಬಂದಾ ಸಿಂಗ್ ಮತ್ತು ಆತನ ಸಂಗಾತಿಗಳಿಗೆ ಹಿಂಸೆ ನೀಡಿ ಮರಣ ದಂಡನೆ ಜಾರಿಗೊಳಿಸಿದ ವಿವರಗಳಲ್ಲಿ ಮೊದಲ ಬಾರಿಗೆ ಬಂದಾ ಸಿಂಗ್‌ನ ಹೆಸರು ಪ್ರಸ್ತಾಪವಾಗಿದೆ.

ಇದೇ ರೀತಿಯಲ್ಲಿ ಸಿ.ಆರ್. ವಿಲ್ಸನ್ ಬರೆದ *ಅರ್ಲಿ ಆನಲ್ಸ್ ಆಫ್ ಇಂಗ್ಲಿಷ್ ಇನ್ ಬೆಂಗಾಲ್* ಮತ್ತು ಇರ್ವಿನ್ ಬರೆದ *ಲೇಟರ್ ಮುಘಲ್ಸ್* ಕೃತಿಗಳಲ್ಲಿ ಬಂದಾ ಸಿಂಗ್ ಬಗ್ಗೆ ಉಪಯುಕ್ತ ವಿವರಗಳು ದೊರೆಯುತ್ತವೆ.

**ಇತರೆ ಮೂಲಗಳು**

1. **ಬಂದಾ ಕೌನ್ ಥಾ**? (ಉರ್ದು)., ಕರಮ್ ಸಿಂಗ್, 1915
2. **ಬಂದಾ ಬಹದ್ದೂರ್** (ಪಂಜಾಬಿ)., ಕರಮ್ ಸಿಂಗ್, 1917
3. **ಬಂದಾ, ದಿ ಬ್ರೇವ್** (ಇಂಗ್ಲಿಷ್)., ಸೋಹನ್ ಸಿಂಗ್, 1930
4. **ಬಂದಾ ಸಿಂಗ್ ಬಹದ್ದೂರ್** (ಪಂಜಾಬಿ)., ಗಂಧಾ ಸಿಂಗ್, 1935
5. **ಹಿಸ್ಟರ್ ಆಫ್ ದಿ ಸಿಕ್ಸ್.,** ಡಾ. ಹರಿರಾಮ್ ಗುಪ್ತ
6. **ಬಂದಾ ಸಿಂಗ್.,** ಚಾಂದ್‌ಲಾ, 2006

ಇಪ್ಪತ್ತನೆಯ ಶತಮಾನದಲ್ಲಿ ಪ್ರಕಟವಾದ ಬಹುತೇಕ ಈ ಎಲ್ಲಾ ಕೃತಿಗಳು ಪರ್ಶಿಯನ್ ಮತ್ತು ಪಂಜಾಬಿ ಮೂಲಗಳನ್ನು ಆಧರಿಸಿರುವುದು ವಿಶೇಷ.

ಬಂದಾ ಸಿಂಗ್ ಬಹದ್ದೂರ್ ಬಗ್ಗೆ ಅಂದರೆ 1710–1716ರವರೆಗಿನ ಅವಧಿಯ ಸಿಖ್ ಮತ್ತು ಮುಘಲ್ ಚರಿತ್ರೆಗೆ ಸಂಬಂಧಿಸಿದಂತೆ ಉತ್ತೇಜನ ಮೂರು ಪುಸ್ತಕಗಳು ಗಮನಾರ್ಹ ಕೃತಿಗಳಾಗಿವೆ.

1. **ಬಂದಾ ಸಿಂಗ್ ಬಹದ್ದೂರ್: ಫಾರ್ಸಿ ಸರೋಟ್** (ಪಂಜಾಬಿ) ಸಂಗ್ರಹ: ಬಲ್‌ವಂತ್ ಸಿಂಗ್ ಧಿಲ್ಲೋನ್, 2011

2. **ಅಹ್ವಾಲ್–ಉಲ್–ಖಾವಾಕೀನ್.**, ಮಹಮ್ಮದ್ ಖಾಸೀಂ ಔರಂಗಾಬಾದಿ., ಸಂಪಾದಕರು ಬಲ್‌ವಂತ್ ಸಿಂಗ್ ಧಿಲ್ಲೋನ್, 2012

3. **ರಾಜಸ್ತಾನಿ ಡಾಕ್ಯುಮೆಂಟ್ಸ್ ಆನ್ ಬಂದಾ ಸಿಂಗ್ ಬಹದ್ದೂರ್.**, ಸಂಪಾದಕರು ಬಲ್‌ವಂತ್ ಸಿಂಗ್ ಧಿಲ್ಲೋನ್, 2016